ರಾಯಚೂರು ಪರಿಸರದ ಶರಣ ಸಾಹಿತ್ಯ
ಒಂದು ಅಧ್ಯಯನ

ಪಿಹೆಚ್.ಡಿ . ಪದವಿಗಾಗಿ

ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರಿಗೆ ಸಲ್ಲಿಸಿದ

ಮಹಾ ಪ್ರಬಂಧ

ಮಾರ್ಗದರ್ಶಕರು

ಡಾ: ಬಸವಲಿಂಗ ಸೊಪ್ಪಿಮಠ

ಸಂಶೋಧಕರು

ನಾಗರಾಜ ಹೀರಾ

ಭಾಷಾನಿಕಾಯ

ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ

ಕನ್ನಡ ವಿಶ್ವವಿದ್ಯಾಲಯ ಹಂಪಿ

ವಿದ್ಯಾರಣ್ಯ

(1)

92

92

ರಾಯಚೂರು ಪರಿಸರದ ಶರಣ ಸಾಹಿತ್ಯ
ಒಂದು ಅಧ್ಯಯನ

ಪಿಹೆಚ್.ಡಿ . ಪದವಿಗಾಗಿ

ಕನ್ನಡ ವಿಶ್ವವಿದ್ಯಾಲಯ ಹಂಪಿ ಇವರಿಗೆ ಸಲ್ಲಿಸಿದ

ಮಹಾ ಪ್ರಬಂಧ

<u>ಮಾರ್ಗದರ್ಶಕರು</u>

ಡಾ: ಬಸವಲಿಂಗ ಸೊಪ್ಪಿಮಠ
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಕನ್ನಡ ವಿಭಾಗ
ಎಲ್.ವ್ಹಿ.ಡಿ. ಕಾಲೇಜ ರಾಯಚೂರು

<u>ಸಂಶೋಧಕರು</u>

ನಾಗರಾಜ ಹೀರಾ
ಕನ್ನಡ ಅಧ್ಯಾಪಕರು
ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯ
ಹಟ್ಟಿ ಚಿನ್ನದ ಗಣಿ : ರಾಯಚೂರು

ಭಾಷಾನಿಕಾಯ
ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ

ಸಂಶೋಧಕನ ಪ್ರಮಾಣ ಪತ್ರ

ರಾಯಚೂರು ಪರಿಸರದ ಶರಣ ಸಾಹಿತ್ಯ- ಒಂದು ಅಧ್ಯಯನ ಎಂಬ ವಿಷಯದ ಈ ಮಹಾ ಪ್ರಬಂಧವನ್ನು ಪಿಹೆಚ್.ಡಿ ಪದವಿಗಾಗಿ ಕನ್ನಡ ವಿಶ್ವ ವಿದ್ಯಾಲಯಕ್ಕೆ ಸಲ್ಲಿಸಲು ಡಾ : ಬಸವಲಿಂಗ ಸೊಪ್ಪಿಮಠ ಇವರ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಿದ್ದೇನೆ.

ಈ ಮಹಾ ಪ್ರಬಂಧದಲ್ಲಿ ಬರುವಂತಹ ಯಾವುದೇ ಅಂಶವನ್ನು ಈ ಮೊದಲು ಭಾಗಶಃ ಆಗಲಿ ಪೂರ್ಣವಾಗಿ ಆಗಲಿ ಪ್ರಕಟಿಸಿರುವುದಿಲ್ಲ ಎಂದು ಪ್ರಮಾಣಿಕರಿಸುತ್ತೇನೆ.

ದಿನಾಂಕ : ೧-೧-೨೦೦೨

ಸ್ಥಳ : ಹಟ್ಟಿ ಚಿನ್ನದ ಗಣಿ

ತಮ್ಮ ವಿಶ್ವಾಸಿಕರು

(ನಾಗರಾಜ ಹೀರಾ)

92

ಮಾರ್ಗದರ್ಶಕರ ಪ್ರಮಾಣ ಪತ್ರ

ಶ್ರೀ ನಾಗರಾಜ ಹೀರಾ ಇವರು ಕನ್ನಡ ವಿಶ್ವ ವಿದ್ಯಾಲಯದಲ್ಲಿ ಪಿಹೆಚ್.ಡಿ ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಂಶೋಧನ ಕಾರ್ಯ ಕೈಗೊಂಡು **ರಾಯಚೂರು ಪರಿಸರದ ಶರಣ ಸಾಹಿತ್ಯ - ಒಂದು ಅಧ್ಯಯನ** ಎಂಬ ವಿಷಯವಾಗಿ ಮಹಾ ಪ್ರಬಂಧವೊಂದನ್ನು ಕನ್ನಡ ವಿಶ್ವ ವಿದ್ಯಾಲಯಕ್ಕೆ ಸಾದರ ಪಡಿಸಿರುತ್ತಾರೆ

ಈ ಮಹಾ ಪ್ರಬಂಧವನ್ನು ಶ್ರೀ ನಾಗರಾಜ ಹೀರಾ ಇವರು ನನಗೆ ತಿಳಿದ ಮಟ್ಟಿಗೆ ಯಾವುದೇ ವಿಶ್ವ ವಿದ್ಯಾಲಯದ ಬೇರೆ ಯಾವುದೇ ಪದವಿಗೆ ಒಪ್ಪಿಸಿಲ್ಲವೆಂದೂ, ಎಲ್ಲಿಯೂ ಪ್ರಕಟಿಸಿಲ್ಲವೆಂದು ಈ ಮೂಲಕ ಧೃಢಿಕರಿಸುತ್ತೇನೆ.

ದಿನಾಂಕ: ೧-೧-೨೦೦೨

ಸ್ಥಳ: ರಾಯಚೂರು

ತಮ್ಮ ವಿಶ್ವಾಸಿಕರು

(ಡಾ: ಬಸವಲಿಂಗ ಸೊಪ್ಪಿಮಠ)

ಅಧ್ಯಯನ ಹಾದಿಯಲ್ಲಿ ....

ಅದೇ ತಾನೇ ಹೊಸದಾಗಿ ಮದುವೆಯಾಗಿತ್ತು . ಹೆಂಡತಿಯನ್ನು ಶಿರಸಿಯಿಂದ ಕರೆದು ಕೊಂಡು ನಾನು ಕೆಲಸ ಮಾಡುವ ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕಿನ ಗಾಣಧಾಳಕ್ಕೆ ಕರೆದು ಕೊಂಡು ಹೊರಟಿದ್ದೆ . ಹೊರಟ ಹಾದಿಯಲ್ಲಿ ಹಿರೇವಂಕಲಕುಂಟಾ ಗ್ರಾಮದಲ್ಲಿ ಬಸ್ಸು ಕಾಯುತ್ತ ಕುಳಿತಾಗ ಬಹಳ ಹೊತ್ತು ಬಸ್ಸು ಬರಲಿಲ್ಲ . ಹೋಟೆಲಿನಲ್ಲಿ ಮಿರ್ಚಿಬಜಿ, ವಗ್ಗರಣಿ ತಿಂದು ಕುಳಿತರೂ ಸಮಯ ಕಳಿಯಲಿಲ್ಲ. ಹೋಟೆಲಿನ ಈಶಪ್ಪನಿಗೆ ಪತ್ರಿಕೆ ಕೇಳಿದೆ. ಆತ ಹಿಂದಿನ ದಿನದ ಪ್ರಜಾವಾಣಿ ಪತ್ರಿಕೆ ಕೊಟ್ಟ ಸಮಯಕಳೆಯಲು ಪತ್ರಿಕೆ ಮೇಲೆ ಕಣ್ಣಾಡಿಸಿದೆ. ಒಂದೆಡೆ ಚಿಕ್ಕದಾಗಿ ಕನ್ನಡ ವಿಶ್ವ ವಿದ್ಯಾಲಯ ಹಂಪಿ ಇವರು ಪಿಹೆಚ್.ಡಿ, ಎಂ.ಫಿಲ್. , ಡಿ.ಲಿಟ್ ಪದವಿಗಳಿಗೆ ಅಧ್ಯಯನ ಕೈಗೊಳ್ಳುವ ಆಸಕ್ತರಿಂದ ಅರ್ಜಿ ಕರೆದ ಬಗ್ಗೆ ಸೂಚನೆ ಓದಿದೆ. ಅರ್ಜಿ ಸಲ್ಲಿಸಿದೆ. ಪುರಸ್ಕಾರ ವಾಯಿತು. ಪ್ರವೇಶ ಪರೀಕ್ಷೆ -ಸಂದರ್ಶನದ ಬಳಿಕ ಅಧ್ಯಯನಕ್ಕೆ ಅವಕಾಶ ದೊರೆಯಿತು.

ಅಂದಿನ ಕುಲಪತಿಗಳಾಗಿದ್ದ ಡಾ: ಚಂದ್ರಶೇಖರ ಕಂಬಾರರ ಶುಭ ಹಾರೈಕೆ ಸಿಕ್ಕಿತು. ತಮ್ಮ ಅವಿಶ್ರಾಂತ ಕೆಲಸಗಳ ಮಧ್ಯ ಡಾ: ಬಸವಲಿಂಗ ಸೊಪ್ಪಿಮಠರವರು ಆರಂಭಕ್ಕೆ ಮೇಲ್ವಿಚಾರಕರಾಗಿ, ನಂತರ ದಿನಗಳಲ್ಲಿ ಮಾರ್ಗದರ್ಶಕರಾಗಿ ನನಗೆ ಸಮ್ಮತಿ ಸೂಚಿಸಿ ಪ್ರಬಂಧದ ಸಮಗ್ರತೆಗೆ ಕಾರಣರಾದರು. ಇವರಿಗೆ ನೆನೆಯುವುದು ನನ್ನ ಪರಮ ಕರ್ತವ್ಯವಾಗಿದೆ.

ನಂತರದಲ್ಲಿ ಕನ್ನಡ ವಿಶ್ವ ವಿದ್ಯಾಲಯದ ಅಧ್ಯಯನಾಂಗದ ನಿರ್ದೇಶಕರುಗಳಾದ ಡಾ: ಮೋಹನ ಕೃಷ್ಣ ರೈ , ಡಾ: ಬಾಲಸುಬ್ರಹ್ಮಣ್ಯ ಹಾಗೂ ಪ್ರಸ್ತುತ ನಿರ್ದೇಶಕರಾದ ಡಾ: ಬೋರಲಿಂಗಯ್ಯ ಇವರೆಲ್ಲರ ತುಂಬು ಸಹಕಾರದಿಂದ ಅಧ್ಯಯನ ಹಾದಿ ಸುಗಮವಾಯಿತು. ಇವರನ್ನು ಸ್ಮರಿಸುವ ಜೊತೆಗೆ, ಅಧ್ಯಯನ ಸಂದರ್ಭದಲ್ಲಿ ಅನೇಕ ಸಂದೇಹಗಳಿಗೆ ಸಮಾಧಾನವಾಗಿ ತಿಳಿಸಿ ಕೊಟ್ಟ ಆತ್ಮೀಯ ಹಿರಿಯ ಸ್ನೇಹಿತರಾದ ಡಾ: ಮೋಹನ ಕುಂಟಾರ್, ಡಾ: ಬಿ.ಎಂ. ಪುಟ್ಟಯ್ಯ , ಡಾ: ಅಮರೇಶ ನುಗಡೋಣಿ ಅಲ್ಲದೇ ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗದ ಮುಖ್ಯಸ್ಥರಾದ ಹಾಗೂ ನಾಡಿನ ಶ್ರೇಷ್ಠ ಚಿಂತಕ -ವಿಮರ್ಶಕರಾದ ಡಾ : ರಹಮತ್ ತರಿಕೇರೆ ಇವರನ್ನು ನೆನೆಯುವುದು ಬಹು ಅಗತ್ಯವಾಗಿದೆ. ಇದಲ್ಲದೇ ಪತ್ರಗಳ ಮೂಲಕ, ದೂರವಾಣಿಗಳ ಮೂಲಕ ಅಧ್ಯಯನಕ್ಕೆ ಅನೇಕ ಮಾಹಿತಿಗಳನ್ನು ತಿಳಿಸಿಕೊಟ್ಟ ನಾಡಿನ ಹಿರಿಯ ವಿದ್ವಾಂಸರಾದ ಡಾ : ಎಂ.ಎಂ. ಕಲಬುರ್ಗಿ , ಡಾ: ಎಸ್.ಆರ್.ಗುಂಜಾಳ, ಪ್ರೊ: ಜಿ.ವೆಂಕಟ ಸುಬ್ಬಯ್ಯ , ಡಾ: ಸಂಗಮೇಶ ಸವದತ್ತಿ ಮಠ, ಡಾ: ಎಸ್.ವಿದ್ಯಾಶಂಕರ , ಡಾ: ವ್ಹಿ.ಜಿ.ಪೂಜಾರ, ಡಾ: ಬಸವರಾಜ ಸಬರದ, ಪ್ರೊ: ಚಂದ್ರಶೇಖರ ವಸ್ತ್ರದ, ಶಾಂತರಸ, ಲಿಂಗಣ್ಣ ಸತ್ಯಂಪೇಟೆ, ಇವರಲ್ಲದೇ ಸದಾ ನನ್ನ ಅಧ್ಯಯನ ಬಗ್ಗೆ ಆಸಕ್ತಿ ವಹಿಸಿ,ವ್ಯವಸ್ಥಿತ ರೀತಿಯಲ್ಲಿ ಮುಗಿಸಲು ಭೇಟಿಯಾದಾಗಲೊಮ್ಮೆ ನನ್ನನ್ನು ಬೆನ್ನು ತಟ್ಟುತ್ತಿದ್ದ ಹಿರಿಯ ಚಿಂತಕರು, , ಶರಣ ಜೀವಿಗಳು , ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀಯುತ ಗೊ.ರು. ಚೆನ್ನ ಬಸಪ್ಪನವರಿಗೂ ನನ್ನ ಹೃನ್ಮನ ಪೂರ್ವಕ ಶರಣಾರ್ಥಿಗಳು .

ನನ್ನ ಅಧ್ಯಯನ ಸಂದರ್ಭದಲ್ಲಿ ಅಗತ್ಯವಿದ್ದಾಗ ತನು-ಮನ-ಧನದೊಂದಿಗೆ ಸಹಾಯ ಮಾಡಿದ ಜೀವದ ಗೆಳೆಯ ಆಂಗ್ಲ ಉಪನ್ಯಾಸಕ ಶ್ರೀ ಶಿವರಾಜ್ ಪೋದ್ದಾರ್ ಇವರಿಗೆ ಶುಭ ಕಾಮನೆಗಳು . ಇದೇ ರೀತಿಯಾಗಿ ನಮ್ಮ ಸರಕಾರಿ ಪದವಿ ಪೂರ್ವ ಕಾಲೇಜಿನ ಎಲ್ಲಾ ಅಧ್ಯಾಪಕ ವರ್ಗದವರು ಹಾಗೂ ನಮ್ಮ ಪ್ರಾಚಾರ್ಯರಾದ ಶ್ರೀ ಎಸ್. ಬಿ.ರಾಜೂರುರವರು ಅಧ್ಯಯನ ಸಂರ್ದಭದಲ್ಲಿ ತುಂಬು ಸಹಕಾರ ನೀಡಿದ್ದಾರೆ.

ಎಲ್ಲಕ್ಕಿಂತ ಮುಖ್ಯವಾಗಿ ನನ್ನ ಅಧ್ಯಯನಕ್ಕೆ ಬೇಕಾದ ಹಲವಾರು ಆಕರ ಗ್ರಂಥಗಳನ್ನು ನೀಡಿದ್ದಲ್ಲದೇ, ಸುಮಾರು ತಿಂಗಳುಗಳ ಕಾಲ ತಮ್ಮ ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯದಲ್ಲಿ ಅಧ್ಯಯನ ಜೊತೆಗೆ ವಸತಿ ಹಾಗೂ ಪ್ರಸಾದ ವ್ಯವಸ್ಥೆ ಕಲ್ಪಿಸಿ ಕೊಟ್ಟ ಬೆಳಗಾವಿ ನಾಗನೂರು ರುದ್ರಾಕ್ಷಿ ಮಠದ ಶ್ರೀ ಮ.ನಿ.ಪ್ರ.ಸ್ವ. ಸಿದ್ಧ ರಾಮ ಮಹಾಸ್ವಾಮಿಗಳು ಇವರ ಚರಣ ಕಮಲಗಳಿಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುವುದು ನನ್ನ ಪರಮ ಕರ್ತವ್ಯ. ಹಾಗೆಯೇ ನನ್ನ ಅಧ್ಯಯನ ಬಗ್ಗೆ ಹುರಿದುಂಬಿಸಿ ಜೀವನಪರ್ಯಂತ ಶರಣ ಸಾಹಿತ್ಯ ಶೋಧನೆಗಳಿಗೆ ಅಧ್ಯಯನ ಮೀಸಲಾಗಿರಲಿ ಎಂದು ಸದಾ ಹಾರೈಸುತ್ತಾ ನನ್ನ ರಕ್ಷಕರಾದ ಗುರುಗಳಾದ ಭಾಲ್ಕಿಯ ಹಿರೇಮಠದ ಪರಮಪೂಜ್ಯ ಶ್ರೀ .ಮ.ಘ.ಚ.ಬಸವಲಿಂಗ ಪಟ್ಟದ್ದೇವರು ಇವರಿಗೂ ನನ್ನ ಹೃನ್ಮನ ಪೂರ್ವಕ ಶರಣಾರ್ಥಿಗಳು .

ಕ್ಷೇತ್ರ ಕಾರ್ಯ ಕೈಗೊಂಡಾಗ ಆಯಾ ಊರಿನ ಅನೇಕ ಹಿರಿಯರು , ಮಠಾಧೀಶರು , ಶಾಲಾ ಶಿಕ್ಷಕರು , ವಾಹನ ಚಾಲಕರು , ರೈತರು , ಜನ ಪ್ರತಿನಿಧಿಗಳು ತುಂಬು ಹೃದಯದಿಂದ ಸಹಕರಿಸಿದ್ದಾರೆ. ಅವರೆಲ್ಲರನ್ನು ನೆನೆಯುವುದು ನನ್ನ ಕರ್ತವ್ಯವಾಗಿದ್ದು ಅವರೆಲ್ಲರಿಗೂ ಶರಣಾರ್ಥಿಗಳು. ನನ್ನ ನಾಲ್ಕು ವರ್ಷಗಳ ಅಧ್ಯಯನದಲ್ಲಿ ನಾನು ಕೊಟ್ಟ ಎಲ್ಲಾ ತೊಂದರೆಗಳನ್ನು ಸಹಿಸಿಕೊಂಡ, ಅಧ್ಯಯನಕ್ಕೆ ಅನುಕೂಲ ಮಾಡಿಕೊಟ್ಟ ಪತ್ನಿ ಶ್ರೀಮತಿ ರೇಣುಕಾ ಹೀರಾ ಜೊತೆಗೆ, ಪುಟ್ಟ ಮಗು ಎರಡು ವರ್ಷದ ಬಸವತೇಜ ತನ್ನ ತುಂಟಾಟ ಬದಿಗೊತ್ತಿ ಅಪ್ಪನ ವಾತ್ಸಲ್ಯದಿಂದ ಕೆಲವು ದಿನಗಳ ಕಾಲ ವಂಚಿತನಾದ ಅವನಿಗೂ ಕೃತಜ್ಞತೆಗಳನ್ನು ಸಲ್ಲಿಸುವುದು ಅವಶ್ಯಕ.

ಹಾಗೆಯೇ ಸುಂದರವಾಗಿ ಅಕ್ಷರ ಜೋಡಣೆ ಮತ್ತು ವಿನ್ಯಾಸ ಕಾರ್ಯ ನಿರ್ವಹಿಸಿ ಕೊಟ್ಟ ಶಿರಸಿ ನಗರದ ,
ಶ್ರೀ ನಾಗೇಶ ಶೆಟ್ಟಿ ಇವರನ್ನು ನೆನೆಯುವುದು ನನ್ನ ಕರ್ತವ್ಯವಾಗಿದೆ.

ನನ್ನ ಅಧ್ಯಯನ ಹಾದಿಯಲ್ಲಿ ಆಸರೆಯಾಗಿ ನಿಂತವರು ಮೇಲಿನ ಎಲ್ಲಾ ಮಹನೀಯರು. ಅಲ್ಲದೇ ಈ ನನ್ನ ಅಧ್ಯಯನ ಕಾರ್ಯಕ್ಕೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಹಾಗೂ ನನ್ನ ಮಾರ್ಗದರ್ಶಕರಾದ ಸೊಪ್ಪಿಮಠರಿಗೂ ಮತ್ತೊಮ್ಮೆ ತುಂಬು ಹೃದಯದ ಶರಣಾರ್ಥಿಗಳು .

ಶರಣು -ಶರಣಾರ್ಥಿಗಳು .

ಅಧ್ಯಾಯನಾಂತರಂಗದಲ್ಲಿ ....

ಅನುಬಂಧಗಳು ೨೦೩-೨೧೭

ಪರಿಶಿಷ್ಟಗಳು ೨೧೮-೨೫೫

ಅಧ್ಯಾಯ : ೦೧ ಅಧ್ಯಯನ ಕುರಿತು

೧:೧ ಹಿನ್ನೆಲೆ : ಉದ್ದೇಶ

೧:೨ ವ್ಯಾಪ್ತಿ : ಸ್ವರೂಪ

೧:೩ ಅಧ್ಯಯನ ವಿಧಾನ

೧:೧ ಅಧ್ಯಯನ ಹಿನ್ನೆಲೆ : ಉದ್ದೇಶ

ಜಾಗತಿಕ ಸಾಹಿತ್ಯ ಸಂದರ್ಭದಲ್ಲಿ ಕನ್ನಡ ಸಾಹಿತ್ಯಕ್ಕೆ ಅಪೂರ್ವ ಸ್ಥಾನವೇನಾದರೂ ವಾಸ್ತವವಾಗಿ ಕಂಡು ಬರುವುದಾದರೆ ಅದು ಶರಣರ ಸಾಹಿತ್ಯದಿಂದ ಎಂಬುದು ಅಕ್ಷರಶಃ ಸತ್ಯವಾದುದಾಗಿದೆ.

ಶರಣ ಸಾಹಿತ್ಯ ಕೇವಲ ಸಾಹಿತ್ಯ ಪ್ರಕಾರ-ರೂಪಗಳ ಪರಂಪರೆಯನ್ನು ಬೆಳೆಸಿ ಉದಾತ್ತೀಕರಿಸಲು ಒಡಮೂಡಿ ಬರಲಿಲ್ಲ. ಇಡೀ ಬದುಕನ್ನೇ ತನ್ನ ಭಿತ್ತಿಯಾಗಿಸಿರಿಕೊಂಡ ಕಾರಣ ಶರಣ ಸಾಹಿತ್ಯವೆಂಬುದು ಸರ್ವರ ಬದುಕಾಯಿತು. ಬದುಕಿನಲ್ಲಿ ಕಂಡದನ್ನು ಕಂಡಹಾಗೇ-ನುಡಿದಂತೆ ನಡೆದು, ನಡೆದಂತೆ ನುಡಿದ ಮೊದಲ ಸಾಹಿತ್ಯ ಶರಣಸಾಹಿತ್ಯ.

ಈ ಶರಣ ಸಾಹಿತ್ಯದ ಕೇಂದ್ರ ಬಿಂದು ಕಲ್ಯಾಣವಾದರೂ ಆ ಕಲ್ಯಾಣದ ಪ್ರಣತೆಯ ಜ್ಯೋತಿಗೆ ಬೆಳಕಾಗಿದ್ದು ಹಲವು ಪರಿಸರಗಳು ಎಂಬುದು ನಾವು ಗಮನಿಸಬೇಕಾದ ಸಂಗತಿಯಾಗಿದೆ.

ಶರಣರ ಸಾಹಿತ್ಯವನ್ನು ನಾವು ಅವಲೋಕಿಸಿದಾಗ ಅವರೆಲ್ಲರಲ್ಲಿ ಭಾಷಾಭೇದ, ವರ್ಗ ಭೇದ, ಜಾತಿ ಭೇದಗಳ ತಾಕಲಾಟ ಕಂಡುಬರದ ಕಾರಣ ಅವರ ಸಂಸ್ಕೃತಿ ವಿಭಿನ್ನವಾಗದೇ ಏಕತ್ರವಾಗಿ ಕಂಡುಬರುವುದು ಸಹಜವಾಗಿದೆ. ಆದರೆ ಶರಣರ ಸಾಹಿತ್ಯವನ್ನು ಗಂಭೀರ ಚಿಂತನೆಯ ನೆಲೆಯಲ್ಲಿ ಅಧ್ಯಯನಕ್ಕೊಳಪಡಿಸಿದಾಗ ಶರಣರು ಸಾಮೂಹಿಕ ನೆಲೆಯಲ್ಲಿಯೇ ತಮ್ಮದೇಯಾದ ವೈಯಕ್ತಿಯ ಛಾಪನ್ನು ಹೊಂದಿದ್ದಾರೆ. ಇಂತಹ ವೈಯಕ್ತಿಕತೆ ಆಯಾ ಪ್ರದೇಶದ ಪರಿಸರದಿಂದಲೇ ಸಾಧ್ಯವಾಗಿದೆಂಬುದನ್ನು ನಾವು ಅರಿಯಬಹುದಾಗಿದೆ.

ಇಡೀ ನಾಡಿನ ಸಂದರ್ಭದಲ್ಲಿ ಶರಣರ ಪರಿಸರ ಒಂದು ಸಾಹಿತ್ಯ ಆಂದೋಲನವಾಗದೇ ವ್ಯವಸ್ಥೆಯ ವಿರುದ್ಧ ಬಂಡೆದ್ದ ಸಮಗ್ರಕ್ರಾಂತಿ ಆಂದೋಲನದ ವೇದಿಕೆ ರೂಪಿತವಾದದ್ದೇ ಆಯಾ ಆಯಾ ಪರಿಸರಗಳಿಂದಲೇ ಎಂಬುದು ಸ್ಪಷ್ಟವಾದ ಸಂಗತಿಯಾಗಿದೆ.

ಈ ಹಿನ್ನೆಲೆಯಲ್ಲಿ ನಾವು ಶರಣರ ಜೀವನ ಹಾಗೂ ಅವರ ಸಾಹಿತ್ಯವನ್ನು ಕಲ್ಯಾಣಕೇಂದ್ರವಾಗಿರಿಸಿಕೊಂಡು ಗಮನಿಸಿದರೆ ಭಿನ್ನ ಭಿನ್ನ ಪರಿಸರದ ಶರಣರ ವೈಯಕ್ತಿಕ ಸಾಧನೆ - ಸಾಹಿತ್ಯದ ವೈಶಿಷ್ಟ್ಯಗಳು ಸಮಗ್ರದಲ್ಲಿಯೇ ಸಂಲಗ್ನಗೊಳ್ಳುವ ಸಾಧ್ಯತೆಯಿದೆ ಎಂಬುದು ನಾವು ಗಮನಿಸಬೇಕು . ಪ್ರಾದೇಶಿಕವಾಗಿ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳ ಸೂಕ್ಷ್ಮತೆಯ ಅರಿವು ನಮಗಾಗುವುದಿಲ್ಲ . ಈ ಕಾರಣದಿಂದಾಗಿ ಪ್ರತಿಯೊಬ್ಬ ಶರಣರನ್ನು ಅಂತಿಮವಾಗಿ ಕಲ್ಯಾಣಭಿಮುಖವಾಗಿ ಕಂಡು ಕೊಂಡರು ಮೊದಲಿಗೆ ಆಯಾ ಪರಿಸರ ಮುಖಿಯಾಗಿ ಅವಲೋಕಿಸುವದು ಅವಶ್ಯಕವಾಗಿದೆ. ಇಂತಹ ಅವಲೋಕನೆಗಳಿಂದ ಆಯಾ ಪರಿಸರದ ಬದುಕು - ಸಂಸ್ಕೃತಿಗಳ ವಿಶಾಲ ಪರಿಚಯವಾಗಲು ಸಾಧ್ಯವಾಗುತ್ತದೆ.

ಆದುದರಿಂದ ಕಲ್ಯಾಣ ಶರಣರು ಎಂಬ ಅಧ್ಯಯನ ಕೆಲವ ಅವರ ಸಾಹಿತ್ಯಿಕ, ಧಾರ್ಮಿಕ, ಸಾಮಾಜಿಕ ಅಂಶಗಳನ್ನೊಳಗೊಂಡಿರುತ್ತದೆ. ಆದರೆ ಅವರು ಯಾವ ಪರಿಸರದ ನೆಲೆಗೆ ಸೇರಿದವರು ಎಂಬ ಅಂಶವನ್ನು ಒತ್ತುಕೊಟ್ಟು ಚರ್ಚಿಸಿದರೆ ಚಾರಿತ್ರಿಕ ಅಧ್ಯಯನ ಸಾಧ್ಯವಾಗುತ್ತದೆ. ಕ್ಷೇತ್ರಕಾರ್ಯದ ಹಿನ್ನೆಲೆಯಲ್ಲಿ ಶರಣರ ಜೀವನ ಅವರ ಸಾಧನೆ-ಸಂಪರ್ಕ ಇತ್ಯಾದಿ ವೈಯಕ್ತಿಕ ವಿವರಗಳನ್ನು ಶೋಧಿಸುವದು ಸಾಧ್ಯವಾಗುತ್ತದೆ. ಅವರ ಸಾಹಿತ್ಯಿಕ ಅಭಿವ್ಯಕ್ತಿಗೆ ತಕ್ಕುದಾದ ಧ್ವನಿ ಪೂರ್ಣತೆ ಸಾಧ್ಯವಾಗಬಲ್ಲುದಾಗಿದೆ. ಅಂತಹ ಮಾದರಿಯ ಅಧ್ಯಯನಗಳು ಹೊಸದಾದ ಆಯಾಮಗಳನ್ನು ಕಲ್ಪಿಸಿಕೊಡುತ್ತವೆಂಬುದು ಇಲ್ಲಿ ಗಮನದಲ್ಲಿಟ್ಟುಕೊಂಡು ಮುನ್ನಡೆಯಲಾಗಿದೆ.

ಈ ಮೇಲಿನ ಎಲ್ಲಾಂಶಗಳನ್ನು ಲಕ್ಷ್ಯದಲ್ಲಿರಿಸಿಕೊಂಡ ಕಾರಣದಿಂದಲೇ ಪ್ರಸ್ತುತ ರಾಯಚೂರು ಪರಿಸರದ ಶರಣರನ್ನು - ಅವರ ಸಾಹಿತ್ಯವನ್ನು ಅಧ್ಯಯನಕ್ಕೊಳಪಡಿಸುವುದು ಅಗತ್ಯವಾಗಿದೆ.

ಶಿವ-ಶಕ್ತಿಗಳೆರಡರ ಪರಿಕಲ್ಪನೆ ಮೂಡಿಸಿ, ಅವುಗಳಲ್ಲಿ ಸಮನ್ವಯತೆ ಸಾಧಿಸಿದ್ದು ಆಮೂಲಕ ತಮ್ಮ ಸಾಹಿತ್ಯದ ಅಭಿವ್ಯಕ್ತಿ ಮಾಡಿದ್ದು ಈ ಪರಿಸರದ ಶರಣರ ವೈಶಿಷ್ಟ್ಯವಾಗಿದೆ. ಇಂತಹ ಹಲವಾರು ವಿಶೇಷಾಂಶಗಳು ಈ ಪರಿಸರದ ಶರಣರಲ್ಲಿ ಕಂಡು ಬರುತ್ತವೆ. ಆದುದರಿಂದ ಈ ಪರಿಸರದ ಶರಣರ ಜೀವನ - ಸಾಹಿತ್ಯವನ್ನು ಸಮಗ್ರ ಅಧ್ಯಯನಕ್ಕೊಳಪಡಿಸುವುದು ಇಂದಿನ ದಿನ ಅಗತ್ಯವಾಗಿದೆ. ಆ ಉದ್ದೇಶದಿಂದಾಗಿ ಇಲ್ಲಿ ಈ ಪರಿಸರದ ಹಿನ್ನೆಲೆಯಲ್ಲಿ ಇಲ್ಲಿಯ ಶರಣರ ಬದುಕು- ಸಾಹಿತ್ಯ - ಸಂಸ್ಕೃತಿಯನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಸಾಹಿತ್ಯಿಕವಾಗಿ ವಚನದ ಜೊತೆ ಜೊತೆಯಲ್ಲಿಯೇ ಹಲವು ಪ್ರಕಾರಗಳನ್ನು ಸೃಷ್ಟಿಸಿದ ಕೀರ್ತಿ ಈ ಪರಿಸರದ ಶರಣರಿಗೆ ಸಲ್ಲುತ್ತದೆ. ಹಾಗೆಯೇ ವಚನ ಪ್ರಕಾರಕ್ಕೆ ಮೊದಲು ಅಸ್ತಿವಾರ ಹಾಕಿದವರು ಈ ಪರಿಸರದ ಶರಣರು. ಆಕಾರಣದಿಂದಾಗಿ ಈ ಅಧ್ಯಯನ ಅವಶ್ಯಕವಾಗಿದೆ. ಈ ಅಧ್ಯಯನದಲ್ಲಿ ಈ ಪರಿಸರದ ಶರಣರನ್ನು ಅವರ ಸಾಹಿತ್ಯವನ್ನು ಕುರಿತು ಸಮಗ್ರವಾಗಿ ಕಟ್ಟಿಕೊಡಬೇಕೆಂಬ ಹಾಗೂ ಈ ಕುರಿತು ಆದಷ್ಟು ಹೆಚ್ಚಿನ ಮಾಹಿತಿಗಳನ್ನು ಆಸಕ್ತರಿಗೆಲ್ಲರಿಗೂ ತಿಳಿಸಿಕೊಡಬೇಕೆಂಬುದೆ ಪ್ರಸ್ತುತ ಅಧ್ಯಯನ ಉದ್ದೇಶವಾಗಿದೆ. ಈ ಕುರಿತು ಅಧ್ಯಯನದ ಕಿರು ಪ್ರಯತ್ನಗಳು ನಡೆದಿವೆಯಾದರೂ ಸಮಗ್ರವಾಗಿ ಅಧ್ಯಯನ ವಾಗುತ್ತಿರುವುದು ಇದೇ ಮೊದಲನೆಯದಾಗಿದೆ.

ಇದುವರೆಗೆ ಈ ಪರಿಸರದ ಶರಣರನ್ನು ಕುರಿತು ಅಧ್ಯಯನದ ಬಗೆಗಿನ ಕೆಲವು ಮಾಹಿತಿಗಳನ್ನು ಗಮನಿಸುವುದಾದರೆ : -

ರಾಯಚೂರಿನ ಶಾಂತರಸರು ' ಬಸವಪೂರ್ವ ಯುಗದ ಶರಣರು ' ' ಎಡೆದೊರೆ ನಾಡಿನ ಅನುಭಾವಿಗಳು ' ಹಾಗೂ ಇತರ ತಮ್ಮ ಕೆಲವು ಲೇಖನಗಳಿಂದ ಈ ಪರಿಸರದ ' ಬಸವಪೂರ್ವ - ಬಸವೋತ್ತರಯುಗ ' ದ ಜೀವನ ಕುರಿತಂತೆ ಕೆಲವು ಮಾಹಿತಿಗಳನ್ನು ನೀಡಿದ್ದಾರೆ .ಇದು ಅಧ್ಯಯನಕ್ಕೆ ಸಂಬಂಧಿಸಿದಂತೆ ನಡೆದ ಮೊದಲ ಪ್ರಯತ್ನವೆನ್ನಬಹುದಾಗಿದೆ.

ಹಾಗೆಯೇ ಈ ಪರಿಸರದ ಅದರಲ್ಲೂ ಬಸವೋತ್ತರ ಯುಗದ ಶರಣರಾದ 'ಘನಮಠ ನಾಗಭೂಷಣ ಶರಣರು' ' ನೀರಲಕೇರಿ ಬಸವಲಿಂಗ ಶರಣರನ್ನು' ಕುರಿತು ಒಂದೊಂದು ಎಂ. ಫಿಲ್‌ಗಳು , 'ಕೂಡಲೂರು ಬಸವಲಿಂಗ ಶರಣ' ರನ್ನು ಕುರಿತು ಪಿಎಚ್. ಡಿ ಪ್ರಬಂಧ, ಹಾಗೆಯೇ ಶ್ರೀ ಸುಗೂರೇಶ್ವರರನ್ನು ಕುರಿತು ಪಿಎಚ್. ಡಿ ಪ್ರಬಂಧಗಳು ಬಂದಿವೆಯಾದರೂ, ಇವುಗಳಾವು ಈ ಪರಿಸರದ ಶರಣರ ಸಮಗ್ರತೆಯನ್ನು ನಮಗೆ ಪರಿಚಯಿಸಿಕೊಡುವುದಿಲ್ಲ. ಕೆಲವು ಸೀಮಿತ ವ್ಯಾಪ್ತಿಗಳ ಹಿನ್ನೆಲೆಯಲ್ಲಿ ಈ ಪರಿಸರದ ಶರಣರನ್ನು ಪರಿಚಯಿಸಿವೆ.

ಇವೆಲ್ಲದರ ಮಧ್ಯದಲ್ಲಿಯೇ ನೆಮ್ಮದಿಯನ್ನು ಪಟ್ಟುಕೊಳ್ಳಬಹುದಾದರೆ ಡಾ: ಬಸವಲಿಂಗ ಸೊಪ್ಪಿಮಠರವರು ಕೈಗೊಂಡ ಅಧ್ಯಯನಗಳು , ಈ ಪರಿಸರದ ಶರಣರ ಬಗ್ಗೆ - ಅವರ ಸಾಹಿತ್ಯದ ಬಗ್ಗೆ ತಲಸ್ಪರ್ಶಿಯಾದ ಅಧ್ಯಯನ ಕೈಗೊಂಡ ಮೊದಲಿಗರೆನ್ನಬಹುದಾಗಿದೆ. ಅಜ್ಞಾತವಾಗಿದ್ದ ಜಲದುರ್ಗ ಶರಣರ ಪರಿಸರದ 'ಕೋಡೆಕಲ್ ಬಸವಣ್ಣ ' ನನ್ನು ತಮ್ಮ ಪಿಎಚ್. ಡಿ ಅಧ್ಯಯನದ ಮೂಲಕ ಕನ್ನಡ ನಾಡಿಗೆ ಮೊದಲ ಬಾರಿಗೆ ಪರಿಚಯಿಸಿದ್ದು, ಅಷ್ಟೇ ಅಲ್ಲ ಹದಿನೈದನೆಯ ಶತಕದ ಕನ್ನಡ ಸಾಹಿತ್ಯದ ಹೊಸ ಪ್ರಯತ್ನವೊಂದನ್ನು ಮೊದಲ ಬಾರಿಗೆ ಪರಿಚಯಿಸಿ ಕೊಟ್ಟರು . 'ಆಕರ' ಎನ್ನುವ ಸಂಶೋಧನೆ ಸಂಪುಟದಿಂದ ಈ ಪರಿಸರದ ಶರಣರಾದ 'ಗೊಬ್ಬೂರು ಬಿಬ್ಬಿ ಬಾಚಯ್ಯ ' ' ಶ್ರೀ ಚೆನ್ನವೀರ ಶರಣರು ' 'ಆಯ್ದಕ್ಕಿ ದಂಪತಿಗಳು ' 'ಮುಕ್ತಾಯಕ್ಕ' ರ ಬಗ್ಗೆ ಮೊದಲ ಬಾರಿಗೆ ಹೊಸ ಮಾಹಿತಿಗಳನ್ನು ತಿಳಿಸಿಕೊಟ್ಟಿದ್ದಾರೆ. ಅವರ ಅಧ್ಯಯನದ ಚರ್ಚೆಗಳು, ಎತ್ತಿರುವ ಪ್ರಶ್ನೆಗಳು ಮುಂದಿನ ಆಸಕ್ತರಿಗೆ, ಸಂಶೋಧಕರಿಗೆ ಸಂಶೋಧನೆಯನ್ನು ಕೈಗೊಳ್ಳುವಲ್ಲಿ ಪ್ರೇರಕ ಅಂಶಗಳಾಗಿವೆ.

ಇಷ್ಟು ಅಂಶಗಳನ್ನು ಹೊರತು ಪಡಿಸಿದರೆ ಈ ಪರಿಸರದ ಶರಣರ ಸಮಗ್ರ ಜೀವನದ ಪರಿಚಯ ಇದುವರೆಗೂ ಕಂಡು ಬಂದಿಲ್ಲವೆನ್ನಬಹುದಾಗಿದೆ. ಇದುವರೆಗೂ ಬಂದ ಈ ಪರಿಸರದ ಶರಣರ ಅಧ್ಯಯನಗಳನ್ನು ಅವಲೋಕಿಸಿದಾಗ ಅವುಗಳ ಮುಂದೆ ಅಧ್ಯಯನಕ್ಕೆ ಪ್ರೇರೆಪಿಸುವಂತಹ ಅಂಶಗಳನ್ನು ಒಳಗೊಂಡಿವೆ ಎನ್ನಿಸುತ್ತವೆ. ಹಾಗೆಯೇ ಈ ಪರಿಸರದಲ್ಲಿ ಬೆಳೆದು ಬಂದ ಪುರಾಣಗಳು ನಮಗೆ ಮತ್ತೊಂದು ಬಗೆಯನ್ನೇ ತೋರಿಸಿ ಶರಣರ ಅಧ್ಯಯನದ ವಾಸ್ತವತೆಯನ್ನು ಕಂಡುಕೊಳ್ಳಲು ಪ್ರೇರಪಣೆ ನೀಡುತ್ತವೆಂಬ ಅಂಶವನ್ನು ಮರೆಯಲಾಗದು. ಈ ಕಾರಣದಿಂದಾಗಿ ಕಲ್ಯಾಣ ಕೇಂದ್ರವಾಗಿಟ್ಟುಕೊಂಡೇ ಶರಣರ ಸಾಮೂಹಿಕ ಬದುಕನ್ನು ಒಂದಾಗಿ ನೋಡಿ ಪ್ರತಿಯೊಬ್ಬ ಶರಣರ ವೈಯಕ್ತಿಕ ಪ್ರತಿಭೆ-ಸಾಮರ್ಥ್ಯಗಳನ್ನು ಕಂಡು ಕೊಳ್ಳದೇ ಹೋಗುವುದು ಸಾಹಿತ್ಯ ಲೋಕಕ್ಕೆ, ಸಮಾಜಕ್ಕೆ, ಸಂಸ್ಕೃತಿಗೆ ಏನೋ ಕಳೆದುಕೊಂಡಂತಹ ಭಾವನೆ ಉಂಟಾಗುತ್ತದೆ. ಅಂತಹ ಒಂದು ಸ್ಥಿತಿಯ ಅನುಭವದಿಂದಲೇ ಈ ಪರಿಸರದ ವೈಶಿಷ್ಟ್ಯವನ್ನು ಕಂಡು ಕೊಳ್ಳುವ ಉದ್ದೇಶದಿಂದಲೇ ಇಲ್ಲಿ ರಾಯಚೂರು ಪರಿಸರದ ಶರಣರನ್ನು ಕುರಿತು ವಿಶೇಷವಾದ ಅಧ್ಯಯನ ಕೈಗೊಳ್ಳಲು ಪ್ರಯತ್ನ ಮಾಡಲಾಗಿದೆ.

೧:೨ ಅಧ್ಯಯನದ ವ್ಯಾಪ್ತಿ : ಸ್ವರೂಪ

ರಾಯಚೂರು ಪರಿಸರದ ಶರಣರನ್ನು ನಾವು ಅಧ್ಯಯನಕ್ಕೊಳಪಡಿಸಿದರೆ ಅವರ ಕಾಲಾವಧಿ ನಮ್ಮನ್ನು ಕ್ರಿ.ಶ. ಆರನೆಯ ಶತಮಾನದವರೆಗೆ ಕೊಂಡೊಯ್ಯುವ ಮೌಖಿಕ ಪರಂಪರೆ ಈ ಪರಿಸರದಲ್ಲಿದೆ. ಆ ಕುರಿತ ಕೆಲವು ಧಾರ್ಮಿಕ ಕೃತಿಗಳು ಪ್ರಕಟವಾದರೂ ಅವುಗಳ ವಾಸ್ತವತೆಯ ಬಗ್ಗೆ ನಮಗೆ ಖಚಿತ ಆಧಾರಗಳು ಲಭ್ಯವಾಗುವುದಿಲ್ಲ . ಆದುದರಿಂದಾಗಿ ಅಲ್ಲಿಂದಲೇ ಅಧ್ಯಯನ ಆರಂಭಿಸಿದರೆ ಅದು ಅವ್ಯಾಪ್ತಿಗೆ ಗೊಳಪಡಬಹುದೆಂಬುದನ್ನು ಅರಿತುಕೊಂಡು ಈ ಪರಿಸರದ ಶರಣರ ಪರಂಪರೆಗೆ ಖಚಿತವಾಗಿ ನಮಗೆ ಆಧಾರಗಳು ದೊರೆಯಲ್ಪಡುವ ಬಸವಪೂರ್ವ ಯುಗದಿಂದಲೇ ಆರಂಭಿಸಲಾಗಿದೆ. ಬಸವಪೂರ್ವ ಯುಗದಿಂದ ಹಿಡಿದು ಆಧುನಿಕ ಯುಗದ ವರೆಗೂ ಅಂದರೆ ಸ್ವತಂತ್ರ ಪೂರ್ವದಲ್ಲಿ ಬಾಳಿದವರ ವರೆಗೂ ಇಲ್ಲಿ ಅಧ್ಯಯನ ಮಾಡಲಾಗಿದೆ.

ಬಸವಪೂರ್ವ - ಬಸವಯುಗ - ಬಸವೋತ್ತರ ಯುಗದ ಶರಣರ ಜೀವನ - ಕೃತಿಗಳ ಕುರಿತ ಅಧ್ಯಯನ ಮಾಡಲಾಗಿದ್ದು ಅಧ್ಯಯನ ವ್ಯಾಪ್ತಿ ರಾಯಚೂರು ಪರಿಸರವನ್ನೊಳಗೊಂಡಿದೆ. ಇಲ್ಲಿ ರಾಯಚೂರು ಪರಿಸರವೆಂದರೆ ಪ್ರಸ್ತುತ ಕೊಪ್ಪಳ ಜಿಲ್ಲೆಯ ತಾಲೂಕೂಗಳನ್ನು ಹೊರತು ಪಡಿಸಿದ ರಾಯಚೂರು ಜಿಲ್ಲೆಯ ಐದೂ ತಾಲೂಕುಗಳಾದ ರಾಯಚೂರು, ಲಿಂಗಸುಗೂರು, ದೇವದುರ್ಗ , ಮಾನವಿ, ಸಿಂಧನೂರು ಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಈ ಎಲ್ಲಾ ತಾಲೂಕಿನಲ್ಲಿ ಬಾಳಿ ಹೋದ ಶರಣರ ಜೀವನ ವಿವರ - ಸಾಹಿತ್ಯದ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ.

ಸಮಗ್ರವಾಗಿ ಅಧ್ಯಯನ ಕೈಗೊಳ್ಳಬೇಕೆಂಬ ದೃಷ್ಟಿಯಿಂದ ಈ ಅಧ್ಯಯನವನ್ನು ಒಟ್ಟು ಒಂಭತ್ತು ಅಧ್ಯಾಯಗಳಲ್ಲಿ ಅಳವಡಿಸಿಕೊಂಡು ಆ ಮೂಲಕ ವಿವೇಚನೆ ಮಾಡಲಾಗಿದೆ. ಆ ಅಧ್ಯಾಯಗಳ ಸ್ವರೂಪ ಹೀಗಿದೆ:-

ಮೊದಲನೆಯ ಅಧ್ಯಾಯವು ಈ ಅಧ್ಯಯನಕ್ಕೆ ಪ್ರೇರಕವಾದ ಕೆಲವು ಅಂಶಗಳ ಬಗ್ಗೆ ಚರ್ಚಿಸುತ್ತ ಈ ಪರಿಸರದ ಶರಣರ ಬಗೆಗೆ ಅಧ್ಯಯನದ ಅವಶ್ಯಕತೆಗಳನ್ನು , ವ್ಯಾಪ್ತಿ , ಸ್ವರೂಪಗಳ ಬಗ್ಗೆ ಹೇಳಲಾಗಿದೆ. ಅಲ್ಲದೇ ಅಧ್ಯಯನದ ವಿಧಾನವನ್ನು ಕುರಿತು ಮಾಹಿತಿಗಳನ್ನು ನೀಡುವ ಪ್ರಯತ್ನ ಮಾಡಲಾಗಿದೆ.

ಎರಡನೆಯ ಅಧ್ಯಾಯವು ಒಟ್ಟಾರೆ ಶರಣರ ಪರಂಪರೆಯನ್ನು ಸಾಹಿತ್ಯವನ್ನು ಕುರಿತು ಚರ್ಚಿಸಲಾಗಿದೆ. 'ಶರಣ' ಪದದ ಪರಿಕಲ್ಪನೆ - ಅದರ ಇತಿಮಿತಿಗಳನ್ನು 'ಅನುಭಾವ' 'ತತ್ತ್ವ ಪದ' 'ಸ್ವರ ವಚನ' ಇತ್ಯಾದಿ ಕೆಲವು ಅಂಶಗಳ ಬಗ್ಗೆ ಇದುವರೆಗೆ ನಡೆದ ಚರ್ಚೆಗಳಿಗೆ ಒಂದು ಹೊಸ ಪರಿಕಲ್ಪನೆಯನ್ನು ಮೂಡಿಸುವ ಪ್ರಯತ್ನ ಮಾಡಲಾಗಿದೆ. ಇದಲ್ಲದೇ ಶರಣರ ಸಾಹಿತ್ಯ ಹೇಗೆ ಒಂದು ಆಂದೋಲನ ಸ್ವರೂಪವಾಗಿ ಮೂಡಿ ಬಂದು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹೇಗೆ ವೈಶಿಷ್ಟ್ಯ ಪೂರ್ಣವಾಗಿ ತನ್ನ ತನವನ್ನು ಬೆಳೆಸಿಕೊಂಡ ಬಗೆಗೂ ವಿವೇಚಿಸಲಾಗಿದೆ. ಶರಣ ಸಾಹಿತ್ಯದ ಪ್ರಕಾರಗಳ ಬಗೆಗೂ ಚರ್ಚಿಸಲಾಗಿದೆ. ಶರಣ ಸಾಹಿತ್ಯದ ಮೂಲ ತುಡಿತ - ಆಶಯ - ಧೋರಣೆಗಳನ್ನು ಸಮಗ್ರವಾದ ಶರಣ ಸಾಹಿತ್ಯದ ಹಿನ್ನೆಲೆಯಲ್ಲಿ ವಿವೇಚಿಸುತ್ತಾ ಒಟ್ಟಾರೆ ಶರಣರ ಪರಂಪರೆ ನಾಡಿನಲ್ಲಿ ಹೇಗೆ ಬೆಳೆದು ಬಂದಿತೆಂಬುದನ್ನು ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಿಂದಲೇ ಈ ಪರಿಸರದ ಅಧ್ಯಯನ ಆರಂಭವಾಗುತ್ತದೆ. ಉಳಿದೆಲ್ಲ ಪರಿಸರಗಳಿಗಿಂತ ರಾಯಚೂರು ಪರಿಸರ ಹೇಗೆ ಭಿನ್ನವಾಗಿದೆ. ಇಲ್ಲಿಯ ಬಿಸಿಲು ಪದೇ ಪದೇ ಕಾಣಿಸಿಕೊಳ್ಳುವ ಬರ, ಜನರು ತಿನ್ನುವ ತೀಕ್ಷ್ಣವಾದ ಖಾರ ಇವೆಲ್ಲವುಗಳನ್ನು ಪ್ರಸ್ತಾಪಿಸುತ್ತಾ ಇಲ್ಲಿಯ ಜನ ಜೀವನದ ಬದುಕಿನೊಂದಿಗೆ ಈ ಪರಿಸರದ ವೈಶಿಷ್ಟ್ಯವನ್ನು ತಿಳಿಸುವ ಪ್ರಯತ್ನ ಮಾಡಿದೆ.

ಹಾಗೆಯೇ ಈ ಪರಿಸರದಲ್ಲಿ ಬದುಕನ್ನು ಸವೆಸಿ ಬೆಳಕಾಗಿ ತಮ್ಮ ಸಂದೇಶ ನೀಡಿದ ಶರಣರನ್ನು ' ಬಸವಪೂರ್ವ- ಬಸವಯುಗ- ಬಸವೋತ್ತರ ಯುಗ' ವೆಂದು ವಿಂಗಡಿಸಿಕೊಂಡು ಅವರ ಜೀವನ ವಿವರಗಳನ್ನು ಲಭ್ಯವಿರುವ ಆಕರ ಗ್ರಂಥಗಳು, ಅಪ್ರಕಟಿತ ಹಸ್ತಪ್ರತಿ , ಶಾಸನಗಳ ಆಧಾರದಿಂದ ಕಂಡುಕೊಂಡು ಸಮಗ್ರ ಜೀವನದ ಜೊತೆಯಲ್ಲಿಯೇ ಅವರ ನಿರ್ದಿಷ್ಟ ಕಾಲವನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ. ಅವರ ವ್ಯಕ್ತಿತ್ವ ಕುರಿತ ಸ್ಪಷ್ಟ ಚಿತ್ರಣವೊಂದನ್ನು ಕೊಡಲಾಗಿದೆ. ಒಟ್ಟಾರೆ ಈ ಪರಿಸರದ ಶರಣರ ಚಿಂತನೆ- ಬದುಕನ್ನು ಅವಲೋಕಿಸಿ ಅವರ ಸಾಧನೆಯ ವಿವಿಧ ಆಯಾಮಗಳ ಬಗ್ಗೆ ಅವಲೋಕನೆಯನ್ನು ಕೈಗೊಳ್ಳಲಾಗಿದೆ.

ನಾಲ್ಕನೆಯ ಅಧ್ಯಾಯವು ಈ ಪರಿಸರದ ಶರಣರ ಸಾಹಿತ್ಯ ಸಮೀಕ್ಷೆ ಯನ್ನೊಳಗೊಂಡದ್ದಾಗಿದೆ. ಈ ಪರಿಸರದ ಶರಣರ ಪ್ರಮುಖ ಪ್ರಕಾರ ವಚನ ಹಾಗೂ ವಚನೇತರ ಪ್ರಕಾರದ ಹಲವು ರೂಪ- ಉಪರೂಪಗಳ ಬಗ್ಗೆ ಇಲ್ಲಿ ತಲಸ್ಪರ್ಶಿಯಾದ ವಿವೇಚನೆಯನ್ನು ಮಾಡಲಾಗಿದೆ. ಸಾಹಿತ್ಯ ಸಮೀಕ್ಷೆಯನ್ನು ಸಹ ' ಬಸವಪೂರ್ವ- ಬಸವಯುಗ- ಬಸವೋತ್ತರ ಯುಗ'ವೆಂದು ವಿಂಗಡಿಸುತ್ತಾ ಆ ಪ್ರಕಾರದ ಭಾಷೆ - ತಂತ್ರ- ಧೋರಣೆಯ ಬಗ್ಗೆ ವಿವಿಧ ಅಂಶಗಳ ಮೂಲಕ ಅಧ್ಯಯನ ಕೈಗೊಳ್ಳಲಾಗಿದೆ. ಹಾಗೆಯೇ ಸಾಹಿತ್ಯಿಕವಾಗಿ ಪರಸ್ಪರರು ನಡೆಸಿದ ಸಂವಾದಗಳ ಕೆಲವು ಮುಖಾಮುಖಿ ಸಂಘರ್ಷಗಳ ವಿಚಾರಗಳನ್ನು ಕಟ್ಟಿ ಕೊಡುವ ಪ್ರಯತ್ನ ಮಾಡಲಾಗಿದೆ. ಈ ಅಧ್ಯಾಯದಲ್ಲಿ ಈ ಪರಿಸರದ ಶರಣರ ಸಾಹಿತ್ಯಿಕಾಂಶಗಳ ಸಮಗ್ರ ವಿವೇಚನೆಯನ್ನು ಲಭ್ಯವಿರುವ ಆಕರ ಸಾಮಗ್ರಿಗಳ ಮೂಲಕ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಸಾಹಿತ್ಯೇತರ ಅಂಶಗಳ ಕಡೆಗೆ ಗಮನ ಹರಿಸಲಾಗಿದ್ದು, ಶರಣರ ಸಾಹಿತ್ಯದ ಹಿನ್ನೆಲೆಯಲ್ಲಿ ಅವರ ಬಾಳಿ ಬದುಕಿದ ಸಮಾಜದ ಸ್ಥಿತಿಗತಿಗಳನ್ನು ಕುರಿತು ವಿವೇಚನೆ ಮಾಡಲಾಗಿದೆ. ಶರಣರು ತಮ್ಮ ಸಮಕಾಲೀನ ಸಮಾಜವನ್ನು ಯಾವ ರೀತಿಯಾಗಿ ಕಂಡರು, ಅದಕ್ಕೆ ಅವರ ಪ್ರತಿಕ್ರಿಯೆಯ ಸ್ವರೂಪವೆಂತಹದು ಎಂಬುದನ್ನು ಇಲ್ಲಿ ಚರ್ಚಿಸುತ್ತಾ ಅವರು ಅಂತಿಮವಾಗಿ ಎಂತಹ ಸಮಾಜವನ್ನು ಕಟ್ಟಲು ಬಯಸಿದ್ದರೆಂಬುದನ್ನು ಅವರ ಸಾಹಿತ್ಯದ ಮೂಲಕವೇ ಕಂಡುಕೊಳ್ಳಲಾಗಿದೆ. ಸಮಕಾಲೀನ ಸಮಾಜದ ಸ್ಥಿತಿಗತಿಗಳನ್ನು ಶರಣರ ವಿಚಾರಗಳ ಹಿನ್ನೆಲೆಯ ಮೂಲಕ ಸ್ಪಷ್ಟವಾಗಿ ಸೂಚಿಸುತ್ತ ಅವುಗಳ ಬಗ್ಗೆ ಶರಣರ ಧೋರಣೆಯ ಒಟ್ಟಾರೆ ಸ್ವರೂಪವನ್ನು ಇಲ್ಲಿ ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಆರನೆಯ ಅಧ್ಯಾಯದಲ್ಲಿ ಈ ಪರಿಸರದ ಶರಣರ ಸಮಕಾಲೀನ ಧಾರ್ಮಿಕ ಸ್ಥಿತಿಗತಿಗಳನ್ನು ಕೆಲವು ಧರ್ಮಗ್ರಂಥಗಳ ಹಿನ್ನೆಲೆಯಲ್ಲಿ ವಿವರಿಸುತ್ತಾ ಶರಣರ ಧಾರ್ಮಿಕ ಕಲ್ಪನೆಯ ಸ್ವರೂಪವನ್ನು ಚಿತ್ರಿಸಲಾಗಿದೆ. ಶರಣರು ಧರ್ಮ-ತತ್ತ್ವಗಳನ್ನು ಹೇಗೆ ಸಮನ್ವಯವಾಗಿ ಬೆಳೆಸಿದರು ಎಂಬುದನ್ನು ಕಂಡುಕೊಳ್ಳಲಾಗಿದೆ. ಶರಣರ ಧರ್ಮ ಎಂತಹ ಅಂಶಗಳಿಗೆ ಒತ್ತು ನೀಡಲಾಗಿತ್ತು ಎಂಬುದನ್ನು ಇಲ್ಲಿ ತಿಳಿಸಲಾಗಿದೆ. ಇದಲ್ಲದೇ ಶರಣರ ಧರ್ಮ ತತ್ತ್ವದ ವಿವೇಚನೆಯನ್ನು ಕೈಗೊಳ್ಳಲಾಗಿದ್ದು ಅವರ ತಾತ್ವಿಕ ನಿಲುವು ಎಂತಹದು ಎಂಬುದನ್ನು ಅವರ ಸಾಹಿತ್ಯದ ವಿವೇಚನೆ -ವಿಶ್ಲೇಷಣೆಯ ಮೂಲಕ ಇಲ್ಲಿ ವಿವರಿಸುವ ಪ್ರಯತ್ನ ಮಾಡಲಾಗಿದೆ.

ಈ ಪರಿಸರದಲ್ಲಿ ಸಮನ್ವಯತೆ ಬಹು ಪ್ರಾಚೀನ ಕಾಲದಿಂದ ಬೆಳೆದು ಬಂದ ವಿಶಿಷ್ಟ್ಯ ಪರಂಪರೆಯಾಗಿದ್ದು ಅಂತಹ ಪರಂಪರೆ ಶರಣರ ಸಂದರ್ಭದಲ್ಲಿ ಅದರಲ್ಲೂ ಬಸವೋತ್ತರ ಯುಗದ ಶರಣರ ಕಾಲಕ್ಕೆ ಈ ಸಮನ್ವಯತೆಯ ಅಗತ್ಯತೆಗಳ ಬಗ್ಗೆ ತಿಳಿಸುತ್ತ ಸಮನ್ವಯತೆಗಾಗಿ ಅವರ ಕೊಡುಗೆಯ ಸ್ವರೂಪ ಎಂತಹದು ಎಂಬುದನ್ನು ಅವರ ಸಾಹಿತ್ಯದ ಮೂಲಕ ಗಮನಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಪ್ರಕೃತಿ ಮತ್ತು ಸಂಸ್ಕೃತಿಗಳ ವಿವೇಚನೆ ಮಾಡುತ್ತ ಪ್ರಕೃತಿಯನ್ನು ಆಕೃತಿ ಮಾಡಬೇಕು . ಸಾಧ್ಯವಾದರೇ ಅದನ್ನು ಸಂಸ್ಕೃತೀಕರಣ ಗೊಳಿಸಬೇಕೆ ವಿನಾಃ ಅದನ್ನು ವಿಕೃತಿಗೊಳಿಸಬಾರದೆಂಬ ಈ ಪರಿಸರದ ಶರಣರ ಮೂಲ ಕಾಳಜಿಯನ್ನು ಅವರ ಸಾಹಿತ್ಯದ ಮೂಲಕ ಕಂಡು ಕೊಳ್ಳಲು ಶ್ರಮಿಸಿದೆ.

ಎಂಟನೆಯ ಅಧ್ಯಾಯದಲ್ಲಿ ಕಲ್ಯಾಣ ಶರಣರ ಆಲೋಚನೆಗಳು ಈ ಪರಿಸರದ ಶರಣರನ್ನು ಎಷ್ಟರ ಮಟ್ಟಿಗೆ ಆಕರ್ಷಿಸಿದವು , ಅವರ ಪರಂಪರೆ ಪ್ರಭಾವಕ್ಕೆ ಯಾವ ರೀತಿ ಒಳಗಾದರೆಂಬುದನ್ನು ವಿವರಿಸುವ ಜೊತೆಯಲ್ಲಿಯೇ ಈ ಪರಿಸರದ ಶರಣರ ಸಂಪರ್ಕಕ್ಕೆ ಬಂದ ಕಲ್ಯಾಣ ಶರಣರ ಮೇಲೆ ಇವರು ಯಾವ ರೀತಿ ತಮ್ಮ ವ್ಯಕ್ತಿತ್ವದ ಪ್ರಭಾವಗಳನ್ನು ಬೀರಿದರು ಎಂಬುದನ್ನು ಗುರುತಿಸಲಾಗಿದೆ .ಇದಲ್ಲದೇ ಈ ಪರಿಸರದ ಶರಣರು ತಮ್ಮ ಸಮಕಾಲೀನ ಹಾಗೂ ಆನಂತರದ ಒಟ್ಟಾರೆ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಎಷ್ಟರ ಮಟ್ಟಿಗೆ ತಮ್ಮ ಪ್ರಭಾವ ಬೀರಿದರೆಂಬ ಅವಲೋಕನೆಯನ್ನು ಕೈಗೊಳ್ಳಲಾಗಿದೆ.

ಕೊನೆಯ ಅಧ್ಯಾಯವು ಸಮರೋಪವನ್ನೊಳಗೊಂಡಿದ್ದು ಪ್ರಸ್ತುತ ಅಧ್ಯಾಯದಲ್ಲಿ ಕೈಗೊಂಡ ಅಧ್ಯಯನ ಪ್ರಮುಖ ಅಂಶಗಳ ಮಹಾಪ್ರಬಂಧ ಸಮೀಕ್ಷೆಯ ಬಗ್ಗೆ ತಿಳಿಸಲಾಗಿದೆ. ಇದಲ್ಲದೇ ಈ ಮಹಾ ಪ್ರಬಂಧದ ಅಧ್ಯಯನದಿಂದ ಕಂಡು ಕೊಂಡ ಹೊಸತನದ ಪಟ್ಟೀಕರಣ ಮಾಡಲಾಗಿದೆ. ಜೊತೆಗೆ ಸಮಗ್ರವಾಗಿ ಅಧ್ಯಯನ ಕೈಗೊಂಡರು ಮುಂದೆ ಆಸಕ್ತರಿಗೆ ಸಹಾಯಕವಾಗಲಿ, ಅಧ್ಯಯನಕ್ಕೆ ಪ್ರೇರೆಪಿಸಲಿ ಎಂಬ ಸದುದ್ದೇಶದಿಂದ ಅಧ್ಯಯನಕ್ಕೆ ಸವಾಲಾದ ಕೆಲವು ಅಂಶಗಳ ಕಡೆಗೆ ಗಮನ ಸೆಳೆಯಲಾಗಿದೆ. ಒಟ್ಟಾರೆ ಅಧ್ಯಯನದ ಫಲಶ್ರುತಿಯೊಂದಿಗೆ ಕ್ಷೇತ್ರ ಕಾರ್ಯದ ಬಗೆಗೆ ಕೆಲವು ಮಾಹಿತಿಗಳನ್ನು ತಿಳಿಸುತ್ತ ವಿಶಿಷ್ಟಾಂಶಗಳ ಕಡೆಗೆ ಗಮನ ಸೆ ಳೆಯುವ ಅಂಶಗಳನ್ನು ವಿವರಿಸಲಾಗಿದೆ. ಪರಂಪರೆಯಂತೆ ಅನುಬಂಧ, ಪರಿಶಿಷ್ಟ ಗಳನ್ನು ಶಾಸ್ತ್ರೀಯವಾಗಿ ಕೊಡುವ ಪ್ರಯತ್ನ ಮಾಡಲಾಗಿದೆ.

೧:೩ ಅಧ್ಯಯನ ವಿಧಾನ

ಈ ಪರಿಸರದ ಶರಣರ ಸಾಹಿತ್ಯ ಅಧ್ಯಯನವನ್ನು ಕೈಗೆತ್ತಿಕೊಂಡಾಗ ಮೊದಲಿಗೆ ಇದಕ್ಕೆ ಸಂಬಂಧಿಸಿದ ಪ್ರಕಟಿತ ಆಕರಗಳನ್ನು ಗಮನಿಸಲಾಯಿತು. ಆನಂತರ ಅಪ್ರಕಟಿತ ಆಕರಗಳನ್ನು ಹುಡುಕುವ ಪ್ರಯತ್ನ ಮಾಡಿ ಸಾಧ್ಯವಾದಷ್ಟು ಅನೇಕ ಮಾಹಿತಿಗಳನ್ನು ಈ ಪರಿಸರದ ಅನೇಕ ಹಸ್ತ ಪ್ರತಿಗಳು , ಶಾಸನಗಳಿಂದ ಕಂಡು ಕೊಳ್ಳಲಾಯಿತು. ನಾಡಿನ ಅನೇಕ ವಿದ್ವಾಂಸರೊಂದಿಗೆ ಹತ್ತಾರು ಬಾರಿ ಚರ್ಚಿಸಲಾಯಿತು. ಕೊನೆಯದಾಗಿ ಈ ಮಹಾ ಪ್ರಬಂಧದ ರಚನೆಗೆ ಪ್ರಕಟಿತ -ಅಪ್ರಕಟಿತ ಎಲ್ಲಾ ಆಕರ ಗಳನ್ನು ಬಳಸಿಕೊಳ್ಳಲು ನಿರ್ಧರಿಸಿ ಅಧ್ಯಯನ ಕೈಗೊಳ್ಳಲಾಯಿತು. ಈ ಮಹಾ ಪ್ರಬಂಧದ ರಚನೆಗೆ ಸಂಬಂಧಿಸಿದಂತೆ ಈ ಪರಿಸರದ ಶರಣರಿಗೆ ಸಂಬಂಧಿಸಿದ ಕಾವ್ಯ, ಪುರಾಣ , ಶಾಸ್ತ್ರ, ಶಾಸನ, ಚಾರಿತ್ರಿಕ ದಾಖಲೆಗಳು , ಮೌಖಿಕ ವಿವರಗಳು , ಸ್ಮಾರಕಗಳ ಮಾಹಿತಿ ಎಲ್ಲಕ್ಕಿಂತ ಮುಖ್ಯವಾಗಿ ಶರಣರ ಸಾಹಿತ್ಯವನ್ನು ಆಧರಿಸಿ ಮಹಾ ಪ್ರಬಂಧವನ್ನು ರಚಿಸುವ ಪ್ರಯತ್ನ ಮಾಡಿದೆ.

ಈ ಮಹಾ ಪ್ರಬಂಧದ ಸಂಗ್ರಹಿತ - ಆಲೋಚಿತ ಸಮಗ್ರವಾದ ವಿಷಯ ನಿರೂಪಿಸಲು ವಿಶ್ಲೇಷಣಾತ್ಮಕ ವಿಧಾನವನ್ನು ಹಾಗೂ ಚಾರಿತ್ರಿಕ ಮಾಹಿತಿ ವಿಧಾನವನ್ನು ಅನುಸರಿಸಲು ಯತ್ನಿಸಿ ಮಹಾ ಪ್ರಬಂಧದ ರಚನೆಯನ್ನು ಮಾಡುವ ಜೊತೆಗೆ ಅಗತ್ಯವಿದ್ದ ಕ್ಷೇತ್ರಕಾರ್ಯವನ್ನು ಕೈಗೊಳ್ಳುವ ಮೂಲಕ ಸಮಗ್ರತೆಯನ್ನು ತರಲು ಪ್ರಯತ್ನಿಸಲಾಗಿದೆ.

ಅಧ್ಯಾಯ : ೦೨ ಶರಣ ಸಾಹಿತ್ಯ

೨:೧ ಶರಣ ಪದದ ವಿಶ್ಲೇಷಣೆ

೨:೨ ಅನುಭಾವ ಪದದ ವಿಶ್ಲೇಷಣೆ

೨:೩ ತತ್ವಪದದ ವಿಶ್ಲೇಷಣೆ

೨:೪ ಶರಣರ ಚಳುವಳಿ ಹಿನ್ನೆಲೆ : ಸ್ವರೂಪ

೨:೫ ಶರಣರ ಸಾಹಿತ್ಯದ ಸ್ವರೂಪ

೨:೬ ಶರಣ ಸಾಹಿತ್ಯ ಬೆಳೆದು ಬಂದ ಹೆಜ್ಜೆಗಳು

೨:೭ ಶರಣ ಸಾಹಿತ್ಯದ ಪ್ರಕಾರಗಳು -ರೂಪಗಳು

೨:೮ ಶರಣ ಸಾಹಿತ್ಯದ ಆಶಯ - ಧೋರಣೆಗಳು

೨:೧ ಶರಣ ಪದದ ವಿಶ್ಲೇಷಣೆ

'ಶರಣ'ಎಂದರೆ ಸಾಮಾನ್ಯವಾಗಿ ಕಲ್ಯಾಣ ಶರಣರನ್ನು ಕುರಿತು ಹೇಳುವ ಮಾತಾಗಿದೆ. ಇಷ್ಟಕ್ಕೆ ಈ 'ಶರಣ' ಪದ ಸೀಮಿತವಾಗಿಲ್ಲ ಹಾಗಾಗಿ ಶರಣರೆಂದರೆ 'ಬಸವ- ಅಲ್ಲಮ -ಚೆನ್ನ ಬಸವ' ರೂ ಮಾತ್ರ ಅಲ್ಲ; ನುಡಿದಂತೆ ನಡೆಯುವ, ನಡೆದಂತೆ ನುಡಿಯುವ ವಿಚಾರವಾದಿ ಅನುಭಾವಿಗಳೇ ಶರಣರು. ಇವರು ಜಾತಿ, ಧರ್ಮಕ್ಕೆ ಸೀಮಿತರಾದವರಲ್ಲ ಶುದ್ಧ ಭಾವಗಳನ್ನಿರಿಸಿಕೊಂಡು ಅರಿವನ್ನು ಕಂಡುಕೊಳ್ಳುವವರೇ ಶರಣರಾಗಿದ್ದಾರೆ.

'ಶರಣ' ಪದ ಶರಣ ಸಾಹಿತ್ಯದಲ್ಲಿ ಪ್ರಮುಖವಾಗಿ ಬಳಕೆಯಲ್ಲಿರುವ ಪಾರಿಭಾಷಿಕ ಪದ. ಪ್ರಾಚೀನ ಸಾಹಿತ್ಯದಲ್ಲಿ ವ್ಯಾಪಕವಾಗಿ ಇದರ ಪ್ರಯೋಗವಿದ್ದರೂ 'ಲಿಂಗಾಯತ'ರಲ್ಲಿ 'ಶರಣ' ಪದದ ಬಳಕೆಗೆ ವಿಶಿಷ್ಟ ಅರ್ಥವಿದೆ. ಆ ಪ್ರಕಾರ ಶರಣನಾಗಿ ಬಾಳಿ ಬದುಕುವುದು ಅಷ್ಟು ಸುಲಭದ ಮಾತಲ್ಲ. ಆ ದೃಷ್ಟಿಯಿಂದ 'ಶರಣ' ಪದ ವ್ಯಕ್ತಿವಾಚಕವಲ್ಲ 'ವ್ಯಕ್ತಿತ್ವ' ವಾಚಕ ಪದ ಶರಣನಾಗುವುದೆ ಒಂದು ಸಾಧನೆ ಆದುದರಿಂದ ಚೆನ್ನ ಬಸವಣ್ಣ 'ಕೋಟಿಗೊಬ್ಬ ಶರಣ' ೧ ಎಂದಿದ್ದಾರೆ.

'ಶರಣ' ಶಬ್ದ ವೀರಶೈವ ಸಾಧುವಿನ ಇನ್ನೊಂದು ಹೆಸರು. ಈತ ವಿಶ್ವ ಕುಟುಂಬಿ, ವಿಶ್ವಸಂಸಾರಿ, ಪವಿತ್ರಾತ್ಮ, ಪರರ ದುಖಃದಲ್ಲಿ ಸಮಭಾಗಿಯಾಗುವವ, ಆಧ್ಯಾತ್ಮ ಚಿಂತಕ, ಸಾಧನೆಯಲ್ಲಿ ನಿರತ ಸಾಧಕ, ಶ್ರೇಷ್ಠ ಅನುಭಾವಿ. ಎಂಬುದು ಡಾ: ತಿಪ್ಪೇಸ್ವಾಮಿ ಹೇಳುತ್ತಾರೆ. ೨

'ಶರಣ' ಮಾತಿಗೆ ಸಂಸ್ಕೃತದಲ್ಲಿ ರಕ್ಷಣೆ, ರಕ್ಷಕ ಎಂದರ್ಥ. ಆ ಮಾತು ವೀರಶೈವ ಪರಿಸರದಲ್ಲಿ, ದೈವದಲ್ಲಿ, ದೊಡ್ಡ ಧ್ಯೇಯದಲ್ಲಿ ರಕ್ಷಣೆ ಪಡೆದಿರುವವನು, ದೊಡ್ಡ ಆದರ್ಶಕ್ಕೆ ತನ್ನನ್ನು ತಾನು ಒಪ್ಪಿಸಿಕೊಂಡವನು ಎಂಬರ್ಥವನ್ನು ಪಡೆದುಕೊಳ್ಳುತ್ತದೆ. 'ಅರಿದರಿದು ನಿಮ್ಮ ಶರಣರು ಆಚರಿಸು ವಾಚರಣೆಯ ಕಂಡು ಕಣ್ದೆರೆದೆನಯ್ಯ' ಎನ್ನುತ್ತಾನೆ ಬಸವಣ್ಣ. ನಿಜವಾದ ಶರಣ ಸಾಂಪ್ರದಾಯಕವಾಗಿ ಬಂದ ಆಚರಣೆಗಳನ್ನು ಆಚರಿಸುವ ಶಾಸ್ತ್ರ ಮೂಡನಲ್ಲ. ಅವನ ಆಚರಣೆಗೆ ಮೂಲದಲ್ಲಿ ಅರಿವು ಇರುತ್ತದೆ. ಎಂಬುದಾಗಿ ಡಾ: ಚಿದಾನಂದ ಮೂರ್ತಿ ಅಭಿಪ್ರಾಯ ಪಡುತ್ತಾರೆ. ೩

'ಶರಣ' ಎಂಬುದೆ ಸಮಾನತೆಯ ಸಂಕೇತವಾಗಿದೆ. ಸಿದ್ಧರಾಮನ ಶರಣ ಪರಿಕಲ್ಪನೆಯೆಂದರೆ 'ಶರ' ಎಂದರೆ ಬಾಣ, 'ನ' ಅಂತ ಮನ್ಮಥ ಬಾಣವಿಲ್ಲದವನೇ ಶರಣನೋಡ ಕಪಿಲ ಸಿದ್ಧ ಮಲ್ಲಿಕಾರ್ಜುನಾ, ಅಂದರೆ ಕಾಮನ ಬಾಣಕ್ಕೆ ಪಕ್ಕಾಗದೆ ಇಂದ್ರಿಯ ಗಳನ್ನು ಜಯಿಸಿರುವವ ಶರಣ ಎಂದು ಹೇಳಿ ಶರಣನ ಘನತೆಯನ್ನು ಎತ್ತಿ ಹಿಡಿದ್ದಾನೆ ಸಿದ್ಧರಾಮ. ೪

ಶರಣರು ಯಾವುದೇ ಜಾತಿ-ಧರ್ಮಗಳಿಗೆ ಬಂದಿತರಾಗಿ ನಿಂತವರಲ್ಲ ಮಾನವತೆಯ ಮೌಲ್ಯವನ್ನು ಎತ್ತಿ ಹಿಡಿದವರರಾಗಿದ್ದಾರೆ. ಅಗಮ್ಯ, ಅಗೋಚರ ತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡವರೇ ಶರಣರಾಗಿದ್ದಾರೆ.

'ಶರಣ' ಪದಕ್ಕೆ ಸರ್ವಜ್ಞ ಹೇಳುವ ಅಭಿಪ್ರಾಯ ತುಂಬಾ ಅರ್ಥಗರ್ಭಿತವಾಗಿದೆ. 'ಶರಣರ ಸಂಗ ಒಳ್ಳೆಯದು' ಹಾಗೆಯೇ 'ಭೇದವನ್ನು ಮೆಚ್ಚದವ ಶರಣ ಸರ್ವಜ್ಞ' ೫

'ಶರಣ'ಎಂಬ ಶಬ್ದಕ್ಕೆ ಸೀಮಿತ ಅರ್ಥ ಕೊಡುವುದು ಸರಿಯಲ್ಲ ಕೇವಲ ಲಿಂಗಾಯತಕ್ಕೆ ಮೀಸಲಲ್ಲ ಶರಣ ಎಂಬುದು ಸಂತ ಸಿದ್ಧ, ಮಹಂತ, ಅನುಭಾವಿ, ಜ್ಞಾನಿ, ದಾರ್ಶನಿಕ - ಎಂಬೆಲ್ಲ ಅರ್ಥ ವ್ಯಾಪ್ತಿಯನ್ನು ಪಡೆದು ಕೊಂಡ ಪದವಾಗಿದೆ. ವಾಸ್ತವವಾಗಿ 'ಶರಣ' ಎಂಬುದು ವ್ಯಕ್ತಿ ವಿಕಾಸದ ಒಂದು ಪರಿಪೂರ್ಣ ಸ್ಥಿತಿ. ಇದು ಸೃಷ್ಟಿಗೊಂಡಾಗ 'ಶರಣ' ಪದದ ನಿಜವಾದ ಅರ್ಥ ನಮಗೆ ಮನವರಿಕೆಯಾಗುತ್ತದೆ. ನಮ್ಮ ಸೀಮಿತ ಪರಿಕಲ್ಪನೆ ಅದು ದಾಟಿನಿಲ್ಲುತ್ತದೆ.

---

೧. ಶ.ವ. ಭಾಗ-೨ ಪುಟ ೪೭

೨:ಡಾ: ತಿಪ್ಪೇಸ್ವಾಮಿ - ಶ.ಸಂ. ಪುಟ ೧೮

೩: ಸಂ: ಟಿ.ಆರ್. ಮಹಾದೇವಯ್ಯ -ಶ.ತ.ಚಿಂ. ಪುಟ ೩

೪:ಅದೇ ಪುಟ ೧೮

೫: ಡಾ: ಎಲ್. ಬಸವರಾಜ್ - ಸ.ವ.ಪುಟ ೩೧ ವಚನ ೧೨೭ ಮತ್ತು ೧೨೮

ಶರಣರು ಎಂದು ದೇವಾಲಯ ನಿರ್ಮಿಸಲಿಲ್ಲ. ದೇಹವನ್ನೇ ದೇಗುಲವನ್ನಾಗಿರಿಸಿದರು. ಸ್ಥಾವರನ್ನು ತಿರಸ್ಕರಿಸಿ ಜಂಗಮವನ್ನು ಪುರಸ್ಕರಿಸಿದರು. ಜಡತೆಯಲ್ಲಿ ಚೈತನ್ಯ ತುಂಬಿದರು. ಕಾಯಕದಲ್ಲಿಯೇ ತಮ್ಮನ್ನು ಸಮರ್ಪಿಸಿಕೊಂಡವರು. ಇಂತಹ ಶರಣ ಪರಂಪರೆ ಕೇವಲ ಕಲ್ಯಾಣ ಶರಣರ ಸಂದರ್ಭದಲ್ಲಿಯೇ ಮಾತ್ರ ಸ್ಥಗಿತಗೊಳ್ಳದೇ ಅದು ಇಂದಿನ ವರೆಗೂ ನಿರಂತವಾಗಿ ಬೆಳೆದು ಬಂದಿದೆ.

ಶರಣರು ಮನುಷ್ಯತ್ವ ಹಾಗೂ ಅವರ ಜೀವನ ಪರ ಮೌಲ್ಯಗಳಿಗೆ ಬೆಲೆ ಕೊಟ್ಟವರು ಆ ಹಿನ್ನಲೆಯಲ್ಲಿ 'ನಾವು ಜಾತ್ಯಾತೀತತೆ, ಕಾಯಕತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡವರನ್ನೆಲ್ಲ ಶರಣರೆನ್ನಬಹುದಾಗಿದೆ. ಹಾಗೆಯೇ ಈ ಶರಣ ಮಾರ್ಗದಲ್ಲಿ ಇದ್ದವರೆಲ್ಲ ಶರಣರೇ ಆಗಿದ್ದಾರೆ. ೧

'ಶರಣ ರೆಂದರೆ ಬಸವ ಅಲ್ಲಮಾದಿಗಳು ಮಾತ್ರ, ಅವರ ಪರಂಪರೆಯವರು ಎಂಬ ಭಾವನೆ ಹೇಗೋ ಬಂದು ಬಿಟ್ಟಿದೆ. ಮೇಲಿನಂತೆ 'ಶರಣ' ಮಾತನ್ನು ವೀರಶೈವ ಅಥವಾ ಲಿಂಗಾಯತ ಎಂಬ ಮಾತಿಗೆ ಸಮಾನವಾಗಿ ನಾವು ಭಾವಿಸದಿದ್ದರೆ ನಿಜಗುಣ ಶಿವಯೋಗಿ, ಷಡಕ್ಷರಿಗಳಂತಹ ಅನುಭಾವಿ ಕವಿಗಳನ್ನು ಶರಣ ಸಾಹಿತ್ಯದ ಚೌಕಟ್ಟಿನಿಂದ ಹೊರಗಿಡಬೇಕಾಗುತ್ತದೆ'. ಎನ್ನುವ ಡಾ : ಚಿದಾನಂದ ಮೂರ್ತಿಯವರ ಎಚ್ಚರಿಕೆ ಗಮನಿಸಬೇಕಾದದ್ದು ತೀರ ಅಗತ್ಯವಾಗಿದೆ. ೨

ಒಟ್ಟಾರೆ: ಬದುಕಿನಲ್ಲಿ ಸರಳತೆ, ಸಮಾಜದಲ್ಲಿ ಸಮಾನತೆ, ಭದ್ರತೆಗೆ ಕಾಯಕ, ನೆಮ್ಮದಿಗ ದಾಸೋಹದ ಪರಿಕಲ್ಪನೆ ನೀಡಿ ಆದಿಸೆಯಲ್ಲಿ ಸಾಗಿದ ಮಹನೀಯರೆಲ್ಲರೂ ಶರಣರೆಂದು ಭಾವಿಸಬಹುದಾಗಿದೆ.

೨:೨ ಅನುಭಾವ ಪದದ ವಿಶ್ಲೇಷಣೆ

'ಅನುಭವ ಮತ್ತು ಅನುಭಾವ' ವ್ಯಕ್ತಿತ್ವದ ಎರಡು ಕಣ್ಣುಗಳು. ನಮ್ಮ ಜೀವನದಲ್ಲಿ ಕಾಲಕಾಲಕ್ಕೆ ಬಂದೊಗುವ ಸುಖ-ದುಃಖ, ಹುಟ್ಟು-ಸಾವು, ನೋವು-ನಲಿವು, ತಿರಸ್ಕಾರ- ಹೊಗಳಿಕೆ ಮುಂತಾದವುಗಳನ್ನು ಕಂಡು ಕೊಂಡು ಅರ್ಥೈಸಿಕೊಂಡು ಬದುಕುವುದೇ 'ಅನುಭವ'. ಇದು ಲೌಕಿಕ ಸ್ಥಿತಿ. ಈ ಬದುಕಿನ ನೆಲೆಯನ್ನು ಬಿಟ್ಟು ಬದುಕಿನಾಚೆಗೆ ಏನಿದೆ ಎಂಬುದನ್ನು ಕಂಡುಕೊಂಡು, ಆಚೆಗೆ ಇರುವ ಶಕ್ತಿ ಚೇತನವೊಂದರ ಸ್ಥಿತಿಯನ್ನು ಅರಿತು ಆ ಚೇತನದಲ್ಲಿ ಲೀನವಾಗಿ ಮಹತ್ತರವಾದುದನ್ನು ಪಡೆಯುವುದೇ 'ಅನುಭಾವ'

ಇಂದ್ರಿಯ ಜನ್ಯವಾದುದು ಅನುಭವ- ಆತ್ಮ ಜನ್ಯವಾದುದು ಅನುಭಾವ. ವ್ಯವಹಾರಿಕ ಬದುಕಿಗೆ ಅನುಭವವಾದರೆ, ಪಾರಮಾರ್ಥಿಕ ಬದುಕಿಗೆ ಅನುಭಾವವಿದೆ.

ಅನುಭವ ವ್ಯಕ್ತಿಯ ಕಾರ್ಯವನ್ನವಲಂಬಿಸಿ ರೂಪಿತವಾಗುವ ಘಟನೆಯಾದರೆ ಅನುಭಾವ ಗುರುವಿನ ಮೂಲಕ ಪರಮ ಸತ್ಯವನ್ನು ಕಂಡು ಕೊಳ್ಳುವಲ್ಲಿ ಮಾಡಿದ ಸಿದ್ಧಿಯ ಫಲ.

'ಅನುಭಾವ' ಪದದ ಬಗ್ಗೆ ಈಗಾಗಲೇ ಬಹು ವಿಸ್ತೃತ ಚರ್ಚೆ ವಿದ್ವಾಂಸರಲ್ಲಿ ನಡೆದಿದೆ.

ಪಾಶ್ಚಾತ್ಯರು ಇದನ್ನೇ 'ಮಿಸ್ಟಿಸಿಸಂ' ಎಂದು ಕರೆದಿದ್ದಾರೆ. ಡಬ್ಲ್ಯೂ. ಆರ್. ಇಂಗ್ ಎಂಬ ವಿದ್ವಾಂಸರು "Mysticism is the immediate feeling of the unity of the self with God' Mysticism is religion with must concentrated and exclusive form. It is that attitude of Mind in which all other relations or swallowed up in the relation of the soul with God'.೩

ಅಭಿಪ್ರಾಯ ಪಟ್ಟರೆ ಶ್ರೀ ರಾನಡೆಯವರು 'Mysticism denotes that attitude of mind which involves a direct, immediate, First hand intuitive apprehension of God' ೪ ಎಂಬುದಾಗಿ ಗುರುತಿಸುತ್ತಾರೆ.

ಮೇಲಿನ ಎರಡು ಅಭಿಪ್ರಾಯಗಳನ್ನು ಅವಲೋಕಿಸಿದರೆ ಪರಮಾತ್ಮ, ಜೀವಾತ್ಮ, ಅಮೃತತ್ವ ಈ ಮೂರಾಂಶಗಳು ಕಂಡು ಬರುತ್ತವೆ. ಜೀವಾತ್ಮ ಪರಮಾತ್ಮದೊಡನೆ ಸಂಗಮಗೊಂಡು ಅದರಿಂದ ಉಂಟಾಗುವ ಅಮೃತತ್ವದ ಫಲವೇ ಅನುಭಾವ ಎನ್ನಬಹುದು. ಆ ಕಾರಣದಿಂದಾಗಿ 'ಅನುಭಾವ'ದ ಅರ್ಥ ಸೀಮಿತವಾಗಿ ನಿಲ್ಲುವದಿಲ್ಲ. ಅದು ಎಲ್ಲಾ ದಾರಿಗಳ ಸಂಗಮವಾಗಿದೆ.

---

೧ :ಸಂ: ಡಾ: ಬಸವಲಿಂಗ ಸೊಪ್ಪಿಮಠ -ಕ.ಪ್ರ.ಪುಟ ೧೧೧

೨ : ಡಾ: ಎಂ. ಚಿದಾನಂದ ಮೂರ್ತಿ -ವೀ.ಭಾ.ಸಂ. ಪುಟ ೩೧೪

೩: W.R.INGE -M.R.

೪: R.D. Ranade - M.M.

‘ ಇಲ್ಲಿ ನಿಜಕ್ಕೂ ತಾತ್ವಿಕ ಮತ್ತು ಧಾರ್ಮಿಕ ಎಂಬೆರೆಡು ಮುಖಗಳ ಸುಂದರವಾದ, ಅರ್ಥಪೂರ್ಣವೂ, ಅನುಭವಪೂರ್ಣವೂ ಆದ ಸಮನ್ವಯಾತ್ಮಕ ಸಾಮರಸ್ಯವಿದೆ. ಒಂದು ತತ್ತ್ವ ಜಿಜ್ಞಾಸೆಯ ರೂಪದಲ್ಲಿದ್ದರೆ, ಮತ್ತೊಂದು ಸತ್ಯದ ಸಾಕ್ಷಾತ್ ಅನುಭವ ವಾಗಿದೆ. ಈ ಸತ್ಯದ ಅನುಭವಕ್ಕೆ ತಾತ್ವಿಕ ಹಿನ್ನೆಲೆಯಿದ್ದರೆ ಮಾತ್ರ ಅದಕ್ಕೊಂದು ಗಟ್ಟಿಯಾದ ನೆಲೆ ಸಿಕ್ಕುವದಲ್ಲವೆ ? ಅಂತೆಯೇ ಇದು ಮೂಲತಃ ಪರಮಾತ್ಮ, ಜೀವಾತ್ಮ ಹಾಗೂ ಅವರ ಪರಸ್ಪರ ಸಂಬಂಧಗಳ ಯಥಾರ್ಥ ಸ್ವರೂಪ ನಿರ್ಣಯದ ಮೇಲೆ ನೆಲೆ ನಿಂತ ಪರಮಾನೂಭೂತಿಯ ಪರಾಕಾಷ್ಠ ಸ್ಥಿತಿಯೂ ಆಗಿದೆ. ಅದೊಂದು ನಿಜಕ್ಕೂ ಆಧ್ಯಾತ್ಮಿಕ ಅನುಭೂತಿಯ ಉತ್ತುಂಗ ಸ್ಥಿತಿ’. ೧ಎನ್ನುವ ಯೋಗಿಶ ಯಡ್ರಾವಿ ಯವರ ವಿಚಾರಗಳು ಸರ್ಮಪಕವಾಗಿವೆ.

ಕ್ರೈಸ್ತ ಧರ್ಮದ ಪ್ರವರ್ತಕ ಯೇಸುಕ್ರಿಸ್ತನ ಕಾಲದಿಂದಲೂ ಅನುಭಾವದ ಸೆಳಹು ಕಂಡು ಬಂದರೂ ಮುಂದೆ ಬಂದಂತಹ ಸೇಂಟ್ ಪಾಲ್, ಪ್ಲಾಟಿನಸ್, ಸೇಂಟ್ ಆಗಸ್ಟಿನ್, ಏಕ್‌ಹಾರ್ತ ಮುಂತಾದವರಲ್ಲಿ ಅದು ತನ್ನ ವಾಸ್ತವಿಕ ಅರ್ಥ ಕಂಡು ಕೊಂಡಿತು. ಅನುಭಾವ ಹುಟ್ಟಿದ್ದು ಅದರ ನಿಗದಿತ ಸ್ಥಳವನ್ನು ಗುರುತಿಸಲು ಸಾಧ್ಯವಿಲ್ಲ. ಏನೇ ಆಗಲಿ ಪಾಶ್ಚಾತ್ಯರ ‘ಮಿಸ್ಟಿಸಿಸಂ’ ಗಿಂತ ವಿಶೇಷತೆಯನ್ನು ‘ಅನುಭಾವ’ ಪದ ಪಡೆದು ಕೊಂಡಿದೆ

ಶರಣರ ಸಂದರ್ಭದಲ್ಲಂತೂ ಅದು ತನ್ನ ತನವನ್ನು ಕಂಡು ಕೊಂಡಿತು. ಶರಣರ ಸಿದ್ಧಿಯಾಗಿ ಅನುಭಾವ ಮೂಡಿತು. ವಿಭಿನ್ನ ಮುಖಗಳ ಮೂಲಕ ಅನುಭಾವ ಪದ ತನ್ನ ವೈಶಾಲ್ಯವನ್ನು ಪಡೆಯಿತು. ‘ ಅನುಭಾವವೆಂಬುದು ನೆಲದಮರೆಯ ನಿಧಾನ, ಅಂತರಂಗದ ರತ್ನ, ಶಿಶು ಕಂಡ ಕನಸು’ ಎಂಬುದಾಗಿ ಚೆನ್ನ ಬಸವಣ್ಣನವರು ಹೇಳುತ್ತಾರೆ. ೨

ಹಾಗೆಯೇ ಷಟಸ್ಥಲಗಳ ಸ್ಥಿತಿಯನ್ನು ಅರಿತಾಗ ನಮಗೆ ‘ಅನುಭಾವ’ ದ ಸ್ಪಷ್ಟ ಚಿತ್ರ ನಮ್ಮ ಕಣ್ಮುಂದೆ ಬರುತ್ತದೆ. ಹಾಗೆಯೇ ‘ಅನುಭಾವ’ ದ ಮಹೋನ್ನತ ತತ್ವದ ದರ್ಶನವಾಗುತ್ತದೆ. ಜಾಗ್ರತ್-ಸ್ವಪ್ನ-ಸುಷುಪ್ತಿಯಲ್ಲಿ ಎಚ್ಚರಿಸಿ ಶರಣನನ್ನು ಶ್ರೇಷ್ಠನನ್ನಾಗಿರಿಸುತ್ತದೆ. ಅನುಭಾವದ ಪರಂಪರೆ ಮುಂದೆ ಓತಪ್ರೋತವಾಗಿ ಹರಿಯಿತು. ಶರಣ ಸಾಹಿತ್ಯದ ವಿಭಿನ್ನ ಪ್ರಕಾರಗಳಲ್ಲಿ ಅದು ಮೈದೋರಿ ಬಂದಿತು. ಆ ಕಾರಣದಿಂದಾಗಿ ಶರಣ ಪರಂಪರೆಯಲ್ಲಿ ‘ಅನುಭಾವ’ ಎಂಬುದು ಆತ್ಮವಿದ್ಯೆಯಾಯಿತು, ತಾನಾರೆಂದರಿವುದರ ಸ್ಥಿತಿಯ ಪರಿಚಯವಾಯಿತು. ಅನುಭಾವದಿಂದ ವಿಕಾರ ವಿದಾಯವಾಗಿ ಘನಮನದ ಅರುಣೋದಯವಾಗುತ್ತದೆ.

‘ಅನುಭಾವ’ ಸಾಧನೆಯ ಸಿದ್ಧಿಯ ಫಲವೆಂಬುದು ಸತ್ಯ. ಪಂಚೇದ್ರಿಯಗಳ ಸೂತಕ ನಿವಾರಿಸಿ ನಿತ್ಯ ಮುಕ್ತ ಪದವಿಯನ್ನು ಕರುಣಿಸುವುದೇ ಇದರ ಫಲ. ಆ ಸಾಧನೆಯ ಪಥಕ್ಕೆ ಯಾವುದೇ ಲಿಂಗ, ವರ್ಣ, ದೇಶ, ಕಾಲ ಇತ್ಯಾದಿ ಮಿತಿಗಳಿಲ್ಲವೆಂಬುದು ಸ್ಪಷ್ಟವಾಗಿದೆ. ಆದರೂ ‘ಅನುಭಾವ’ ದ ಸ್ಪಷ್ಟ ದರ್ಶನವಾಗುವುದು ಶರಣ ಸಾಹಿತ್ಯದಿಂದ ಮಾತ್ರವೆಂಬುದನ್ನು ಅಲಕ್ಷಿಸಲಾಗದು. ಶರಣ ಸಾಹಿತ್ಯವೇ ಒಂದು ಅರ್ಥದಲ್ಲಿ ಅನುಭಾವ ಸಾಹಿತ್ಯವಾಗಿದೆ. ಬಯಲೊಳಗಿನ ಬಯಲು, ಬೆಳಕಿನೊಳಗಿನ ಬೆಳಕು, ನಿರ್ವಯಲು ಸ್ಥಿತಿಯೇ ಅನುಭಾವವೆನ್ನ ಬಹುದು.

೨:೩ ತತ್ವಪದದ ವಿಶ್ಲೇಷಣೆ

ನಂಬಿಕೊಂಡ ಆದರ್ಶ ಸಿದ್ಧಾಂತಗಳ ಹಿನ್ನಲೆಯಲ್ಲಿ ರೂಪಿಸಿಕೊಂಡ ಆತ್ಮೀಕೃತ ಹಾಡುಗಳೇ ತತ್ವ ಪದಗಳು. ಇವು ಸ್ವರ ವಚನಗಳಿಗಿಂತ ಭಿನ್ನ. ಸ್ವರವಚನ ಪರಂಪರೆ ಕಲ್ಯಾಣ ಶರಣರಿಗಿಂತ ಪೂರ್ವದಲ್ಲಿಯೇ ಚಿಗುರಿ ಆನಂತರದಲ್ಲಿ ಮರವಾಗಿ ಅದರೊಳಗಿನ ಒಂದಾಂಶ ತತ್ವ ಪದದಲ್ಲಿ ಸೇರಿ ಹೊಯಿತು. ಅಷ್ಟಕ್ಕೆ ಮಾತ್ರ ತತ್ವ ಪದ - ಸ್ವರ ವಚನ ಒಂದೇ ಎಂದು ಭಾವಿಸುವುದು ತಪ್ಪು.

ಸ್ವರ ವಚನಗಳಲ್ಲಿ ಅನುಭಾವವೇ ಮುಖ್ಯವಾಗದೇ ಮತ್ತೊಂದು ಸಾಮಾಜಿಕ ಆಯಾಮ ತೆರೆದುಕೊಳ್ಳುತ್ತದೆ. ಮೂಲ ಸಿದ್ಧಾಂತವನ್ನು ಮೀರಿ ಸ್ವರ ವಚನದ ರಚನೆಯಾದುದು ಕಂಡುಬರುವುದಿಲ್ಲ. ವಚನ ಸಿದ್ಧಾಂತಕ್ಕೆ ಹೊರತಾದ ತತ್ವ ‘ ತತ್ವ ಪದ’ ಗಳಲ್ಲಿ ಕಂಡು ಬರುತ್ತದೆ. ನನ್ನ ಅಭಿಪ್ರಾಯದಂತೆ ಸ್ವರ ವಚನವೇ ಬೇರೆ, ತತ್ವ ಪದಗಳೇ ಬೇರೆ. ಸ್ವರ ವಚನ ಪರಂಪರೆ ಕಲ್ಯಾಣ ಶರಣರ ತರುವಾಯ ಅಲ್ಲಲ್ಲಿ ಕಂಡು ಬಂದಿತು.

ಸ್ವರ ವಚನಗಳು - ತತ್ವ ಪದಗಳು ಇವುಗಳ ಮೇಲ್ನೋಟದ ಸ್ವರೂಪವನ್ನು ಅವಲೋಕಿಸಿದಾಗ ಕೆಲವು ಸ್ಥೂಲವಾದ ವ್ಯತ್ಯಾಸಗಳು ಕಂಡುಬರುತ್ತದೆ. ಸ್ವರ ವಚನಗಳು ವಚನಗಳ ಆಶಯ ಧೋರಣೆಯನ್ನು ಆತ್ಮೀಕ ಪರಿಭಾಷೆಯಲ್ಲಿ ವಿಶ್ಲೇಷಿಸುತ್ತ ಛಂದೋಬಂಧವಾಗಿದ್ದರೆ ಇದಕ್ಕೆ ವಿರುದ್ಧವಾಗಿ ತತ್ವ ಪದಗಳಿರುತ್ತವೆ. ಸ್ವರ ವಚನದ ಗ್ರಾಂಥಿಕ ಭಾಷೆಗೂ - ತತ್ವ ಪದಕಾರರ ಜನಪದ ಆಡು ಭಾಷೆಗೂ ಬಹಳ ವ್ಯತ್ಯಾಸವಿದೆ. ತತ್ವ ಪದಕಾರರ ಜೀವನ ಶೈಲಿ ಶರಣರಂತೆ ಕಂಡರೂ ಅವರ ಸಾಹಿತ್ಯಿಕ ರಚನೆ ವಚನ - ಸ್ವರ ವಚನಗಳಿಗಿಂತ ಭಿನ್ನವಾಗಿರುತ್ತವೆ. ಶಾಂತರಸರು ಅಭಿಪ್ರಾಯ ಪಡುವ ಹಾಗೆ ‘ ತತ್ವ ಪದಗಳು ವಿಶಾಲವಾದ ಅರ್ಥದಲ್ಲಿ ಧಾರ್ಮಿಕ ಪದ್ಯಗಳು. ಭಕ್ತಿ ಚಳುವಳಿಯ ಚಿಂತನೆ, ತತ್ವ ಮತ್ತು ಮೌಲ್ಯಗಳನ್ನು ವ್ಯಾಪಕವಾಗಿ ಹರಡುವುದಕ್ಕೆ ಸಹಾಯ ಮಾಡಿದ ಶಾಬ್ಧಿಕ ರಚನೆಗಳು’. ೩

೧: ಸಂ: ಡಾ: ಆರ್.ಸಿ. ಹೀರೆಮಠ-ಶಿ.ದೀ. ಪುಟ ೬೦೪

೨: ಸಂ: ಡಾ: ಬಿ.ವಿ ಮಲ್ಲಾಪುರ -ಸ.ವ.ಸಂ.-೩ ವಚನ ೧೫ ಪುಟ ೧೧೪

೩: ಸಂ: ಶಾಂತರಸ -ಶ.ಪ್ರಾ.ಸಂ. ಪ್ರಸ್ತಾವನೆ ಪುಟ ೨

ವ್ಯವಹಾರಕ್ಕೆ ಬೇರೆಯಾದ ಯಾವುದೇ ಮಾತನ್ನು ತತ್ವ ಎಂದು ಕರೆಯಲಾಗಿದೆಂಬ ಅಭಿಪ್ರಾಯ ಡಾ: ಹಿ.ಶಿ. ರಾಮಚಂದ್ರೇಗೌಡರದು. ೧

ತತ್ವ ಎಂದರೆ ಸಿದ್ಧಾಂತ, ಪರಮಾತ್ಮ, ನಿಜಸ್ಥಿತಿಎಂದರ್ಥವಾಗುತ್ತದೆ. ತತ್ವಜ್ಞಾನವನ್ನು ಬ್ರಹ್ಮ ಜ್ಞಾನವೆಂದು ಕರೆಯಲಾಗಿದೆ. 'ಪದ' ವೆಂಬುದನ್ನು ' ಹಾಡು ' 'ಹದಗೊಂಡ ಶಬ್ದ ' ಎಂದು ಕರೆಯಲಾಗಿದೆ. ಪರಮಾತ್ಮನಿಗೆ ಸಂಬಂಧಿಸಿದ ಸಿದ್ಧಾಂತವನ್ನು ಹಾಡಿನ ಮೂಲಕ ಅಭಿವ್ಯಕ್ತಿಸುವ ಕ್ರಿಯೆಗೆ ತತ್ವ ಪದ ಎನ್ನುತ್ತಾರೆ. ಎಂಬ ಅಭಿಪ್ರಾಯ ಡಾ: ಬಸವರಾಜ ಸಬರದ ರವರದು.೨

ತತ್ವ ಪದಕ್ಕೆ ಸಂವಾದಿಯಾಗಿ ಸ್ವರವಚನ ಬಳಸುವುದು ತಪ್ಪು. ಅಂತೆಯೇ ' ಅನುಭಾವ ' ಎಂಬುದು ಸಹ ತಪ್ಪು. ಏಕೆಂದರೆ ಅನುಭಾವ ತತ್ವ ಪದಗಳಿಗೆ ಸೀಮಿತವಾಗಿಲ್ಲ. ಹಾಗೆಯೇ ಭಕ್ತಿ, ಕೈವಲ್ಯ, ಆಶುಕವಿ ಸಾಹಿತ್ಯವೆಂಬ ಪರ್ಯಾಯ ಹೆಸರುಗಳನ್ನು ಕರೆಯುವುದು ಅಷ್ಟು ಸೂಕ್ತವಲ್ಲ. ತತ್ವ ಪದಗಳು ರಚಿಸಿದ ರಚನಕಾರರು ಕಲ್ಯಾಣ ಶರಣರ ಅನುಯಾಯಿಗಳು, ಈ ಮಾತು ಅವರ ರಚನೆಗಳಿಂದ ವ್ಯಕ್ತವಾಗುತ್ತದೆ. ಹಾಗಾಗಿ ತತ್ವಪದಗಳು ಶರಣ ಸಾಹಿತ್ಯದಿಂದ ಆಚೆಗೆ ನಿಲ್ಲದೇ ಶರಣ ಸಾಹಿತ್ಯದ ಪ್ರಕಾರವಾಗಿ ಬೆಳೆದು ಬಂದಿದೆ. ತತ್ವ ಪದಗಳನ್ನು ರಚಿಸಿದ ಮಹನೀಯರೆಲ್ಲರೂ ಶರಣರೆಂದೆ ಪರಿಭಾವಿಸ್ಪಡುತ್ತಾರೆ.

'ತತ್ವ ಪದ ಗತದ ಕೂತೂಹಲವಾದ ಒಂಧು ಕಾವ್ಯಪ್ರಕಾರವಲ್ಲ. ಅದೊಂದು ಸಂಸ್ಕೃತಿ, ಆಚರಣೆ ' ಎನ್ನುತ್ತಾರೆ. ಡಾ : ಎಚ್.ಎಸ್. ಶಿವಪ್ರಕಾಶ ೩ ತತ್ವಪದಗಳು ಒಂದು ಅನುಭವದ ಘಟನೆಯಿಂದ ಹುಟ್ಟುತ್ತವೆ. ಆಘಟನೆಗಳ ತತ್ವವನ್ನು ಭೇದಿಸುವುದರ ಮೂಲಕ ಆ ಅನುಭವವನ್ನು ಅನುಭಾವಕ್ಕೆ ತಿರುಗಿಸುತ್ತವೆ. ಕಾರಣೀಕಗಳು ತತ್ವ ಪದಗಳ ಕ್ರಿಯಾರೂಪಗಳು ; ತತ್ವ ಪದಗಳು ಕಾರಣೀಕಗಳ ವಾಗ್ರೂಪಗಳಾಗಿವೆ. ೪

ತತ್ವ ಪದಗಳು ವ್ಯಕ್ತಿಗತ ಬದಲಾವಣೆಗಳನ್ನು ಬಯಸುತ್ತದೆ. ತತ್ವ ಪದಗಳು ಸೃಷ್ಟಿಯಾದದ್ದು ಅಕಾಲಿಕ - ಅನಾರ್ಥಿಕ ಪರಿಸರದಲ್ಲಿ ವೆಂಬುದು ಸತ್ಯವಾಗಿದೆ. ' ವೀರಶೈವ ವಚನ ಸಾಹಿತ್ಯ ಸನಾತನ ಹಿಂದೂ ವ್ಯವಸ್ಥೆವಿರುದ್ಧ ಬಂಡಾಯವೆದ್ದು ವ್ಯವಸ್ಥೆಯನ್ನು ಬದಲಾಯಿಸುವ ಪ್ರಕ್ರಿಯೆಗೆ ಬುನಾದಿಹಾಕಿದರೆ ತತ್ವ ಪದಗಳು ಭಕ್ತಿ, ಜ್ಞಾನ, ವೈರಾಗ್ಯಕ್ಕೆ ಹೆಚ್ಚು ಒತ್ತು ಕೊಟ್ಟವು. ಆದರೆ ಇವೆರಡರ ಚಿಂತನೆಯಲ್ಲಿ ವೀರಶೈವ ಸಿದ್ಧಾಂತದ ಮೂಲ ಸೆಲೆ ಸೂಕ್ಷ್ಮವಾಗಿ ಕಂಡುಬರುತ್ತದೆ. ೫ ಎಂಬುದಾಗಿ ಮಹೇಶ ತಿಪ್ಪಶೆಟ್ಟಿ ಅಭಿಪ್ರಾಯ ಪಟ್ಟಿದ್ದು ಬಹು ಸೂಕ್ತವಾಗಿದೆ.

ತತ್ವ ಪದಗಳು ಮಾನವ ಬದುಕಿನ ರಹಸ್ಯವನ್ನು ಭೇದಿಸಿ ಅವುಗಳಿಗೆ ತಮ್ಮದೆಯಾದ ಪರಿಭಾಷೆಯ ಮೂಲಕ ತಿಳಿಸಿ ಮನುಷ್ಯನನ್ನು ಸದಾ ಕಾಡುವ ಹುಟ್ಟು - ಸಾವುಗಳ ಬಗ್ಗೆ ಸರಳೀಕೃತವಾದ ಉಪದೇಶ ನೀಡುತ್ತವೆ. ಅವು ಬಹು ಬೇಗ ಜನಪ್ರಿಯವಾಗುತ್ತವೆ. ಹಾಗಾಗಿ ತತ್ವ ಪದಗಳು ನಮ್ಮ ನಡುವಿನ ಜೀವಂತ ಪರಂಪರೆಯಾಗಿ ಮುಂದುವರೆಯುತ್ತವೆ. ಧರ್ಮ- ಭಾಷೆ-ಸಾಹಿತ್ಯಗಳೆಲ್ಲದರಲ್ಲಿಯೂ ಸಮನ್ವಯತೆಯ ಸೂತ್ರಗಳಾಗಿ ತತ್ವಪದಗಳು ಒಡಮೂಡಿ ಬಂದು ಶರಣ ಸಾಹಿತ್ಯದಲ್ಲಿ ಹೊಸತನವನ್ನೇ ಸೃಷ್ಟಿಸಿವೆ.

೨.೪ ಶರಣರ ಚಳುವಳಿ ಹಿನ್ನೆಲೆ : ಸ್ವರೂಪ

ಸಮಾಜವೆಂಬುದು ಮಾನವಾಶ್ರಿತ ಮೌಲ್ಯಗಳನ್ನು ಕಳೆದುಕೊಂಡು ಜಡವಾಗಿ ಬಿದ್ದಾಗ ಅದನ್ನು ಜೀವಂತಿಕೆಯಾಗಿರಿಸಲು ಆ ಸಮಾಜದೊಳಗೆ ಹೊಸದೊಂದು ಪ್ರಯತ್ನ ನಡೆದು ಅದು ಬದುಕಿನ ಹೊಸ ನಾಂದಿ ಹಾಡುವಲ್ಲಿ ಕಾರಣೀಭೂತವಾಗುತ್ತದೆ. ಡಾ:ಪಿ.ವಿ. ನಾರಾಯಣರು ಹೇಳುವಂತೆ 'ಸೂಕ್ತ ಹಿನ್ನೆಲೆ, ಸಮರ್ಥ ನಾಯಕತ್ವಗಳು ಕೂಡಿಬಂದಾಗ ಇಡೀ ಸಮಾಜವೇ ಎದ್ದು ನಿಲ್ಲಬಹುದು. ವಚನ ಕಾರರಿಂದ ನಡೆದ ಇಂತಹ ಚಳುವಳಿಯ ಕಾಲವು ಹನ್ನೆರಡನೆಯ ಶತಮಾನದ ಮಧ್ಯಭಾಗವಾದರೂ ಅದಕ್ಕೆ ಭೂಮಿಕೆಯು ಸುಮಾರು ಒಂದು ಶತಮಾನದಷ್ಟು ಹಿಂದಿನಿಂದಲೇ ಸಿದ್ಧಿಗೊಳ್ಳುತ್ತಿತ್ತು. ಆದ್ದರಿಂದ ವಚನ ಚಳುವಳಿಯ ವಿವಿಧ ಮಗ್ಗಲುಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಅದಕ್ಕೆ ಹಿನ್ನೆಲೆಯಾಗಿದ್ದ ರಾಜಕೀಯ, ಧಾರ್ಮಿಕ, ಸಾಹಿತ್ಯಕ ಪರಿಸ್ಥಿತಿಗಳನ್ನು ತಿಳಿದುಕೊಳ್ಳುವುದು ಅತ್ಯಂತ ಅವಶ್ಯಕ. ಏಕೆಂದರೆ ಬದುಕನ್ನು ಪ್ರಭಾವಿಸುವ ಈ ಅಂಶಗಳು ಪರಸ್ಪರ ಅಭಿನ್ನವಾದವು. ಪೂರಕವಾದವು. ಆದ್ದರಿಂದ ಇವೆಲ್ಲದರ ಪರಿಶೀಲನೆಯಿಂದ ಮಾತ್ರ ವಚನ ಚಳುವಳಿಯು ನಡೆದದ್ದರ ಚಾರಿತ್ರಿಕ ಅನಿವಾರ್ಯತೆಯನ್ನು ಗುರುತಿಸಲು ಸಾಧ್ಯ.' ೬ ಎಂಬ ಈ ಅಭಿಪ್ರಾಯ ಅತ್ಯಂತ ಸೂಕ್ತವಾಗಿದೆ.

ಶರಣ ಚಳುವಳಿಗೆ ಧಾರ್ಮಿಕ, ಸಾಮಾಜಿಕ ಆಯಾಮಗಳಿವೆ ಆ ದೃಷ್ಟಿಯಿಂದ ಶರಣರ ಚಳುವಳಿ ಸಾಂಸ್ಕೃತಿಕ ಸಮಗ್ರ ಕ್ರಾಂತಿ ಎನಿಸಿದೆ. ೭ ಎಂಬ ಡಾ: ವೀರಣ್ಣ ರಾಜೂರವರ ಅಭಿಪ್ರಾಯ ಸರಿಯಾಗಿಯೇ ಇದೆ .

---

೧ : ಕನ್ನಡ ಸಾಹಿತ್ಯ ಅಕಾಡೆಮಿ - ಕ.ತ. ಪುಟ ೩೪

೨ : ಡಾ : ಬಸವರಾಜ ಸಬರದ - ರಾ.ಜಿ.ಅ.ಕ. ಪುಟ೧

೩ : ಕನ್ನಡ ಸಾಹಿತ್ಯ ಅಕಾಡೆಮಿ - ಕ.ತ. ಪುಟ ೩

೪: ಅದೇ ಪುಟ ೬

೫ : ಅದೇ ಪುಟ ೮೭

೬. ಡಾ: ಪಿ.ವಿ. ನಾರಾಯಣ - ವ.ಸಾ.ಪ. ಪುಟ ೨

೭. ಡಾ :ವೀರಣ್ಣ ರಾಜೂರು - ವ.ಅ.ಪುಟ ೩

ಧಾರ್ಮಿಕ ಹಿನ್ನೆಲೆ : - ಮಾನವ ಬದುಕಿನಲ್ಲಿ ಧರ್ಮದ ಪ್ರಭಾವ ಕಾಲಕಾಲಕ್ಕೆ ಭಿನ್ನವಾದರೂ ಅವನ ಜೀವನ ಧರ್ಮದಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲವೆನ್ನುವಷ್ಟರ ಮಟ್ಟಿಗೆ ಧರ್ಮ ಮಾನವ ಪರಸ್ಪರ ಪೂರಕವಾಗಿರುವ ಸಂದರ್ಭಗಳೇ ಹೆಚ್ಚು . ಆ ಹಿನ್ನೆಲೆಯಲ್ಲಿ ಅವರ ನಿತ್ಯ ಬದುಕು ಸಾಗುತ್ತದೆ.

ಶರಣ ಚಳುವಳಿಯ ಪೂರ್ವದಲ್ಲಿ ವೈದಿಕ - ಜೈನ- ಶೈವ ಧರ್ಮಗಳು ಕರ್ನಾಟಕದಲ್ಲಿದ್ದವು. ಬೌದ್ಧ ಮತ ಸೀಮಿತ ಪಂಗಡಕ್ಕೆ - ಜನರಿಗೆ ಸೀಮಿತವಾದ ಕಾರಣ ದಕ್ಷಿಣ ಭಾರತದಿಂದ ಬಹುತೇಕವಾಗಿ ಕಣ್ಮರೆಯಾಗಿತ್ತು. ಅದೇ ಸಮಯದಲ್ಲಿ ರಾಜಾಶ್ರಯ ಪಡೆದಿದ್ದ ಜೈನ ಧರ್ಮ ಆನಂತರದಲ್ಲಿ ಉಂಟಾದ ಆಚರಣೆ, ನಿಯಮಗಳು ವೈದಿಕದ ಪ್ರತಿರೂಪವೆಂದು ಜನರಿಗೆ ಗೋಚರಿಸಿತು. ಜೈನ ಧರ್ಮದ ನಂತರ ಶೈವ ಧರ್ಮ ಬಂದು ತನ್ನ ಪ್ರಾಬಲ್ಯ ಸ್ಥಾಪಿಸಿತು. ಕಾಳಾಮುಖ, ಪಾಶುಪತ, ಕಾಪಾಲಿಕ, ನಾಥ, ಕೌಳರೂ ಮುಂತಾದ ಪಂಗಡ ತಮ್ಮ ದೇ ಆದ ವಿಶಿಷ್ಟ ಆಚರಣೆ ಹೊಂದಿದ್ದವು. ಶರಣ ಸಾಹಿತ್ಯದ ರಚನೆ ಅವಲೋಕಿಸಿದಾಗ ಸರ್ವ ಪಂಥಗಳನ್ನು ಶರಣರು ಖಂಡಿಸಿದ್ದುದು ಕಂಡು ಬರುತ್ತದೆ. ಅವುಗಳ ಬಾಹ್ಯ ಡಾಂಭಿಕತೆ - ಟೊಳ್ಳುತನವನ್ನು ಶರಣ ಚಳುವಳಿ ಎತ್ತಿ ತೋರಿಸುತ್ತದೆ.

ಅಂತೆಯೇ ಶೈವದ ಅನೇಕ ಪಂಥಗಳು ಆರಾಧನೆಯ ಹೆಸರಿನಲ್ಲಿ ಹಿಂಸೆಯನ್ನು ಪ್ರಚೋದಿಸಿದ್ದವು. ಜನತೆಯನ್ನು ಭಯಭೀತರನ್ನಾಗಿರಿಸಿದ್ದವು. ಭಯದ ಮೂಲಕ ತಮ್ಮ ಬದುಕನ್ನು ರೂಪಿಸಿಕೊಂಡವು. ರಾಜಾಶ್ರಯಗಳಿಗೆ ಹಾತೊರೆದವು. ಶೈವಕ್ಕಿಂತೂ ವೈದಿಕತೆ ಮತ್ತಷ್ಟು ಅಪಾಯಕಾರಿಯಾಗಿತ್ತು. ದರ್ಮಬೋಧನೆ ಕೆಲವೇ ವರ್ಗಗಳ ಮುಷ್ಠಿಯಲ್ಲಿ ಮುದುಡಿ ಬಾಳನ್ನು ಬರಡಾಗಿಸಿತ್ತು. ಅನಾಗರಿಕ ವರ್ತನೆಗಳಿಗೆ ಕಡಿವಾಣವಿರಲಿಲ್ಲ. ಧರ್ಮದ ಹೆಸರಿನಲ್ಲಿಯೇ ಸಾಮಾನ್ಯರ ಶೋಷಣೆ ನಿರಂತರ ನಡೆಯಿತು. ಶೂದ್ರ - ಸ್ತ್ರೀಯರ ಬದುಕು ನಾಯಿಗಿಂತ ಕೀಳಾಗಿತ್ತು.

ಜನಸಾಮಾನ್ಯರನ್ನು ಧರ್ಮದ ಹೆಸರಿನಲ್ಲಿ ಭಯಗೊಳಿಸಿ ಅವರ ಭಯವನ್ನೇ ತಮ್ಮ ಬಂಡವಾಳವಾಗಿರಿಸಿಕೊಂಡು , ಅವರ ಅಜ್ಞಾನವನ್ನೇ ತಮ್ಮ ಹಾದಿ ಮಾಡಿಕೊಂಡು , ಧರ್ಮವನ್ನೇ ತಮ್ಮ ಆಸ್ತಿಯೆಂದು ವರ್ತಿಸುವ ಒಂದು ಗುಂಪೇ ನಿರ್ಮಾಣವಾಗಿತ್ತು. ಇದು ಒಂದೆಡೆಯಾದರೆ ಮತ್ತೊಂದೆಡೆ ಸಾಮಾನ್ಯರೆನಿಸಿಕೊಂಡವರು ತಾವೇ ನಿರ್ಮಿಸಿಕೊಂಡ ಕಂದಕಗಳಲ್ಲಿ ಕರಗಿದರು. ಆರಾಧನೆಗಾಗಿ ಸೃಷ್ಟಿಸಿಕೊಂಡ ದೈವದ ಹೆಸರಿನಲ್ಲಿ ವಿಪರಿತ ಉಗ್ರ ಆಚರಣೆ , ಪ್ರಾಣಿ ಬಲಿ, ನರ ಬಲಿಗಳ ಮೂಲಕ ಇಡೀ ಬಾಳನ್ನು ದುರಂತಕ್ಕಿಡುಮಾಡಿಕೊಂಡರು . ಹೀಗಾಗಿ ಅವರ ಮಾನಸಿಕ ಹೊಯ್ದಾಟ, ಅನಾಚಾರ, ಅತ್ಯಾಚಾರ, ಅತಿಯಾಸೆಗಳೆಲ್ಲ ವಿಜೃಂಭಿಸಿ ನೈಜವಾದ ಧಾರ್ಮಿಕ ತಳಹದಿಯನ್ನೇ ಹೊಸಕಿ ಹಾಕಿ ಬಿಟ್ಟಿದ್ದವು. ಧರ್ಮವೆಂದರೆ ಕೆಲವರ ಸೊತ್ತು , ಧರ್ಮದ ಆಚರಣೆಗಳು ಸರ್ವರಿಗಲ್ಲ, ಧರ್ಮದಲ್ಲೂ ಅನೇಕ ಭೇದಗಳಿವೆ ಎಂಬ ಅಚಲ ನಂಬಿಕೆ ಮೂಡಿ ಇಡೀ ಧಾರ್ಮಿಕ ಸ್ಥಿತಿಯ ವಾತಾವರಣವೆಲ್ಲ ಅಂದಿನ ಮಾನವೀಯ ಮೌಲ್ಯಗಳಿಗೆ ಬೆಲೆ ನೀಡುವ ಮನಸ್ಸುಗಳಲ್ಲಿ ಹೇಸಿಗೆಯನ್ನು ಮೂಡಿಸಿತ್ತು. ಇಂತಹ ಅವಮಾನವೀಯ ಧಾರ್ಮಿಕ ಸ್ಥಿತಿಯನ್ನು ಕಂಡ ಶರಣರು ಹೊಸದಾದ ವಾಸ್ತವಿಕ , ಧಾರ್ಮಿಕ ಪರಿಕಲ್ಪನೆ ನೀಡಿ ಹೊಸ ಬೆಳಕನ್ನು ಸರ್ವರಲ್ಲೂ ಮೂಡಿಸಿದರು. ವಾಸ್ತವಿಕ ಸತ್ಯಗಳನ್ನು ಪ್ರಾಯೋಗಿಕವಾಗಿ ತೋರಿಸಿಕೊಟ್ಟರು.

ರಾಜಕೀಯ ಹಿನ್ನೆಲೆ : ಶರಣ ಚಳುವಳಿಯ ಪೂರ್ವದಲ್ಲಿ ರಾಜಕೀಯ ಅಸ್ಥಿರತೆ ನೆಲಗೊಂಡಿತ್ತು. ದಕ್ಷಿಣ ಭಾರತದಲ್ಲಿ ಪ್ರಬಲರಾಗಿದ್ದ ಕಲ್ಯಾಣ ಚಾಲುಕ್ಯರು ಹಾಗೂ ಚೋಳರ ಮಧ್ಯೆ ಬಹುಕಾಲದಿಂದಲೂ ಹಣಾಹಣಿ ನಡೆದಿದ್ದು. ಕ್ರಿ.ಶ. ೧೦೪೩ - ೬೦ ರ ಅವಧಿಯ ಮೊದಲನೆಯ ಸೋಮೇಶ್ವರನ ಕಾಲದಲ್ಲಂತೂ ಧೀರ್ಘಕಾಲೀನ ಯುದ್ಧಗಳು ನಡೆದ ಪರಿಣಾಮವಾಗಿ ಚೋಳರು ಕಲ್ಯಾಣವನ್ನು ಆಕ್ರಮಿಸಿಕೊಂಡರು.

ಮೊದಲನೆಯ ಸೋಮೇಶ್ವರನ ನಂತರ ಯಾದವೀ ಕಲಹ ನಡೆದು ಆರನೆಯ ವಿಕ್ರಮಾದಿತ್ಯ ಸಹೋದರನನ್ನು ಸದೆಬಡಿದು ಕ್ರಿ.ಶ. ೧೦೭೬ ರಲ್ಲಿ ಅಧಿಕಾರಕ್ಕೆ ಬಂದನು. ಕ್ರಿ.ಶ. ೧೦೭೬-೧೧೨೬ ರವರೆಗಿನ ಈತನ ಧೀರ್ಘಕಾಲೀನ ಆಳ್ವಿಕೆ ಹೊಸದನ್ನು ಮೂಡಿಸಿತು. ಸಾಂಸ್ಕೃತಿಕವಾಗಿ ನಾಡನ್ನು ಕಟ್ಟುವ ಕೆಲಸ ನಡೆಯಿತು. ಆನಂತರದಲ್ಲಿ ಬಂದ ರಾಜರು ಅಸಮರ್ಥರಾದ ಕಾರಣ ಮಾಂಡಲಿಕರ ಕೈಯಲ್ಲಿ ಅಧಿಕಾರ ಹಸ್ತಾಂತರವಾಗಿ ಮಾಂಡಲಿಕರಲ್ಲಿ ಪ್ರಬಲನಾಗಿದ್ದ ಬಿಜ್ಜಳನ ಕೈಯಲ್ಲಿ ಅಧಿಕಾರ ಕೇಂದ್ರಿಕೃತವಾಯಿತು. ಮುಂದೆ ಚಾಲುಕ್ಯ ಅರಸ ತೈಲಪನಿಗೆ ಮೋಸವೆಸಗಿ ಅಧಿಕಾರ ಸೂತ್ರವನ್ನೆಲ್ಲ ತನ್ನಲ್ಲಿರಿಸಿಕೊಂಡನು . ತೈಲಪನ ಸಾವಿನ ನಂತರ ಕ್ರಿ.ಶ. ೧೧೬೧ ರಲ್ಲಿ ಅಧಿಕಾರ ಸ್ವೀಕರಿಸಿ ಕ್ರಿ.ಶ. ೧೧೬೭ ರವರೆಗೆ ಅಧಿಕಾರದಲ್ಲಿದ್ದನು.

ಏನೇ ಆಗಲಿ ರಾಜಕೀಯ ಪಲ್ಲಟಗಳನ್ನು ಅವಲೋಕಿಸಿದರೆ ಕಂಡು ಬರುವ ಸಂಗತಿಗಳೆಂದರೆ : ರಾಜರಿಗೆ ಯುದ್ಧವೇ ಪ್ರಧಾನವಾಗಿ ಕತ್ತಿಗಳನ್ನು ಝುಳಪಿಸುವುದರಲ್ಲಿಯೇ ತಮ್ಮ ಕಾಲ ಕಳೆಯಬೇಕಾಯಿತು. ಆ ಕಾರಣವಾಗಿ ಜನರ ನೋವು- ನಲಿವುಗಳಿಗೆ ಸ್ಪಂದಿಸುವ ಅನಿವಾರ್ಯತೆ ವ್ಯವದಾನವಾಗಲೀ ಅವರಿಗೆ ಕಂಡುಬರಲಿಲ್ಲವೆಂದು ತೋರುತ್ತದೆ. ಇದರಿಂದಾಗಿ ಜನರಿಗೆ ಅನೇಕ ಕಷ್ಟಗಳು ಬಂದು ಕರಗತೊಡಗಿದರೂ ಉಸಿರು ಕೈಯಲ್ಲಿ ಹಿಡಿದು ಜೀವಿಸಬೇಕಾಯಿತು. ಇಂತ ಸಂದರ್ಭದಲ್ಲಿಯೇ ರಾಜರ ಕ್ರೌರ್ಯಗಳನ್ನು ಮೆಟ್ಟಿನಿಲ್ಲುವ ಮನಸ್ಸುಗಳು ಸಿದ್ಧವಾಗ ತೊಡಗಿದವು . ಬಿಜ್ಜಳನ ಕಾಲಕ್ಕೆ ಈ ಪ್ರತಿಭಟನೆ ಪ್ರಬಲಾದರೂ ಆ ಹಿಂದೆ ಪ್ರತಿಭಟನೆ ಸೆಳಹು ತಣ್ಣನೇ ಸಾಗಿ ಬಂದಿತ್ತು. ಅದಕ್ಕೆ ಅಂದಿನ ಸಾಮಾಜಿಕ ಚರಿತ್ರೆಯೇ ಸೂಕ್ತ ನಿದರ್ಶನವಾಗಿದೆ.

ಸಾಮಾಜಿಕ ಹಿನ್ನೆಲೆ : ವೈದಿಕ ನೆಲೆ ಸ್ಥಾಪಿಸಿದ ವರ್ಗ , ವರ್ಣ, ಲಿಂಗ ಭೇದಗಳು ಮಾನವ ಬದುಕಿನ ವಿಷದ ಮುಳ್ಳುಗಳಾಗಿದ್ದವು. ಪ್ರಭು-ಪುರೋಹಿತರದೇ ಪ್ರಾಬಲ್ಯವಾಗಿತ್ತು . ದುಡಿಮೆ ತಕ್ಕ ಪ್ರತಿಫಲವಿರಲಿಲ್ಲ. ಶ್ರಮಿಕ ಸಂಸ್ಕೃತಿಗೆ ಪುರಸ್ಕಾರ ವಿರಲಿಲ್ಲ. ಕಷ್ಟ ಒಬ್ಬನದಾದರೆ ಸುಖ ಮತ್ತೊಬ್ಬನದಾಗಿತ್ತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ವರ್ಗಗಳು ಬುದ್ಧಿ, ಅಧಿಕಾರ, ಹಣ ಬಲಗಳಿಂದಾಗಿ ಇಡೀ ಸಮಾಜದ ನಾಡಿಯ ಮಿಡಿತವನ್ನೇ ಅದುಮಿ ಹಿಡಿದಿದ್ದವು. ಇವರ ಹಿಡಿತ ಶೂದ್ರವರ್ಗದ ಉಸಿರಾಟವನ್ನು ಸರಾಗವಾಗದಂತೆ ಮಾಡಿತ್ತು.

ರಾಜ್ಯದ ಹಾನಿಗೆ ಶೂದ್ರರೇ ಜವಾಬ್ದಾರರು, ರಾಜ ಮಾಡಿದ ಅವಿವೇಕದ ಯುದ್ಧದ ಹಾನಿಗೆ ವೆಚ್ಚ ಭರಿಸುವವರು ಶೂದ್ರರೇ, ಒಂದೆಡೆ ಇಂತಹ ಸ್ಥಿತಿಯಿದ್ದರೆ, ಇನ್ನೊಂದೆಡೆ ಜಾತಿಯ ಬಂಧಗಳ ಬಿಗಿ ಹಿಡಿತ ಮಾನವೀಯತೆಯನ್ನೇ ಕೊಂದು ಹಾಕಿತ್ತು. ಪಶು ಪಕ್ಷಿಗಳಿಗೆ ತೋರುತ್ತಿದ್ದ ಕನಿಷ್ಠ ಪ್ರೀತಿಯು ಇವರಿಗೆ ಲಭ್ಯವಿದ್ದಿಲ್ಲ. 'ಹೊಲೆಯ ನಾಯಿ ಹುಲು ಸರವಿಯಿಂದ ಕರಕಷ್ಟ' ಎಂಬ ಜೇಡರ ದಾಸಿಮಯ್ಯರ ನುಡಿ ಗಮನಿಸಿದಾಗ ಹೊಲೆಯರ ಸ್ಥಿತಿ ಹೇಗಿತ್ತು ಎಂಬುದರ ಸ್ಪಷ್ಟತೆಯ ಅರಿವಾಗುತ್ತದೆ. ಜಾತಿಯ ಪ್ರಬಲ ಆಚರಣೆಗಳಿಂದಾಗಿಯೇ ಸಮಾಜ ಛಿದ್ರ ಛಿದ್ರ ವಾಗಿತ್ತು.

ಜಾತಿಯ ಸ್ಥಿತಿ ಹೀಗಾದರೆ ಸ್ತ್ರೀಯರ ಸ್ಥಿತಿಯಂತೂ ಇದಕ್ಕೆ ಹೊರತಾಗಿದ್ದಲ್ಲ '' ಪಿತಾರಕ್ಷತಿ ಕೌಮಾರೇ, ಭರ್ತಾರಕ್ಷತಿ ಯೌವನೇ, ರಕ್ಷಂತಿ ಸ್ಥವಿರೇ, ಪುತ್ರಃ ನ ಸ್ತ್ರೀ ಸ್ವತಂತ್ರ ಮರ್ಹತಿ'' (ಕುಮಾರಿಯಾಗಿದ್ದಾಗ ತಂದೆ, ಯೌವನ ಕಾಲದಲ್ಲಿ ಗಂಡ , ಮುಪ್ಪಿನಲ್ಲಿ ಮಗನ ರಕ್ಷಣೆಯಲ್ಲಿರುವ ಕಾರಣ ಸ್ತ್ರೀಯು ಸ್ವಾತಂತ್ರ್ಯಕ್ಕೆ ಅನರ್ಹಳು)ಎನ್ನುವ ಮನುವಿನ ವಿಚಾರಧಾರೆಯ ನಿಯಮಗಳು ನೋಡಿದರೆ ಸಾಕು ಸ್ತ್ರೀ ಶೋಷಣೆ ಎಷ್ಟು ನಿಯಮ ಬದ್ಧವಾಗಿ ನಡೆಯುವುದರ ಸೂಚನೆ ಕಂಡುಬರುತ್ತದೆ. ಹೆಣ್ಣನ್ನು ಮಾಯೆ, ಮೋಕ್ಷಕ್ಕೆ ಅನರ್ಹಳು , ಅವಳು ಆಧ್ಯಾತ್ಮ ಸಾಧನೆಯಲ್ಲಿ ಅಡ್ಡಿ ಎನ್ನುವ ಕಟ್ಟಳೆಗಳು ನಮಗೆ ಆಗಮ -ಶಾಸ್ತ್ರಗಳಿಂದ ಕಂಡು ಬರುತ್ತದೆ. ಹೆಣ್ಣು ಬರಿ ಭೋಗ ವಸ್ತುವೆನಿಸಿ ಪುರುಷನ ನೆರಳಾಗುವಂತಹ ವ್ಯವಸ್ಥಿತ ಯೋಜನೆ ಕಾರ್ಯಗತವಾಗಿತ್ತು. ಹೆಣ್ಣಿಗೆ ತನ್ನತನವೆಂಬುದೆ ಇರಲಿಲ್ಲ. ಮತ್ತೊಂದೆಡೆ ಅವಳನ್ನು ದೇವರೆಂದು ಹೊಗಳಿ ಅವಳ ಮನುಷತ್ವವನ್ನೇ ನಯವಾಗಿ ನಾಶಮಾಡಿದಂತಹ ಸಂದರ್ಭ ಸಹ ಪ್ರಮುಖವಾಗಿತ್ತು.

ಜನರ ಮೌಢ್ಯಗಳನ್ನೇ ತಮ್ಮ ಅನ್ನಕ್ಕೆ ಗದ್ದುಗೆ ಮಾಡಿಕೊಳ್ಳುವ ಹುನ್ನಾರ ವ್ಯವಸ್ಥಿತವಾಗಿ ನಡೆದು ಜನಸಾಮಾನ್ಯರ ಬದುಕು ಹೀನಾಯವಾಗಿರಿಸಿತ್ತು. ಈ ಸಂದರ್ಭದ ಸಾಮಾಜಿಕ ಹಿನ್ನೆಲೆ ಮನುಷ್ಯರನ್ನು ಮನುಷ್ಯರಾಗಿ ನೋಡದ ಅಮಾನುಷ ವರ್ತನೆ ಸ್ಪಷ್ಟವಾಗಿ ಕಂಡು ಬರುತ್ತದೆ.

ಸಾಹಿತ್ಯಿಕ ಹಿನ್ನೆಲೆ : ಶರಣ ಸಾಹಿತ್ಯ ಒಡಮೂಡುವ ಹೊತ್ತಿಗೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಸಾಹಿತ್ಯಿಕ ಭಿತ್ತಿ ನಿರ್ಮಾಣವಾಗಿತ್ತು. ಕ್ರಿ.ಶ. ಐದನೆಯ ಶತಮಾನದ ಶಾಸನದಿಂದ ಆರಂಭಗೊಂಡ ಕನ್ನಡ ನುಡಿ ಮುಂದೆ ಕೃತಿಯೊಂದನ್ನು ನಿರ್ಮಾಣಮಾಡುವ ಮಟ್ಟಿಗೆ ಬೆಳೆದಿತ್ತೆಂಬುದಕ್ಕೆ 'ಕವಿರಾಜ ಮಾರ್ಗ'ವೇ ನಿದರ್ಶನವಾಗಿದೆ.

ಕನ್ನಡ ಸಾಹಿತ್ಯದ ಪ್ರಮುಖ ಧಾರೆ ಜೈನರಿಂದ ಆರಂಭವಾಗಿದೆಂಬ ಅಂಶ ಸರ್ವವಿದಿತವಾದುದು. ಪಂಪ-ರನ್ನ -ಪೊನ್ನ-ಜನ್ನ-ನಾಗಚಂದ್ರರಂತಹ ಖ್ಯಾತ ನಾಮರು ಜೈನಸಾಹಿತ್ಯ ಪರಂಪರೆಯಲ್ಲಿ ಬೆಳೆದು ಬಂದು ಅಮೂಲ್ಯ ಕೃತಿಗಳನ್ನು ನೀಡಿ ಹತ್ತನೆಯ ಶತಕವನ್ನು ಸಾಹಿತ್ಯದ ಸುವರ್ಣ ಯುಗ ಮಾಡಿದರೆಂಬುದನ್ನು ಸಾಹಿತ್ಯ ಚರಿತ್ರಕಾರರು ಹೇಳುತ್ತಲೇ ಬಂದಿದ್ದಾರೆ.

ಆದರೆ ದಿನಗಳೆದಂತೆಲ್ಲ ಸಾಹಿತ್ಯಿಕ ಸತ್ವ ಕರಗಿತು. ಮತ್ತೊಬ್ಬರನ್ನು ಮೆಚ್ಚಿಸುವ ಸಲುವಾಗಿಯೇ ಸಾಹಿತ್ಯ ಸೃಷ್ಟಿಯಾಗ ತೊಡಗಿತು. ತನ್ನ ಅಂತಃಸತ್ವವನ್ನು ಕಳೆದುಕೊಂಡು ಪಂಡಿತ ಮಂಡಳಿ- ರಾಜಮಂಡಳಿಯಲ್ಲಿ ವಿಜೃಂಭಿಸತೊಡಗಿತು. ಜನಸಾಮಾನ್ಯರಿಂದ ದೂರವಾಯಿತು. ಬಿರುದು-ಬಾವಲಿಗಳ ಪರಾಕಾಷ್ಠೆಯಲ್ಲಿ ತನ್ನತನವನ್ನೇ ಮರೆಯಿತು. ರಾಜ - ಪಂಡಿತರನ್ನು ಓಲೈಸುವ ಕಾಲ ಹರಣವಾಗತೊಡಗಿತು. ಸಮಾಜಮುಖಿಯಾಗಿ ನಿಲ್ಲದೇ ವ್ಯಕ್ತಿಮುಖಿಯಾಗಿ ಸಾಹಿತ್ಯ ಸ್ಥಗಿತಗೊಂಡಿತು. ಹೀಗಾಗಿ ಜನಸಾಮಾನ್ಯರು ಸಾಹಿತ್ಯದ ಸ್ಪಂದನೆಗೆ ತಡಕಾಡಿದರು. ಸಮಾಜದದ ಅಗತ್ಯತೆಗಳನ್ನು ಸಾಹಿತ್ಯ ಸಾಧಿಸದೇ ಹೋಯಿತು. ಹೀಗಾಗಿ ಇಲ್ಲೂ ಪ್ರತಿಭಟನೆ ವ್ಯಕ್ತವಾಗಿ ಸಹಜವಾದ ಜನಮುಖಿಯಾದ ಸಾಹಿತ್ಯದ ಅಗತ್ಯತೆಯ ವಾತಾವರಣ ನಿರ್ಮಾಣವಾಯಿತು. ಪ್ರಭುವರ್ಗ-ಪುರೋಹಿತವರ್ಗವನ್ನು ಮೀರಿ ಸಾಮಾನ್ಯವರ್ಗದ ಆಶಯ -ಧೋರಣೆಯುಳ್ಳ ಸಾರ್ವಕಾಲಿಕ ಸಾಹಿತ್ಯವೊಂದರ ಹಂಬಲದ ಪರಿಸರದ ನಿರ್ಮಾಣವಾಯಿತು. ಇಂತಹ ಹಂಬಲವನ್ನು ಮುಂದಿನ ಶರಣ ಸಾಹಿತ್ಯ ಪೂರೈಸಿತೆಂಬುದು ಸರ್ವವಿದಿತವಾದ ಸಂಗತಿಯಾಗಿದೆ.

ಸ್ವರೂಪ: ಶರಣರರ ಚಳುವಳಿ ರೂಪಿತವಾಗುವ ಹೊತ್ತಿಗೆ ಹಿನ್ನೆಲೆ ಸ್ಥಿತಿ- ಗತಿಯು ತೀರಾ ಆಂತಕಕಾರಿಯಾಗಿತ್ತು. ಧಾರ್ಮಿಕತೆಯ ಜಡತೆ ರಾಜಕೀಯದ ಅರಾಜಕತೆ, ಕ್ರೂರತೆ ಸಾಮಾಜಿಕ ಬದುಕಿನ ತಾರತಮ್ಯ , ಸಾಹಿತ್ಯ- ಸಾಂಸ್ಕೃತಿಕ ರಂಗದ ಹಿತಾಸಕ್ತಿಗಳ ಆಶಯದ ಭದ್ರತೆಗಳು ಇವೆಲ್ಲ ಸೇರಿ ಸಮಾಜವನ್ನು ನಿಂತ ನೀರಿನಂತೆ ಮಲೀನ ಗೊಳಿಸಿದ್ದವು.

ಅಂದಿನ ಪಂಚಾಂಗ ವ್ಯವಸ್ಥೆ ಇಡೀ ರಾಜ್ಯಾಂಗದ ಆಡಳಿತ ಸೂತ್ರವನ್ನು ಹಿಡಿದು, ಪಂಚಾಂಗದ ಆಕ್ರಮಣ ರಾಜ್ಯಾಂಗದ ಮೇಲೆ ನಡೆದು ಇಡೀ ಮನುಷ್ಯರ ಬದುಕು ಹೀನಾಯ ಸ್ಥಿತಿಯಾದಾಗ ಪಂಚಾಂಗವನ್ನು ಕಿತ್ತೊಗೆದು ಜನಸಮುದಾಯದ ಮನುಷ್ಯತ್ವವನ್ನೇ ಮೂಲ ದ್ರವ್ಯವಾಗಿರಿಸಿಕೊಂಡು ಮೊದಲ ಬಾರಿಗೆ ಶರಣ ಚಳುವಳಿ ಮೂಡಿ ಬಂದಿತು.

ಬಸವಾದಿ ಶರಣರಿಗಿಂತ ಪೂರ್ವದಲ್ಲಿ ಈ ಚಳುವಳಿ ವೈಯಕ್ತಿಕ ಮಟ್ಟದಲ್ಲಿ ನಡೆದಿತ್ತೆಂಬುದನ್ನು ಅಲ್ಲಗಳೆಯಲಾಗದು . ಶಂಕರ ದಾಸಿಮಯ್ಯ , ಢಕ್ಕೆಯ ಮಾರಯ್ಯ , ಕೊಂಡಗುಳಿ ಕೇಶಿರಾಜ, ಬಾಹೂರ ಬೊಮ್ಮಯ್ಯ , ಜೇಡರ ದಾಸಿಮಯ್ಯ ನಂತವರು ಜನಪರ ನಿಲುವುಗಳ ಮೂಲಕ ಪ್ರಭು - ಪುರೋಹಿತ ಸತ್ತೆಯನ್ನು ಪ್ರತಿಭಟಿಸುವ ಜೊತೆಗೆ ಸಾಮಾಜಿಕ ಬದುಕಿಗೆ ಹೊಸ ಆಯಾಮವನ್ನು ನೀಡುವಲ್ಲಿ ಮೊದಲ ಬಾರಿಗೆ ಯತ್ನಿಸಿದರು. ಇವರ ವೈಯಕ್ತಿಕ ಪ್ರಯತ್ನಗಳು ಮುಂದಿನ ಬಸವಾದಿ ಶರಣರ ಕಾಲಕ್ಕೆ ಬೀಜಗಳಾಗಿ ಕ್ರಾಂತಿಯ ವೃಕ್ಷ ಸೆಟೆದು ನಿಲ್ಲಲು ಕಾರಣೀಭೂತವಾಯಿತು. ಸಾಮೂಹಿಕ ಆಂದೋಲನವೇ ನಿರ್ಮಾಣವಾಯಿತು. ಸಮಾಜದಲ್ಲಿ ಹೊಸ ಗಾಳಿ ಮೂಡುವಂತೆ ಮಾಡಿತು.

ಶರಣ ಚಳುವಳಿಯ ಸ್ವರೂಪ ಬಹು ವ್ಯಾಪಕ ಭಿತ್ತಿಯನ್ನೊಂದಿದೆ. ಚಳುವಳಿಯಲ್ಲಿ ಪಾಲ್ಗೊಂಡಿದ್ದ ಬಹುತೇಕರೂ ಭಕ್ತರು , ಅದರಲ್ಲೂ ಶಿವನಲ್ಲಿ ನಿಷ್ಠೆಯುಳ್ಳವರಾಗಿದ್ದರು. ಇದು ಆರಂಭಿಕ ಹಂತ; ಮುಂದೆ ಚಳುವಳಿ ತನ್ನತನ ಕಂಡುಕೊಂಡಾಗ ವೈಚಾರಿಕ ನೆಲೆಗಳನ್ನು ಕಂಡುಕೊಂಡಿತು. ಅದರ ಪರಿಣಾಮವಾಗಿ ಇಡೀ ಜನಸಮುದಾಯದ ಧ್ವನಿಯಾಗಿ ಶರಣ ಚಳುವಳಿ ಒಡಮೂಡಿ ಬಂದಿತು. ಹಿಂದಿನ ಜಾಡ್ಯಗಳನ್ನೆಲ್ಲ , ಅದರ ಜೊಳ್ಳುತನವನ್ನು ಎತ್ತಿ ತೋರಿಸಿ ವಾಸ್ತವ ಮಾರ್ಗದ ಪರಿಕಲ್ಪನೆ ಮೂಡಿಸಿತು. ಯಾವುದೇ ಜಾತಿ , ಲಿಂಗ , ಉದ್ಯೋಗ, ವರ್ಣಭೇದಗಳನ್ನು ಗಣನೆಗೆ ತಾರದೇ ಅರ್ಹತೆಯೊಂದನ್ನೇ ತಿರುಳಾಗಿಟ್ಟು ಕೊಂಡು ಹೊಸ ವ್ಯವಸ್ಥೆಯೊಂದನ್ನು ಸಾಮಾಜಿಕ ಜೀವನದಲ್ಲಿ ಮೊದಲಬಾರಿಗೆ ಮೂಡಿಸಿತು. ಈ ಸಾಮಾಜಿಕ ಜೀವನದ ಸಂದೇಶಗಳು ಶರಣಸಾಹಿತ್ಯದ ಮೂಲಕ ಅಭಿವ್ಯಕ್ತಿಸಲ್ಪಟ್ಟವು. ಇಡೀ ಭಾರತೀಯ ಸಂದರ್ಭದಲ್ಲಿ ಮೂಡಿ ಬಂದಂತಹ ಭಕ್ತಿ ಚಳುವಳಿ ಪರಂಪರೆ ಇದಾದರೂ ಅವುಗಳಿಗಿಂತ ಭಿನ್ನವಾದುದು, ವಿಶಿಷ್ಟ ಪೂರ್ಣವಾದುದ್ದು ಆಗಿದೆಂಬುದನ್ನು ನಾವು ಅಂದಿನ ಸಂದರ್ಭದ ಹಿನ್ನೆಲೆಯಲ್ಲಿ ಗಮನಿಸಬಹುದಾಗಿದೆ. ಈ ಸಂದರ್ಭದಲ್ಲಿ ಡಾ: ಚಿದಾನಂದ ಮೂರ್ತಿಯವರ ವಿಚಾರಗಳನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ. ' ಭಾರತದ ಉಳಿದ ಭಕ್ತಿ ಚಳುವಳಿಗಳು ಎಲ್ಲಾ ಜಾತಿಗಳು ಸಮಾನವೆಂದು ಹೇಳಿದರೂ ಮೇಲಿನ ಕೆಳಗಿನ ಜಾತಿಗಳ ಪರಸ್ಪರ ವಿವಾಹದ ಬಗ್ಗೆ ಮೌನ ವಹಿಸಿದವು. ಶರಣ ಚಳುವಳಿ ಮಾತ್ರ ಒಂದಲ್ಲ ಹತ್ತು ಹೆಜ್ಜೆ ಮುಂದೆ ಹೋಗಿ'' ವಿಪ್ರಮೊದಲು ಅಂತ್ಯಜ ಕಡೆಯಾಗಿ ಕೊಡುವುದು ಕೊಂಬುದು ಸದಾಚಾರ ಉಳಿದುದೆಲ್ಲ ಅನಾಚಾರ'' ಎಂದು ಸಾರಿದುದಲ್ಲದೆ ಅಂತಹ ಮದುವೆಯೊಂದು ಬ್ರಾಹ್ಮಣ ಮದುವಯ್ಯ ದಲಿತ ಹರಳಯ್ಯರ ಕುಟುಂಬಗಳ ಮಧ್ಯೆ ನಡೆಯಲು ಒಪ್ಪಿಗೆ ನೀಡಿತು. ಭಾರತದ ಎಲ್ಲಾ ಭಕ್ತಿ ಚಳುವಳಿಗಳು ಮನುಷ್ಯರ ಸಮಾನತೆಯನ್ನು ಎತ್ತಿ ಹಿಡಿಯುತ್ತವೆ. ಆಧ್ಯಾತ್ಮಿಕವಾಗಿ ಎಲ್ಲರೂ ಸಮಾನರು ಎಂಬುದನ್ನು ಎಲ್ಲವೂ ಒಪ್ಪಿಕೊಳ್ಳುತ್ತವೆ. ಇದು ತಾತ್ವಿಕ ಮಟ್ಟದ ಸಮಾನತೆ , ಸಾಮಾಜಿಕ ಸಮಾನತೆಯು ಕೇವಲ ತಾತ್ವಿಕವಾದುದಲ್ಲ. ಅದು ಊಟ ವ್ಯವಹಾರಗಳಲ್ಲಿ ಮಾತ್ರವಲ್ಲದೆ , ಮದುವೆ ಸಂಬಂಧಗಳಲ್ಲಿಯೂ ವ್ಯಕ್ತವಾಗಬೇಕು. ಭಾರತೀಯ ಭಕ್ತಿ ಚಳುವಳಿಗಳು ಮನುಷ್ಯರ ಆಧ್ಯಾತ್ಮಿಕ ಸಮಾನತೆಯನ್ನು ಮಾತ್ರ ಪ್ರತಿಪಾದಿಸಿದವು . ಆದರೆ ಸಾಮಾಜಿಕ ಸಮಾನತೆಯ ಬಗ್ಗೆ ಮೌನವಹಿಸಿದವು. ಶರಣ ಚಳುವಳಿಯೊಂದೆ ಆಧ್ಯಾತ್ಮಿಕ ಸಮಾನತೆಗೆ ಬೆಲೆ ಬರುವುದುಸಾಮಾಜಿಕ ಸಮಾನತೆಯಿಂದ ಮಾತ್ರ ಎಂಬುದನ್ನು ಪ್ರತಿಪಾದಿಸಿದ್ದು ಮತ್ತು ಆಚರಣೆಗೆ ತಂದದ್ದು. ಬ್ರಾಹ್ಮಣ ಮತ್ತು ಅಸ್ಪೃಶ್ಯರ ಮಧ್ಯೆ ವಿವಾಹಕ್ಕೆ ಅವಕಾಶಮಾಡಿ ಕೊಟ್ಟದ್ದು ಶರಣ ಚಳುವಳಿಯೊಂದೇ ಎಂಬುದನ್ನು ನೆನೆದಾಗ ಅದರ ವೈಶಿಷ್ಟ್ಯ ಎದ್ದು ಕಾಣುತ್ತದೆ'. ೧

ಶರಣ ಚಳುವಳಿಯು ಬರಿ ನಾಡಿನ ಮೂಲೆಗೆ ಸೀಮಿತವಾಗಲಿಲ್ಲ ಕಲ್ಯಾಣ ಪ್ರಭಾವ ಸುತ್ತೆಲ್ಲ ಹರಡಿತು. ಆ ಪರಿಣಾಮವಾಗಿಯೇ ಕಲ್ಯಾಣ ಸಾಂಸ್ಕೃತಿಕ ಕೇಂದ್ರವಾಯಿತು. ಅನುಭಾವಿಗಳಿಗೆ ಆಶ್ರಯ ತಾಣವಾಯಿತು. ವ್ಯಕ್ತಿಯ ವ್ಯಕ್ತಿತ್ವವನ್ನು ಎತ್ತರಿಸುವ, ಜಡ ಸ್ಥಿತಿಯನ್ನು ಜಂಗಮಗೊಳಿಸುವ , ಸಮಾಜವನ್ನು ಚೇತೋಹಾರಿಯಾಗಿರಿಸುವ ಮಹಾ ಚಳುವಳಿಯ ಕೇಂದ್ರವಾಗಿ ಅಂದಿನ ಕಲ್ಯಾಣ ವಿಜೃಂಭಿಸಿತು. ವೈದಿಕಶಾಹಿಯ ಸಂಪ್ರದಾಯ ಬೇರುಗಳ ಬುಡುವನ್ನೇ ಅಲ್ಲಾಡಿಸಿ ಜನಸಾಮಾನ್ಯರು ಆಲೋಚನೆ ಮಾಡುವಂತೆ ಪ್ರೇರೆಪಿಸಿತು.

'ಬ್ರಾಹ್ಮಣೋ ಭೂಸೂರಾಃ' ಎಂದು ಕರೆದುಕೊಂಡು 'ರಾಜಾ ಪ್ರತ್ಯಕ್ಷ ದೇವತಾ' ಎಂದು ಹೊಗಳಿ ಸಾಮಾನ್ಯರನ್ನು ಅವರ ಬದುಕನ್ನು ಕಡೆಗಣಿಸಿ ಅದರಲ್ಲೂ ಶೂದ್ರ , ಅಂತ್ಯಜ, ಸ್ತ್ರೀಯರನ್ನು ತಮ್ಮ ತೀಟೆಗಳಿಗೆ ಬಳಸಿಕೊಳ್ಳುವ ಅಮಾನವೀಯ ವಾತಾವರಣ ಸೃಷ್ಟಿದನ್ನು ಕಂಡು ಕೊಂಡ ಶರಣರು ಸಿಡಿದೆದ್ದರು. ಈ ವ್ಯವಸ್ಥೆಯ ಪೋಷಕರಾದ 'ಪುರೋಹಿತ - ಪೂಜಾರಿ - ಶಾಸ್ತ್ರಿಗಳ' ಅಸ್ತಿತ್ವವನ್ನೇ ಪ್ರಶ್ನಿಸಿ ಅವರ ಅವಶ್ಯಕತೆ ಇಲ್ಲವೆಂಬುದನ್ನು ವಾಸ್ತವವಾಗಿ ತೋರಿಸಿಕೊಟ್ಟು ಸಾಮಾನ್ಯರ ಬದುಕಿನಲ್ಲಿ ಹೊಸ ಚೇತನವೊಂದನ್ನು ಚಿಮ್ಮಿಸಿದರು.

ನೂರೆಂಟು ದೇವರುಗಳ ಮೂಲಕ ಬದುಕಿನ ಶೋಷಣೆ ತಪ್ಪಿಸಿ ಏಕದೇವೋಪಾಸನೆ ಪರಿಕಲ್ಪನೆ ನೀಡಿ ಮಧ್ಯಸ್ಥಿಕೆ ಇಲ್ಲದ ಸರಳ ಪೂಜೆಗೆ ಅವಕಾಶ ಮಾಡಿ ಕೊಟ್ಟರು ' ಕೊಲ್ಲುವವನೇ ಮಾದಿಗ ಹೊಲಸು ತಿಂಬುವವನೇ ಹೊಲೆಯ' ಎಂದು ವ್ಯಕ್ತಿಯ ಬದುಕಿನ ಆಚರಣೆಯ ಹಿನ್ನೆಲೆಯಲ್ಲಿ ಗುರುತಿಸಿದರು. ಜಾತಿ ವ್ಯವಸ್ಥೆಯನ್ನು ವಿಶ್ಲೇಷಿಸಿ ಅಸಮಾನತೆಯನ್ನು ತೊಡೆದು ಹಾಕಿದರು.

---

೧ : ಡಾ : ಎಂ. ಚಿದಾನಂದ ಮೂರ್ತಿ - ವೀ. ಭಾ. ಸಂ. ಪುಟ ೨೮೯-೯೦

ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ

ಜಲಬಿಂದುವಿನ ವ್ಯವಹಾರ ಒಂದೇ

ಆಶೆಯಾಮಿಷ ರೋಷ ಹರುಷ ವಿಷಯಾದಿಗಳೆಲ್ಲ ಒಂದೇ

ಏನನೋದಿ ಏನ ಕೇಳಿ ಏನು ಫಲ!

ಕುಲಜನೆಂಬುವುದಕ್ಕೆ ಆವುದು ದೃಷ್ಟ?

'ಸಪ್ತ ಧಾತು ಸಮಂ ಪಿಂಡಂ ಸಮಯೋನಿ ಸಮುದ್ಭವಂ

ಆತ್ಮ ಜೀವ ಸಮಾಯುಕ್ತಂ ವರ್ಣಾನಾಮಂ ಕಿಂ ಪ್ರಯೋಜನಂ'

ಎಂದುದಾಗಿ ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ

ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ

ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ?

ಇದು ಕಾರಣ ಕೂಡಲ ಸಂಗಮ ದೇವಾ

ಲಿಂಗಸ್ಥಲವನರಿದವನೇ ಕುಲಜನು೧

ಬಸವಣ್ಣನವರ ಈ ವಚನ ಗಮನಿಸಿದಾಗ ಹುಟ್ಟಿನ ಕ್ರಿಯೆಯ ಸಹಜ ಸ್ಥಿತಿಯನ್ನು ವಿವರಿಸಿ ಶ್ರೇಷ್ಠ ಕುಲಜನೆನ್ನಲು ಆಧಾರವೇನೆಂದು ಪ್ರಶ್ನಿಸುವ ಜೊತೆಯಲ್ಲಿಯೇ ವೃತ್ತಿಗನುಸಾರವಾಗಿ ಜಾತಿ ನಿರ್ಮಾಣವಾಗಿದೆ ಎಂದು ತಿಳಿಸುತ್ತಾರೆ. ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ? ಎಂದು ಪ್ರಶ್ನಿಸಿ ಅವರ ಮೌಢ್ಯಕ್ಕೆ ಚಾಟಿಯೇಟು ನೀಡುತ್ತಾರೆ. ಇದು ಕೇವಲ ಬಸವಣ್ಣನವರೊಬ್ಬರ ಮಾತಾಗಿರಲಿಲ್ಲ. ಶರಣ ಚಳುವಳಿಯ ಪ್ರಮುಖ ಧೋರಣೆಯಾಗಿತ್ತು. ಸಮಾನತೆಯೇ ಶರಣ ಚಳುವಳಿ ಆಶಯವಾಗಿತ್ತು.

ಸ್ತ್ರೀಯರ ಬಗ್ಗೆ ಅತ್ಯಂತ ಗೌರವಾನ್ವಿತ ನಿಲುವು ತಳೆದುದ್ದು ಶರಣ ಚಳುವಳಿಯಾಗಿದೆ. ವೈದಿಕ ಸಂಪ್ರದಾಯ ಹೆಣ್ಣನ್ನು ಮಾಯೆಯೆಂದರೆ ಶರಣ ಚಳುವಳಿ ಹೆಣ್ಣನ್ನು 'ಸಾಕ್ಷಾತ್ ಕಪಿಲ ಸಿದ್ಧ ಮಲ್ಲಿಕಾರ್ಜುನ' ಎಂದಿತು. ಅಂತೆಯೇ ಜೇಡರ ದಾಸಿಮಯ್ಯನವರು

'ಮೊಲೆ ಮುಡಿ ಬಂದರೆ ಹೆಣ್ಣೆಂಬರು

ಗಡ್ಡ ಮೀಸೆ ಬಂದರೆ ಗಂಡೆಂಬರು

ನಡುವೆ ಸುಳಿವಾತ್ಮನು

ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ ರಾಮನಾಥ' ೨

ಎಂದು ಹೇಳಿದರು. ಆಯ್ದಕ್ಕಿ ಲಕ್ಕಮ್ಮರು ಗಂಡು ಹೆಣ್ಣುಗಳ ಭೇದದ ಬಗ್ಗೆ ಸ್ಪಷ್ಟವಾಗಿ ಹೇಳುತ್ತಾರೆ.

' ಕೂಟಕ್ಕೆ ಸತಿ ಪತಿಎಂಬ ನಾಮವಲ್ಲದೆ, ಅರಿವಿಂಗೆ ಬೆರೊಂದೊಡಲುಂಟೆ'೩

ಪ್ರತಿಯೊಬ್ಬ ಶರಣರು ಗಂಡು ಹೆಣ್ಣುಗಳ ಸಮಾನತೆಯನ್ನು ಸ್ಪಷ್ಟವಾಗಿ ಎತ್ತಿ ತೋರಿಸಿದ್ದಾರೆ. ಸಾಧನೆಯ ಮಾರ್ಗದಲ್ಲಿ ಇರ್ವರೂ ಸಮಾರೆಂಬುದನ್ನು ವಾಸ್ತವ ಪಾತಳಿಯಲ್ಲಿ ತೋರಿಸಿಕೊಟ್ಟರು.

ದೇವಸ್ಥಾನಗಳ ಪಾತ್ರ ಶರಣರ ಕಾಲದಲ್ಲಿ ಬಹು ಮುಖ್ಯವಾಗಿತ್ತು. ಪುರೋಹಿತ ಶಾಹಿಯ ಶೋಷಣೆಯ ಸಂಕೇತವಾಗಿದ್ದ ದೇವಾಲಯಗಳ ಸ್ಥಾವರತೆಯನ್ನು ಶರಣ ಚಳುವಳಿ ತಿರಸ್ಕರಿಸಿತು. ಸ್ಥಾವರ ಪೂಜೆಯನ್ನು ಮೊದಲ ಬಾರಿಗೆ ಅಲ್ಲಗಳೆದು ಹೊಸ ಆಲೋಚನೆಯೊಂದನ್ನು ಜನರಲ್ಲಿ ಮೂಡಿಸಿತು. ಪೂಜಿಸುವಲ್ಲಿ ದಲ್ಲಾಳಿಕೆ ಸರಿಯಲ್ಲ. ಹಸಿವಾದರೆ ಹಸಿವಾದವರು ಊಟ ಮಾಡಬೇಕ ಹೊರತು ಮತ್ತೊಬ್ಬರು ಅಲ್ಲ ಯೆಂಬುದನ್ನು ಶರಣ ಚಳುವಳಿ ಸ್ಪಷ್ಟವಾಗಿ ಹೇಳಿತು.

---

೧ : ಸಂ: ಡಾ : ಎಂ.ಎಂ.ಕಲಬುರ್ಗಿ-ಸ.ವ.ಸಂ.:೧ವಚನ ೫೯೦

೨ : ಸಂ : ಡಾ: ಎಸ್.ವಿದ್ಯಾಶಂಕರ-ಸ.ವ.ಸಂ.-೭ ವಚನ ೮೫೩

೩ : ಸಂ: ಡಾ. ವೀರಣ್ಣ ರಾಜೂರು - ಸ.ವ.ಸಂ.-೫ ವಚನ ೬೨೭

ಬಸವಣ್ಣನವರಂತೂ ಈ ಕುರಿತು ಕಠೋರವಾಗಿಯೇ ನುಡಿಯುತ್ತಾರೆ.

'ತನ್ನಾಶ್ರಯದ ರತಿ ಸುಖವನು ತಾನುಂಬ

ಊಟವನು ಬೇರೆ ಮತ್ತೊಬ್ಬರ ಕೈಲಿ ಮಾಡಿಸಬಹುದೆ?

ತನ್ನ ಲಿಂಗಕ್ಕೆ ಮಾಡುವ ನಿತ್ಯ ನಿಯಮ ತಾ ಮಾಡಬೇಕಲ್ಲ

ದೆ ಬೇರೆ ಮತ್ತೊಬ್ಬರ ಕೈಲಿ ಮಾಡಿಸಬಹುದೇ?' ೧

ಒಟ್ಟಾರೆಯಾಗಿ ಶರಣ ಚಳುವಳಿ ಹಿಂದಿನ ಸಾಮಾಜಿಕ ಜಾಡ್ಯವನ್ನು ಕಿತ್ತೊಗೆದು ನವ ಸಮಾಜವೊಂದರ ಆದರ್ಶ 'ಕಲ್ಯಾಣ ರಾಜ್ಯ' ಕಟ್ಟಬೇಕೆಂಬ ಮಹೋನ್ನತಿಯನ್ನು ಹೊಂದಿತ್ತು. ಇಂತಹ ಮಹೋನ್ನತಿಯಿಂದಾಗಿಯೇ ಶರಣ ಚಳುವಳಿ ಎಲ್ಲಾ ಕ್ಷೇತ್ರಗಳಲ್ಲೂ ತನ್ನ ಸ್ಪಷ್ಟ ನಿಲುವುಗಳನ್ನು ಎತ್ತಿ ತೋರಿಸಿತು. 'ಕಾಯಕ' ದ ಪರಿಕಲ್ಪನೆ ನೀಡಿ ಶರಣ ಚಳುವಳಿ ಮಾನವನ ಮೂಲಭೂತ ಅಸ್ತಿತ್ವಕ್ಕೆ ಆಧಾರವನ್ನೊದಗಿಸಿತು. ಶರಣ ಚಳುವಳಿ ಕೇವಲ ಸಾಹಿತ್ಯಿಕ-ರಾಜಕೀಯ-ಸಾಮಾಜಿಕ-ಧಾರ್ಮಿಕತೆಯ ತೆಳುನೋಟಗಳಿಗೆ ತನ್ನನ್ನು ತೊಡಗಿಸಿಕೊಳ್ಳದೇ ಇಡೀ ಮಾನವ ಬದುಕನ್ನು ಎತ್ತರಿಸುವ ಕಾಳಜಿಪೂರ್ವಕ ವಾಸ್ತವ ಪ್ರಜ್ಞೆಯ ತಳಹದಿಯಲ್ಲಿ ತನ್ನ ಹೋರಾಟದ ಸಜ್ಜಿಕೆಯನ್ನು ರೂಪಿಸಿಕೊಂಡಿತ್ತು. ಆತ್ಮ ವಿಶ್ವಾಸ ಕಳೆದುಕೊಂಡವರಿಗೆ ಆತ್ಮ ವಿಶ್ವಾಸ ಮೂಡಿಸಿತು. ಜನಪರ ನಿಲುಗಳನ್ನು ಹೊಂದಿದ್ದರಿಂದಲೇ ಶರಣ ಚಳುವಳಿ ಬಹು ಜನಪ್ರಿಯವಾಗಿ ಎಲ್ಲರೂ, ಎಲ್ಲಾ ಕಾಲಕ್ಕೂ ಒಪ್ಪಿಕೊಳ್ಳುವ, ಅಪ್ಪಿಕೊಳ್ಳುವ, ಸಾರ್ವತ್ರಿಕ, ಸಾರ್ವಕಾಲೀಕ ಆಂದೋಲನ ವಾಯಿತು. ಶರಣ ಚಳುವಳಿಯ ಚಿಂತನೆ, ಪುನರ್ ಮೌಲ್ಯ ಮಾಪನ ಇಂದಿಗೂ ಅಗತ್ಯವೆನಿಸುವ ಮಟ್ಟಿಗೆ ಬೆಳೆದು ಬಂದಿದೆ. ಶರಣ ಚಳುವಳಿ ಜಗತ್ತಿನ ಇತರ ಚಳುವಳಿಗಳಂತೆ ಬರೀ ವಿಚಾರ ಪ್ರಧಾನ ಚಳುವಳಿಯಾಗದೇ ಆಚಾರ ಪ್ರಧಾನ ಚಳುವಳಿಯಾಯಿತು. ವಿಚಾರ-ಆಚಾರಗಳ ಅದ್ಭುತ ಸಾಧನೆಯ ಪ್ರತೀಕವಾಗಿ ಮೊದಲ ಬಾರಿಗೆ ವ್ಯಕ್ತಿಯ ಬದುಕಿನಲ್ಲಿ ಮೂಡಿದ ಚಳುವಳಿ ಎಂದರೆ ಅತಿಶಯೋಕ್ತಿಯೆನ್ನಲ್ಲ. 'ಆಚಾರ ಪ್ರಧಾನ ಚಳುವಳಿ'ಯ ಹಂಬಲವನ್ನು ಕಂಡುಕೊಂಡಿದ್ದರಿಂದಲೇ ಶರಣರು 'ಕಾಯಕ-ದಾಸೋಹ-ಜಂಗಮ' ವ್ಯವಸ್ಥೆಗಳ ವಿನೂತನ ಪರಿಕಲ್ಪನೆಗಳನ್ನು ಒಡಮೂಡಿಸಿ ಚಳುವಳಿಯನ್ನು ಜೀವಂತಿಕೆ ಮಾಡಲು ಯತ್ನಿಸಿದ್ದರು. ಆದರೆ ಈ ಕಾಯಕದ ಪರಿಕಲ್ಪನೆ ಧಾರ್ಮಿಕತೆಗೆ ತಳಕು ಹಾಕಿಕೊಂಡ ಕಾರಣದಿಂದಲೇ ಆನಂತರದಲ್ಲಿ ಅದು ಮತ್ತೇ ಜಾತಿಯ ಪೊರೆ ಪಡೆದುಕೊಂಡಿತೆನಿಸುತ್ತದೆ. ಏನೇ ಆಗಲಿ ಶರಣ ಚಳುವಳಿ ಕನ್ನಡ ನಾಡಿನ ಅಷ್ಟೇ ಏಕೆ ಭಾರತೀಯ ಸಾಮಾಜಿಕ ಚರಿತ್ರೆಯಲ್ಲಿಯೇ ಅದ್ವಿತೀಯವಾದುದಾಗಿದೆ.

ದೇಶದಲ್ಲಿ ಅರ್ಥ ಪೂರ್ಣವಾಗಿ ನಡೆದ ಮೊದಲ ಸಾಮಾಜಿಕ ಚಳುವಳಿ ಇದಾಗಿದೆ. ಜಾತಿ-ಮತ-ಲಿಂಗ ಭೇದವಿಲ್ಲದೇ ಎಲ್ಲರೂ ಒಂದಾಗಿ ಸಾಹಿತ್ಯ ರಚನೆಗೆ ಕನ್ನಡ ಸಂದರ್ಭದಲ್ಲಿಯೇ ನಿತ್ಯ ನೂತನವಾದುದ್ದಾಗಿದೆ. ವೇಶ್ಯೆಯೂ ಸಹ ತನ್ನ ವೃತ್ತಿಯನ್ನು ತೊರೆದು ಸಾಹಿತ್ಯ ರಚನೆಯಂತಹ ಕಾರ್ಯಕ್ಕೆ ತನ್ನನ್ನು ಅಣಿಗೊಳಿಸಿಕೊಂಡದ್ದು ಆಕಾಲದ ಜಾಗತಿಕ ಮಟ್ಟದಲ್ಲಿಯೇ ಅಪೂರ್ವವೆಂದರೆ ಅತಿಶಯೋಕ್ತಿಯೆನಲ್ಲವೆನ್ನಿಸುತ್ತದೆ. ವ್ಯಕ್ತಿಯ ಅರ್ಹತೆಯೊಂದನ್ನೇ ಆಧರಿಸಿ ನಡೆದ ಮೊದಲ ಚಳುವಳಿ ಇದಾಗಿದೆ. ಭಾರತೀಯ ಸಂದರ್ಭದಲ್ಲಿಯೇ ಧಾರ್ಮಿಕತೆಯ ವಾಸ್ತವ ಚರ್ಚೆಯ ಸಾಮೂಹಿಕತ್ವ ಮೊದಲ ಬಾರಿಗೆ ಕಂಡು ಬರುವುದು, ಈ ಶರಣ ಚಳುವಳಿಯ ಸಂದರ್ಭದಲ್ಲಿಯೇ ಎಂಬುದಕ್ಕೆ ಅನುಭವ ಮಂಟಪವೇ ನಿದರ್ಶನವಾಗಿದೆ.

ಮನುಷ್ಯನನ್ನು ಮನುಷ್ಯನಾಗಿ ಕಂಡು ಕೊಂಡು ಮನುಷ್ಯತ್ವದ ಮೂಲಕ ಅವನಲ್ಲಿ ದೇವತ್ವದ ಕಲ್ಪನೆ ಮೂಡಿಸಿದ್ದು ಶರಣ ಚಳುವಳಿ. ವ್ಯಕ್ತಿಯ ಬದುಕಿಗೆ ಧರ್ಮವೊಂದೆ ಸಾಕೆಂಬ ಒಣ ಆದರ್ಶದ ಬೆನ್ನು ಹತ್ತದೇ ವ್ಯಕ್ತಿಯ ಜೀವನದ ಸರ್ವಕ್ಷೇತ್ರಗಳಲ್ಲೂ ಅದರ ಧೋರಣೆ ನಿರ್ಧರಿಸಿ ಆ ದಿಸೆಯಲ್ಲಿ ಕಾರ್ಯಗತಗೊಳಿಸಿ ವ್ಯಕ್ತಿಯನ್ನು ಶಕ್ತಿಯನ್ನಾಗಿ ಮಾಡಿದ ಮೊದಲ ಚಳುವಳಿ ಶರಣ ಚಳುವಳಿಯಾಗಿದೆ. ವಿಚಾರ ಪ್ರಧಾನ ವಾಗದೇ ಆಚಾರ ಪ್ರಧಾನವಾಗಿ ಮೂಡಿದ ಹಿರಿ ಹಂಬಲದ ಹೆದ್ದಾರಿಯೇ ಶರಣ ಚಳುವಳಿ ಎನ್ನಲು ಅಡ್ಡಿಯಿಲ್ಲವಾಗಿದೆ.

ಶರಣ ಚಳುವಳಿಯ ಸ್ವರೂಪ ದಿನಗಳೆದಂತೆ ಬದಲಾಗ ತೊಡಗಿತು. ಮೊದಲಿನ ಕಾವು ಉಳಿಯಲ್ಲಿಲ್ಲ. ಇದಕ್ಕೆ ಕಾರಣಗಳು ಸಹ ಕಂಡು ಬರುತ್ತವೆ. ಶರಣರು ತಾಳಿದ ದಿಟ್ಟನಿಲುವಿನಿಂದಾಗಿ ಉಂಟಾದ ಕ್ರಾಂತಿ, ಆನಂತರದ ಸಂಘರ್ಷ, ರಾಜಕೀಯ ವಿಪ್ಲವ, ಹೊಂದಾಣಿಕೆಯ ಅನಿವಾರ್ಯತೆಗಳು, ಸಾಮರಸ್ಯದ ತೆಳು ಸ್ವರೂಪ, ಪಟ್ಟಭದ್ರರ ಪುನರುತ್ಥಾನ, ಬಾಹ್ಯಾಡಂಬರದ ಬದುಕು-ಇವೆಲ್ಲವುಗಳು ಶರಣ ಚಳುವಳಿಯ ಮೂಲ ಸ್ವರೂಪವನ್ನೇ ಬದಲಿಸಿ ಬಿಟ್ಟವು.

೧: ಸಂ: ಡಾ. ಎಂ. ಎಂ. ಕಲಬುರ್ಗಿ - ಸ.ವ.ಸಂ.೧ ವಚನ ೧೮೨

ಶರಣ ಚಳುವಳಿ ಯಾವುದನ್ನು ಪ್ರಬಲವಾಗಿ ಪ್ರತಿಭಟಿಸಿ ದೂರೀಕರಿಸಿತ್ತೋ, ಕಾಲಾನಂತರದಲ್ಲಿ ಬಂದ ಶರಣರ ಪರಂಪರೆಯ ಅಭಿಮಾನಿಗಳಲ್ಲಿ ಉಂಟಾದ ಬದಲಾವಣೆಗಳು ಮುಂಚಿನ ವೈದಿಕಶಾಹಿಯನ್ನೇ ಬೇರೊಂದು ರೀತಿಯಲ್ಲಿ ಅಪ್ಪಿಕೊಳ್ಳುವಂತೆ ಮಾಡಿದವು. ಮತ್ತೇ ಜಂಗಮತ್ವ ಅಳಿದು ಸ್ಥಾವರತ್ವದ ಸ್ಥಿರತೆಯ ಹುಸಿ ತತ್ವಗಳು ನೆಲೆಕಾಣತೊಡಗಿದವು. ಮೂರ್ತಿ ಪೂಜೆ-ಬಹುದೇವೋಪಾಸನೆ ಸರ್ವಸಾಮಾನ್ಯವಾಯಿತು. ದೇವಸ್ಥಾನವನ್ನು ಧಿಕ್ಕರಿಸಿದ್ದ ಶರಣ ಚಳುವಳಿ ಕಾಲಾನಂತರದಲ್ಲಿ ಬಂದವರಿಂದ ಮತ್ತೇ ದೇವಸ್ಥಾನಕ್ಕೆ ಅಣಿಯಾಯಿತು. ಕಲ್ಯಾಣ ಶರಣ ಚಳುವಳಿಯ ಜಂಗಮ ಪರಿಕಲ್ಪನೆ ಭಿನ್ನವಾಗಿ ಜಂಗಮ ವೆಂಬುದು ಜಾತಿಯಾಗಿ ಅದು ಶರಣ ಪರಂಪರೆಯ ಪುರೋಹಿತಶಾಹಿಯಾಯಿತು. ಮೊದಲಿನ ತೀವ್ರತೆಯನ್ನು ಕಳೆದಕೊಂಡ ಈಶರಣ ಚಳುವಳಿ ಸ್ವರೂಪದ ಬಗ್ಗೆ ಡಾ: ಚಿದಾನಂದ ಮೂರ್ತಿ 'ಕಲ್ಯಾಣದ ಕ್ಷೋಭೆಯ ನಂತರ ಶರಣ ಚಳುವಳಿ ತನ್ನ ತೀವ್ರತೆಯನ್ನು ಕಳೆದುಕೊಂಡಿತು. ಆದರ ಪರಿಣಾಮವಾಗಿ ಮುಂದೆ ಮತ್ತೊಬ್ಬ ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ ರಿರಲಿ, ಮುಕ್ತಾಯಕ್ಕ -ಮಹಾದೇವಿಯಕ್ಕಗಳು ವೀರಶೈವದ ಚರಿತ್ರೆಯಲ್ಲಿ ಕಾಣಸಿಗರು, ಮುಂದೆ ಬಂದ ಹರಿಹರ, ರಾಘವಾಂಕ, ನಿಜಗುಣ ಶಿವಯೋಗಿ, ಮುರಿಗೆ ಗುರುಸಿದ್ಧ ಇವರೇ ಮೊದಲಾದವರು ದೇವಾಲಯ ಶಿವ ಲಿಂಗಗಳ ಆರಾಧಕರಾಗಿ ಅಂತೆಯೇ ಇಷ್ಟ ಲಿಂಗ ನಿಷ್ಟರಾಗಿ ಬದುಕಿದರು'.೧

ಈ ರೀತಿ ಅಭಿಪ್ರಾಯ ಪಟ್ಟಿದ್ದು ಸಮರ್ಪಕವಾಗಿದೆ. ಹಾಗಾಗಿ ಶರಣ ಪರಿಕಲ್ಪನೆಯ ಇಷ್ಟಲಿಂಗ ಮುಂದೆ ಜಾತಿಯ ಕುರುಹುಆಗಿ ಪರಿಣಮಿಸಿತು. ಮೊದಲಿನ ವಿಚಾರಗಳೆಲ್ಲ ತಲೆಕೆಳಗಾದವು. ಆಚಾರ ವಿಚಾರಗಳ ಮಧ್ಯೆ ಸಾಮರಸ್ಯ ವಿಲ್ಲದಾಯಿತು. ಶರಣರನ್ನು ಸಾಮಾನ್ಯರಾಗಿ ಕಾಣದೇ ಅಸಾಮಾನ್ಯರಾಗಿ ಕಾಣುವ ಪರಿಕಲ್ಪನೆ ಬೆಳೆದು ವಿವಿಧ ಕತೆಗಳು ಕಪೋಲ ಕಲ್ಪಿತವಾಗಿ ಹುಟ್ಟಿಕೊಂಡವು. ಒಬ್ಬೊಬ್ಬ ಶರಣರನ್ನು ಆಧರಿಸಿ ಒಂದೊಂದು ಮಠ-ಪೀಠಗಳು ಹುಟ್ಟಿಕೊಂಡು ಶರಣರ ಸಾಮೂಹಿಕತ್ವ ತೊಲಗಿ ಜಾತಿಯತ್ವ ಮತ್ತೇ ವಿಜೃಂಭಿಸತೊಡಗಿತು. ಲಿಂಗಾಯತ ವೆಂಬುದು ಸಂಕುಚಿತವಾಯಿತು. ಶರಣರೆಂಬುವವರು ಜಾತಿ-ಜನಾಂಗಗಳಿಗೆ ಸೀಮಿತವಾಗ ತೊಡಗಿದರು. ಶರಣರ ಕಾಲದಲ್ಲಿ ಶ್ರಮದೊಂದಿಗೆ ಸಾಹಿತ್ಯ ಜೊತೆಯಾಗಿ ಹುಟ್ಟಿಕೊಂಡು ಬಂದರೆ ನಂತರದ ಅವಧಿಯಲ್ಲಿ ಮತ್ತೇ ಶರಣ ತತ್ವ ಸಿದ್ಧಾಂತಗಳ ವ್ಯಾಪ್ತಿಯಲ್ಲಿ ನಲುಗಿ ಆ ಸಿದ್ಧಾಂತದ ಸಮರ್ಥನೆಗಾಗಿ ಸಾಹಿತ್ಯ ರಚನೆಯಾಯಿತು. ಗುರುಮನೆ-ಸ್ವಾಮಿ ಸಾನಿಧ್ಯದಲ್ಲಿ ಸಾಹಿತ್ಯ ಬೆಳಯತೊಡಗಿ ಮತ್ತೇ ಸಾಮಾನ್ಯರಿಂದ ದೂರವಾಗತೊಡಗಿತು.

ಶರಣ ಚಳುವಳಿಯ ಮೊದಲಿನ ಸ್ವರೂಪದ ಅಗತ್ಯತೆ ಇಂದಿನ ದಿನ ಅನಿವಾರ್ಯವಾಗಿ ಬೇಕಾಗಿದೆ. ಆ ನಿಟ್ಟಿನಲ್ಲಿ ಅಲ್ಲಲ್ಲಿ ಮಠ-ಪೀಠಗಳ ಮೂಲಕ ಈ ಕಾರ್ಯ ನಡೆಯುತ್ತಿದೆ. ಆದರೆ ಇಷ್ಟು ಸಾಲದು ಶರಣ ಪರಂಪರೆ ಮಠಗಳ ಆವರಣದಲ್ಲಿಯೇ ಅಡಗಿಕೊಳ್ಳದೇ ಜನ ಸಮುದಾಯದತ್ತ ಬರಬೇಕು.ಶರಣರ ಆಂದೋಲನ ಸ್ವರೂಪವನ್ನು ಅರಿತು ಮತ್ತೇ ಸಾಮುಹಿಕ ಕಾರ್ಯಯೋಜನೆಯ ಅಗತ್ಯವಿದೆ. ಅದರ ಬದಲಾಗಿ ಮಠಗಳ ಮಧ್ಯೆಯೇ ಪ್ರತಿಷ್ಠೆಯ ಪೈಪೋಟಿ ಬೆಳೆಯುತ್ತಿರುವುದು ಅತ್ಯಂತ ಶೋಚನೀಯ ಸಂಗತಿಯಾಗಿದೆ. ಅಂತೆಯೇ ಶರಣ ತತ್ವಗಳನ್ನೇ ಬಂಡವಾಳ ಮಾಡಿಕೊಂಡು ಅದನ್ನೇ ಅಧಿಕಾರದ ಗದ್ದುಗೆಯಾಗಿ ನಿರ್ಮಿಸಿಕೊಳ್ಳುವ ಮನೋಧರ್ಮ ಮೊದಲಾಗಬೇಕಾಗಿದೆ.

ಅವಕಾಶವಾದಿಗಳಾಗದೇ ಶರಣ ಚಳುವಳಿಯ ಸ್ವರೂಪದ ವಾಸ್ತವಿಕತೆಯನ್ನು ಅರಿತು ಆ ದಿಸೆಯಲ್ಲಿ ಕಾರ್ಯೋನ್ಮುಖರಾದರೇ ಮತ್ತೇ ಶರಣ ಚಳುವಳಿಯ ಶ್ರಮಸಾರ್ಥಕ್ಯ ಪಡೆಯಲು ಸಾಧ್ಯವಿದೆ. ಶರಣ ಚಳುವಳಿ ಎಲ್ಲಕಾಲಕ್ಕೂ ಅಪ್ಯಾಯ ಮಾನವಾಗಲು ಸಾಧ್ಯವಿದೆ. ಜೀವಂತಿಕೆಯಾಗಿ ಶರಣ ಚಳುವಳಿ ಉಳಿಯಬೇಕಾದರೆ ಹಿಂದಿನ ತತ್ವಗಳ ಆಶಯ-ಧೋರಣೆಗಳು ಆಚಾರ- ವಿಚಾರಗಳ ಸಮನ್ವಯತೆಯಿಂದ ಕೂಡಿದಾಗ ಮಾತ್ರ ಸಾಧ್ಯವಿದೆ.

೨ : ೫ ಶರಣ ಸಾಹಿತ್ಯದ ಸ್ವರೂಪ

ಜನವಿರೋಧಿಯಾದ ವೈದಿಕ ಸಂಸ್ಕೃತಿಯ ನಿಯಮಗಳನ್ನು ಮೀರಿ ಜೀವನ ಪರವಾದ ಮಾನವೀಯತೆಗೆ ಒತ್ತು ಕೊಡುವ ಜನಪರವಾದ ಒಂದು ಸಾಂಸ್ಕೃತಿಕ ಆಂದೋಲನದ ಪ್ರತಿರೂಪವಾಗಿ ಶರಣ ಸಾಹಿತ್ಯ ಮೈದೋರಿ ಬಂದಿತು.

ಶರಣ ಸಾಹಿತ್ಯ ವೆಂದರೆ ಕೆಲವ ವಚನಗಳಲ್ಲ ಎಂಬ ಮಾತನ್ನು ನಾವು ಲಕ್ಷ್ಯದಲ್ಲಿಡಬೇಕಾದದ್ದು ಅವಶ್ಯಕವಾಗಿದೆ. ಶರಣ ಸಾಹಿತ್ಯವೆಂದರೆ ವಚನ ಪ್ರಕಾರದಿಂದ ಹಿಡಿದು ಆಧುನಿಕ ಪರಂಪರೆಯವರೆಗೂ ಸಾಗಿ ಬಂದ ಎಲ್ಲಾ ಪ್ರಕಾರಗಳನ್ನು ಶರಣ ಸಾಹಿತ್ಯ ಒಳಗೊಳ್ಳುತ್ತದೆ. ಅಂದರೆ ಕಾವ್ಯ, ಪುರಾಣಾತ್ಮಕ ಕೃತಿ, ಸೈದ್ಧಾಂತಿಕ ಕೃತಿ, ಹಾಡಿನ ಪರಂಪರೆ, ವಿಮರ್ಶೆ, ಸೃಜನ, ಸಂಶೋಧನೆ, ಸಂಪಾದನೆ ಇತ್ಯಾದಿಗಳೆಲ್ಲ ವೆಂಬುದನ್ನು ಗಮನದಲ್ಲಿರಿಸಿಕೊಳ್ಳಬೇಕು.

ಅದಕ್ಕಾಗಿಯೇ ಡಾ: ಚಿದಾನಂದ ಮೂರ್ತಿಗಳು ಹೇಳುವ 'ಶರಣ ಸಾಹಿತ್ಯ' ಬಹು ಒಳ್ಳೆಯ ಮಾತು ; ಆ ಮಾತು ವಚನಗಳನ್ನಂತೂ ಸರಿಯೇ. ಹರಿಹರ, ಭೀಮ ಕವಿ, ಚಾಮರಸರಂತಹ ಕವಿಗಳ ಕೃತಿಗಳನ್ನು ಒಳಗೊಳ್ಳುತ್ತದೆಯೆಂಬುದನ್ನು ಹೇಳಬೇಕಾಗಿಲ್ಲ.೨ಎಂಬ ಮಾತು ಬಹು ಸೂಕ್ತವಾಗಿದೆ.

೧: ಡಾ: ಎಂ.ಚಿದಾನಂದ ಮೂರ್ತಿ-ವೀ.ಭಾ.ಸಂ.

೨: ಅದೇ: ಪುಟ ೩೧೩

ಶರಣ ಸಾಹಿತ್ಯದ ಸ್ವರೂಪ ಕಾಲಕಾಲಕ್ಕೆ ಭಿನ್ನವಾಗುತ್ತ ಸಾಗಿದೆ. ಶರಣ ಸಾಹಿತ್ಯ ಸ್ವರೂಪ ಚಳುವಳಿಯಿಂದ ಪ್ರೇರಿಪಿತವಾದದ್ದೆಂದು ಬೇರೆ ಹೇಳಬೇಕಾಗಿಲ್ಲ. ಆರಂಭದಲ್ಲಿ ಶರಣರು ಸಾಹಿತ್ಯವನ್ನು ರಚಿಸಬೇಕೆಂಬ ಉದ್ದೇಶದಿಂದ ಸಾಹಿತ್ಯ ರಚನೆಗೆ ಕೈ ಹಾಕಲಿಲ್ಲ ವೆಂದರೂ ತಾವಿರಿಸಿಕೊಂಡ ಆದರ್ಶಯುತದ ಆಂದೋಲನಕ್ಕೆ ಮಾಧ್ಯಮವಾಗಿ ಅಂದು ಪ್ರಚುರವಾಗಿದ್ದ ಸಾಹಿತ್ಯವನ್ನು ಅವರು ಬಳಸಿಕೊಳ್ಳಬೇಕಾದ ಅನಿವಾರ್ಯತೆಯಾಯಿತು. ಹಾಗಾಗಿ ಅವರು ತಾವಿರಿಸಿಕೊಂಡ ಮೌಲ್ಯಗಳ ಪ್ರತಿಪಾದನೆಗೆ ಸಾಹಿತ್ಯ ರಚನೆಗೆ ಕೈ ಹಾಕಿದರು.

ಅದರ ಫಲವಾಗಿಯೇ ' ವಚನ 'ಎಂಬ ವಿನೂತ ನ ಪ್ರಕಾರ ರಚನೆಯಾಯಿತು. ಸಹಜವಾಗಿ ವಚನಗಳಲ್ಲಿ ಧರ್ಮ - ಜಾತಿ - ವರ್ಗ - ವರ್ಣ - ಲಿಂಗ - ಭೇದಗಳ ತಾರತಮ್ಯ ನೀತಿಯ ಬಗ್ಗೆ ಕಟುವಾದ ಟೀಕೆ ಅಡಕವಾಗಿದೆ. ಇದು ಬರೀ ಅಷ್ಟಕ್ಕೆ ನಿಲ್ಲದೆ ಹೊಸ ಸಮಾಜವೊಂದರ ರೂಪುರೇಷೆಯ ಭಿತ್ತಿಯನ್ನು ಸಹ ಅಲ್ಲಿ ಕಾಣಬಹುದಾಗಿತ್ತು. ಆ ಕಾರಣದಿಂದಾಗಿಯೇ ಅಂದಿನ ವಚನಗಳು ಇಂದಿಗೂ ನಿರಂತರ ಚಿಂತನೆಗೆ ಎಡೆಮಾಡಿಕೊಡುವ ಜೊತೆಗೆ ಜೀವನದ ವಿವಿಧ ಆಯಾಮಗಳ ಎತ್ತರ - ಭಿತ್ತರಗಳನ್ನು ಚಿತ್ರಿಸುತ್ತಾ ಮನುಷ್ಯನ ಬದುಕನ್ನು ವಾಸ್ತವದ ಪಾತಳಿಯಲ್ಲಿ ನಿಲ್ಲಲು ಅನುಕೂಲಮಾಡಿಕೊಡುತ್ತದೆ. ವಚನಗಳ ಸಾಹಿತ್ಯಿಕ ಗುಣ ಬರೀ ಸಾಹಿತ್ಯಿಕವಾಗಿ ನಿಲ್ಲದೇ ಅದು ಬದುಕಿನ ಸ್ವರೂಪವಾಗಿ ಇಡೀ ಪರಂಪರೆಯ ಚರಿತ್ರೆಯನ್ನೇ ನಮ್ಮೆದುರಿಗೆ ಬಿಂಬಿಸುತ್ತವೆ. ಜನಸಮೂದಾಯದ ಬದುಕನ್ನೇ ಸಾಹಿತ್ಯದ ವಸ್ತುವಾಗಿ ಸ್ವೀಕರಿಸಿಕೊಂಡ ಶರಣರು ತಮ್ಮ ರಚನೆಗಳಲ್ಲಿ ಅಂದಿನ ಸಮಾಜದ ವೈರುದ್ಯತೆ , ಮಿಡುಕಾಟ , ಚಲನಶೀಲತೆ, ತಲ್ಲಣಗಳನ್ನು ಸ್ಪಷ್ಟವಾಗಿ ಚಿತ್ರಣಗೊಳಿಸಿದರೆಂಬುದು ನಮಗೆ ವಚನಗಳ ಅಧ್ಯಯನದಿಂದ ಗೋಚರವಾಗುತ್ತದೆ.

ಶರಣ ಸಾಹಿತ್ಯದ ಪ್ರಗತಿಪರ ನಿಲುವು ಈ ರೀತಿಯ ವೈವಿಧ್ಯತೆ ನಂತರದಿನಗಳಲ್ಲಿ ಏಕೆ ಮೂಡಿಬರಲಿಲ್ಲ ? ಎಂದು ಪ್ರಶ್ನಿಸಿಕೊಂಡರೆ ಶರಣರ ಚಳುವಳಿ ತನ್ನತನ ಮರೆತು ಒಂದು ವ್ಯವಸ್ಥೆಯಾಗಿ ವೈಭವೀಕರಣಗೊಂಡದ್ದು , ಜೊತೆಗೆ ಆನಂತರದವರಿಗೆ ಚಳುವಳಿಯ ಚಲನಶೀಲತೆಯ ಸಂಪರ್ಕವಿಲ್ಲದೆ ಹೋದದ್ದು ಎಂಬ ಸಂಗತಿ ಸ್ಪಷ್ಟವಾಗಿ ಕಂಡು ಬರುತ್ತದೆ.

ವಚನಗಳ ನಂತರ ಮೂಡಿ ಬಂದ ಸಾಹಿತ್ಯ - ಆ ಸಾಹಿತ್ಯ ರಚಿಸಿದ ಕೃತಿಕಾರರು ಶರಣರ ಚಳುವಳಿಯ ಸ್ವರೂಪದಲ್ಲಿ ಜಡತೆ ಬಂದರೂ ಅದರ ಪಾಡಿಗೆ ಅದನ್ನು ಬಿಟ್ಟು ಒತ್ತಡಗಳಿಗೊಳಗಾದ ಸ್ಥಿತಿಯಲ್ಲಿ ಬದುಕಿದರು. ಹೀಗಾಗಿ ವೈದಿಕರೊಡನೆ ನೇರ ಸಂಘರ್ಷಕ್ಕಿಳಿಯದೇ ಅವರಂತಾದರೇ ಹೇಗೆಂಬ ಹಂಬಲ ಉಂಟಾದ ಕಾರಣದಿಂದಲೇ ಶರಣ ಸಾಹಿತ್ಯದಲ್ಲಿ ಭಾಷೆ ಮತ್ತು ರೂಪಗಳಲ್ಲಿ ಬದಲಾವಣೆ ಕಂಡುಬಂದಿತ್ತೆಂಬುದನ್ನು ನಾವು ಸ್ಪಷ್ಟವಾಗಿ ಕಂಡುಕೊಳ್ಳಬಹುದಾಗಿದೆ.

ಹಾಗಾಗಿಯೇ ಹರಿಹರ - ರಾಘವಾಂಕಾದಿಗಳ ಕಾಲಕ್ಕೆ ಶರಣ ಸಾಹಿತ್ಯ ಬೇರೊಂದು ಸ್ವರೂಪ ಪಡೆಯಿತು. ಧಾರ್ಮಿಕ ಪ್ರತಿಷ್ಠೆ ಮುಖ್ಯವಾಗಿ ಅನೇಕ ಕಪೋಲಕಲ್ಪಿತ ಐತಿಹ್ಯಗಳು ಸೇರಿ ಶರಣರ ವಾಸ್ತವಿಕ ವಿಚಾರ ಧಾರೆ ಮಸುಕಾಯಿತು. ಸಾಹಿತ್ಯದ ವೈಭವೀಕರಣವಾಯಿತು. ಪೌರಾಣಿಕಾಂಶಗಳ ಹಿನ್ನೆಲೆಯಲ್ಲಿ ಕಾವ್ಯ ರಚನೆಯಾಯಿತು. ಶರಣರು ಶಾಪಕ್ಕೊಳಗಾದ ಶಿವಗಣಂಗಳಾದರು. ಇಷ್ಟಾದರೂ ಹರಿಹರ - ರಾಘವಾಂಕಾದಿಗಳು ಶರಣರ ಚಾರಿತ್ರ ನಿರ್ಮಿಸುವಲ್ಲಿ ವಚನಗಳ ಆಶಯವನ್ನು ಪೂರ್ತಿಯಾಗಿ ಕಡೆಗಣಿಸಲಿಲ್ಲ. ಬದುಕಿನ ವಾಸ್ತವ ಚಿತ್ರಣ ಕೊಡುವಲ್ಲಿ ಯಶಸ್ಸು ಸಾಧಿಸಿದ್ದನ್ನು ಕಾಣಬಹುದಾಗಿದೆ.

ಇದೇ ಸುಮಾರಿಗೆ ಪುರಾಣಗಳ ಪ್ರವಾಹವೇ ಹರಿದು ಬಂದಿತು. ಉದಾ: ಬಸವ ಪುರಾಣ , ಶಿವತತ್ವಚಿಂತಾಮಣಿ ಇತ್ಯಾದಿ ಕೃತಿಗಳು ಕಾಲಕಾಲಕ್ಕೆ ಶರಣ ಸಾಹಿತ್ಯದ ಸ್ವರೂಪವನ್ನು ವಿಸ್ತ್ರುತಗೊಳಿಸಿದವು. ಮುಂದೆ ಬಂದ ಅನೇಕ ಕೃತಿಕಾರರು ಶರಣ ಸಾಹಿತ್ಯದ ಪ್ರಗತಿಪರ ಆಲೋಚನೆಗಳನ್ನು ಅರ್ಥೈಸಿಕೊಳ್ಳದೇ ಬಾಹ್ಯಸ್ವರೂಪದಲ್ಲಿ ಶರಣರ ಆಕೃತಿಯನ್ನಿರಿಸಿಕೊಂಡು ಆಂತರ್ಯದಲ್ಲಿ ವೈದಿಕ ಸಂಪ್ರದಾಯದ ಬೆಳವಣಿಗೆಯ ಮತ್ತೊಂದು ರೂಪವನ್ನು ಮುಂದುವರಿಸಿದರು. ಸಮಾಜ ಪರವಾಗಿದ್ದ ಸಾಹಿತ್ಯ ಸಮಾಜದಿಂದ ದೂರವಾಗತೊಡಗಿತು. ಶರಣರ ಜೀವನ- ವಿಚಾರಧಾರೆಗಳು ಮೊದಲಿಗಿಂತ ಬೇರೊಂದು ಸ್ವರೂಪ ಕಂಡುಕೊಂಡುವು. ಶರಣ ಚಳವಳಿ ಸಿದ್ಧಾಂತವಾಗಿ ಮಾರ್ಪಟ್ಟು ಸಿದ್ಧಾಂತದ ಹಿನ್ನೆಲೆಯಲ್ಲಿ ಕೃತಿಗಳ ರಚನೆಯಾಯಿತು. ಹೀಗಾಗಿ ಶರಣರ ಮೊದಲಿನ ಆಶಯ - ಧೋರಣೆಗಳು ಕ್ರಮೇಣ ಬದಲಾಗತೊಡಗಿದವು.

ಆನಂತರದಲ್ಲಿ ಬಂದ ವಿರಕ್ತ ಪರಂಪರೆಯು ಶರಣರ ವಿಚಾರಗಳ ಹಿನ್ನೆಲೆಯಲ್ಲಿಯೇ ಬೆರೊಂದು ರೀತಿಯ ಶರಣ ಸಾಹಿತ್ಯ ವನ್ನು ಸೃಷ್ಟಿಸಿತು. ವಚನಗಳನ್ನು ಆಧರಿಸಿ ಶಾಸ್ತ್ರೀಯ ಅಧ್ಯಯನ ನಡೆಯಿತು. ಸಂಕಲನ - ಸಂಪಾದನೆಯಂತಹ ಕಾರ್ಯಗಳು ನಡೆದವು 'ಶೂನ್ಯ ಸಂಪಾದನೆ' ಈ ನಿಟ್ಟಿನಲ್ಲಿ ಮಹತ್ವ ಪೂರ್ಣ ಕೃತಿ ಶ್ರೇಣಿಯಾಯಿತು.. ಆದರೂ ಇಲ್ಲಿ ತತ್ವ ಪ್ರತಿಪಾದನೆ ಮುಖ್ಯವಾಯಿತು. ಅದಕ್ಕಾಗಿ ವಚನಗಳ ಮಾರ್ಪಾಟುಗಳು ಸಹ ನಡೆದಿರಬಹುದೆಂಬ ಸಂದೇಹವು ಸೂಕ್ಷ್ಮವಾಗಿ ಶೂನ್ಯ ಸಂಪಾದನೆಗಳನ್ನು ಅವಲೋಕಿಸಿದಾಗ ಕಂಡುಬರುತ್ತದೆ.

ಮತ್ತೇ ಹಿಂದಿನ ಆಶಯ - ಧೋರಣೆಗಳು 'ಹೇಮಗಲ್ಲ ಹಂಪ' ರಂತಹ ವಚನಕಾರರಲ್ಲಿ ಮೂಡಿ ಬಂದರು ಇವರ ವಚನಗಳು ಸಹ ಸೈದ್ಧಾಂತಿಕ ಚೌಕಟ್ಟಿನಡಿಯಲ್ಲಿಯೇ ರಚಿತವಾದವೆಂಬದನ್ನು ಮರೆಯಲಾಗದು . ತೋಂಟದ ಸಿದ್ಧಲಿಂಗಯತಿಗಳು, ಷಣ್ಮುಖ ಶಿವಯೋಗಿಗಳ ಮೂಲಕ ವಚನ ಪರಂಪರೆ ನಂತರ ಶತಕ , ಕಂದ , ಷಟ್ಪದಿ , ರಗಳೆ, ತಾರಾವಳಿ , ಮುಕ್ತಕ , ಸೃಜನ , ವಿಮರ್ಶೆ , ಸಂಶೋಧನೆ, ಸಂಪಾದನೆಗಳ ಮೂಲಕ ಶರಣ ಸಾಹಿತ್ಯ ಮೂಡಿ ಬಂದು ತನ್ನ ವ್ಯಾಪಕ ಸ್ವರೂಪತೆಯನ್ನು ಪಡೆದುಕೊಂಡಿತು. ಏನೇ ಆದರೂ ಹನ್ನೆರಡನೆಯ ಶತಕದ ಜನಪರತೆ - ಆಂದೋಲನ ಸ್ವರೂಪಗಳಾಗಲಿ ನಂತರದ ಶರಣ ಸಾಹಿತ್ಯದಲ್ಲಿ ಕಂಡುಬರಲಿಲ್ಲವೆಂಬುದು ಸರ್ವವಿದಿತವಾಗಿದೆ.

ಇತ್ತೀಚಿಗೆ ಶರಣ ಸಾಹಿತ್ಯ ಸ್ವರೂಪದ ವ್ಯಾಪ್ತಿ ಹೃದಯ ವೈಶಾಲ್ಯದಿಂದಾಗಿ ಹಿಗ್ಗುತ್ತಿದೆ. ಕೇವಲ ಮತೀಯ ಸಾಹಿತ್ಯವಾಗಿ ಅವಲೋಕಿಸದೇ ಅದನ್ನು ವಿವಿಧ ಕ್ಷೇತ್ರಗಳ ನೆಲೆಯಲ್ಲಿ ಕಂಡು ಕೊಳ್ಳಲಾಗುತ್ತಿದೆ. ವಿವಿಧ ಆಯಾಮಗಳ ಮೂಲಕ ಸಂಶೋಧನೆ - ವಿಮರ್ಶೆ ನಡೆದು ಇಡೀ ಶರಣ ಸಾಹಿತ್ಯ ಸ್ವರೂಪ ಕನ್ನಡ ಸಾಹಿತ್ಯ ಸ್ವರೂಪದ ಪ್ರತಿರೂಪವಾಗಿ ಮುಂದುವರೆಯುತ್ತಿದೆ.

೨ : ೬ ಶರಣ ಸಾಹಿತ್ಯ ಬೆಳೆದು ಬಂದ ಹೆಜ್ಜೆಗಳು

ಶರಣ ಸಾಹಿತ್ಯವೆಂದರೆ ಸಮುದಾಯ ಸಾಹಿತ್ಯವೆಂದು ಅರ್ಥ. ಹೀಗಾಗಿ ಸಮುದಾಯಕ್ಕೆ ಬೇಕಾದ ವಿವಿಧ ವೈಚಾರಿಕ ನಿಲುವು, ಭದ್ರತೆಗಳನ್ನು ಸಹ ಒದಗಿಸಿತು. ಆ ಪರಿಣಾಮವಾಗಿ ಶರಣ ಸಾಹಿತ್ಯ ವಿವಿಧ ರೂಪ - ಪ್ರಕಾರಗಳ ಮೂಲಕ ತನ್ನ ವಿಶಾಲ ಹೆಜ್ಜೆಗಳನ್ನಿಡುತ್ತ ಬಂದಿತು.

ಹನ್ನೊಂದನೆಯ ಶತಕದಿಂದ ಇಪ್ಪತ್ತೊಂದನೆಯ ಶತಕದವರೆಗೂ ಶರಣ ಸಾಹಿತ್ಯ ತನ್ನ ವಿವಿಧ ಆಕಾರ - ಪ್ರಕಾರ - ರೂಪ- ಉಪರೂಪಗಳನ್ನು ಪಡೆದುಕೊಂಡು ಮುಂದುವರೆಯುತ್ತಿದೆ.

ಬಸವಪೂರ್ವ ಹೆಜ್ಜೆ (ಕ್ರಿ.ಶ. ೧೧ ನೇ ಶತಮಾನ)

ಬಸವಾದಿ ಶರಣರ ವಚನಗಳಲ್ಲಿ ಪದೇ ಪದೇ ಕೇಳಿ ಬರುವ 'ಆದ್ಯರು' ಬಸವಾದಿಶರಣರಿಗಿಂತ ವೈಯಕ್ತಿಕ ಮಟ್ಟದಲ್ಲಿ ಶರಣ ಧರ್ಮವನ್ನು ಪ್ರಚುರಗೊಳಿಸಿದವರಾಗಿದ್ದಾರೆ. ಹಿಂದಿನ ಕಾಳಾಮುಖ- ಪಾಶುಪತ - ಪಂಚಾಚಾರ್ಯರಲ್ಲಿ ಯಾರು ಕಲ್ಯಾಣ ಶರಣರ ವಚನಗಳಲ್ಲಿ ಕಂಡು ಬರುವುದಿಲ್ಲ. ಆದರೆ ಆದ್ಯರು ಕಂಡುಬರುತ್ತಾರೆ. ಆದ್ಯರಲ್ಲಿ ಶಂಕರ ದಾಸಿಮಯ್ಯ, ಢಕ್ಕೆಯ ಮಾರಯ್ಯ, ಭಿಲ್ಲಮ ರಾಜ, ಜೇಡರ ದಾಸಿಮಯ್ಯ, ಕೆಂಭಾವಿ ಭೋಗಣ್ಣ, ಕೊಂಡಗುಳಿ ಕೇಶಿರಾಜ, ಮಾದಾರ ಚೆನ್ನಯ್ಯ ಮುಖ್ಯರಾಗಿದ್ದಾರೆ.

ಕೊಂಡಗುಳಿ ಕೇಶಿರಾಜನಂತೂ ಶರಣ ಸಾಹಿತ್ಯ ಆದ್ಯ ಪ್ರವರ್ತಕನೆಂದು ಕರೆಯಲಾಗಿದೆ. ಈತನ ಶರಣ ಪರ ಧೋರಣೆಗಳು ಮುಂದಿನ ವಚನಕಾರರಿಗೆ ಆಶಯಗಳಾಗಿ ಪರಿಣಮಿಸಿ ಮುಂದಿನ ಹೆಜ್ಜೆಗೆ ಸಹಕಾರಿಯಾದವು. ಕೊಂಡಗುಳಿ ಕೇಶಿರಾಜನ ಏಳು ಕೃತಿಗಳು ನಮಗೆ ಸದ್ಯ ಉಪಲಬ್ಧವಾಗಿವೆ. ಅಂತೆಯೇ ಇವರ ಪ್ರಭಾವ ಸುತ್ತೆಲ್ಲ ಹರಡಿತು. ಕೃತಿಯಲ್ಲಿ ಕಂಡುಬರುವ ಅಂಗದಮೇಲೆ ಲಿಂಗ, ವಿಭೂತಿ ಇತ್ಯಾದಿಗಳಲ್ಲಿನ ಆತನ ನಿಲುವು ಅಂದಿನ ಅನೇಕರಿಗೆ ಪ್ರಭಾವ ಬೀರಿತೆನ್ನಬಹುದು. ಹಾಗಾಗಿ ಹಲವರು ಬಸವಾದಿ ಶರಣರಿಗಿಂತ ಪೂರ್ವದಲ್ಲಿಯೇ ವಚನ ರಚಿಸಿದ್ದಾರೆ. ಅಂತಹವರಲ್ಲಿ ಜೇಡರ ದಾಸಿಮಯ್ಯನೇ ಮೊದಲಿಗನೆಂಬ ಅಭಿಪ್ರಾಯವಿದೆ. ಆದರೆ ಮೊದಲ ವಚನಕಾರರು ಶಂಕರ ದಾಸಿಮಯ್ಯ - ಢಕ್ಕೆಯ ಮಾರಯ್ಯ ಎಂಬುದು ಸ್ಪಷ್ಟವಾಗಿದೆ. ಈ ಕುರಿತು ಇದೇ ಪ್ರಬಂದದಲ್ಲಿ ಮುಂದೆ ವಿವರವಾಗಿ ಚರ್ಚಿಸಲಾಗಿದೆ. ಹನ್ನೊಂದನೆಯ ಶತಮಾನದ ಶರಣ ಸಾಹಿತ್ಯ ಹಿಂದಿನ ಕಂದ, ವೃತ್ತಗಳನ್ನು, ಜೊತೆಗೆ ಜಾನಪದ ಮಟ್ಟುಗಳನ್ನು ಬಳಸಿ ರಚಿತವಾಗುವ ಜೊತೆಗೆ ವಚನ ಪ್ರಕಾರದ ಆರಂಭಕೂಡ ಆಯಿತು. ಬಸವಪೂರ್ವ ಹೆಜ್ಜೆ ಮುಂದಿನ ಹೆಜ್ಜೆಗಳಿಗೆ ನಾಂದಿಯಾಯಿತು.

ಬಸವ ಹೆಜ್ಜೆ (ಕ್ರಿ.ಶ.೧೨ ನೇ ಶತಮಾನ)

ಹಿಂದಿನ ಹೆಜ್ಜೆಗಳನ್ನು ಲಕ್ಷ್ಯದಲ್ಲಿರಿಸಿಕೊಂಡು ಬೆಳೆದು ಬಂದ ಈ ಹೆಜ್ಜೆ ನಿಜಕ್ಕೂ ಮಹತ್ವಪೂರ್ಣವಾದುದು. ಶರಣ ಸಾಹಿತ್ಯದ ದಿಟ್ಟ ಹೆಜ್ಜೆಯೂ ಕೂಡ ಇದು ಸಂಪೂರ್ಣವಾಗಿ ಸತ್ವಪೂರ್ಣವಾದ ಸೃಜನ ಪಥವಾಗಿದೆ. ಈ ಹೆಜ್ಜೆಯಲ್ಲಿ ಸಮಾಜದ ಎಲ್ಲ ವರ್ಗಗಳಿಂದ ಬಂದ ಶ್ರಮ ಜೀವಿಗಳು ಸೇರಿ ವಚನ ರಚಿಸಿದರೆಂಬುದೇ ದೊಡ್ಡ ಸಾಧನೆ. ಮೂವತ್ತೊಬ್ಬರು ಮಂದಿ ಮಹಿಳೆಯರನ್ನೊಳಗೊಂಡಂತೆ ಎರಡುನೂರಾ ಹನ್ನೊಂದು ಮಂದಿ ಶರಣರು ೧೫ ಸಾವಿರಕ್ಕಿಂತ ಹೆಚ್ಚು ವಚನಗಳನ್ನು ರಚಿಸಿದ್ದಾಗಿ ನಮಗೆ ತಿಳಿದು ಬರುತ್ತದೆ. ಕರ್ನಾಟಕ ಸರಕಾರ ಪ್ರಕಟಿಸಿದ ಸಮಗ್ರ ವಚನ ಸಂಪುಟದ ಸಂಪುಟಗಳೇ ಇದಕ್ಕೆ ನಿದರ್ಶನವಾಗಿದೆ. ಚಳುವಳಿಯ ರೂಪವಾಗಿ ಇಲ್ಲಿಯ ಸಾಹಿತ್ಯ ಮೂಡಿ ಬಂದಿತು. ಶರಣರ ಆಶಯ- ಧೋರಣೆಗಳು ಇಲ್ಲಿ ಸ್ಪಷ್ಟವಾಗಿ ರೂಪಿತವಾದವು. ಭಾಷೆ - ಬಂಧಗಳ ಮೂಲಕ ಈ ಹೆಜ್ಜೆ ಸತ್ವಭರಿತವಾಗಿತ್ತು.

ಬಸವೋತ್ತರ ಹೆಜ್ಜೆ (ಕ್ರಿ.ಶ. ೧೩ ನೇ ಶತಕದಿಂದ ಇತ್ತೀಚಿನ ವರೆಗೆ)

ವಚನವೊಂದೆ ಮಾಧ್ಯಮವಾಗಿ ಶರಣ ಸಾಹಿತ್ಯ ಹನ್ನೆರಡನೆಯ ಶತಕದಿಂದ ಹದಿಮೂರನೆಯ ಶತಕದ ವರೆಗೆ ಬೆಳೆದು ಬಂದಿತು. ಆದರೆ ಮುಂದೆಬಂದ ಭಕ್ತ ಕವಿಗಳಾದ ಹರಿಹರ- ರಾಘವಾಂಕಾದಿಗಳು ಶರಣ ಸಾಹಿತ್ಯದ ಸ್ವರೂಪವನ್ನೇ ಬೇರೆಡೆ ತಿರುಗಿಸಿದರು. ಕಲ್ಯಾಣ ಕ್ರಾಂತಿಯ ಪರಿಣಾಮವಾಗಿ ವಚನಸಾಹಿತ್ಯವೆಲ್ಲ ಶರಣರಂತೆ ಚದುರಿಹೋಗಿತ್ತು. ಚದುರಿಹೋಗಿದ್ದ ಸಾಹಿತ್ಯವನ್ನೇ ಸಿಕ್ಕಷ್ಟು ಸಂಗ್ರಹಿಸಿ ಅಧ್ಯಯನ ಮಾಡಿದ ಈ ಹೆಜ್ಜೆಯ ಪ್ರಮುಖ ಕವಿಗಳು ಶರಣ ಸಾಹಿತ್ಯವನ್ನು ಮುಂದುವರೆಸಿದರು. ಆದರೆ ವಚನ ಪ್ರಕಾರ ಮೂಡಿ ಬರಲಿಲ್ಲ. ವೈದಿಕ ಪ್ರಭಾವ - ರಾಜಾಶ್ರಯ ಪುನಃ ಪ್ರವೇಶವಾಗತೊಡಗಿದವು. ಹೀಗಾಗಿ ಇರುವ ಹಿಂದಿನ ಸಾಹಿತ್ಯವನ್ನೇ ಬೇರೊಂದು ರೂಪದಲ್ಲಿ ಪರಿವರ್ತಿಸಿ ರಗಳೆ - ಷಟ್ಪದಿಗಳ ಮೂಲಕ ಶರಣ ಸಾಹಿತ್ಯವನ್ನು ಬೆಳೆಸಿದವರಲ್ಲಿ ಹರಿಹರ- ರಾಘವಾಂಕಾದಿಗಳು ಪ್ರಮುಖರಾಗಿದ್ದಾರೆ.

ಆನಂತರ ಉಂಟಾದ ರಾಜಕೀಯ ಕ್ಷೋಭೆಯ ಇತಿಹಾಸ ಸ್ಪಷ್ಟವಾಗಿಯೇ ಗೋಚರಿಸುತ್ತದೆ. ವಿಜಯ ನಗರ ಸಾಮ್ರಾಜ್ಯ ಸ್ಥಾಪನೆಯೊಂದಿಗೆ ಮತ್ತೊಮ್ಮೆ ಶರಣ ಸಾಹಿತ್ಯ ರೂಪಿತವಾಗ ತೊಡಗಿತು. ಕ್ರಿ.ಶ. ೧೪೨೪-೪೬ ರವಧಿಯಲ್ಲಿ ಪ್ರೌಢದೇವರಾಯ ಅರಸನಾಗಿದ್ದಾಗ ಶರಣ ಸಾಹಿತ್ಯವಿವಿಧ ರೂಪಗಳ ಮೂಲಕ ಮೂಡಿ ಬಂದಿತು. ಶರಣರ ವಚನಗಳೇ ಸೈದ್ಧಾಂತಿಕವಾದ ನಿಯಮಗಳಿಗೆ ಬದ್ಧವಾಗುವಂತೆ ಅವುಗಳನ್ನು ಸಂಯೋಜನೆ ಮಾಡುವ ಕೆಲಸ ನಡೆಯಿತು. ನೂರೊಂದು ವಿರಕ್ತರು ಬಹುಮೂಲ್ಯವಾದ ಸಾಹಿತ್ಯ ರಚನೆಗೆ ಕೈ ಹಾಕಿದ ಪರಿಣಾಮವಾಗಿಯೇ ಅನೇಕ ಕೃತಿಗಳು ಹೊರಬಂದವು. ಜೊತೆಗೆ ಕಲ್ಯಾಣ ಶರಣರ ಆದರ್ಶಗಳು ಕೂಡ ಎಲ್ಲಾ ಶರಣ ಸಾಹಿತ್ಯದಲ್ಲಿ ಕಂಡು ಬರಲಿಲ್ಲವೆಂಬುದು ಅಷ್ಟೇ ಗಮನಾರ್ಹವಾಗಿದೆ.

ಗುಬ್ಬಿ ಮಲ್ಲಣ್ಣ , ಗುಮ್ಮಳಾಪುರದ ಸಿದ್ಧಲಿಂಗಯತಿ, ಶಿವಗಣಪ್ರಸಾದಿ ಮಹಾದೇವಯ್ಯನವರು ಈ ಬಸವೋತ್ತರ ಯುಗದಲ್ಲಿ ಪ್ರಮುಖರಾಗಿ ಕಾಣಿಕೊಳ್ಳುತ್ತಾರೆ. ಈ ಹೆಜ್ಜೆಯ ಅನೇಕ ಕೃತಿಕಾರರು ತಮ್ಮ ಕಾರ್ಯಕ್ಕೆ ಅನುಕೂಲವಾಗುವ ರೀತಿಯಲ್ಲಿ ವಚನಗಳನ್ನು ಬಳಸಿ ಹಿಂದಿನ ಶರಣರ ಧೋರಣೆಯಲ್ಲಿನ ಅಂಶಗಳನ್ನೇ ಮರೆತರು . ತಾತ್ವಿಕತೆ ಪ್ರಮುಖವಾಯಿತು. ಹಾಗಾಗಿ ವಚನಗಳ ವಿವಿಧ ಮುಖ ಇಲ್ಲಿ ಪರಿಚಯವಾಗಲಿಲ್ಲ.

ಮುಂದಿನ ಕ್ರಿ.ಶ. ೧೬ ನೇ ಶತಕದಲ್ಲಿ ಮತ್ತೇ ತೋಂಟದ ಸಿದ್ಧಲಿಂಗಯತಿಗಳ ಮೂಲಕ ವಚನಗಳ ಸೃಜನಕ್ರಿಯೆ ನಡೆಯಿತು. ಈ ಹೆಜ್ಜೆಯಲ್ಲಿ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ವಚನಗಳನ್ನು ನಲವತ್ತೂಮ್ಮರು ವಚನ ಕಾರರು ರಚಿಸಿದ್ದು ಕಂಡು ಬರುತ್ತದೆ. ಆದರೆ ಇಲ್ಲಿ ಸೀಮಿತ ಉದ್ದೇಶವಿತ್ತು. ಹಿಂದಿನ ವಿಶಾಲ ಧೋರಣೆ ಇರಲಿಲ್ಲ . ಕೃತಿಕಾರರೇ ವಚನಗಳನ್ನು ಸೇರಿಸಿ ಹೆಸರಿಡುವ ಪರಂಪರೆ ಬೆಳೆದು ಬಂದಿತು. ಮಠಗಳಲ್ಲಿಯೇ ಬಹುತೇಕ ಶರಣ ಸಾಹಿತ್ಯ ಸೃಷ್ಟಿಯಾಯಿತು. ಆದರೂ ಕಲ್ಯಾಣ ಶರಣರ ಚಳುವಳಿಯ ಆಶಯ - ಧೋರಣೆಗಳು ಸ್ಪಷ್ಟವಾಗಿ ಮೂಡಿ ಬರಲಿಲ್ಲ. ಮಠಾಧಿಪತಿಗಳಲ್ಲಿ ವಚನ ಸಿಲುಕಿದಾಗ ವಚನಕ್ರಾಂತಿಯ ಕಾವು , ಸಾಮಾಜಿಕ ಪ್ರಜ್ಞೆ , ಸಮಾನತೆ ತತ್ವಗಳೆಲ್ಲ ಕರಗಿ ಹೋಗಿ ವಚನವೆಂದರೆ ಗಿಳಿ ಪಾಠವಾಯಿತು.

ಆನಂತರ ಹದಿನಾರನೆಯ ಶತಕದ ಪೂರ್ವಾರ್ಧದಲ್ಲಿ ಬಂದ ಸರ್ವಜ್ಞ ಪ್ರಭಾವಶಾಲಿ ವಚನಕಾರರು. ಕನ್ನಡಿಯೊಳಗೆ ಕರಿಯನ್ನು ಬಿಂಬಿಸಿದಾತ. ಆನಂತರ ಬಂದಂತಹ ಷಣ್ಮುಖ ಶಿವಯೋಗಿಗಳು ಹಿಂದಿನ ವಚನದ ಧೋರಣೆಗಳನ್ನು ಮತ್ತೇ ತುಂಬುವಲ್ಲಿ ಯಶಸ್ವಿಯಾದರು. ಅನಂತರ ಹದಿನೆಂಟನೆ ಶತಕದಲ್ಲಿ ಕಂಡು ಬರುವ ಹೇಮಗಲ್ಲ ಹಂಪ, ಕಾಡ ಸಿದ್ದೇಶ್ವರರು ತಮ್ಮ ಸಾಹಿತ್ಯದ ಮೂಲಕ ಶರಣ ಪರಂಪರೆಯನ್ನು ಜೀವಂತವಾಗಿರಿಸಿದರು. ಏನೇ ಆಗಲಿ ಕ್ರಿ.ಶ. ೧೨ ರಿಂದ ೧೯ ನೇ ಶತಕದವರೆಗೆ ತೀವ್ರ ಸಂಘರ್ಷದ ಕಾಲವಾಗಿದೆ. ಯುದ್ಧವಾದಿಗಳು ಒಂದೆಡೆ, ವಿರಕ್ತರು ಮತ್ತೊಂದೆಡೆ ಸೇರಿ ಶರಣ ಸಾಹಿತ್ಯದ ಹೆಜ್ಜೆಗಳಿಗೆ ಚಾಲನೆ ನೀಡಿದರು. ಆದರು ತಮ್ಮ ವೈಯಕ್ತಿಕ ನೆಲೆಯ ಮೂಲಕ ಆಧ್ಯಾತ್ಮದೆಡೆಗೆ ತಿರುಗಿಸುವ ಪರಿಪಾಠ ಬೆಳೆಸಿಕೊಂಡರು. ಬಸವೋತ್ತರ ಯುಗದ ಬಹುತೇಕ ಶರಣ ಸಾಹಿತ್ಯ ಬುದ್ಧಿ ಪೂರ್ವಕ ಕಸರತ್ತಾಯಿತೇ ವಿನಃ ಹಿಂದಿನ ಜಂಗಮ ಪರಿಕಲ್ಪನೆ ಪಡೆಯಲಿಲ್ಲವೆಂಬುದು ಸತ್ಯ ಸಂಗತಿಯಾಗಿದೆ.

ಆನಂತರದಲ್ಲಿ ಬಹುತೇಕ ಶರಣ ಸಾಹಿತ್ಯದಲ್ಲಿ ಸಮನ್ವಯತೆ ಪರಿಕಲ್ಪನೆ ಬೆಳೆದು ಬಂದು ವಿವಿಧ ಪ್ರಕಾರಗಳು ಹುಟ್ಟಿಕೊಂಡವು. ಅವುಗಳಲ್ಲಿ 'ತತ್ವ ಪದ' ಗಳು ಬಹುಮುಖ್ಯವಾಗಿದೆ. ಹನ್ನೆರಡನೆಯ ಶತಕದಷ್ಟೇ ಬಹುಸಂಖ್ಯಾತ ಶರಣರು ತಮ್ಮ ಸಾಹಿತ್ಯ ರಚಿಸಿದರು. ಅತ್ಯಂತ ವಿಚಿತ್ರ ರೀತಿಯ 'ಬೆಡಗು' ಇಲ್ಲಿ ಸ್ಥಾನಪಡೆಯಿತು. ಪದಕ್ಕೆ ಒತ್ತು ನೀಡಲಾಯಿತು. ಈ ಕಾಲದ ಶರಣರೆಲ್ಲ ಜನಪದದ ಶರಣರಾದರು.

ಆನಂತರ ಇತ್ತೀಚಿಗೆ ಬೆಳೆದು ಬಂದ ಆಧುನಿಕ ದೃಷ್ಟಿಕೋನದಿಂದಾಗಿ ಶರಣ ಸಾಹಿತ್ಯ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತನ್ನ ನೆಲೆಯನ್ನು ಕಂಡು ಕೊಂಡಿತು. ಹಿಂದಿನ ವಚನ ಪ್ರಕಾರ, ರಗಳೆ, ಷಟ್ಪದಿಗಳ ಜೊತೆಯಲ್ಲಿಯೇ ಸೃಜನ, ವಿಮರ್ಶೆ, ಸಂಪಾದನೆ, ಸಂಶೋಧನೆ ಕಾರ್ಯಗಳು ನಡೆದವು. ಪಾಶ್ಚಾತ್ಯರ ಪ್ರಭಾವದಿಂದ ಉಂಟಾದ ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಪ್ರಜ್ಞೆಗಳು ಸಹ ಶರಣ ಸಾಹಿತ್ಯದ ಮೇಲೆ ಪ್ರಭಾವ ಬೀರಿದ ಪರಿಣಾಮವಾಗಿಯೇ ವಿಭಿನ್ನ ರೀತಿಯ ಶರಣ ಸಾಹಿತ್ಯ ಸೃಷ್ಟಿಯಾಯಿತು. ಜನಸಾಮಾನ್ಯರ ಬದುಕಿನ ವಿವಿಧ ಆಯಾಮಗಳನ್ನು ಶರಣ ಸಾಹಿತ್ಯದ ಹಿನ್ನೆಲೆಯಲ್ಲಿ ರಚಿಸಲಾಯಿತು. ವಚನ ಪ್ರಕಾರ ಮಾತ್ರ ಹನ್ನೆರಡನೆ ಶತಕದಷ್ಟು ಸತ್ವಪೂರ್ಣವಾಗಿ ಬರಲಿಲ್ಲವಾದರೂ ಉಳಿದ ಆಧುನಿಕ ಪ್ರಕಾರಗಳಲ್ಲಿ ಶರಣ ಸಾಹಿತ್ಯ ಮೂಡಿ ಬಂದು ಪರಂಪರೆಯ ಹೆಜ್ಜೆಯ ಗುರುತುಗಳನ್ನು ಜೀವಂತವಾಗಿರಿಸಿತೆನ್ನ ಬಹುದಾಗಿದೆ.

೨ :೭ ಶರಣ ಸಾಹಿತ್ಯದ ಪ್ರಕಾರಗಳು - ರೂಪಗಳು

ಶರಣ ಸಾಹಿತ್ಯವೆಂದರೆ ಕೆಲವ ವಚನಗಳೆಲ್ಲವೆಂಬುದು ನಮ್ಮ ಲಕ್ಷ್ಯದಲ್ಲಿದ್ದಾಗ ಮಾತ್ರ ಶರಣ ಸಾಹಿತ್ಯ ವಿವಿಧ ಆಯಾಮಗಳು ನಮಗೆ ಪರಿಚಿತವಾಗುತ್ತವೆ. ಆ ಮೂಲಕ ಶರಣ ಸಾಹಿತ್ಯದ ವೈವಿಧ್ಯಮಯ ಪ್ರಕಾರಗಳು ಗೋಚರಿಸುತ್ತವೆ. ಬಸವಾದಿ ಶರಣರಿಗಿಂತ ಪೂರ್ವದಲ್ಲಿದ್ದ ವಚನ ರಚನೆಗಳಿಂದ ಹಿಡಿದು ಆಧುನಿಕದ ವರೆಗೆ ವಿಶಿಷ್ಟವಾದ-ಅಪೂರ್ವವಾದ ಸಾಹಿತ್ಯ ಪ್ರಕಾರಗಳು - ರೂಪಗಳು ನಮಗೆ ಕಂಡು ಬರುತ್ತದೆ. ವಚನ , ಸ್ವರವಚನ , ರಗಳೆ, ಷಟ್ಪದಿ,ತ್ರಿಪದಿ,ಸಾಂಗತ್ಯ,ತತ್ವಪದ , ಕಂದ ಇತ್ಯಾದಿಗಳ ಬಳಕೆ ಶರಣ ಸಾಹಿತ್ಯದಲ್ಲಿ ಕಂಡು ಬರುತ್ತದೆ.

ಕಂದ :- ಶರಣ ಸಾಹಿತ್ಯ ಆರಂಭವಾಗುವುದು ವಚನಗಳಿಂದಲೇ ಎಂಬ ಮಾತು ಬಹುತೇಕರದು . ಇದಕ್ಕಿಂತ ಪೂರ್ವದಲ್ಲಿ ಕಂದ , ವೃತ್ತಗಳು ಶರಣ ಸಾಹಿತ್ಯದಲ್ಲಿ ಬಳಕೆಯಾಗಿವೆ. ಕೊಂಡಗುಳಿ ಕೇಶಿರಾಜರ ಕಂದ , ವೃತ್ತ , ಅಷ್ಟಕ ಕೃತಿಗಳನ್ನು ನಾವಿಂದು ಕಾಣಬಹುದಾಗಿದೆ. ವಚನಗಳನ್ನು ರಚಿಸಿದ ಬಗ್ಗೆ ಕಂಡು ಬಂದರೂ ಆ ಕುರಿತು ಯಾವುದೇ ಆಧಾರಗಳಿಲ್ಲ .

ಕಂದ ಮುಕ್ಕಾಲು ಪಾಲು ಕನ್ನಡದಲ್ಲಿ ಬಳಕೆಯಾಗಿದೆಯಾದರೂ ಶರಣ ಸಾಹಿತ್ಯಕ್ಕೆ ಬಂದರೆ ಇದರ ಪ್ರಯೋಗ ಬಹುಕಡಿಮೆಯಾಗಿದೆ. ಆದರೂ ಶರಣ ಸಾಹಿತ್ಯ ಆರಂಭವಾಗಿದ್ದು ಕಂದದಿಂಲೇ ಎಂಬ ಅನುಮಾನ ಕೇಶಿರಾಜರ ಮೂಲಕ ಕಂಡು ಬಂದರೂ ಅದಕ್ಕೆ ಅಷ್ಟೇನೂ ಮಹತ್ವ ದೊರೆಯದೆ ಹೋಗುತ್ತದೆ. ಹಾಗಾಗಿ ವಚನಗಳೇ ಶರಣ ಸಾಹಿತ್ಯದ ಆರಂಭದ ಬೇರುಗಳೆನ್ನಬಹುದಾಗಿದೆ. ಕಂದ ಛಂದದಲ್ಲಿ ಕೇಶಿರಾಜನ ಷಡಕ್ಷರಿ ಮಂತ್ರದ ಮಹಿಮೆ, ಲಿಂಗ , ಶೀಲ, ಭಕ್ತ , ಶಿವಾನುಭವ ಮೊದಲಾದವುಗಳ ಬಗ್ಗೆ ತನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದು ಕಂಡು ಬರುತ್ತದೆ. ಕಂದ ಹಿಂದಿನ ಕಾವ್ಯಗಳಂತೆ ಬಿಗುವಿನಿಂದ ಕೂಡಿಲ್ಲ. ಕೇಶಿರಾಜನ ಪ್ರಯೋಗದ ವಸ್ತು ಮುಂದಿನ ವಚನಕಾರರಿಗೆ ಪ್ರೇರಕವಾಗಿತ್ತೆನ್ನುವುದು ಅಲ್ಲಗಳೆಯಲಾಗದು. ಕೇಶಿರಾಜರ ತರುವಾಯ ಶರಣ ಸಾಹಿತ್ಯದಲ್ಲಿ ಮತ್ತೇ ಕಂದ ಕಾಣಿಸಿಕೊಳ್ಳುವುದು ಹರಿಹರನ ಕಾಲಕ್ಕೆ . ಆತ ತನ್ನ ರಗಳೆಯಲ್ಲಿ ಆದಿ-ಅಂತ್ಯಗಳಲ್ಲಿ ತಪ್ಪದೇ 'ವಿರೂಪಾಕ್ಷ' ಮುದ್ರಿಕೆಯ ಕಂದಗಳನ್ನು ಬಳಸಿದ್ದಾನೆ. ಕಂದ ಮೂಲಕವೇ ತನ್ನ ವಿಚಾರವನ್ನೆಲ್ಲ ತನ್ನಿಷ್ಟ ದೈವ ವಿರೂಪಾಕ್ಷನಿಗೆ ನಿವೇದಿಸುತ್ತಾನೆ. ಜೊತೆಗೆ ಆಯಾ ಶರಣರ ಗುಣ ತನ್ನಲ್ಲಿ ಮೂಡಲೆಂಬ ಆಶಯ ವ್ಯಕ್ತಪಡಿಸುತ್ತಾನೆ. ಕಂದ ಬಳಕೆಯ ಔಚಿತ್ಯವನ್ನು ಕಂಡುಕೊಂಡಿರುವುದನ್ನು ಕಾಣಬಹುದು. ಮುಂದೆ ಕಂದ ಸಾಕಷ್ಟು ಶರಣ ಸಾಹಿತ್ಯದಲ್ಲಿ ಬೆಳದು ಬರಲಿಲ್ಲ . ಬಹುದಿನಗಳ ನಂತರ ಹದಿನೆಂಟನೆಯ ಶತಕದಲ್ಲಿ ಹೇಮಗಲ್ಲ ಹಂಪರ ಕಾಲಕ್ಕೆ ಕಂದ ತನ್ನ ಖ್ಯಾತಿಯನ್ನು ಪಡೆಯಿತು. ಸಮರ್ಥವಾಗಿ ಕಂದವನ್ನು ಹೇಮಗಲ್ಲ ಹಂಪರು ಬಳಸಿದ್ದಾರೆ.

ವಚನ :- ಶಾಬ್ದಿಕವಾಗಿ 'ಮಾತು' ಎಂಬಾರ್ಥವನ್ನು ಧ್ವನಿಸುತ್ತದೆ. ಜನಪದೀಯವಾಗಿ ಇದು 'ಪ್ರಮಾಣ' ವೆನ್ನಿಸುತ್ತದೆ. ಇದು ಪ್ರಾಚೀನ ಪದವಾಗಿದೆ.ಈ ಕುರಿತು ಡಾ. ವೀರಣ್ಣ ರಾಜೂರು ಅಭಿಪ್ರಾಯ ಪಡುವ ರೀತಿಯಂತೆ ' ವಚನವೆಂಬ ಪದ ಕನ್ನಡದಲ್ಲಿ ವಿವಿಧ ಅರ್ಥ ಮೌಲ್ಯಗಳನ್ನು ಪಡೆದುಕೊಂಡಿದೆ . ಚಂಪೂ ಕವಿಗಳು ತಮ್ಮ ಕಾವ್ಯಗಳಲ್ಲಿ ಬಳಸಿದ ಗದ್ಯಕ್ಕೆ ಶಾಸನಕಾರರು ತಮ್ಮ ಶಾಸನ ಗದ್ಯಕ್ಕೆ 'ವಚನ' ಎಂದು ಕರೆದರೆ, ವೀರಶೈವರು ಈ ಅರ್ಥದಿಂದ ಸಂಪೂರ್ಣ ಭಿನ್ನ ರೀತಿಯಲ್ಲಿ ತಮ್ಮ ಇಡೀ ಅನುಭಾವ ಸಾಹಿತ್ಯಕ್ಕೆ ವಚನ ಎಂದು ಕರೆದು ಈ ಪದದ ಅರ್ಥ ವೈಶಾಲ್ಯವನ್ನು ಹೆಚ್ಚಿಸಿದ್ದಾರೆ'.೧

ವಚನ ಶರಣ ಸಾಹಿತ್ಯದ ಅಪೂರ್ವ ಪ್ರಕಾರ . ಇದರ ಮೂಲವನ್ನು ಕೆಲವು ವಿದ್ವಾಂಸರು ಪತ್ತೆ ಹಚ್ಚಲು ಯತ್ನಿಸಿ ವಿವಿಧ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ತಮಿಳಿನ 'ತೇವಾರಂ' ಗಳ ಮೂಲಕ ವಚನಗಳನ್ನು ಹುಡುಕಲು ಡಿ.ಎಲ್.ನರಸಿಂಹಾಚಾರ್ಯರು ಯತ್ನಿಸಿದರೆ ೨ ಸಂಸ್ಕೃತ ಛಂದೋ ಗಂಧಿಗಳಲ್ಲಿ ೩ ಮತ್ತು ವೇದೋಪನಿಷತ್ತು ಬ್ರಾಹ್ಮಣಗಳ ಗದ್ಯಗಳಲ್ಲಿ ೪ ನೋಡುವ ಪ್ರಯತ್ನ ಮಾಡಿದವರು ಡಾ.ಎಲ್. ಬಸವರಾಜರವರಾಗಿದ್ದಾರೆ.ಡಾ : ಚಿದಾನಂದ ಮೂರ್ತಿಗಳು ಆರಂಭದಲ್ಲಿ 'ತ್ರಿಪದಿ' ಯಿಂದ ವಚನ ಹುಟ್ಟಿತೆಂದರೆ೫ ಮತ್ತೇ ತಮ್ಮ ನಿರ್ಣಯ ಬದಲಾಯಿಸಿ ವಚನಗಳು ಪರಿಸರದ ಅಗತ್ಯದ ಅನಿವಾರ್ಯತೆ೬ ಎನ್ನುತ್ತಾರೆ . ಬಹದಿನಗಳ ಹಿಂದೆ ಎಂ.ಆರ್. ಶ್ರೀನಿವಾಸ ಮೂರ್ತಿ ವಚನಗಳನ್ನು ಕನ್ನಡ ಸ್ವಾರ್ಜಿತ ಸ್ವತ್ತು ೭ ಎಂದಿದ್ದರು. ಇವರ ಅಭಿಪ್ರಾಯವನ್ನು ಬಹುತೇಕವಾಗಿ ಸಮ್ಮತಿಸಿದ್ದಾರೆ. ವಚನಗಳ ಕಾಲದ ಬಗ್ಗೆ ಸಾಕಷ್ಟು ಚರ್ಚೆ ನಡೆಸಲಾಗಿದೆ. ಡಾ. ಎಲ್. ಬಸವರಾಜ ವಚನ ಪ್ರಕಾರವನ್ನು -ಅದರ ಇತಿಹಾಸವನ್ನು ಕ್ರಿ.ಶ. ೯ ರಿಂದ ೧೦ನೇ ಶತಮಾನದವರೆಗೆ ವಿಸ್ತರಿಸುತ್ತಾರೆ.೮

---

೧ : ಡಾ : ವೀರಣ್ಣ ರಾಜೂರು- ವ.ಅ.ಪುಟ೧೮

೨ : ಡಿ.ಎಲ್ .ನರಸಿಂಹಾಚಾರ್ಯ - ಕೆ.ವ.ಪಿ.ಪುಟ೪೪೧

೩: ಡಾ : ಎಲ್. ಬಸವರಾಜ - ಅ.ವ.ಚಂ.ಪೀಠಿಕೆ ಪುಟ೧೨

೪ : ಅದೇ ಪುಟ೧೮

೫ : ಸಂ: ಡಾ :ಚಿದಾನಂದ ಮೂರ್ತಿ -ವ.ಸಾ.ಉ.ಸಂ.-ತರಂಗ೧ ಪುಟ೧೬-೩೫

೬ : ಡಾ : ಚಿದಾನಂದ ಮೂರ್ತಿ -ವ.ಸಾ. ಪುಟ೮-೯

೭ : ಎಂ.ಆರ್.ಶ್ರೀನಿವಾಸ ಮೂರ್ತಿ- ವ.ಧ.ಸಾ.ಪುಟ೯-೧೦

೮ : ಡಾ : ಎಲ್. ಬಸವರಾಜ - ಅ.ವ.ಚಂ.ಪೀಠಿಕೆ ಪುಟ೧೧

ಹೀಗೆ ಎಲ್ಲಾ ವಿದ್ವಾಂಸರ ಅಭಿಪ್ರಾಯ ಅವಲೋಕಿಸಿದರೆ ನಮಗೆ ತಿಳಿದು ಬರುವುದೇನೆಂದರೆ ವಚನವೆಂಬುದು ಅಗತ್ಯದ ಪರಿಸರವನ್ನು ಭೇದಿಸಿ ಹುಟ್ಟಿದ ಸ್ವಯಂ ಪ್ರಕಾರವೇ ವಿನಃ ಯಾವುದೇ ಮುಂಚಿನ ಪ್ರಕಾರದ ಪ್ರಭಾವದಿಂದಲ್ಲವೆಂಬುದು ತಿಳಿಯುವುದು ಅವಶ್ಯಕವಾಗಿದೆ. 'ಕನ್ನಡದ ನೆಲದ ಪರಂಪರೆಯೇ ವಚನವಾಗಿದೆ. ಒಂದು ರೀತಿಯಲ್ಲಿ ವಚನಗಳು ಸ್ವತಂತ್ರವಾದರೂ ಇಡೀ ವಚನ ಸೃಷ್ಟಿಯ ದೃಷ್ಟಿ ಒಂದು ಜೀವನಾನುಭವದ ಸುಂದರ ಕಾವ್ಯ- ಸಂಘರ್ಷ- ಆದರ್ಶಗಳ ಸಂಗಮವಾಗಿದೆ'.೧

ಏನೇ ಆಗಲಿ ವಚನ ರಚನೆ ಬಸವಾದಿ ಶರಣರಿಗಿಂತ ಪೂರ್ವದಲ್ಲಿ ಶಂಕರ ದಾಸಿಮಯ್ಯ, ಢಕ್ಕೆಯ ಮಾರಯ್ಯ, ಜೇಡರ ದಾಸಿಮಯ್ಯರಿಂದ ಆರಂಭವಾಗಿದ್ದರೂ ಅದು ತನ್ನ ಸಾರ್ಥಕ್ಯ ಪಡೆದದ್ದು ಕ್ರಿ. ಶ. ೧೨ನೇ ಶತಮಾನದಲ್ಲಿ ಮಾತ್ರವಾಗಿದೆ. ಈ ಶತಕದಲ್ಲಿ ಅಗಣಿತವಾಗಿ ಬೆಳೆದು ಬಂದಿದ್ದ ಮುಂದೆ ಕಲ್ಯಾಣ ಕ್ರಾಂತಿಯಿಂದಾಗಿ ಮುದುಡಿಹೋಯಿತಾದರೂ ಅದು ಚದುರಿದ್ದನ್ನು ಕಾಣಬಹುದು. ವಚನ ಪ್ರಕಾರ ಶರಣ ಸಾಹಿತ್ಯದಲ್ಲಿ ಮೂಡಿಬರಬೇಕಾದರೆ ಹಲವು ಶರತ್ತುಗಳೇ ಬೇಕಾಯಿತು.

ವಚನದ ಆಶಯಗಳೇ ಬೇರೊಂದು ರೂಪ - ಉಪರೂಪಗಳಾಗಿ ಬಂದರೂ ಸ್ವತಂತ್ರ ವಚನಗಳ ರಚನೆಯಾಗಿದ್ದು ಮತ್ತೇ ತೋಂಟದ ಸಿದ್ಧಲಿಂಗಯತಿಗಳು - ಅವರ ಶಿಷ್ಯರು, ಸರ್ವಜ್ಞ, ಷಣ್ಮುಖ ಶಿವಯೋಗಿ, ಹೇಮಗಲ್ಲ ಹಂಪರಲ್ಲಿ ಎಂಬುದು ನಮಗೆ ತಿಳಿಯುತ್ತದೆ.

ಆನಂತರದಲ್ಲಿ ಆಧುನಿಕ ಪರಂಪರೆಯವರ ಹಲವಾರು ನುಡಿಗಳೇ ಇಂದು ವಚನವೆಂದು ಕರೆಯಿಸಿಕೊಳ್ಳುತ್ತಿವೆಯಾದರೂ ಅವು ಹಿಂದಿನ ವಚನದ ಗಟ್ಟಿತನವನ್ನು ತಾಳಿಲ್ಲವೆಂಬುದು ಕಂಡುಬರುವುದು ಸಹಜವಾಗಿದೆ. ಏಕೆಂದರೆ ಕಾಲ-ಪರಿಸರ ಬದಲಾಗಿದೆ. ಹಾಗಾಗಿ ವಚನ ರಚನೆಯೂ ಬದಲಾಗಿದೆ. ಪ್ರಸ್ತುತಶರಣ ಸಾಹಿತ್ಯದ ಪ್ರಮುಖ ಪ್ರಕಾರವಾಗಿ ವಚನ ಪ್ರಕಾರ ಮುನ್ನಡೆಯುತ್ತಿದೆಂಬುದನ್ನು ಕಾಣಬಹುದಾಗಿದೆ.

ಸ್ವರ ವಚನ ಮತ್ತು ತತ್ವ ಪದಗಳು :- ಶರಣ ಸಾಹಿತ್ಯ ಸಂದರ್ಭದಲ್ಲಿ ಕಂಡು ಬರುವ ಅಪೂರ್ವ ಪ್ರಕಾರ -ರೂಪವಾಗಿದೆ. ಸ್ವರ ವಚನಗಳು ವಚನಗಳಿಗಿಂತ ಭಿನ್ನವೆಂದು ಸ್ಪಷ್ಟವಾಗಿಯೇ ಗೋಚರಿಸುತ್ತದೆ. ಹಾಗೆಯೇ ಸ್ವರ ವಚನಗಳೆಲ್ಲ ತತ್ವ ಪದಗಳಲ್ಲವೆಂಬುದನ್ನು ನಾವು ಲಕ್ಷ್ಯದಲ್ಲಿಡಬೇಕು.

ಸ್ವರ ವಚನ ಗಳು - ವಚನಗಳಿಗಿಂತ ಭಿನ್ನವಾಗಿದ್ದರೂ ಅವುಗಳ ಹಿಂದಿರುವ ತುಡಿತಗಳೇನು ಬದಲಾಗಿಲ್ಲ. ನಿರೂಪಣಾ ವಿಧಾನ ವಸ್ತುವಿನ ಆಯ್ಕೆಯಲ್ಲಿ ವ್ಯತ್ಯಾಸ ಗುರುತಿಸಬಹುದಾಗಿದೆ.

ಬಾಹ್ಯ ಸ್ವರೂಪವನ್ನು ಅವಲೋಕಿಸಿದಾಗ ವಚನಗಳಲ್ಲಿ ಪಾದಗಳ ಮಿತಿ, ಛಂದಸ್ಸಿನ ಬಂಧದ ಬಗ್ಗೆ ತಲೆ ಕೆಡಿಸಿಕೊಳ್ಳುವ ಪ್ರಮೇಯವೆ ಇಲ್ಲ. ಆದರೆ ಇದೇ ಮಾತನ್ನು ಸ್ವರ ವಚನಗಳಿಗೆ ಹೇಳಲಾಗದು. ಸ್ವರ ವಚನಗಳು ಮುಖ್ಯವಾಗಿ 'ಇಹ' ದ ಬದುಕಿಗಿಂತ 'ಪರ' ದ ಬದುಕಿಗೆ ವಿಶೇಷವಾದ ಪ್ರಾಶಸ್ತ್ಯ ನೀಡಿವೆ. ಲೌಕಿಕದ ಘಟನೆಗಳನ್ನೇ ಬಳಸಿಕೊಂಡರೂ ಅದನ್ನು ಅಲೌಕಿಕದ ದೃಷ್ಟಿಯಿಂದ ನೋಡುವುದೇ ಸ್ವರ ವಚನಗಳಲ್ಲಿ ಮುಖ್ಯವಾಗಿ ಕಂಡು ಬರುತ್ತದೆ.

ಯಾವುದೇ ಸ್ವರ ವಚನ ಗಮನಿಸಿದಾಗ ಚೌಪದಿ, ಷಟ್ಪದಿಗಳ ಸ್ವರೂಪ ಕಂಡುಬರುತ್ತದೆ. ಹಾಗೆಯೇ ರಾಗ ಪರಿಕಲ್ಪನೆ ಯಿದೆ. ತಾಳಗಳ ಬಗ್ಗೆಯೂ ಸೂಚಿಸಲಾಗಿದೆ. ಪಲ್ಲವಿ ಬಹುಮುಖ್ಯವಾಗುತ್ತದೆ. ಇದು ಆಶಯವನ್ನು ಪ್ರತಿಬಿಂಬಿಸುವಷ್ಟು ಮುಖ್ಯವಾಗಿರುತ್ತದೆ.

ಆದಿಪ್ರಾಸ ಪ್ರತಿಪಾದದಲ್ಲಿ ಕಂಡು ಬರುವ ಜೊತೆಗೆ ಅಂತ್ಯಪ್ರಾಸ ಅಲ್ಲಲ್ಲಿ ಅನುಪ್ರಾಸವು ಕಂಡು ಬರುತ್ತದೆ.

ವಚನಗಳಲ್ಲಿ ಮಾನವನ ವಿವಿಧ ಮುಖಗಳನ್ನು ಅತ್ಯಂತ ವಾಸ್ತವಿಕ ನೆಲೆಯಲ್ಲಿ ತೆರೆದಿಡಲಾಗಿದೆ. ಹಾಗೆಯೇ ಅದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ಸ್ವಾನುಭಾವದ ಜೊತೆಗೆ ಅನುಭಾವದ ಪರಿಕಲ್ಪನೆ ಮೂಡಿಸುವ ಜವಾಬ್ದಾರಿಯನ್ನು ವಚನಗಳು ನಿರ್ಮಿಸಿಕೊಡುತ್ತವೆ. ಜನಪರ ಕಾಳಜಿಗಳನ್ನು ಬಹುತರವಾಗಿ ವಚನಗಳಲ್ಲಿ ಕಾಣುತ್ತೇವೆ.

ಆದರೆ ಸ್ವರ ವಚನಗಳಲ್ಲಿ ಸಮಾಜ ಮೂಲ ನೆಲೆಗೆ ಚಿಂತಿಸದ ಸ್ವರ ವಚನ ಕಾರರು ಅದನ್ನು ಪರಮಾತ್ಮನೆಡೆಗೆ ಸಂಪೂರ್ಣ ತಿರುಗಿಸಿ ಆನೆಲೆಯಲ್ಲಿ ತಮ್ಮ ಆಲೋಚನೆ ಹರಿಬಿಟ್ಟು ಎಲ್ಲರನ್ನು ಈ ಜಗತ್ತಿನ ಬೇರೊಂದು ಲೋಕಕ್ಕೆ ಕರೆದುಕೊಂಡು ಹೋಗುವ ಅಂತಿಮ ಸತ್ಯದ ಕಡೆಗೆ ಅವರ ನೋಟ ಕೇಂದ್ರಿಕೃತವಾಗಿದೆ. ಆತ್ಮ-ಪರಮಾತ್ಮ ಗಳೆರಡು ಒಂದಾಗಿ ಜೀವಾತ್ಮ ಅಳಿಸಿ ಹೊಗಬೇಕೆಂಬ ಮಹತ್ವಾಕಾಂಕ್ಷೆ ಸ್ವರ ವಚನಗಳ ತುಂಬೆಲ್ಲ ಕಾಣುತ್ತವೆ.

---

೧ : ನಾಹೀರಾ-ಕ.ಸಾ.ಸಂ.(ಅಪ್ರಕಟಿತ ಹಸ್ತಪ್ರತಿ)

ಕಲ್ಯಾಣ ಶರಣರ ಸಂದರ್ಭದಲ್ಲಿಯೇ ಸ್ವರ ವಚನಗಳು ಗಣನೀಯ ಪ್ರಮಾಣದಲ್ಲಿ ಕಂಡು ಬರುತ್ತದೆ.

ವಚನಗಳ ಮೂಲಕ ಸಮಾಜ, ವ್ಯಕ್ತಿ, ಪರಿಸರ, ಸಂಸ್ಕೃತಿಗಳ ಮೂಲಕ ಲೋಕೋದ್ಧಾರಕ್ಕೆ ತೊಡಗಿಸಿಕೊಂಡ ಶರಣರಿಗೆ ಆತ್ಮೋದ್ಧಾರದ ಹಂಬಲವೂ , ತುಡಿತವೂ ಅಷ್ಟೇ ಮುಖ್ಯವಾಗಿತ್ತು . ಆ ಹಿನ್ನೆಲೆಯಲ್ಲಿ ಆ ತುಡಿತದ ತುಮುಲದ ಪರಿಣಾಮವಾಗಿಯೇ ಅಪರಿಮಿತ ಆನಂದದ ಸುಖದ ಕಡೆಗೆ ತಮ್ಮ ಗಮನ ಕೇಂದ್ರಿಕರಿಸಿ ಇಂತಹ ಸ್ವರ ವಚನಗಳನ್ನು ತಮಗೆ ತಾವೇ ಹಾಡಿಕೊಂಡದುಂಟು. ಹೀಗೆ ವೈಯಕ್ತಿಕವಾಗಿ ತಮಗೆ ತಾವೇ ನಿವೇದಿಸಿಕೊಂಡಾಗ ಅಲ್ಲಿ ಅವರು ಈ ಲೋಕವನ್ನೇ ಮರೆತರು . ಬೇರೊಂದು ಲೋಕವನ್ನೇ ತಮ್ಮೆದುರಿಗೆ ಕಂಡು ಕೊಂಡರು. ಹಾಗಾಗಿ ಇಂತಹ ಅವರ ರಚನೆಗಳಲ್ಲಿ ವಚನಗಳಿಗಿಂತ ಭಿನ್ನವಾದ ಭಾಷೆ-ನಿರೂಪಣಾ ಶೈಲಿ, ಅಭಿವ್ಯಕ್ತಿಯಾಗಿ ಸಾಂಕೇತಿಕತೆ ನೆಲೆಗೊಂಡಿತು. ವಚನದಷ್ಟು ಸುಲಲಿತವಾಗಿ ಸ್ವರ ವಚನ ಮೂಡದೇ ಹೋಯಿತು.

ಆದರೆ ಕಾಲಕ್ರಮೇಣ ಸ್ವರ ವಚನದ ಮೇಲೆ ಜನಪದರ ಪ್ರಭಾವದ ಪರಿಣಾಮವಾಗಿಯೇ ಅದು ಮುಂದೆ ಅತ್ಯಂತ ಸರಳೀಕರಣಗೊಂಡು ಜನಪದರ ಲೌಕಿಕ ಸಂಗತಿಗಳನ್ನೇ ಅಲೌಕಿಕದೆಡೆಗೆ ತಿರುಗಿಸಿತು.

ಕೋಲಾಟ ಪದಗಳು , ಲಾವಣಿಗಳು, ಹಂತಿ ಪದಗಳು ಸ್ವರ ವಚನಕಾರರ ಮೇಲೆ ಪ್ರಭಾವ ಬೀರಿದವು. ಹಾಗಾಗಿ ಸ್ವರ ವಚನಗಳು ಜಾನಪದೀಯ ಗೇಯ ಸ್ವರೂಪವನ್ನು ಪಡೆಯಲು ಇದು ಬಹಳ ಮುಖ್ಯವಾಗಿದೆ. ಈ ಸ್ವರವಚನ ಪರಂಪರೆ ಸಕಲೇಶ ಮಾದರಸ, ಅಲ್ಲಮ ಪ್ರಭು, ಅಕ್ಕಮಹಾದೇವಿ, ಒಟ್ಟಾರೆ ಹನ್ನೆರಡನೆಯ ಶತಕದಲ್ಲಿ ಮೂಡಿಬಂದಿತೆನ್ನಬಹುದಾಗಿದೆ.

ಸ್ವರ ವಚನದ ಕಾಠಿಣ್ಯವನ್ನು ಮನಗಂಡು ಅದನ್ನು ಅತ್ಯಂತ ಗಾಢವಾಗಿ ಅಧ್ಯಯನಿಸುವ ಜೊತೆಗೆ ಜನಪದರ ಭಾವಗಳನ್ನು ಅರಿತು ಕೊಂಡು ಸ್ವರ ವಚನದ ಆಶಯಗಳನ್ನೇ ಅವಲಂಬಿಸಿದರೂ ಅವುಗಳಿಗಿಂತ ಭಿನ್ನವಾದ ರಚನೆಗಳನ್ನು ನಿಜಗುಣ ಶಿವಯೋಗಿ, ಸರ್ಪಭೂಷಣ ಶಿವಯೋಗಿ ಮುಪ್ಪಿನ ಷಡಕ್ಷರಿ ಯಂತವರು ಮಾಡಿದ ಕಾರಣ ಸ್ವರ ವಚನ ಪರಂಪರೆ ಹೊಸ ಹಾದಿಯೊಂದಕ್ಕೆ ದಾರಿಯಾಯಿತು.

ಇವರ ನಂತರ ಬಂದವರು ಘನಮಠ ನಾಗಭೂಷಣ ಶರಣರು , ನೀರಲಕೇರಿ ಬಸವಲಿಂಗ ಶರಣರು , ಕೂಡಲೂರು ಬಸವಲಿಂಗ ಶರಣರು, ರಾಮಪುರದ ಬಕ್ಕಪ್ಪ ಮುಂತಾದವರು ಮತ್ತಷ್ಟು ಸರಳಗೊಳಿಸಿ ಭಾಷೆಯನ್ನು ಆಡುಭಾಷೆಯಾಗಿ ಪರಿವರ್ತಿಸಿ ತತ್ವವನ್ನೇ ಪ್ರಮುಖ ಆಶಯವಾಗಿಟ್ಟುಕೊಂಡು ತಮ್ಮ ರಚನೆಗಳನ್ನು ಮಾಡಿದ ಕಾರಣವಾಗಿಯೇ ಮುಂದೆ 'ತತ್ವಪದ' ಎಂಬ ಹೊಸ ರೂಪವೊಂದು ಶರಣ ಸಾಹಿತ್ಯ ಸಂದರ್ಭದಲ್ಲಿ ಮೂಡಿಬಂದಿತೆನ್ನಲಾಗಿದೆ.

ಜನಪದೀಯ ಅಂಶಗಳೇ ಇಲ್ಲಿ ಪ್ರಧಾನವಾಗಿ ಮೂಡಿ ಬಂದ ಪರಿಣಾಮವಾಗಿಯೇ 'ತತ್ವಪದ'ಗಳು ಎಂಬ ಹೊಸರೂಪವೊಂದು ಸೃಷ್ಟಿಯಾಯಿತೆನ್ನಬಹುದು.

ಸ್ವರ ವಚನಗಳ ರೂಪ-ಬಂಧತೆ ತತ್ವ ಪದದಲ್ಲಿ ಕಾಣಲಾಗುವುದಿಲ್ಲ . ತತ್ವಪದಗಳು ತತ್ವದ ಹಿನ್ನೆಲೆಯಲ್ಲಿಯೇ ರಚಿತವಾದವು ಅಂತೆಯೇ ಅವು ಸಂಗೀತಗಾರನ ಇಚ್ಛೆಗೊಳಪಟ್ಟವು. ಆಶುಕವಿತ್ವ ಪಡೆದುಕೊಂಡವು ಗ್ರಾಂಥಿಕತೆ ಅವುಗಳಿಗೆ ಮುಖ್ಯವಾಗಲಿಲ್ಲ.

ಈ ಕುರಿತು ಬಿ.ಮಹಾದೇವಪ್ಪನವರು 'ತತ್ವಪದಕಾರರಲ್ಲಿ ಲಿಂಗವಂತರನ್ನು ಕಾಣುವುದಲ್ಲದೇ ಲಿಂಗವಂತ ಸಂಸ್ಕೃತಿಯ ಕಬ್ಬಲಿಗರನ್ನು , ಕುರುಬರನ್ನು , ಮುಸಲ್ಮಾನರನ್ನೂ , ಬೇಡರನ್ನೂ , ವಿಶ್ವಕರ್ಮ, ಬ್ರಾಹ್ಮಣರನ್ನೂ ಕೂಡ ಕಾಣಬಹುದಾಗಿದೆ. ತತ್ವ ಪದಗಳು ಗ್ರಾಮದ ಜನರನ್ನು ಜಾತ್ಯಾತೀತವಾಗಿ ಬಂದಿಸಿ ಭಾತೃಭಾವವನ್ನು ಮೂಡಿಸುವಲ್ಲಿ ಕೃತ್ಯ ಕೃತ್ಯವಾಗಿವೆ.

ತತ್ವ ಪದಗಳು ಸ್ವರವಚನಗಳಿಂದ ದೂರವಾಗಿ ಪ್ರತ್ಯೇಕ ಸ್ವರೂಪದಲ್ಲಿ ಬೆಳೆಯಲು ಈ ಸಾರ್ವತ್ರಿಕತೆ ಮತ್ತು ಧರ್ಮ ಕಟ್ಟಳೆಗಳ ಭಗ್ನವೇ ಮುಖ್ಯ ಕಾರಣವಾಗಿರಬೇಕು. ಅಲ್ಲದೇ ತತ್ವ ಪದಗಳು ಸ್ವರ ವಚನಗಳಂತೆ ತಾಳೋಲೆಗಳ ಮೇಲೆ ಹುಟ್ಟಿದವುಗಳಲ್ಲ. ಕೈಲಾಸಂರ ನಾಟಕಗಳ ಸಂಭಾಷಣೆಯಂತೆ ಕುಳಿತಲ್ಲಿ , ನಿಂತಲ್ಲಿ , ಹೋದಲ್ಲಿ , ಬಂದಲ್ಲಿ ತಾನೇ ತಾನಾಗಿ ಸ್ಪುರಿಸಿದವುಗಳು'. ೧ ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವುದು ಬಹು ಸೂಕ್ತವಾಗಿದೆನ್ನಬಹುದಾಗಿದೆ.

ತತ್ವ ಪದಗಳಲ್ಲಿ ವಸ್ತು ಮತ್ತು ಹಾಡು ಎರಡು ಪ್ರಾಮುಖ್ಯತೆ ಪಡೆದವು . ತತ್ವವನ್ನು , ವಸ್ತುವನ್ನು ಚರ್ಚಿಸುವ ಗುಂಪು ಒಂದೆಡೆಯಾದರೆ ; ಅದೇ ತತ್ವಗಳನ್ನು ಹಾಡಾಗಿ ಪರಿವರ್ತಿಸುವ ಗುಂಪು ಮತ್ತೊಂದೆಡೆ ಮೂಡಿಬಂದು 'ಭಜನೆಯ ಪದಗಳು' ಎಂಬ ಪರಿಭಾಷೆ ಪಡೆದುಕೊಂಡವು.

ಪರವಸ್ತುವನ್ನು ಕಂಡುಕೊಳ್ಳುವ ಹಂಬಲದ ಆತುರದಲ್ಲಿ ನೈತಿಕತೆಯೂ ತತ್ವಪದಕಾರರಲ್ಲಿ ಮಾಯವಾಯಿತು. ಸ್ವರ ವಚನಕಾರರಲ್ಲಿದ್ದ ನೈತಿಕತೆ , ಬದ್ಧತೆ , ತತ್ವ ಪದಕಾರರಲ್ಲಿ ಮೂಡಿ ಬರಲಿಲ್ಲ. ತತ್ವಪದ ಕಾರರಲ್ಲಿ ಯಾವುದೇ ದೇವರು - ಧರ್ಮ ಮುಖ್ಯವಾಗದೇ ಅವರ ಮನೋಧೋರಣೆ ಮುಖ್ಯವಾಯಿತು. ಸಮನ್ವಯತೆಯ ಹೊಸ ಪರಿಕಲ್ಪನೆ ಮೂಡಿ ಬಂದಿತು. ಹಾಗಾಗಿ ತತ್ವ ಪದಕಾರರಲ್ಲಿ ಆತ್ಮದಷ್ಟೇ ಮುಖ್ಯವಾಗಿ ಶಿವ-ಶಕ್ತಿಗಳಲ್ಲದೇ ಹಲವಾರು ದೇವತೆಗಳ ಹೆಸರು ವಿವಿಧ ಆಚರಣೆಗಳು ಕಂಡುಬರುವುದು ಸಾಮಾನ್ಯವಾಯಿತು. ಆದರೂ ಸ್ವರವಚನಕಾರರಂತೆ ಇವರೂ ಸಹ ಅನುಭಾವದ ನೆಲೆಯಲ್ಲಿಯೇ ತಮ್ಮ ವಿಚಾರಗಳನ್ನು ಅಭಿವ್ಯಕ್ತಿಸಿದ್ದಾರೆಂಬುದು ಗಮನಿಸಬೇಕಾದ ಅಂಶವಾಗಿದೆ.

---

೧ : ಸಂ. ಟಿ.ಆರ್. ಮಹಾದೇವಯ್ಯ -ಶ.ತ.ಚಿಂ. ಪುಟ ೨೫೧-೫೨

ಮುಂದಿನ ಕಾಲಘಟ್ಟದಲ್ಲಿ ವಿದ್ವಾಂಸರ ವಲಯದಲ್ಲಿ ಸ್ವರವಚನ -ತತ್ವಪದಗಳ ಬಗ್ಗೆ ಬಹು ಚರ್ಚಿತವಾಗಿದ್ದಷ್ಟೇ ಅಲ್ಲದೇ ಅನೇಕ ಪರ್ಯಾಯ ನಾಮಗಳೆಂದು ತಿಳಿಸಿ ಇವುಗಳೊಂದಿಗೆ ಸಮೀಕರಿಸಿದರು. ಆದರೆ ನಾವು ಮುಖ್ಯವಾಗಿ ಸ್ವರ ವಚನ-ತತ್ವಪದಗಳನ್ನು ಅವುಗಳ ರಚನೆ ಕಾಲಘಟ್ಟದ ಸಂದರ್ಭಗಳನ್ನು ಸೂಕ್ಷ್ಮವಾಗಿ ಅಧ್ಯಯನಿಸಿದಾಗ ಇವೆರಡು ಭಿನ್ನವೆಂದು ನಮಗೆ ಕಂಡು ಬರುತ್ತದೆ. ಸ್ವರ ವಚನಗಳು ವಚನಗಳಿಗಿಂತ ಭಿನ್ನವಾಗಿ ಜಾನಪದದ ಅಂಶದ ಕಡೆಗೆ ಗಮನಹರಿಸಿದ ಪರಿಣಾಮವಾಗಿ ಅವುಗಳಲ್ಲಿ ತತ್ವದ -ಸಿದ್ಧಾಂತದ ಬಗ್ಗೆ ಸರಳೀಕರಣ ಆರಂಭವಾಯಿತು. ಆದರೆ ಇದು ಮುಂದೆ ಬಂದ ತತ್ವಪದಕಾರರಲ್ಲಿ ಪ್ರಮುಖವಾಗಿ ಬೆಳೆಯಿತು. ತತ್ವಪದಗಳ ಪರಂಪರೆಯ ಆರಂಭದಿಂದಾಗಿಯೇ ಕೊರವಂಜಿ ಹಾಡು, ಹಂತಿ ಪದ , ಜೋಗುಳ ಪದ, ಕಣಿ ಮೊದಲಾದ ಜಾನಪದ ಸಾಹಿತ್ಯ ರೂಪಗಳು ಸಾಹಿತ್ಯಿಕವಾಗಿ ತಮ್ಮ ಮನ್ನಣೆ ಗಳಿಸಿಕೊಂಡವು. ಇದರಿಂದಾಗಿ ಶಿಷ್ಟ - ಜನಪದ ಸಾಹಿತ್ಯದೊಡನೆ ಸಮನ್ವಯತೆ ಬೆಳೆಯಿತು. ಜೊತೆಗೆ ಆಕಾರಣದಿಂದಾಗಿಯೇ ವಚನ -ಸ್ವರವಚನಗಳಿಂತ ತತ್ವ ಪದಗಳು ಬಹು ಜನಪ್ರಿಯತೆ ಪಡೆದುಕೊಂಡವು.

ಇದುವರೆಗಿನ ವಿವೇಚನೆಯಿಂದ ನಮಗೆ ತಿಳಿದು ಬರುವುದೇನಂದರೆ ಶರಣ ಕಾಲದಲ್ಲಿ ರಚಿತವಾದವು ವಚನಗಳಿಗಿಂತ ಸ್ವರೂಪ-ವಿಷಯದಲ್ಲಿ ಭಿನ್ನವಾದ ಕಾರಣ ಅವುಗಳನ್ನು ಸ್ವರವಚನಗಳೆಂದು , ಅನಂತರ ತತ್ವವನ್ನೇ ಪ್ರಮುಖವಾಗಿರಿಸಿಕೊಂಡು ತಾವಿಟ್ಟುಕೊಂಡ ತತ್ವ ಸಮರ್ಥನೆಗಾಗಿ ಜೀವನಾನುಭವವನ್ನೇ ಕಟ್ಟಿಕೊಟ್ಟ ಹಾಡುಗಳಿಗೆ ತತ್ವ ಪದಗಳೆನ್ನಬಹುದು. ಸ್ವರವಚನಗಳ ಕಾಲ ೧೨ನೇಶತಕದಿಂದ ೧೭ ನೇ ಶತಕದವರೆಗೆ ಆದರೆ ತತ್ವ ಪದಗಳ ಕಾಲ ೧೮ ರಿಂದ ೧೯ ನೇ ಶತಕವೆಂದು ಲಕ್ಷ್ಯದಲ್ಲಿರಿಸಿಕೊಳ್ಳಬೇಕಾದದ್ದು ಅವಶ್ಯಕವಾಗಿದೆ.

ಸ್ವರ ವಚನಗಳನ್ನು ವೈಯಕ್ತಿಕ ಹಂಬಲದ ಬದುಕಿನಾಚೆಗೆ ಇರುವ ಅಂತಿಮ ಸತ್ಯಕ್ಕಾಗಿ ತಮಗೆ ತಾವೇ ಹಾಡಿಕೊಂಡ ಗೀತೆಗಳಾದರೆ ತತ್ವ ಪದಗಳು ಆತ್ಮದಷ್ಟೇ ಪ್ರಮುಖವಲ್ಲದಿದ್ದರೂ ಭಾಗಶಃ ಸಮಾಜವನ್ನು ವಿಮರ್ಶೆಮಾಡಿದವು. ಆತ್ಮ ಸಮ್ಮುಖ - ಜನಸಮ್ಮುಖ ವಿಚಾರಗಳೆರಡನ್ನು ತತ್ವ ಪದಕಾರರಲ್ಲಿ ಕಾಣುತ್ತೇವೆ. ಆಧ್ಯಾತ್ಮದ ಕಾಠಿಣ್ಯವನ್ನು ಸರಳವಾಗಿ ಅರ್ಥೈಸಲು ತತ್ವಪದಗಳು ಮಾಡಿದ ಕಾರ್ಯ ಬಹು ಮುಖ್ಯವಾಗಿದೆ. ಜೊತೆಗೆ ಇದು ಅವುಗಳ ವಿಶೇಷವು ಕೂಡ ಆಗಿದೆ.

ರಗಳೆ :-ಕನ್ನಡ ಸಾಹಿತ್ಯದ ಪ್ರಮುಖ ಪ್ರಕಾರವಾಗಿರುವ ರಗಳೆ ಶರಣ ಸಾಹಿತ್ಯದ ಪರಂಪರೆಯನ್ನು ವಿಶಿಷ್ಟವಾಗಿ ಬೆಳೆಸಿದೆ. ಹದಿಮೂರನೆಯ ಶತಕದಲ್ಲಿ ಬೆಳೆದ ಈ ಪ್ರಕಾರ ಹರಿಹರ-ರಾಘವಾಂಕಾದಿಗಳಲ್ಲಿ ವಿಶಿಷ್ಟವಾಗಿ ಬೆಳೆಯಿತಾದರೂ ಹರಿಹರನೊಬ್ಬನೇ ಇದರ ಅಧಿಕೃತ ಕಾರಣಕರ್ತನೆನ್ನಬಹುದಾಗಿದೆ. ಹಿಂದಿನ ಶರಣರ ಆಶಯಗಳನ್ನೇ ಅವರ ವೈಚಾರರಿಕತೆಯನ್ನೇ ರಗಳೆಯಲ್ಲಿ ಅಭಿವ್ಯಕ್ತಿಸಲು ಹರಿಹರತನ್ನ ರಗಳೆಗಳ ಉದ್ದಕ್ಕೂ ಪ್ರಯತ್ನಪಟ್ಟಿದ್ದನ್ನು ಕಾಣುತ್ತೇವೆ. ವಚನ ರಚನೆಯ ನಂತರ ಹರಿಹರ ವಚನಗಳನ್ನೇ ಆಧರಿಸಿ ಆ ಹಿನ್ನೆಲೆಯಲ್ಲಿ ಜನಪದದ ಸಮಗ್ರ ಬದುಕಿನ ದೃಷ್ಟಿಕೋನವನ್ನು ಅವಲೋಕಿಸಿಕೊಂಡು ಸಾಹಿತ್ಯದ ಹೊಸಹಾದಿಯೊಂದನ್ನು ಕಂಡುಕೊಂಡನು. ಹಿಂದಿನ ಎಲ್ಲಾ ಕಾವ್ಯ, ವಸ್ತು, ಭಾಷೆ, ಶೈಲಿ, ತಂತ್ರ ಗಳನ್ನು ಕೈ ಬಿಟ್ಟು ಆ ದಾರಿಯಲ್ಲಿ ನೂತನ ಮಾರ್ಗವೊಂದನ್ನು ನಿರ್ಮಿಸಿ ಮಾರ್ಗಪ್ರವರ್ತಕನಾದನು. ಹಿಂದಿನ ಚಂಪೂ ಕವಿಗಳಿಗಿಂತ ಭಿನ್ನವಾದ ತಂತ್ರ , ವಚನಕಾರರ ವಚನಗಳ ರೂಪಕ್ಕಿಂತ ಭಿನ್ನವಾದ ರಗಳೆಯನ್ನು ಹರಿಹರತನ್ನ ಮಣ್ಣಿನ ನೆಲದಲ್ಲಿಯೇ ಕಂಡು ಕೊಂಡನು.

ಜನಪದರ ಬದುಕಿನ ಸಾಹಿತ್ಯದಲ್ಲಿಯೇ ಈ ಮೊದಲೇ ಅಂತರ್ಗತವಾಗಿದ್ದಂತಹ ಪಂಪಾದಿ ಕವಿಗಳಲ್ಲಿ ಬರೀ 'ಛಂದೋ ಬಂಧ ' ವಾಗಿದ್ದಂತಹ ರಗಳೆ ಅಲ್ಲಲ್ಲಿ ಕಂಡುಬಂದು ಮುಂದೆ ಹರಿಹರನ ಕಾಲಕ್ಕೆ ಕಾವ್ಯ ಪ್ರಕಾರ ವಾಗುವಷ್ಟರ ಮಟ್ಟಿಗೆ ಬೆಳೆದು ಶರಣ ಸಾಹಿತ್ಯದಲ್ಲಿ ಹೊಸ ದಿಕ್ಕನ್ನೇ ಮೂಡಿಸಿತು. ಜೊತೆಗೆ ಹಲವು ಪ್ರಕಾರಗಳಲ್ಲಿ ಶರಣ ಸಾಹಿತ್ಯವನ್ನು ಅಭಿವ್ಯಕ್ತಿಸಲು ಸಾಧ್ಯವೆಂಬುದನ್ನು ಪ್ರಾಯೋಗಿಕವಾಗಿ ತೋರಿಸಿಕೊಟ್ಟಂತಾಯಿತು. ಹೀಗಾಗಿ ಹರಿಹರ ಕವಿ ಮಾತ್ರವಾಗದೇ ಶರಣ ಕವಿಯಾಗಿ ಮುಂದೇ ಆತನೊಬ್ಬ ಶರಣನಾಗಿ ಕಾವ್ಯವೊಂದಕ್ಕೆ ವಸ್ತುವಾಗುವಷ್ಟರ ಮಟ್ಟಿಗೆ ಬೆಳೆದು ನಿಂತನು. ರಗಳೆಗೆ ಎರಡು ಪಾದ ಶ್ರೇಣಿ ಬಳಸಿದನು. ಎಲ್ಲಾ ಶರಣರ ಚಿತ್ರಗಳನ್ನು ಸುಲಲಿತವಾಗಿ ಹರಿಹರ ಕಟ್ಟಿಕೊಡುತ್ತಾನೆ.

ಈ ಕಾರಣದಿಂದಾಗಿಯೇ ಭಕ್ತಿ ಹರಿಹರನಲ್ಲಿ ಪ್ರಾಮುಖ್ಯತೆ ಪಡೆದರೂ ಆ ಭಕ್ತಿಯ ನೆಲೆಯಲ್ಲಿಯೇ ಉದ್ವೇಗ , ಕಳವಳ, ಭವ್ಯತೆ, ರೋಮಾಂಚಕತೆಗಳನ್ನು ಸರಳವಾಗಿ ಅರ್ಥೈಸಿ ಅಭಿವ್ಯಕ್ತಿಸುತ್ತಾನೆ. ಚರಿತ್ರೆ ಮತ್ತು ಪುರಾಣಗಳನ್ನು ಸಮನ್ವಯಗೊಳಿಸುವ ವಿಶಿಷ್ಟ ತಂತ್ರವೊಂದನ್ನು ನಿರ್ಮಿಸುತ್ತಾನೆ. ಈ ಕಾರಣದಿಂದಾಗಿ ಆತನ ರಗಳೆ ಸ್ಥಗಿತವಾಗದೆ ಆಧುನಿಕದವರೆಗೆ ಚಲನಶೀಲವಾಗಿ ಬೆಳೆದು ಬರಲು ಸಾಧ್ಯವಾಯಿತು. ಅಂತೆಯೇ ಶರಣಸಾಹಿತ್ಯ ಬಹು ಪ್ರಚುರವಾಗಿ ಮುನ್ನಡೆಯಲು ಕಾರಣೀಭೂತವಾಯಿತು.

ಹರಿಹರನನ್ನು ಹೊರತು ಪಡಿಸಿ ಆಸಂದರ್ಭದಲ್ಲಿ ಇತರರ ರಗಳೆಗಳು ನಮಗೆ ಉಪಲಬ್ದವಾಗದ ಕಾರಣ ಆ ಕುರಿತು ಏನನ್ನು ಹೇಳಲಾಗದು . ಆದರೂ ರಗಳೆ ಮಾತ್ರ ಶರಣ ಸಾಹಿತ್ಯ ಸಂದರ್ಭದಲ್ಲಿ ಪ್ರಮುಖ ರೂಪವಾಗಿ ಮುನ್ನಡೆಯಿತು. ರಗಳೆಗಳಲ್ಲಿ ಹಿಂದಿನ ಶರಣರ ಆಶಯ - ಧೋರಣೆಗಳು ಸ್ಪಷ್ಟವಾಗಿ ಅಭಿವ್ಯಕ್ತವಾಗಿದ್ದನ್ನು ಕಾಣಬಹುದಾಗಿದೆ. ಹಾಗಾಗಿ ಕೆಲವು ಕಡೆ ವಚನಗಳ ಸಾರ ಕೆಲವೊಮ್ಮೆ ನೇರವಾಗಿ ವಚನಗಳನ್ನೇ ಬಳಸಿಕೊಂಡು ಅವುಗಳನ್ನು ಪಾದಗಳನ್ನಾಗಿಸಿ ರಗಳೆಗೆ ಹೊಂದಿಸಿಕೊಂಡದ್ದು ಹರಿಹರನ ಕೃತಿಗಳಲ್ಲಿ ಕಂಡು ಬರುತ್ತದೆ.

ಭಕ್ತಿಯ ಆವೇಶ, ಏಕದೇವತಾ ನಿಷ್ಠೆ, ಸಮಾಜ ವಿಮರ್ಶೆ, ಧರ್ಮದ ತಿರುಳನ್ನು ಆತ ವಾಸ್ತವಿಕವಾಗಿ ಚಿತ್ರಿಸಿದ್ದನ್ನು ನೋಡಿದರೆ ಆತ ಶರಣ ಸಾಹಿತ್ಯವನ್ನೇ ಮುಂದುವರಿಸಿದ್ದಾನೆನ್ನಲು ಅಡ್ಡಿಯೆನಿಲ್ಲ. ಹಾಗಾಗಿ ಹರಿಹರನನ್ನು ಶರಣ ಸಾಹಿತ್ಯದ ಒಂದು ಭಾಗವಾಗಿ ಗಮನಿಸಬೇಕೆ ಹೊರತು ಆತನನ್ನು ಬೇರೆ ರೀತಿಯಾಗಿ ಗಮನಿಸುವುದು ಸರಿಯಲ್ಲವಾಗಿದೆ. ರಗಳೆ ಮೂಲಕ ಶರಣ ಚರಿತ್ರೆ ಬೆಳೆಸಿದ ಮಾರ್ಗ ಪ್ರವರ್ತಕ ಹರಿಹರನಾಗಿದ್ದಾನೆ. ಇಂದಿನ ದಿನ ಶರಣ ಸಾಹಿತ್ಯದ ಪ್ರಮುಖ ಚರಿತ್ರೆಕಾರರಿಗೆ ರಗಳೆಗಳೇಆಧಾರಗಳಾಗಿವೆ.

ಡಾ: ಎಂ.ಎಂ. ಕಲಬುರ್ಗಿಯವರು ಹೇಳುವ ' ರಗಳೆಯೆನ್ನುವುದು ಕಟ್ಟಿ ಮುಗಿಸಿದ ಕೃತಿಯಲ್ಲ, ಎಲ್ಲಿ ಬೇಕೆಂದರಲ್ಲಿ ಹೊಸ ಚರಣಗಳನ್ನು ಸೇರಿಸಿ ರೈಲು ಬೋಗಿಗಳಂತೆ ಬೆಳಸಬಹುದಾದ ಮುಕ್ತತೆ ಅದರ ಗುಣವಾಗಿದೆ. ಈ ಗುಣದಿಂದಾಗಿಯೇ ಹರಿಹರನ ರಗಳೆ ೨೦ನೇ ಶತಮಾನದಲ್ಲಿ ಸರಳ ರಗಳೆಯಾಗಿ ಮಹಾ ಛಂದಸ್ಸಾಗಿ ಮೈಮುರಿಯುತ್ತಾ ಬಂದಿತು. ಅಂದರೆ ಚಂಪೂ, ಷಟ್ಪದಿ ಮೊದಲಾದ ಸಾಹಿತ್ಯ ಪ್ರಕಾರಗಳು ಒಂದು ಕಾಲಘಟ್ಟದಲ್ಲಿ ನಿಂತು ಕೊಂಡ ಬಿಟ್ಟರೂ ವಚನದಂತೆ ರಗಳೆ ಸಾಹಿತ್ಯ ಕ್ಷೇತ್ರದಲ್ಲಿ ಇಂದಿಗೂ ದುಡಿಯುತ್ತಿರುವುದಕ್ಕೆ ಅದರ ಮುಕ್ತ ರಚನೆಯೇ ಕಾರಣವಾಗಿದೆ.'೧ ಎಂಬ ವಿಚಾರಗಳು ಬಹು ಸೂಕ್ತವಾಗಿವೆ. ರಗಳೆಗಳ ಅಭಿವ್ಯಕ್ತಿ ತಂತ್ರ, ಕೃತಿ ಶಿಲ್ಪದಲ್ಲಿ ಒಂದು ಕ್ರಮಬದ್ಧತೆ ಕಂಡು ಬರುವ ಕಾರಣದಿಂದಲೇ ರಗಳೆಗಳು ವಿಶಿಷ್ಟ ಪ್ರಕಾರಗಳಾಗಿ ನಮ್ಮ ಗಮನ ಸೆಳೆಯತ್ತಿವೆ.

ಇಷ್ಟಾದರೂ ರಗಳೆ ಮೂಲ ಶರಣ ಸಾಹಿತ್ಯ ಆಶಯ- ಧೋರಣೆಗಳಿಗೆ ಕೆಲ ಸಂದರ್ಭಗಳಲ್ಲಿ ಭಿನ್ನವಾಗಿ ನಿಲ್ಲುತ್ತದೆ. ಶರಣರು ನಂಬದ ಕೈಲಾಸವನ್ನು ರಗಳೆಗಳು ಚಿತ್ರಿಸುತ್ತವೆ. ಹೀಗಾಗಿ ರಗಳೆಗಳಲ್ಲಿ ಶರಣರು ಶಾಪ ಹೊಂದಿದ ಶಿವಗಣಗಳಾಗಿ ಧರೆಗೆ ಬಂದು ಪುನಃ ಕೈಲಾಸಕ್ಕೆ ಹೋಗುವ ಪ್ರಸಂಗವನ್ನು ನಿರೂಪಿಸಲಾಗಿದೆ. ಅಂದಿನ ಸನ್ನಿವೇಶ ವೈದಿಕ ಕಾವ್ಯಗಳೊಡನೆ ಪೈಪೋಟಿಯಿಂದಾಗಿಯೇ ಹರಿಹರ ಈ ರೀತಿ ಕೃತಿ ರಚನೆಗೆ ಕೈ ಹಾಕಿರಬಹುದೆನಿಸುತ್ತದೆ. ಆದರೂ ಸಹಿತ ಆತನ ರಗಳೆಯ ಅಂತರಾಳದಲ್ಲಿ ಶರಣರ ವಾಸ್ತವಿಕ ಚಿತ್ರಗಳಿವೆ ; ಆ ವಚನಗಳ ಆಳ ಅಧ್ಯಯನವಿದೆ ಎಂಬುದನ್ನು ಅಲಕ್ಷಿಸಲಾಗದೆನಿಸುತ್ತದೆ.

ಷಟ್ಪದಿ :-ಮೂಲತಃ ವಿಷಯ ಜಾತಿಗಳಲ್ಲೊಂದಾದ ದೇಶಿಯ ಛಂದಸ್ಸಿನ ಬಂಧವಾಗಿದ್ದ ಷಟ್ಪದಿ ಅಂಶಗಣದಿಂದ ಮಾತ್ರಾಗಣಕ್ಕೆ ಬದಲಾಗಿದುದ್ದು ೧೨ನೇ ಶತಮಾನದಲ್ಲಿ ಎಂಬುದು ಗಮನಾರ್ಹ ಸಂಗತಿಯಾಗಿದೆ.

ಶರಣರ ವಚನಗಳಲ್ಲಿ ಮೆಲ್ನೋಟಕ್ಕೆ ಆರು ಸಾಲುಗಳು ಬಹುತೇಕ ಕಂಡು ಬಂದರೂ ಯಾವುದಕ್ಕೆ ಕಟ್ಟು ಬೀಳದ ಶರಣರು ಪ್ರಕಾರಕ್ಕಿಂತ ಜನಭಾಷೆಗೆ ಗಮನ ನೀಡಿದ ಕಾರಣ ಅದು ಅಷ್ಟು ಖಚಿತವಾಗಿ ಮೂಡಿ ಬರಲಿಲ್ಲವೆನ್ನಬಹುದಾಗಿದೆ. ಆದರೆ ರಾಘವಾಂಕನ ಕಾಲಕ್ಕೆ ಸಾಹಿತ್ಯ ಪ್ರಕಾರಗಳ ಪ್ರಚುರತೆ, ವಸ್ತುವಿನ ವೈವಿಧ್ಯತೆ, ಕಥನ ತಂತ್ರಗಳ ಮಾದರಿಯ ಬಗ್ಗೆ ಸಾಕಷ್ಟು ಚರ್ಚೆ ನಡೆದಿತ್ತು. ಹಾಗಾಗಿ ರಾಘವಾಂಕ ತನ್ನ ಕಾವ್ಯಕ್ಕೆ ಸರಿಯಾಗಬಲ್ಲುದು ಷಟ್ಪದಿ ಎಂದು ಮನಗಂಡು ಷಟ್ಪದಿಯ ಮೂಲಕ ಕಾವ್ಯಕ್ಕೆ ಕೈ ಹಾಕಿದ ಪರಿಣಾಮವಾಗಿಯೇ ಶರಣ ಸಾಹಿತ್ಯದ ರೂಪಗಳಲ್ಲಿ ಹೊಸ ಪರಂಪರೆಯೊಂದು ಆರಂಭವಾಯಿತು.

ರಾಘವಾಂಕ ಬಳಸಿದ ಷಟ್ಪದಿ ಮುಖ್ಯವಾಗಿ ವಾರ್ಧಕವಾದರೂ ಇತರ ಷಟ್ಪದಿಗಳನ್ನು ಬಳಸಿದ್ದಾನೆ. 'ಉದ್ದಂಡ ಷಟ್ಪದಿ'ಎಂಬ ಹೊಸ ಷಟ್ಪದಿಗೂ ಕಾರಣಕರ್ತನಾಗಿದ್ದಾನೆ. ಷಟ್ಪದಿಗೆ ನಾಟಕಿಯ ಗುಣವನ್ನು ತಂದುಕೊಟ್ಟು ಆ ಮೂಲಕ ಕವಿ ಶರಣರ ಧೋರಣೆಗಳನ್ನು ಅತ್ಯಂತ ಸೊಗಸಾಗಿ ಚಿತ್ರಿಸಿದ್ದಾನೆ. ಮುಂದೆ ಬಂದ ಚಾಮರಸ, ಭೀಮಕವಿಯಂತೂ ಶರಣ ಸಾಹಿತ್ಯವನ್ನು ಅತ್ಯಂತ ಸ್ಪಷ್ಟವಾಗಿ ಮುಂದುವರೆಯಲು ಕಾರಣಕರ್ತರಾದವರು. ಶರಣ ಸಾಹಿತ್ಯವನ್ನು ಷಟ್ಪದಿಯ ಮೂಲಕ ಬೆಳೆಸಿದರು. ಚಾಮರಸನಲ್ಲಿ ಶರಣ ಚರಿತ್ರೆ- ಸಾಹಿತ್ಯ ರೂಪವನ್ನು ಪಡೆದುಕೊಂಡಿತು. ಸಾಂಕೇತಿಕತೆಯ ಮೂಲಕ ಶರಣ ಸಾಹಿತ್ಯ ಪರಂಪರೆಯನ್ನು ಮುಂದುವರೆಸಿದನು. ವಿಶಿಷ್ಟ ಕಾವ್ಯ ಪ್ರಕಾರವನ್ನು ನೀಡಿ ಮುಂದಿನ ಅನೇಕರು ಆ ದಿಕ್ಕಿನಲ್ಲಿ ಆಲೋಚಿಸುವಂತಾಯಿತು. ಭೀಮಕವಿಯ 'ಬಸವಪುರಾಣ'ವಂತೂ ಮುಂದಿನ ಅನೇಕರಿಗೆ ಪ್ರೇರಕವಾಯಿತು. ಮುಂದಿನ ಕಾಲಘಟ್ಟದಲ್ಲಿ 'ಶೂನ್ಯ ಸಂಪಾದನೆ' ಮಾಡಿದ್ದ ಕಾರ್ಯವನ್ನು ಬಸವ ಪುರಾಣ ಮಾಡಿತ್ತು. ಬಸವಣ್ಣನವರನ್ನು ಅನೇಕರಿಗೆ ಪರಿಚಯಿಸಿ ಕೊಟ್ಟಿತ್ತು. ಶರಣ ವ್ಯಕ್ತಿತ್ವದ ಮಜಲುಗಳನ್ನು ಸಾಂಕೇತಿಕ ನೆಲೆಯಲ್ಲಿ ಪುರಾಣ ಚಿತ್ರಿಸಿದ್ದು ಕಂಡು ಬರುತ್ತದೆ. ಹೀಗಾಗಿ ಷಟ್ಪದಿಯು ಶರಣ ಸಾಹಿತ್ಯದ ಪ್ರಮುಖ ರೂಪವಾಗಿ -ಪ್ರಕಾರವಾಗಿ ಬೆಳೆದು ತನ್ನ ಸಾರ್ಥಕ್ಯ ಪಡೆದುಕೊಂಡಿತು.

ಮೇಲಿನ ಈ ಪ್ರಕಾರಗಳಲ್ಲದೇ ಶತಕ ಸಾಹಿತ್ಯ, ತ್ರಿಪದಿ, ಸಾಂಗತ್ಯಗಳು ಶರಣಸಾಹಿತ್ಯ ಪರಂಪರೆಯಲ್ಲಿ ಮೂಡಿಬಂದಿವೆ.

ಶತಕದಲ್ಲಿ ಹರಿಹರ -ನಿಜಗುಣರು ಕೃತಿ ರಚಿಸಿದರೇ, ತ್ರಿಪದಿಯನ್ನು ಸಾರ್ಥಕ್ಯ ಗೊಳಿಸಿದವರು ಸರ್ವಜ್ಞರಾಗಿದ್ದಾರೆ. ಶರಣ ಸಾಹಿತ್ಯ ಯಾವುದೇ ನಿರ್ದಿಷ್ಟ ಪ್ರಕಾರದಲ್ಲಿ ತನ್ನನ್ನು ಗುರುತಿಸಿಕೊಳ್ಳದಿದ್ದರು ಕಾಲ ಮಾನ ಸಂದರ್ಭದಲ್ಲಿ ಬೆಳೆದು ಬಂದ ಸಾಹಿತ್ಯಿಕ ಪರಿಸರವನ್ನು ತನ್ನ ಕಕ್ಷೆಗೆ ಒಳಪಡಿಸಿಕೊಂಡು ಆ ದಿಸೆಯಲ್ಲಿ ಕಾಲಕಾಲಕ್ಕೆ ಬಂದ ಅನೇಕ ಪ್ರಕಾರ -ರೂಪ-ಉಪರೂಪಗಳನ್ನು ಬಳಸಿಕೊಂಡು ಪರಂಪರೆಯನ್ನು ಚಲನಶೀಲವಾಗಿರಿಸಿತು. ಆಧುನಿಕ ಸಂದರ್ಭದ ಹಲವು ಪ್ರಕಾರಗಳನ್ನು ಶರಣ ಸಾಹಿತ್ಯ ಬಳಸಿಕೊಂಡು ಸಾಹಿತ್ಯ ಸ್ವರೂಪವನ್ನು ವೈವಿಧ್ಯಮಯಗೊಳಿಸಿದೆ.

೧: ಸಂ: ಡಾ: ಎಂ.ಎಂ. ಕಲಬುರ್ಗಿ-ಹ.ರ. ಪೀಠಿಕೆ ಪುಟ XI

೨:೮ ಶರಣ ಸಾಹಿತ್ಯದ ಆಶಯ - ಧೋರಣೆಗಳು

ಶರಣ ಸಾಹಿತ್ಯ ಆರಂಭವಾಗಿದ್ದೇ ಜೀವನ ಪರ ಕಾಳಜಿಯಿಂದ ಧರ್ಮದ ವ್ಯವಸ್ಥೆಯನ್ನು ಸುವ್ಯವಸ್ಥೆಗೆ ನೆಲೆಗೊಳಿಸುವಲ್ಲಿ ಶರಣರು ಪ್ರಮುಖವಾಗಿ ಯತ್ನಿಸಿದರೆಂಬುದು ಮೇಲ್ನೋಟಕ್ಕೆ ಕಂಡು ಬಂದಿದ್ದರೂ ಅದು ಅವರಿಗೆ ಅತಿ ಮುಖ್ಯವಾಗಿರಲಿಲ್ಲ. ಕೇವಲ ಧಾರ್ಮಿಕ ದೃಷ್ಟಿಯ ಆಶಯ-ಧೋರಣೆಗಳಿದ್ದರೆ ಶರಣ ಸಾಹಿತ್ಯವು ಚಳುವಳಿಯ ಸ್ವರೂಪ ಪಡೆಯುತ್ತಿರಲಿಲ್ಲ ಸಂಘರ್ಷ ಸಾಹಿತ್ಯವಾಗಿ ಕನ್ನಡ ಸಂದರ್ಭದಲ್ಲಿ ಮೂಡಿ ಬರುತ್ತಿರಲಿಲ್ಲ. ಅಂದಿನ ಸಾಮಾಜಿಕ, ಸಾಹಿತ್ಯಿಕ, ಸಾಂಸ್ಕೃತಿಕ ಕ್ಷೇತ್ರಗಳ ಇತಿ-ಮಿತಿಗಳ ಪರಿಕಲ್ಪನೆ ಅರಿವಿದ್ದ ಶರಣರು ಅತ್ಯಂತ ವ್ಯವಸ್ಥಿತ ಸ್ಥಿತಿಯಲ್ಲಿ ಸಮಾಜ ಕಟ್ಟಲು ಬಯಸಿ ; ಆ ಹಿನ್ನೆಲೆಯಲ್ಲಿ ಸ್ಥಗಿತಗೊಂಡ ಸಮಾಜವನ್ನು ಚಲನಶೀಲವಾಗಿರಬೇಕೆಂಬ ಆಶಯ ಹೊಂದಿದ್ದ ಅವರು ಸಾಮಾನ್ಯರ ಭಾಷೆಯನ್ನು ಸಾಹಿತ್ಯಿಕ ಭಾಷೆಯನ್ನಾಗಿರಿಸಿದರು.

ಮುಕ್ತಾಯಕ್ಕಳಂತಹ ಗ್ರಾಮೀಣ ಮಹಿಳೆ ಅನುಭಾವದೆತ್ತರಕ್ಕೇರಿದ ಅಲ್ಲಮನನ್ನು ಪ್ರಶ್ನಿಸುವ ತಾಕತ್ತು, ಶರಣರ ಅನುಭಾವ ಗೋಷ್ಠಿಯಲ್ಲಿ ಪ್ರವೇಶಿಸಿದ ಆಯ್ದಕ್ಕಿ ಲಕ್ಕಮ್ಮ ಪರತತ್ವದ ಜೊತೆಗೆ ಇಹದ ಬದುಕು ಎಷ್ಟು ಅವಶ್ಯಕ ಎಂಬುದನ್ನು ಕಾಯಕದ ಹಿನ್ನೆಲೆಯಲ್ಲಿ ತೋರಿಸಿಕೊಡುವುದು - ಹೀಗೆ ಒಂದಲ್ಲ ಹತ್ತಾರು ಸನ್ನಿವೇಶಗಳು ನಮಗೆ ಕಂಡುಬರುತ್ತವೆ.

ಶರಣ ಸಾಹಿತ್ಯದ ಧೋರಣೆಗಳನ್ನು ಗಮನಿಸಿದಾಗ ಮುಖ್ಯವಾಗಿ ಕಂಡುಬರುವುದು ಅವರು ಕಟ್ಟಬಯಸಿದ ಕಲ್ಯಾಣ ರಾಜ್ಯ ಪರಿಕಲ್ಪನೆ ಅದಕ್ಕಾಗಿ ಅವರು ಹತ್ತು ಹಲವು ಕಾರ್ಯಗಳನ್ನು ಕೈಗೊಂಡರು. ಸುಭದ್ರ ಕಲ್ಯಾಣ ರಾಜ್ಯ ನಿರ್ಮಾಣಕ್ಕೆ ಆರ್ಥಿಕ ಭದ್ರತೆ ಅವಶ್ಯಕತೆಯೆಂದರಿತು ಶರಣರು ಕಾಯಕಕ್ಕೆ ಮಹತ್ವ ನೀಡಿದರು. ಅದನ್ನು ವಿಶಿಷ್ಟ ವ್ಯವಸ್ಥೆಯನ್ನಾಗಿ ಬೆಳೆಸಿದರು. ಹಿಂದಿನ ಮೌಢ್ಯಗಳನ್ನು ಖಂಡಿಸಿ ದೇವರ ನಿಜವಾದ ಅಸ್ತಿತ್ವ ತೋರಿಸಿಕೊಟ್ಟರು. ದಯವೇ ಧರ್ಮದ ಮೂಲವೆಂದು ಹೇಳಿ ಪ್ರೇಮ -ಅಹಿಂಸೆಗಳ ಶಾಶ್ವತ ಆಶಯ - ಧೋರಣೆಗಳನ್ನು ಪ್ರತಿಪಾದಿಸಿದರು. ಶರಣರ ಪ್ರಗತಿಪರ ಆಶಯ ಧೋರಣೆಗಳು ಮಾನವ ಕುಲದ ಸಾಮಾಜಿಕ ಕ್ಷೇಮ, ಲೋಕಕಲ್ಯಾಣದ ಜೊತೆಗೆ ಆತ್ಮಕಲ್ಯಾಣದ ವಿವೇಚನೆಯನ್ನು ತಿಳಿಸಿಕೊಟ್ಟವು.

ಡಾ: ಹಿರೇಮಲ್ಲೂರು ಈಶ್ವರನ್ ಹೇಳುವ ಹಾಗೇ ‘ ಶರಣರ ವಚನಗಳ ಉದ್ದಿಶ್ಯ ಮೂರೆರನಾಗಿದೆ: (೧)ಸಮಾಜ ಪರಿವರ್ತನೆ(೨) ಆಚಾರ ಹಾಗೂ ತತ್ವ ಸ್ಥಾಪನೆ ಮತ್ತು (೩) ಆತ್ಮೋದ್ಧಾರ ಮೂರು ಉದ್ದಿಶ್ಯಗಳಲ್ಲಿ ಸಮಾಜ ಪರಿವರ್ತನೆಯೇ ಮುಖ್ಯವಾಗಿದೆ. ಶ್ರೇಣಿ ಪದ್ಧತಿಯಿಂದದೊಡಗೂಡಿದ್ದ ಸ್ಥಗಿತ ಸಮಾಜವನ್ನು ಸಮಾನತೆಯತ್ತ ತಿರುಗಿಸುವುದೆ ಅವರ ಗುರಿಯಾಗಿದ್ದಿನ್ನುವುದನ್ನು ಈ ಮೊದಲು ಸೂಚಿಸಿದ್ದೇನೆ ಅಂತಹ ಸಮಾಜ ಸ್ಥಾಪನೆಗೆ ಅನುಗುಣವಾದ ಆಚಾರ ಮತ್ತು ಸಿದ್ಧಾಂತಗಳನ್ನು ವಚನಗಳ ಮೂಲಕ ರಚಿಸುವುದು ಅವರು ಎರಡನೆಯ ಉದ್ದಿಶ್ಯ. ಅವುಗಳ ಸಾಧನೆಯಲ್ಲಿ ನಿರತನಾದ ಲಿಂಗಾಯತ ಸ್ವಾಭಾವಿಕವಾಗಿಯೆ ಆತ್ಮೋದ್ಧಾರವನ್ನು ಸಾಧಿಸಿಕೊಂಡು ಬರುತ್ತಾನೆಂಬ ನಂಬುಗೆ ಅವರದು ಆದುದರಿಂದ ಅವರ ಮೊದಲಿನ ಎರಡು ಗುರಿಗಳು ಪ್ರತ್ಯಕ್ಷವೂ (Manifest) ಮೂರನೆಯದು ಪರೋಕ್ಷವೂ (latent) ಆಗಿದ್ದುವೆಂದು ಹೇಳಬಹುದಾಗಿದೆ’೧

ಶರಣರ ಸಂದರ್ಭದಲ್ಲಿ ಸಾಹಿತ್ಯ ಒಬ್ಬರ ಅಭಿಪ್ರಾಯವಾಗದೇ ಸಾರ್ವತ್ರಿಕ ಅಭಿಪ್ರಾಯವಾಯಿತು. ಸಮಾಜದ ಧ್ವನಿಯಾಯಿತು. ನಿಷ್ಠೆ, , ಛಲ, ನಿರ್ಭಯ, ಪ್ರಾಮಾಣಿಕತೆ, ಮನೋಸ್ಥೈರ್ಯಗಳನ್ನೆಲ್ಲ ರೂಢಿಸಿಕೊಂಡ ಶರಣ ಸಾಹಿತ್ಯ ತತ್ಕಾಲೀನ ಸಾಮಾಜಿಕತೆಯ ಸ್ವರೂಪವನ್ನೇ ಬದಲಾಯಿಸುವ ಪ್ರಮುಖ ಧೋರಣೆಯನ್ನು ತಾಳಿತು.

೧: ಡಾ: ಹಿರೇಮಲ್ಲೂರು ಈಶ್ವರನ್-ಲಿಂ.ಧ.ಅ. ಪುಟ೧೧೮

ಅಂತೆಯೇ ಶರಣ ಸಾಹಿತ್ಯದ ಆಶಯ ಧೋರಣೆಗಳು ಕಲ್ಯಾಣ ಕ್ರಾಂತಿಯ ನಂತರ ತೀವ್ರ ಬದಲಾವಣೆಯನ್ನು ಹೊಂದಿದವು. ಹರಿಹರ -ರಾಘವಾಂಕಾದಿಗಳ ಕಾಲದಲ್ಲಿ ಆಶಯ - ಧೋರಣೆಗಳು ಸಹ ಪ್ರಮುಖ ಬದಲಾವಣೆ ಹೊಂದಿದವು . ಹಿಂದಿನ ಕಾವು , ಒತ್ತಡಗಳು ಉಳಿಯಲಿಲ್ಲ . ಆ ನಂತರದಲ್ಲಿ ತಾತ್ವಿಕತೆಯ ಜಡತೆಯಿಂದಾಗಿ ಶರಣ ಸಾಹಿತ್ಯ ಧಾರ್ಮಿಕ ಪೊರೆಯನ್ನು ಬಿಡಲಾರಂಭಿಸಿತು. ಆನಂತರ ರಚನೆಗಳು ಸೀಮಿತಿ ವ್ಯಾಪ್ತಿಗಳೊಳಪಟ್ಟವು . ಶರಣ ಸಾಹಿತ್ಯದ ಧೋರಣೆಗಳ ಸ್ಪಷ್ಟವಾದ ನಿಲುವುಗಳನ್ನು ಡಾ : ಪಿ.ವಿ. ನಾರಾಯಣರು ಗುರುತಿಸಿದ್ದು ಹೀಗೆ ' ಸ್ವತಂತ್ರ ರಚನೆಗಳನ್ನು ಮಾಡಿದವರೆಲ್ಲ ಮಠಾಧೀಪತಿಗಳೇ ಹಾಗಾಗಿ ಇಲ್ಲಿ ಅನುಭವ ವೈವಿಧ್ಯಕ್ಕೆ ಅವಕಾಶವಿಲ್ಲ. ಒಬ್ಬ ಮಹಿಳೆಯಾದರೂ ಇವರಲ್ಲಿ ಸೇರಿಲ್ಲದಿರುವುದು ಆಶ್ಚರ್ಯಕರ ವಿಷಯವೇನಲ್ಲ ಯಾಕೆಂದರೆ ಸಮಾಜವನ್ನು ಯಾವ ಹಿಡಿತದಿಂದ ಪಾರು ಮಾಡಲು ಬಸವಾದಿಗಳ ಚಳವಳಿ ಪ್ರಯತ್ನಿಸಿತೋ ಅಂತಹುದೇ ಇನ್ನೊಂದರ ಹಿಡಿತದಲ್ಲಿ ಈ ಹೊತ್ತಿಗೆ ಬಸವಾದಿಗಳ ವಾರಸು ದಾರ ಸಮಾಜವು ಸಿಲುಕಿಕೊಂಡಿತು. ಹೆಣ್ಣು-ಗಂಡುಗಳ ನಡುವಣ ಚೈತನ್ಯಕ್ಕೆ ಲಿಂಗ ಭೇದವಿದೆಯೇ ಎಂಬ ಪ್ರಶ್ನೆ ಮಾಯವಾಗಿ ಮಠಾಧಿಪತಿಗಳ ಕೈಯಲ್ಲಿ ವಚನಗಳು ಸಿಕ್ಕಿಕೊಂಡವು. ಕಾಂತ್ರಿಯ ಕಾವು, ಸಾಮಾಜಿಕ ಪ್ರಜ್ಞೆ, ಸಮಾನತೆಯ ಹಂಬಲ ಎಲ್ಲಾ ಬತ್ತಿ ಹೋಗಿ ವಚನವೆಂದರೆ ಗಿಳಿ ಪಾಠದ ಸರಕಾಗಿತ್ತು. ಈ ವಚನಗಳಲ್ಲಿ ವೈಯಕ್ತಿಕ ಸಂಘರ್ಷವನ್ನೇ ನಿವೇದನೆಯನ್ನೇ ವಸ್ತುವಾಗುಳ್ಳ ಒಂದೂ ವಚನವಿಲ್ಲ ಬಸವಾದಿಗಳ ಕಾಲವೂ ವೈಯಕ್ತಿಕ ಸಾಧನೆಗಿತ್ತ ಪ್ರಾಮುಖ್ಯವು ಈ ಹೊತ್ತಿಗೆ ಹೋಗಿ ಮತದ ಆವರಣ ಕವುಚಿಕೊಂಡಿತ್ತು. ವಿವಿಧ ಕಾಯಕಗಳ, ವಿವಿಧ ನೆಲೆಗಳ ಆಶೋತ್ತರಗಳು ಹೊಸ ಸಾಧನಾ ಪಂಥವನ್ನು ರೂಪಿಸುವಲ್ಲಿ ಹನ್ನೆರಡನೆಯ ಶತಮಾನವು ಕ್ರಿಯಾಶೀಲವಾಗಿದ್ದರೆ , ಈಗಿನ ವಚನಗಳು ಮಠಾಧಿಪತಿಗಳ ಬೋಧನಾ ರೂಪದ ಅರ್ಚನಾ ವಿಧಾನದ ವಿವರಣೆಯ ರಚನೆಗಳಾದವು. ೧

ಏನೇ ಆಗಲಿ ಶರಣ ಸಾಹಿತ್ಯ ತನ್ನ ಆಶಯ - ಧೋರಣೆಗಳಲ್ಲಿ ಹಿಂದಿನ ಜಾಢ್ಯವನ್ನು ಕಿತ್ತೊಗೆದು ಭಾಷೆ, ಶೈಲಿ ತಂತ್ರಗಳಲ್ಲಿ ಹೊಸತನ್ನು ರೂಢಿಸಿಕೊಂಡು ಉಳಿದೆಲ್ಲ ಸಾಹಿತ್ಯಗಳಿಗಿಂತ ಭಿನ್ನವಾದ ಆಶಯ - ಧೋರಣೆಗಳನ್ನು ರೂಪಿಸಿಕೊಳ್ಳುವ ಮೂಲಕ ಹೊಸ ಪರಿಕಲ್ಪನೆಯೊಂದನ್ನು ಸಮಾಜದಲ್ಲಿ ಮೊದಲಬಾರಿಗೆ ರೂಪಿಸಿತೆನ್ನಬಹುದಾಗಿದೆ.

೧ : ಡಾ : ಪಿ.ವಿ.ನಾರಾಯಣ - ವ.ಸಾ.ಪ. ಪುಟ ೧೭೨-೧೭೩

ಅಧ್ಯಾಯ : ೦೩

ರಾಯಚೂರು ಪರಿಸರದ ಶರಣರ ಜೀವನ ಮತ್ತು ಸಾಧನೆ

೩ : ೧ ರಾಯಚೂರು ಪರಿಸರದ ವೈಶಿಷ್ಟ್ಯತೆ

ಇತಿಹಾಸ ಪೂರ್ವಕಾಲದಿಂದಲೂ ಖ್ಯಾತಿ ಪಡೆದ ರಾಯಚೂರು ಪರಿಸರ ಕರ್ನಾಟಕದಲ್ಲಿ ತನ್ನದೇಯಾದ ಹತ್ತು -ಹಲವು ವೈಶಿಷ್ಟ್ಯಗಳಿಂದಲೂ ಭಿನ್ನವಾಗಿದೆ.

ಕ್ರಿ.ಪೂ. ೩೦೦೦ ದಷ್ಟು ಪ್ರಾಚೀನವಾದ ಇತಿಹಾಸ ದಿನಗಳೆದಂತೆ ಎಲ್ಲಾ ಆಳ್ವಿಕೆಯ ಪರಂಪರೆಯನ್ನು ಮೈಗೂಡಿಸಿಕೊಂಡು ವಿಭಿನ್ನವಾದ ಅಸ್ವಿತ್ತವನ್ನು ಕಾಯ್ದುಕೊಂಡಿದೆ.

'ಎಡೆದೊರೆ' ನಾಡು ಸಹ ಆಗಿತ್ತು. ಪ್ರಾಚೀನ ಆಡಳಿತದ ಅಂಗವಾಗಿದ್ದ ಈ ನಾಡಿನಬಗ್ಗೆ ಅದರ ನಿಷ್ಪತ್ತಿಯಬಗ್ಗೆ ಇರುವ ವಿಚಾರ ಸರಿಯಲ್ಲವೆಂದು ಗುರುತಿಸಿ ಕೃಷ್ಣಾನದಿಯ ಮೂಲದ ಹೆಸರಾದ 'ಪೆರ್ದೊರೆ' ಎಂಬುದೇ 'ಎಡೆದೊರೆ' ಎಂಬ ಹೆಸರಿಗೆ ಕಾಣವಾಗಿದೆಯೆಂಬ ಅಭಿಪ್ರಾಯವನ್ನು ಡಾ. ಬಸವಲಿಂಗ ಸೊಪ್ಪಿಮಠ ರವರು ಗುರುತಿಸಿ ಹೀಗೆ ಹೇಳುತ್ತಾರೆ:

'ಹನ್ನೆರಡನೆಯ ಶತಮಾನದ ಹೊತ್ತಿಗಾಗಲೇ ಕೃಷ್ಣಾನದಿ ಪೆರ್ದೊರೆ ಎನಿಸಿಕೊಳ್ಳುತ್ತಿತ್ತು ಎಂಬುದಕ್ಕೆ ಹೊಯ್ಸಳರ ಶಾಸನಗಳನ್ನು (ಉದಾ : ಕ್ರಿ.ಶ. ೧೧೬೧ರ 'ಬೇಲೂರು ಶಾಸನ) ನೋಡಬಹುದಾಗಿದೆ. ಪಿರಿದು+ತೊರೆ = ಪೆರ್ದೊರೆ ಎಂದು ಇದನ್ನು ಸುಲಭವಾಗಿ ಬಿಡಿಸಬಹುದು. ಎಡೆದೊರೆ ನಾಡಿನಲ್ಲಿ ಬರುವ ಕರಡಿಕಲ್ಲು -೪೦೦ಮೊರಟ-೩೦೦, ಮೊಸಳಿಕಲ್ -೩೦೦ ಮೊದಲಾದ ಉಪವಿಭಾಗಗಳು ಈ ಪೆರ್ದೊರೆ ವೆಂಬ ಕೃಷ್ಣಾನದಿಗೆ ಸಮೀಪ ಇವೆಯೇ ಹೊರತು ತುಂಗಭದ್ರೆಗೆ ಅಲ್ಲ. ಈ ನಾಡಿನ ವ್ಯಾಪ್ತಿ ತುಂಗಭದ್ರೆಯ ವರೆಗೆ ಆಮೇಲ ಚಾಚಿರಬಹುದು. ಅಷ್ಟು ಮಾತ್ರಕ್ಕೇ ಕೃಷ್ಣಾ-ತುಂಗಭದ್ರಾ ನಡುವಣ 'ಎಡೆ' (ಸ್ಥಳ) ಎಂದು ಎಡೆದೊರೆಯನ್ನು ಗುರುತಿಸಬೇಕಾಗಿಲ್ಲ. ಪೆರ್ದೊರೆ > ಹೆರ್ದೊರೆ > ಎರ್ದೊರೆ > ಎರದೂರೆ> ಎಡದೂರೆ (ಎಡೆದೊರೆ) ಎಂದು ಬಿಡಿಸುವುದೇ ಸರಿಎಂದು ನನಗೆ ತೋರುತ್ತದೆ. ಎಡೆದೊರೆ -೨೦೦೦ ಎಂಬುದು ಎರಡುಸಾವಿರ ಗ್ರಾಮಗಳ ಆಡಳಿತವನ್ನು ಹೇಳುತ್ತಿರಬಹುದು '೧ ಏನೇ ಆಗಲಿ 'ಎಡೆದೊರೆ' ನಾಡಾಗಿ ಮುಸ್ಲಿಮರ ಕಾಲಕ್ಕೆ 'ದೋಅಬ್' ಆಗಿ ಚಿನ್ನಕ್ಕೆ ಹೆಸರಾಗಿರುವ ಂತೆಯೇ ರನ್ನದ ಬೀಡಾಗಿರುವ ರಾಯಚೂರು ಪರಿಸರದ ಸಾಂಸ್ಕೃತಿಕ ಪುಟಗಳು ತೆರೆದುಕೊಳ್ಳುವುದು ಹಳೆ ಶಿಲಾಯುಗದಿಂದ ಎಂಬುದಕ್ಕೆ ಪಿಕಳಿಹಾಳು, ವಟಗಲ್, ಮಸ್ಕಿ, ಕಲ್ಲೂರಿನಲ್ಲಿ ದೊರೆತ ಉತ್ಖನನದ ಅವಶೇಷಗಳೇ ಸೂಕ್ತ ನಿದರ್ಶನವಾಗಿವೆ.

ಮಸ್ಕಿಯ ಅಶೋಕ ಶಾಸನವಂತೂ ಭಾರತೀಯ ಇತಿಹಾಸ ಸಂದರ್ಭದಲ್ಲಿಯೇ ಅಪೂರ್ವವಾದದ್ದು, ಅಂತೆಯೇ ದೇವನಾಂಪ್ರಿಯನೆಂದರೆ ಅಶೋಕನೇ ಎಂಬುದನ್ನು ಸಾಬೀತು ಪಡಿಸಿದ ವಿಶಿಷ್ಟ ಶಾಸನ. ಪರಿಸರದ ತುಂಬಾ ಶಾಸನಗಳು, ದೇವಾಲಯಗಳು ಯಥೇಚ್ಛವಾಗಿ ತುಂಬಿಕೊಂಡಿದೆ. ದೇವದುರ್ಗ ತಾಲೂಕಿನ ಹೇಮಗಲ್ಲು (ಹೇಮನೂರು) ನಲ್ಲಿ ವೀರಗಲ್ಲು, ಮಾಸ್ತಿಕಲ್ಲು, ಹಲವು ಶಾಸನಗಳು ಹಳ್ಳದಲ್ಲಿ ಅಸಂಖ್ಯಾತವಾಗಿ ಅನಾಥವಾಗಿ ಬಿದ್ದಿವೆ. ಇಲ್ಲಿಯ ಶಾಸನಗಳು ವಿವಿಧ ರಾಜರ ಆಳ್ವಿಕೆಯ ವಿವರಗಳನ್ನು ಸ್ಪಷ್ಟಪಡಿಸುತ್ತವೆ. ಈ ಪರಿಸರದ ಸಾಂಸ್ಕೃತಿಕ ಚಿತ್ರಣ ಸ್ವರೂಪವನ್ನು ಬಿಂಬಿಸುತ್ತವೆ.

ಮಧ್ಯಕಾಲದ ಸಂದರ್ಭದಲ್ಲಂತೂ ದೂರದ ದೆಹಲಿ ಅನುಭವಿಸಿದ್ದನ್ನೇ ಈ ಪರಿಸರ ಅನುಭವಿಸಿತು. ಶ್ರೇಷ್ಠ ಮೊಗಲರೇ ಈ ಪ್ರದೇಶವನ್ನು ಕೇಂದ್ರವಾಗಿರಿಸಿಕೊಂಡು ಆಳ್ವಿಕೆ ನಡೆಸಿದರು. ಆನಂತರದಲ್ಲಿ ಬೆಳೆದು ಬಂದ ರಾಜಕೀಯ ರಂಗ -ರಣರಂಗವಾಗಿಯೇ ಈ ಪರಿಸರದ ಸ್ವಾಸ್ಥ್ಯವನ್ನೇ ಹದಗೆಡಿಸಿತ್ತು. ವಿಜಯನಗರದ ಅರಸರು, ಬಹುಮನಿ ಸುಲ್ತಾನರು, ಆದಿಲ್‌ಶಾಹಿಗಳ ಪರಸ್ಪರ ಮುಖಾಮುಖಿಯಿಂದಾಗಿ ಸುಮಾರು ಹದಿನಾಲ್ಕರಿಂದ ಹದಿನಾರನೆಯ ಶತಮಾನದವರೆಗೆ ಉಸಿರು ಬಿಗಿ ಹಿಡಿದುಕೊಂಡು ಬದುಕುವ ವಾತಾವರಣ ಇಲ್ಲಿ ನಿರ್ಮಾಣವಾಗಿತ್ತು. ಕತ್ತಿಯ ಕೆಳಗಡೆ ಕಾಲ ಕಳೆಯುವ ಇಲ್ಲಿಯ ಜನರಿಗೆ ಯುದ್ಧಗಳು ದಿನಗಳೆದಂತೆ ಅವರ ಬದುಕನ್ನು ಜರ್ಜರಿತಗೊಳಿಸಿದವು. ಇಂತಹವುಗಳ ಮಧ್ಯೆಯೇ ಹಲವು ಕೋಟೆಗಳು ನಿರ್ಮಾಣಗೊಂಡವು.

ಇಂತಹ ಸಂಘರ್ಷಮಯ ವಾತಾವರಣದಲ್ಲಿಯೇ ಮುಸ್ಲಿಮ-ಕ್ರೈಸ್ತ ಕುಟುಂಬಗಳ ಸಮನ್ವಯ - ಸಹಕಾರದ ಸನ್ನಿವೇಶಗಳು ಇಲ್ಲಿ ನಿರ್ಮಾಣವಾಗಿದ್ದವೆಂಬುದಕ್ಕೆ ಮುದಗಲ್‌ನ ದಿವಾನ್ ದಿಲಾವರ್ ಖಾನ್ ಹಾಗೂ ಕ್ರೈಸ್ತ ಧರ್ಮದ ಪ್ರಚಾರಕ ಫ್ರಾನ್ಸಸ್ -ಡಿ-ಅಲ್ಮೇಡಾರ ಆತ್ಮೀಯ ಸ್ನೇಹವೇ ನಿದರ್ಶನ. ಈ ಸಮನ್ವಯತೆ ಸಹಿಸದ ಮತೀಯರಿಂದಲೇ ಇವರಿರ್ವವರು ಸಾಕಷ್ಟು ನೋವು ಅನುಭವಿಸಿದರೆಂಬ ಸಂಗತಿಗಳು ನಮಗೆ ಕ್ಯಾಪ್ಟನ್ ಮೆಡೋಸ್ ಟೇಲರ್ ಬರೆದ ' ಸ್ಮೃತಿ ಪತ್ರಗಳು ' 'ನೋಬಲ್ ಕ್ವೀನ್' ಬರಹಗಳ ಆಧಾರದಿಂದ ಕಂಡು ಕೊಳ್ಳಬಹುದಾಗಿದೆ.

ಅಂತೆಯೇ ಜಲದುರ್ಗದ ಐತಿಹಾಸಿಕತೆಯ ವಿವರಗಳ ಬೆನ್ನು ಹತ್ತಿದರೆ ಅಪೂರ್ವ ಸಾಂಸ್ಕೃತಿಕ ಪರಿಸರವೇ ನಮ್ಮ ಕಣ್ಮುಂದೇ ಬರುತ್ತದೆ. ಮತಾಂಧನಾಗಿದ್ದ ಉಸ್ಮಾನಬೇಗ್ ಅಧಿಕಾರಿಯಾಗಿದ್ದ ಜಲದುರ್ಗದಲ್ಲೇ 'ಕೂಡೇಕಲ್ ಬಸವಣ್ಣ' ನಂತಹ ಶರಣರು ಬದುಕಿ ಅಪೂರ್ವ ಶರಣ ಸಾಹಿತ್ಯ ಸೃಷ್ಟಿಸಿದರೆಂಬುದೇ ದೊಡ್ಡ ಆಶ್ಚರ್ಯ. ಅಂತೆಯೇ ದರವೇಷ ನಂತಹ ನೈತಿಕ, ಸಾತ್ವಿಕ ಮುಸಲ್ಮಾನ, ಜೊಹರಾಳಂತಹ ಮಮತಾಮಯಿ ಹಲವು ದಿನ ಕಾಲ ಕಳೆದದ್ದು ಜಲದುರ್ಗದಲ್ಲಿಯೇ, ಶರಣ ಚಳುವಳಿಯ ಆರಂಭಿಕ ಸಿದ್ಧತಾ ಹಂತಗಳು ಮೂಡಿದ್ದು ಈ ಪರಿಸರದ ನೆಲದಿಂದಲೇ; ದಾಸ ಸಾಹಿತ್ಯದ ತವನಿಧಿಯಾಗಿ ಬೆಳೆದು ಕನ್ನಡ ಸಾಹಿತ್ಯದಲ್ಲಿ ದಾಸ ಸಾಹಿತ್ಯಕ್ಕೆ ಹೊಸ ತಿರುವನ್ನು ಮೂಡಿಸಿದ್ದು ರಾಯಚೂರು ಪರಿಸರವಾಗಿದೆ ಎಂದರೆ ಅತಿಶಯೋಕ್ತಿಯಲ್ಲ.

---

೧ : ಡಾ: ಬಸವಲಿಂಗ ಸೊಪ್ಪಿಮಠ - ಆ.ಪುಟ ೧೮

ಸ್ವಾತಂತ್ರ್ಯಾನಂತರವೂ ಈ ಪರಿಸರದ ಸ್ಥಿತಿಯೇನೂ ಸುಧಾರಿಸಲಿಲ್ಲ. ಇಡೀ ದೇಶವೇ ಸ್ವಾತಂತ್ರ್ಯದ ಸಂತೋಷದಲ್ಲಿರುವಾಗಲೇ ನಿಜಾಮನ ಪರತಂತ್ರದಲ್ಲಿ ಇಲ್ಲಿಯ ಪರಿಸರ ಬಂಧಿಯಾಗಿತ್ತು. ಹೈದ್ರಾಬಾದ್ ನಿಜಾಮನ ಆಳ್ವಿಕೆ ಇಡೀ ಜನರ ಬದುಕನ್ನೇ ಅಲುಗಾಡಿಸುವ ಜೊತೆಗೆ ಸಾಂಸ್ಕೃತಿಕ ಪರಿವರ್ತನೆಯನ್ನೇ ಉಂಟುಮಾಡಿತ್ತು. ಭಾಷೆ-ಆಚಾರ-ಉಡುಗೆ-ತೊಡುಗೆಗಳೆಲ್ಲ ಸಂಪೂರ್ಣ ಬದಲಾಗಿದ್ದವು. ನಾಡಿನ ಕನ್ನಡ ಭಾಷೆಗೆ ಕತ್ತರಿ ಪ್ರಯೋಗವಾಗಿ ಉರ್ದು ಪ್ರಮುಖ ಆಡಳಿತ ಭಾಷೆಯಾಗಿ ಇಲ್ಲಿ ವಿಜೃಂಭಿಸಿದ್ದು ಈಗ ಇತಿಹಾಸ ಪುಟಗಳಲ್ಲಿ ಸೇರಿದೆ. ಇಷ್ಟಾದರೂ ಇಲ್ಲಿಯ ರಾಜಕೀಯ ಪರಿಸರ ಮೊದಲಿಗಿಂತ ಭಿನ್ನವಾಗಿ ಏನಿಲ್ಲ, ಹೊರನೋಟಕ್ಕೆ ನಮ್ಮದಾಗಿದ್ದರೂ ಇಲ್ಲಿಯ ರಾಜಕೀಯ ಹಿಡಿತ-ಅಧಿಕಾರ ಸೂತ್ರ ಹೊಂದಿದವರು ಹೊರಗಿನವರು ಎಂಬುದು ಸೂಕ್ಷ್ಮ ಅವಲೋಕನೆಗಳಿಂದ ತಿಳಿದು ಬರುತ್ತದೆ.

ಕೃಷ್ಣೆಯ ಫಲಭರಿತ ನೆಲದ ಸಂಪತ್ತು ಈ ಪರಿಸರದ ಪ್ರಮುಖ ಜೀವಾಳವಾಗಿತ್ತು. ಕಾರಣ ಸಹಜವಾಗಿಯೇ ಇತಿಹಾಸಕಾಲದಿಂದಲೂ ಕೃಷ್ಣೆಯನ್ನು ಮಡಿಲಲ್ಲಿ ಹಾಕಿಕೊಂಡು ಮೆರೆಯಬೇಕೆಂಬುದೇ ಹಲವಾರು ಬಯಕೆಯಾಗಿತ್ತು. ಬಯಕೆ ಬಸಿರಾಗದಾಗ ಅನಿವಾರ್ಯವಾಗಿ ಈ ಪರಿಸರ ರಣರಂಗವಾಯಿತು. ಹೀಗಾಗಿ ಎಡೆದೊರೆ ನಾಡೆಂಬುದು ಯುದ್ಧಗಳ ತಾಣವಾಯಿತು. ಯುದ್ಧ ಬಿಸಿ ಇಡೀ ಜನರ ಬದುಕನ್ನೇ ಜರ್ಜರಗೊಳಿಸಿದ ಪರಿಣಾಮವಾಗಿ ಬಡತನವೆಂಬುದು ಜನರ ಬದುಕಾಯಿತು. ಸಾಂಸ್ಕೃತಿಕ ದಿವಾಳಿಯೂ ನಡೆಯಿತು. ಧರ್ಮದ ಸ್ಥಿರತೆಯೂ ಇಲ್ಲದಾಯಿತು. ದುರಾಡಳಿತ, ಒತ್ತಾಯಗಳೇ ಇಲ್ಲಿ ಮುಖ್ಯವಾಗಿ ಜನರೆಲ್ಲ ಒತ್ತೆಯಾಳುಗಳಾದರು. ಬದುಕಿನ ಬಗ್ಗೆ ಭರವಸೆಯೇ ಬತ್ತಿಹೊದ ಪರಿಣಾಮವಾಗಿ ಅವರಲ್ಲಿ ಸಂಘರ್ಷವೆಂಬುದೇ ಕ್ರಮೇಣ ಮಾಯವಾಗಿ, ನಿವಿಳ್ಯ ತೆಮ್ಮೆಗೂಡಿ ಹೊಂದಾಣಿಕೆ ಅನಿವಾರ್ಯವಾಯಿತು. ಆದರೆ ಪರಿಸ್ಥಿತಿಯೇನೂ ಹಿಂದಿನಂತೆನೂ ಬದಲಾಗಿಲ್ಲ; ಪ್ರಸ್ತುತ ರಾಯಚೂರು ಜಿಲ್ಲೆಯ ಎಡ-ಬಲಕ್ಕೆ ಕೃಷ್ಣೆ-ತುಂಗೆ ಮಡಿಲಿದ್ದರೂ ಬಿಸಿಲು ಅದಕ್ಕಿಂತ ಭೀಕರವಾದ ಬರಗಾಲಕ್ಕೇನೂ ಕೊರತೆಯಿಲ್ಲ. ಇರುವ ನೀರೆಲ್ಲ ಬೀಳುವ ಬಿಸಿಲು ನುಂಗಿಕೊಂಡರೇ ಉಳಿದಷ್ಟು ನೀರು ಪ್ರಭುತ್ವಶಾಹಿಗಳ ಮಾಯಾದಾಟಕ್ಕೆ ಬಲಿಯಾಗುತ್ತಿದೆ. ರೂಪಿಸಿದ ನೀರಾವರಿ ಯೋಜನೆಗಳೆಲ್ಲ ಕಡತಗಳಲ್ಲಿಯೇ ಕರಗಿ ನೀರಾಗುತ್ತವೆ. ಕಣ್ಣೀರು ಕಪಾಳಕ್ಕೆ ಬಂದರೂ ಕರುಣೆ ತೋರುವ ಮನಸ್ಸುಗಳಿಲ್ಲದಾಗಿದೆ. ದುಡಿಯವ ಕೈಗಳಿಗೆ ಕೆಲಸವಿಲ್ಲ; ಸುಗ್ಗಿ ಬಂದಾಗ ಹಿಗ್ಗುವ ಜನ ಬಿಸಿಲು ಬಂದಾಗ ಕುಗ್ಗಬೇಕಿದೆ. ಇಲ್ಲಿಯ ಬಿಸಿಲೇ ಜನರನ್ನು ಬತ್ತಿಸಿಬಿಟ್ಟಿದೆ. ಎಲ್ಲೆಲ್ಲೂ ಒಣಬೇಸಾಯ ಮಳೆಬೆಂಬೂದು ಇಲ್ಲಿ ಸಹ ಜೂಜಿನಾಟ; ಮಳೆಬಂದರೆ ಮುಖದಲ್ಲಿ ನಗೆ ಇಲ್ಲದಿದ್ದರೆ ಉಪವಾಸವಂತೂ ಖಾಯಂ. ಆನಂತರ ವಲಸೆಹೋಗುವುದು ಇಲ್ಲಿವೇ ಸಿಕ್ಕಸಿಕ್ಕಲ್ಲಿ ಸಾಲ ಮಾಡಿ, ಮಾಡಿದ ಸಾಲ ತೀರಿಸಲು ತಾಕತ್ತಿಲ್ಲದಾಗ ಸಾಯುವುದು; ಇಂತಹ ಹೀನಾಯ ವ್ಯವಸ್ಥೆ ಜೀವಂತವಾಗಿದೆ.

ಒಂದು ಕಾಲದಲ್ಲಿ ನಾಲ್ಕಾಣೆಯಿದ್ದರೆ ಕಾರ-ಮಂಡಾಳು ತಿಂದು ಚಹಾ ಕುಡಿದು ಮೀಸೆಮೇಲೆ ಕೈಹಾಕಿಕೊಂಡು ಖುಷಿಯಿಂದ ತಿರುಗಾಡುವ ಇಲ್ಲಿಯ ಜನಕ್ಕೆ ಈ ದಿನ ಅದಕ್ಕೂ ಸಂಚಕಾರ ಬಂದಿದೆ. ಬೆಳೆದ ಬೆಳೆಗೆ ಮಾರುಕಟ್ಟೆಯಲ್ಲಿ ಸರಿಯಾದ ದರವಿಲ್ಲ. ದುಡಿಮೆಯ ಕೈಗೆ ಕಾಸಿನ ಬದಲು ಕೊಡಲಿ ಕೊಟ್ಟು ಬೇಳೆ ಬೇಯಿಸಿಕೊಳ್ಳುವ ನೀಚರು, ಪರಿಸರದ ಭಾಷೆಯಲ್ಲಿ ಹೇಳುವುದಾರೆ 'ಹಲಾಲ್‌ಕೊರ ಬದ್ಮಾಷ್' ರಿಗೇನೂ ಇಲ್ಲಿ ಬರವಿಲ್ಲ.

ಇಷ್ಟೆಲ್ಲಾ ಇದ್ದರೂ ಪರಿಸರದ ಜನತೆಯಲ್ಲಿ ಹೃದಯವಂತಿಕೆ ಮಾತ್ರ ಬತ್ತಿಹೋಗಿಲ್ಲವೆಂಬುದು ಅಷ್ಟೇ ಸತ್ಯ ಮನೆಗೆ ಬಂದವರು ದೇವರೆಂಬ ಭಾವನೆ ಇಲ್ಲಿಯಾವಾಗಲೂ ಕಂಡು ಬರುತ್ತದೆ. 'ಬಿಳಿ ಜೋಳ' ಇಲ್ಲಿಯ ಪ್ರಮುಖ ಆಹಾರ, ಜನ ಜೋಳ ತಿಂದು ತೋಳಗಳಂತಿದ್ದರೂ ಕೆಲವೊಮ್ಮೆ ತೋಳಗಳಂತೆ ಹಳ್ಳಕ್ಕೆ ಬೀಳುತ್ತಿದ್ದಾರೆ.

ಜೋಳದಿಂದಲೇ ನುಚ್ಚು, ಕಟಾಲಿ, ಬಾನ ಹೀಗೆ ಹತ್ತು ಹಲವು ವೈವಿಧ್ಯಗಳೊಂದಿಗೆ ಬಾಯಿ ಚಪ್ಪರಿಸಿಸುವುದೇ ಇಲ್ಲಿಯ ವಿಶೇಷತೆಯಾಗಿದೆ. ಕಾಗದದಷ್ಟೇ ಹಗುರಾದ ರೊಟ್ಟಿ ಮಾಡಿ ಎಣ್ಣೆಗಾಯಿಯೊಂದಿಗೆ ಸವಿಯುವುದೇ ಇಲ್ಲಿಯ ಪರಮ ಸುಖ. ಪುಂಡೆಪಲ್ಲೆ ಮತ್ತು ಎಳ್ಳು ಹಚ್ಚಿದ ಸಜ್ಜೆಯ ರೊಟ್ಟಿಯಂತೂ ಪಂಚಪ್ರಾಣ. ಇಲ್ಲಿನ ಬಿಸಿಲಿಗೂ-ಜೊತೆಗೆ ಆಹಾರದಲ್ಲಿ ಬಳಸುವ ಖಾರ ಎರಡಕ್ಕೂ ತೀಕ್ಷ್ಣತೆ ಹೆಚ್ಚು. ಹಾಗಾಗಿ ಸಿಟ್ಟು ಜಾಸ್ತಿಯೆಂಬುದು ಎಲ್ಲರ ಮಾತಾಗಿದೆ.

ಇಲ್ಲಿಯ ಜಗಳದಲ್ಲಿ ಕಂಡುಬರುವ ಬೈಗುಳಗಳದ್ದೇ ಒಂದು ವಿಶಿಷ್ಟ ಸಂಗತಿಯಾಗಿದೆ. ಗ್ರಾಮೀಣ ಸಮುದಾಯದ ಎಂದಿಗೂ ಬಾಡದ ಕಣಜ. ನಿತ್ಯವೂ ಹೊಸ ಬೈಗುಳ, ತಲತಲಾಂತರದಿಂದಲೂ ಬೈಗುಳ ಈ ಪರಿಸರದಲ್ಲಿ ವಿಶಿಷ್ಟವಾಗಿ ಬೆಳೆದುಕೊಂಡು ಬಂದಿದೆ ಅದನ್ನು ಅನುಭವಿಸಿಯೇ ತಿಳಿಯಬೇಕು.

ಹರಕು-ಮುರುಕಾದ ಭಾಷೆ ಈ ಪರಿಸರದ ಮತ್ತೊಂದು ವೈಶಿಷ್ಟತೆ. ಅದು ನಮ್ಮನ್ನಾಳಿದ 'ಪ್ರಭುಗಳ 'ಕಾಣಿಕೆ' ಎಂದು ಒತ್ತಿ ಹೇಳಬೇಕಾಗಿಲ್ಲ. 'ಉರ್ದು-ಕನ್ನಡ-ತೆಲಗು' ಇಲ್ಲಿ ಎಲ್ಲವೂ ಸೇರಿ ಒಂದೇ ಭಾಷೆ. ಮತ್ತೊಂದು ವಿಶಿಷ್ಟ ಕನ್ನಡವಾಗಿದೆ. ಭಾಷಾ ಶಾಸ್ತ್ರಜ್ಞರಿಗೊಂದು ಅಧ್ಯಯನ ಯೋಗ್ಯ ಸಂಗತಿ.

ಹೀಗೆ ಒಂದೆಡೆ ಆಡಳಿತಶಾಹಿ ಅಧಿಕಾರಶಾಹಿ- ಬಂಡವಾಳಶಾಹಿಗಳ ಬಿಗಿ ಹಿಡಿತ, ತಲೆಯ ಮೇಲೆ ಸುಡುವ ಬಿಸಿಲು, ತಿನ್ನುವ ಆಹಾರದಲ್ಲಿನ ತೀಕ್ಷ್ಣ ಖಾರ, ಹರಕು-ಮುರುಕು ಕನ್ನಡ ಇವೆಲ್ಲವೂಗಳ ಮಧ್ಯೆಯೂ ಇಂತಹ ವಿವಿಧತೆಗಳಲ್ಲಿಯೂ ಏಕತೆ ಇಲ್ಲಿನ 'ಮುದಗಲ್ ಆಲಾಯಿ' (ಮೊಹರಂ) ಜೊತೆಗೆ ದಿನಗಟ್ಟಲೇ ಹಾಡುವವರಿದ್ದಾರೆ, ಕಥೆ ಹೇಳುವವರಿದ್ದಾರೆ, ಕಲ್ಲು ಕೆತ್ತುವವರಿದ್ದಾರೆ.

೬ ಶರಣ ಸಾಹಿತ್ಯ - ದಾಸ ಸಾಹಿತ್ಯ ಕನ್ನಡ ಸಾಹಿತ್ಯದ ಎರಡೂ ಕಣ್ಣುಗಳಾಗಿ ಈ ಪರಿಸರದ ಸಾಹಿತ್ಯಿಕ ಮೌಲ್ಯವನ್ನು ಎತ್ತಿ ಹಿಡಿದಿವೆ.

'ಚಿನ್ನದ ಗಣಿಗಳು - ಭತ್ತದ ಕಣಜಗಳು' ಎರಡಿದ್ದರೂ ತಣ್ಣೀರು ಕುಡಿದು ಮಲಗುವ ಜನಗಳಿಗೇನೂ ಕೊರತೆಯಿಲ್ಲವಾದರೂ ಇಲ್ಲಿಯ ಸಾಹಿತ್ಯ-ಸಂಸ್ಕೃತಿ ಮಾತ್ರ ಸತ್ವಯುತವಾದದ್ದು ಎಂಬುದನ್ನು ಅಲಕ್ಷಿಸಲಾಗದು. ಜೊತೆಗೆ ಸಂಪಾದಕರಿಗೆ - ಸಂಶೋಧಕರಿಗೆ-ಕವಿ ಮನಸ್ಸುಗಳಿಗೆ ತಕ್ಕ ಆಕರವಾಗಬಲ್ಲ ಹದವಾದ ಭೂಮಿ ರಾಯಚೂರು ಪರಿಸರವೆಂಬುದನ್ನು ಸರ್ವರೂ ಗಮನಿಸಬೇಕಾದದ್ದು ಅವಶ್ಯಕವಾಗಿದೆ.

೩ :೨ ಶರಣರ ಜೀವನ ಪರಿಚಯ ಮತ್ತು ವ್ಯಕ್ತಿತ್ವ

ಚಾರಿತ್ರ್ಯಕ್ಕೆ ಪ್ರಾಧಾನ್ಯ ನೀಡಿ ಬದುಕನ್ನು ಸಾಗಿಸಿದ ಶರಣರ ಜೀವನವನ್ನು ಅತ್ಯಂತ ನಿಖರವಾಗಿ ಕಟ್ಟಿಕೊಡುವಲ್ಲಿ ಅನೇಕ ತೊಂದರೆಗಳು ನಮಗೆ ಕಂಡುಬರುತ್ತವೆ. ಇಷ್ಟಾದರೂ ನಮಗೆ ದೊರೆಯುವ ಅವರ ಸಾಹಿತ್ಯ, ಆಕಾಲದ ಶಾಸನ, ಐತಿಹ್ಯ,ಪುರಾಣ ಕಾವ್ಯಗಳ ಆಧಾರದ ಮೇಲೆ ಕಟ್ಟಿಕೊಡಬಹುದಾಗಿದೆ.

ಕನ್ನಡ ನಾಡಿನ ಸಂದರ್ಭದಲ್ಲಿ ಶರಣ ಸಾಹಿತ್ಯವನ್ನು ನಾವು ಅವಲೋಕಿಸಿದಾಗ ೧೨ನೇ ಶತಮಾನ ಪ್ರಮುಖವಾಗಿ ಕಂಡು ಬರುತ್ತದೆ. ಅಂತೆಯೇ ಶರಣರಲ್ಲಿ ಒಂದು ರೀತಿಯ ಮನೋಧೈರ್ಯವನ್ನು ತುಂಬಿ ಅದನ್ನು ಚಳುವಳಿಯಾಗಿ ರೂಪಿಸಿದ ಕೇಂದ್ರ ವ್ಯಕ್ತಿ ಯೆಂದರೆ ಬಸವಣ್ಣನವರು . ಬಸವಣ್ಣನವರನ್ನೇ ಪ್ರಧಾನವಾಗಿರಿಸಿಕೊಂಡು ಅಧ್ಯಯನ ಅನುಕೂಲತೆಗಾಗಿ ವಿಭಾಗ ಕ್ರಮ ಮಾಡುವುದು ನಮ್ಮಲ್ಲಿ ಬಹುಮುಖ್ಯವಾಗಿ ಬೆಳೆದು ಬಂದ ಕ್ರಮವಾಗಿದೆ. ನಾವು ಸಹಿತ ಇದೇ ಕ್ರಮವನ್ನು ಅನುಸರಿಸಿ ರಾಯಚೂರು ಪರಿಸರದ ಶರಣ ಸಾಹಿತ್ಯವನ್ನು ವಿಭಾಗಿಸುವ ಕ್ರಮಗಳನ್ನು ಅನುಸರಿಸಿದ್ದೇವೆ.

೧ : ಬಸವಪೂರ್ವಯುಗದ ಶರಣರು (ಕ್ರಿ.ಶ. ೧೧ ನೇ ಶತಕದಿಂದ ೧೨ನೇ ಶತಮಾನದ ವರೆಗೆ)

೨ : ಬಸವ ಯುಗದ ಶರಣರು (ಕ್ರಿ.ಶ. ೧೨ನೇ ಶತಮಾನ)

೩ : ಬಸವೋತ್ತರ ಯುಗದ ಶರಣರು (ಕ್ರಿ.ಶ.೧೩ನೇ ಶತಕದಿಂದ ಆಧುನಿಕದವರೆಗೆ)

೧ : ಬಸವಪೂರ್ವ ಯುಗದ ಶರಣರು

ಈ ಯುಗದ ಶರಣರ ಬಗ್ಗೆ ಇದು ವರೆಗೂ ಅಲ್ಪ ರೀತಿಯಲ್ಲಿ ಸಂಶೋಧನೆ ನಡೆದು ಖಾಚಿತ್ಯಗಳು ನಡೆದು ದೊರೆತಿದ್ದರೂ ಮತ್ತೇ ಹಲವು ಸಂದೇಹಗಳು ವ್ಯಕ್ತವಾಗಿವೆ. ಈ ಕುರಿತು ಅನೇಕ ಲೇಖನಗಳೂ ಬಂದಿವೆ.

ಡಾ: ಫ.ಗು. ಹಳಕಟ್ಟಿ, ಡಾ: ಎಲ್ .ಬಸವರಾಜ, ಆರ್.ನರಸಿಂಹಾಚಾರ್, ಡಾ: ಆರ್.ಸಿ. ಹಿರೇಮಠ, ಡಾ: ರಂ.ಶ್ರೀ. ಮುಗಳಿ, ಡಾ: ಎಂ. ಚಿದಾನಂದ ಮೂರ್ತಿ , ಡಾ : ಎಂ.ಎಂ. ಕಲಬುರ್ಗಿ, ಡಾ : ಎಸ್.ವಿದ್ಯಾಶಂಕರ , ಡಾ : ಬಸವಲಿಂಗ ಸೊಪ್ಪಿಮಠ , ಡಾ : ಹಿರೇಮಲ್ಲೂರ ಈಶ್ವರನ್ , ಶಾಂತರಸ ಮುಂತಾದವರು ಬಸವಪೂರ್ವ ಯುಗದ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ.

ಇದೆಲ್ಲವನ್ನು ಲಕ್ಷ್ಯದಲ್ಲಿರಿಸಿಕೊಂಡು ನಾವೀಗ ನಮಗೆ ದೊರೆತಿರುವ ವಿಪುಲ ಮಾಹಿತಿಯ ಹಿನ್ನೆಲೆಯಲ್ಲಿ ನಮ್ಮ ರಾಯಚೂರು ಪರಿಸರಕ್ಕೆ ಸೇರಿದ ಬಸವಪೂರ್ವಯುಗದ ಶರಣರನ್ನು ಕುರಿತು ಚರ್ಚಿಸೋಣ. ಬಸವಪೂರ್ವಯುಗ ಶರಣರಲ್ಲಿ ಮುಖ್ಯರಾದವರುಗಳೆಂದರೆ:-

೧) ಜಾಲಹಳ್ಳಿ ಜಯಶಾಂತ ಲಿಂಗೇಶ್ವರ

೨) ಶಿವಜಾತ ಒಡೆಯರು

೩) ಕರಡಿ ಕಲ್ಲು ಭಿಲ್ಲಮರಾಯ

೪) ಢಕ್ಕೆಯ ಮಾರಯ್ಯ

೫) ಶಂಕರ ದಾಸಿಮಯ್ಯ

೬) ಶಿವದಾಸಿ

೭) ವಕ್ರಪಾದ

೮) ಜಡೆಯಶಂಕರ ದೇವರ ಮಲ್ಲಯ್ಯ - ಪಡಿಹಾರ ದಾಸಯ್ಯ - ಸದ್ಯೋಜಾತ

೯) ಆದಯ್ಯ - ಮಾಳಗುಂಡಮ್ಮ

೧೦) ಪುರದ ನಾಗಣ್ಣ ..... ಮುಂತಾದವರುಗಳು

೧) ಜಾಲಹಳ್ಳಿಯ ಶ್ರೀ ಜಯಶಾಂತಲಿಂಗೇಶ್ವರ

ಇವರ ಬಗ್ಗೆ ಸ್ಥಳ ಪುರಾಣಗಳಿದ್ದು ಇವರು ಕ್ರಿ.ಶ. ಆರನೆಯ ಶತಕದ ಅಂತ್ಯದಲ್ಲಿ ಅಯೋನಿಜರಾಗಿ ಜನ್ಮ ತಳೆದರೆಂದು ಹೇಳಲಾಗಿದೆ. ಇವರ ಕಾಲದಲ್ಲಿ 'ದೇವಶರ್ಮ' ಎಂಬ ಅರಸ 'ಚಪ್ಪಳಕಿ' ಯನ್ನೇ ರಾಜಧಾನಿಯಾಗಿರಿಸಿಕೊಂಡು ಆಳ್ವಿಕೆ ನಡೆಸುತ್ತಿದ್ದನೆಂದು ಹೇಳಲಾಗಿದೆ. ಈ ತನ ಮಕ್ಕಳು ಶಶಿವರ್ಮ, ಚಂದ್ರಶರ್ಮ, ಸೋಮಶರ್ಮ ರೆನ್ನಲಾಗಿದೆ. 'ಶರ್ಮ' ಎಂಬುದನ್ನು ಗಮನಿಸಿದಾಗ ನಮಗೆ ಇವರು ಕದಂಬ ವಂಶದವರೆಂದು ಸ್ಪಷ್ಟವಾಗುತ್ತದೆ. ಕದಂಬ ವಂಶ ತನ್ನ ಘನತೆಯನ್ನು ಆರನೆಯ ಶತಕದ ಅಂತ್ಯದಲ್ಲಿ ಕಳೆದುಕೊಂಡಿತ್ತು. ಕದಂಬರ ಕಾಲಕ್ಕೆ ಶೈವ ಧರ್ಮ ಬಹುವ್ಯಾಪಕವಾಗಿ ಪ್ರಚಾರದಲ್ಲಿತ್ತು. ಅರಸರ ಪ್ರೋತ್ಸಾಹವಿತ್ತು. ಆದರೆ ಮುಂದೆ ಗಂಗರ ರಾಜಕೀಯ ಪ್ರವೇಶದಿಂದ ಕದಂಬರ ಪ್ರಭಾವ ಕಡಿಮೆಯಾದಂತೆ ಶೈವ ಧರ್ಮ ಕ್ಷೀಣಿಸಿ ಜೈನ ಧರ್ಮ ಬೆಳೆಯಿತು.

ಇಂತಹ ಸಂದರ್ಭದಲ್ಲಿ ಜಯಶಾಂತ ಲಿಂಗೇಶ್ವರರ ಪ್ರವೇಶವಾಗುತ್ತದೆ. ಇವರ ಮೂಲ ನೆಲೆಯಾವುದು ? ಇತ್ಯಾದಿ ವಿಷಯಗಳ ಬಗ್ಗೆ ಸ್ಥಳ ಪುರಾಣಗಳು ಏನನ್ನು ಹೇಳಲಾರವು ಆದರೂ ಅವರು ಸಂಚರಿಸಿದ ಊರುಗಳು - ನಡೆಸಿದ ಪವಾಡಗಳ ಬಗ್ಗೆ ಸಾಕಷ್ಟು ಮಾಹಿತಿ ನೀಡುತ್ತವೆ. ಊರಿನ ಹೆಸರು ಚಪ್ಪಳಕಿ ಎಂದಿದ್ದು ಇದರ ಮೂಲ ಹೆಸರು 'ಚಾಪಳ್ಯಪುರ'ವೆಂದಿತ್ತೆಂಬುದು ಕಂದಾಯ ಇಲಾಖೆಯ ದಾಖಲೆಗಳಿಂದ ತಿಳಿದುಬರುತ್ತದೆಂಬುದಾಗಿ ಬಿ. ಶಿವಶಂಕರ ಅಭಿಪ್ರಾಯ ಪಟ್ಟಿದ್ದಾರೆ.೧ ಬಹುಶಃ ಈ ಚಾಪಳ್ಯಪುರ ಚಾಲುಕ್ಯ ಪುರವಾಗಿರಬಹುದೆ ? ಆನಂತರ ಪ್ರವರ್ಧಮಾನಕ್ಕೆ ಬಂದ ಚಾಲುಕ್ಯರ ಸಾಮಂತರಾಗಿ ಕದಂಬರು ಆಳ್ವಿಕೆ ನಡೆಸಿದ್ದುದು ಕಂಡು ಬರುತ್ತದೆ. ಒಂದನೆಯ ವಿಕ್ರಮಾದಿತ್ಯನ ಕಾಲದಲ್ಲಿ ಚಾಲುಕ್ಯ ಸಾಮ್ರಾಜ್ಯ ಮತ್ತೇ ಉತ್ಕರ್ಷ ಪಡೆಯಿತು. ಕ್ರಿ.ಶ. ೬೫೫ ರಿಂದ ೬೮೧ ರವರೆಗೆ ಆಳ್ವಿಕೆ ನಡೆಸಿದ ಒಂದನೆಯ ಪುಲಕೇಶಿ ಸಾಮಂತರಾಗಿ ಕದಂಬರು ಆಳಿರಬೇಕು. ಆ ಕದಂಬ ವಂಶದವರೇ ಚಾಪಳ್ಯಪುರದವರಾಗಿರಬೇಕೆನಿಸುತ್ತದೆ. 'ಚಪ್ಪಳಕಿ ಗ್ರಾಮದ ದೊರೆ ದೇವಶರ್ಮ ವೀರಶೈವ ಧರ್ಮಾಚರಣೆಯ ನಿಷ್ಠನಾಗಿದ್ದ ಮೂರುನೂರಾ ನಲವತ್ತು ಗ್ರಾಮಗಳಿಗೊಡೆಯನಾದ ಜಹಗೀರ್‌ದಾರನು' ೨ ಇದನ್ನು ಗಮಸಿದರೇ ಈ ದೊರೆ ಐತಿಹಾಸಿಕನೆಂದು ಭಾವಿಸಬಹುದಾಗಿದೆ. ನಿಶ್ಚಿತ ಕಾಲ ನಮಗೆ ಗೊತ್ತಾಗುವುದಿಲ್ಲ ಹಾಗಾಗಿ ಈ ಸಂದರ್ಭದಲ್ಲಿ ಅವತಾರೀ ಪುರುಷರಾಗಿ ಕಾಣಿಸಿಕೊಳ್ಳುವ ಜಯಶಾಂತ ಲಿಂಗೇಶ್ವರರ ಬಗ್ಗೆಯೂ ಯಾವ ಅಂಶಗಳು ಕಂಡು ಬರಲಾರವು. ಆದರೂ ಸ್ಥಳ ಪುರಾಣಗಳ ಆಧಾರ ಮೇಲೆ ಹೇಳುವುದಾರೇ ಜಯಶಾಂತಲಿಂಗೇಶ್ವರರು ಜೈನ - ವೈದಿಕಗಳ ಪ್ರಭಾವದಿಂದ ಕ್ಷೀಣಿಸುತ್ತಿದ್ದ ವೀರಶೈವವನ್ನು ಉಳಿಸಲು ನಾಡಿನ ತುಂಬ ಸಂಚರಿಸಿದ್ದುದು ಕಂಡು ಬರುತ್ತದೆ. ಹೀಗಾಗಿ ಇವರೊಬ್ಬ ಸಂಚಾರಿ ಶಿವಯೋಗಿಗಳಾಗಿದ್ದು ಜನರಿಗೆ ಜ್ಞಾನ ಭೋದೆ ನೀಡಿದರೆಂಬುದು ತಿಳಿಯುತ್ತದೆ. ಆದರೂ ಇವರ ಕಾಲ ಸದ್ಯಕ್ಕೆ ನಾವು ಬಸವಪೂರ್ವ ಯುಗವೆಂದು ಲಕ್ಷ್ಯದಲ್ಲಿರಿಸಿಕೊಂಡರೆ ಸಾಕೆನಿಸುತ್ತದೆ.

ಬಿ. ಶಿವಶಂಕರ ಹೇಳುವಂತೆ 'ಸದ್ಯ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿಯಲ್ಲೊಂದು ಆಶ್ರಮ ನಿರ್ಮಿಸಲು ಹೇಳಿ ಅಲ್ಲಿಗೈ ತಂದು ಭಕ್ತ ಜನಕೋಟಿಗೆ ಬೋಧಾವೃತ ಕುಡಿಸಿ ಪುನಿತರನ್ನಾಗಿಸಿದ ಮಹಾ ಮಹಿಮರಿವರು. ಆರನೆಯ ಶತಮಾನಾಂತ್ಯದಲ್ಲಿ ಕ್ಷೀಣಿಸಿದ್ದ ವೀರಶೈವ ಧರ್ಮಾಚರಣೆಯನ್ನು ಪುನರುಜ್ಜೀವನಗೊಳಿಸಿ ಅಭಿವೃದ್ಧಿ ಪಡಿಸಿದ ಧರ್ಮ ಪಾಲಕರಿವರು. ಕಾಲ್ನಡಿಗೆಯಿಂದ ಅನೇಕ ಪ್ರಾಂತ್ಯಗಳಲ್ಲಿ ಪ್ರಯಾಣಿಸಿ ಜನ ಮನ ಪಾವನಕ್ಕೋಸ್ಕರ ಪವಾಡ, ನೀಲೆಗಳ ಮೂಲಕ ಪರಿವರ್ತಿಸಿದ ಪ್ರಬುದ್ಧರಿವರು.'೩

ಒಟ್ಟಾರೆಯಾಗಿ ಇವರು ಬಸವಪೂರ್ವಯುಗದ ಸಂಚಾರಿ ಶರಣರಾಗಿದ್ದು ವೈಯಕ್ತಿಕ ಮಟ್ಟದಲ್ಲಿ ಶರಣ ಧರ್ಮವನ್ನು ಸಂಘಟಿಸಿದ ಮಹಿಮರಿವರಾಗಿದ್ದಾರೆ.

೨) ಶಿವಜಾತ ಒಡೆಯರು.

ತಾಲೂಕಿನ ಕೇಂದ್ರ ಸ್ಥಳ ಲಿಂಗಸೂಗೂರಿನ ಪಕ್ಕದಲ್ಲಿಯೇ ಇರುವ ಕರಡಿಕಲ್ಲು ಎಡೆದೊರೆನಾಡಿನ ಉಪ ವಿಭಾಗವಾಗಿದೆ. ೪೦೦ ಹಳ್ಳಿಗಳನ್ನು ಹೊಂದಿದ್ದ ಈ ಗ್ರಾಮ ಐತಿಹಾಸಿಕವಾಗಿ - ಧಾರ್ಮಿಕ - ಸಾಂಸ್ಕೃತಿಕವಾಗಿ ಖ್ಯಾತಿಯನ್ನು ಪಡೆದಿದೆ. ಕರಡಿಕಲ್ಲು ಗ್ರಾಮದಲ್ಲಿ ಭಿಲ್ಲಮರಾಜನಿಗೆ ಗುರುಗಳಾಗಿದ್ದ ಶಿವಜಾತ ಒಡೆಯರು ಚರಿತ್ರೆ ನಮಗೆ ಈ ಕೆಳ ಕಾಣಿಸಿದ ಕೃತಿಗಳಿಂದ ಕಂಡು ಬರುತ್ತದೆ:-

ಕಲ್ಯಾಣ ಶರಣರ ವಚನಗಳು, ಸಿದ್ಧನಂಜೇಶನ ರಾಘವಾಂಕ ಚರಿತೆ (ಕ್ರಿ.ಶ. ೧೬೫೦), ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ, ಎಮ್ಮಿ ಬಸವನ ಭಿಲ್ಲಮರಾಯನ ಸಾಂಗತ್ಯ (ಕ್ರಿ.ಶ.೧೫೪೩) ಮ್ಯಾಗೇರಿ ಚಂದ್ರಶೇಖರ ಶಾಸ್ತ್ರಿಗಳ ಕರಡಿ ಕಲ್ಲು ಭಿಲ್ಲಮರಾಜ ಪುರಾಣ (ಕ್ರಿ.ಶ.೧೯೫೯) ಶಾಂತಲಿಂಗ ದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ (ಕ್ರಿ.ಶ.೧೬೭೨) ರಾಘವಾಂಕ ಚರಿತೆ ಶಿವಜಾತ ಒಡೆಯರನ್ನು 'ಶಿವಜಾತ ಮುನಿಪ' ೪ ಎಂದು ಕರೆದರೆ ಉತ್ತರ ದೇಶದ ಬಸವಲಿಂಗನ ಭೈರವೇಶ್ವರ ಕಾವ್ಯದ ಕಥಾಸಾಗರ ಮತ್ತು ಉಚಿತ ಕಥೆಗಳಲ್ಲಿ [illegible] 'ಜಾತಿ ಒಡೆಯರು'೫ ಎನ್ನಲಾಗಿದೆ.

---

೧ : ಬಿ. ಶಿವಶಂಕರ - ಜಾ. ಜಿ. ಶಾಂ. ವಿ. ಪುಟ ೩

೨ : ಅದೇ ಪುಟ ೧೩

೩ : ಅದೇ ಪುಟ VIII

೪ : ಸಂ: ಎಸ್. ಎಸ್. ಮಾಳವಾಡ - ರಾ. ಚ.

೫ : ಎಸ್. ಉಮಾಪತಿ - ಉ. ಬ. ಭೈ. ಉ. ೧೫೨ ಕಥೆ, ಪುಟ ೪೯-೫೦

ಇವರು ಮೂಲತಃ ಕಂಚೀ ಪಟ್ಟಣದವರು ಎಂಬ ಅಭಿಪ್ರಾಯ ವ್ಯಕ್ತಪಡಿಸಿದ ಎಸ್.ಎ. ಸೊಪ್ಪಿಮಠರು ' ಕಂಚೀ ಪಟ್ಟಣದಲ್ಲಿ ಶ್ರೀ ಶಂಕರಾಚಾರ್ಯ ಮತ್ತು ಸುಶೀಲೆ ಎಂಬ ಪುಣ್ಯ ದಂಪತಿಗಳ ಮಗನಾಗಿ ಶ್ರೀ ಶಿವಜಾತ ಒಡೆಯರು ಜನಿಸಿದರು' . ೧ ಎಂಬುದಾಗಿ ಹೇಳುತ್ತ ಅವರು ಮುಂದೆ ವಿವಾಹಕ್ಕೊಪ್ಪದೆ ವೈರಾಗ್ಯತಾಳಿ ಮನೆ ತ್ಯಜಿಸಿ ಯೋಗ್ಯ ಗುರುವನ್ನು ಹುಡುಕುತ್ತ ಕರಡೀಕಲ್ಲು ಗ್ರಾಮಕ್ಕೆ ಬಂದರೆಂಬುದಾಗಿ ಹೇಳುತ್ತಾರೆ.೨ಭೈರವೇಶ್ವರ ಕಾವ್ಯದ ಕಥಾಸಾಗರ ಮತ್ತು ಉಚಿತ ಕತೆಗಳಲ್ಲಿ ೧೫೨ನೇ ಕಥೆ ಹೀಗಿದೆ:-

' ಕರಡಿಕಲ್ಲ ಭಿಲ್ಲಮರಾಯ ವೀರಶೈವ ದೀಕ್ಷೆಯನ್ನು ಜಾತಿ ಒಡೆಯರಲ್ಲಿ ಪಡೆದು ಬಳಿಕ ಪದ್ಮಾವತಿ ಎಂಬ ಸ್ತ್ರೀಯಕೂಡಿ ಚರಲಿಂಗ ಭಕ್ತಿ ಮಾಡುತ್ತಿರಲು ಒಂದು ದಿನ ಡೊಂಬರ ಚೆನ್ನಿಯ ಮೇಳ ಆ ಊರಿಗೆ ಬರಲು ಆಟ ಆಡೋದಿಕ್ಕೆ ಸಮಯ ಕೊಡದಿರಲು, ಬಳಿಕ ಜಾತಿ ಒಡೆಯರು ಬಿಲ್ವವನದಲ್ಲಿದ್ದರೆಂಬುದ ಕೇಳಿ ಅಲ್ಲಿಗೆ ಕಣ್ಣು ಮುಚ್ಚಿ ಕೈಯಲ್ಲಿ ಬಿದ್ದ ಪತ್ರೆಯ ಸಲ್ಲಿಸುವುದ ಕಂಡು ಡೊಂಬರ ಚೆನ್ನಿ ಗೋಧಿಯ ಸಜ್ಜಿಗೆಯಲ್ಲಿ ಮೊದಲು ಒಂದೆಸಳಿನ ತರಗ ಮಾಡಿ ಕೈಯೊಳಗೆ ನೀಡಲು ಪತ್ರೆ ಎಂದು ಸಲಿಸಿದರು. ಮರುದಿನ ಎರಡೆಸಳು, ಮೂರೆಸಳು, ನಾಲ್ಕೆಸಳು, ಐದೆಸಳು, ಆರೆಸಳು, ಏಳೆಸಳುಳ್ಳ ತರುಗ ತುಪ್ಪದಲ್ಲಿ ತಾಳಿಸಿ ಏಳುದಿನ ತನಕಾ ನೀಡಲು ಸಪ್ತಧಾತುಗಳು ಹೆಚ್ಚಿ, ಕಣ್ಣು ತೆರೆಯಲು, ಮುಂದಿಟ್ಟ ಮೊಸರೋಗದ ಹರಿವಾಣವ ಕಂಡು ' ಶಿವನೇ ಮಡಗಿದನೆ'ಂದು ಸಲ್ಲಿಸಲು ಡೊಂಬರ ಚೆನ್ನಮ್ಮ ಒಂದು ರುದ್ರವೀಣೆಯ ತಕ್ಕೊಂಡು ರಾಗವ ಮಾಡಲು 'ಕುಚದಮೇಲಳ ಸೆರಗು ಮತ್ತೊಮ್ಮೆ ಜಾ: ರದೆಯೆ?' ಎಂದು ಬೆರಗಾಗಿ ನೋಡುತ್ತಿರಲು ಆಗ ಚೆನ್ನಕ್ಕ ಹೋಗುತ್ತಿರಲು ' ಚೆನ್ನ ಬಿಟ್ಟುಹೋಗಬೇಡ ' ವೆನಲು 'ನನ್ನ ಕೂಡೆ ಬನ್ನಿ ' ಎಂದು ಕರಕೊಂಡು ಹೋಗಿ ಮತ್ತೊಂದು ದೇಶಕ್ಕೆ ಹೋಗಲು ಇತ್ತ ಭಿಲ್ಲಮ ರಾಯ ನಮಸ್ಕಾರಕ್ಕೆ ಬರಲು ಎರಡು ಮೂರುದಿನ ಇಲ್ಲದಿರಲು ' ಗುರುವಕಾಣೆವೆ'ಂದು ಮಂತ್ರಿಗೆ ಹೇಳಲು ಅವ ಡೊಂಬರಿದ್ದಲಿಗೆ ಹೋಗಿ ಭಿಲ್ಲಮ ರಾಯ ನಿಮ್ಮ ಬರ ಹೇಳಿದನೆಂದು ಕರಕೊಂಡು ಹೋಗಲು ಅವರು ಅರಸಿನ ಬಳಿಗೆ ಆಡುವುದಕ್ಕೆ ಬರಲು, ಜಾತಿ ಒಡೆಯರು ಡೋಳಬಾರಿಸುತ್ತಿರಲು ಭಿಲ್ಲಮ ರಾಯನ ಅಂತಃಕರಣದಲ್ಲಿ ತಲೆ ಬಾಗಿ ನಿಲ್ಲುತಲೆ, ತ್ಯಾಗ ಕೊಟ್ಟು, ಕಳುಹಿ, ಬಳಿಕ ಏಕಾಂತದಲ್ಲಿ ಗುರುವಿಗೆ ನಮಸ್ಕರಿಸಬೇಕೆಂದು ಹೋಗಲು ಜಾತಿ ಒಡೆಯರು ಆಕೆಯ ಸಂಗಡ ಉಂಬುತ್ತಿರಲು ಕಂಡ ರಾಯ 'ಪ್ರಸಾದ ನೀಡಿ ' ಎನಲು ' ನಾನು ಕೆಟ್ಟಿದ್ದೇನೆ ಹೇಗೆ ನೀಡಲಿ' ಎನಲು 'ಚಂದ್ರಂಗೆ ಕಳಂಕಿದ್ದರೆ ಪ್ರಭೆ ಕುಂದುವುದೇ ಶಿವನ ರೂಪಾದ ನಿಮಗೆ ಕುಂದುಂಟೆ' ಎನಲು ಆಗ ಚೆನ್ನಮ್ಮ ಪ್ರಸಾದ ನೀಡಲು ಸಲಿಸುವಾಗ ಶಿವನು ಮೆಚ್ಚಿ ಜಾತಿ ಒಡೆಯರು ಭಿಲ್ಲಮ ರಾಯ ಡೊಂಬರುಸಹಿತವಾಗಿ ಕೈಲಾಸಕ್ಕೆ ಕರೆದೊಯ್ದರು'.೩

ಈ ಕತೆಯನ್ನು ಗಮನಿಸಿದಾಗ ನಮಗೆ ಕಂಡು ಬರುವ ಅಂಶಗಳೆಂದರೆ:

೧)ಕರಡಿಕಲ್ಲ ಭಿಲ್ಲಮರಾಯ ವೀರಶೈವ ದೀಕ್ಷೆಯನ್ನು ಜಾತಿ ಒಡೆಯರಲ್ಲಿ ಪಡೆದುಕೊಳ್ಳುತ್ತಾನೆ. ಆನಂತರದಲ್ಲಿ ಆತ ಪದ್ಮಾವತಿಯೊಡನೆ ಸೇರಿ ಚರಲಿಂಗ ಭಕ್ತಿಯನ್ನು ಮಾಡುತ್ತಾನೆ.

೨) ಮೊಸರೋಗವನ್ನು ಸೇವಿಸಿದ ಮೇಲೆ ಆತ ಡೊಂಬರ ಚೆನ್ನಿಯ ಬೆನ್ನು ಹತ್ತುತ್ತಾನೆ.

೩) ಭಿಲ್ಲಮರಾಯನು ಗುರುವನ್ನು ಏಕಾಂತದಲ್ಲಿ ಕಂಡು ನಮಸ್ಕರಿಸಲು ಹೋದಾಗ ಗುರುಗಳು ಚೆನ್ನಿಯೊಡನೆ ಊಟಮಾಡುವಾಗ ನನಗೆ ಪ್ರಸಾದ ನೀಡಿ ಎಂದು ಬೇಡಿ ಅದನು ಸ್ವೀಕರಿಸಿ ಸಮಾನತೆಯ ಪ್ರತಿರೂಪವಾಗಿ ಭಿಲ್ಲಮರಾಯ ಕಂಡುಬರುತ್ತಾನೆ.

ಇದು ಭೈರವೇಶ್ವರ ಕಾವ್ಯದ ಮೂಲ ಕಥೆಯಾದರೂ ಅದನ್ನು ಸ್ವಲ್ಪ ಮಾರ್ಪಡಿಸಿ ಉತ್ತರ ದೇಶದ ಬಸವಲಿಂಗ ರಚಿಸಿದ್ದಾನೆ. ಆದರೂ ಆಶಯ ಬದಲಾಗಿಲ್ಲ. ಇದನ್ನು ಗಮನಿಸಿದ ಡಾ : ಬಸವಲಿಂಗ ಸೊಪ್ಪಿಮಠರವರು 'ಭಿಲ್ಲಮನರಾಯನ ಗುರುಭಕ್ತಿ ಪರೀಕ್ಷೆಗೆ ಈ ಕತೆ ಹುಟ್ಟಿದೆಯೇ ವಿನಾ ಜಾತೋಡೆಯರ (ಶಿವಜಾತ ಒಡೆಯರ) ಜಾರಿದ ಮಾರ್ಗವನ್ನು ಸೂಚಿಸಲಲ್ಲ ಎನ್ನಿಸುತ್ತದೆ'.೪ ಎಂಬ ಅಭಿಪ್ರಾಯ ವ್ಯಕ್ತಪಡಿಸುದ್ದು ಬಹು ಸೂಕ್ತವೆನಿಸುತ್ತದೆ. ಕುಲಮದವನ್ನು ಅಳಿಸಲು ತನ್ನ ಭಕ್ತನಿಗೆ ಗುರುಗಳು ಮಾಡಿದ ಪರೀಕ್ಷೆ ಇದಾಗಿದೆ ಎಂದು ಊಹಿಸಲು ಬರುತ್ತದೆ. ಇದೊಂದು ನಟನೆ ಮಾತ್ರವೇ? ೫ ಎಂಬ ಸಂದೇಹ ಸೊಪ್ಪಿಮಠರವರು ವ್ಯಕ್ತಪಡಿಸಿ ಜಾತೋಡೆಯರು ನಾರಿಗೆ ಸೋಲಿಲಿಲ್ಲ ಎಂಬುದನ್ನು ರಾಘವಾಂಕ ಚರಿತಯಲ್ಲಿ ಬರುವ ಕತೆಯೊಂದರ ಮೂಲಕ ಸಮರ್ಥಿಸಿದ್ದು ಸೂಕ್ತವೆನಿಸುತ್ತದೆ. ೬

ಹಾಗೆಯೇ ಕರಡಿಕಲ್ಲು ಗ್ರಾಮದಲ್ಲಿ ಕಂಡುಬರುವ ಭಿಲ್ಲಮರಾಯನ ಗುಡ್ಡ, ಶಿವಜಾತಒಡೆಯರ ಮಠ, ಕುಣಿ ಸೋಮೇಶ್ವರ ದೇವಾಲಯ, ಭಿಲ್ಲಮರಾಜನ ಕೆರೆ, ಬಿಜ್ಜಮ್ಮನ ಸೆರೆಮನೆ, ಡೊಂಬರ ಚೆನ್ನಮ್ಮನ ಗುಡ್ಡ ಇತ್ಯಾದಿ ಅನೇಕ ಅವಶೇಷಗಳು ನಮಗೆ ಕಂಡು ಬರುತ್ತವೆ. ಕರಡಿಕಲ್ಲಿನಲ್ಲಿ ಡೊಂಬರ ಚೆನ್ನಮ್ಮನ ಬಗ್ಗೆ ಕೇಳಿ ಬರುವ ಐತಿಹ್ಯಗಳು ನಮಗೆ ಶಿವಜಾತ ಒಡೆಯರು ಚಾರಿತ್ರಿಕ ವ್ಯಕ್ತಿ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ.

---

೧ : ಸಂ : ಡಾ : ಬಸವಲಿಂಗ ಸೊಪ್ಪಿಮಠ - ಸೂಗೂರ ಸಂಪದ ಪುಟ ೬೬

೨ : ಅದೇ ಪುಟ ೬೬

೩ : ಎಸ್. ಉಮಾಪತಿ - ಉ. ಬ. ಭೈ. ಉ. ಪುಟ ೪೯-೫೦

೪ : ಡಾ : ಬಸವಲಿಂಗ ಸೊಪ್ಪಿಮಠ- ಅ. ಪುಟ ೨೪

೫ : ಅದೇ ಪುಟ ೨೪ -೨೬

೬ : ಸಂ: ಎಸ್. ಎಸ್. ಮಾಳವಾಡ - ರಾ. ಚ.

ಕಾಲ :-

ಯಾದವ (ಸೇವುಣರ) ರ ಅರಸ ಭಿಲ್ಲಮನ ಗುರುಗಳೆಂಬುದು ನಮಗೆ ಈಗಾಗಲೇ ಸ್ಪಷ್ಟವಾಗಿದೆ. ಶಿವಜಾತ ಒಡೆಯರ ಶಿಷ್ಯನಾದ ಭಿಲ್ಲಮನು ಅವನ ಆಳ್ವಿಕೆಯ ಆಧಾರದಿಂದ ಇವರ ಕಾಲವನ್ನು ಗುರುತಿಸಬಹುದಾಗಿದೆ. ಬಸವಪೂರ್ವಯುಗದಲ್ಲಿ ಬರುವ ಭಿಲ್ಲಮನೇ ಇವರ ಶಿಷ್ಯನಾಗಿದ್ದು ಆತ ಮೂರನೆಯ ತಲೆಮಾರಿನವನು. ಆತನ ಕಾಲ ಕ್ರಿ.ಶ.೧೦೨೫ ರಿಂದ ೫೫ ಎಂದು ಗುರುತಿಸಬಹುದಾಗಿದೆ. ಅಂತೆಯೇ ಶಿವಜಾತ ಒಡೆಯರ ಕಾಲವನ್ನು ಅವರ ಡೊಂಬರ ಚೆನ್ನಿಯ ಘಟನೆಯ ಆಧಾರದ ಮೇಲೆ ನೋಡಿದಾಗ ಅವರು ಭಿಲ್ಲಮನಿಗಿಂತಲೂ ಐವತ್ತು ವರುಷ ಹಿರಿಯರೆಂದು ನಾವು ಊಹಿಸಿದರೆ ಅವರ ಕಾಲ ಕ್ರಿ.ಶ.೯೭೫ ಎನ್ನಲು ಅಡ್ಡಿಯಿಲ್ಲವೆನಿಸುತ್ತದೆ. ಹಾಗಾಗಿ ಶಿವ ಜಾತ ಒಡೆಯರು ಕ್ರಿ.ಶ. ೯೭೫ ರಿಂದ ಕ್ರಿ.ಶ. ೧೦೪೦ ವರೆಗೆ ಇದ್ದರೆನ್ನಲು ಅಡ್ಡಿಯಿಲ್ಲವೆನಿಸುತ್ತದೆ.

ಎರಡನೆಯ ಭಿಲ್ಲಮನ ಕಾಲ ಕ್ರಿ.ಶ. ೯೭೫ ರಿಂದ ೧೦೦೦ ಆಗಿದ್ದು ಆತನ ಸಮಕಾಲೀನರಾಗಿ ಇವರು ಬರಲಾರರು. ಆತನ ನಂತರದಲಿ ಇವರು ಕಂಡು ಬರುತ್ತಾರೆ. ನವಿಲೆ- ಕರಡಿಕಲ್ಲು ಶಾಸನಗಳನ್ನು ಗಮನಿಸಿದಾಗ ಕ್ರಿ.ಶ.೧೦೧೪ ಮತ್ತು ೧೦೭೮ ರ ಕಾಲವನ್ನು ಅವು ಸೂಚಿಸುತ್ತವೆ. ಹಾಗಾಗಿ ಶಿವಜಾತ ಒಡೆಯರು ಈ ಶಾಸನಕ್ಕಿಂತ ಮುಂಚಿನವರೆಂಬುದು ಸ್ಪಷ್ಟವಾಗಿದೆ.

ಸ್ಥಳ :-

ಕರಡಿಕಲ್ಲಿನ ಸ್ಥಳ ಪುರಾಣಗಳು ಈತನನ್ನು ಕಂಚೀ ಎಂದು ಮೂಲತಃ ಭಾವಿಸಿ ಬನವಾಸಿ, ಕುಂಬಕೋಣಂಗಳ ಮೂಲಕ ತಳಕು ಹಾಕಿ ಅನೇಕ ಕತೆಗಳನ್ನು ಸೃಷ್ಟಿಸಿರುವುದು ಕಂಡು ಬರುತ್ತದೆ. ೧

ಇದಕ್ಕೆ ಯಾವುದೇ ಸ್ಪಷ್ಟ ಆಧಾರಗಳಲ್ಲಿದ ಕಾರಣ ನಂಬಲರ್ಹವಾಗಿಲ್ಲ. ಶಿವಜಾತ ಒಡೆಯರು ಮೂಲತಃ ಇದೇ ಭಾಗದವರಾಗಿದ್ದು ಅವರು ಕರಡಿಕಲ್ಲಿನಲ್ಲಿಯೇ ಬಹುದಿನ ಕಳೆದುದರ ಸಂಗತಿ ಕಂಡು ಬರತ್ತದೆ.

ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿದ್ದ ಶಿವಚಿಂತಾಯಕರ ಆಕರ್ಷಣೆಯಿಂದಾಗಿ ಈತ ಕರಡಿಕಲ್ಲಿಗೆ ಬಂದಿರಬಹುದೆನಿಸುತ್ತದೆ. ನಾವು ಮೊದಲು ನೋಡಿದ ಐತಿಹ್ಯಗಳ - ಅವಶೇಷಗಳ ಆಧಾರದ ಮೇಲೆ ಈತ ದೂರದ ಕಂಚೀ ಪಟ್ಟಣದವನಾಗಿರದೇ ಕರಡಿಕಲ್ಲಿನವರು ಎಂಬುದು ಸ್ಪಷ್ಟ.

ವ್ಯಕ್ತಿತ್ವ :-

ಡೊಂಬರ ಚೆನ್ನಮ್ಮನ ಘಟನೆಯ ಮೂಲಕ ನೋಡಿದರೆ ಇವರು ವೀರಶೈವರಲ್ಲವೆಂಬುದು ಕಂಡರೂ ಕತೆಯ ಆರಂಭದಲ್ಲಿಯೇ ಉತ್ತರ ದೇಶದ ಬಸವಲಿಂಗನು ಇವರನ್ನು ವೀರಶೈವ ದೀಕ್ಷಾ ಗುರುಗಳೆಂದು ಭಾವಿಸಿದ್ದನ್ನು ಕಾಣಬಹುದಾಗಿದೆ. ೨

'ಶುದ್ಧಶೈವ' ಎಂಬುದನ್ನು ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ ಹೇಳುವುದನ್ನು ಗಮನಿಸಿ ಡಾ : ಬಸವಲಿಂಗ ಸೊಪ್ಪಿಮಠರು 'ಶೈವವೆಂದರೆ ಲಕುಲೀಶ ಪಾಶುಪತವೆಂದೇ ಇಲ್ಲಿ ಹೇಳ ಬಹುದು ಪಾಶುಪತ ಮಾರ್ಗದ ಗುರುವೊಬ್ಬನ ವಿಲಕ್ಷಣ ವರ್ತನೆಗಳು ಭಿಲ್ಲಮ ಗುರು ಶಿವಜಾತನಲ್ಲಿರುವುದು ಈತ ಶೈವವೆನ್ನಲು ಕಾರಣವಾಗಬಹುದು'. ೩

ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾರೆ ಈತನ ವರ್ತನೆ ಆಧಾರದಮೇಲೆ ಇವರ ವ್ಯಕ್ತಿತ್ವದಲ್ಲಿ ದೋಷವನ್ನು ಕಾಣಲಾಗದು. ಡೊಂಬರ ಚೆನ್ನಮ್ಮ ಸಹ ಒಬ್ಬ ಶಿವಭಕ್ತೆಯಾಗಿದ್ದು ಅವಳ ಭಕ್ತಿಗೆ ಮೆಚ್ಚಿ ಅವಳೊಡನೆ ಇವರು ಸಂಚಾರ ಮಾಡಿದ್ದಾರೆ ಹೊರತು ಅವಳ ಸೌಂದರ್ಯ ಮೆಚ್ಚಿ ಅಲ್ಲವೆಂಬುದು ಸ್ಪಷ್ಟವಾಗುತ್ತದೆ.

---

೧ : ಸಂ: ಡಾ : ಬಸವಲಿಂಗ ಸೊಪ್ಪಿಮಠ-ಸೂಗೂರ ಸಂಪದ ಪುಟ ೬೬-೬೯

೨ : ಎಸ್. ಉಮಾಪತಿ - ಉ.ಬ.ಭೈ. ಉ. ಪುಟ ೪೯

೩ : ಡಾ : ಬಸವಲಿಂಗ ಸೊಪ್ಪಿಮಠ- ಆ. ಪುಟ ೨೧

೩) ರಾಜ ಭಿಲ್ಲಮ ರಾಯ

ಪ್ರಾಚೀನ ಕನ್ನಡ ನಾಡಿನ ಸಾಂಸ್ಕೃತಿಕ ನೆಲೆಬೀಡಾಗಿದ್ದ ಕರಡಿಕಲ್ಲು -೪೦೦ ನ್ನು ಅನೇಕ ಅರಸರು ಆಳಿದರು. ಅವರಲ್ಲಿ ಯಾದವರು ಸಹ ಪ್ರಮುಖರಾಗಿದ್ದಾರೆ.

'ದೇವಗಿರಿಯ ಯಾದವರು ಮೊದಲು ಕಲ್ಯಾಣದ ಚಾಲುಕ್ಯರ ಮಾಂಡಳಿಕರಾಗಿದ್ದರು. ಚಾಲುಕ್ಯ ದೊರೆ ನಾಲ್ಕನೆಯ ಸೋಮೇಶ್ವರ ಮಾಂಡಳಿಕನಾಗಿದ್ದ ಐದನೆಯ ಭಿಲ್ಲಮನು ಚಾಲುಕ್ಯರ ಅವನತಿಯ ಲಾಭ ಪಡೆದು ಸ್ವತಂತ್ರ ದೊರೆಯಾದನು (ಕ್ರಿ.ಶ.೧೧೮೭) ಈತನು ದೇವಗಿರಿನಗರವನ್ನು ಕಟ್ಟಿ ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು ಕಲ್ಯಾಣ ಚಾಲುಕ್ಯರ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಯಾದವ ದೊರೆ ಐದನೆಯ ಭಿಲ್ಲಮ ಮತ್ತು ಹೊಯ್ಸಳ ದೊರೆ ಎರಡನೆಯ ಬಲ್ಲಾಳ ಹೋರಾಡಿದರು. ಕ್ರಿ.ಶ.೧೧೯೦ ರಲ್ಲಾದ ಸೊರಟೂರು ಕಾಳಗದಲ್ಲಿ ಭಿಲ್ಲಮನು ಬಲ್ಲಾಳನಿಂದ ಪರಾಭವ ಹೊಂದಿದನು. ಭಿಲ್ಲಮನ ರಾಜ್ಯ ದಕ್ಷಿಣದಲ್ಲಿ ಕೃಷ್ಣಾನದಿಯ ವರೆಗೂ ಹಬ್ಬಿತ್ತು. ಕ್ರಿ.ಶ.೧೧೯೩ ರಲ್ಲಿ ಮಡಿದನು. ೧ ಮೇಲಿನ ಐತಿಹಾಸಿಕ ಹೇಳಿಕೆ ಗಮನಿಸಿದರೆ ಭಿಲ್ಲಮರಾಯ ಎಂಬುವವನು ಯಾದವ ದೊರೆ . ಕ್ರಿ.ಶ.೧೧೯೩ ರವೇಳೆಗೆ ಕನಿಷ್ಟ ಪಕ್ಷ ಐದು ಜನ ಭಿಲ್ಲಮರು ಆಳ್ವಿಕೆ ನಡೆಸಿರಬೇಕು. ಅವರ ಆಳ್ವಿಕೆಯ ಮೇರೆ ಕೃಷ್ಣಾನದಿಯವರೆಗೂ ಹಬ್ಬಿತ್ತು ಎಂಬುದನು ಅವಲೋಕಿಸಿದರೆ ಐದನೆಯ ಭಿಲ್ಲಮ ಕರಡೀಕಲ್ಲು ಪ್ರದೇಶದಲ್ಲಿ ನೇರವಾಗಿ ಆಳ್ವಿಕೆ ನಡೆಸಲಿಲ್ಲ ವೆಂದು ತೋರುತ್ತದೆ. ಹಾಗಾಗಿ ಇವನಿಗಿಂತ ಮುಂಚಿನ ಭಿಲ್ಲಮರೇ ಆಳ್ವಿಕೆ ನಡೆಸಿದರೆಂಬುದು ಸ್ಪಷ್ಟವಾಗುತ್ತದೆ. ಮುಂಚಿನ ನಾಲ್ಕ ಜನ ಭಿಲ್ಲಮರನ್ನು ಗಮನಿಸಿದಾಗ ಶರಣರು ನೆನಪಿಸಿಕೊಳ್ಳು ವಭಿಲ್ಲಮನು ಮೂರನೆಯವನು ಎಂಬುದು ನಮಗೆ ಅವಲೋಕನೆಗಳಿಂದ ಸ್ಪಷ್ಟವಾಗುತ್ತದೆ.

ಸೇವುಣ ಅರಸರಲ್ಲಿ ಕ್ರಿ.ಶ.೧೦೫೫ ರಿಂದ೧೦೯೯ ರವರೆಗೆ ಆಂತರಿಕ ಕಚ್ಚಾಟ ಅಧಿಕಾರಕ್ಕಾಗಿ ನಡೆದಾಗ ವಡ್ಡಿಗ, ಎರಡನೆ ವಾಸುಗಿ ಮತ್ತು ನಾಲ್ಕನೆಯ ಭಿಲ್ಲಮರಲ್ಲಿ ಪರಸ್ಪರ ಸಂಘರ್ಷ ನಡೆಯಿತೆಂದು ನಮಗೆ ಸೇವುಣರ ಇತಿಹಾಸ ಗಮನಿಸಿದಾಗ ತಿಳಿದು ಬರುತ್ತದೆ. ೨

ಹೀಗಾಗಿ ಅಧಿಕಾರದ ದಾಹದಲ್ಲಿಯೇ ತನ್ನ ಕಾಲ ಕಳೆದ ನಾಲ್ಕನೆಯ ಭಿಲ್ಲಮನಿಗೆ ಗುರು ಸೇವೆ - ಶಿವ ಪೂಜೆ ಮಾಡುವ ಅವಕಾಶ ಹೇಗೆ ಒದಗಿ ಬರಲು ಸಾಧ್ಯ ? ಎನಿಸುತ್ತದೆ. ಜೊತೆಗೆ ಇತನ ಕಾಲದಲ್ಲಿ ಕರಡಿಕಲು ಶಾಸನದಲ್ಲಿ ಉಲ್ಲೇಖಿಸಲ್ಪಡುವ ಶಿವಚಿಂತಾಯಕ ಕಂಡುಬರುತ್ತಾನೆ. ಈತ ಆರನೆಯ ವಿಕ್ರಮಮಾದಿತ್ಯನ ಗುರು. ಹಾಗಾಗಿ ಒಂದೇ ಸ್ಥಾನದಲ್ಲಿ ಶಿವಜಾತರನ್ನು - ಶಿವಚಿಂತಾಯಕರನ್ನು ಕಾಣಲುಶಕ್ಯವಿಲ್ಲ ವೆನಿಸುತ್ತದೆ. (ಈ ಬಗ್ಗೆ ಕ್ರಿ.ಶ. ೧೦೭೭ ಹಾಗೂ೧೦೭೯ ರ ಶಾಸನಗಳು ಶಿವಚಿಂತಾಯಕರನ್ನು ಉಲ್ಲೇಖಿಸಿವೆ.) ಹಾಗಾಗಿ ನಾಲ್ಕನೆಯ ಭಿಲ್ಲಮನು ಶಿವಜಾತ ಒಡೆಯರ ಶಿಷ್ಯನಲ್ಲ ; ಕಲ್ಯಾಣ ಶರಣರು ನೆನೆಸುವ ಭಿಲ್ಲಮ ಈತನಲ್ಲವೆಂಬುದು ನಮಗೆ ಸ್ಪಷ್ಟವಾಗಿ ಕಂಡುಬರುತ್ತದೆ. ಹಾಗಾಗಿ ಮೂರನೆಯ ಭಿಲ್ಲಮನೇ ಬಸವಪೂರ್ವಯುಗದ ಶರಣರೆಂಬುದು ಸ್ಪಷ್ಟವಾಗಿದೆ.

ಕಾಲ:-

'ಕಲ್ಯಾಣ ಚಾಲುಕ್ಯರ ಎರಡನೆಯ ಜಯಸಿಂಹನ ಕಾಲ ಕ್ರಿ.ಶ. ೧೦೧೫ -೧೦೪೩ ರಲ್ಲಿ ಬರುತ್ತಿದ್ದು ಈತ ಮೂರನೆಯ ಭಿಲ್ಲಮನ ದಂಗೆಯನ್ನು ಅಡಿಗಿಸಿದನು ಎಂಬುದರ ಬಗ್ಗೆ ನಮಗೆ ಕಲ್ಯಾಣ ಚಾಲುಕ್ಯರ ಇತಿಹಾಸದಿಂದ ಸ್ಪಷ್ಟವಾಗುತ್ತದೆ. '೩

ಹಾಗಾಗಿ ಭಿಲ್ಲಮನು ಸ್ವತಂತ್ರನಾಗಲು ಹವಣಿಸಿದ್ದುದು ಕಂಡು ಬರುತ್ತದೆ . ಮುಂದೆ ಜಯಸಿಂಹನಿಂದ ಸೋಲನ್ನು ಪಡೆದ ಮೇಲೆ ಈತ ಆತನಿಗೆ ವಿಧೇಯನಾಗಿ ನಡೆದುಕೊಂಡಿರಬೇಕು. ಹಾಗಾಗಿ ಈತನ ಕಾಲ ಕ್ರಿ.ಶ. ೧೦೧೫ರ ನಂತರ ಹಾಗೂ ೧೦೪೩ ಕ್ಕಿಂತ ಮುಂಚಿನದು ಎಂಬುದು ಸ್ಪಷ್ಟವಾಗುತ್ತದೆ. ಈ ಕುರಿತು ಡಾ : ಬಸವಲಿಂಗ ಸೊಪ್ಪಿಮಠರವರು 'ಮುಮ್ಮಡಿ ಭಿಲ್ಲಮ (೧೦೨೫ ರಿಂದ ೫೫) ಚಾಲುಕ್ಯ ಎರಡನೆಯ ಜಯಸಿಂಹಮನ ಪುತ್ರಿಯೂ ಅಹವಮಲ್ಲ ಸೋಮೇಶ್ವರನ ಸಹೋದರಿಯೂ ಆದ ಆವಲ್ಲ ದೇವಿಯನ್ನು ವಿವಾಹವಾಗಿದ್ದ ವ್ಯಕ್ತಿ ಜಯಸಿಂಹ ಮತ್ತು ಅಹವಮಲ್ಲ ಇಬ್ಬರಿಗೂ ವಿಧೇಯನಾಗಿದ್ದ ಈತ ಯುದ್ಧಗಳಲ್ಲಿ ಸಹಾಯ ಮಾಡಿದ . ಮುಮ್ಮಡಿ ಭಿಲ್ಲಮ ಈ ಸಾಹಸ ಗುಣ ಚಕ್ರವರ್ತಿ ಮನೆತನದೊಂದಿಗೆ ರಕ್ತ ಸಂಬಂಧ ಇವುಗಳನ್ನು ನೆನೆದರೆ ಗುರು ಭಕ್ತಿಗೆ ತನ್ನ ಜೀವನವನ್ನು ಮುಡಿಪಿಡುವಷ್ಟು ನಿರುಮ್ಮಳ ಜೀವನ ಈತನದಾಗಿತ್ತೆಂದು ಊಹಿಸಲು ಸಾಧ್ಯವಿದೆ '೪

ಎನ್ನುವ ವಿಚಾರಗಳು ಬಹು ಸೂಕ್ತವಾಗಿದೆ ಹಾಗಾಗಿ ಮುಮ್ಮಡಿ ಭಿಲ್ಲಮ ಕಾಲ ಕ್ರಿ.ಶ.೧೦೨೫ರಿಂದ ೫೫ ಎಂದು ಹೇಳುವುದು ಬಹು ಸೂಕ್ತವೆನಿಸ್ತುದೆ. ಅಂತೆಯೇ ಮುಮ್ಮಡಿ ಭಿಲ್ಲಮನೇ ಶಿವಜಾತ ಒಡೆಯರ ಶಿಷ್ಯನೆಂಬುದು ಸ್ಪಷ್ಟವಾಗುತ್ತದೆ.

---

೧ : ಡಿ.ಟಿ. ಜೋಶಿ - ಪ್ರಾ.ಭಾ.ಇ. ಪುಟ ೩೦೯ - ೩೧೦

೨ : ಡಾ : ನರಸಿಂಹಮೂರ್ತಿ - ಕ.ಸೇ.ಇ. ಪುಟ ೨೫-೨೯

೩ : ಡಿ.ಟಿ. ಜೋಶಿ - ಪ್ರಾ.ಭಾ.ಇ. ಪುಟ ೨೮೦

೪ : ಡಾ : ಬಸವಲಿಂಗ ಸೊಪ್ಪಿಮಠ - ಆ.ಪುಟ ೨೧

ವ್ಯಕ್ತಿತ್ವ :-

ಸೇವುಣರ ಮೂರನೇಯ ಭಿಲ್ಲಮನೇ ಶಿವಜಾತ ಒಡೆಯರ ಶಿಷ್ಯನೆಂಬುದು ನಮಗೆ ಕರಡಿ ಕಲ್ಲು ಸ್ಥಳ ಪುರಾಣವು ಸಮರ್ಥಿಸಿರುವುದನ್ನು ಕಾಣಬಹುದು. ಗುರುಶಿಷ್ಯರ ಸಂಬಂಧ ವ್ಯಕ್ತಿತ್ವದ ಬಗ್ಗೆ ಸ್ಥಳ ಪುರಾಣ ಅನೇಕ ಚಾರಿತ್ರಿಕ ಸಂಗತಿಗಳನ್ನು ಕಟ್ಟಿ ಕೊಡುತ್ತದೆ. ಕಲ್ಯಾಣ ಶರಣರು ಭಿಲ್ಲಮ ರಾಯನನ್ನು ಬಹುವಾಗಿ ಕೊಂಡಾಡುತ್ತಾರೆ.

'ಪ್ರಸಾದವ ಕೊಂಡಡೆ ಭಿಲ್ಲಮರಾಯನಂತೆ ನಂಬಬೇಕಯ್ಯಾ' ಎಂದು ಅಂಬಿಗೇರ ಚೌಡಯ್ಯನವರು ಹೇಳಿದರೆ೧

ಸತ್ಯಕ್ಕ 'ವಿಶ್ವಾಸದಿಂದ ನಂಬಿದರಯ್ಯ ಭಿಲ್ಲಮರಾಯನವರು ಎನ್ನುತ್ತಾಳೆ೨

ಸಿದ್ಧ ನಂಜೇಶ ತನ್ನ ರಾಘವಾಂಕ ಚರಿತೆಯಲ್ಲಿ 'ಗುರುಭಕ್ತ ಭಿಲ್ಲಮ ನೆನಿಪ ಭೂಪಾಲಕಂ' ಎಂದು ಕರೆದಿದ್ದಾನೆ೩

ಇಲ್ಲಿ ಕಂಡು ಬರುವ 'ಪ್ರಸಾದ-ವಿಶ್ವಾಸ-ಗುರುಭಕ್ತ' ಈ ವಿಶೇಷಣಗಳು ಈತನ ವ್ಯಕ್ತಿತ್ವಕ್ಕೆ ನಿದರ್ಶನ ವಾಗಿದೆ.

ಶಿವಜಾತ ಒಡಯರೊಂದಿಗೆ ಈತನ ಸಂಬಂಧ ಹೇಳಿತ್ತು ಎಂಬುದರ ಬಗ್ಗೆ ಸ್ಥಳ ಪುರಾಣವನ್ನು ಆಧರಿಸಿ ಎಸ್.ಎ. ಸೊಪ್ಪಿಮಠ ಹೀಗೆ ಹೇಳುತ್ತಾರೆ. 'ಪ್ರಜೆಗಳ ಸೇವೆ ಪರಮೇಶ್ವರ ಸೇವೆ ಎಂದೇ ಬಗೆದು ಅಹರ್ನಿಶಿ ಅವರ ಚಿಂತೆಯಲ್ಲಿರುತ್ತಿದ್ದ ಭಿಲ್ಲಮನಿಗೆ ಶಿವಜಾತ ಒಡೆಯರಿಂದ ಗುರುಬೋಧೆಯೂ ಆಯಿತು. ಭಿಲ್ಲಮ ರಾಜ ಪ್ರಸಾಧಿಕನಾದ ಪ್ರಜಾ ಸೇವೆಯೊಂದಿಗೆ ಗುರುಸೇವೆಯೂ ಆತನ ನಿತ್ಯ ಮಂತ್ರವಾಯಿತು. ಪ್ರತಿದಿನವೂ ಕುಣಿ ಸೋಮೇಶ್ವರ ದೇವಸ್ಥಾನಕ್ಕೆ ಬಂದು ಗುರುವಿನ ದರ್ಶನ ಪಡೆದು, ಪಾದ ಪೂಜೆ ಮಾಡಿ, ಪ್ರಸಾದವನ್ನು ಸ್ವೀಕರಿಸುತ್ತಿದ್ದ. ಒಂದು ದಿನವೂ ಗುರುವಿನ ಪಾದೋದಕ ಪ್ರಸಾದವಿಲ್ಲದೇ ಇರುತ್ತಿರಲ್ಲಿಲ ಭಿಲ್ಲಮ.'೪

ಈ ಮಾತುಗಳನ್ನು ಗಮನಿಸಿದರೇ ಸಾಮಾನ್ಯ ರಾಜನಾಗಿದ್ದ ಭಿಲ್ಲಮ ಶಿವಜಾತ ಒಡೆಯರ ಸಂಪರ್ಕಕ್ಕೆ ಬಂದ ಮೇಲೆ ಒಬ್ಬ ಶಿವ ಭಕ್ತನಾಗಿ ಮುಂದೆ ಆತ ೧೦ ಸಾವಿರ ಜಂಗಮರಿಗೆ ಪ್ರಸಾದ ವ್ಯವಸ್ಥೆಯನ್ನು ಮಾಡಿಸಿ ಪ್ರಸಾದ ಮಹತ್ವವನ್ನು ತೋರಿಸಿಕೊಟ್ಟನು. ಆ ಕಾರಣದಿಂದಾಗಿ ಆತನನ್ನು ಕಲ್ಯಾಣ ಶರಣರು ಪ್ರಸಾದಿಯ ಪ್ರಸಾದಿ ಎಂದು ಕರೆದಿರುವುದು ಬಹು ಸೂಕ್ತವಾಗಿದೆ.

೪) ಢಕ್ಕೆಯ ಮಾರಯ್ಯ

ಸಮಾಜದಲ್ಲಿನ ಮೌಢ್ಯಗಳನ್ನು ಎತ್ತಿ ತೋರಿಸಿ ಸುಧಾರಣಾವಾದಿಗಳೆನಿಸಿಕೊಂಡ ಭೌದ್ಧ, ಜೈನ ಮುಂತಾದ ಧರ್ಮಗಳು ರಾಜಾಶ್ರಯವನ್ನು ಪಡೆಯುತ್ತ ಪರಸ್ಪರ ಸಂಘರ್ಷಮಯವಾದ ಧಾರ್ಮಿಕ ವಾತಾವರಣ ನೆಲೆಸಿತ್ತು. ಇದು ಒಂದು ಕಡೆಯಾದರೆ ಮತ್ತೊಂದು ಕಡೆ ಬಹುತೇಕ ಜನ ಹಲವು ದೈವಾರಾಧನೆ, ಮಾರಿ-ಮಸಣಿಗಳಂತಹ ಕ್ಷುಲ್ಲಕ ದೇವರುಗಳ ಆರಾಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಸಂಘಟನಾತ್ಮಕವಾದ ಪ್ರತಿಭಟನೆ ಇವುಗಳ ವಿರುದ್ಧ ಕಂಡು ಬರಲಿಲ್ಲ. ಜನರನ್ನು ಅವರು ಇರುವ ನೆಲೆಯಲ್ಲಿಯೇ ನಿಂತು ಅವರನ್ನು ಜಾಗೃತಿಗೊಳಿಸಬೇಕೆಂಬ ಆಶಯದಿಂದ ಕ್ಷುಲ್ಲಕ ದೈವದಿಂದಲೇ ಶ್ರೇಷ್ಠತ್ವ ಸಾಧಿಸಿದ ಶರಣ ಡಕ್ಕೆಯ ಮಾರಯ್ಯರಾಗಿದ್ದಾರೆ.

ಹೆಸರಿನ ಗೊಂದಲ (ಢಕ್ಕೆಯ ಮಾರಯ್ಯ ಅಥವಾ ಢಕ್ಕೆಯ ಬೊಮ್ಮಯ್ಯ)

ಢಕ್ಕೆಯ ಮಾರಯ್ಯ - ಢಕ್ಕೆಯ ಬೊಮ್ಮಣ್ಣ ಇಬ್ಬರೂ ಒಂದೇ? ಭಿನ್ನರು? ಎಂಬ ಅಭಿಪ್ರಾಯಗಳು ಆಗಾಗ ಕೇಳಿ ಬಂದಿವೆ.

[illegible]

[illegible] ...ತದೆ. [illegible] ... [illegible] ...ವ [illegible] ...ಗೊಳಿಸಿ.

೧: ಸಂ: ಡಾ: ಎಸ್.ವಿದ್ಯಾಶಂಕರ - ಅಂ.ಚೌ.ವ.-ವಚನ೧೭೨

೨: ಸಂ: ಡಾ: ಆರ್.ಸಿ. ಹಿರೇಮಠ - ಶಿ.ವ.-ವಚನ೧೫೫

೩: ಸಂ: ಡಾ: ಆರ್.ಸಿ.ಹಿರೇಮಠ - ರಾ.ಚ.-ಸಂಧಿ೫ಪದ್ಯ೩೪

೪: ಸಂ: ಡಾ: ಬಸವಲಿಂಗ ಸೊಪ್ಪಿಮಠ-ಸೂಗೂರ ಸಂಪದ ಪುಟ೬೯

ಢಕ್ಕೆಯ ಬೊಮ್ಮಣ್ಣನ ವಚನಗಳೆಂದು ಹಸ್ತಪ್ರತಿಯಲ್ಲಿ ಕಂಡು ಬರುತ್ತದೆ.

ಕನ್ನಡ ಕಾವ್ಯಗಳಲ್ಲಿ ಢಕ್ಕೆಯ ಬೊಮ್ಮಣ್ಣ -ಮಾರಯ್ಯ ಎಂಬ ಎರಡು ಹೆಸರುಗಳಿಂದ ಕರೆಯಲಾಗಿದೆ. ಗುಬ್ಬಿ ಮಲ್ಲಣ್ಣಾರ್ಯರ 'ವೀರಶೈವಾಮೃತ ಮಹಾ ಪುರಾಣ' ದಲ್ಲಿ 'ಪರದೈವ ಭಂಜಕ ತಾನೆಂಬಹಂಕಾರವನ್ನು ಮುರಿದವ ಮೊರದಲ್ಲಿ ಮಾರಿಯನ್ನು ತರುವ ಢಕ್ಕೆಯ ಮಾರಯ್ಯ '೧ಎಂದಿದೆ

ಅದೃಶ್ಯ ಕವಿಯ 'ಪ್ರೌಢದೇವರಾಯನ ಕಾವ್ಯ'ದಲ್ಲಿ 'ಢಕ್ಕೆಯ ಮಾರಿದೇವ ಎಂದಿದೆ' ೨

ಶಾಂತಲಿಂಗ ದೇಶಿಕರ ' ಭೈರವೇಶ್ವರ ಕಥಾಮಣಿ ಸೂತ್ರ ರತ್ನಾಕರ' ದಲ್ಲಿ ' ಗುರು ಮೊದಲಾದಷ್ಟವರಣವ ಬಿಡಬೇಡವೆಂದು ಸಾರಿದ ಢಕ್ಕೆಯ ಮಾರಯ್ಯನು ಎಂದಿದೆ'೩

ಕಿಕ್ಕೇರಿ ಆರಾಧ್ಯ ನಂಜುಂಡನ ' ಭೈರವೇಶ್ವರ ಕಾವ್ಯ 'ದಲ್ಲಿ 'ಢಕ್ಕೆಯ ಬ್ರಹ್ಮಿದೇವ' ಎಂದಿದೆ. ೪

ಎಳಂದೂರಿನ ಹರೀಶ್ವರ 'ಶ್ರೀ ಪ್ರಭುದೇವ ಪುರಾಣ'ದಲ್ಲಿ ಢಕ್ಕೆಯ ಸುಮಾರಣ್ಣ ಎನ್ನಲಾಗಿದೆ೫

ವಿರೂಪಾಕ್ಷ ಪಂಡಿತನ 'ಚೆನ್ನ ಬಸವ ಪುರಾಣ'ದಲ್ಲಿ 'ಢಕ್ಕೆಯ ಬ್ರಹ್ಮಯ್ಯನೊಪ್ಪುವಷ್ಟ ವಾರಣದಿಂದೆ ಬಳಿಕೆ' ಎನ್ನಲಾಗಿದೆ. ೬

ಸಿದ್ಧನಂಜೇಶನ 'ಗುರುರಾಜ ಚಾರಿತ್ರ್ಯ'ದಲ್ಲಿ ' ಭಾಸುರದ ಢಕ್ಕೆಯ ಮಾರಯ್ಯನೊಂದು ದಿನ ಎನ್ನಲಾಗಿದೆ'೭

ಮೇಲಿನ ಈ ಎಲ್ಲಾ ಹೇಳಿಕೆಗಳನ್ನು ಗಮನಿಸಿದಾಗ ಢಕ್ಕೆಯ ಮಾರಯ್ಯನೆಂಬುದು ಮೂಲದ ಹೆಸರಾಗಿ ಕಂಡು ಬರುತ್ತದೆ. ಕಲ್ಯಾಣ ಶಿವಶರಣರ ಸಂಪರ್ಕಕ್ಕೆ ಬರುವ ಮುಂಚೆ ಶಿವನಿಷ್ಠೆಯನ್ನು ಈ ಶರಣ ಅಂದಿನ ಕ್ಷುದ್ರ ದೇವತೆ ಮಾರಿಯನ್ನೇ ತನ್ನ ಸಾಧನವಾಗಿರಿಸಿಕೊಂಡು ತನ್ನ ಆ ಕಲೆಯ ಮೂಲಕ ಆತ ಜನ ಜಾಗೃತಿ ತೊಡಗಿದ್ದು ಕಂಡು ಬರುತ್ತದೆ. ಈ ತ ಮಾರಿಯನ್ನು ಕುಣಿಸುವ ಕಲೆಯ ಕಾಯಕದಿಂದಲೇ ಢಕ್ಕೆಯ ಮಾರಯ್ಯನೆಂಬುದು ಸ್ಪಷ್ಟವಾಗುತ್ತದೆ. ಮಾರಿಯನ್ನು ಕುಣಿಸುತ್ತ ಜನರಿಗೆ ಜ್ಞಾನವನ್ನು (ಬ್ರಹ್ಮ) ಈತ ತಿಳಿಸುತ್ತಿದ್ದನು ಆ ಕಾರಣದಿಂದಾಗಿ ಈತ ಮುಂದೆ ಕಲ್ಯಾಣ ಶರಣರ ಪ್ರಭಾವಲಯಕ್ಕೊಳಗಾಗಿ ಕಲ್ಯಾಣಕ್ಕೆ ಬಂದಾಗ ಆತ ಢಕ್ಕೆಯ ಮಾರಯ್ಯ ನೆಂಬ ಹೆಸರು ಕಳೆದು ಕೊಂಡು ಢಕ್ಕೆಯ ಬ್ರಹ್ಮಯ್ಯನಾದ ನೆಂಬುದು ನಮಗೆ ಸಿದ್ಧರಾಮರ ಈ ಕೆಳಗಿನ ವಚನದ ಮೂಲಕ ಸ್ಪಷ್ಟವಾಗುತ್ತದೆ.

'ನಗರಿನಗರಿಯ ಸುತ್ತಿ ನಗರಿಯ ನೆಲೆಮಾಡಿ

ಬಗೆಬಗೆಯ ಬ್ರಹ್ಮವ ವಿವರಿಸುತ್ತ

ತೆರೆತೆರೆದು ತತ್ವದ ಬಗೆಬಗೆಯ

ವಿವರಿಸಿದ ನಿಗಮರ ಬ್ರಹ್ಮಯ್ಯನೈ ಯೋಗಿನಾಥಾ '೮

---

೧ : ಸಂ : ಡಾ : ಆರ್.ಸಿ. ಹಿರೇಮಠ -ಗು.ವೀ.ಮ.ಕಾಂಡ ೮ ಸಂಧಿ ೨ಪದ್ಯ ೩೨

೨ : ಸಂ : ಸಂ.ಶಿ. ಭೂಸನೂರ ಮಠ-ಅ.ಪ್ರೌ.ಕಾ. ಸಂಧಿ ೬ ಪದ್ಯ ೪೦

೩ : ಸಂ : ಡಾ :ಆರ್.ಸಿ. ಹಿರೇಮಠ ಮತ್ತು ಎಂ.ಎಸ್.ಸುಂಕಾಪುರ -ಶಾ.ಭೈ.ಕಾ.ಕ.ಸೂ. ಭಾಗ ೧ ಸಂಧಿ ೧ ಕಥೆ ೨೫ ಪುಟ ೨೪೪

೪ : ಸಂ: ಬಸವಸ್ವಾಮಿಗಳು -ಕಿ.ನಂ.ಭೈ.ಕಾ.ಸಂಧಿ ೧ ಪದ್ಯ ೩೮೧

೫ : ಸಂ : ಬುದ್ಧಯ್ಯ ಸ್ವಾಮಿ ಪುರಾಣಿಕ- ಎ.ಹ.ಪ್ರ.ಪು. ಸಂಧಿ ೭ ಪದ್ಯ ೨೦೧

೬ : ಸಂ :ಶಿ .ಶಿ. ಬಸವನಾಳ- ವಿ.ಪಂ.ಚೆ.ಪು. ಕಾಂಡ ೫ ಸಂಧಿ ೪ ಪದ್ಯ ೨೫

೭ : ಸಂ : ಸಂ.ಶಿ. ಭೂಸನೂರಮಠ - ಸಿ.ಗು.ಚಾ. ಸಂಧಿ ೮ ಪದ್ಯ ೫೭ ಪುಟ ೧೫೫

೮ : ಕರ್ನಾಟಕ ವಿಶ್ವ ವಿದ್ಯಾಲಯ ಪ್ರಕಟಣೆ ಪುಟ ೪೯

ಇವರ ವಚನಗಳ ಅಂಕಿತ ನಮಗೆ ಮತ್ತಷ್ಟು ಕುತೂಹಲ ಕೆರಳಿಸುತ್ತದೆ. ಢಕ್ಕೆಯ ಮಾರಯ್ಯ ನಾಗುವುದಕ್ಕಿಂತ ಮುಂಚೆ ಈತನ ಹೆಸರು 'ಭೀಮಯ್ಯ' ನಾಗಿರಬಹುದಾದ ಸಾಧ್ಯತೆಯೂ ಕಂಡು ಬರುತ್ತದೆ. 'ಕಾಲಾಂತಕ ಭೀಮೇಶ್ವರ ಲಿಂಗ' ಈ ಅಂಕಿತ ಗಮನಿಸಿದಾಗ ಎಲ್ಲಿಯೂ ಈ ಭಾಗದಲ್ಲಿ ಭೀಮೇಶ್ವರ ದೇವಾಲಯ ಕಂಡುಬರುವುದಿಲ್ಲ . ಆದರೆ ಲಿಂಗಸೂಗೂರು ತಾಲೂಕಿನ ಗೌಡೂರುನಲ್ಲಿ ಪ್ರಾಚೀನವಾದಂತ ಹ ಈಶ್ವರ ದೇವಾಲಯ ವಿದೆ. ಬಹುಶಃ ಇದು ಈತನ ಆರಾಧ್ಯ ದೈವವಾಗಿರಬೇಕು. ಚಿತ್ತಾಪುರಕ್ಕೆ ಗೌಡೂರು ಬಹು ಸಮೀಪವಾಗಿದೆ. ಆತನೇ ಒಂದು ವಚನದಲ್ಲಿ ಹೇಳುವಂತೆ 'ಈಶ್ವರನ ಶರಣರಿಗೆ ಭಕ್ತಿಯ ಮಾಡುವ ದಾಸೋಹದ ಸದ್ಭಕ್ತನ ಇರವು' ೧ ಎಂಬುದನ್ನು ಗಮನಿಸಿದಾಗ ಭೀಮಯ್ಯನೇ ಆತನ ಹೆಸರಾಗಿ ಆತನ ಇಷ್ಟ ದೈವ ಈಶ್ವರ ನಾಗಿ ಅದು ಅಂಕಿತದಲ್ಲಿ ಕಾಲಾಂತಕ ಭೀಮೇಶ್ವರ ಲಿಂಗವಾಗಿರಬಹುದಾದ ಸಾಧ್ಯತೆ ಇದೆ . ಕಾಲಾಂತಕ ಶೈವ ಪರಂಪರೆಯ ಪರಿಭಾಷೆಯಾಗಿದ್ದು ಆತ ಆ ಹಿನ್ನೆಲೆಯಲ್ಲಿ ಕಾಲಾಂತಕ ಪ್ರಯೋಗಿಸಿರಬಹುದಾಗಿದೆ. ಕಾಲಾಂತಕ ಎಂದರೆ ಶಿವ ೨ ಎಂಬರ್ಥ ಹೊಂದಿರುವುದು ಇಲ್ಲಿ ಗಮನಿಸಬೇಕಾದ ಅಂಶವಾಗಿದೆ. ಭೀಮಯ್ಯ ಅಂದಿನ ಜನರ ಅಜ್ಞಾನವನ್ನು ಕಂಡು ಅವರ ಅಜ್ಞಾನಕ್ಕೆ ಕೀಳು ದೈವಗಳೇ ಕಾರಣವೆಂದರಿತು ಆ ಕೀಳು ದೈವಗಳಿಂದಲೇ ಅವರನ್ನು ಜಾಗೃತಿಗೊಳಿಸಬೇಕೆಂದು ಬಯಸಿ ಮಾರಿಯನ್ನು ಕುಣಿಸುವ ಕಲೆಯ ಕಾಯಕವನ್ನು ಕೈಗೊಂಡಿದ್ದಾಗ ಜನ ಆತ ಢಕ್ಕೆ ಹಿಡಿದು ಕೊಂಡು ಮಾರಿ ಕುಣಿಸುವುದನ್ನು ಕಂಡು ಢಕ್ಕೆಯ ಮಾರಯ್ಯನೆಂದು ಕರೆದಿರಬಹುದಾದ ಸಾಧ್ಯತೆ ಇದೆ.

ಅಂತೆಯೇ ಭೀಮಯ್ಯ ಜ್ಞಾನವನ್ನು ಬೋಧಿಸಿದ ಪರಿಣಾಮವಾಗಿಯೇ ಆತ ಬ್ರಹ್ಮಯ್ಯ ನಾಗಿರಬಹುದಾಗಿದೆ. ಆತ ಇನ್ನೊಂದು ವಚನದಲ್ಲಿ ತನ್ನನ್ನು ' ಢಕ್ಕೆಯ ಬೊಮ್ಮ ' ೩ ಎಂದು ಕರೆದುಕೊಂಡಿದ್ದಾನೆ . ಹೀಗಾಗಿ ಆತ ಕಲ್ಯಾಣ ಪರಿಸರವನ್ನು ಸೇರಿದ ಕೂಡಲೇ ತನ್ನನ್ನು ಬೊಮ್ಮ ಎಂದು ಕರೆದುಕೊಂಡಿರಬೇಕೆನಿಸುತ್ತದೆ. ಹಾಗೆಯೇ ಹಸ್ತ ಪ್ರತಿಯಲ್ಲಿ ಬೊಮ್ಮಣ್ಣ ಕಂಡು ಬರುವುದು ಭೀಮಣ್ಣ ಏಕಾಗಿರಬಾರದೆನಿಸುತ್ತದೆ ?

ಇದುವರೆಗಿನ ವಿವೇಚನೆಯಿಂದ ನಾವು ಕಂಡು ಕೊಳ್ಳಬಹುದಾದ ಸಂಗತಿ ಎಂದರೆ 'ಢಕ್ಕೆಯ ಮಾರಯ್ಯ'- 'ಢಕ್ಕೆಯ ಬೊಮ್ಮಣ್ಣ ' ಇವೆರಡು ಹೆಸರುಗಳು ಶರಣ ಸಾಹಿತ್ಯ ಸಂದರ್ಭದಲ್ಲಿ ಕಂಡು ಬರುವ ಪ್ರಚಲಿತ ಹೆಸರುಗಳಾಗಿವೆ. ಸದ್ಯಕ್ಕೆ ನಾವು ಇವೆರಡು ಒಂದೇ ಎಂದು ಅರ್ಥೈಸುವುದು ಸರಿಯಾಗಿದೆ .ಹಾಗೆಯೇ ಭೀಮಯ್ಯ ಅಥವಾ ಭೀಮಣ್ಣನೇ ಮಾರಿ ಕುಣಿಸಿ ಮಾರಯ್ಯ -ಮಾರಣ್ಣನಾಗಿ ಮುಂದೆ ಕಲ್ಯಾಣ ಪರಿಸರಕ್ಕೆ ಹೋದ ಬಳಿಕ ಆತ ಢಕ್ಕೆಯ ಬೊಮ್ಮಯ್ಯ - ಬೊಮ್ಮಣ್ಣನಾಗಿರಬೇಕೆಂದು ನಾವು ತಿಳಿಯುವುದು ಸೂಕ್ತವಾಗಿದ್ದರೂ ಢಕ್ಕೆಯ ಮಾರಯ್ಯನೆಂಬುದೇ ಬಹು ಸ್ಪಷ್ಟವಾಗಿ ಹಾಗೆಯೇ ಕೃತಿಗಳಲ್ಲಿ ಬಹುತೇಕವಾಗಿ ಕಂಡುಬರುವ ಕಾರಣ ಇನ್ನು ಮುಂದೆ ನಾವು ಆತನ ಹೆಸರನ್ನು ಢಕ್ಕೆಯ ಮಾರಯ್ಯನೆಂದೆ ಕರೆಯುವುದು ಬಹು ಸೂಕ್ತವಾಗಿದೆ.

ಕಾಲ :-

ಢಕ್ಕೆಯ ಮಾರಯ್ಯನ ಕಾಲವನ್ನು ನಿರ್ಧರಿಸಲು ನಮಗೆ ಸೂಕ್ತವಾದ ಚಾರಿತ್ರಿಕ ದಾಖಲೆಗಳ ಕೊರತೆಯಿದ್ದ ಕಾರಣ ಕಾಲದ ಖಾಚಿತ್ಯತೆ ಯಾರಿಗೂ ಕಂಡುಕೊಳ್ಳಲಾಗಿಲ್ಲವೆಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡು ಬರುತ್ತದೆ. ನಮಗೆ ಸದ್ಯ ಉಪಲಬ್ಧವಿರುವ ವಚನ, ಕಾವ್ಯ, ಪುರಾಣ ಕತೆಗಳಿಂದ ಹಾಗೂ ಸಮಕಾಲೀನ ಶರಣ ಪರಂಪರೆಯಿಂದ ಕಂಡು ಕೊಳ್ಳುವುದೇ ಏಕೈಕ ಮಾರ್ಗವಾಗಿದೆ.

ನಾವು ಇವರ ಕಾಲವನ್ನು ಪ್ರಮುಖವಾಗಿ ಈ ಕೆಳಗಿನ ಎರಡು ಅಂಶಗಳ ಮೂಲಕ ಗಮನಿಸಬಹುದು.

೧ : ಜೇಡರ ದಾಸಿಮಯ್ಯರ ಸಮಕಾಲೀನರಾದ ನವಿಲೆಯ ಶಂಕರ ದಾಸಿಮಯ್ಯ ರ ಅಹಂಕಾರವನ್ನು ತೊಡೆದದ್ದು

೨ : ಬಸವಣ್ಣನವರು ಬದುಕಿದ ಕಾಲಾವಧಿ -ಕಾರ್ಯಗಳ ಹಿನ್ನೆಲೆಯಲ್ಲಿ

೧ : ಶಂಕರ ದಾಸಿಮಯ್ಯರ ಅಹಂಕಾರ ತೊಡೆದ ಸಂದರ್ಭ :-

ಇವರ ಕಾಲ ನಿರ್ಧಾರದಲ್ಲಿ ಇದು ಪ್ರಮುಖ ಘಟನೆಯಾಗಿದೆ. ಈ ಘಟನೆಯ ಪ್ರಸ್ತಾಪ ಸೂಚ್ಯವಾಗಿ ಶಂಕರ ದಾಸಿಮಯ್ಯರ ವಚನವೊಂದರಲ್ಲಿ ಕಂಡು ಬರುತ್ತದೆ.

' ನಿಮ್ಮ ಶರಣರ ಸಂಗದಿಂದ ಎನ್ನ ನಂದಿಯ ಮೊಗವಾಡ

ನೊಸಲ ಕಣ್ಣುಂಟೆಂಬ ಅಹಂಕಾರವ ಮುಂದು ಗೊಂಡಿದ್ದೆನಯ್ಯಾ ' ೪

---

೧ : ಸಂ : ಡಾ : ಎಸ್. ವಿದ್ಯಾಶಂಕರ - ಸ.ವ.ಸಂ.-೭ ವಚನ ೧೯ ಪುಟ ೨೪೯

೨ : ಕನ್ನಡ ಅಭಿವೃದ್ಧಿ ಪ್ರಾಧಿಕಾರ - ಕ.ರ.ಕೋ. ಪುಟ ೫೦

೩ : ಸಂ: ಡಾ :.ಎಸ್.ವಿದ್ಯಾ ಶಂಕರ- ಸ.ವ.ಸಂ.-೭ ವಚನ ೨೪ ಪುಟ ೨೯೦

೪ : ಸಂ : ಡಾ : ಬಿ.ಆರ್. ಹಿರೇಮಠ - ಸ.ವ.ಸಂ.-೯ ವಚನ ೫ ಪುಟ ೫೫

ಇಲ್ಲಿ ಬರುವ ' ಶರಣರ ಸಂಗ ' ಎಂದರೆ ಅದು ಢಕ್ಕೆಯ ಮಾರಯ್ಯನೆಂದು ನಾವು ಊಹಿಸಬಹುದಾಗಿದೆ. ಆದರೆ ಈ ಕುರಿತು ನೇರವಾದ ಯಾವ ವಚನಗಳು ಢಕ್ಕೆಯ ಮಾರಯ್ಯನಲ್ಲಿ ಕಂಡು ಬರುವುದಿಲ್ಲ. ಆದರೆ ಸಂವಾದ ರೂಪದಂತೆ ಕೆಲವು ವಚನಗಳು ನಮಗೆ ಕಂಡು ಬರುತ್ತಿದ್ದು ; ಅವುಗಳಲ್ಲಿ ಮೇಲಿಂದ ಮೇಲೆ ಕಾಣುವ 'ಢಕ್ಕೆಯ ಉಲುಹಡಗುವುದಕ್ಕೆ ಮುನ್ನವೇ ನಿಶ್ಚೈಸಿ' ೧ ' ಢಕ್ಕೆಯ ದನಿಉಳ್ಳನ್ನಕ್ಕ ನಿಶ್ಚೈಸಿಕೊಳ್ಳಿ ' ೨ ಎಂಬ ಸಾಲುಗಳು ಶಂಕರ ದಾಸಿಮಯ್ಯನನ್ನೇ ಕುರಿತು ಸಂಭೋದಿಸಿದ ಹಾಗೇ ಕಂಡು ಬರುತ್ತದೆ. ಹೀಗೆ ವಚನಗಳಲ್ಲಿ ಸೂಚ್ಯವಾಗಿ ಕಾಣುವ ಈ ಪ್ರಸಂಗವನ್ನು ಹರಿಹರನಾಗಲಿ, ಭೀಮಕವಿಯಾಗಲಿ, ಪಂಡಿತ ಮಲ್ಲಿಕಾರ್ಜುನನ ಶಂಕರದಾಸಿಮಯ್ಯ ಪುರಾಣದಲ್ಲಾಗಲಿ ಕಾಣುವುದಿಲ್ಲ. ಆದರೆ ಆನಂತರ ಕೃತಿಕಾರರಾದ ಶಾಂತಲಿಂಗದೇಶಿಕ ೩ ಎಳಂದೂರು ಹರೀಶ್ವರ ೪ ಸಿದ್ಧನಂಜೇಶ ೫ ಮುಂತಾದವರಲ್ಲಿ ಈ ಅಹಂಕಾರ ತೊಡೆದ ಸಂದರ್ಭ ಕಂಡು ಬರುತ್ತದೆ.

ಈ ಸಂದರ್ಭದ ಬಗ್ಗೆ ಹರಿಹರನ ನಂತರದ ಕೃತಿಕಾರರು ಕಲ್ಪನೆ ಮಾಡಿ ಸೇರಿಸಿದ್ದಾರೆಂಬುದಾಗಿ ಕಂಡು ಬರುವುದಿಲ್ಲ . ಏಕೆಂದರೆ ಆ ಸಂದರ್ಭದಲ್ಲಿ ತಮಗೆ ದೊರೆತ ವಚನಗಳ ಆಧಾರದಿಂದ ಹಾಗೂ ಸೂಕ್ಷ್ಮ ಚಿಂತನೆಯಿಂದ ಈ ಸಂದರ್ಭವನ್ನು ಅದರ ಔಚಿತ್ಯವನ್ನು ಅರಿತು ಸೇರಿಸಿರಬಹುದೆಂದು ತಿಳಿದು ಬರುತ್ತದೆ. ಶಂಕರ ದಾಸಿಮಯ್ಯರ ಬದುಕಿನ ಹಿನ್ನೆಲೆಯಲ್ಲಿ ಗಮನಸಿದಾಗ ಇದು ಮತ್ತಷ್ಟು ಸ್ಪಷ್ಟವಾಗುತ್ತದೆ. ಶಂಕರ ದಾಸಿಮಯ್ಯರು ತಮ್ಮ ಉರಿಗಣ್ಣಿನ ಮೂಲಕ ಅನ್ಯಮತೀಯ ವಿಗ್ರಹಗಳನ್ನು ಸ್ಫೋಟಿಸಿ ಉಳಿದ ಧರ್ಮಗಳ ಮೇಲೆ ಪ್ರಭಾವ ಬೀರಿ ವಿಜಯದಿಂದ ಸಂತೋಷವಾದಾಗ ಸಹಜವಾಗಿ ಅವರಲ್ಲಿ ಅಹಂಕಾರ ನೆಲೆಸಿರಬೇಕು. ಇದೇ ಸಂದರ್ಭದಲ್ಲಿ ಹಿರಿಯರಾದ ಢಕ್ಕೆಯ ಮಾರಯ್ಯರು ಆತನ ಸ್ಥಿತಿ ಕಂಡು ಆತನ ಅಹಂಕಾರವನ್ನು ತೊಡೆದಿರಬಹುದಾಗಿದೆ.

ಈ ಅಹಂಕಾರ ತೊಡೆದ ಸಂದರ್ಭ ' ನವಿಲೆ - ಚಿತ್ತಾಪುರ ' ದಲ್ಲಿ ಆಗಿದ್ದು ಇದರ ಸತ್ಯಾಸತ್ಯತೇ ಚರ್ಚೆಗಾಗಿ ಇರ್ವರು ಕಲ್ಯಾಣ ಪರಿಸರಕ್ಕೆ ಹೋಗಿರಬಹುದೆಂದು ತಿಳಿದು ಬರುತ್ತದೆ. ಈ ಸಂದರ್ಭ ಕ್ರಿ.ಶ.ಸು. ೧೧೩೦ -೧೨೫೩ ರ ಅವಧಿಯೆಂದು ಗುರುತಿಸಬಹುದು. ಅಂದರೆ ಕ್ರಿ.ಶ.೧೧೩೦ ರಲ್ಲಿ ಇವರಿರ್ವರ ಚರ್ಚೆ ನಡೆದು ಶಂಕರ ದಾಸಿಮಯ್ಯರ ಉರಿಗಣ್ಣನ್ನು ಢಕ್ಕೆಯ ಮಾರಯ್ಯರ ಮಾರಿ ನುಂಗಿದ್ದು ; ಆ ನಂತರ ಅದರ ವಾದ-ವಿವಾದಗಳು ನಡೆದು ಮುಂದೆ ಶಂಕರ ದಾಸಿಮಯ್ಯರಲ್ಲಿ ಅಹಂಕಾರ ಭಾವ ಅಡಗಿದರೂ , ಅದರ ಸತ್ಯಾ ಸತ್ಯತೆಯನ್ನು ತಿಳಿಯಲು ಇರ್ವರೂ ಕೂಡಿ ಕ್ರಿ.ಶ. ೧೧೫೩ ಸುಮಾರಿಗೆ ಕಲ್ಯಾಣಕ್ಕೆ ಹೋಗಿರಬೇಕು. ಆನಂತರ ಕೆಲವು ದಿನಗಳಿದ್ದು ಅಲ್ಲಿಯೇ ಇರ್ವರು ಐಕ್ಯವಾಗಿರಬಹುದಾಗಿದೆ. ಕ್ರಿ.ಶ. ೧೧೫೩ ರ ಸುಮಾರಿನಲ್ಲಿ ಢಕ್ಕೆಯ ಮಾರಯ್ಯ ಐಕ್ಯನಾದಬಗ್ಗೆ ತಿಳಿಯುತ್ತದೆ.

ಆತನ ಜೀವನದ ಕೊನೆಯ ಸಂದರ್ಭದಲ್ಲಿ ಕಲ್ಯಾಣ ಶರಣರನ್ನು ಕಂಡಿದ್ದನೆಂಬುದಕ್ಕೆ ಆತ ಕಲ್ಯಾಣ ಶರಣರನ್ನು ಸ್ಮರಿಸುವ ವಚನಗಳೇ ನಿದರ್ಶನ.೬ ಅದು ಕೇವಲ ಎರಡು ವಚನಗಳಾಗಿವೆ ಎಂಬುದು ಗಮನಿಸಬೇಕಾಗದ ಸಂಗತಿ . ಕಲ್ಯಾಣಕ್ಕೆ ಬರುವ ಮೊದಲೇ ಢಕ್ಕೆಯ ಮಾರಯ್ಯ ವಚನಗಳನ್ನು ರಚಿಸಿದ್ದನೆಂಬುದಕ್ಕೆ ಆತನ ಕೆಲವು ವಚನಗಳೇ ನಿದರ್ಶನ . ಆತನ ಆರಂಭಿಕ ವಚನಗಳಾವು ಎಂಬುದು ಲಕ್ಷ್ಯದಲ್ಲಿರಿಸಿಕೊಂಡು ಅವುಗಳ ಶಿಲ್ಪ-ವಸ್ತು ವಿನ್ಯಾಸ ಗಮನಿಸಿದರೆ ಅವು ಜೇಡರ ದಾಸಿಮಯ್ಯರಿಗಿಂತಲೂ ಭಿನ್ನವೆಂದು ಸ್ಪಷ್ಟವಾಗಿ ಕಂಡು ಬರುತ್ತವೆ. ೭

ಅಂತೆಯೇ ಕಲ್ಯಾಣ ಶರಣರ ಪರಿಸರಕ್ಕೆ ಢಕ್ಕೆಯ ಮಾರಯ್ಯ ಒಳಗಾದಾಗ ಆತನ ವಚನಗಳು ಗಂಭೀರತೆ,ಶರಣ ಸಿದ್ಧಾಂತದ ತತ್ವ ವಿವೇಚನೆಗಳ ಬಗ್ಗೆ ಅಭಿವ್ಯಕ್ತಗೊಂಡಿದ್ದನ್ನು ಗಮನಿಸಬಹುದಾಗಿದೆ. ೨. ಬಸವಣ್ಣನವರು ಬದುಕಿದ ಕಾಲಾವಧಿ ಕಾವ್ಯಗಳ ದೃಷ್ಟಿಯಲ್ಲಿ:

ಬಿ.ಎಸ್. ಸಣ್ಣಯ್ಯನವರ ಢಕ್ಕೆಯ ಮಾರಯ್ಯನ ಕಾಲ ಬಸವನಿಗಿಂತ ೧೦೦ ವರ್ಷ ಮೊದಲಿನದೆಂದು ಅಭಿಪ್ರಾಯ ಪಟ್ಟಿದ್ದಾರೆ.೮ ಇದೇ ರೀತಿ ಅಭಿಪ್ರಾಯ ಹಳಕಟ್ಟಿಯವರದಾಗಿದೆ.೯ ಕವಿ ಚರಿತೆಕಾರರು ಕ್ರಿ.ಶ .೧೧೬೦ ಎಂದು ಹೇಳಿದರೆ ೧೦ ಶಾಂತರಸರು ಇವರ ಕಾಲವನ್ನು ಕ್ರಿ.ಶ.೧೧೦೦ ರಲ್ಲಿ ಹುಟ್ಟಿ ಕ್ರಿ.ಶ. ೧೧೬೨ ತರುವಾಯ ಜೀವಿಸಿರಬೇಕೆಂದು ಅಭಿಪ್ರಾಯ ಪಡುತ್ತಾರೆ. ೧೧ ಬಿ.ಎಸ್. ಸಣ್ಣಯ್ಯರ ಅಭಿಪ್ರಾಯ ಗಮನಿಸಿದರೆ ಇವರು ಬಸವಣ್ಣನವರಿಗಿಂತ ೧೦೦ ವರ್ಷ ಮೊದಲು ಎಂದ ಕಾರಣ ನಾವೀಗ ಬಸವಣ್ಣನವರ ಕಾಲದ ಹಿನ್ನೆಲೆಯಲ್ಲಿ ಚರ್ಚಿಸುವುದು ಅವಶ್ಯಕವೆನ್ನಿಸುತ್ತದೆ.

---

೧ : ಸಂ: ಡಾ: ಎಸ್. ವಿದ್ಯಾಶಂಕರ - ಸ.ವ.ಸಂ.- ೭ ವಚನ ೩೮ ಪುಟ ೨೯೫

೨ : ಅದೇ : ವಚನ ೬೬ ಪುಟ ೩೦೩

೩ : ಸಂ: ಡಾ: ಆರ್. ಸಿ. ಹಿರೇಮಠ ಮತ್ತು ಡಾ: ಎಂ.ಎಸ್. ಸುಂಕಾಪುರ -ಶಾ.ಭೈ.ಕಾ.ಕ.ಸೂ.- ಭಾಗ ೧ ಸಂಧಿ ೧ ಕಥೆ ೨೫ ಪುಟ ೨೪೪

೪ : ಸಂ: ಬುದ್ಧಯ್ಯ ಸ್ವಾಮಿ ಪುರಾಣಿಕ -ಎ.ಹ.ಪ್ರ.ಪು.- ಸಂಧಿ ೭ ಪದ್ಯ ೨೦೧ -೨೦೮

೫ : ಸಂ: ಸಂ. ಶಿ. ಭೂಸನೂರ ಮಠ - ಸಿ.ಗು.ಚಾ.- ಸಂಧಿ ೮ ಪದ್ಯ ೫೭ -೬೧ ಪುಟ ೧೫೫ -೧೫೬

೬ : ಸಂ: ಡಾ: ಎಸ್.ವಿದ್ಯಾಶಂಕರ -ಸ.ವ.ಸಂ.-೭ ವಚನ ೨೩,೬೧ ಪುಟ ೨೦೨-೨೯೦

೭ : ಅದೇ ವಚನ ೪೪,೪೭,೫೮,೬೩ ಪುಟ ೨೯೬,೨೯೭,೩೦೧,೩೦೨ ಗಮನಿಸಿರಿ

೮ : ಸಂ: ಬಿ.ಎಸ್.ಸಣ್ಣಯ್ಯ - ಶಿ.ಮಂ.ಢ.ಬೊ.ಪ್ರಸ್ತಾವನೆ ಪುಟಗಳು

೯ : ಸಂ: ಫ.ಗು.ಹಳಕಟ್ಟಿ -ಶಿ.ಚ.ಭಾಗ -೩ ಪುಟ ೧೪೮

೧೦ : ಆರ್.ನರಸಿಂಹಾಚಾರ್ -ಕ.ಚ.ಸಂ.- ೧ ಪುಟ ೨೧೨

೧೧ : ಶಾಂತರಸರ ಲೇಖನ -ಸ.ಕ.ಸಾ.ಚ.-ಸಂ.೨ ಪುಟ ೬೪

ಆತ ಬದುಕಿದ್ದು ಕೇವಲ ೩೬ ವರ್ಷಎಂದು ವಾದಿಸುವ ವಿದ್ವಾಂಸರು ಆತನ ಕಾಲವನ್ನು ಕ್ರಿ.ಶ. ೧೧೩೬ - ೧೧೬೮ರ ಅವಧಿಯೆಂದು ಗುರುತಿಸಿದರೆ; ಇನ್ನೂ ಕೆಲವರು ಇಷ್ಟು ಅಲ್ಪ ವಯಸ್ಸಿನಲ್ಲಿ ಬಸವಣ್ಣನ ಇಷ್ಟೆಲ್ಲ ಸಾಧನೆಗಳಾಗಿದ್ದು ಅಸಹಜವೆಂದು ಕೆಲವರು ಭಾವಿಸಿ ಆತನು ಕನಿಷ್ಟ ಪಕ್ಷವೆಂದರು ೬೦ ವರ್ಷಗಳಿಗಿಂತ ಹೆಚ್ಚು ಕಾಲ ಜೀವಿಸಿರಬಹುದೆಂದು ಊಹಿಸುತ್ತಾರೆ. ಈ ಊಹೆಬಹು ಸರಿಯೆನಿಸುತ್ತದೆ. ಬಸವಣ್ಣನವರ ಕಾರ್ಯಯೋಜನೆ ಗಮನಿಸಿದರೆ ಇದು ಸ್ಪಷ್ಟವಾಗಿ ಕಂಡು ಬರುತ್ತದೆ. ಡಾ : ಹಿರೇಮಲ್ಲೂರು ಈಶ್ವರನ್ ' ಬಸವಣ್ಣನ ಜೀವನ ಕೆಲವು ಚಾರಿತ್ರಿಕ ವಿವರಗಳು ' ಎಂಬ ಶೀರ್ಷಿಕೆಯಡಿ ತಮ್ಮ ಕೃತಿಯಲ್ಲಿ ಬಸವಣ್ಣನವರ ಆರಂಭದಿಂದ ಹಿಡಿದು ಅಂತ್ಯ ಕಾಲದವರೆಗೂ ಅವರು ಕೆಲವು ಮಾಹಿತಿಗಳನ್ನು ನೀಡುತ್ತಾರೆ. ಅವರ ಪ್ರಕಾರ ಬಸವಣ್ಣ ಹುಟ್ಟಿದ್ದು ಕ್ರಿ.ಶ. ೧೧೦೫ , ಸಂಗಮ ಕ್ಷೇತ್ರಕ್ಕೆ ಬಂದದ್ದು ಕ್ರಿ.ಶ. ೧೧೨೧ , ಮಂಗಳವಾಡಕ್ಕೆ ಕ್ರಿ.ಶ. ೧೧೩೨ ರಲ್ಲಿ , ಕಲ್ಯಾಣಕ್ಕೆ ಕ್ರಿ.ಶ. ೧೧೫೩ ರಲ್ಲಿ , ಕ್ರಿ.ಶ. ೧೧೬೭ ರಲ್ಲಿ ಐಕ್ಯರಾದರೆಂದು ಹೇಳುತ್ತಾರೆ.೧

ಇದನ್ನು ಅವಲೋಕಿಸಿದಾಗ ಢಕ್ಕೆಯ ಮಾರಯ್ಯ ಬಸವಣ್ಣನವರಿಗಿಂತ ಹಿರಿಯನಾಗಿದ್ದರೂ ಆತ ೧೦೦ ವರ್ಷದಷ್ಟು ಮುಂಚಿನವರರಾಗದೆ೫೦ ವರ್ಷದಷ್ಟು ಹಿರಿಯರೆಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಅಂದರೆ ಬಸವಣ್ಣನವರ ಕಾಲ ಕ್ರಿ.ಶ. ೧೧೦೫ ರಿಂದ ೧೧೬೭ ಎಂದು ಸದ್ಯಕ್ಕೆ ಊಹಿಸುವದರಿಂದ ಢಕ್ಕೆಯ ಮಾರಯ್ಯನ ಕಾಲ ಕ್ರಿ.ಶ. ೧೦೫೫ಕ್ಕೆ ಮುಂಚೆ ಹಾಗೂ ಢಕ್ಕೆಯ ಮಾರಯ್ಯ ಕಲ್ಯಾಣಕ್ಕೆ ಅಂತಿಮ ಕಾಲದಲ್ಲಿ ಹೋದರೆಂಬುದನ್ನು ಊಹಿಸಿದರೆ ಕ್ರಿ.ಶ. ೧೧೫೩ ರರವಧಿಯಲ್ಲಿ ಅವರು ಇದ್ದರೆಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ ಬಸವಣ್ಣನವರು ಕಲ್ಯಾಣ ಬಂದ ಅವಧಿ ಕ್ರಿ.ಶ. ೧೧೫೩ ಆಗಿರುವುದರಿಂದ ಅವರ ಪ್ರಭಾವ ಕೇಳಿಯೇ ಇವರು ಈ ಅವಧಿಯಲ್ಲಿ ಕಲ್ಯಾಣಕ್ಕೆ ಹೋಗಿ ತಮ್ಮ ಅಂತಿಮ ಕಾಲ ಅಲ್ಲಿ ಕಳೆದರೆಂಬುದು ಸ್ಪಷ್ಟವಾಗುತ್ತದೆ.

ಶರಣರ ಸಂಪರ್ಕಕ್ಕೆ ಬರುವ ಮೊದಲೇ ಇವರ ಮೇಲೆ ಪುರಾತನರ ಭಕ್ತಿ ನಿಷ್ಠೆ ಪ್ರಭಾವ ಬೀರಿತು. ಅದಕ್ಕಾಗಿಯೇ ಅವರು ತಮ್ಮ ಹೊಟ್ಟೆಹೊರೆಯುವ ಕಾಯಕದಿಂದಲೇ ತಮ್ಮ ಜೀವನದ ಆಧ್ಯಾತ್ಮದ ಅನುಭವವನ್ನು ಪಡೆದುಕೊಂಡಿದ್ದರು. ಮುಂದೆ ಕಲ್ಯಾಣ ಶರಣ ಪ್ರಭಾವದಿಂದಾಗಿ ಕಾಯಕವನ್ನು ಉನ್ನತಿಗೇರಿಸಿ ಶರಣರು ನಿರಾಕರಿಸಿ ಮಾರಿಯನ್ನೇ ಸ್ವೀಕರಿಸಿ ಆ ಮೂಲಕ ಹೊಸ ವಿಚಾರಗಳನ್ನು ತಮ್ಮ ವಚನ ಮೂಲಕ ವ್ಯಕ್ತಪಡಿಸಿದರು. ಇವರ ಪ್ರಭಾವ ಬಸವಣ್ಣನವರ ಮೇಲೂ ಆಗಿತ್ತೆಂಬುದನ್ನು ಬಸವಣ್ಣನವರ ವಚನದಿಂದಲೇ ಕಂಡು ಕೊಳ್ಳಬಹುದು

ಮಾರಿ ಮಸಣಿ ಎಂಬಿವು ಬೇರಿಲ್ಲ ಕಾಣಿರೋ

ಮಾರಿ ಎಂಬುದೇನು ?

ಕಂಗಳು ತಪ್ಪಿ ನೋಡಿದರೆ ಮಾರಿ

ನಾಲಿಗೆ ತಪ್ಪಿ ನುಡಿದರೆ ಮಾರಿ

ನಮ್ಮ ಕೂಡಲ ಸಂಗಯ್ಯ ನೆನಹ ಮರೆದರೆ ಮಾರಿ೨

ಹೀಗಾಗಿ ಬಸವಣ್ಣನವರು ಕಲ್ಯಾಣಕ್ಕೆ ಬಂದಾಗ ಇವರು ಅವರನ್ನು ಸಂಪರ್ಕಿಸಿದ್ದು ತಿಳಿದು ಬರುತ್ತದೆ.

ಇದುವರೆಗಿನ ವಿವೇಚನೆಯಿಂದ ಇವರ ಕಾಲಕ್ರಮವನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ : -

೧) ಕ್ರಿ.ಶ. ೧೦೫೩ ರಲ್ಲಿ ಢಕ್ಕೆಯ ಮಾರಯ್ಯರ ಜನನವಾಗಿರಬೇಕು.

೨) ಕ್ರಿ.ಶ. ೧೧೩೦ ರಲ್ಲಿ ಶಂಕರ ದಾಸಿಮಯ್ಯರ ಅಹಂಕಾರ ತೊಡೆದು ಹಾಕಿರಬೇಕು.

೩) ಕ್ರಿ.ಶ. ೧೧೫೩ ರಲ್ಲಿ ಕಲ್ಯಾಣಕ್ಕೆ ಹೋಗಿರಬಹುದಾಗಿದೆ.

೪) ಕ್ರಿ.ಶ. ೧೧೫೩ ರಲ್ಲಿಯೇ ಕಲ್ಯಾಣದಲ್ಲಿ ಅಂತಿಮ ದಿನ ಕಳೆದು ಐಕ್ಯವಾಗಿರಬೇಕು.

ಸ್ಥಳ :-

ಇವರ ಕಾಲದಂತೆ ಸ್ಥಳವನ್ನು ನಿಖರವಾಗಿ ಗುರುತಿಸುವಲ್ಲಿ ಅನೇಕ ಸಂದೇಹಗಳಿವೆ. ಖಾಚಿತ್ಯದ ಕೊರತೆಇದೆ.

' ಢಕ್ಕೆಯ ಮಾರಯ್ಯರು ಶಂಕರ ದಾಸಿಮಯ್ಯನ ಸಮಕಾಲಿನರಾದುದರಿಂದ ಅವನು ೧೧ನೇ ಶತಕದ ಮಧ್ಯದಲ್ಲಿರಬೇಕು. ಆದುದರಿಂದ ಅವನು ಬಸವೇಶ್ವರನಕ್ಕಿಂತಲೂ ಒಂದು ನೂರು ವರ್ಷ ಮೊದಲಿನವನಾಗುತ್ತಾನೆ. ಅವನಿದ್ದ ಗ್ರಾಮವು ಶಂಕರ ದಾಸಿಮಯ್ಯನಿದ್ದ ಕಂದಗಲ್ಲ ಇರಬಹುದೆಂದು ನಾವು ಊಹಿಸಬಹುದಾಗಿದೆ. ಇಳಕಲ್ಲಿನಿಂದ ಪೂರ್ವಕ್ಕೆ ಹತ್ತು ಮೈಲಿಗಳ ಮೇಲಿದೆ ' . ಎನ್ನುವ ಅಭಿಪ್ರಾಯವನ್ನು

೧ : ಡಾ : ಹಿರೇಮಲ್ಲೂರು ಈಶ್ವರನ್ - ಲಿಂ.ಧ.ಅ.ಪುಟ ೫೨ -೬೨ ಗಮನಿಸಿ

೨ : ಸಂ : ಡಾ : ಎಲ್ ಬಸವರಾಜ್ - ಬ.ವ. ವಚನ ೩೪೩ ಪುಟ ೧೧೮

ಹಳಕಟ್ಟಿಯವರು ವ್ಯಕ್ತಪಡಿಸಿದ್ದಾರೆ. ೧ ಈಗಾಗಲೇ ನಾವು ಕಂಡುಕೊಂಡಂತೆ ಈತನ ಇಷ್ಟದೈವ ಗೌಡೂರಿನ 'ಈಶ್ವರಲಿಂಗ' ವಾಗಿದ್ದು, ಈ ಗೌಡೂರಿಗೆ ಹತ್ತಿರದಲ್ಲಿರುವ ಚಿತ್ತಾಪುರವೇ ಈತನ ಸ್ಥಳವಾಗಿದೆ. ಈ ಚಿತ್ತಾಪುರ ನವಿಲೆಗೆ ಸಮೀಪದಲ್ಲಿದೆ.

ನವಿಲೆಯ ಜಡೆಯ ಶಂಕರನ ಪೂಜೆಯ ವೈಭವವು ಢಕ್ಕೆಯ ಮಾರಯ್ಯರ ಮೇಲೂ ಪ್ರಭಾವ ಬೀರಿರಬೇಕೆನಿಸುತ್ತದೆ. ಆತನ ವಚನಗಳಲ್ಲಿ ಕಂಡುಬರುವ 'ಈಶ್ವರನು ಅಲಂಕೃತರೂಪಾಗಿ'೨ ಎನ್ನುವ ಸಾಲುಗಳ ಮೂಲಕ ನಾವು ಇದನ್ನು ಗುರುತಿಸಬಹುದಾಗಿದೆ.

ಜಡೆಯ ಶಂಕರ ದೇವಾಲಯಕ್ಕಿಂತ ಪೂರ್ವದಲ್ಲಿ ಕ್ಷುದ್ರ ದೇವತೆಗಳು ಮೇಲುಗೈ ಪಡೆದಿರಬೇಕು. ಆ ಬಳಿಕ ಶಿವ ಪ್ರಮುಖಸ್ಥಾನ ಪಡೆದಿರಬೇಕೆನಿಸುತ್ತದೆ.

ಇದಲ್ಲದೇ ಚಿತ್ತಾಪುರದಲ್ಲಿ ಇಂದಿಗೂ ಭೀಮಯ್ಯ – ಭೀಮಣ್ಣ ಹೆಸರುಗಳು ಕಂಡುಬರುತ್ತವೆ. ಭೀಮಯ್ಯನೇ ಬೊಮ್ಮಯ್ಯನಾಗಿರಬೇಕು.

ಜಡೆಯ ಶಂಕರ ದೇವಾಲಯದಲ್ಲಿ ನರ್ತಿಸುವ ಶರಣರ ಉಲ್ಲೇಖವು ಹರಿಹರನ ರಗಳೆಯಲ್ಲಿ ೩ ಕಂಡುಬರುತ್ತಿದ್ದು ಬಹುಶಃ ಆ ಶರಣಪ್ರಭಾವ ಮಾರಯ್ಯನ ಮೇಲಾಗಿ ಆತ ತನ್ನ ಮಾರಿ ಕುಣಿಸುವ ಕಾಯಕದ ಜೊತೆಗೆ ಶಿವನ ನಿಷ್ಠೆ ಬೆಳೆಸಿಕೊಂಡು ಆ ಶಿವನನ್ನು ಮಾರಿಯಲ್ಲಿ ಮುಂದೆ ಕಂಡುಕೊಂಡಿರಬಹುದಾದ ಸಾಧ್ಯತೆಯಿದೆ. ಬಹುಶಃ ಆ ಸೇವಾವರ್ಗದ ಕೆಲಸಗಳಲ್ಲಿ ಇವರು ಭಾಗಿಯಾಗಿರಬೇಕೆನಿಸುತ್ತದೆ. ಆತನ ಭಾಷೆಯ ಸ್ವರೂಪ ಈ ಪರಿಸರಕ್ಕನುಗುಣವಾಗಿದೆ. ಇದೆಲ್ಲ ಗಮನಿಸಿ ಆತನನ್ನು ಚಿತ್ತಾಪುರದವರೆಂದು ಗುರುತಿಸಬಹುದಾಗಿದೆ. ಮಾರಿ ಕುಣಿಸುವ ಜನಾಂಗದವರು ಇತ್ತೀಚಿನವರೆಗೂ ಚಿತ್ತಾಪುರದ ಸುತ್ತಮುತ್ತ ಕಂಡುಬರುತ್ತಾರೆ. ಢಕ್ಕೆಯನ್ನು ತಯಾರಿಸಲು ಬೇಕಾದ ಬನ್ನಿಯ ಮರಗಳು ಸಹ ಈ ಪ್ರದೇಶದಲ್ಲಿ ಹೇರಳವಾಗಿವೆ. ಈ ಎಲ್ಲಾ ಅಂಶಗಳಿಂದ ನಾವು ಇವರನ್ನು ಲಿಂಗಸೂಗೂರು ತಾಲೂಕಿನ ಚಿತ್ತಾಪುರದವರೆಂದು ಹೇಳಬಹುದಾಗಿದೆ.

ಕೃತಿ ಮತ್ತು ವ್ಯಕ್ತಿತ್ವ:

ಢಕ್ಕೆಯ ಮಾರಯ್ಯರ ೯೦ ವಚನಗಳು ನಮಗೆ ಇದುವರೆಗೂ ಲಭ್ಯವಾಗಿವೆ. ವಚನಗಳ ಅಂಕಿತ 'ಕಾಲಾಂತಕ ಭೀಮೇಶ್ವರಲಿಂಗ'ವಾಗಿದೆ.

ವ್ಯವಸ್ಥೆಯೊಳಗಿದ್ದೇ ಆ ಮೂಲಕ ನಿಜವಾದ ಜ್ಞಾನವನ್ನು ಪ್ರಚುರಪಡಿಸುವಲ್ಲಿ ಆತ ಅನೇಕ ಊರುಗಳನ್ನು ಸುತ್ತಿದ್ದು ನಮಗೆ ಸ್ಪಷ್ಟವಾಗಿ ಕಂಡುಬರುತ್ತದೆ. ಮಾರಿಯ ಮೂಲಕವೇ ನಿಜವಾದ ಅರಿವನ್ನು ಇವರು ಮೂಡಿಸಿದ್ದಾರೆ. ಅರಿವಿಗೆ ಕುರುಹು ಅವಶ್ಯಕವೆಂದೇಳಿ ಮಾರಿಯನ್ನು ಕುರುಹು ಆಗಿ ಶರಣರಿಗಿಂತ ಮೊದಲು ಆತ ಕಂಡುಕೊಂಡಿದ್ದು ಬಹುಮುಖ್ಯವಾಗಿದೆ. ಮುಂದೆ ಶರಣರ ಸಂಪರ್ಕ ದೊರೆತ ಮೇಲೆ ಆತ ಮಾರಿಯ ಬದಲಾಗಿ ಇಷ್ಟಲಿಂಗವನ್ನು ಕುರುಹಾಗಿ ಪಡೆದು ಕೊಂಡದ್ದು ತಿಳಿದುಬರುತ್ತದೆ. ಕಲ್ಯಾಣ ಶರಣರ 'ಅನುಭಾವ' ಕಾರ್ಯವನ್ನೇ ಮಾರಯ್ಯ ಒಂಟಿಯಾಗಿ ತನ್ನ ಪರಿಸರದಲ್ಲಿ ಅವರಿಗಿಂತ ಮೊದಲು ಮಾಡಿದನು. ಆತನ ವಚನ 'ಸೌಭಾಗ್ಯದಿಂದ ಮಾಡುವರೆಲ್ಲರೂ ಸಂತೋಷಭಾವಿಗಳು' ೪ ಎಂಬುದನ್ನು ಗಮನಿಸಿದಾಗ ಬದುಕು ನಮಗೆ ಎಷ್ಟು ನೀಡಿದೆ ಎಂಬುದಕ್ಕಿಂತ ಬದುಕಿಗೆ ನಾವು ಎಷ್ಟರಮಟ್ಟಿಗೆ ಆಶಾದಾಯಕವಾಗಿ ಸ್ಪಂದಿಸಿದ್ದೇವೆ ಎಂಬ ವಿಚಾರ ತಿಳಿಸುತ್ತದೆ. ಬಸವಪೂರ್ವಯುಗದಲ್ಲಿಯೇ ಈತ ಕಲ್ಯಾಣ ಶರಣರ ಆಶಯಗಳನ್ನೇ ಪ್ರಚುರಪಡಿಸಿದ್ದನೆಂಬುದನ್ನು ಗಮನಿಸಿದರೆ ನಮಗೆ ಬಹು ಸೋಜಿಗವಾಗುತ್ತದೆ. ಆತನ ವ್ಯಕ್ತಿತ್ವ ಕುರಿತು ಶಾಂತಲಿಂಗದೇಶಿಕರ ಕಾವ್ಯದ ವರ್ಣನೆ ೫ ಬಹುಸಮರ್ಪಕವಾಗಿದೆ. ಆ ಕಾರಣದಿಂದಾಗಿಯೇ ಶಾಂತರಸರು ಈತನನ್ನು ಕುರಿತು 'ನಡೆದಾಡುವ ಶಿವಾನುಭವ ಸಂಸ್ಥೆಯಾಗಿದ್ದನು' ೬ ಎಂದು ಹೇಳಿರುವುದು ಬಹುಸೂಕ್ತವಾಗಿದೆ. ಶರಣಯುಗದ ಮೊದಲ ಧ್ವನಿಯಾಗಿ ಇವರು ಈ ಪರಿಸರದಲ್ಲಿ ಕಾಣಿಸಿಕೊಂಡಿದ್ದರು.

---

೧. ಫ. ಗು.ಹಳಕಟ್ಟಿ – ಶಿ.ಚ.ಭಾಗ – ೩ ಪುಟ ೧೫೮

೨. ಸಂ: ಡಾ: ಎಸ್.ವಿದ್ಯಾಶಂಕರ – ಸು.ವ.ಸಂ – ೬ ವಚನ ೧೬ ಪುಟ ೨೮೮

೩. ಸಂ: ಡಾ: ಎಂ.ಎಂ.ಕಲಬುರ್ಗಿ – ಹ.ರ. ಸ್ಥಲ ೧ ೩೫ನೇ ಪದ್ಯ ಪುಟ ೨೬೬

೪. ಸಂ: ಡಾ: ಎಸ್.ವಿದ್ಯಾಶಂಕರ – ಸು.ವ.ಸಂ – ೬ ವಚನ ೮೮ ಪುಟ ೩೧೦

೫. ಸಂ: ಡಾ: ಆರ್.ಸಿ.ಹಿರೇಮಠ ಮತ್ತು ಡಾ: ಎಂ. ಎಸ್. ಸುಂಕಾಪುರ – ಶಾಟ್ಯೆ ಕಾ.ಕ.ಸೂ. ಪುಟ ೨೪೪

೬. ಶಾಂತರಸ – ಬ.ಪೂ.ಶ ಪುಟ ೨೯

೫) ನವಿಲೆಯ ಶಂಕರ ದಾಸಿಮಯ್ಯ

ಜೈನಮತ್ತು ವೈಷ್ಣವ ಧರ್ಮಗಳ ತೀವ್ರ ಸೆಟಸಾಟ ನಡೆದಿತ್ತು. ಮತ್ತೊಂದೆಡೆ ಭೈರವ, ಮೈಲಾರ, ಮಾರಿ - ಮಸಣಿಗಳ ಜನಪದ ಸಂಸ್ಕೃತಿಯ ದೇವತೆಗಳ ಆರ್ಭಟ ಇವುಗಳ ಮಧ್ಯೆ ಶಿವಭಕ್ತರ ನಿಷ್ಠೆಯೂ ಬೆಳೆಯತೊಡಗಿತು.

ಸೋಮಾರಿಯಾಗಿ ತಿನ್ನದೇ ದುಡಿದು ತಿನ್ನಬೇಕೆಂಬ ಆದರ್ಶ ಪರಂಪರೆಗೆ ವೇದಿಕೆ ನಿರ್ಮಾಣವಾಗ ತೊಡಗಿತ್ತು. ಅರ್ಥವಿಲ್ಲದೆ ಯಜ್ಞ-ಯಾಗಾದಿಗಳು ನಡೆಯುತ್ತಿದ್ದು ಇದಕ್ಕೆ ವಿಚಾರವಂತರ ಕೆಲ ಮನಸ್ಸುಗಳು ಪ್ರತಿಭಟನೆ ನಡೆಸಿದ್ದವು. ಆ ಪ್ರತಿಭಟನೆ ವ್ಯಾಪಕ ಆಂದೋಲನವಾಗಬೇಕೆಂಬ, ಅದು ಸಂಘಟನೆಯಾಗಿ ಬೆಳೆಯಬೇಕೆಂಬುದು ಕೆಲವರ ಅಭಿಮತವಾಗಿತ್ತು. ಇಂತಹ ಸಂಘರ್ಷಮಯ ವಾತಾವರಣದಲ್ಲಿ ನವಿಲೆಯ ಶಂಕರ ದಾಸಿಮಯ್ಯ ಕಾಣಿಸಿಕೊಳ್ಳುತ್ತಾರೆ.

ಇವರ ಕುರಿತಾಗಿ ನಮಗೆ ಯಾವುದೇ ಶಾಸನಗಳು ಕಂಡುಬರುವುದಿಲ್ಲ. ಅದರ ಬದಲಾಗಿ ನಮಗೆ ವಚನ, ಕಾವ್ಯಗಳಿಂದ ಇವರ ಚಾರಿತ್ರಿಕ ಅಂಶಗಳು ತಿಳಿದು ಬರುತ್ತವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ :-

ಹರಿಹರನ ಶಂಕರ ದಾಸಿಮಯ್ಯ ರಗಳೆ, ತೆಲಗು ಬಸವ ಪುರಾಣ, ಕನ್ನಡ ಬಸವ ಪುರಾಣ, ಚೆನ್ನ ಬಸವ ಪುರಾಣ, ಪಾಲ್ಕುರಿಕೆ ಸೋಮೇಶ್ವರ ಪುರಾಣ, ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ, ಶಂಕರ ದಾಸಿಮಯ್ಯ ಪುರಾಣ ಮುಂತಾದವುಗಳು.

ಈ ಮೇಲಿನ ಎಲ್ಲಾ ಕೃತಿಗಳಲ್ಲಿ ಹರಿಹರನ ಕೃತಿಯೇ ಮುಖ್ಯವಾಗಿದ್ದು ಅದನ್ನು ಅನುಸರಿಸಿ ಉಳಿದವರು ಮುಂದೆ ಮಾರ್ಪಾಟುಗೊಳಿಸಿ ಕೃತಿ ರಚಿಸಿದ್ದಾರೆ. ಆ ಹಿನ್ನೆಲೆಯಲ್ಲಿ ನಾವು ಹರಿಹರನ ಕೃತಿಯ ಪ್ರಮುಖ ಅಂಶಗಳನ್ನು ಗಮನಿಸಿದರೆ ಅಲ್ಲಿ ಕಂಡು ಬರುವ ಅಂಶಗಳೆಂದರೆ :- : ' ಕಂದಶಿಲೆಯೆಂಬ ಗ್ರಾಮದಲ್ಲಿ ಗೋವಿಂದ ದೇವನೆಂಬ ಬ್ರಾಹ್ಮಣನ ಹೆಂಡತಿ ಉಮ್ಮವ್ವೆಯೊಡನೆ ಸಂಸಾರ ಮಾಡಿಕೊಂಡಿದ್ದನು. ವಾರಣಾಸಿಗೆಹೋಗುವ ಉದ್ದೇಶದಿಂದ ಹೊರಟನು. ಹೊರಡುವಾಗ ಕಂದಶಿಲೆಗೆ ಸಮೀಪದಲ್ಲಿದ್ದ ನವಿಲೆಗೆ ಬಂದನು. ಅಲ್ಲಿ ಜಡೆಯಶಂಕರ ದೇವಾಲಯವನ್ನು ಹೊಕ್ಕನು. ಅಲ್ಲಿನ ಪೂಜೆಗಳಿಗೆ ಮನಸೋತು ಇನ್ನೇಕೆ ವಾರಣಾಸಿಗೆಂದು ನಿರ್ಧರಿಸಿ ನಿತ್ಯವೂ ಕಂದಶಿಲೆಗೆ ಬಂದು ಜಡೆಯ ಶಂಕರನನ್ನು ಅರ್ಚಿಸಿ ಹೋಗುತ್ತಿದ್ದನು. ಮುಂದೆ ಶಿವನ ಆಜ್ಞೆಮೇರೆಗೆ ಹೆಂಡತಿಯೊಡನೆ ನವಿಲೆಗೆ ಬಂದು ಜಡೆಯ ಶಂಕರನ ಅರ್ಚನೆಯಲ್ಲಿ ಮುಳುಗಿದನು. ಒಂದು ದಿನ ಜಂಗಮ ವೇಷದಲ್ಲಿ ಬಂದ ಶಿವ ನೊಸಲ ಕಣ್ಣನ್ನು ನೀಡಿ ಶಂಕರ ದಾಸಿಮಯ್ಯ ಎಂಬ ಹೆಸರನ್ನು, ಹೆಂಡತಿಗೆ ಶಿವದಾಸಿ ಎಂದು ಹೆಸರಿಟ್ಟನು. ಹೀಗೆ ನೊಸಲ ಕಣ್ಣು ಪಡೆದು ಶಿವ ಮಹಿಮೆ ಮೆರೆದು ವಿರೋಧಿಗಳನ್ನು ಸೋಲಿಸಿ ಶಿವನ ಮಹಿಮೆಯನ್ನು ಪ್ರಚುರಗೊಳಿಸಿದನು.'

' ಮುಂದೆ ಜೇಡರ ದಾಸಿಮಯ್ಯನು ಶಂಕರ ದಾಸಿಮಯ್ಯನನ್ನು ಕಾಣಲು ಬಂದಾಗ ಶಿವದಾಸಿ ವಕ್ರಪಾದನಿಗೆ ಧಾನ್ಯಕ್ಕೆ ಹೋಗು ಎಂದು ತಿಳಿಸಿದಾಗ ಜೇಡರ ದಾಸಿಮಯ್ಯ ತನ್ನ ಮನೆಯಲ್ಲಿ ತವನಿಧಿ ಇದ್ದು ಆ ಮೂಲಕ ಧಾನ್ಯ ಕಳುಹಿಸುತ್ತೇನೆ ಎಂದನು. ಮುಂದೆ ತವನಿಧಿ ಬತ್ತಿದಾಗ ಜೇಡರ ದಾಸಿಮಯ್ಯನ ಗರ್ವ ಭಂಗವಾಗಿ ಆತ ಕ್ಷಮೆ ಕೇಳುತ್ತಾನೆ. ಆನಂತರ ಆತನನ್ನು ಆಶೀರ್ವದಿಸಿ ಪುನಃ ತವನಿಧಿ ದಯಪಾಲಿಸುತ್ತಾನೆ. ಕಲ್ಯಾಣದ ಅರಸ ಜಯಸಿಂಹನ ಸಮ್ಮುಖದಲ್ಲಿಯೇ ನರಸಿಂಹನ (ವಿಷ್ಣು) ಪ್ರತಿಮೆಯನ್ನು ಭಸ್ಮ ಮಾಡುತ್ತಾನೆ. ಮುಂದೆ ಸಂಚಾರ ನಡೆಸಿದ ಶಂಕರ ದಾಸಿಮಯ್ಯ ಮೈಲಾರನಿಂದ ಕೊಡೆಹಿಡಿಸಿಕೊಂಡನು. ಭೈರವವನ್ನು ಉದ್ಧರಿಸಿದನು. ಮಾರಿ ಮಸಣಿಗಳಿಂದ ಧಾನ್ಯ ಸೆಶಂಕರ ದಾಸಿಮಯ್ಯ ಸ್ವಚ್ಛಗೊಳಿಸಿ ಜಂಗಮಾರಾಧನೆ ಮಾಡಿದನು. ಹೀಗೆ ಅನೇಕ ಲೀಲೆಗಳನ್ನು ಮಾಡಿ ಪುನಃ ನವಿಲೆಗೆ ಬಂದು ಅಲ್ಲಿಯೇ ಐಕ್ಯನಾದನು. '೧

ಹರಿಹರನ ರಗಳೆಯಿಂದ ಕಂಡುಬರುವುದೇನೆಂದರೆ ಈತ ಕಂದಶಿಲೆಯ ಶೈವಬ್ರಾಹ್ಮಣನಾಗಿದ್ದು ವೈರಾಗ್ಯ ಮೂಡಿ ವಾರಣಾಸಿಗೆ ಹೋಗುವಾಗ ದಾರಿಯಲ್ಲಿ ನವಿಲೆಯ ಜಡೆಯಶಂಕರ ದೇವಾಲಯದಿಂದ ಪ್ರಭಾವಿತನಾಗಿ, ಅಲ್ಲಿಯೇ ಪೂಜೆ ನಿರತನಾಗಿ ಮುಂದೆ ತನ್ನ ಆ ದೈವದಿಂದ ನೊಸಲು ಕಣ್ಣು ಪಡೆದು ಅನೇಕ ಲೀಲೆಗಳನು ಮಾಡಿ ಧರ್ಮವನ್ನು ಪ್ರಚಾರ ಮಾಡಲು ಅನೇಕ ಊರುಗಳನ್ನು ಸಂಚರಿಸುತ್ತಾನೆ. ಇಲ್ಲಿ ಜಯಸಿಂಹ, ಜೇಡರ ದಾಸಿಮಯ್ಯರ ಉಲ್ಲೇಖ ಬರುವ ಕಾರಣ ಇವರ ಹಿನ್ನೆಲೆಯಲ್ಲಿ ನಾವು ಈತನ ಕಾಲ, ಸ್ಥಳ, ಕೃತಿ, ವ್ಯಕ್ತಿತ್ವಗಳನ್ನು ಅರಿಯಬಹುದಾಗಿದೆ.

೧: ಸಂ: ಡಾ: ಎಂ.ಎಂ. ಕಲಬುರ್ಗಿ - ಹ.ರ. ಪುಟ. ೨೭೭-೨೮೮

ಕಾಲ :-

ಶಂಕರ ದಾಸಿಮಯ್ಯರ ಕಾಲವನ್ನು ನಾವು ಜೇಡರ ದಾಸಿಮಯ್ಯರ ತವನಿಧಿ ಬಯಲು ಮಾಡಿದ ಘಟನೆ ಮತ್ತು ಕಲ್ಯಾಣ ಚಾಲುಕ್ಯರ ಅರಸ ಜಯಸಿಂಹನ ಎದುರಿನಲ್ಲಿ ವಿಷ್ಣು ಪ್ರತಿಮೆ ಭಗ್ನಗೊಳಿಸಿದ ಘಟನೆಯ ಹಿನ್ನೆಲೆಯಲ್ಲಿ ಗಮನಿಸಬಹುದು. ಶಂಕರ ದಾಸಿಮಯ್ಯರ ಕಾಲವನ್ನು ಕುರಿತು ಇದುವರೆಗೂ ಅನೇಕ ವಿದ್ವಾಂಸರು ವಿವೇಚಿಸಿದ್ದಾರೆ. ಅವರುಗಳೆಂದರೆ : -

ಬಿ.ಶಿವಮೂರ್ತಿ ಶಾಸ್ತ್ರಿ ೧,೨ ಡಾ: ಎಂ.ಎಂ. ಕಲಬುರ್ಗಿ ೩ , ಎಚ್.ಎಸ್.ಮುಕ್ತಾಯಕ್ಕ ೪ , ಡಾ : ಜ.ಚ.ನಿ.೫ , ಶಾಂತರಸ ೬ , ಡಾ : ಎಂ .ಚಿದಾನಂದ ಮೂರ್ತಿ ೭, ಪ್ರಮುಖರಾಗಿದ್ದಾರೆ. ನಾವು ಈ ವಿದ್ವಾಂಸರ ಅಭಿಪ್ರಾಯವನ್ನು ಲಕ್ಷ್ಯದಲ್ಲಿರಿಸಿಕೊಂಡು ಹಾಗೂ ಈ ಹಿಂದೆ ಉಲ್ಲೇಖಿಸಿದ ಎರಡು ಸಂದರ್ಭಗಳ ಹಿನ್ನೆಲೆಯಲ್ಲಿ ಇವರ ಕಾಲವನ್ನು ಕಂಡುಕೊಳ್ಳಬಹುದಾಗಿದೆ.

೧ : ಶಂಕರ ದಾಸಿಮಯ್ಯರು ಜೇಡರ ದಾಸಿಮಯ್ಯರ ತವನಿಧಿ ಬಯಲು ಮಾಡಿದ ಘಟನೆ

ಜೇಡರ ದಾಸಿಮಯ್ಯ ತವನಿಧಿ ಪಡೆದ ಬಗ್ಗೆ ಬಸವಣ್ಣ ಉಲ್ಲೇಖಿಸಿದ್ದಾರೆ. ೮ ಹಾಗೆಯೇ ಶಾಸನಗಳಲ್ಲಿ ಉಲ್ಲೇಖವಿದ೯ ಆದರೆ ಶಂಕರ ದಾಸಿಮಯ್ಯ ಈತನ ತವನಿಧಿ ಅಹಂಕಾರವನ್ನು ಮುರಿದದ್ದು ನಮಗೆ ಶಾಸನಗಳಿಂದ ತಿಳಿಯುವುದಿಲ್ಲ. ಅಂತೆಯೇ ಇವರಿಬ್ಬರ ವಚನಗಳಿಂದಲೂ ಸ್ಪಷ್ಟವಾಗಿ ಕಂಡು ಬರುವುದಿಲ್ಲ .ಆದರೆ ಸೊಡ್ಡಳ ಬಾಚರಸನಲ್ಲಿ ಮಾತ್ರ ತವನಿಧಿ ಬಯಲು ಮಾಡಿದ್ದರ ಉಲ್ಲೇಖವಿದೆ೧೦

ಇದೆಲ್ಲವನ್ನು ಗಮನಿಸಿ ತವನಿಧಿ ಬಯಲು ಮಾಡಿದ ಘಟನೆ ಮೂಲಕ ಶಂಕರ ದಾಸಿಮಯ್ಯ ರ ಕಾಲವನ್ನು ಊಹಿಸಬಹುದಾಗಿದೆ.

ಜೇಡರ ದಾಸಿಮಯ್ಯನು ಇವರಿಗಿಂತ ಕಿರಿಯ ಸಮಕಾಲೀನವರೆಂದು ತಿಳಿದು ಬರುವ ವಿಚಾರವಾಗಿದೆ. ಜೇಡರ ದಾಸಿಮಯ್ಯರ ಕಾಲದ ಬಗ್ಗೆ ಅನೇಕ ವಿದ್ವಾಂಸರು ವಿವಿಧ ಅಭಿಪ್ರಾಯಗಳನ್ನು ಹೊಂದಿದ ಬಗ್ಗೆ ಪ್ರೊ. ಆರ್.ರಾಚಪ್ಪ ಉಲ್ಲೇಖಿಸಿ ಜೇಡರ ದಾಸಿಮಯ್ಯರ ಕಾಲ ಕ್ರಿ.ಶ. ೧೦೬೦ ರಿಂದ ೧೧೫೦ ರ ಕಾಲಾವಧಿಯೆಂದು ಅಭಿಪ್ರಾಯ ಪಟ್ಟಿದ್ದಾರೆ. ೧೧ ಇದನ್ನು ಗಮನಿಸಿದರೆ ಇವರು ಜೇಡರ ದಾಸಿಮಯ್ಯರಿಗಿಂತ ಸ್ವಲ್ಪ ಹಿರಿಯರು ಎಂದ ಭಾವಿಸಿದರೆ ಕ್ರಿ.ಶ. ೧೦೫೫ ರಿಂದ ಕ್ರಿ.ಶ. ೧೧೫೫ ರವರೆಗೆಂದು ಊಹಿಸಬಹುದಾಗಿದೆ. ಕಲ್ಯಾಣಕ್ಕೆ ಹೋಗುವ ಮೊದಲೇ ತವನಿಧಿ ಘಟನೆ ನಡೆದಿದೆ. ಕ್ರಿ.ಶ. ೯೮೦ ಸುಮಾರಿಗೆ ವಿಷ್ಣು ಪ್ರತಿಮೆ ಭಗ್ನಗೊಳಿಸುತ್ತಾನೆಂಬುದು ತಿಳಿಯುವುದರಿಂದ ಈ ತವನಿಧಿ ಬಯಲು ಮಾಡಿದ ಘಟನೆ ಕ್ರಿ.ಶ. ೧೦೮೨ ನಡೆದಿರಬೇಕು. ಮುಂದೆ ಆತ ಕಲ್ಯಾಣಕ್ಕೆ ಹೋಗಿ ಅಲ್ಲಿ ಜಯಸಿಂಹನ ಸಮ್ಮುಖದಲ್ಲಿ ವಿಷ್ಣು ಪ್ರತಿಮೆ ಭಗ್ನಗೊಳಿಸಿ ನವಿಲೆಗೆ ಕ್ರಿ.ಶ. ೧೧೦೦ ರಲ್ಲಿ ಬರುತ್ತಾನೆಂದು ಊಹಿಸಬಹುದು. ಮುಂದೆ ಕ್ರಿ.ಶ. ೧೧೩೦ ರಲ್ಲಿ ಢಕ್ಕೆಯ ಮಾರಯ್ಯರ ಸಂಪರ್ಕ ಬಂದು ತಮ್ಮ ಅಹಂಕಾರ ಕಳೆದುಕೊಂಡಿರಬೇಕೆನಿಸುತ್ತದೆ.

---

೧ : ಶಿವಾನುಭವ -ಸಂಪುಟ೯-ಸಂಚಿಕೆ ೬ ಪುಟ ೪೨೧ -೧೯೩೪

೨: ಅದೇ : ಸಂಪುಟ ೧೨ -ಸಂಚಿಕೆ ೧ -೧೯೩೩

೩ : ಡಾ : ಎಂ.ಎಂ. ಕಲಬುರ್ಗಿ - ಮಾರ್ಗ೧ ಪುಟ ೧೪೮

೪ : ಎಚ್.ಎಸ್. ಮುಕ್ತಾಯಕ್ಕ -ಡ.ಬೋ. ಪುಟ ೩

೫ : ಡಾ : ಜ.ಚ.ನಿ. ಲೇಖನ -ವೀ.ಸಾ.ಸ. ಪುಟ ೧೪

೬ : ಶಾಂತರಸರ ಲೇಖನ -ಸ.ಕ.ಸಾ.ಚ.-ಸಂಪುಟ ೩ ಪುಟ ೬೨-೬೩

೭ : ಡಾ: ಎಂ .ಚಿದಾನಂದ ಮೂರ್ತಿ -ವ.ಸಾ. ಪುಟ ೧೪ ಮತ್ತು ೨೮

೮ : ಸಂ: ಡಾ : ಎಂ.ಎಂ. ಕಲಬುರ್ಗಿ -ಸ.ವ.ಸಂ. -೧ ವಚನ ೩೨೧ ಮತ್ತು ೭೬೧

೯: ಡಾ: ಎಂ.ಎಂ. ಕಲಬುರ್ಗಿ -ಶಾ.ಶಿ. ಪುಟ ೩೭

೧೦ : ಸಂ: ಎಸ್.ಎಸ್. ಭೂಸರೆಡ್ಡಿ ವಚನ ೩೧

೧೧ : ಪ್ರೊ : ಆರ್.ರಾಚಪ್ಪ -ವ. ಪುಟ ೫೫ ರಿಂದ ೫೭

೨ : ಜಯಸಿಂಹನ ಕಾಲ

ಶಾಸನ ಗಳನ್ನು ಅವಲೋಕಿಸಿದಾಗ ನಮಗೆ ಜಯಸಿಂಹರ ಬಗ್ಗೆ ಸ್ಪಷ್ಟವಾಗುತ್ತ ದೆ. ಅದರಲ್ಲೂ ಕಲ್ಯಾಣ ಚಾಲುಕ್ಯರ ವಂಶಾವಳಿಯನ್ನು ಕುರಿತು ನೋಡಿದರೆ. ಮೊದಲನೆಯ ಸೋಮೇಶ್ವರನ ಮಗನಾಗಿದ್ದ ಮೂರನೆಯ ಮಗ ಜಯಸಿಂಹನೇ ಜಯಸಿಂಹನಾಗಿರಬೇಕು. ಇವನು ಕಲ್ಯಾಣದಲ್ಲಿ ಅಣ್ಣ ಆರನೆಯ ವಿಕ್ರಮಾದಿತ್ಯ ಚಕ್ರವರ್ತಿಯಾಗಿದ್ದಾಗ ಈತ ಯುವರಾಜನಾಗಿ ಇಂದಿನ ಲಿಂಗಸೂಗೂರು ತಾಲೂಕೂ ಒಳಗೊಂಡ ಭಾಗದ ಬಹುತೇಕ ಪ್ರದೇಶಗಳನ್ನು ಆಳುತ್ತಿದ್ದನೆಂದು ತಿಳಿದು ಬರುತ್ತದೆ.೧ವಿಷ್ಣು ಪ್ರತಿಮೆ ಕಲ್ಯಾಣದಲ್ಲಿ ಭಗ್ನ ಗೊಂಡ ಘಟನೆ ಗಮನಿಸಿದರೆ ನಾಲ್ಕನೆಯ ಜಯಸಿಂಹನು ಕಲ್ಯಾಣದಲ್ಲಿ ಕ್ರಿ.ಶ. ೧೦೮೦ ರಿಂದ ಕ್ರಿ.ಶ. ೧೦೮೩ ರವಧಿಯಲ್ಲಿ ಇದ್ದನೆಂಬುದು ನಮಗೆ ಆರನೆಯ ವಿಕ್ರಮಾದಿತ್ಯನ ಸಂಬಂಧಮೂಲಕ ತಿಳಿಯುತ್ತದೆ. ೨ ಹಾಗಾಗಿ ಇದುವರೆಗೂ ಅನೇಕರು ಊಹಿಸಿದಂತೆ ಎರಡನೆಯ ಜಯಸಿಂಹ ಮತ್ತು ಮೂರನೆಯ ಜಯಸಿಂಹರ ಕಾಲದಲ್ಲಿ ಈ ಘಟನೆ ನಡೆಯಲಿಲ್ಲವೆಂಬುದು ಡಾ : ಅನ್ನಪೂರ್ಣ ಜಾಲವಾದಿಯವರ ಈ ಕೆಳಗಿನ ವಿವರಣೆಯಿಂದ ತಿಳಿಯಬಹುದಾಗಿದೆ.

' ಒಂದನೇಯ ಜಯಸಿಂಹನು ಕಲ್ಯಾಣ ಚಾಲುಕ್ಯ ವಂಶದ ಮೂಲ ಪುರಷರಲ್ಲಿ ಒಬ್ಬನು . ಈತನ ಕಾಲವು ಕ್ರಿ.ಶ. ೫೦೦ ರಿಂದ ೫೨೦ ಈತನಿಗೂ ಮೇಲೆ ಸೂಚಿಸಲಾದ ಶಂಕರ ದಾಸಿಮಯ್ಯರ ಘಟನೆಗೂ ಯಾವ ಸಂಬಂಧವಿಲ್ಲವೆಂದು ಸ್ಪಷ್ಟವಾಗಿದೆ. ಇನ್ನು ಎರಡನೆಯ ಜಯಸಿಂಹನ ಕುರಿತಂತೆ ಈತನು ಕ್ರಿ.ಶ. ೧೦೧೫-೧೦೪೨ ರವರೆಗೆ ಪೊಟ್ಟಲ ಕೆರೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯವಾಳಿದನು ಈತನ ಹೆಂಡತಿ ಸುಗ್ಗಲಾ ದೇವಿ ಈಕೆಯು ದೇವರ ದಾಸಿಮಯ್ಯನಿಂದ (ಕ್ರಿ.ಶ.ಸು. ೧೦೪೦) ಲಿಂಗ ದಿಕ್ಷೆ ಪಡೆದು ಗಂಡನ ಮತ ಪರಿವರ್ತನೆಗೂ ಕಾರಣಳಾದಳೆಂಬುದನ್ನು ವೀರಶೈವ ಕಾವ್ಯಗಳು ತಿಳಿಯಪಡಿಸುತ್ತವೆ. ಈತನ ಆಡಳಿತಾವಧಿ ಅಂದರೆ ಕ್ರಿ.ಶ. ೧೦೪೦ -೧೦೪೨ ರಲ್ಲಿಯೇ ಶಂಕರ ದಾಸಿಮಯ್ಯನು ಕಲ್ಯಾಣಕ್ಕೆ ಬಂದು ವಿಷ್ಣು ದಹನದ ಪವಾಡ ಮೆರೆದನೆಂದೂ ವಿದ್ವಾಂಸರಾದ ಆರ್. ನರಸಿಂಹಾಚಾರ್ , ಆರ್. ಎಚ್. ದೇಶಪಾಂಡೆ, ರಂ.ಶ್ರೀ. ಮುಗಳಿ, ವ್ಹಿ. ಬಿ. ಹಾಲಬಾವಿ , ಬಿ. ಶಿವಮೂರ್ತಿ ಶಾಸ್ತ್ರಿ ಅಭಿಪ್ರಾಯ ಪಡುತ್ತಾರೆ.ಇದು ವಿಚಾರಾರ್ಹವಾಗಿದೆ'. ೩

ಹಾಗೆಯೇ ಕ್ರಿ.ಶ.೧೦೧೫-೧೦೪೨ ರ ತನಕ ಆಳ್ವಿಕೆಯಲ್ಲಿದ ಎರಡನೆಯ ಜಯಸಿಂಹನ ಕುರಿತಂತೆ ಯಾವ ಶಾಸನಗಳಲ್ಲಿಯೂ ಕಲ್ಯಾಣ ರಾಜಧಾನಿಯಾದ ಬಗ್ಗೆ ಪ್ರಸ್ತಾಪವಿಲ್ಲ. ಅದಕ್ಕೆ ಬದಲಾಗಿ ಮಳಖೇಡ , ಪೊಟ್ಟಲಕೆರೆ , ಯಾದಗಿರಿ ರಾಜಧಾನಿಗಳಾಗಿದ್ದವೆಂದು ತಿಳಿದು ಬರುತ್ತದೆಂಬುದಾಗಿ ದೇಸಾಯಿ ಹೇಳುತ್ತಾರೆ. ೪ ಅಂತೆಯೇ ಡಾ: ಕಲಬುರ್ಗಿಯವರು ಜಯಸಿಂಹನಿಗೆ ಸಂಬಂಧಿಸಿದಂತೆ 'ಇಮ್ಮಡಿ ಜಯಸಿಂಹನ ಕಾಲದಲ್ಲಿ (ಕ್ರಿ.ಶ.೧೦೧೫-೧೦೪೨) ಕಲ್ಯಾಣ ಪಟ್ಟಣವು ಚಾಲುಕ್ಯರ ರಾಜಧಾನಿಯಾಗಿರಲಿಲ್ಲ .ಅದು ರಾಜಧಾನಿಯಾಗಿದ್ದುದು ಇವನ ಮಗ ಮೊದಲನೆಯ ಸೋಮೇಶ್ವರನ ಕಾಲದಲ್ಲಿ (ಕ್ರಿ.ಶ.೧೦೪೮) ಈ ಸೋಮೇಶ್ವರನ ಮಗ ಮುಮ್ಮಡಿ ಜಯಸಿಂಹ ಆದುದರಿಂದ ಮುಮ್ಮಡಿ ಜಯಸಿಂಹ (ಕ್ರಿ.ಶ. ೧೦೬೪ ರಿಂದ೧೦೮೦)ಎದುರು ಶಂಕರ ದಾಸಿಮಯ್ಯನು ಕಲ್ಯಾಣದಲ್ಲಿ ವಿಷ್ಣು ವಿಗ್ರಹ ಸುಟ್ಟು ಹಾಕಿರುವ ಸಾಧ್ಯತೆ ಇದೆ೫ 'ಎಂದು ಹೇಳುತ್ತಾರೆ.

ಇದುವರೆಗಿನ ವಿವೇಚನೆಯಿಂದ ನಮಗೆ ಕಂಡುಬರುವುದೇನೆಂದರೆ ವಿಷ್ಣು ಪ್ರತಿಮೆ ದಹನದ ಘಟನೆ ನಡೆದುದು ಕಲ್ಯಾಣದಲ್ಲಿ ಕ್ರಿ.ಶ.೧೦೮೩ ನಾಲ್ಕನೆಯ ಜಯಸಿಂಹನ ಎದುರು ಎಂಬುದು ಸ್ಪಷ್ಟವಾಗುತ್ತದೆ. ಇದಕ್ಕಿಂತ ಮುಂಚೆ ನಡೆದುದ್ದು ಕ್ರಿ.ಶ. ೧೦೮೨ ರ ತವನಿಧಿಯ ಘಟನೆ. ಆದರೆ ಅನ್ನಪೂರ್ಣರವರು ಹೇಳುವಂತೆ 'ಶಂಕರ ದಾಸಿಮಯ್ಯನ ವಿಷ್ಣು ದಹನ ಪವಾಡ ಕಾಲ ಕ್ರಿ.ಶ.೧೦೮೦ ಕಾವ್ಯೋಕ್ತವಾಗಿರುವಂತೆ ಇದಕ್ಕಿಂತ ಮುಂಚಿತವಾಗಿ ನಡೆದದ್ದು ಮುದನೂರಿನ ತವನಿಧಿಯ ಪವಾಡ . ಈ ಪವಾಡದ ಅವಧಿಯನ್ನು ಕ್ರಿ.ಶ.೧೦೭೫ ಎಂದು ಇಟ್ಟುಕೊಳ್ಳಬಹುದು. ಪರವಾದಿಗಳ ಛಲವನ್ನು ಉಗ್ರವಾಗಿ ಭಂಗಿಸುವ ದೃಢತೆ ನೈಷ್ಠುರ್ಯಗಳನ್ನು ಜೇಡರ ದಾಸಿಮಯ್ಯನಂಥವನ ಗರ್ವವನ್ನು ಮಾರ್ಮಿಕವಾಗಿ ಭಂಗಿಸುವ ಪ್ರೌಢಿಮೆ, ಭಕ್ತಿ ಪರಿಪಕ್ವತೆಗಳನ್ನು ಮೈಗೂಡಿಸಿಕೊಂಡ ಶಂಕರ ದಾಸಿಮಯ್ಯನಿಗೆ ಈ ಹೊತ್ತಿಗೆ ಸುಮಾರು ೪೫ -೫೦ ವರ್ಷ ವಯಸ್ಸಾದರೂ ಆಗಿರಬೇಕು. ಇದನ್ನನ್ನು ಲಕ್ಷ್ಯಿಸಿ ಶಂಕರ ದಾಸಿಮಯ್ಯನ ಜನನದ ಕಾಲವನ್ನು ಕ್ರಿ.ಶ. ೧೦೨೦ - ೨೫ ಎಂದು ಗುರುತಿಸಿಕೊಳ್ಳಬಹುದು' ಎನ್ನುತ್ತಾರೆ.೬

ಇದನ್ನು ಗಮನಿಸಿದಾಗ ಅನ್ನಪೂರ್ಣರವರ ಹೇಳಿಕೆ ಬಹು ಅಸ್ಪಷ್ಟತೆಯಿಂದ ಕೂಡಿದೆನಿಸುತ್ತದೆ. ಏಕೆಂದರೆ ಶಂಕರ ದಾಸಿಮಯ್ಯ ಸ್ಪಷ್ಟವಾಗಿ ತನ್ನ ಎರಡು ವಚನಗಳಲ್ಲಿ ಕಲ್ಯಾಣ ಶರಣರನ್ನು ಸ್ಮರಿಸುತ್ತಾನೆ. ೭ಅದರಲ್ಲೂ 'ಸಂಗನ ಬಸವಣ್ಣನ ಕರುಣದಿಂದ ಪ್ರಭುದೇವರೆಂಬ ನಿರಾಳವ ಕಂಡು ಬದುಕಿದೆನು ಕಾಣಾ' ಎಂದು ಹೇಳುವ ಕಾರಣ ಇವರ ಜನನ ಕಾಲ

---

೧ : ಡಾ : ಜೆ.ಎಂ. ನಾಗಯ್ಯ - ಆ.ವಿ.ಶಾ.ಪುಟ ೪೯

೨ : Dr. B.R. Gopal-C.K. Page 253 P.B.

೩ : ಡಾ : ಅನ್ನಪೂರ್ಣ ಜಾಲವಾದಿ -ಶಂ. ದಾ.ಪು.ಅ. ಪುಟ ೨೮-೨೯

೪ : Desai-H.K.Page 193

೫ : ಡಾ : ಎಂ.ಎಂ. ಕಲಬುರ್ಗಿ -ಮಾರ್ಗ೧ ಪುಟ ೧೬೪

೬ : ಡಾ : ಅನ್ನಪೂರ್ಣ ಜಾಲವಾದಿ -ಶಂ.ದಾ.ಪು.ಅ.-ಪುಟ ೩೧

೭ : ಸಂ : ಡಾ: ಬಿ.ಆರ್ .ಹಿರೇಮಠ - ಸ.ವ.ಸಂ. -೯ ವಚನ ೧ ಮತ್ತು ೫ ಪುಟ ೫೪-೫೫

ಕ್ರಿ.ಶ. ೧೦೨೦ -೧೦೨೫ ಎಂದು ನಂಬುವುದು ಕಷ್ಟ. ಬಸವಣ್ಣ ಕ್ರಿ.ಶ. ೧೧೫೩ ರ ಸುಮಾರಿಗೆ ಮಂಗಳವೇಡೆಯಿಂದ ಕಲ್ಯಾಣಕ್ಕೆ ಬರುವುದು ಗಮನಿಸಿದರೆ ಇವರು ಕ್ರಿ.ಶ. ೧೧೫೩ ರಲ್ಲಿ ಕೊನೆಯ ಸಮಯದಲ್ಲಿ ಬಸವಣ್ಣರನ್ನು ಕಂಡಿರಬೇಕೆನಿಸುತ್ತದೆ. ಹಾಗೆಯೇ ತವನಿಧಿ ಘಟನೆ ಕ್ರಿ.ಶ.೧೦೮೨ ರಲ್ಲಿ , ವಿಷ್ಣು ಪ್ರತಿಮೆ ಘಟನೆ ಕ್ರಿ.ಶ೧೦೮೩ ರಲ್ಲಿ ಎಂದರೆ, ಅಂತಯೇ ಜೇಡರ ದಾಸಿಮಯ್ಯರ ಕಾಲ ಸ್ಪಷ್ಟವಾಗಿ ಕ್ರಿ.ಶ. ೧೦೬೦-೧೧೫೦ ಎಂದಿರುವ ಕಾರಣ ಇವರು ಜೇಡರ ದಾಸಿಮಯ್ಯರ ಹಿರಿಯ ಸಮಕಾಲೀನನಾಗಿ ಕ್ರಿ.ಶ .೧೦೫೫ ರಜನಿಸಿ ಕ್ರಿ.ಶ.೧೧೫೫ ಸುಮಾರಿಗೆ ಐಕ್ಯರಾಗಿರಬೇಕೆನಿಸುತ್ತದೆ. ಇದುವರೆಗಿನ ವಿವೇಚನೆಯಿಂದ ಇವರ ಕಾಲಕ್ರಮವನ್ನು ಈ ಕೆಳಗಿನಂತೆ ಗುರುತಿಸಬಹುದು :-

೧ : ಕ್ರಿ.ಶ.೧೦೫೫ ಸುಮಾರಿಗೆ ಕಂದಗಲ್ಲಿನಲ್ಲಿ ಜನನವಾಗಿರಬೇಕು.

೨ : ಕ್ರಿ.ಶ. ೧೦೭೫ ರಸುಮಾರಿಗೆ ಜಡೆಯ ಶಂಕರನಿಂದ ಲಿಂಗ ದೀಕ್ಷೆ - ಉರಿಗಣ್ಣು ಪ್ರಾಪ್ತಿಯಾಗಿರಬಹುದು.

೩ : ಕ್ರಿ.ಶ. ೧೦೮೨ ರ ಸುಮಾರಿಗೆ ತವನಿಧಿ ಬಯಲು ಮಾಡಿರಬೇಕು.

೪ : ಕ್ರಿ.ಶ. ೧೦೮೩ ರಲ್ಲಿ ವಿಷ್ಣು ಪ್ರತಿಮೆ ದಹನ ಮಾಡಿರಬೇಕು.

೫ : ಕ್ರಿ.ಶ. ೧೦೮೩ ರಿಂದ ೧೧೦೦ ರವರೆಗೂ ಅನೇಕ ಊರುಗಳ ಸಂಚಾರ - ಧಾರ್ಮಿಕ ಸಂಘಟನೆ ಕಾರ್ಯ ಕೈಗೊಂಡಿರಬೇಕು.

೬ : ಕ್ರಿ.ಶ. ೧೧೦೦ ರ ಸುಮಾರಿನಲ್ಲಿ ನವಿಲೆಗೆ ಆಗಮನ - ಜ್ಞಾನದಾಸೋಹ ನೀಡಿರಬೇಕು.

೭: ಕ್ರಿ.ಶ. ೧೧೩೦ ರ ಸುಮಾರಿಗೆ ಢಕ್ಕೆಯ ಮಾರಯ್ಯರ ಸಂಪರ್ಕ- ಅಹಂಕಾರ ಕಳೆದುಕೊಂಡಿರಬೇಕು.

೮ : ಕ್ರಿ.ಶ. ೧೧೫೩ ರ ಸುಮಾರಿನಲ್ಲಿ ಕಲ್ಯಾಣಕ್ಕೆ ಹೋಗಿರಬೇಕು.

೯ : ಕ್ರಿ.ಶ. ೧೧೫೫ ರಲ್ಲಿ ಪುನಃ ನವಿಲೆಗೆ ಬಂದೋ ಅಥವಾ ಕಲ್ಯಾಣದಲ್ಲಿಯೇ ಐಕ್ಯನಾಗಿರಬೇಕು.

ಸ್ಥಳ : -

ಇವರ ಊರು ಕಂದಶಿಲೆಯೆಂಬುದು ಹರಿಹರನಿಂದ ಮೊದಲ್ಗೊಂಡು ಅನೇಕರು ಹೇಳಿರುವಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಆನಂತ ಆತ ನವಿಲೆಗೆ ಬಂದು ಜಡೆಯ ಶಂಕರನ ಭಕ್ತನಾಗಿ ಮುಂದೆ ಧರ್ಮ ಸಂಘಟನೆಗಾಗಿ ಅನೇಕ ಊರುಗಳನ್ನು ಸುತ್ತಿ ಧರ್ಮ ಜಾಗೃತಿ ಮಾಡಿ ತನ್ನ ಅಂತಿಮ ದಿನಗಳನ್ನು ಕಲ್ಯಾಣದಲ್ಲಿ ಕಳೆದಿರಬಹುದಾಗಿದೆ. ಪ್ರಸ್ತುತ ನವಿಲೆ ಲಿಂಗಸೂಗೂರು ತಾಲೂಕಿನ ಸಣ್ಣ ಗ್ರಾಮವಾಗಿದ್ದು ಹಳೆಯ ಊರು ಹಾಗೂ ದೇವಾಲಯ ಜಲಾವೃತವಾಗಿದೆ. ಆತನ ಕಂದಗಲ್ಲು ನವಿಲೆಗೆ ಬಹು ಹತ್ತಿರದಲ್ಲಿಯೇ ಇದೆ ಎಂಬುದನ್ನು ಗಮನಿಸಬೇಕು .

ಕೃತಿ :-

ಇವರು ಬರೆದ ಕೇವಲ ಐದು ವಚನಗಳು ನಮಗೆ ಇಂದು ಕಂಡುಬರುತ್ತವೆ. ಅಲ್ಲಿಯ ಅಂಕಿತ 'ನಿಜಗುರು ಶಂಕರ ದೇವಾ' ಎಂದಾಗಿದೆ. ಇವರ ವಚನ ಅಂಕಿತದ ಬಗ್ಗೆ ಮೊದಲಬಾರಿಗೆ ಹಳಕಟ್ಟಿಯವರು ಉಲ್ಲೇಖಿಸಿದ್ದಾರೆ. ೧

'ನಿಜಗುರು ಶಂಕರ ದೇವ' ಎಂಬುದು ಈತನ ಅಂಕಿತವೆಂಬುದಕ್ಕೆ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರವೇ ಆಧಾರವಾಗಿದೆ. ಎಂಬುದಾಗಿ ಶಾಂತರಸರು ಹೇಳುತ್ತಾರೆ. ೨ ಹರಿಹರಿನ ರಗಳೆಯನ್ನು ಸೂಕ್ಷ್ಮವಾಗಿ ನೋಡಿದಾಗ ಈತ ವಚನಗಳ ಜೊತೆಗೆ ಇತರ ರೀತಿಯ ರಚನೆಗಳನ್ನು ಮಾಡಿದ್ದಾಗಿ ಕಂಡು ಬರುತ್ತದೆ. ರಗಳೆಯಲ್ಲಿ ಹರಿಹರ ಈತನನ್ನು ' ಸಾಹಿತ್ಯ ಭೂಷಣನೆನಿಪ ಶಂಕರ ದಾಸಿಮಯ್ಯಂ'೩ ಎಂದು ಕರೆದದ್ದನ್ನು ನೋಡಿದರೆ ಇದು ಸತ್ಯವೆನಿಸುತ್ತದೆ.

ಕೊಂಡಗುಳಿ ಕೇಶಿರಾಜನಿಗಿಂತಲೂ ಹಿರಿಯರಾದ ಇವರು ಸ್ತುತಿ ಪರವಾದ ಗೀತೆಗಳನ್ನು ರಚಿಸಿದ್ದರ ಸಾಧ್ಯತೆ ಇದೆ. ಢಕ್ಕೆಯ ಮಾರಯ್ಯರ ನಂತರ ವಚನ ರಚಿಸಿದವರಲ್ಲಿ ಇವರೇ ಮೊದಲಿಗರು. ಹಾಗಾಗಿ ಇವರನ್ನು ಆದ್ಯ ವಚನಕಾರರೆನ್ನಬಹುದಾಗಿದೆ. ರಗಳೆಯಲ್ಲಿ ಸ್ತುತಿ ಪರವಾದ ಕೆಲವು ಸಾಲುಗಳನ್ನು ಗಮನಿಸಿದರೆ ಇವರ ಹೊಸ ರಚನೆಗಳು ಹಾಗೂ ಅಂಕಿತದ ಬಗ್ಗೆ ನಮಗೆ ಕೆಲವೊಂದು ಹೊಸ ವಿಚಾರಗಳನ್ನು ಕಂಡುಕೊಳ್ಳಬಹುದಾಗಿದೆ.

---

೧ : ಫ.ಗು. ಹಳಕಟ್ಟಿ-ಶಿ.ಚ. ಭಾಗ-೩ ಪುಟ ೧೨೩

೨ : ಶಾಂತರಸ -ಬ.ಪೂ.ಶ.

೩ : ಸಂ: ಡಾ: ಎಂ.ಎಂ. ಕಲಬುರ್ಗಿ -ಹ.ರ.ಸ್ಥಲ ೨ ಪುಟ ೨೮೦

ಸ್ತುತಿ ಪರವಾದ ಕೆಲವು ಸಾಲುಗಳು :

ಎನಗೆ ವಾರಣಾಸಿಯು ಮರನದಿಯುಂ ನೀನೆ

ಎನಗೆ ದಿವ್ಯ ಕ್ಷೇತ್ರ ಮಂತ್ರ ತಂತ್ರಂ ನೀನೆ

ಎನಗೆ ನಿತ್ಯಾವಾಸಮುಂ ದೇಶಮುಂ ನೀನೆ

ಎನಗೆ ಪುಣ್ಯ ಪ್ರಕರಮುಂ ಸುಕರಮುಂ ನೀನೆ

ಎನಗೆ ನಿರ್ಮಳ ಕರುಣಮುಂ ಹರಣಮುಂ ನೀನೆ

ಎನಗೆ ನಿಷ್ಕಳ ರಾಗಮುಂ ಭೋಗಮುಂ ನೀನೆ

ಎನಗೆ ನಿರ್ಮಳ ಸ್ಥಾನಮುಂ ಮಾನಮುಂ ನೀನೆ

ಎನಗೆ ಪರಮಜ್ಞಾನ ಧ್ಯಾನಮಂತ್ರಂ ನೀನೆ

ಎನಗೆ ಮಿತ್ರನಂದ ಕರ್ತನೆನಿಪಂ ನೀನೆ

ಎನಗೆ ನಿಶ್ಚಲ ನಿತ್ಯಮುಂ ಸತ್ಯಮುಂ ನೀನೆ೧

ಈ ಸಾಲುಗಳನ್ನು ಗಮನಿಸಿದಾಗಇವು ಮೂಲತಃ ಜಡೆಯ ಶಂಕರನನ್ನು ಕುರಿತ ಸ್ತುತಿ ಪರ ಗೀತೆಗಳಾಗಿವೆ ಎನಿಸುತ್ತದೆ. ಸ್ವತಃ ಹರಿಹರನೇ ಸ್ತುತಿ ಎಂದು ಕರೆದಿದ್ದಾನೆ. ಇವರು ಶ್ರೇಷ್ಠ ವಿದ್ವಾಂಸರೆಂಬುದಕ್ಕೆ ಶಂಕರ ದಾಸಿಮಯ್ಯರ ಪುರಾಣವೇ ಉತ್ತಮ ನಿದರ್ಶನವಾಗಿದೆ.

'ಶಂಕರ ದಾಸಿಮಯ್ಯನು ಪೂರ್ವಾಶ್ರಮದಲ್ಲಿ ಒಬ್ಬ ಶೈವ ಬ್ರಾಹ್ಮಣನು. ವೇದ-ಆಗಮ-ಶಾಸ್ತ್ರ-ಪುರಾಣಾದಿಗಳಲ್ಲಿ ಬಲ್ಲಿದ. ಸದ್ಧರ್ಮಿ, ಸದರ್ಥದಲ್ಲಿ ಪುರುಷಾರ್ಥ ಸಾಧಕ ಅವನನ್ನು ಕವಿಯು

ವೇದ ಪಾರಂಗತ (೧/೪೮)

ನಿಗಮಶಾಸ್ತ್ರಾಧಿ ಸಕಲ ಪುರಾಣ ಕೋವಿದ (೧/೪೮)

ಆದಿ ಮಧ್ಯಾಂತ ತ್ರಿಕಾಲ ಜ್ಞಾನಿ (೧/೪೮)

ಪರಮಾತ್ಮ ಬೋಧಕ (೧/೪೮)

ಪ್ರಣವಾಂಗ ಪಂಚಕ ಸಾಧಕ (೧/೪೮)

ಅಂಡಲೆವ ಮಾಯಾ ಪ್ರಬಲವೇದಂಡ ಕೇಸರಿ (೨/೧೪)

ಸತ್ಯ ಸಾರ ಕರಂಡ (೨/೧೪)

ಎಂಬ ವಿಶೇಷಣಗಳಿಂದ ಬಣ್ಣಿಸಿದುದು ಕೇವಲ ಕಾವ್ಯನಾಯಕನನ್ನು ಹೊಗಳುವ ಪರಿ ಎನಿಸದು ಅದು ಶಂಕರ ದಾಸಿಮಯ್ಯನ ವಾಸ್ತವ ಸಂಸ್ಕಾರ ಅಥವಾ ಮನಸ್ಥಿತಿಯ ಚಿತ್ರಣದಂತಿದೆ.'೨ ಜಾಲವಾದಿಯವರ ಈ ಉಲ್ಲೇಖಗಳನ್ನು ಗಮನಿಸಿದರೆ ನಿಜಕ್ಕೂ ಇವರು ವಚನಕಾರರ ಜೊತೆಗೆ ದೊಡ್ಡ ವಿದ್ವಾಂಸರೆಂಬುದು ಸ್ಪಷ್ಟವಾಗುತ್ತದೆ. ಇವರ ಸ್ತುತಿ ಪರ ಗೀತೆಗಳು ಹರಿಹರ ಮೊದಲಾದ ಕವಿಗಳ ಮೇಲೆ ಪ್ರಭಾವ ಬೀರಿ ಅವರು ತಮ್ಮ ಕೃತಿ ರಚನೆಯ ಸಂದರ್ಭದಲ್ಲಿ ಬಳಸಿಕೊಂಡಿರಬೇಕೆನಿಸುತ್ತದೆ.

ವಚನಾಂಕಿತ :

ಸದ್ಯ ಇವರ ಅಂಕಿತ 'ನಿಜಗುರು ಶಂಕರ ದೇವ' ಎಂದು ಹೇಳಲಾಗುತ್ತಿದ್ದು ಇದು ಇವರದೇ ಎಂಬ ಅನುಮಾನ ಬರುತ್ತದೆ. ಹರಿಹರನ ರಗಳೆ ನೋಡಿದಾಗ ಈತನ ಅಂಕಿತ ಬಹುಶಃ 'ಜೆಡೆಯ ಶಂಕರ ದೇವ' ವಾಗಿರಬಹುದೆ ಎನಿಸುತ್ತದೆ. ಇವರ ವಚನಗಳನ್ನೇ ಹರಿಹರ ಬಳಸಿಕೊಂಡಿರಬೇಕು ಎನಿಸುತ್ತದೆ. ಮುಂದೆ ಬಂದ ಕೃತಿ ಕಾರರು ಇವರ ಅಂಕಿತ ವನ್ನು ನಿಜಗುರು ಶಂಕರ ದೇವ ಎಂದು ಬದಲಿಸಿರುವಂತೆ ಕಂಡು ಬರುತ್ತದೆ.

೧: ಸಂ: ಡಾ: ಎಂ.ಎಂ. ಕಲಬುರ್ಗಿ - ಹ.ರ.ಸ್ಥಲ೧ ಸಾಲು ೫೫-೬೪ ಪುಟ ೨೭೭

೨: ಡಾ: ಅನ್ನಪೂರ್ಣ ಜಾಲವಾದಿ - ಶಂ.ದಾ.ಪು.ಅ. ಪುಟ ೨೪೩

ಹರಿಹರನ ರಗಳೆಯಲ್ಲಿ ಬರುವ ಈ ಕೆಳಗಿನ ಸಾಲುಗಳು ಇವು ಮೂಲತಃ ಇವರ ವಚನಗಳು ಎಂಬುದರ ಬಗ್ಗೆ ಅನುಮಾನ ಬರುತ್ತದೆ.

ಅಭವ ಕರುಣಿಸಿತಕ್ಕೆ ಕುರುಹು ಪೇಳ್ವುದು ದೇವ

ವಿಭುವೆ ಭಿನ್ನೈಸಿದೆಂ ಸಲಿಸವೇಳ್ವುದು ದೇವ

ದೇವ ಕರುಣಿಸಿತೆಕ್ಕ ನೊಸಲ ಕಣ್ಣಂ ಕೊಟ್ಟು

ದೇವ ಕರತಳ ಏನೆನ್ನುತ್ತ ಮಾಂಗದೊಳಿಟ್ಟು

ಅಪ್ರತಿಮ ಗುರುವೆ ಸರುತರುವೇ ಕರುಣಿಪುದೆನಗೆ

ಸುಪ್ರಸಿದ್ಧ ಪ್ರಭುವೆ ವಿಭುವೆ ಕರುಣಿಪುದೆನಗೆ

ಸಕಲ ದೇವಾಭರಣನಿಕರ ಕರುಣಿಪುದೆನಗೆ

ಮೃಡಭರ್ಗ ಭೀಮ ಭಾಳಾಕ್ಷ ಕರುಣಿಪುದೆನಗೆ

ಜೆಡೆಯ ಶಂಕರ ದೇವ ಗುರುವೆ ಕರುಣಿಪುದೆನಗೆ ೧

ಈ ಸಾಲುಗಳ ನಂತರ ಹರಿಹರ 'ಏನೆ ಕೇಳ್ದು' ೨ ಎಂದು ಪ್ರಯೋಗಿಸಿರುವುದನ್ನು ನೋಡಿದರೆ ಇದು ವಚನವಾಗಿರುವ ಸಾಧ್ಯತೆ ಇದ್ದು ಆರಂಭಿಕ ಹಂತವನ್ನು ಸೂಚಿಸುತ್ತದೆ.

ದೇವ ಶಂಕರ ಚಂದ್ರಧರ ಕೃಪಾವಾರ್ಧಿಯೆ

ದೇವ ಗಂಗಾತರಂಗಾವೃತ ಕಪರ್ದಿಯೆ

ದೇವ ಸಂಸಾರ ವಾರಾಸಿ ವಡ ಬಾನಲಾ

ದೇವ ಮಾಯಾ ಬೃಹದರಣ್ಯದ ವಾನಲಾ

ದೇವ ಹರಿಯ ಜರರಿಯದಾದ್ಯಂತರ ಹಿತನೆ

ದೇವ ಪೂಜಿಸುವ ಸದ್ಭಕ್ತ ಸಂಪನ್ನನೆ

ದೇವ ನಂಬಿದ ಸತ್ಯ ಶರಣ ಕರುಣಾಕರ

ದೇವ ಎಡೆ ಗುಡುವುದೆನಗತಿ ಜಡೆಯಶಂಕರಾ

ಭಕ್ತರಂ ಗರ್ಭದೊಳಗಿರಿಸೆಲೆ ಕೃಪಾಕರ

ಭಕ್ತರಂ ಕರುಣದಿಂ ರಕ್ಷಿಸು ದಯಾಕರ ೩

ಈ ಸಾಲುಗಳ ನಂತರ ಹರಿಹರ ' ಎನುತಂ ಪುಳುಕಿಸುತೆ ' ೪ ಎಂದಿರುವುದನ್ನು ಗಮನಿಸಿದರೆ ಇದು ವಚನವಾಗಿದೆಯೆಂದು ಊಹಿಸಬಹುದಾಗಿದೆ. ಹರಿಹರನ ಈ ಸಾಲುಗಳನ್ನು ಗಮನಿಸಿದರೆ ಜೆಡೆಯ ಶಂಕರ ದೇವ (ಜಡೆಯ ಶಂಕರ) ಎಂಬುದು ನಮ್ಮ ಗಮನಸೆಳೆದು ಇದೂವೆ ಇವರ ಅಂಕಿತವೆಂದು ತೋರುತ್ತದೆ. ಇಲ್ಲಿಯ ಸಾಲುಗಳು ಹಾಗೂ ಆತನ ಐದು ವಚನಗಳ ಭಾವ - ಶಿಲ್ಪ ಗಮನಿಸಿದರೆ ಇವರೇ ಆದ್ಯ ವಚನಕಾರರೆಂದು ಸ್ಪಷ್ಟವಾಗುತ್ತದೆ. ಇವರ ವಚನಗಳು ಬಸವಣ್ಣರ ಮೇಲೂ ಪ್ರಭಾವ ವಾಗಿದ್ದವೆಂಬುದಕ್ಕೆ 'ಅರಿದಡೆ ಶರಣ ಮರೆದಡೆ ಮಾನವ' ೫ ಎಂಬುದು ಇವರ ವಚನದ ಸಾಲಾಗಿದ್ದು ಬಸವಣ್ಣನವರು ಅದನ್ನು ಉಲ್ಲೇಖಿಸಿದ್ದಾರೆ. ಈ ರೀತಿ ಇಂತಹ ಅನೇಕ ಅಂಶಗಳಿಂದ ಇವರು ಕನ್ನಡ ಆದ್ಯವಚನಕಾರರೆಂದು ಹೇಳಬಹುದಾಗಿದೆ.

---

೧ : ಸಂ: ಡಾ: ಎಂ.ಎಂ. ಕಲಬುರ್ಗಿ - ಹ.ರ.ಸ್ಥಲ ೧ - ಸಾಲು ೧೦೧ - ೧೧೦ ಪುಟ ೨೭೮

೨ : ಅದೇ : ಸಾಲು ೧೧೧

೩ : ಅದೇ : ಸ್ಥಲ ೩ - ಸಾಲು ೩೦೯ - ೩೧೮ ಪುಟ ೨೮೭

೪ : ಅದೇ : ಸಾಲು ೩೧೯

೫ : ಸಂ: ಡಾ: ಬಿ.ಆರ್. ಹಿರೇಮಠ - ಸ.ವ.ಸಂ. - ೯ ವಚನ ೨ ಪುಟ ೫೪

ವ್ಯಕ್ತಿತ್ವ : -

ಹುಟ್ಟಿನಿಂದ ಈತ ಶೈವ ಬ್ರಾಹ್ಮಣನಾದರೂ ಮುಂದೆ ಶುದ್ಧ ಶಿವನ ಭಕ್ತನಾಗಿ ವೈದಿಕಶಾಹಿಯನ್ನು ವಿರೋಧಿಸಿ ಧರ್ಮಸಂಘಟನೆಗೆ ತೊಡಗಿದ್ದು ಕಂಡು ಬರುತ್ತದೆ. ವಿದ್ವಾಂಸನಾಗಿದ್ದರೂ ಅದನ್ನು ಹೊಟ್ಟೆ ತುಂಬಿಸಿ ಕೊಳ್ಳುವ ಸಾಧನ ಮಾಡಿಕೊಳ್ಳದೇ ಸೂಜಿ ಕಾಯಕವನ್ನು (ಬಟ್ಟೆ ಹೊಲಿಯುವುದು) ಕೈಗೊಂಡು ಆದಿಸೆಯಲ್ಲಿ ಪರಿಶುದ್ಧ ಬದುಕನ್ನು ಸಾಧಿಸಿದ ಮಹಾ ಶರಣ.

ಕ್ಷುದ್ರ ದೈವಗಳನ್ನು ವಿರೋಧಿಸಿ ವಾಸ್ತವಿಕ ಧರ್ಮದ ತಿರುಳನ್ನು ತಿಳಿಸಿಕೊಟ್ಟ ಮಹಾ ಧರ್ಮ ಸಂಘಟಕನೆನ್ನಬಹುದಾಗಿದೆ. ಜ್ಞಾನದಾಸೋಹವನ್ನು ನವಿಲೆಯಿಂದ ಉಜ್ಜಯನಿಯವರೆಗೂ ಹಬ್ಬಿಸಿ ಶರಣ ಧರ್ಮವನ್ನು ಮೊದಲಬಾರಿಗೆ ಹೊರನಾಡಿನಲ್ಲಿ ಬೆಳೆಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಈತನ ವ್ಯಕ್ತಿತ್ವದ ಪ್ರಭಾವ ಎಷ್ಟರ ಮಟ್ಟಿಗೆ ಆಗಿತ್ತೆಂಬುದಕ್ಕೆ ಸಮಕಾಲೀನ ಕಲ್ಯಾಣ ಶರಣರ ವಚನಗಳೇ ಪ್ರಮುಖ ನಿದರ್ಶನಗಳಾಗಿವೆ.

ಹಾವಿನಾಳ ಕಲ್ಲಯ್ಯನು 'ಎನ್ನ ಕಕ್ಷೆಯಲ್ಲಿ ಸ್ವಾಯತವಾದನಯ್ಯ ಶಂಕರ ದಾಸಿಮಯ್ಯನು' ಎಂದರೆ೧

ಮಡಿವಾಳ ಮಾಚಿದೇವ ಐಕ್ಯದ ವಿಚಾರ ತಿಳಿಸುವಾಗ೨ ಆಯ್ದಕ್ಕಿ ಲಕ್ಕಮ್ಮ ಪ್ರಸಾದ ಗುಣ ಮಹತ್ವ ತಿಳಿಸುವಾಗ ೩ ಉರಿಲಿಂಗ ಪೆದ್ದಿ ಜಂಗಮಸ್ಥಲ ಮಹತ್ವ ತಿಳಿಸುವಾಗ೪ ಇವರನ್ನು ಸ್ಮರಿಸುತ್ತಾರೆ.

ಚೆನ್ನಬಸವಣ್ಣನಂತೂ ಇವರ ಪವಾಡವನ್ನು ಪ್ರಮುಖವಾಗಿ ವಚನದಲ್ಲಿ ಉಲ್ಲೇಖಿಸಿದ್ದು ಚಾರಿತ್ರಿಕ ಸಂಗತಿಗೆ ಪುಷ್ಟಿ ಕೊಡುತ್ತದೆ.

'ನಮ್ಮ ಜಂಗಮ ಲಿಂಗವ ದೈವವೆಂದಾರಾಧಿಸಿ

ಶಂಕರ ದಾಸಿಮಯ್ಯಗಳು ಸರ್ವಭೂತಂಗಳ ಕೈಯಲ್ಲಿ

ಕೊಟ್ಟಣವ ಕುಟ್ಟಿಸಲಿಲ್ಲವೆ?'೫

ಸೊಡ್ಡಳ ಬಾಚರಸರ ವಚನವಂತೂ ಇವರ ಚಾರಿತ್ರಿಕ ವ್ಯಕ್ತಿತ್ವದ ಬಗ್ಗೆ ಬಹು ಮುಖ್ಯವಾದ ಮಾಹಿತಿಯನ್ನು ನೀಡುತ್ತದೆ.

'ಘುಡುಘುಡುಸಿ ಅನ್ನದೈವಂಗಳು

ಕೊಡೆ ಹಿಡಿಸಿದ ಪಂಜೆಯ ಮೈಲಿಗೆಯನು

ಅಡಗಿಸಿದ ಭೋ ದೈವಂಗಳ ದರ್ಪವನು

ಹಿಡಿಸಿದ ಭೋ ಮುದನೂರ ತವನಿಧಿ

ಉರಿಗಣ್ಣ ಬಿಟ್ಟೊಮ್ಮೆ ಹಿರಿಯ ಪ್ರತಿಮೆಯನೊಡೆದ

ಮನ್ನಣೆಯ ಮಾಡದೆಮಾರಿಯ ಕೈಯ ಮೊರಡಿಯ ಧಾನ್ಯಗಳ ಮಿಡಿಸಿದನು

ಓಂ ನಮಃ ಶಿವಾಯ ಶಂಕರ ದಾಸ ಪಚಂವದನ ಸೊಡ್ಡಳಾ'೬

ಈ ವಚನವೇ ಮುಂದೆ ಬಂದ ಹರಿಹರಾದಿ ಕವಿಗಳಿಗೆ ಸ್ಫೂರ್ತಿಯಾಗಿದೆನಿಸುತ್ತದೆ. ಆನಂತರ ಬಂದ ಅನೇಕ ಶರಣರು ಇವರನ್ನು ಸ್ಮರಿಸಿದ್ದಾರೆ. ಅಮುಗಿದೇವನು 'ಶಂಕರ ದಾಸಿಮಯ್ಯ ...... ಮೊದಲಾದ ಶಿವಗಂಣಗಳ ಪರಮ ಪ್ರಸಾದ ಕೊಂಡು ಬದುಕಿದೆನು ಕಾಣಾ೭ ಎನ್ನುತ್ತಾರೆ.

---

೧ : ಸಂ : ಡಾ : ಬಿ.ಆರ್.ಹಿರೇಮಠ-ಸ.ವ.ಸಂ. -೯ ವಚನ ೩೯ ಪುಟ ೩೭೫

೨ : ಅದೇ : ವಚನ ೬೫೬ ಪುಟ ೨೫೦

೩ : ಸಂ : ಡಾ : ವೀರಣ್ಣ ರಾಜೂರು - ಸ.ವ.ಸಂ. -೫ ವಚನ ೧೭, ಪುಟ ೨೦೨

೪ : ಸಂ : ಡಾ : ಎಂ.ಎಂ. ಕಲಬುರ್ಗಿ - ಸ.ವ.ಸಂ. -೬ ವಚನ ೪೦ ಪುಟ ೪೨೯

೫ : ಸಂ : ಡಾ : ಬಿ.ವಿ. ಮಲ್ಲಾಪುರ - ಸ.ವ.ಸಂ. -೩ ವಚನ ೬೦೫, ಪುಟ ೫೨೪

೬ : ಸಂ : ಡಾ : ಬಿ.ಆರ್. ಹಿರೇಮಠ-ಸ.ವ.ಸಂ. -೯ ವಚನ ೭೬೩, ಪುಟ ೨೫೧

೭ : ಸಂ : ಡಾ : ಎಂ.ಎಂ. ಕಲಬುರ್ಗಿ-ಸ.ವ.ಸಂ. -೬ ಪುಟ ೧೧೦

೧೨ ನೇ ಶತಕದ ಕುಷ್ಟಗಿ ಕರಿ ಬಸವೇಶ್ವರರು ತಮ್ಮ ವಚನದಲ್ಲಿ ಇವರನ್ನು ಸ್ಮರಿಸಿದ್ದಾರೆ. ೧ ಇದಲ್ಲದೇ ಆನಂತರದ ಶಿವ ಕವಿಗಳು ಇವರನ್ನು, ಇವರ ಲೀಲೆಗಳನ್ನು ಕುರಿತು ತಮ್ಮ ಕೃತಿಗಳಲ್ಲಿ ಉಲ್ಲೇಖಿಸಿದ್ದಾರೆ.

ಕುಮಾರ ಪದ್ಮಸರ ತನ್ನ ಕೃತಿಯಲ್ಲಿ ಇವರ ಜೀವನದ ಪ್ರಮುಖ ಘಟನೆಗಳನ್ನು ಸೂಚಿಸಿದರೆ ೨ ಭೀಮ ಕವಿ ಜೇಡರ ದಾಸಿಮಯ್ಯನ ಸಂದರ್ಭದಲ್ಲಿ ಪ್ರಸ್ತಾಪಿಸಿದರೆ ೩ ಲಕ್ಕಣ್ಣ ದಂಡೇಶ ಇವರ ಕಾಯಕ, ವರ, ಉರಿಗಣ್ಣು, ತವನಿಧಿ ಗಳ ಬಗ್ಗೆ ಚಿತ್ರಿಸುತ್ತಾರೆ. ೪ ಇವರ ವ್ಯಕ್ತಿತ್ವವನ್ನು ಗುಬ್ಬಿ ಮಲ್ಲಣಾರ್ಯ ೫ ಕಿಕ್ಕೇರಿ ಆರಾಧ್ಯನಂಜುಡ ೬ ವಿರಕ್ತ ತೋಂಟದಾರ್ಯ ೭ ಅದೃಶ್ಯ ಕವಿ ೮ ಶಾಂತಲಿಂಗ ದೇಶಿಕ ೯ ಸಿದ್ಧನಂಜೇಶ ೧೦ ಷಡಕ್ಷರ ದೇವ ೧೧ ಚೆನ್ನಪ್ಪ ಕವಿ ೧೨ ಶಾನಭೋಗ ಲಿಂಗಪ್ಪ ೧೩ ಮುಂತಾದವರು ಕೆಲವು ಘಟನೆಗಳನ್ನಾಧರಿಸಿ ಚಿತ್ರಿಸಿದರೆ ಉತ್ತರ ದೇಶದ ಬಸವಲಿಂಗ ೧೪ ಇವರ ಸಮಗ್ರ ಘಟನೆಗಳನ್ನು ಚಿತ್ರಸುತ್ತಾನೆ.

ಇವೆಲ್ಲವುಗಳಿಗಿಂತ ಮುಖ್ಯವಾಗಿ ಇವರನ್ನೇ ಕೃತಿ ನಾಯಕರನ್ನಾಗಿರಿಸಿಕೊಂಡು ಪಂಡಿತ ಮಲ್ಲಿಕಾರ್ಜುನ ಕವಿಯು ಹದಿನಾರು ಅಧ್ಯಾಯಗಳಲ್ಲಿ ಶಂಕರ ದಾಸಿಮಯ್ಯ ಪುರಾಣವನ್ನು ಭಾಮಿನ ಷಟ್ಪದಿಯಲ್ಲಿ ರಚಿಸಿ ಆತನ ಭವ್ಯ ವ್ಯಕ್ತಿತ್ವನ್ನು ನಮಗೆ ಚಿತ್ರಿಸಿಕೊಡುತ್ತಾರೆ. ೧೫

ಒಟ್ಟಾರೆಯಾಗಿ ಸಮಕಾಲೀನ ಹಾಗೂ ಆನಂತರದ ಶರಣರ ಮೇಲೆ ಅಪಾರ ಪ್ರಭಾವವನ್ನು ಬೀರಿದ ವ್ಯಕ್ತಿ ಇವರಾಗಿದ್ದಾರೆ.

---

೧ : ಸಂ : ಡಾ : ವೀರಣ್ಣ ರಾಜೂರು - ಸ.ವ.ಸಂ. -೧೦ ವಚನ ೯೪, ಪುಟ ೨೯೬

೨ : ಸಂ : ಎಸ್.ಬಸಪ್ಪ - ಸಾ.ಚ. ಸಂಧಿ ೯ ಪುಟ ೩೬

೩ : ಸಂ : ಡಾ: ಆರ್.ಸಿ. ಹಿರೇಮಠ - ಬ.ಪು. ಸಂಧಿ ೨೨ ಪದ್ಯ ೬೯

೪ : ಸಂ : ಎಚ್.ದೇವಿರಪ್ಪ ಮತ್ತು ಆರ್.ರಾಚಪ್ಪ - ಶಿ.ತ.ಚಿಂ. ಸಂಧಿ ೩೨ ಪದ್ಯ ೧೯-೨೦

೫ : ಸಂ : ಡಾ : ಆರ್.ಸಿ. ಹಿರೇಮಠ -ಗು.ವೀ.ಮ. ಕಾಂಡ ೮ ಸಂಧಿ ೨ ಪದ್ಯ ೩೨

೬ : ಸಂ : ಶ್ರೀ ಬಸವ ಸ್ವಾಮಿಗಳು -ಕಿ.ನ.ಭೈ.ಕಾ. ಸಂಧಿ ೨ ಪದ್ಯ ೧೮೯

೭ : ಸಂ : ಎಸ್.ಎಸ್.ಭೂಸನೂರ ಮಠ - ತೋಂ.ಸಿ.ಪು.- ಸಂಧಿ ೧೬ ಪದ್ಯ ೧೧-೨೩

೮ : ಸಂ : ಸಂ.ಶಿ. ಭೂಸನೂರ ಮಠ -ಅ.ಪ್ರೌ.ಕಾ.ಸಂಧಿ ೬ ಪದ್ಯ ೪೦-೬೯

೯ : ಸಂ : ಡಾ : ಆರ್.ಸಿ. ಹಿರೇಮಠ ಮತ್ತು ಡಾ : ಎಂ.ಎಸ್. ಸುಂಕಾಪುರ -ಶಾ.ಭೈ.ಕಾ.ಕ.ಸೂ. ಭಾಗ ೧ ಸಂಧಿ ೧ ಕಥೆ ೧೨೫,೧೯೬ ಪುಟ ೨೪೪-೨೪೮

೧೦ : ಸಂ : ಶಿ ಭೂಸನೂರ ಮಠ -ಸಿ. ಗು.ಚ. ಸಂಧಿ ೮ ಪದ್ಯ ೫೬ ರಿಂದ ೬೧ ಪುಟ ೧೫೫ -೧೫೬

೧೧ : ಸಂ : ಡಾ : ಆರ್.ಶಿ. ಹಿರೇಮಠ -ಬ.ವಿ. ಸಂಧಿ ೧೩, ಪದ್ಯ ೨೫,೬೦,೬೧ ಪುಟ ೫೪೧,೧೨

೧೨ : ಸಂ: ಶ್ರೀ ಶಿವಬಸವ ಸ್ವಾಮಿಗಳು -ಶ.ಲೀ. ಸಂಧಿ ೧೩, ಪದ್ಯ ೧ -೧೬

೧೩ : ಸತ್ಯ ಶುದ್ಧ ಕಾಯಕ ಸಂಪುಟ-೨, ಸಂಚಿಕೆ ೫ ಮತ್ತು ೬

೧೪ : ಸಂ : ಎಸ್.ಉಮಾಪತಿ -ಬ.ಕ.ಸಾ.ಪುಟ ೪೨,೪೩, ೧೨೨,೧೨೩

೧೫ : ಸಂ : ವ್ಹಿ.ಬಿ. ಹಾಲಬಾವಿ-ಹಾ.ಸಂ.ಶಂ.ಪು. ವಿವರಗಳಿಗೆ ಗಮನಿಸಿರಿ.

೬) ಶಿವದಾಸಿ

ಇವರು ಶಂಕರ ದಾಸಿಮಯ್ಯರ ಪತ್ನಿ ಎಂಬುದು ನಮಗೆ ಹರಿಹರನ ರಗಳೆಯಿಂದ ತಿಳಿದು ಬರುತ್ತದೆ. ಹರಿಹರ ಶಂಕರ ದಾಸಿಮಯ್ಯರ ಜನನ ವೃತ್ತಾಂತ ಹೇಳುವಾಗ ಪತ್ನಿ ಉಮ್ಮವ್ವೆ ಎಂದು ಹೆಸರಿಸುತ್ತಾನೆ.೧ ಉತ್ತರ ದೇಶದ ಬಸವಲಿಂಗನು 'ಶಂಕರ ದಾಸಿಮಯ್ಯಗಳು ಕೈಲಾಸದಿಂದ ಬಂದು ಸ್ಕಂದಶಿಲೆ ಎಂಬ ಪುರದಲ್ಲಿ ಅವತರಿಸಿ ಬಳಿಕ ತಮ್ಮ ಸತಿ ದೇವದಾಸಿ ಸಹಿತ ನವಿಲೆ ಎಂಬ ಪುರದಲ್ಲಿದ್ದ ಶ್ರೀ ಜಡೆಯ ಶಂಕರಲಿಂಗದ ಸಮೀಪಕ್ಕೆ ಬಂದು ಇರುವಾಗ ....' ಎಂಬುದಾಗಿ ವರ್ಣಿಸುತ್ತಾನೆ. ಜೊತೆಗೆ ಶಿವನೆ ಜಂಗಮನಾಗಿ ಬಂದು ದೀಕ್ಷೆ ಮಾಡಿದನೆಂದು ಹೇಳುತ್ತಾನೆ.೨ ಶಿವದಾಸಿಯ ಉಲ್ಲೇಖವನ್ನು ಶಾಂತರಸರು ೩೯ ಜನ ಹೆಸರುಗಳನ್ನು ಪಟ್ಟಿಮಾಡುವಾಗ ತಿಳಿಸಿದ್ದಾರೆ. ೩

ಶಿವದಾಸಿಯ ಕುರಿತಾಗಿ ಇದಕ್ಕಿಂತ ಹೆಚ್ಚಿನ ಮಾಹಿತಿ ನಮಗೇನೂ ಕಂಡು ಬರುವುದಿಲ್ಲವಾದರೂ ಈ ದಿಸೆಯಲ್ಲಿ ಪಂಡಿತ ಮಲ್ಲಿಕಾರ್ಜುನ ಕವಿಯ ಪುರಾಣ ಮಾತ್ರ ಹಲವು ಸಂಗತಿಗಳನ್ನು ತಿಳಿಸುತ್ತದೆ. ಅಲ್ಲಿ ಬರುವ ವಿವರಗಳನ್ನು ಸಂಗ್ರಹಿಸಿ ಹೇಳುವುದಾದರೆ :-

ಶಿವದಾಸಿಯ ಪೂರ್ವಾಶ್ರಮದ ಹೆಸರು ದುಮ್ಮವ್ವೆ ಈಕೆ ಸಾಕ್ಷಾತ್ ಪಾರ್ವತಿ. ತಾನೇ ಶಪಿಸಿದ ಪತಿ ಶಿವನನ್ನು ಅನುಸರಿಸಿ ಭೂಲೋಕದಲ್ಲಿ ಅವರತರಿಸಿದವಳಾಗಿದ್ದಾಳೆ. ಈಕೆಯ ಗುಣವನ್ನು ಕುರಿತು ಕವಿ 'ಸತ್ಕುಲಜಾತೆ, ಪುಣ್ಯಾಂಗನೆ, ಪತಿವ್ರತೆ, ನೀತಿವಂತೆ, ವಿಶೇಷ ಸೌಂದರಿ, ಸಕಲ ಗುಣ ಭರಿತೆ, ದುರ್ಗುಣ ಭೀತೆ, ಧರ್ಮ ಚರಿತಾ ಖ್ಯಾತಿಮಯೆ, ದೇಶಿಕ ಜನಂಗಳ ಮಾತೆ' ಎಂಬುದಾಗಿ ಚಿತ್ರಿಸುತ್ತಾನೆ. ೪ ಗೋವಿಂದ ದೇವ - ದುಮ್ಮವ್ವೆಯರ ಕೌಂಟುಂಬಿಕ ಬದುಕು ಬಹು ಅನೋನ್ಯವಾದುದೆಂದು ಕವಿ ಹೇಳುತ್ತಾನೆ. ದುಮ್ಮವ್ವೆಯ ಬಗ್ಗೆ ಕವಿ ಬಹು ಸೋಗಸಾಗಿ ಆಕೆಯ ಘನತೆಯ ಬಗ್ಗೆ ಅಷ್ಟೇ ಗಂಭೀರವಾಗಿ ಹೇಳುತ್ತಾನೆ.

'ವೇದಘೋಷಣೆಗಾಮನೆಯೆಯಾ।

ಜ್ಞಾಧಿ ಶೋಭನೆಗಾಮನೆಯೆ ಕಾ।

ಲಾದರಣೆಗಾ ಮನೆಯೆ ಬಂದವರಿಷ್ಟಕಾಮನೆಯೆ।

ಆದಿಯೆನ್ವಯ ಕಾಮನೆಯೆ ಭ।

ಕ್ಯಾದಿ ದಾನಕ್ಕ ಮನೆಯೆ ಸೌ।

ಖ್ಯೋದಯಕ್ಕಿ ಮನೆಯೆನಿ ಸದರ್ ದಂಪತಿಗಳೊಲಿದು।೫

'ಗೋವಿಂದ ದೇವನು ಚತುರಾಶ್ರಮ ನಿಯಮದಂತೆ ದುಮ್ಮವ್ವೆಯನ್ನು ಬಿಟ್ಟು ಸನ್ಯಾಸ ಸ್ವೀಕರಿಸಲುದ್ಯುಕ್ತನಾದಾಗ ದುಮ್ಮವ್ವೆಯು ಸತಿಯ ಪಂಚವಿಧ ಸೇವೆ ಪತಿಗೆ ಮೀಸಲೆಂದು ಸತಿಯ ಪಂಚೇಂದ್ರಿಯಗಳು ಪತಿಗೆ ಅರ್ಪಿತವೆಂದೂ, ಪತಿವ್ರತೆಯ ಗುಣಧರ್ಮವನ್ನು ಸ್ಮರಿಸಿಕೊಳ್ಳುತ್ತಾಳೆ. ಅಲ್ಲದೆ

.... ನಿಮ್ಮದಿಕ।

ಶ್ರೀ ಪದಂಗಳ ಬಳಿ ವಿಡುದು ಬಹೆ।

ನಾಪೆರವಳೇ ನಿಮಗೆ ......। (ಸಂಧಿ ೨/೧೩) ಎಂದು ಕೈ ಮುಗಿದು ಕೇಳಿಕೊಳ್ಳುತ್ತಾಳೆ. ಮತ್ತು ಅವನೊಡನೆ ಕಾಶಿಗೆ ಹೊರಟಾಗ ನವಿಲೆಯಲ್ಲಿ ಏಳು ಬೆಳಗಾಯಿತು ಎಂದು ಎಚ್ಚರಿಸುತ್ತಾಳೆ. ಮನಗೆ ಬಂದ ಜಂಗಮನನ್ನು ಉಪಚರಿಸಿ ಗಂಡನಿಂದ ಲಿಂಗದೀಕ್ಷೆ, ಗುರುವಿನಿಂದ ಶಿವದಾಸಿ ಹೆಸರು ಪಡೆದು ಸತಿ - ಪತಿಗಳೊಂದಾಗಿ ಗುರುಲಿಂಗ ಜಂಗಮದಲ್ಲಿ ನಿಷ್ಠೆ ತೋರುತ್ತಾಳೆ. ಇಲ್ಲೆಲ್ಲ ದುಮ್ಮವ್ವೆಯು ಸತಿ ಜೀವನದ ಆದರ್ಶಗಳನ್ನು ಮೈಗೂಡಿಸಿ ಕೊಂಡ ಪಾತ್ರವಾಗಿ ಕಾಣುತ್ತಾಳೆ. '೬ ಎಂಬ ವಿವರಗಳನ್ನು ಸಮರ್ಥವಾಗಿ ಜಾಲವಾದಿ ಗುರುತಿಸಿದ್ದಾರೆ. 'ಹವಣೆ ಬಣ್ಣಿಪ ರಿಚ್ಚೆಯೂಟದ ತವನಿಧಿಯ ಪಡೆದಳು ಶಿವದಾಸಿ' ಎನ್ನುವಲ್ಲಿ ಈಕೆಯ ದಾಸೋಹಂ ಭಾವನೆ ಕಾಣಬಹುದಾಗಿದೆ.' ಒಟ್ಟಾರೆ ಕವಿ ಪ್ರಕಾರ ಈಕೆ ಆದರ್ಶ ಸತಿಯಾಗಿದ್ದಾಳೆ.

---

೧ : ಸಂ: ಡಾ: ಎಂ.ಎಂ. ಕಲಬುರ್ಗಿ - ಹ.ರ. ಸ್ಥಲ೧ ಸಾಲು೬ ಪುಟ ೨೭೭

೨ : ಎಸ್. ಉಮಾಪತಿ - ಬ.ಕ.ಸಾ. ಪುಟ ೪೨

೩ : ಶಾಂತರಸ - ಬ.ಪೂ.ಶ. ಪ್ರಸ್ತಾವನೆ ಪುಟ ೧೦ - ೧೧

೪ : ಸಂ: ವ್ಹಿ.ಬಿ. ಹಾಲಬಾವಿ - ಹಾ.ಸಂ.ಶಂ.ಪು. ಸಂಧಿ೧ ಪದ್ಯ ೪೯

೫ : ಅದೇ: ಸಂಧಿ೧ ಪದ್ಯ ೫೨

೬ : ಡಾ : ಅನ್ನಪೂರ್ಣ ಜಾಲವಾದಿ - ಶಂ.ದಾ.ಪು. ಅ. - ಪುಟ ೧೫೧ ರಿಂದ ೧೫೨

೭ : ಸಂ: ವ್ಹಿ.ಬಿ. ಹಾಲಬಾವಿ - ಹಾ.ಸಂ.ಶಂ.ಪು.ಸಂಧಿ೮ ಪದ್ಯ ೩೧ - ೩೨

ಎಸ್. ಶಿವಣ್ಣನವರು ಶ್ರೀ ಚೆನ್ನ ಬಸವ ಪಟ್ಟದ್ದೇವರು ಭಾಲ್ಕಿ ಇವರ ಶತಮಾನೋತ್ಸವದ ಸ್ಮರಣೆಯ ಕೃತಿ 'ಕಾಯಕ ಪರಿಣಾಮಿ' ಯಲ್ಲಿ " ವಚನಾಂಕಿತ ಮತ್ತು ವಚನಕಾರರು " ಶಿರ್ಷಿಕೆಯಡಿ ೩೬೧ ಜನರ ಪಟ್ಟಿ ಕೊಡುತ್ತಾರೆ. ಅದರಲ್ಲಿ ೨೯೭ ಕ್ರಮ ಸಂಖ್ಯೆ ' ಶಾಂತಮಲ್ಲ' ಅಂಕಿತದ ವಚನಕಾರ್ತಿಯ ಹೆಸರು ' ಉಮ್ಮವ್ವೆ' ಎಂದಿದೆ. ಆದರೆ ಆಕೆಯ ಕಾಲ , ವಚನಗಳ ಸಂಖ್ಯೆಯನ್ನು ಮಾತ್ರ ಗುರುತಿಸಿಲ್ಲ . ೧

ಬಹುಶಃ ಈ ಅಂಕಿತ ಶಿವದಾಸಿಗೆ ಸಂಬಂಧಿಸಿರಬಹುದೇ? ಎಂಬ ಸಂದೇಹ ವ್ಯಕ್ತವಾಗುತ್ತದೆ. ಶಂಕರ ದಾಸಿಮಯ್ಯ ಹಾಗೂ ಶಿವದಾಸಿಗೆ ದೀಕ್ಷೆ ನೀಡಿದ ಗುರು ಶಾಂತ ಮಲ್ಲನಾಗಿರಬಹುದೇ . ಏಕೆಂದರೆ ನವಿಲೆಯಲ್ಲಿ ಕಂಡು ಬರುವ ಶಾಸನಗಳನ್ನು ಗಮನಿಸಿದಾಗ ಅಲ್ಲಿ ಕ್ರಿ.ಶ. ೧೦೧೪ರ ಶಾಸನವೊಂದು " (ಶ್ರೀ) ಮತ್ಕರಡಿಕಲ್ಲ ಜೋಗಸಿ (ಶಿ) ವಾಚಾರ್ಯರ್ನವಿಲೆ

(ಯಜೆ) ಡೆಯ ಸಂ(ಶ)ಕರದೇವರ ಸ್ಥಾನಪತಿ ಮಾಣಿಕ ಭಳಾರರ್ಗ್ಗಂ

XX (ಭ)ಳಾರರ್ಗ್ಗಂ ತ್ರ(ತ್ರಿ) ಭುವನ ಭಳಾರರ್ಗಮಂತು "೨

ಎಂಬುದಾಗಿದ್ದು ಇದು ಜಡೆಯಶಂಕರ ದೇವಸ್ಥಾನದ ಸ್ಥಾನಾಚಾರ್ಯರ ಬಗ್ಗೆ ಹೇಳುತ್ತಿದ್ದು ಈ ಕಾಲದಲ್ಲಿ ಸ್ಥಾನಾಚಾರ್ಯರಾಗಿದ್ದವರು ಮಾಣಿಕ ಭಳಾರ - ಭಳಾರ , ತ್ರಿಭುವನ ಭಳಾರ ಎಂದು ಸ್ಪಷ್ಟವಾಗಿ ಹೇಳುತ್ತಿದ್ದು ಇವರಿಗೆ ಕರಡಿ ಕಲ್ಲು ಗ್ರಾಮದ ಜೋಗ ಶಿವಾಚಾರ್ಯರೇ ದಾನನೀಡಿದ್ದಾರೆಂಬುದು ಶಾಸನದಲ್ಲಿ ಸ್ಪಷ್ಟವಾಗಿದೆ.

ನವಿಲೆಯ ಜಡೆಯ ಶಂಕರ ದೇವಾಲಯಕ್ಕೆ ಕ್ರಿ.ಶ. ೧೧೧೯ , ಕ್ರಿ.ಶ.೧೧೨೮ , ಕ್ರಿ.ಶ.೧೧೩೫ ರಲ್ಲಿ ದಾನಬಿಟ್ಟ ಉಲ್ಲೇಖ ಶಾಸನಗಳಲ್ಲಿದೆ. ಈ ಅವಧಿಯಲ್ಲಿಯ ಸ್ಥಾನಪತಿಗಳ ಬಗ್ಗೆ ಸ್ಪಷ್ಟವಾದ ಮಾಹಿತಗಳು ಕಂಡು ಬರುವುದಿಲ್ಲ. ಬಹುಶಃ ಈ ಅವಧಿಯಲ್ಲಿ ' ಶಾಂತಮಲ್ಲರು ' ಸ್ಥಾನಾಚಾರ್ಯರಾಗಿದ್ದು ಅವರೇ ಶಂಕರ ದಾಸಿಮಯ್ಯರಿಗೆ ಶಿವದಾಸಿಗೆ ದೀಕ್ಷೆ ನೀಡಿದ ಜಂಗಮರಾಗಿಬೇಕೆನಿಸುತ್ತದೆ. ಆದರೆ ಮುಂದಿನ ಶರಣ ಕವಿಗಳಿಗೆ ಇವರ ಹೆಸರು ಗೊತ್ತಾಗದ ಕಾರಣ ಅವರು ಶಿವನೇ ಜಂಗಮ ರೂಪವಾಗಿ ಬಂದು ದೀಕ್ಷೆ ನೀಡಿದನೆಂಬ ಪೌರಾಣಿಕಾಂಶಗಳನ್ನು ಕಟ್ಟಿ ಕೊಡುತ್ತಾರೆ. ದೀಕ್ಷಾ ಗುರುಗಳನ್ನೇ ಶಿವದಾಸಿ ತನ್ನ ವಚನದ ಅಂಕಿತವಾಗಿಟ್ಟುಕೊಂಡಿರಬಹುದೆ? ಎಂದು ನಾವು ಊಹೆ ಮಾಡಬಹುದಾಗಿದೆ. ನವಿಲೆಯ ಆರು ಶಾಸನಗಳೆಲ್ಲವೂ ಪ್ರಕಟವಾಗಿದ್ದರೂ ೩ ಕೆಲವು ಶಾಸನಗಳಲ್ಲಿ ಸ್ಪಷ್ಟತೆಯಿಲ್ಲದ ಕಾರಣ ಈ ಕುರಿತು ನಾವು ಸದ್ಯಕ್ಕೆ ಊಹೆ ಪಟ್ಟುಕೊಳ್ಳಬಹುದೆ ಹೊರತು ಎನನ್ನು ಹೇಳಲಾಗದು.

ಶಿವದಾಸಿಯ ಕಾಲವು ಸಹಿತ ಪತಿಯ ಕಾಲವಾದ ಕ್ರಿ.ಶ. ೧೦೫೫-೧೧೫೫ರ ಅವಧಿಯೆಂದು ಗುರುತಿಸಬಹುದಾಗಿದೆ. ಜೀವನದ ಕೊನೆಯಗಾಲದಲ್ಲಿ ಇವರು ಕಲ್ಯಾಣ ಶರಣರ ಸಂಪರ್ಕಕ್ಕೆ ಬಂದಮೇಲೆ ಇವರ ಸ್ಥಾವರ ನಿಷ್ಠೆ ಅಳಿದು ಇಷ್ಟಲಿಂಗ ನಿಷ್ಠೆ ಮೂಡಿದಾಗ ಇವರ ಹೆಸರಲ್ಲಿ ಬದಲಾವಣೆಯಾಗಿರಬಹುದೆಂದು ನಾವು ಊಹಿಸಬಹುದಾಗಿದೆ. ಶಿವದಾಸಿಯು ಶಂಕರ ದಾಸಿಮಯ್ಯರ ಶ್ರೇಷ್ಠ ಶರಣ ಪತ್ನಿಯಾಗಿದ್ದಾಳೆ.

---

೧ : ಸಂ : ಶಾಂತರಸ ಮತ್ತು ಚೆನ್ನಬಸಪ್ಪ ಬೆಟ್ಟದೂರು - ಕಾ.ಪ. ಪುಟ ೬೧೯

೨ : A.R.I.E. Sl.No.710 line 17-19(1958-59)

೩ : ಅದೇ : 2 & 3 Sl.No.714-15 ಶಾಸನಗಳು 4,5,6 Sl.No. 711,712,713

೭)ವಕ್ರ ಪಾದ

ಈತ ಶಂಕರ ದಾಸಿಮಯ್ಯನ ಸೇವಕ - ಶಿಷ್ಯನೆಂಬುದು ಹರಿಹರನ ರಗಳೆಯಿಂದ ಸ್ಪಷ್ಟವಾಗುತ್ತದೆ. ೧ ಈತ ಮೂಲತಃ ನವಿಲೆಯ ಜಡೆಯ ಶಂಕರ ದೇವಸ್ಥಾನ ಛಾತ್ರ(ವಿದ್ಯಾರ್ಥಿ) ನೆಂಬುದಾಗಿ ಹರಿಹರ ಸ್ಪಷ್ಟವಾಗಿ ಗುರುತಿಸಿದ್ದಾನೆ. ಹೀಗಾಗಿ ಶಂಕರ ದಾಸಿಮಯ್ಯ ತನ್ನ ಸೈದ್ಧಾಂತಿಕ ನಿರೂಪಣೆಗೆ ಸಹಾಯಕನ ಅವಶ್ಯಕತೆ ಕಂಡು ಶರಣ ಧರ್ಮವನ್ನು ಪ್ರಚುರ ಪಡಿಸಲು ಯೋಗ್ಯರಾದವರನ್ನು ಆಯ್ಕೆ ಮಾಡಿಕೊಳ್ಳಲು ನಿರ್ಧರಿಸಿದಾಗ ಬಹುಶಃ ಆವರಿಗೆ 'ವಕ್ರಪಾದ' ಮೆಚ್ಚುಗೆಯಾಗಿರಬೇಕೆನಿಸುತ್ತದೆ.

ಆದರೆ ಮುಂದೆ ಬಂದ ಪಂಡಿತ ಮಲ್ಲಿಕಾರ್ಜುನ ಕವಿ ಮಾತ್ರ ವಕ್ರಪಾದನ ವಿಚಾರದ ಬಗ್ಗೆ ಹರಿಹರನಿಗಿಂತ ಭಿನ್ನವಾಗಿ ಆಲೋಚಿಸಿ ಆತನನ್ನು ಪೌರಾಣಿಕ ನೆಲೆಯಲ್ಲಿ ಚಿತ್ರಿಸಿದ್ದಾನೆ. ಹರಿಹರನಲ್ಲಾಗಲಿ , ಆನಂತರದ ಶರಣ ಕವಿಗಳಲ್ಲಾಗಳಲಿ ಕಂಡು ಬರದೆ ಇರುವ ವಿಚಾರಗಳನ್ನು ಮಲ್ಲಿಕಾರ್ಜುನ ಕವಿ ಚಿತ್ರಿಸಿ ವಕ್ರಪಾದ ಪಾತ್ರವನ್ನು ತನ್ನ ಪುರಾಣದಲ್ಲಿ ಬೆಳೆಸುತ್ತಾನೆ. ' ಶಂಕರ ದಾಸಿಮಯ್ಯ ಉರಿಗಣ್ಣಿಗೆ ನಂದಿ ಮುಖವಾಡ ತೊಡಿಸಿದ ಶ್ರೀ ಜಡೆಯ ಶಂಕರ ಮತ್ತೇನು ವರಬೇಕೆಂದು ಕೇಳಿದಾಗ ಶಂಕರ ದಾಸಿಮಯ್ಯ ......

.....ನಿನ್ನ ಕರುಣದ ।

ಗೋವು ನಾಂ ಭವಪಾಪ ಪೆರ್ಬುಲಿ ।

ಯಾವರಿಸ ದೊಲು ನಿನ್ನ ಮುದ್ರೆಯ ಗಣವರನ ನೆನಗೆ।

ಕಾವಲಿಡು ....। ಎಂದಾಗ ಆವರಿಷ್ಟ ದಂತೆ ವಕ್ರಪಾದನೆಂಬ ಗಣೇಶನನ್ನು ಶಿವಕರಣಿಸುತ್ತಾನೆ. ಆತ ಶಿವನಿಗಿಂತ ಶಿವಭಕ್ತರು ಹೆಚ್ಚೆಂದು ಭಾವಿಸಿ ಸೇವೆ ಮಾಡುತ್ತಾನೆ. ವಕ್ರಪಾದನ ಮೂಲಕ ಶಂಕರ ದಾಸಿಮಯ್ಯನ ಹಿರಿಮೆಯನ್ನು ತಿಳಿಸುವ ಕವಿ ವಕ್ರಪಾದನ ಸಾಮರ್ಥ್ಯವನ್ನು ಸಹ ಚಿತ್ರಿಸಿದ್ದಾನೆ . ಕೊನೆಯಲ್ಲಿ ಈತ ಶಂಕರ ದಾಸಿಮಯ್ಯನ ಮಗನಾದ ಸದ್ಯೋಜಾತನಿಗೆ ಅಕ್ಷರ ಕಲಿಕೆಯನ್ನು ಮಾಡುತ್ತಾನೆ . ಒಟ್ಟಾರೆ ಶಂಕರ ದಾಸಿಮಯ್ಯನ ಶಿಷ್ಯನಾಗಿ ಶರಣ ಧರ್ಮವನ್ನು ಸಂಘಟಿಸಿದವರಲ್ಲಿ ಪ್ರಮುಖ ವ್ಯಕ್ತಿಯಾಗಿ ಈತ ನಿಲ್ಲುತ್ತಾನೆ' ೨

೮) ಜಡೆಯ ಶಂಕರ ದೇವರ ಮಲ್ಲಯ್ಯ-ಪಡಿಹಾರ ದಾಸಯ್ಯ-ಸದ್ಯೋಜಾತ

ಮಂಡ್ಯ ಜಿಲ್ಲೆಯ ಮರಡಿಪುರದ ಶಾಸನಗಳಿಂದ ಈ ಹೆಸರು ಗಳ ಉಲ್ಲೇಖ ನಮಗೆ ಕಂಡು ಬರುತ್ತದೆ. ಕ್ರಿ.ಶ. ೧೨೮೦ ರ ಮರಡಿ ಪುರ ಶಾಸನವು ನವಿಲೆಯ ಶ್ರೀ ಜಡೆಯ ಶಂಕರನನ್ನು ಕುರಿತು ವರ್ಣಿಸುತ್ತಾ ; ಬಸವಾದಿಶರಣರ ಜೊತೆಗೆ ಬಸವೋತ್ತರ ಅನೇಕ ಶರಣರ ಹೆಸರನ್ನು ಉಲ್ಲೇಖಿಸುತ್ತದೆ. ೩ ಈ ಶಾಸನದಲ್ಲಿ ಕಂಡು ಬರುವ ಸದ್ಯೋಜಾತ ಶಂಕರ ದಾಸಿಮಯ್ಯರ ಮಗನೆಂಬುದು ಸ್ಪಷ್ಟ. ಶಂಕರ ದಾಸಿಮಯ್ಯರ ಅಂತ್ಯಕಾಲ ಕ್ರಿ.ಶ.೧೧೫೫ ಎಂದು ನಾವು ಗುರುತಿಸಿಕೊಂಡ ಕಾರಣ ಆ ತರುವಾಯ ಈತನ ತಲೆಮಾರಿನ ಕೊಂಡಿಯಾಗಿ ಸದ್ಯೋಜಾತ ಕಂಡುಬರುತ್ತಾನೆ.

ಶಂಕರ ದಾಸಿಮಯ್ಯನ ಶಿಷ್ಯ ಪರಂಪರೆಯಾಗಿ ಪಡಿಹಾರ ದಾಸಯ್ಯ - ಜಡೆಯ ಶಂಕರ ದೇವರ ಮಲ್ಲಯ್ಯ ಕಾಣಿಸಿಕೊಂಡಿರಬೇಕಿನಿಸುತ್ತದೆ. ಇಲ್ಲಿ ಶಾಸನದಲ್ಲಿ ಉಕ್ತನಾದ ಶೋವಸಿಂಗನ ಮಾರೆಯ ನಾಯಕನನ್ನು ಶರಣರ ದಾಸ ಎಂದು ಇಲ್ಲಿ ಹೇಳಲಾಗಿದೆ. ಜೊತೆಗೆ ಜಡೆಯ ಶಂಕರನ ಸ್ತುತಿಯೇ ಇಲ್ಲಿ ಮುಖ್ಯವಾಗಿದೆ. ಆ ಹಿನ್ನೆಲೆಯಲ್ಲಿ ಇದು ಶಂಕರ ದಾಸಿಮಯ್ಯನ ನಂತರದ ಶಿಷ್ಯ ಪರಂಪರೆಯ ವಂಶ ಪರಂಪರೆಗೆ ಸಂಬಂಧವಾಗಿ ಕಂಡು ಬರುತ್ತದೆ.

ಆದರು ಇಷ್ಟೆ ಮಾಹಿತಿಗಳಿಂದ ಏನೂ ಹೇಳಲಾಗದು . ಹರಿಹರ ತನ್ನ ರಗಳೆಯಲ್ಲಿ ಶರಣ ಗಣಗಳ ಬಗ್ಗೆ ಉಲ್ಲೇಖಿಸುವುದರಿಂದ ಮುಂದಿನ ದಿನಗಳಲ್ಲಿ ಶಂಕರ ದಾಸಿಮಯ್ಯನ ನಂತರ ನವಿಲೆಯಲ್ಲಿ ಆತನ ಶಿಷ್ಯರು - ಪ್ರಶಿಷ್ಯರು ಇದ್ದರೆಂಬುದನ್ನು ಊಹಿಸಿಕೊಂಡರೆ ಆ ದಿಸೆಯಲ್ಲಿ ಪಡಿಹಾರ ದಾಸಯ್ಯ , ಜಡೆಯ ಶಂಕರ ದೇವರ ಮಲ್ಲಯ್ಯ ಮುಖ್ಯ ರಾಗುತ್ತಾರೆ. ಇಷ್ಟಾದರೂ ಇವರ ಬಗ್ಗೆ ಖಚಿತ ಮಾಹಿತಿ ಸಿಗದ ಕಾರಣ ಏನನ್ನು ಹೇಳಲಾಗದು.

---

೧ : ಸಂ: ಡಾ: ಎಂ.ಎಂ. ಕಲಬುರ್ಗಿ - ಹ.ರ. ಸ್ಥಲ೨ ಗದ್ಯ ೨೨ನೇ ಸಾಲು

೨ : ಡಾ : ಅನ್ನಪೂರ್ಣ ಜಾಲವಾದಿ - ಶಂ.ದಾ.ಪು.ಅ. ಪುಟ೧೫೮ -೧೬೧ಇವುಗಳನ್ನು ವಿವರಗಳಿಗೆ ಗಮನಿಸಿರಿ.

೩ : E.C.vi iii Page 197 Maradipura

೯) ಆದಯ್ಯ - ಮಾಳಗುಂಡಮ್ಮ

ಲಿಂಗಸೂಗೂರು ತಾಲೂಕಿನಲ್ಲಿ ರುವ ಶ್ರೀ ಅಮರೇಶ್ವರ ಕ್ಷೇತ್ರ ಚಾರಿತ್ರಿಕವಾಗಿ - ಸಾಂಸ್ಕೃತಿಕವಾಗಿ ಮಹತ್ವದ ಸ್ಥಾನ ಪಡೆದಿದೆ. ಕೃಷ್ಣೆಯ ದಕ್ಷಿಣ ದಂಡೆಯಿಂದ ಮೂರು ಮೈಲು ಅಂತರದಲ್ಲಿ ಈ ಕ್ಷೇತ್ರವಿದೆ. ಕ್ಷೇತ್ರದ ಅಧಿ ದೇವತೆ ಶ್ರೀ ಅಮರೇಶ್ವರನನ್ನು ಬಾಲಕ ರೂಪದಲ್ಲಿ ಮಗನಾಗಿ ಪಡೆದ ದಂಪತಿಗಳೇ ಇವರಾಗಿದ್ದಾರೆ. ಇಲ್ಲಿ ಪ್ರಮುಖವಾಗಿ ಕೇಳಿ ಬರುವ ಐತಿಹ್ಯವಾಗಿದೆ. ಇವರ ಸ್ಥಳ, ಕಾಲ, ವ್ಯಕ್ತಿತ್ವಗಳನ್ನು ನಾವು ಪುರಾಣ, ಐತಿಹ್ಯ, ಕ್ಷೇತ್ರ ಕಾರ್ಯಗಳಿಂದ ಕಟ್ಟಿ ಕೊಡಬಹುದಾಗಿದೆ.

ಸ್ಥಳ :

ಆದಯ್ಯ - ಮಾಳಗುಂಡಮ್ಮನವರು ಪ್ರಸ್ತುತ 'ಎರಡೋಣಿ' ಗ್ರಾಮದವರಾಗಿದ್ದಾರೆ. ಈ ಕುರಿತು ನಮಗೆ ಇಂದಿಗೂ ಈ ಗ್ರಾಮದಲ್ಲಿ ಆದಯ್ಯನ ವಂಶಜರ ಮನೆಯಿದ್ದು ಅದು ಮೊದಲಿನಂತಿಲ್ಲ ಕೆಡವಿ ಹೊಸತಾಗಿ ಕಟ್ಟಲಾಗಿದೆ. ವಂಶಜರ ಮನೆ ಇಂದಿಗೂ 'ಮೆತ್ತನವರ ಮನೆ' ಎಂದು ಕರೆಯಲ್ಪಡುತ್ತದೆ. ವಾಸ್ತವವಾಗಿ ಅದು 'ಮುತ್ತ್ಯಾನ ಮನೆ' ಯಾಗಿದೆ. ಈ ಮುತ್ತ್ಯಾನ ಮನೆಯೇ ಜನರ ಬಾಯಿಯಲ್ಲಿ ಮೆತ್ತನವರ ಮನೆಯಾಗಿದೆ. ಮುತ್ತ್ಯಾ ಎಂಬುದು ಗ್ರಾಮ್ಯ ಪದವಾಗಿದೆ. ಇದರ ಅರ್ಥ ಹಿರಿಯ - ಅಜ್ಜ - ಸಾತ್ವಿಕ ಭಕ್ತನೆಂಬುದಾಗಿ ತಿಳಿದು ಬರುತ್ತದೆ. ಹೀ ಗಾಗಿ ಇಲ್ಲಿ ಮುತ್ತ್ಯಾನ ಎಂದರೆ ಈ ವಂಶದ ಹಿರಿಯರಾಗಿದ್ದ ಆದಯ್ಯರೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಇಂದಿನ ಎರಡೋಣಿಯ ಮೂಲ ಹೆಸರು ' ಜಟ್ಟಿಂಗ ಮಹಾರಾಜನ ಪಟ್ಟಣ' ಎಂದಾಗಿತ್ತು. ಎಂಬುದಾಗಿ ನಮಗೆ ಇಲ್ಲಿಯ ಕ್ಷೇತ್ರ ಕಾರ್ಯಗಳಿಂದ ತಿಳಿದು ಬರುತ್ತದೆ. ಮುಂದೆ ಈ ಪಟ್ಟಣ ಕಾಲರಾರೋಗಕ್ಕೆ ಬಲಿಯಾದಾಗ ಎರಡು ಓಣಿ ಗಳು ಮಾತ್ರ ಉಳಿದವು. ಅದಕ್ಕಾಗಿಯೇ ಅಂದಿನಿಂದ ಆ ಪಟ್ಟಣಕ್ಕೆ ಎರಡೋಣಿ ಎಂದು ಹೆಸರು ಬಂದಿತು.

ಇವರ ವಂಶಜರು ವಿಜಾಪುರ ಜಿಲ್ಲೆಯ ಅರಸನಾಳ, ನಾಲ್ತವಾಡದಲ್ಲಿದ್ದಾರೆಂದು ತಿಳಿದು ಬರುತ್ತದೆ. ಸ್ಥಳ ಪುರಾಣಗಳು, ಐತಿಹ್ಯಗಳು ಇವರನ್ನು ಶಾಪಗ್ರಸ್ಥ ಗಂಧರ್ವರೆಂದು ಉಲ್ಲೇಖಿಸಿವೆ.

ಅಮರೇಶ್ವರ ಸ್ತೋತ್ರ ಮಾಲಾದಲ್ಲಿ ಇವರ ಉಲ್ಲೇಖ ಬರುತ್ತಿದ್ದು ಅದರ ಸಾರ ಹೀಗಿದೆ.

' ಗೌತಮನ ಆಶ್ರಮದಲ್ಲಿ ಉಪಮನ್ಯು ಋಷಿ ನಂದೀಶ ಚರಿತ್ರೆ ಹೇಳುವಾಗ ಗಂಧರ್ವ ದಂಪತಿಗಳು ಕಾಮಚೇಷ್ಟೆಗಳಾಡುವಾಗ ಮಹಾ ಮುನಿಗಳ ದೃಷ್ಟಿಯಲ್ಲಿ ಇವರು ಶಾಪಕ್ಕೆ ಗುರಿಯಾಗುತ್ತಾರೆ. ಅವರು ಸಂತಾನ ವಿಲ್ಲದೆ ಕೊರಗುವಾಗ ಕಾರಣಿಕ ಬಾಲಕ ಸಿಗುತ್ತಾನೆ. '[೧]

ಇವರು ಈ ಗ್ರಾಮದಲ್ಲಿ ಜನ್ಮ ತಾಳಿ ಶಿವ ಭಕ್ತರಾಗಿ ಮುಂದೆ ಕಾರಣಿಕ ಬಾಲಕನಿಂದ ಮುಕ್ತಿ ಹೊಂದುತ್ತಾರೆಂದು ಇಲ್ಲಿನ ಐತಿಹ್ಯಗಳಿಂದ ತಿಳಿದು ಬರುತ್ತದೆ.

ಕಾಲ : -

ಐತಿಹ್ಯ - ಪುರಾಣಗಳಲ್ಲಿಯೇ ಅಡಗಿರುವ ಇವರ ಚರಿತ್ರೆಯನ್ನು ಕಟ್ಟಿಕೊಡುವುದು ಬಹಳ ತೊಂದರೆಯಾಗಿದೆ. ಕಾಲದ ನಿರ್ಧಾರವಂತೂ ಇನ್ನೂ ಕಷ್ಟವೇ ಸರಿ. ಆದರೂ ದೊರೆತ ಕ್ಷೇತ್ರ ಮಾಹಿತಿಯಿಂದ ಕಟ್ಟಿ ಕೊಡಬಹುದಾದರೆ : -

ಪ್ರಸ್ತುತ ಈಗ ನಮಗೆ ಕಂಡು ಬರುವ ಶ್ರೀ ಅಮರೇಶ್ವರ ದೇವಸ್ಥಾನ ಸಂಪೂರ್ಣ ನವೀನಮಾದರಿಯನ್ನೊಳ್ಳಗೊಂಡಿದೆ. ಇದನ್ನು ಸೂಕ್ಷ್ಮವಾಗಿ ನೋಡಿದಾಗ ಗೋಪುರದ ಕೆಳಗಿನ ಕಟ್ಟಡ ಬಾದಾಮಿ ಚಾಲುಕ್ಯರ ಕಾಲದ ದೇವಾಲಯಗಳ ಮಾದರಿಗೆ ಹೋಲುತ್ತದೆ. ರೇವಣ ಸಿದ್ಧೇಶ್ವರನ ನೇತೃತ್ವದಲ್ಲಿ ಜಟ್ಟಿಂಗ ಮಹಾರಾಜನೇ ಶ್ರೀ ಅಮರೇಶ್ವರ ಕ್ಷೇತ್ರ ನಿರ್ಮಿಸಿದನೆಂಬ ಐತಿಹ್ಯ ಇಲ್ಲಿದೆ. ಇದನ್ನು ಗಮನಿಸಿದಾಗ ಬಾದಾಮಿ ಚಾಲುಕ್ಯರ ಕಾಲಕ್ಕಾಗಲೇ ಈ ಕ್ಷೇತ್ರ ಇತ್ತೆಂಬುದು ಸ್ಪಷ್ಟವಾಗುತ್ತದೆ. ಆನಂತರ ಕಾಲಾನಂತರದಲ್ಲಿ ಮೂಲ ದೇವಾಲಯ ನಾಶವಾದಾಗ ಮರಳಿ ಚಾಲುಕ್ಯರು ಅದನ್ನು ನಿರ್ಮಿಸಿರಬಹುದೆಂದು ನಮಗೆ ಕಂಡು ಬರುತ್ತದೆ. ಶಾಲಿವಾಹನ ಶಕೆ ೨ ರಲ್ಲಿ ಅಮರೇಶ್ವರ ಮೂರ್ತಿಯನ್ನು ವಡಗೇರಿಗೌಡರು ಕಂಚಿನ ಲೋಹದಲ್ಲಿ ಮಾಡಿಸಿ ಕೊಟ್ಟರೆಂಬುದು ತಿಳಿದು ಬರುತ್ತದೆ ಪ್ರಸ್ತುತ ಆ ಮೂರ್ತಿ ಗುಂತಗೋಳದ ಅಮರೇಶ್ವರ ದೇವಸ್ಥಾನದಲ್ಲಿದೆ. ಶಾಲಿವಾನಹ ಶಕೆ ೨ ಎಂಬುದು ಆ ಮೂರ್ತಿಯ ಮೇಲಿದೆ.

ಮೇಲಿನ ಎಲ್ಲಾ ಐತಿಹ್ಯಗಳನ್ನು ನೋಡಿದರೆ ಇವರಿಗಿಂತ ಮುಂಚೆಯೇ ಈ ಕ್ಷೇತ್ರ ಪ್ರಸಿದ್ಧವಾಗಿದ್ದರಬಗ್ಗೆ ತಿಳಿದು ಬರುತ್ತದೆ. ಬಾದಾಮಿ ಚಾಲುಕ್ಯರ ಕಾಲಕ್ಕೆ ಜೀರ್ಣೋದ್ಧಾರ ಕಾರ್ಯ ನಡೆದುದ್ದು ಗಮನಿಸಿದೆ. ಅವರನಂತರ ಇವರು ಬದುಕಿದರೆಂಬುದು ಸ್ಪಷ್ಟವಾಗುತ್ತದೆ. ಬಾದಾಮಿ ಚಾಲುಕ್ಯರ ಕಾಲ ಕ್ರಿ.ಶ.೫೦೦ ರಿಂದ ೭೫೫ ವರೆಗೆ ಕಂಡು ಬರುತ್ತದೆ. ಹಾಗೆಯೇ ಗುಂತಗೋಳದ ಮೂರ್ತಿಯ ಮೇಲಿನ ಶಾಲಿವಾಹನಶಕೆ ಎರಡನ್ನು ಗಮನಿಸಿದರೆ ಕ್ಷೇತ್ರದ ಐತಿಹಾಸಿಕತೆ ಶಾತವಾಹನರಕಾಲಕ್ಕೆ ಸರಿಯುತ್ತದೆ. ಹಾಗಾದರೇ ಆ ಕಾಲಕ್ಕೆ ಇವರ ಸಮನಾಗಿ ಬರುವವರಲ್ಲ ಶಾತವಾಹನರ ಕಾಲಕ್ಕೆ ಶಿವ ಪ್ರಾಮುಖ್ಯತೆ ಪಡೆದಿರಲಿಲ್ಲ . ಎರಡೋಣಿಯ ಪೂರ್ವದ ಹೆಸರು ಜಟ್ಟಿಂಗ ಮಹಾರಾಜನ ಪಟ್ಟಣ ಎಂಬುದನ್ನು ಗಮನಿಸಿದಾಗ ಇವರು ಆ ಪಟ್ಟಣದಲ್ಲಿಯೇ ವಾಸವಾಗಿದ್ದರೆಂದು ತಿಳಿದು ಬರುತ್ತದೆ. ಹಾಗಾದರೆ ಜಟ್ಟಿಂಗ ಮಹಾರಾಜನು ಯಾವ ವಂಶಕ್ಕೆ ಸೇರಿದವನೆಂಬುದು ಸ್ಪಷ್ಟವಾಗಿ ತಿಳಿಯದು ಬಹುಶಃ ಮಹಾರಾಜನ ಚರಿತ್ರೆ ಗೊತ್ತಾದರೆ ನಮಗೆ ಇವರ ಕಾಲದ ಬಗೆಗೂ ತಿಳಿದು ಬರುವ ಸಾಧ್ಯತೆ ಇದೆ.

೧ : ಬಸವ ಪಥ ಸಂಪುಟ ೧೨ , ಸಂಚಿಕೆ ೬ ಪುಟ ೪೧ ರಿಂದ ೪೪ ಸೆಪ್ಟಂಬರ್ ೧೯೯೦

ಕಾರಣಿಕ ಬಾಲಕನಿಗೆ ಮಳೆ ಸ್ವಾಮಿಗಳು ಅಮರೇಶ್ವರನೆಂದು ನಾಮಕರಣ ಮಾಡಿದರೆಂದು ಸ್ಥಳ ಪುರಾಣಗಳು ಹೇಳತ್ತವೆ. ಮಳೆ ಸ್ವಾಮಿಗಳು ಪ್ರಸ್ತುತ ದೇವರ ಭೂಪುರದ ಮಠದ ಸ್ವಾಮಿಗಳಾಗಿದ್ದು ಚಾರಿತ್ರಕವಾಗಿ ಕಂಡು ಬರುತ್ತಾರೆ. ನಮಗೆ ಈ ಸ್ವಾಮಿಗಳ ಕಾಲ ಬಗ್ಗೆ ಕಂಡು ಬರುವುದಿಲ್ಲ. ಮಳೆ ಸ್ವಾಮಿಗಳ ಕಿರಿಯ ಸಮಕಾಲಿನರಾಗಿ ಈ ಶರಣರು ಬರುತ್ತಾರೆಂದು ಊಹಿಸಬಹುದು. ದೇವರ ಭೂಪುರ ಮಠದ ಪರಂಪರೆಯಲ್ಲಿ ಪ್ರಸ್ತುತ ಇರುವ ಶ್ರೀ ಗಜದಂಡ ಸ್ವಾಮಿಗಳು-೨ ಇವರು ೨೩ನೇ ಪೀಠಾಧಿಪತಿಯಾಗಿದ್ದಾರೆ. ಮಳೆ ಸ್ವಾಮಿಗಳು ೧೫ನೇ ಪೀಠಾಧಿಪತಿಗಳಾಗಿದ್ದು ತಿಳಿದು ಬರುತ್ತದೆ. ಹೀಗಾಗಿ ಕನಿಷ್ಟವೆಂದರು ೯೦೦ ವರ್ಷಗಳ ಹಿಂದೆ ಆದಯ್ಯ- ಮಾಳಗುಂಡಮ್ಮರು ಇದ್ದರೆಂದು ಊಹಿಸಿ ಇವರ ಕಾಲ ಕ್ರಿ.ಶ. ೧೧೦೦ ಕ್ಕೆ ಹತ್ತಿರವೆಂದು ಭಾವಿಸಬಹುದಾಗಿದೆ.

ವಿಜಯ ನಗರದ ಕಾಲದ ಗುಂಡ ಸೇನಾಪತಿಯೆನ್ನುವವರು ಅಮರೇಶ್ವರನ ಭಕ್ತನಾಗಿದ್ದನೆಂದು ತಿಳಿದು ಬರುತ್ತಿದ್ದು ಈ ಗುಂಡ ಸೇನಾಪತಿ ಇಮ್ಮಡಿ ಹರಿಹರನ ಕಾಲದಲ್ಲಿ ಕಂಡುಬರುತ್ತಾನೆ. ಹಾಗಾಗಿ ಇಮ್ಮಡಿ ಹರಿಹರನ ಕಾಲ ಕ್ರಿ.ಶ. ೧೩೩೭ -೧೪೦೪ ವರೆಗೆ ಕಂಡು ಬರುತ್ತದೆ. ಅಂದರೇ ಇವನ ನಂತರ ಈ ಶರಣರು ಕಂಡುಬರುತ್ತಾರೆಂದು ಊಹಿಸುವುದು ಅಸಮಂಜಸವಾಗುತ್ತದೆ. ಆದರೆ ಈ ಕಾಲಕ್ಕಿಂತ ಮುಂಚಿನವರೆಂಬುದು ಇದುವರೆಗಿನ ವಿವೇಚನೆಯಿಂದ ಸ್ಪಷ್ಟವಾಗುತ್ತದೆ. ಸದ್ಯಕ್ಕೆ ನಾವು ಇವರನ್ನು ಬಸವ ಪೂರ್ವ ಯುಗದ ಶರಣರೆಂದು ಗುರುತಿಸುವುದು ಸರಿ ಎನಿಸುತ್ತದೆ.

ಇವರು ಶಿವಭಕ್ತರಾಗಿದ್ದು ಕೃಷಿ ಕಾಯಕವನ್ನು ಮಾಡುತ್ತ ನಿತ್ಯವೂ ಜಂಗಮಾರಾಧನೆ ಮಾಡುತ್ತಿದ್ದರು. ಇದನ್ನು ಗಮನಿಸಿದರೆ ಇವರು ಪ್ರಸಾದ ಮತ್ತು ದಾಸೋಹ ಗುಣದ ವಿಶೇಷತೆ ಗೊತ್ತಾಗಿ ಕಲ್ಯಾಣ ಶರಣಗಿಂತ ಬಹು ದಿನಗಳ ಮುಂಚೆಯೇ ಬದುಕಿನಲ್ಲಿ ಆ ಸಿದ್ಧಾಂತವನ್ನು ರೂಢಿಸಿಕೊಂಡರೆಂಬುದು ತಿಳಿದು ಬರುತ್ತದೆ. ಕಾರಣಿಕ ಬಾಲಕನ ಘಟನೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇವರು ಸಾಮಾನ್ಯ ಲೌಕಿಕ ಚಿಂತೆಗೆ ಒಳಗಾದಾಗ ಮುಂದೆ ಅದು ಬಾಲಕನ ಮೂಲಕ ಅಲೌಕಿಕ ಸ್ಥಿತಿಯೆಡೆಗೆ ಸಾಗಿದ್ದನ್ನು ನಾವಿಲ್ಲಿ ಸಾಂಕೇತಿಕವಾಗಿ ಗುರುತಿಸಬಹುದು.

ಒಟ್ಟಾರೆಯಾಗಿ ಬಸವ ಪೂರ್ವ ಯುಗದಲ್ಲಿ ಶಿವ ಪರಂಪರೆಯನ್ನು ಉಳಿಸುವಲ್ಲಿ ಇವರು ತಮ್ಮ ವ್ಯಕ್ತಿಗತ ಮಟ್ಟದಲ್ಲಿ ಪ್ರಯತ್ನಿಸಿದ್ದರೆಂಬು ನಮಗೆ ತಿಳಿದು ಬರುತ್ತದೆ. ಇವರ ಕುರಿತು ಇನ್ನೂ ಹೆಚ್ಚಿನ ಮಾಹಿತಿಗಳು ಸದ್ಯಕ್ಕೆ ನಮಗೆ ಕಂಡು ಬರುವುದಿಲ್ಲ.

೧೦) ಪುರದ ನಾಗಣ್ಣ

ಗುಡುಗುಂಟಿಯ ಶ್ರೀ ಅಮರೇಶ್ವರ ಕ್ಷೇತ್ರವೂ ವೇದ ಕಾಲದಿಂದ ತನ್ನ ಪ್ರಸಿದ್ಧಿಯನ್ನು ಪಡೆದುಕೊಂಡು ಬಂದಿದೆ. ಕಪಿಲ ಮಹಾ ಋಷಿ, ಅಡಕೇಶ್ವರ, ಕಡಲೇಶ್ವರ , ಅಗಸ್ತ್ಯ, ರೇವಣ ಸಿದ್ದೇಶ್ವರರು, ತಪಸ್ಸು ಮಾಡಿದರೆಂಬುದರಾಗಿ ಇಲ್ಲಿಯ ಸ್ಥಳ ಪುರಾಣಗಳು ಹೇಳುತ್ತವೆ

ಶರಣ ಆದಯ್ಯ ಎತ್ತುಗಳಿಗೆ ನೀರು ಕುಡಿಸುತ್ತಿದ್ದ ಕೆರೆ ಈಗ ಇಲ್ಲಿ ಇದ್ದು ಅದನ್ನು ಈಗ 'ದೇವರ ಕೆರೆ' ಎನ್ನುತ್ತಾರೆ. ಸದ್ಯ ಮೆಟ್ಟ ಅಮರಪ್ಪನ ಜಾಗದಲ್ಲಿ ಈ ಕೆರೆ ಇದೆ . ಕಾರಣಿಕ ಬಾಲಕನಾದ ಅಮರೇಶ್ವರನು ನೀರು ಕುಡಿಸಿದನೆಂದು ಹೇಳಲಾದ 'ಹಾಸಿನ ಮಲೆ ಕೊಳ್ಳ ' ಇಲ್ಲಿದೆ . ಪ್ರಸ್ತುತ ' ಅಮರಯ್ಯನ ಕೊಂಡ ' ಎಂದು ಕರೆಯಲ್ಪಡುವ ಜಾಗದಲ್ಲಿ ಇದ್ದ ಬಗ್ಗೆ ತಿಳಿದು ಬರುತ್ತದೆ. ಈ ಕೊಂಡದಿಂದ ಜನರ ೩೬೦ ರೋಗಗಳು ನಾಶವಾಗುತ್ತವೆಂಬ ಪ್ರತೀತಿ ಇದೆ.

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕರಡಿ ಕಲ್ಲು ಬಳಿಯಲ್ಲಿರುವ ಸೋಮನಾಶ ಲಿಂಗ ನಿಂದ ಶ್ರೀ ಅಮರನಾಥಲಿಂಗದ ವರೆಗೆ ವಸತಿ ಯುಳ್ಳ ಪಟ್ಟಣ ವಿದ್ದುದರ ಬಗ್ಗೆ ನಮಗೆ ಈಗ ಕಂಡುಬರುವ ಪುರಾತನ ಅವಶೇಷಗಳೇ ನಿದರ್ಶನವಾಗಿದೆ.

ಇಂತಹ ಕ್ಷೇತ್ರದಲ್ಲಿಯೇ 'ಅಮರಾಪುರ' ಎಂಬ ಗ್ರಾಮ ವಿದ್ದುದಾಗಿ ತಿಳಿದು ಬರುತ್ತದೆ . ಅಮರೇಶ್ವರನ ಸುತ್ತ ಮುತ್ತ ಪುರ ಎಂಬ ಗ್ರಾಮಗಳು ಬಹಳಷ್ಟಿವೆ. ಹಾಳು ಅಮರಾಪುರ ಎಂಬ ಗ್ರಾಮವೂ ಕೂಡ ಇದೆ. ಈ ಹಿನ್ನೆಲೆಯಲ್ಲಿ ನಾವು ಈ ಶರಣರ ಕಾಲ ಸ್ಥಳ ಆತನ ವಚನಾಂಕಿತದ ಬಗ್ಗೆ ಗಮನಿಸಬಹುದು.

ಸ್ಥಳ :

ಬಹುಶಃ ಇಂದು ಹಾಳು ಅಮರಾಪುರ ವೆಂದು ಕರೆಯಲ್ಪಡುವುದೇ ಅಂದಿನ ' ಪುರ 'ವಾಗಿರಬಹುದೇ ? ತಾವರಗೇರಿಯ ಹತ್ತಿರ ಪುರ ಎಂಬ ಗ್ರಾಮವೂ ಸಹಿತ ಇದೆ. ಇಲ್ಲಿರುವ ದೇವಾಲಯ ಸೋಮೇಶ್ವರ ದೇವಾಲಯವಾಗಿದೆ. ಈ ದೇವಾಲಯ ಕಳಚೂರಿಗಳ ಆಳ್ವಿಕೆಯಲ್ಲಿ ನಿರ್ಮಿಸಲ್ಪಟ್ಟಿದೆ. ಹಾಗಾಗಿ ಪುರದ ನಾಗಣ್ಣನಿಗೆ ಇದು ಸಂಬಂಧಿಸಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಇವರು ಆಯ್ದಕ್ಕಿ ದಂಪತಿಗಳಿಗಿಂತ ಪೂರ್ವದವರೆಂಬುದಕ್ಕೆ ನಮಗೆ ಇಲ್ಲಿಯ ಐತಿಹ್ಯಗಳಿಂದ ತಿಳಿದು ಬರುತ್ತದೆ. ಸದ್ಯ ಇರುವ ಹಾಳು ಅಮರಾಪುರ ಮೊದಲು ಪುರ ವೆಂದು ಕರೆಯಲ್ಪಡುತ್ತಿದ್ದು ಅಲ್ಲಿ ಜನ ವಸತಿ ಇತ್ತು. ಆದರೆ ಅಲ್ಲಿ ಬ್ರಹ್ಮ ರಾಕ್ಷಸವೊಂದುಸೇರಿ ಇಡೀ ಊರನ್ನು ನಾಶಗೊಳಿಸಲು ಯತ್ನಿಸಿತಂತೆ ಆಗ ಇಲ್ಲಿ ತಪಸ್ಸು ಮಾಡುತ್ತಿದ್ದ ಮುನಿಗಳು ಶಿವನಿಗೆ ಮೊರೆಯಿಟ್ಟಾಗ ಶಿವನು ಆ ಬ್ರಹ್ಮ ರಾಕ್ಷದೊಂದಿಗೆ ಹೋರಾಟ ನಡೆಸಿ ಅದನ್ನು ಓಡಿಸಿದನಂತೆ. ಪ್ರಸ್ತುತ ಅಮರೇಶ್ವರದಿಂದ ಪಶ್ಚಿಮಕ್ಕೆ ಒಂದು ಕಿ.ಮೀ. ಅಂತರದಲ್ಲಿ ' ಬಂಗಲಿ ಮರಡಿ' ಎನ್ನುವ ಸ್ಥಳದಲ್ಲಿ ' ಕೋಣ' ದ ಹೆಜ್ಜೆ ಗಳಿವೆ ಇದು ಬ್ರಹ್ಮ ರಾಕ್ಷಸನ ಹಾವಳಿ ಸೂಚಕ ಎನ್ನಲಾಗುತ್ತಿದೆ ಇದೆ ಜಾಗದಲ್ಲಿ ಪುರ ವಿದ್ದು ರಾಕ್ಷಸ ಕಾಟದಿಂದ ಹಾಳಾಗಿ ಮುಂದೆ ಅದು ಹಾಳಾದ ಪುರವಾಗಿ ಆನಂತರ ಅಮರೇಶ್ವರ ಕ್ಷೇತ್ರದ ಪ್ರಭಾವದಿಂದಾಗಿ ಹಾಳು ಅಮರಾಪುರವಾಗಿ ಕರೆಯಲ್ಪಟ್ಟಿರಬಹುದೆಂದು ತಿಳಿದು ಬರುತ್ತದೆ. ಪುರದ ನಾಗಣ್ಣನು ಇದೇ ಗ್ರಾಮದವರೆನ್ನಲು ಸದ್ಯಕ್ಕೆ ಇಷ್ಟು ಮಾಹಿತಿಗಳು ಕಂಡು ಬರುತ್ತದೆ.

ಕಾಲ :

ಇವರು ಆಯ್ದಕ್ಕಿ ದಂಪತಿಗಳ ಪೂರ್ವದವರಾದ ಕಾರಣ ಇವರ ಕಾಲವನ್ನು ಕ್ರಿ.ಶ. ೧೧೬೦ ರ ಕ್ಕಿಂತ ಮುಂಚಿನದೆಂದು ಊಹಿಸಬಹುದು. ಆಯ್ದಕ್ಕಿ ದಂಪತಿಗಳ ಕಾಲ ಬಸವ ಸಮಕಾಲೀನವೆಂದು ಸ್ಪಷ್ಟವಾಗಿದೆ . ಆ ಕಾರಣ ಪುರದ ನಾಗಣ್ಣನು ಬಸವಪೂರ್ವದವರೆಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಅಂತೇಯೇ ಇವರು ಬಳಸುವ ಅಂಕಿತ ' ಅಮರಗುಂಡದ ಮಲ್ಲಿಕಾರ್ಜುನ ' ಎಂದಿರುವ ಕಾರಣ ಇಂದಿನ ಅಮರೇಶ್ವರವೇ ಅಮರಗುಂಡವಾಗಿತ್ತೆಂದು ಇಲ್ಲಿ ನಮಗೆ ತಿಳಿದು ಬರುತ್ತದೆ. ಈ ಭಾಗವನ್ನು ಆಳುತ್ತಿದ್ದ ಕಲ್ಯಾಣ ಚಾಲುಕ್ಯರ ಎರಡನೆಯ ಜಯಸಿಂಹನ ಕಾಲದ ದೇವಾಲಯಗಳ ಉಲ್ಲೇಖದಲ್ಲಿ ಅಮರಗೊಂಡದ ಮಲ್ಲಿಕಾರ್ಜುನ ಎಂಬ ದೇವಾಲಯದ ಉಲ್ಲೇಖವಿದೆ. ಪ್ರಸ್ತುತ ಈ ಹೆಸರಿನ ದೇವಾಲಯ ಎಲ್ಲಿಯೂ ಇಲ್ಲಿ ಕಂಡು ಬರುವುದಿಲ್ಲ. ಆದರೆ ಅಮರೇಶ್ವರದ ಸುತ್ತ ಮುತ್ತ ಅನೇಕ ಪಾಳು ದೇಗುಲಗಳ ಕುರುಹುಗಳು ಕಂಡು ಬರುತ್ತದೆ.

ಇನ್ನು ಎರಡನೆಯ ಜಯಸಿಂಹನ ಕಾಲ ಕ್ರಿ.ಶ. ೧೦೧೫ -೧೦೪೨ ಎಂಬುದಾಗಿ ಇತಿಹಾಸದಿಂದ ತಿಳಿದು ಬರುತ್ತದೆ. ೧ ಒಂದುವೇಳೆ ಇದೆ ದೇವಾಲಯ ಈತನ ಆರಾಧ್ಯ ದೈವವಾಗಿದ್ದರೆ ಪುರದ ನಾಗಣ್ಣನ ಕಾಲ ಕ್ರಿ.ಶ. ೧೦೪೨ ರ ನಂತರ ಕ್ರಿ.ಶ. ೧೧೬೦ ಕ್ಕಿಂತ ಮುಂಚಿನದೆಂದು ಊಹಿಸಬಹುದು. ಈತನ ವಚನಗಳನ್ನು , ಐತಿಹ್ಯಗಳನ್ನು ಗಮನಿಸಿದರೆ ಈತ ಬಸವಪೂರ್ವ ಯುಗದ ಶರಣನೆಂಬುದು ಸ್ಪಷ್ಟವಾಗಿದೆ.

೧ : ಡಿ.ಟಿ.ಜೋಶಿ - ಪ್ರಾ.ಭಾ.ಇ. ಪುಟ ೨೮೦

ವಚನಾಂಕಿತ :

ಪುರದ ನಾಗಣ್ಣನ ವಚನಾಂಕಿತ 'ಅಮರ ಗುಂಡದ ಮಲ್ಲಿಕಾರ್ಜುನ' ಎಂಬುದನ್ನು ಗಮನಸಿದಾಗ ಇದು ಆತನ ದೈವ ಅಥವಾ ಗುರುವಿನ ಸ್ಮರಣೆಯಾಗಿರಬಹುದೆಂಬ ಸಂದೇಹ ಬರುತ್ತದೆ.ಏಕೆಂದರೆ ಈತನ ವಚನಗಳಲ್ಲಿ ಕಂಡು ಬರುವ ನಿವೇದನ ಸ್ವರೂಪದಿಂದ ಇದು ವ್ಯಕ್ತವಾಗುತ್ತದೆ. ಅಂತೆಯೇ ಇಲ್ಲಿಯ ಸ್ಥಳ ಪುರಾಣದಲ್ಲಿ ಒಂದು ಪದ್ಯ ಹಿಗಿದೆ

' ಇಂದು ಶೋಭಿಸುವ ಮರಗುಂಡವು। ಇಂದು ಮೌಳಿಯ ಶರಣದಿಂದಲಿ। ಚಂದ ನಗರದ ತೆರದಿ ತೋರಿತು ಪೂರ್ವ ಕಾಲದೊಳ ॥

ಒಂದೆ ಭಾವಾದೊಳಮರ ಗುಂಡದೆ। ಮಂದ ಹಾಸದ ಮಲ್ಲಿಕಾರ್ಜುನ। ನಂದು ತಪವನು ಮಾಡಿ ಪಂಡಿತ ತಿಲಕ ನೆನಿಸಿದನು ॥ ೧ ಈ ಪದ್ಯವನ್ನು ಗಮನಿಸಿದಾಗ ಇಲ್ಲಿ ಪ್ರಮುಖವಾಗಿ ಕಂಡು ಬರುವ ಅಂಶಗಳೆಂದರೆ: ಇಂದಿನ ಅಮರೇಶ್ವರ ಕ್ಷೇತ್ರದ ಹೆಸರು ಅಮರಗುಂಡ ಕೂಡ ಎಂಬುದು. ಇಂದು ಮೌಳಿಯ (ಶಿವ) ಶರಣ ಸ್ಥಳ ಇದು, ಮಂದಹಾಸದ ಮಲ್ಲಿಕಾರ್ಜುನ ಎಂಬಾತನು ತಪಸ್ಸು ಮಾಡಿ ಪಂಡಿತ ತಿಲಕ ನೆನಿಸಿಕೊಂಡಿದ್ದು -ಇವೆಲ್ಲ ಗಮನಿಸಿದಾಗ ಕಂಡು ಬರುವು ದೇಸಂಚ ಅಮರಗುಂಡವೆನ್ನುವ ಸ್ಥಳದಲ್ಲಿ ಮಲ್ಲಿಕಾರ್ಜುನವೆಂಬ ಮಹಾ ತಪಸ್ವಿಯ ಪ್ರಭಾವ ಪುರದ ನಾಗಣ್ಣನ ಮೇಲಾಗಿ ಆತ ಅವರನ್ನು ಗುರುವಾಗಿ ಸ್ವೀಕರಿಸಬೇಕೆಂದು ತಿಳಿಯುತ್ತದೆ.

ಇವರ ವಚನವೊಂದು ಹೀಗಿದೆ:

' ಅನಿರ್ವಾಚ್ಯವೆ ವಾಚ್ಯವಾಗಿ ಭಾವಿಸಲಿಲ್ಲದ ಬಯಲು

ಆಗಮ್ಯವೆ ಮನವಾಗಿ ಆನಂದದೊಳಿಪ್ಪ ನೋಡಾ

ಮಹಾ ಮಹಿಮ ಅಮರಗುಂಡದ ಮಲ್ಲಿಕಾರ್ಜುನ

ನಿರಾಳ ನಿಃಶೂನ್ಯವೆ ತನುವಾಗಿ' ೨

ವಚನ ಗಮನಿಸಿದಾಗ ಇದು ಸ್ಪಷ್ಟವಾಗಿ ವ್ಯಕ್ತಿ ಸೂಚಕವಾಗಿ ಕಂಡು ಬರುತ್ತದೆ. ಇದಲ್ಲದೆ 'ನಿಮ್ಮ ನಿಜಾನಂದ ಭಕ್ತಿಯೆ ನಗೆ ಕರುಣಿಸಯ್ಯ ೩ 'ನಿಮ್ಮಾಣೆ ನಿಮ್ಮ ಅರ್ಧಾಂಗಿಯಾಣೆ' ೪ ಎನ್ನುವ ವಚನದ ಸಾಲುಗಳು ಅಮರಗುಂಡದ ಮಲ್ಲಿಕಾರ್ಜುನ ಎಂಬಾತನು ಪುರದ ನಾಗಣ್ಣನ ಗುರುವೆಂದು ಸ್ಪಷ್ಟವಾಗಿ ಊಹಿಸಬಹುದಾಗಿದೆ. ಈತ ಗುರುವಿನ ಎಷ್ಟು ಭಕ್ತಿ ಹೊಂದಿದ್ದಾನೆ ಎಂಬುದಕ್ಕೆ 'ಗುರುಪಾದೋದಕದಿಂದವೆ ಪರಮ ಪದ ವಪ್ಪುದು' ೫ ಎಂದು ಹೇಳಿರುವುದನ್ನು ಗಮನಿಸಿದರೆ ಅಮರಗುಂಡದ ಮಲ್ಲಿಕಾರ್ಜುನವೆಂಬುದು ಆತನ ಗುರುವೂ ಹಾಗೂ ಇಷ್ಟ ದೈವವೂ ಆಗಿದೆಯೆಂಬುದು ಈ ವಚನಾಂಕಿತದಿಂದ ತಿಳಿಯಬಹುದು.

ಪ್ರಸ್ತುತ ಈತನ್ರ ವಚನಗಳು ನಮಗೆ ಕಂಡು ಬರುತ್ತಿದ್ದು ಅವುಗಳ ಭಾಷೆ ಸರಳವಾಗಿದ್ದು ಆತ ಕಲ್ಯಾಣ ಶರಣರ ಸಂಪರ್ಕಕ್ಕೆ ಬಂದಮೇಲೆ ವಚನ ರಚಿಸಿದ್ದು ಸ್ಪಷ್ಟವಾಗುತ್ತದೆ. ಮುಂದೆ ಆತ ಆ ಪರಿಸದಲ್ಲಿಯೇ ಐಕ್ಯನಾಗಿರಬೇಕೆಂದು ತಿಳಿಯುತ್ತದೆ. ಈತ ವಚನಗಳಲ್ಲಿ ಬಳಸುವ ಪಾಪ -ಪುಣ್ಯಗಳ ಪರಿಕಲ್ಪನೆ , ಲಿಂಗದ ಭಿನ್ನತೆಯುಂಟಾದರೇ ಸಾಯಬೇಕೆಂಬ ನಿರ್ಧಾರದ ಅಂಶಗಳನ್ನು ಗಮನಿಸಿದರೆ ಈತ ಬಸವ ಪೂರ್ವಯುಗದ ಶರಣ ನೆಂಬುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಈ ಎಲ್ಲಾ ಅಂಶಗಳಿಂದ ಇನ್ನು ಮುಂದೆ ನಾವು ಈತನ ಬಗ್ಗೆ ಈಗಾಗಲೇ ತುಮಕೂರು ಜಿಲ್ಲೆಯ ಗುಬ್ಬಿಯೆಂದು ಹೇಳುವುದನ್ನು ಕೈ ಬಿಟ್ಟು ರಾಯಚೂರು ಪರಿಸರದ ಶರಣನೆಂಬುದು ಕಂಡು ಕೊಳ್ಳುವುದು ಬಹು ಸೂಕ್ತವಾಗಿದೆ.

---

೧ : ಶ್ರೀ ಶಿವಬಸವ ಶಾಸ್ತ್ರಿ -ಶ್ರೀ.ಅ.ಕ್ಷೇ.ಮ.ಪದ್ಯ ೧೨ ಪುಟ ೪

೨ : ಸಂ: ಡಾ: ಬಿ.ಆರ್. ಹಿರೇಮಠ -ಸ.ವ.ಸಂ. - ೮ ವಚನ ೧ ಪುಟ ೩

೩ : ಅದೇ: ವಚನ ೩ ಪುಟ ೩

೪ : ಅದೇ: ವಚನ ೮ ಪುಟ ೫

೫ : ಅದೇ: ವಚನ ೫ ಪುಟ ೪

೨ : ಬಸವ ಯುಗದ ಶರಣರು

ಹರಿದು ಹಂಚಿ ಹೋಗಿದ್ದ ಮನುಷ್ಯರ ಮಾನವೀಯತೆ, ಬದುಕನ್ನು ಹಸನು ಗೊಳಿಸುವ ಸಂಘರ್ಷ ನಡೆದು ಅದು ಆಂದೋಲನ ಸ್ವರೂಪ ಪಡೆಯ ಬೇಕಾದರೆ ಬಸವಣ್ಣನಂತಹ ಒಬ್ಬ ಕೇಂದ್ರ ವ್ಯಕ್ತಿ ಬೇಕಾಯಿತು. ಅಲ್ಲಲ್ಲಿ ಬಿಡಿಯಾಗಿ ಹರಿದ ಶರಣರ ಚಳುವಳಿ ಮುಂದೆ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಸಂಘರ್ಷಗಳ ಪ್ರಖರತೆಯನ್ನು ಈ ಯುಗದಲ್ಲಿ ಕಂಡು ಕೊಂಡಿತು. ಆ ಕಾರಣದಿಂದಲೇ ನಾಡಿನ ಎಲ್ಲಾ ಕಡೆಯ ಸಮಾನಾಸಕ್ತರು ಆಕರ್ಷಿತರಾಗಿ ಕಲ್ಯಾಣಕ್ಕೆ ಬಂದರು. ಕಲ್ಯಾಣ ಸಮತೆಯ ಕೇಂದ್ರ ನಗರವಾಯಿತು. ಕಲ್ಯಾಣದ ಕಡೆಗೆ ಸಾಗಿದ ಶರಣ ಬಗ್ಗೆ ಈಗಾಗಲೇ ಅನೇಕ ವಿಚಾರಗಳು ಮೂಡಿ ಬಂದಿದೆ. ತಮ್ಮ ಸ್ಥಳದಿಂದ ಆಯಾ ಶರಣರು ಕಲ್ಯಾಣಕ್ಕೆ ಹೋಗಿ ಅಲ್ಲಿದ್ದು ಕೆಲವರು ವಾಪಸ ಮರಳಿದರೆ ಕೆಲವರು ಅಲ್ಲಿಯೇ ಉಳಿದು ಜೀವನದ ಕೊನೆಯ ದಿನ ಕಳೆದರೆ ಮತ್ತೇ ಕೆಲವರು ಕ್ರಾಂತಿಯ ಕಿಡಿಯಲ್ಲಿ ಕರಗಿದರು. ಚದುರಿ ಹೋದರು. ಈ ರೀತಿ ವಾಪಸ್ಸ ಮರಳಿದ, ಉಳಿದ, ಕೊನೆಯ ದಿನ ಕಳೆದ, ಕರಗಿದ, ಚದುರಿದ ಶರಣರು ನಮ್ಮ ಈ ಪರಿಸದಲ್ಲಿದ್ದು ಅವರು ಬಸವ ಯುಗವನ್ನು ಸತ್ವ ಪೂರ್ಣ ಗೊಳಿಸಿದ್ದರು. ಈ ಯುಗದ ಶರಣರನ್ನು ಕುರಿತು ಡಾ : ಕಲಬುರ್ಗಿ, ಡಾ : ಚಿದಾನಂದ ಮೂರ್ತಿ, ಡಾ : ಬಸವಲಿಂಗ ಸೊಪ್ಪಿಮಠ, ಶಾಂತರಸ ಮುಂತಾದವರು ತಮ್ಮ ವಿಚಾರಗಳನ್ನು ಅಭಿವ್ಯಕ್ತ ಗೊಳಿಸಿದ್ದಾರೆ. ಆದರೆ ಈ ಪರಿಸರದ ಈ ಯುಗದ ಶರಣರನ್ನು ಕುರಿತು ಪೂರ್ಣ ಪ್ರಮಾಣದ ಅಧ್ಯಯನಗಳು ಇದುವರೆಗೂ ಮೂಡಿ ಬಂದಿಲ್ಲ. ಆ ಹಿನ್ನೆಲೆಯಲ್ಲಿ ಈ ಯುಗದ ಪ್ರಮುಖ ಶರಣರ ಜೀವನ ವಿಚಾರವಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗುತ್ತದೆ. ಈ ಬಸವ ಯುಗದ ಪ್ರಮುಖ ಶರಣರೆಂದರೆ : -

೧) ಶ್ರೀ ಚೆನ್ನವೀರ ಶರಣರು ೨) ಗೊಬ್ಬೂರಿನ ಬಿಬ್ಬಿ ಬಾಚಯ್ಯ ೩) ಮೊಸರ ಕಲ್ಲಿನ ಅಜಗಣ್ಣ - ಮುಕ್ತಾಯಕ್ಕ

೪) ಆಯ್ದಕ್ಕಿ ಮಾರಯ್ಯ - ಆಯ್ದಕ್ಕಿ ಲಕ್ಕಮ್ಮ ೫) ಸುಂಕದ ಬಂಕಣ್ಣ (ಬಂಕಯ್ಯ) ೬) ಉಳಿಮೇಶ್ವರದ ಚಿಕ್ಕಯ್ಯ (ಚಿಕ್ಕಣ್ಣ)

೧) ಶ್ರೀ ಚೆನ್ನವೀರ ಶರಣರು

ದೇವಸೂಗೂರಿನಲ್ಲಿ ಸೂಗೂರೇಶ್ವರನೆಂದು ಕರೆಯಲ್ಪಡುವ ದೇವಾಲಯದೊಳಗಿನ ವೀರಭದ್ರನ ಮೂರ್ತಿ ಅದು ಮೂಲತಃ ಒಬ್ಬ ಶರಣರದೆಂದು ಖ್ಯಾತವಾಗಿದ್ದು ಆ ಶರಣರೇ ಶ್ರೀ ಚೆನ್ನವೀರ ಶರಣರಾಗಿದ್ದಾರೆ. ಇವರು ತಮ್ಮ ೬ ಸಾವಿರ ಜಂಗಮರೊಂದಿಗೆ ಕಾಶ್ಮೀರದಿಂದ ಕಲ್ಯಾಣಕ್ಕೆ ಬಂದು, ಕಲ್ಯಾಣದಿಂದ ಶರಣ ಬಿಬ್ಬಿ ಬಾಚಯ್ಯನೊಂದಿಗೆ ಗೊಬ್ಬೂರಿನಲ್ಲಿ ನೆಲೆಸಿ ಮುಂದೆ ಕೆಂಚವೀರಯ್ಯ-ಆನಂದರಾಚಯ್ಯರ ಮೂಲಕ ಸೂಗೂರಿಗೆ ಬಂದು ನೆಲೆಸಿ ಅಲ್ಲಿಯೇ ಸ್ಥಿರವಾದರೆಂದು ನಮಗೆ ಸ್ಥಳ ಪುರಾಣಗಳಿಂದ ತಿಳಿದು ಬರುತ್ತದೆ. ಈ ಸ್ಥಳ ಪುರಾಣ, ಗೊಬ್ಬೂರು, ದೇವಸೂಗೂರುಗಳಲ್ಲಿ ಕಂಡು ಬರುವ ಐತಿಹ್ಯ - ಅವಶೇಷ - ಸಂಪ್ರದಾಯಗಳ ಆಚರಣೆಯ ಸಂಗತಿಯ ಮೂಲಕ ಇವರ ಚರಿತ್ರೆಯನ್ನು ಕಟ್ಟಿ ಕೊಡಬಹುದಾಗಿದೆ.

ಸ್ಥಳ :

ಇವರು ಮೂಲತಃ ಶ್ರೀ ಶೈಲ ಪೀಠದ ಗುರುಪರಂಪರೆಯ ಜಂಗಮರೆಂದು ಸ್ಥಳ ಪುರಾಣಗಳಿಂದ ತಿಳಿದು ಬರುತ್ತದೆ. ಇವರು ಮೋಳಿಗೆ ಮಾರಯ್ಯರ ಗುರುವೆಂಬುದಾಗಿ ಸ್ಥಳ ಪುರಾಣಗಳು ಹೇಳುತ್ತಿದ್ದು ; ಅವರು ಕಾಶ್ಮೀರದಲ್ಲಿದ್ದರೆನ್ನಲಾಗಿದೆ. ಆದರೆ ಮಾರಯ್ಯರ ಯಾವುದೇ ವಚನಗಳಲ್ಲಿ ಈ ಕುರಿತ ಪ್ರಸ್ತಾಪ ವಿಲ್ಲದಿದ್ದರೂ ಅವರ ಎರಡು ವಚನಗಳಲ್ಲಿನ 'ಚೆನ್ನ' ಪದದ ಉಲ್ಲೇಖ ಗಮನಾರ್ಹವಾಗಿದೆ. ಇವರ ಸ್ಥಳವನ್ನು ಕುರಿತು ಡಾ : ಬಸವಲಿಂಗ ಸೊಪ್ಪಿಮಠರವರು ಹೇಳಿದ್ದು ಹೀಗೆ: ' ಶ್ರೀ ಚೆನ್ನವೀರರು ತಮ್ಮ ದಿವ್ಯ ಬಾಳಿನ ಪೂರ್ವಾರ್ಧವನ್ನು ಎಲ್ಲಿ ಕಳೆದರೋ ತಿಳಿಯದು. ಕಾಶ್ಮೀರ ದೇಶಕ್ಕೆ ಅವರು ಎಲ್ಲಿಂದ ಹೋದರು, ಬಾಲ್ಯ ಜೀವನ ಎಲ್ಲಿ ಕಳೆದರೂ, ತಂದೆ ತಾಯಿಗಳಾರು ಒಂದು ತಿಳಿಯದು. ಶ್ರೀ ಶೈಲದಿಂದ ಕಾಶ್ಮೀರಕ್ಕೆ ಹೋದರು ಎಂಬ ಮಾತು ದೇವಸೂಗೂರಿನಲ್ಲಿ ಪ್ರಚಲಿತದಲ್ಲಿದೆ. ಇವರ ಹೆಸರನ್ನು ತೆಗೆದು ಕೊಂಡು ಉಗ್ಗಡಿಸುವಾಗ, ಬಿರುದಾವಳಿಯನ್ನು ಉಗ್ಗಡಿಸುವಾಗ 'ಸೂರ್ಯ ಕಾಂತಿ ' ಎಂಬ ಬಿರುದು ಇವರಿದಿದ್ದಂತೆ ಕಂಡು ಬರುತ್ತದೆ. ಶ್ರೀ ಶೈಲ ಮೂಲಿಗರೆಂಬ ನಂಬಿಕೆಯನ್ನು ಮತ್ತು ಈ ಬಿರುದನ್ನು ಜೊತೆಮಾಡಿಕೊಂಡಾಗ ಶ್ರೀ ಶೈಲದ ಸೂರ್ಯಸಿಂಹಾಸನಕ್ಕೂ ಮತ್ತು ಶ್ರೀ ಚೆನ್ನವೀರರಿಗೂ ಏನೋ ಸಂಬಂಧ ಇದ್ದಿರಬೇಕೆಂಬ ಅನುಮಾನ ಪ್ರಬಲವಾಗುತ್ತದೆ'. ೧ ಈ ವಿಚಾರಗಳಿಂದ ಕಂಡು ಬರುವ ಸಂಗತಿಗಳೆಂದರೆ ಇವರು ಕಾಶ್ಮೀರ, ಕಲ್ಯಾಣ, ಗೊಬ್ಬೂರು, ದೇವಸೂಗೂರು ಈ ಸ್ಥಳಗಳೊಂದಿಗೆ ಸಂಪರ್ಕ ಏರ್ಪಟ್ಟಿರುವುದು ತಿಳಿದು ಬರುತ್ತದೆ. ಇತ್ತೀಚಿನ ವರೆಗೂ ಮೋಳಿಗೆ ಮಾರಯ್ಯ ಕಾಶ್ಮೀರದವರೆಂಬ ಸಂಗತಿಯಿತ್ತು. ಆದರೆ ಡಾ : ಸುಶೀಲಾ ನರಕೆಯವರು ತಮ್ಮ ಪಿಹೆಚ್.ಡಿ. ಪ್ರಬಂಧದಲ್ಲಿ ' ಮೋಳಿಗೆ ಮಾರಯ್ಯ - ಮಹಾದೇವಿಯಕ್ಕ' ಒಂದು ಅಧ್ಯಯನದಲ್ಲಿ ಈ ದಂಪತಿಗಳದ್ದು ಮೂಲತಃ ಕಾಶ್ಮೀರವಲ್ಲವೆಂದು ತಿಳಿಸಿದ್ದಾರೆ. ಅಲ್ಲದೇ ಅವರು ' ಸವಾಲಕ್ಕ ' ಎಂಬುದು ಒಂದು ಪ್ರದೇಶ. ಆ ಪ್ರದೇಶದವರೇ ಇವರು. ಚಾಲುಕ್ಯ ಮಾಂಡಳಿಕರಾದ ಗೋವಾ ಕದಂಬರ ಆಳ್ವಿಕೆಗೊಳಪಟ್ಟ ಗೋವಾದಲ್ಲಿರುವ ಕವಡಿ ದ್ವೀಪದ (ಕಪರ್ದಿಕಾ) ಸವಾಲಕ್ಕದವರೆಂದು ಅಭಿಪ್ರಾಯ ಪಟ್ಟಿದ್ದಾರೆ.

---

೧ : ಡಾ: ಬಸವಲಿಂಗ ಸೊಪ್ಪಿಮಠ-ಸೂಗೂರ ಸಂಪದ ಪ್ರಸಾವನೆ ಪುಟ ೧೬

ಇವರ ಈ ಅಭಿಪ್ರಾಯವನ್ನು ಗಮನಿಸಿದರೆ ಶ್ರೀ ಚೆನ್ನವೀರ ರೊಂದಿಗೆ ಹೆಸರಿಸುವ ಕಾಶ್ಮೀರದ ಸಂಬಂಧಕ್ಕೆ ಅರ್ಥವಿಲ್ಲದಾಗುತ್ತದೆ. ಅಂತೆಯೇ ಸ್ಥಳ ಪುರಾಣಗಳ ಮಾತುಗಳಿಗೆ ಖಾಚಿತ್ಯತೆ ಕಂಡುಬರುವುದಿಲ್ಲವೆಂಬುದನ್ನು ಗಮನಿಸಬಹುದಾಗಿದೆ. ಮೋಳಿಗೆ ಮಾರಯ್ಯನದು ಕಾಶ್ಮೀರ ವಾಗಿರದಿದ್ದರೂ ಆತ ಇವರ ಶಿಷ್ಯನೆಂಬುದು ಸ್ಪಷ್ಟವಾಗಿದೆ. ' ಎರಡು ವಚನಗಳನ್ನು ಬಿಟ್ಟರೆ ಉಳಿದೆಲ್ಲ ಕಡೆಗಳಲ್ಲಿ ನಿಃಕಳಂಕ ಮಲ್ಲಿಕಾರ್ಜುನಾ ಅಂಕಿತವೇ ಬಳಕೆಯಾಗಿದೆ. ಇದರಲ್ಲಿ ಯಾವುದು ಮೂಲವೋ ತಿಳಿಯದು. ಮಾರಯ್ಯನ ಗುರು ಮೂಲ ಚೆನ್ನವೀರರಾಗಿರುವುದರಿಂದ ಆರಂಭದ ಎರಡು ವಚನಗಳಲ್ಲಿ ಗುರುವನ್ನು ಸ್ಮರಿಸಿ ' ಚೆನ್ನ' ಪ್ರಯೋಗ ಮಾಡಿದರೆ? ವಚನಗಳ ದೈನ್ಯ ಭಾವ ಮಾರಯ್ಯನ ಆರಂಭಕಾಲದ ವಚನಗಳಿವೂ ಎಂಬ ಅನುಮಾನ ಮೂಡಿತ್ತದೆ. ಮುಂದಿನ ಕಾಲದಲ್ಲಿ ಆತನೇ ಮುದ್ರಿಕೆಯಲ್ಲಿನ ಚೆನ್ನ ಮೇಲೆ ನೋಡಿದಂತೆ ಮಾರಯ್ಯನ ಗುರು ಚೆನ್ನವೀರ ಜಂಗಮರೇ ಅರ್ಥಾತ್ ಸೂಗೂರೇಶ್ವರರೇ'೧ ಎಂದು ಡಾ: ಬಸವಲಿಂಗ ಸೊಪ್ಪಿಮಠರವರು ಊಹೆಮಾಡಿದ್ದು ಸಮರ್ಪಕವಾಗಿದೆ. ಈ ಊಹೆಯನ್ನು ಆಧರಿಸಿ ವಿವೇಚಿಸುವುದಾದರೆ ಚೆನ್ನವೀರ ಶರಣರು (ಜಂಗಮ) ಕಲ್ಯಾಣದಲ್ಲಿದ್ದು ಶರಣರ ಧ್ಯೇಯವನ್ನು ಪ್ರಚಾರ ಮಾಡುವ ಗುಂಪಿನ ಮುಖಂಡರಾಗಿರಬೇಕು. ಅವರು ಶರಣರ ವಾಣಿಗಳನ್ನು ದೇಶದ ನಾನಾ ಮೂಲೆಯಲ್ಲಿ ಪ್ರಚಾರ ಮಾಡಲು ಸಂಚಾರ ಗೈದಾಗ ಇವರು ಸವಾಲಕ್ಷ ಪ್ರದೇಶಕ್ಕೆ ಭೇಟಿ ನೀಡಿದಾಗ ಅಲ್ಲಿನ ಅರಸ ಮಹಾದೇವ ಭೂಪಾಲನ ಮೇಲೆ ಇವರ ಪ್ರಭಾವವಾಗಿ ಇವರನ್ನು ಗುರುವಾಗಿ ಸ್ವೀಕರಿಸಿಬೇಕು. ಮುಂದೆ ಇವರು ತಮ್ಮ ಆರು ಸಾವಿರ ಜಂಗಮರೊಂದಿಗೆ ಅರಸನ ಪ್ರದೇಶದಲ್ಲಿ ಶರಣ ಧರ್ಮ ಪ್ರಚಾರದಲ್ಲಿ ತೊಡಗಿರಬೇಕು. ಇದನ್ನು ಕಂಡ ಬಸವಣ್ಣ ಕಲ್ಯಾಣದಿಂದ ಸವಾಲಕ್ಕಕ್ಕೆ ಬಂದು ಇವರನ್ನು ಪುನಃ ಕಲ್ಯಾಣಕ್ಕೆ ವಾಪಾಸಾಗಲು ಕೊರಿರಬೇಕು ಆಗ ಮಹಾದೇವ ಭೂಪಾಲನ ರಾಜ್ಯದಿಂದ ಇವರು ಬಸವಣ್ಣನೊಂದಿಗೆ ಜಂಗಮರ ಸಹಿತ ಹೋರಟಾಗ ಅದಕ್ಕೆ ಅರಸನು ಪ್ರತಿರೋಧ ವ್ಯಕ್ತಪಡಿಸಿದಾಗ ಬಸವಣ್ಣ -ಚೆನ್ನವೀರರು ಅರಸನಿಗೆ ಶರಣ ಧರ್ಮದ ಆಶಯ -ವಾಸ್ತವಗಳನ್ನು ತಿಳಿಸಿರಬೇಕು. ಇದರಿಂದ ಪ್ರಭಾವಿತನಾದ ಅರಸ ಮುಂದೆ ಅವರೊಂದಿಗೆ ಆತ ಕಲ್ಯಾಣಕ್ಕೆ ಬಂದು ನೆಲೆಸಿರಬಹುದೆಂದು ನಾವು ಊಹಿಸಬಹುದಾಗಿದೆ.

ಇದೇ ರೀತಿ ಈ ಶರಣರ ಪ್ರಭಾವ ಕಲ್ಯಾಣದಲ್ಲಿದ್ದ ಅನೇಕ ಶರಣರಮೇಲಾಗಿ ಇವರನ್ನು ಹಲವರು ತಮ್ಮ ಪ್ರೀತಿಯ ಗುರುವಾಗಿ ಕಂಡಿರು ಸಾಧ್ಯತೆ ಇದೆ. ಅನೇಕ ಶರಣರು ತಮ್ಮ ವಚನಗಳಲ್ಲಿ ಇವರ ಹೆಸರನ್ನು ವಚನಾಂಕಿತದಲ್ಲಿ ಬಳಸಿಕೊಂಡಿರುವುದು ಸಹಜವಾಗಿದೆ. ಇಷ್ಟೋತ್ತಿಗಾಗಲೇ ಮುಂದೆ ನಡೆದ ರಾಜಕೀಯ ವೈಪರಿತ್ಯಗಳಿಂದಾಗಿ ಕಲ್ಯಾಣ ಕ್ರಾಂತಿ ನಡೆದಾಗ ಇವರು ಬಿಬ್ಬ ಬಾಚಯ್ಯರ ವಿನಂತಿ ಮೇರೆಗೆ ಗೊಬ್ಬೂರಿಗೆ ಬಂದು ಕೆಲವು ಕಾಲ ನೆಲೆಸಿದರೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಮುಂದೆ ಗೊಬ್ಬೂರಿನಲ್ಲಿ ಶರಣರ ಅನುಭಾವಗೊಷ್ಠಿ ನಡೆಸುತ್ತ ಸಮಯ ಕಳೆಯುವಾಗ ವೈದಿಕರೊ ಡನೆ ಸಂಘರ್ಷವೇರ್ಪಡುತ್ತದೆ. ಇಂತಹ ಸಂದರ್ಭದಲ್ಲಿ ಅನೇಕ ಕಹಿ ಘಟನೆಗಳು ನಡೆಯುತ್ತವೆ. ಇದರಿಂದ ಮನ್ನೊಂದು ಇವರು ಆನಂತರದಲ್ಲಿ ಐಕ್ಯರಾಗಿಬೇಕು. ಇವರ ಸ್ಮರಣಾರ್ಥವಾಗಿ ಇವರ ಐಕ್ಯರಾದ ಸ್ಥಳದಲ್ಲಿ ಲಿಂಗವನ್ನು ಕಾಲಾಂತರದಲ್ಲಿ ಸ್ಥಾಪಿಸಿರಬಹುದು. ಇದನ್ನು ಮುಂದೆ ಶಿವಭಕ್ತರಾದ ಕೆಂಚವೀರಯ್ಯ -ಆನಂದ ರಾಚಯ್ಯರು ತಮ್ಮ ಊರಿನಲ್ಲಿರಲಿ ಈ ದೇವರೆಂದು ಬಯಸಿ ಆ ಈಶ್ವರ ಲಿಂಗವನ್ನು ತಂದು ಸೂಗೂರಿನಲ್ಲಿ ಸ್ಥಾಪಿಸಿದ ತರುವಾಯ ಸೂಗೂರಿನ ಈಶ್ವರ ಆನಂತರದಲ್ಲಿ ಸೂಗೂರೇಶ್ವರನೆಂದು ಖ್ಯಾತಿಗೊಂಡಿರಬೇಕು. ಮೂಲತಃ ಚೆನ್ನವೀರ ಶರಣರ ಉಗ್ರಸ್ವರೂಪ ಕಂಡು ಅದರ ಪ್ರತಿಕವಾಗಿ ಆ ಸ್ಥಳದಲ್ಲಿ ವೀರಭದ್ರದೇವರ ಮೂರ್ತಿ ಸ್ಥಾಪನೆಯಾಗಿರಬೇಕೇನಿಸುತ್ತದೆ. ಮುಂದಿನ ದಿನಗಳಲ್ಲಿ ಈ ಮೂರ್ತಿಯನ್ನೇ ಶರಣರೆಂದು ಭಾವಿಸಿ ಆ ಹಿನ್ನೆಲೆಯಲ್ಲಿ ಅವರನ್ನು ಅವತಾರ ಪುರುಷರೆಂದು ಕರೆದು ಕಾವ್ಯ ಪುರಾಣಗಳು ರಚಿತವಾಗಿರಬೇಕೆನಿಸುತ್ತದೆ. ಅನೇಕ ಐತಿಹ್ಯಗಳ ಖ್ಯಾತಿಯಿಂದ ವೀರಭದ್ರನ ದೇವಾಲಯವೇ ನಿರ್ಮಾಣವಾಗಿ ಅದು ಮುಂದೆ ಅರಸರನ್ನು ಪ್ರಭಾವಿತ ಗೊಳಿಸಿ ಅದು ಸುಸಜ್ಜಿತವಾಗಿ ನಿರ್ಮಿಸುವಲ್ಲಿ ಕಾರಣವಾಗಿರಬೇಕು.

ಒಟ್ಟಿನಲ್ಲಿ ಇದುವರೆಗಿನ ವಿವರಣೆಯಿಂದ ಇವರ ಸ್ಥಳದ ಬಗ್ಗೆ ತಿಳಿದು ಬರುವುದೇನೆಂದರೆ ಇವರು ಮೂಲತಃ ಕರ್ನಾಟಕದವರಾಗಿದ್ದು ಕಲ್ಯಾಣದಲ್ಲಿ ಶರಣ ಚಳುವಳಿಯಿಂದ ಆಕರ್ಷಿತಗೊಂಡು ಅಲ್ಲಿ ಜಂಗಮರಾಗಿ ಧರ್ಮ ಪ್ರಚಾರ ಕೈಗೊಂಡು ಮುಂದೆ ಸವಾಲಕ್ಷದಲ್ಲಿ ಕೆಲ ಕಾಲ ಇದ್ದು ಪುನಃ ಕಲ್ಯಾಣಕ್ಕೆ ಬಂದು ಕ್ರಾಂತಿಯ ನಂತರ ಬಿಬ್ಬ ಬಾಚಯ್ಯನೊಂದಿಗೆ ಗೊಬ್ಬೂರಿನಲ್ಲಿ ಬಂದು ತಮ್ಮ ಅಂತಿಮ ದಿನಗಳನ್ನು ಕಳೆದು ಅಲ್ಲಿಯೇ ಐಕ್ಯರಾಗಿರಬೇಕೆನಿಸುತ್ತದೆ.

೧: ಡಾ: ಬಸವಲಿಂಗ ಸೊಪ್ಪಿಮಠ -ಆ. ಸಂಪುಟ೧ -ಪುಟ೧೦೬

ಕಾಲ :-

ಸ್ಥಳ ಪುರಾಣ ಸಮಕಾಲೀನ ಶರಣರೊಂದಿಗೆ ಕೇಳಿ ಬರುವ ಇವರ ಸಾಮಿಪ್ಯ-ವಚನಕಾರರಲ್ಲಿ ಕಂಡುಬರುವ ಚೆನ್ನ ಪದ ನಿರ್ದಿಷ್ಟವಾಗಿ ಇವರನ್ನೇ ಕುರಿತದ್ದು ಇದು ಇವರ ಕಾಲವನ್ನು ನಿರ್ಧರಿಸುವಲ್ಲಿ ಸಹಾಯಕವಾಗುತ್ತದೆ. ' ಪೂರ್ವಾರ್ಧ ಜೀವನ ಬಸವಣ್ಣ , ಮೋಳಿಗೆಯ ಮಾರಯ್ಯನವರಿಂದ ಚಾರಿತ್ರಿಕ ಬೆಂಬಲ ಪಡೆಯುತ್ತಿದ್ದರೆ , ಕಲ್ಯಾಣದಿಂದ ಗೊಬ್ಬೂರು ಮತ್ತು ಆ ಮುಂದೆ ದೇವಸೂಗೂರುವರೆಗಿನ ಶ್ರೀ ಚೆನ್ನವೀರರ ಉತ್ತರಾರ್ಧದ ಜೀವನ ಬಿಬ್ಬಿ ಬಾಚಯ್ಯ ಮೊದಲಾದವರಿಂದ ಐತಿಹಾಸಿಕ ಪುಷ್ಟಿದೊರೆಯುತ್ತದೆ. ಇಲ್ಲೆಲ್ಲ ಬರುವ ಬಸವಣ್ಣ, ಮೋಳಿಗೆ ಮಾರಯ್ಯ , ಬಿಬ್ಬಿ ಬಾಚಯ್ಯ ಎಲ್ಲರೂ ಹನ್ನೆರಡನೆಯ ಶತಮಾನದ ಶರಣರಾಗಿರುವ ಗಮರ್ನಾಹ ಅಂಶವೂ ಕೂಡ ಶ್ರೀ ಚೆನ್ನವೀರರ ಕಾಲ ಕ್ರಿ.ಶ. ೧೨ನೇ ಶತಮಾನವೆಂಬುದನ್ನೇ ಧೃಡ ಪಡಿಸುತ್ತದೆ. '೧ ಮಲ್ಲಟ ಗ್ರಾಮದ ಬಸವಸಮಕಾಲೀನ ಶರಣ ಸುಂಕದ ಬಂಕಯ್ಯ ತನ್ನ ವಚನಗಳಲ್ಲಿ ಸ್ಪಷ್ಟವಾಗಿ ಗುರುವಿನ ಸ್ವರೂಪ ವರ್ಣಿಸುತ್ತಾನೆ . ಇದು ಚೆನ್ನವೀರರ ವ್ಯಕ್ತಿತ್ವದೊಂದಿಗೆ ಬಹು ಸಮರ್ಪಕವಾಗಿ ಹೊಂದಾಣಿಕೆಯಾಗಿದೆ.೨

ಈ ಹಿನ್ನೆಲೆಯಲ್ಲಿ ಸುಂಕದ ಬಂಕಣ್ಣನ ಕ್ರಿ.ಶ.೧೧೨೦-೧೧೮೦ ಎಂದು ಗುರುತಿಸಿದ ಕಾರಣ ಇವರು ಸ್ಪಷ್ಟವಾಗಿ ಬಸವ ಸಮಕಾಲೀನರೆಂದು ಸ್ಪಷ್ಟವಾಗುತ್ತದೆ. ಬಸವಸಮಕಾಲೀನರಾಗಿದ್ದರು ಅವರಿಗಿಂತ ಹಿರಿಯರು .ಸುಂಕದ ಬಂಕಣ್ಣ, ಬಿಬ್ಬಿ ಬಾಚಯ್ಯ ಇವರ ಕಿರಿಯ ಸಮಕಾಲೀನರಾಗಿರುವ ಕಾರಣ ಇವರ ಕಾಲವನ್ನು ಕ್ರಿ.ಶ. ೧೧೨೦ ಎನ್ನಲು ಅಡ್ಡಿ ಇಲ್ಲ. ಇವರು ಕ್ರಿ.ಶ.೧೧೪೦ರ ಸುಮಾರಿಗೆ ಕಲ್ಯಾಣಕ್ಕೆ ಹೋಗಿ, ಕ್ರಿ.ಶ.೧೧೫೦ ರಲ್ಲಿ ಸವಾಲಕ್ಷದಲ್ಲಿದ್ದು ಪುನಃ ಕ್ರಿ.ಶ. ೧೧೬೦ ರ ಸುಮಾರಿನಲ್ಲಿ ಕಲ್ಯಾಣಕ್ಕೆ ಬಂದು ಆ ತರುವಾಯ ಕಲ್ಯಾಣ ಕ್ರಾಂತಿಯ ನಂತರ ಕ್ರಿ.ಶ.೧೧೬೮ ರಲ್ಲಿ ಗೊಬ್ಬೂರಿಗೆ ಬಂದು ಕ್ರಿ.ಶ.೧೧೭೦ ರವರೆಗೂ ಬಾಳಿರಬಹುದೆಂದು ಊಹಿಸಬಹುದಾಗಿದೆ.

ವ್ಯಕ್ತಿತ್ವ :-

ಇವರು ಮೂಲತಃ ಧರ್ಮ ಪ್ರಚಾರದ ಸಂಘಟನಾ ನಾಯಕರು . ಅಲ್ಲಮ ಪ್ರಭುವಿನಂತೆ ಊರೂರು ಸುತ್ತಿದ ಸಂಚಾರಿ ಜಂಗಮರು. ಅಜ್ಞಾನಿಗಳನ್ನು ಬಡಿದೆಚ್ಚರಿಸಿದರವರು. ಇವರು ವಚನ ರಚಿಸಿದ ಬಗ್ಗೆ ಯಾವ ಮಾಹಿತಿಗಳು ನಮಗೆ ತಿಳಿಯುವುದಿಲ್ಲ. ಅನೇಕರಿಗೆ ಮಾರ್ಗದರ್ಶಕರಾದವರು. ಆ ಕಾರಣದಿಂದಾಗಿ ಅನೇಕ ಶರಣರು ತಮ್ಮ ವಚನಾಂಕಿತಗಳಲ್ಲಿ ಚೆನ್ನ ಎಂಬ ಪದವನ್ನು ಉಲ್ಲೇಖಿಸಿಕೊಂಡಿದ್ದನ್ನು ಕಾಣಬಹುದು. ಸ್ಥಳ ಪುರಾಣಗಳಿಂದ ವ್ಯಕ್ತವಾಗುವ ಇವರ ವ್ಯಕ್ತಿತ್ವದ ಉಗ್ರತೆ - ಭವ್ಯತೆಗಳೂ ಕೂಡ ಚೆನ್ನ ಪದದ ನಿರ್ದೇಶಿತ ವಚನಗಳಲ್ಲಿ ಕಾಣಬಹುದು.ಆದರೆ ಬಿಬ್ಬಿ ಬಾಚಯ್ಯನಲ್ಲಿ ಇಂತಹ ವಚನಗಳಾವು ಕಂಡು ಬರದಿದ್ದರೂ ಒಂದು ವಚನ ನಮ್ಮ ಗಮನ ಸೆಳೆಯುತ್ತದೆ.

' ಭಕ್ತನ ಭಕ್ತಿ ಭಾವ, ಮಾಹೇಶ್ವರನ ಮಾಹೇಶ್ವರಭಾವ

ಪ್ರಸಾದಿಯ ಪ್ರಸಾದ ಭಾವ, ಪ್ರಾಣಲಿಂಗಿಯ ಪ್ರಾಣಲಿಂಗ ಭಾವ

ಶರಣನ ಸನ್ನದ್ಧ ಭಾವ, ಐಕ್ಯನ ಐಕ್ಯಭಾವ

ಇಂತೀ ದ್ವಾದಶ ಸ್ಥಲಂಗಳಲ್ಲಿ

ಸಾಗಿಸಿ ನಿಂದ 'ಅನಾಗತ' ಸಿದ್ಧ

ಏಣಾಂಕಧರ ಸೋಮೇಶ್ವರ ಲಿಂಗದಲ್ಲಿ

ಉಭಯಭಾವ ಭಿನ್ನವಿಲ್ಲದ ಶರಣಂಗೆ೩

ಈ ವಚನದಲ್ಲಿ ಕಂಡು ಬರುವ ಅನಾಗತ ಸಿದ್ಧ ಎಂಬುದರ ಅರ್ಥ ಅಪರಿಚಿತರಾದ ಮಹಿಮಾ ಪುರುಷ,ಸಿದ್ಧಿ ಪುರಷನೆಂದಾಗುತ್ತದೆ. ಜೊತೆಗೆ ಚೆನ್ನವೀರರ ವ್ಯಕ್ತಿತ್ವದ ತೇಜಸ್ವಿಯ ಗುಣಗಳು ಸಹ ಈ ವಚನದಲ್ಲಿ ವ್ಯಕ್ತವಾಗಿವೆ. ಬಿಬ್ಬಿ ಬಾಚಯ್ಯ ಕಲ್ಯಾಣಕ್ಕೆ ಆರಂಭದಲ್ಲಿ ಇವರನ್ನು ಕಂಡು ಈ ರೀತಿಯ ತನ್ನ ವಿಚಾರಗಳನ್ನು ವ್ಯಕ್ತಪಡಿಸಿರಬಹುದಾಗಿದೆ.

ಒಟ್ಟಿನಲ್ಲಿ ಶ್ರೀ ಚೆನ್ನವೀರ ಶರಣರು ಕಲ್ಯಾಣ ಪರಿಸರದ ಅಲ್ಲಮ ಪ್ರಭುವಿನಂತೆ ಇಡೀ ನಾಡನ್ನು ಸುತ್ತಿ ಲೋಕೋದ್ಧಾರವನ್ನು ಕೈಗೊಂಡ ಸಂಚಾರಿ ಶರಣ- ಜಂಗಮ ಶ್ರೇಷ್ಠರೆನ್ನಬಹುದಾಗಿದೆ.

---

೧ : ಡಾ: ಬಸವಲಿಂಗ ಸೊಪ್ಪಿಮಠ- ಸೂಗೂರ ಸಂಪದ ಪ್ರಸ್ತಾವನೆ ಪುಟ ೧೪

೨ : ಇದರ ವಿವರಣೆಗಾಗಿ ಇದೇಪ್ರಬಂಧದ ಪುಟ -೭೨ ಗಮನಿಸಿರಿ (72)

೩ : ಸಂ: ಡಾ : ಬಿ.ಆರ್. ಹಿರೇಮಠ -ಸ.ವ.ಸಂ. -೮ ವಚನ೫೫, ಪುಟ ೧೩೦

೨) ಗೊಬ್ಬೂರು ಬಿಬ್ಬಿ ಬಾಚಯ್ಯ

ಪ್ರಾಮಾಣಿಕ ಸತ್ಯ ಶುದ್ಧ ಕಾಯಕಕ್ಕೆ ತಮ್ಮ ಜೀವನವನ್ನು ಮುಡಿಪಾಗಿರಿಸಿದ ಶರಣರ ವಸ್ತುನಿಷ್ಠವಾದ ಚರಿತ್ರೆ ಕಟ್ಟಿ ಕೊಡುವಲ್ಲಿ ನಮಗೆ ಸಾಕ್ಷ್ಯಾಧಾರಗಳ ಕೊರತೆ ಕಂಡು ಬರುತ್ತಿದ್ದರೂ ಶರಣರ ವಚನ, ಸಮಕಾಲೀನ ಶರಣರ ವಚನ, ಪುರಾಣ ಕಾವ್ಯಗಳೇ ಪ್ರಮುಖ ಆಧಾರವಾಗಿ ನಿಲ್ಲುತ್ತದೆ. ಈ ದಿಸೆಯಲ್ಲಿ ಶರಣ ಬಿಬ್ಬಿ ಬಾಚಯ್ಯರನ್ನು ಕುರಿತು ಆಲೋಚಿಸುವುದಾದರೆ:-

'ಪ್ರಸಾದ ಪ್ರಸಾದಿ ಬಿಬ್ಬಿ ಬಾಚಯ್ಯ' ೧ ಎಂದು ಚೆನ್ನ ಬಸವಣ್ಣನವರ ಪ್ರಶಂಸೆಗೊಳಪಟ್ಟ ಇವರ ಪ್ರಸಾದ ನಿಷ್ಠೆ ಮತ್ತು ಇತರ ಜೀವನಾಂಶಗಳನ್ನು ಕುರಿತ ವಿವರಣೆಯನ್ನು ಕೆಲಮಟ್ಟಿಗೆ ನಮ್ಮ ಕೆಲವು ಪುರಾಣ ಕಾವ್ಯಗಳು ಕಟ್ಟಿ ಕೊಡುತ್ತವೆ. ಅವುಗಳೆಂದರೆ :-

೧ : ಬಸವಪುರಾಣ - ಸಂಧಿ೫೫, ಪದ್ಯ೧-೩೨

೨ : ಶಿವತತ್ವ ಚಿಂತಾಮಣಿ - ಸಂಧಿ೩೭, ಪದ್ಯ ೧೧೭

೩ : ಶ್ರೀ ಸಿದ್ದೇಶ್ವರ ಪುರಾಣ - ಸಂಧಿ೨೦ ಪದ್ಯ ೧೫

೪ : ರಾಘವಾಂಕ ಚರಿತೆ - ಸಂಧಿ೧೨, ಪದ್ಯ ೪೯-೫೩

೫ : ತೆಲಗು ಬಸವ ಪುರಾಣ- ೨ ಮತ್ತು ೭ನೇ ಆಶ್ವಾಸಗಳು

೬ : ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ ಭಾಗ೧ - ಪುಟ೨೩೬, ಭಾಗ೨ - ಪುಟ೪೩೮ ರಿಂದ ೪೪೯

೭ : ಭಕ್ತಿರಸದ ಸೋನೆ

೮ : ಭೈರವೇಶ್ವರ ಕಾವ್ಯ

೯ : ಶ್ರೀ ಸೂಗೂರೇಶ್ವರ ಪುರಾಣ

ಮೇಲಿನ ಈ ಎಲ್ಲಾ ಕಾವ್ಯ ಕೃತಿಗಳಲ್ಲಿ ಕಂಡು ಬರುವ ಈ ಶರಣರ ಸ್ಥೂಲ ಚರಿತ್ರೆ ಹೀಗಿದೆ:-

ಬಿಬ್ಬಿ ಬಾಚಯ್ಯರು ಒಮ್ಮೆ ಎತ್ತಿನ ಗಾಡಿಯನ್ನು ಸಿಂಗರಿಸಿ, ಊರೂರು ಅಲೆದು ಆಹಾರ ಪದಾರ್ಥಗಳನ್ನು ಶೇಖರಿಸಿಕೊಂಡು ತರುತ್ತಿದ್ದರು. ಕೆಳಜಾತಿಯವರ ಮನೆಯಲ್ಲಿಯೂ ಸಹ ಸಂಗ್ರಹಿಸಿಕೊಂಡು ಬರುವುದನ್ನು ಕಂಡ ವಿಪ್ರರು ದಾರಿಯ ನಡುವ ತಡೆದು ಪ್ರಸಾದವನ್ನು ಎಂಜಲೆಂದು ನಿಂದಿಸುತ್ತಾರೆ. ಪ್ರಸಾದವನ್ನು ನೆಲಕ್ಕೆ ಚೆಲ್ಲುತ್ತಾರೆ. ಚೆಲ್ಲಿದ ಕೂಡಲೇ ಉರಿಯೆದ್ದು ಅದು ವಿಪ್ರರ ಮನೆಯನ್ನು ಸುಡಲಾರಂಭಿಸುತ್ತದೆ. ಆಗ ಅವರು ತಮ್ಮ ತಪ್ಪನ್ನು ಮನ್ನಿಸಲು ಕೋರಿದಾಗ ಅವರಿಗೆ ಪ್ರಸಾದ ಮಹತ್ವ ತಿಳಿಸಿ ಶಿವದೀಕ್ಷೆ ನೀಡಿ ಅವರ ಉರಿಶಮನಗೊಳಿಸುತ್ತಾರೆ. ಈ ಸ್ಥೂಲ ಚರಿತ್ರೆಯಿಂದ ನಾವು ಇವರ ಬಗ್ಗೆ ಕೆಲವು ವಿವರಗಳನ್ನು ತಿಳಿದುಕೊಳ್ಳಬಹುದಾಗಿದೆ.

ಸ್ಥಳ :

ಕಾವ್ಯಗಳು ಕಟ್ಟಿ ಕೊಡುವ ಗೊಬ್ಬೂರು ಕಲುಬುರ್ಗಿ ಜಿಲ್ಲೆಯ ಗೊಬ್ಬೂರು ಆಗದೇ ರಾಯಚೂರು ಜಿಲ್ಲೆಯ ಗೊಬ್ಬೂರು ಎಂಬುದನ್ನು ಆಧಾರಸಹಿತವಾಗಿ ಡಾ: ಬಸವಲಿಂಗ ಸೊಪ್ಪಿಮಠರವರು ಖಚಿತ ಪಡಿಸಿದ್ದಾರೆಂಬುದು ಗಮನಾರ್ಹ ಅಂಶವಾಗಿದೆ. ೨

ನಾನು ಕ್ಷೇತ್ರ ಕಾರ್ಯ ಕೈಗೊಂಡಾಗ ಇಂದಿಗೂ ರಾಯಚೂರು ಜಿಲ್ಲೆಯ ಗೊಬ್ಬೂರಿನಲ್ಲಿ ಬಿಬ್ಬಿ ಬಾಚಯ್ಯರ ಹೊಲ, ಅರ್ಪಣ ಕಟ್ಟೆ, ಆ ಕಟ್ಟೆಯಲ್ಲಿಯೇ ಇವರ ಸಮಾಧಿ ಇದೆ. ಇಂದಿಗೂ ಬಾಚಯ್ಯ, ಬಿಬ್ಬಣಯ್ಯ ಎಂಬ ಹೆಸರುಗಳನ್ನು ಈ ಊರಿನಲ್ಲಿ ಕರೆಯುವ ಪರಂಪರೆ ಇದೆ. ಈತ ಇದೇ ಊರಿನವರು ಎಂಬುದಕ್ಕೆ ನಮಗೆ ಅವರು ದಾಸೋಹ ನಡೆಸುತ್ತಿದ್ದ ಅರ್ಪಣ ಕಟ್ಟೆ ಅವರ ಹೊಲದಲ್ಲಿ ಕಂಡುಬರುತ್ತದೆ. ಯಾವುದೇ ಕಾವ್ಯಗಳು ಸ್ಪಷ್ಟವಾಗಿ ಈ ಕುರಿತು ಹೇಳದಿದ್ದರೂ ಉತ್ತರ ದೇಶದ ಬಸವಲಿಂಗರು ಕೊಡುವ ೨೬೮ನೇ ಕಥೆ ಮುಖ್ಯವಾಗಿದೆ.

'ಒಂದು ದಿನ ಪೆದ್ದವಾಡದ ಹಿರಿಯ ಭಕ್ತರ ಮನೆಯ ಪ್ರಸಾದ ತರುವಾಗ ವಾಮನಾರ್ಯ, ಬಲರಾಮ, ಮಂಚಿಗ ಕೂಚಿಗ, ಅಪ್ಪಣ ಪಂಡಿತ, ಶ್ರೀರಾಮ, ದಾಮೋದರ ಪಂಡಿತ, ಜನಿಶಿಷ್ಟವಾಮ ಭಾಸ್ಕರ, ದುಷ್ಟ ಕೇಶವ , ಅಚ್ಯುತ, ಹೆಗಲಿಟ್ಟಪ್ಪ, ತೊಗೆಯ ಚಿನ್ನಪ್ಪ, ದೊಡ್ಡ ಹೊಟ್ಟೆಯ ಮಾಧವ, ಗಡ್ಡದಾದಿತ್ಯ, ಗುಡ್ಡ ಹರಿದೊಡ್ಡ ರಾಮ, ಹೆಡ್ಡ ದಾಮೋದರ ಮೊದಲಾದವರು' ೩

ಇಲ್ಲಿ ಸ್ಪಷ್ಟವಾಗಿ ಉತ್ತರ ದೇಶದ ಬಸವಲಿಂಗ ಹೇಳುವ ಹೆಸರಿನಲ್ಲಿ ಸದ್ಯ ಬಲರಾಮ, ಮಾಧವ, ದಾಮೋದರ ಎಂಬ ಹೆಸರುಗಳ ಪರಂಪರೆ ಇಂದಿಗೂ ಗೊಬ್ಬೂರಿನಲ್ಲಿದೆ. ಪೆದ್ದವಾಡ ವೆಂಬುದು ಕೆಳವರ್ಗದವರ ಮನೆಯೆಂಬುದು ಸ್ಪಷ್ಟವಾಗಿದೆ. ಈ ಘಟನೆ ನಡೆದಿದ್ದು ರಾಯಚೂರು ಜಿಲ್ಲೆಯ ಗೊಬ್ಬೂರ ಆಗಿದೆ ಹೊರತು ಹಳಕಟ್ಟಿಯವರು ಹೇಳುವ ಹಾಗೇ ಕಲಬುರ್ಗಿ ಜಿಲ್ಲೆ ಗೊಬ್ಬೂರು ಅಲ್ಲ. ಡಾ: ಸೊಪ್ಪಿಮಠರ ಅಭಿಪ್ರಾಯವೇ ಬಹು ಸಮರ್ಪಕವಾಗಿದೆ.

---

೧ : ಸಂ: ಡಾ : ಬಿ.ವಿ. ಮಲ್ಲಾಪುರ -ಸ.ವ.ಸಂ.-೩ ವಚನ ೫೫, ಪುಟ೯೧

೨ : ಡಾ : ಬಸವಲಿಂಗ ಸೊಪ್ಪಿಮಠ-ಆ. ಸಂಪುಟ೧, ಪುಟ೯೭-೧೦೦

೩ : ಸಂ : ಎಸ್. ಉಮಾಪತಿ - ಬ.ಕ.ಸಾ. ಕಥೆ ೨೬೮

ಕಾಲ :-

ಕಲ್ಯಾಣ ಶರಣರಲ್ಲಿ ಮೇಲಿಂದ ಮೇಲೆ ಸ್ಮರಣೆಗೊಳ್ಳುತ್ತಿರುವ ಇವರ ಹೆಸರನ್ನು ಗಮನಿಸಿದರೆ ಇವರ ಕಾಲ ಬಸವಸಮಕಾಲೀನವೆಂಬುದು ಸ್ಪಷ್ಟವಾಗಿದೆ.

ಪ್ರಸಾದ ಘಟನೆ ನಡೆದುದ್ದು ಕಲ್ಯಾಣ ಕ್ರಾಂತಿ ಗೆ ಮುನ್ನವಾಗಿದೆ ಎಂಬುದಕ್ಕೆ ಸಕಲೇಶ ಮಾದರಸ, ಮಡಿವಾಳ ಮಾಚಯ್ಯರ ವಚನಗಳೇ ಸಾಕ್ಷಿಯಾಗಿವೆ. ಆದರೆ ಈ ವಚನಗಳನ್ನು ಉಲ್ಲೇಖಿಸಿ ಡಾ:ವ್ಹಿ.ಜಿ. ಪೂಜಾರ್ ರವರು ' ಈ ವಚನಗಳಿಂದ ಪ್ರೇರಿತರಾಗಿ ಜನ ಮತ್ತು ಕವಿಗಳು ಬಿಬ್ಬಿ ಬಾಚಯ್ಯನ ಪ್ರಸಾದ ಚೆಲ್ಲಿ ವಿಪ್ರರ ಮನೆಗಳು ದಹಿಸುವಂತೆ ಮಾಡಿದನು ಎಂದು ಪವಾಡ ಕಥೆ ಕಟ್ಟಿ ವರ್ಣಿಸಿದಂತಿದೆ. ಪವಾಡ ಕಥೆಯಿಂದಲೂ ಆಮೇಲೆ ಸೃಷ್ಟಿಯಾದ ವಚನಗಳು ಇವಾಗಿರುವ ಸಂಭವನೀಯ ವಿದೆ.' ೧

ವಸ್ತುನಿಷ್ಠವಾಗಿ ಅಭ್ಯಸಿಸಿದರೆ ಪ್ರಸಾದ ಘಟನೆ ಮುಖ್ಯವಾಗಿ ಶರಣ ಧರ್ಮದ ಅಡಿಪಾಯದ ಮೇಲೆ ನಡೆದ ಘಟನೆಯಾಗಿದೆ. ಇದನ್ನು ಬಸವ ಸಮಕಾಲೀನ ಶರಣರು ಸ್ಮರಿಸಿದ್ದನ್ನು ಗಮನಿಸಿದರೆ ಇವರು ಪ್ರಸಾದ ಮಹತ್ವವನ್ನು ವಿಪ್ರರಿಗೆ ತಿಳಿಸಿ ಅದು ಸಹ ಹೇಗೆ ಜೀವನಕ್ಕೆ ಆಧಾರ, ಸಕಲ ಜೀವ ರಾಶಿಗಳಲ್ಲಿ ಅನ್ನದ ಮಹತ್ವ ತಿಳಿಸಿ ಕ್ಷುಲ್ಲಕ ಮನಸ್ಸಿನ ವಿಪ್ರರನ್ನು ತಮ್ಮ ಬೋಧನೆಗಳಿಂದ ಅವರ ಮನಸ್ಸನ್ನು ಕರಗಿಸಿ ಅವರಿಗೆ ಶಿವದೀಕ್ಷೆ ನೀಡಿರಬೇಕು. ಇದೇ ಕ್ರಮೇಣ ಮುಂದೆ ಹಲವರಿಗೆ ಆಗಾಧವಾದ ಕಾರ್ಯವಾಗಿ ಕಂಡಿರಬೇಕು. ವಚನ ಕಾರರು ಸ್ಮರಿಸುವ ಕಾರಣ ಮುಂದಿನ ಕೃತಿಕಾರರು ಇದನ್ನು ಪುರಾಣ ಕಥೆಯಾಗಿ-ಪವಾಡವೆಂಬಂತೆ ಅತಿ ರಂಜಿತವಾಗಿ ವರ್ಣಿಸಿರಬಹುದಾಗಿದೆ. ಈ ಕುರಿತು ಬಿಬ್ಬಿ ಬಾಚಯ್ಯರ ವಚನಗಳಲ್ಲಿ ವ್ಯಕ್ತವಾಗದಿದ್ದರೂ ಇತರ ಶರಣರ ವಚನಗಳಲ್ಲಿ ವ್ಯಕ್ತವಾಗತ್ತದೆ. ಈ ಘಟನೆ ನಡೆದಿದ್ದು ಕಲ್ಯಾಣ ಕ್ರಾಂತಿಗಿಂತ ಮೊದಲೆಂಬುದು ನಿಶ್ಚಿತವಾಗಿದೆ.

ಕೊಂಡಗುಳಿ ಕೇಶಿರಾಜ ಸಮಕಾಲೀನರೆಂಬ ಅಭಿಪ್ರಾಯ ಡಾ: ಚಿದಾನಂದಮೂರ್ತಿಗಳದಾಗಿದೆ.೨ ಹಾಗಾದರೇ ವಿದ್ವಾಂಸರು ಅಭಿಪ್ರಾಯ ಪಡುವಂತೆ ಕೊಂಡಗುಳಿ ಕೇಶಿರಾಜನ ಕಾಲ ಬಸವ ಪೂರ್ವ ಯುಗದ್ದು (ಕ್ರಿ.ಶ.೧೧೦೭-೧೧೩೭) ಹಾಗಾಗಿ ಇವರು ಈ ಕಾಲದವರಲ್ಲವೆಂಬುದು ನಮಗೆ ಸ್ಪಷ್ಟವಾಗಿ ಕಂಡುಬರುತ್ತದೆ. ಇವರ ವಚನಗಳ ಭಾವ-ವಸ್ತು ವೈವಿಧ್ಯ ಗಮನಿಸಿದರೆ ಇವರು ಬಸವ ಸಮಕಾಲೀನರೆಂಬುದು ಸ್ಪಷ್ಟವಾಗುತ್ತದೆ. ಕಲ್ಯಾಣ ಶರಣರ ಪ್ರಭಾವಕ್ಕೊಳಗಾಗಿ ಕಲ್ಯಾಣಕ್ಕೆ ಹೋಗಿ ಅಲ್ಲಿ ಶ್ರೀ ಚೆನ್ನವೀರ ಶರಣರಿಂದ ಪ್ರಭಾವಿತರಾಗಿ ಅವರಿಂದ ಲಿಂಗ ದೀಕ್ಷೆ ಪಡೆದು ತರುವಾಯ ಚೆನ್ನವೀರ ಶರಣರೊಡನೆ ಗೊಬ್ಬೂರಿಗೆ ಬಂದು ಕೆಲವು ಕಾಲ ತಮ್ಮ ಪೂರ್ವದ ಹೊಲದಲ್ಲಿ ತಂಗಿದ್ದು ,ಗುರು ಚೆನ್ನವೀರ ಶರಣರು - ಆರುಸಾವಿರ ಜಂಗಮರ ಪ್ರಸಾದ ಹೊಣೆಯನ್ನು ಹೊತ್ತು ಅದಕ್ಕಾಗಿ ಅವರು ಎಲ್ಲಾ ಗ್ರಾಮಗಳಿಂದ ವಿಶೇಷವಾಗಿ ಶಿವ ಭಕ್ತರಿಂದ ಆಹಾರ ಸಂಗ್ರಹಿಸಿ ಅದನ್ನು ಊರಿನಿಂದ ದೂರವಿರುವ ಅರ್ಪಣ ಕಟ್ಟೆಯಲ್ಲಿ ಶಿವಾನುಭವದ ಜೊತೆಗೆ ಅನ್ನದಾಸೋಹ ನಡೆಸಿರಬಹುದಾದ ಸಾಧ್ಯತೆ ಇದೆ.

ಕಲ್ಯಾಣ ಕ್ರಾಂತಿಯ ತರುವಾಯ ಸುಮಾರು ಮೂರು ದಶಕಗಳ ಕಾಲ ಇವರು ಬಾಳಿದ್ದನ್ನು ಗಮನಿಸಿದರೆ ಕ್ರಿ.ಶ.೧೧೨೦ ರಿಂದ ಕ್ರಿ.ಶ.೧೯೯೦ ವರೆಗೆ ಇವರ ಕಾಲ ಕಂಡು ಬರುತ್ತದೆ. ಕ್ರಿ.ಶ. ೧೧೬೦ ಸುಮಾರಿಗೆ ಕಲ್ಯಾಣಕ್ಕೆ ಹೋಗಿರಬಹುದಾಗಿದೆ. ಮುಂದೆ ಕ್ರಾಂತಿಯ ನಂತರ ಚೆನ್ನವೀರರನ್ನು ಜಂಗಮರ ಸಹಿತವಾಗಿ ಕ್ರಿ.ಶ. ೧೧೬೮ ಸುಮಾರಿಗೆ ಗೊಬ್ಬೂರಿಗೆ ಕರೆತಂದು ಕ್ರಿ.ಶ. ೧೧೭೦ ರಲ್ಲಿ ಚೆನ್ನವೀರ ಶರಣರೊಡನೆ ಐಕ್ಯವಾಗಿರಬಹುದು. ಅಥವಾ ಅವರನಂತರ ಜಂಗಮದಾಸೋಹವನ್ನು ನಡೆಸುತ್ತ ಕ್ರಿ.ಶ.೧೯೯೦ ರಲ್ಲಿ ಐಕ್ಯ ರಾಗಿರಬಹುದಾದ ಸಾಧ್ಯತೆ ಇದೆ. ಹೀಗಾಗಿ ಇವರು ಬಸವ ಸಮಕಾಲೀನ ಶರಣರೇ ಹೊರತು ಬಸವಪೂರ್ವದವರಲ್ಲವೆಂಬುದು ಸ್ಪಷ್ಟವಾಗಿದೆ.

ಕಾಯಕ :

ಯಾವುದೇ ಕೃತಿಗಳು ನಿರ್ದಿಷ್ಟವಾಗಿ ಈತನ ಕಾಯಕವನ್ನು ಸ್ಪಷ್ಟವಾಗಿ ಹೇಳುವುದಿಲ್ಲ. ಸಮಕಾಲೀಕನ ಶರಣರ ವಚನಗಳಲ್ಲಿ ಈತನ ಕಾಯಕದ ಬಗ್ಗೆ ಉಲ್ಲೇಖ ಕಂಡು ಬರುವುದಿಲ್ಲ. ಕೇವಲ ಆತನ ಪವಾಡಕತೆಗೆ ಸಂಬಂಧಿಸಿದಂತೆ ವಚನಗಳು.ಈತನ ಕೆಲಸ ಜನರನ್ನು ನಗಿಸುವುದು, 'ಹಾಸ್ಯ ವೃತ್ತಿಯಿಂದ ಕಾಯಕ ಮಾಡಿ ಎಲ್ಲವೂ ಶಿವನಿಗೆ ಅರ್ಪಿಸಿ ಜನತೆಗೆ ನೀಡಿರುವ ಜ್ಞಾನ ಸಣ್ಣದಲ್ಲ.' ಎಂಬುದಾಗಿ ಸೂಗಯ್ಯ ಹಿರೇಮಠ ಅಭಿಪ್ರಾಯ ಪಡುತ್ತಾರೆ.೩ ಬಾಚಯ್ಯರ ಹೆಸರಿನ ಹಿಂದೆಇರುವ 'ಬಿಬ್ಬಿ' ಪದವನ್ನು ಕುರಿತು ಆಲೋಚಿಸಿದಾಗ ಈ ಪದ ಕುರಿತಾಗಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ.

ಬಿಬ್ಬಿ ಬಾಚಯ್ಯನ ಊರು ಗೊಬ್ಬೂರು ಎಂಬುದು ಸ್ಪಷ್ಟವಾಗಿರುವ ಕಾರಣ ಇದು ಊರಿನ ಹೆಸರಾಗಿಲ್ಲವೆಂಬುದು ನಮಗೆ ತಿಳಿದು ಬರುತ್ತದೆ. ವೃತ್ತಿ ಅಥವಾ ಜಾತಿ ಸೂಚಕವೆಂದು ಕರೆಯ ಬೇಕೆಂದರೆ ಬಿಬ್ಬಿಗೆ ನಿಘಂಟುವಿನಲ್ಲಿ 'ಬೀಬಿ' ಎಂಬಾರ್ಥವನ್ನೇ ಹೇಳಿದ್ದು ಅದು ಮುಸ್ಲಿಂ ಸ್ತ್ರೀ ಎಂಬಾರ್ಥನೀಡುತ್ತದೆ.ಪ್ರೊ. ಜಿ.ವೆಂಕಟ ಸುಬ್ಬಯ್ಯನವರು ನನಗೆ ಬರೆದ ಪತ್ರದಲ್ಲಿ ಸಹ ಇದನ್ನೇ ಅನುಮೋದಿಸಿದ್ದಾರೆ. ಈ ಕುರಿತು ಸುಧೀರ್ಘವಾಗಿ ಚರ್ಚಿಸಿದ ಡಾ: ಬಸವಲಿಂಗ ಸೊಪ್ಪಿಮಠರವರು ವ್ಯಕ್ತಪಡಿಸುವ ಅಭಿಪ್ರಾಯವೆಂದರೆ:

೧: ಡಾ:ವ್ಹಿ.ಜಿ. ಪೂಜಾರ್-ವೀ.ಸಾ.ಪ.ಪುಟ೮೧

೨: ಡಾ: ಎಂ.ಚಿದಾನಂದ ಮೂರ್ತಿ - ವೀ.ಭಾ.ಸಂ.ಪುಟ೫೯

೩: ಶಾಂತರಸ-ಕಾ.ಪ. ಪುಟ೧೨೭೩

'ಬಿಬ್ಬರ ಎಂದ ಶಬ್ದ ಕಿಟ್ಟೆಲ್ ಕೋಶದಲ್ಲಿ ಸಿಗುತ್ತಿದ್ದು ಬಿಬ್ಬಿ ಇಲ್ಲವೇ ಬಿಬ್ಬ ಪದದಿಂದ ಇದು ಸಿದ್ಧಿಸಿರಬೇಕುಎಂಬುದು ನನ್ನ ಅನುಮಾನ . ಬಿಬ್ಬರ ಮತ್ತು ಬಿಬ್ಬಿ ಪದಕ್ಕೆ burstingly, to burst'ಅರ್ಥಹೇಳಲಾಗಿದೆ burst'ಎನ್ನುವದು ಸ್ಫೋಟನ ಗುಣವನ್ನು ಹೇಳುತ್ತಿದ್ದು ಬಾಚಯ್ಯನ ಉಗ್ರತೆಯನ್ನು ಇದು ಸೂಚಿಸುತ್ತಿರಬೇಕೆ ? ಗೊಬ್ಬೂರಿನ ವಿಪ್ರರು ಪ್ರಸಾದವನ್ನು ಎಂಜಲೆಂದು ಹೀಯಾಳಿಸಿದ ಸಂದರ್ಭದಲ್ಲಿ ಪ್ರಸಾದ ನಿಷ್ಠೆಯ ಬಾಚಯ್ಯ ಅವರ ಮನೆಯನ್ನು ಸುಟ್ಟರುಹಿದ ಪ್ರಸಂಗವನ್ನು ನೆನಪಿಸಿ ಕೊಂಡರೆ ಬಿಬ್ಬಿ ಆತನ ಅಬ್ಬರ, ಉಗ್ಗಡಣೆಯನ್ನು ಹೇಳುತ್ತಿರುವ ಪದವಾಗಿಯೇ ತೋರುತ್ತದೆ. ಪಾಲ್ಕುರಿಕೆ ಸೋಮನ ತೆಲುಗು ' ಬಸವ ಪುರಾಣ' ದಲ್ಲಿ ಬಾಚಯ್ಯ ಪ್ರಸಾದದ ಬಂಡಿಯೊಂದಿಗೆ ಹೊರಟ ಸನ್ನಿವೇಶವನ್ನು ವರ್ಣಿಸುತ್ತ :

ಬೊಬ್ಬೆಗಳನ್ನಿಡುತುಬ್ಬಿಯಾಡುತಲಿ

ಬಿಬ್ಬಿ ಬಾಚಯ್ಯನು ಗೊಬ್ಬೂರು ಸೇರೆ ಎಂಬ ಸಾಲುಗಳು (ಅನು : ಡಾ : ಪಿ.ವಿ. ನಾರಾಯಣ) ಬರುತ್ತವೆ ಇಲ್ಲಿ ಬೊಬ್ಬೆಗಳನ್ನಿಡುತ ಎಂಬ ಪದ ಪ್ರಯೋಗ ಮಹತ್ವದ್ದು. ಈ ಬೊಬ್ಬೆ ಉಗ್ಗಡಣೆಯನ್ನು ಹೇಳುತ್ತಿದ್ದು ಇದು ಬಿಬ್ಬರ, ಬಿಬ್ಬಿರ ಅರ್ಥದ ಪ್ರಯೋಗವಾಗಿರಬಹುದು. ಬಿಬ್ಬಿ ಬಾಚಯ್ಯ ಎಂದರೆ ಉಗ್ಗಡಿಸುವ ಬಾಚಯ್ಯ ಎಂದೇ ಅರ್ಥೈಸುವುದೇ ಸರಿಯಾಗಿ ಕಾಣುತ್ತದೆ. ಉಗ್ಗಡಿಸುವ ಕಾಯಕ ಶರಣರು ೧೨ನೇ ಶತಮಾನದಲ್ಲಿ ಆನಂತರದಲ್ಲಿ ಸಿಗುತ್ತಿರುವದು ಗಮನಾರ್ಹವಾಗಿದೆ. (ಉದಾ: ಉಗ್ಗಡಿಸುವ ಶಾಂತ, ಕೂಗಿನ ಮಾರಯ್ಯ) ಡಾ : ಪಿ.ವಿ.ನಾರಾಯಣರವರು ಬಿಬ್ಬಿಗೆ ಅರ್ಥ ಹಾಸ್ಯವೆಂದು ಹೇಳಿ ಬಿಬ್ಬಿ ಬಾಚಯ್ಯ ಹಾಸ್ಯ ಮಾಡುವ ಕಾಯಕವನ್ನು ಎಂದಿದ್ದಾರೆ. ಬಿಬ್ಬಿಗೆ ಆ ಅರ್ಥವಿರುವುದು ಸಂದೇಹಾಸ್ಪದ ವಿರುವುದರಿಂದ ಅವರ ಅಭಿಪ್ರಾಯವನ್ನು ಒಪ್ಪುವುದು ಕಷ್ಟವಾಗುತ್ತದೆ. ಅಲ್ಲದೇ ಬಿಬ್ಬಿ ಬಾಚಯ್ಯ ಉಗ್ರ ವ್ಯಕ್ತಿತ್ವಕ್ಕೆ ತುಂಬ ವಿರುದ್ಧವಾಗಿ ಕಾಣಿಸುತ್ತದೆ. ಬಿಬ್ಬಿ ಬಾಚಯ್ಯನ ವಚನಗಳು ಗಾಂಭೀರ್ಯ ಕೂಡ ಇದಕ್ಕೆ ಅಡ್ಡ ಬರುತ್ತದೆ. ಸದ್ಯಕ್ಕೆ ಬಿಬ್ಬಿ ಬಾಚಯ್ಯ ಉಗ್ಗಡಿಸುವ ಕಾಯಕದವನು ಎಂದು ತಿಳಿಯುವುದು ಸರಿಯಾಗಿ ತೋರುತ್ತದೆ'.೧

ಡಾ : ಸೊಪ್ಪಿಮಠರ ಅಭಿಪ್ರಾಯಗಳು ಬಿಬ್ಬಿ ಬಾಚಯ್ಯನ ವಚನಗಳ ಹಿನ್ನೆಲೆಯಲ್ಲಿ ಗಮನಸಿದಾಗ ಬಹು ಸೂಕ್ತವಾಗಿವೆ.

ಬಿಬ್ಬಿ ಬಾಚಯ್ಯರ ಒಂದು ವಚನ ಹೀಗಿದೆ:

ಬಸವಣ್ಣನ ಪ್ರಸಾದವ ಕೊಂಡ ಕಾರಣ

ಎನಗೆ ಭಕ್ತಿಸಾಧ್ಯವಾಯಿತು

ಚೆನ್ನ ಬಸವಣ್ಣನ ಪ್ರಸಾದ ಕೊಂಡ ಕಾರಣ

ಎನಗೆ ಜ್ಞಾನ ಸಾಧ್ಯವಾಯಿತ್ತು .

ಪ್ರಭುದೇವರ ಪ್ರಸಾದವ ಕೊಂಡ ಕಾರಣ

ಎನಗೆ ವೈರಾಗ್ಯ ಸಾಧ್ಯವಾಯಿತ್ತು .

ಇಂತೀ ಮೂವರು ಒಂದೊಂದ ಕೊಟ್ಟ ಕಾರಣ

ಎನಗೆ ಸರ್ವವೂ ಸಾಧ್ಯವಾಯಿತ್ತು

ಏಣಾಂಕಧರ ಸೋಮೇಶ್ವರಾ

ನಿಮ್ಮ ಶರಣರೆನ್ನ ಮಾತಾಪಿತರು ೨

ಇಲ್ಲಿ ಬಿಬ್ಬಿ ಬಾಚಯ್ಯರೇ ಸ್ಪಷ್ಟವಾಗಿ ಕಲ್ಯಾಣ ಶರಣರಿಂದ ' ಭಕ್ತಿ-ಜ್ಞಾನ-ವೈರಾಗ್ಯ ' ಸಾಧ್ಯವಾಯಿತೆಂಬುದನ್ನು ಗಮನಿಸಿದರೆ ಡಾ: ಪಿ.ವಿ.ನಾರಾಯಣ ಅಭಿಪ್ರಾಯವನ್ನು ಒಪ್ಪುವುದು ಅಷ್ಟು ಸಮರ್ಪಕ ವಲ್ಲವೆಂದು ತೋರುತ್ತದೆ. ಹಾಗಾಗಿ ಡಾ :ಸೊಪ್ಪಿಮಠರ ಅಭಿಪ್ರಾಯವೇ ಸದ್ಯಕ್ಕೆ ಸರಿಯಾದುದೆನ್ನಬಹುದಾಗಿದ್ದರೂ ಮತ್ತೊಂದು ಅಂಶ ನಮಗೆ ಹೊಳೆಯುವುದೇನೆಂದರೆ ಬಿಬ್ಬಿ ಬಾಚಯ್ಯರು ಕಲ್ಯಾಣಕ್ಕೆ ಹೋಗುವ ಮೊದಲು ಗೊಬ್ಬೂರು ಬಾಚಯ್ಯರು ಮಾತ್ರವೇ ಆಗಿರಬೇಕು. ಗೊಬ್ಬೂರಿನಲ್ಲಿ ಆತ ಅನ್ನದಾಸೋಹ ಕಾರ್ಯ ನಡೆಸುತ್ತಿದ್ದನೆಂದು ತಿಳಿದು ಬರುತ್ತದೆ. ಗೊಬ್ಬೂರು ಅಂದು ಅಗ್ರಹಾರವೆಂದುದನ್ನು ಗಮನಿಸಿದರೆ ಅಲ್ಲಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ , ಯಾತ್ರಿಕರಿಗೆ ಆತ ಅನ್ನದಾಸೋಹವನ್ನು ಅನೇಕರಿಂದ ಸಂಗ್ರಹಿಸಿ ನಡೆಸುವ ಧರ್ಮಾರ್ಥ ಕಾರ್ಯ ಕೈಗೊಂಡಿರ ಬೇಕೆನಿಸುತ್ತದೆ. ಮುಂದೆ ಆತ ಕಲ್ಯಾಣಕ್ಕೆ ಹೋದಾಗ ಉಗ್ಗಡಿಸುವ ಕಾಯಕ ಕೈಗೊಂಡಿರಬಹುದೆನಿಸುತ್ತದೆ. ಈ ಕಾರಣದಿಂದಾಗಿ ಇವರು ಆರಂಭದಲ್ಲಿ ದಾಸೋಹ ಗ್ರಹಿಸಿ ಹಂಚುವ ಕಾರ್ಯ ಕೈಗೊಂಡು . ಕಲ್ಯಾಣದಲ್ಲಿ ಉಗ್ಗಡಿಸುವ ಕಾರ್ಯ ಕೈಗೊಂಡು ಮುಂದೆ ಕ್ರಾಂತಿಯ ನಂತರ ಮತ್ತೆ ದಾಸೋಹ ಸಂಗ್ರಹ ಕಾರ್ಯ ಕೈಗೊಂಡಿರುವ ಸಾಧ್ಯತೆ ಇದೆ.' ಸಮಯ ಪ್ರಸಾದವ ಬಿಬ್ಬಿ ಬಾಚಯ್ಯಗಳು ಕೊಂಡರು' ೩

---

೧ : ಡಾ: ಬಸವಲಿಂಗ ಸೊಪ್ಪಿಮಠ -ಆ.ಸಂಪುಟ೧ ಪುಟ೧೦೧

೨ : ಸಂ: ಡಾ: ಬಿ.ಆರ್ ಹಿರೇಮಠ-ಸ.ವ.ಸಂ.-೮ ವಚನ ೧೦೨, ಪುಟ೧೪೧ -೧೪೨

೩ : ಸಂ : ಡಾ :ಬಿ.ವಿ.ಮಲ್ಲಾಪುರ-ಸ.ವ.ಸಂ.-೩ ವಚನ ೧೨೭ ಪುಟ ೨೪೫

ಚೆನ್ನ ಬಸವಣ್ಣನವರ ವಚನದ ಸಾಲುಗಳನ್ನು ಗಮನಸಿದರೆ ಇವರ ಕಾಯಕದ ಕಾರ್ಯ ಸ್ಪಷ್ಟವಾಗುತ್ತದೆ. ಒಟ್ಟಿನಲ್ಲಿ ಇವರು ಪ್ರಸಾದ ಸಂಗ್ರಹಿಸಿ ಹಂಚುವ ಹಾಗೂ ಕಲ್ಯಾಣ ಪರಿಸರದಲ್ಲಿ ಉಗ್ಗಡಿಸುವ ಕಾಯಕ ಮಾಡುತ್ತಿದ್ದರೆಂದು ತಿಳಿಯುವುದು ಸೂಕ್ತವಾಗಿದೆ.

ವಚನಾಂಕಿತ :

ಇವರು ೧೦೨ ವಚನಗಳನ್ನು ಬರೆದ ಬಗ್ಗೆ ತಿಳಿದು ಬರುತ್ತಿದ್ದು ೧ ಅವರ ವಚನಾಂಕಿತ ' ಏಣಾಂಕಧರ ಸೋಮೇಶ್ವರ ಲಿಂಗ' ವಾಗಿದೆ ಸದ್ಯ ಈಗ ಗೊಬ್ಬೂರಿನಲ್ಲಿ ಹಾಳಾಗಿರುವ ಯಾವುದೋ ಒಂದು ದೇವಾಲಯವಾಗಿರಬೇಕೆನಿಸುತ್ತದೆ. ಇವರ ವಚನಗಳು ಅತ್ಯಂತ ಔಚಿತ್ಯ ಪೂರ್ಣವಾಗಿ ರೂಪಕ - ಉಪಮೆಗಳಿಂದ ಕೂಡಿ ಗಟ್ಟಿಯಾದ ಅನುಭಾವಸ್ಥಿತಿಯನ್ನು ನಮ್ಮ ಕಣ್ಮುಂದೆ ತರುತ್ತವೆ.

ವ್ಯಕ್ತಿತ್ವ :

ಪ್ರಸಾದಕ್ಕೆ ಮತ್ತೊಂದು ಹೆಸರಾಗಿ ಬಾಳಿದ ಶರಣರು ಇವರಾಗಿದ್ದಾರೆ. ಪ್ರಸಾದದ ಅತ್ಯಂತ ಪವಿತ್ರವಾದ ನಿಷ್ಠೆಯಿಂದಲೇ ತನ್ನ ಜನಾಂಗವನ್ನು ತೊರೆದನು. ಮೂಲತಃ ಬ್ರಾಹ್ಮಣನಾಗಿದ್ದರೂ ಅದನ್ನು ಧಿಕ್ಕರಿಸಿ ಶರಣ ಮಾರ್ಗವನ್ನು ಅನುಸರಿಸಿದನು. ಪ್ರಸಾದದಿಂದಲೇ ಜೀವನ ಮುಕ್ತಿ ಅನ್ನದೇವರಿಗಿಂತ ಇನ್ನೊಂದು ದೇವರಿಲ್ಲವೆಂದು ನಂಬಿ ಸರ್ವರಿಗೂ ಪ್ರಸಾದವನ್ನು ಸಲ್ಲಿಸಿದನು. ಜಂಗಮವನ್ನೇ ಲಿಂಗಸ್ವರೂಪವೆಂದು ತಿಳಿದು ಆರಾಧಿಸಿದನು.

ಆ ಕಾರಣದಿಂದಲೇ ಬಾಲ ಬೊಮ್ಮಣ್ಣಗಳು ' ಪ್ರಸಾದವ ಕೊಂಡು ಪಥವತೋರಿದರಯ್ಯ ಬಿಬ್ಬಿ ಬಾಚಯ್ಯಗಳು ' ೨ ಎಂದರೆ ಸತ್ಯಕ್ಕಳಂತು ಇವರ ಶ್ರೇಷ್ಠತೆ ಗುರುತಿಸಿ 'ವಿಶ್ವಾಸದಿಂದ ನಂಬಿದರಯ್ಯ ಬಿಬ್ಬಿ ಬಾಚಯ್ಯಗಳು ' ಎಂದಿದ್ದಾರೆ.೩ ' ಬಸವಣ್ಣ ಪ್ರಿಯ ಧರ್ಮೇಶ್ವರಾ ' ಎಂಬ ಅಂಕಿದಲ್ಲಿ ಒಂದು ವಚನ ಇವರನ್ನು ' ಎನ್ನ ಭಾವವ ಶುದ್ಧವ ಮಾಡಿದಾತ ಬಿಬ್ಬಿ ಬಾಚಯ್ಯ ಎನ್ನಲಾಗಿದೆ. ' ೪ ಹೀಗೆ ಇವರು ಅನೇಕ ಸಮಕಾಲೀನ ಶರಣರಿಂದ ಸ್ತುತಿಗೊಂಡ ಪ್ರಶಂಸೆಗೆ ಪಾತ್ರರಾದ ಬಸವಯುಗದ ಪ್ರಮುಖ ಶರಣರಾಗಿದ್ದಾರೆ.

---

೧ : ಸಂ : ಡಾ : ಬಿ. ಆರ್. ಹಿರೇಮಠ -ಸ.ವ.ಸಂ.-೮ ವಚನ ೧ -೧೦೨ ಪುಟ ೧೧೮-೧೪೨

೨ : ಅದೇ : ವಚನ ೬ , ಪುಟ ೯೭

೩ : ಸಂ : ಡಾ : ವೀರಣ್ಣ ರಾಜೂರು - ಸ.ವ.ಸಂ. -೫ ವಚನ ೨೭

೪ : ಸಂ : ಡಾ: ಬಿ. ಆರ್ . ಹಿರೇಮಠ -ಸ.ವ.ಸಂ.೯ ಪುಟ ೪೮೦

೩) ಮೊಸರ ಕಲ್ಲಿನ ಅಜಗಣ್ಣ -ಮುಕ್ತಾಯಕ್ಕ

ಸಮಕಾಲೀನ ಶರಣ ಸಮುದಾಯದಲ್ಲಿಯೇ ಪ್ರಖ್ಯಾತವಾಗಿ ಸದಾ ಸ್ಮರಣೆ ಮಾಡುವ ಹೆಸರು ಅಜಗಣ್ಣ - ಮುಕ್ತಾಯಕ್ಕ ರದಾಗಿದೆ. ಸರಳ ನುಡಿಗಳಿಂದಲೇ ಆತ್ಮ ಜ್ಞಾನವನ್ನು ಲೌಕಿಕ ದುಃಖ ದೊಂದಿಗೆ ಆ ಮೂಲಕ ಅಜಗಣ್ಣ ತಂದೆಯ ವ್ಯಕ್ತಿತ್ವವನ್ನು ಸಮಗ್ರವಾಗಿ ಮುಕ್ತಾಯಕ್ಕ ಕಟ್ಟಿ ಕೊಟ್ಟಿದ್ದಾಳೆ.

ಸಮಕಾಲೀನ ವಚನಕಾರರಲ್ಲದೇ ಆನಂತರ ಬಂದ ಅನೇಕ ಕೃತಿಕಾರರು ಇವರ ಬಗ್ಗೆ ಮಾಹಿತಿ ನೀಡಿದರೂ ಅವುಗಳಲ್ಲಿ ಅಸ್ಪಷ್ಟತೆಯ ಅಂಶಗಳು ಗೋಚರಿಸುತ್ತವೆ. ಇವರನ್ನು ಕುರಿತು ಚಿತ್ರಿಸಿದ ಪ್ರಮುಖ ಕೃತಿಗಳೆಂದರೆ:

೧: ಶಾಂತಲಿಂಗ ದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ

೨ : ಗುಬ್ಬಿ ಮಲ್ಲಣ್ಣಾರ್ಯನ ವೀರಶೈವ ಮಹಾ ಪುರಾಣ

೩ : ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ

೪ : ಸಿದ್ದನಂಜೇಶನ ಗುರುರಾಜ ಚಾರಿತ್ರ್ಯ

೫ : ಚಾಮರಸನ ಪ್ರಭುಲಿಂಗ ಲೀಲೆ

೬ : ಶೂನ್ಯ ಸಂಪಾದನೆಗಳು ಪ್ರಮುಖವಾಗಿವೆ ಇದಲ್ಲದೆ ಇವರ ಬಗ್ಗೆ ವಚನಗಳು , ಐತಿಹ್ಯಗಳು , ಅವಶೇಷಗಳ ಮೂಲಕ ನಾವು ಇವರ ಬಗ್ಗೆ ಆದಷ್ಟು ಸ್ಪಷ್ಟತೆಯನ್ನು ಕಂಡು ಕೊಳ್ಳಬಹುದಾಗಿದೆ.

ಸ್ಥಳ :

ಇವರ ಸ್ಥಳದ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳಿವೆ . ಅವುಗಳನ್ನು ಮೊದಲು ನೋಡುವುದಾದರೆ:

' ಅಜಗಣ್ಣ -ಮುಕ್ತಾಯಕ್ಕ ರ ಊರು ' ಅಡಿಕೆ' ಎನ್ನುವುದು, ಅಜಗಣ್ಣನ ಹೆಂಡತಿ ಮಹಾದೇವಿ ಎನ್ನುವುದು , ಅವರ ವಿಷಮ ದಾಂಪತ್ಯ - ಈ ವಿಷಮ ದಾಂಪತ್ಯ ಕಾರಣ ಆತ ಗುಪ್ತ ಸಾಧಕನಾದುದು. ರಾಚಪ್ಪಯ್ಯ ಹೇಳುವ ಅಡಿಕೆಗ್ರಾಮ ಎಲ್ಲಿದೆಯೋ ನಮಗೆ ತಿಳಿಯದು' ಎಂದು ಡಾ : ಬಸವಲಿಂಗ ಸೊಪ್ಪಿಮಠರವರು ಕೊಡೇಕಲ್ ಬಸವಣ್ಣನವರ ಮಗ ರಾಚಪ್ಪಯ್ಯ ಹೇಳುವ ' ಪ್ರಭು ಚರಿತೆ' ಅಂಶಗಳನ್ನಾಧರಿಸಿ ಹೇಳಿದ್ದಾರೆ.೧ ' ಮುಕ್ತಾಯಕ್ಕ ವಿಜಾಪುರ ಜಿಲ್ಲೆಯ ಹಳ್ಳಿಯೊಂದರಲ್ಲಿದ್ದಳು. ಆಕೆಯ ಅಣ್ಣನಾದ ಅಜಗಣ್ಣ ಲಕ್ಕುಂಡಿಯಲ್ಲಿದ್ದ ಆದರೆ ಎಳಂದೂರು ಹರೀಶ್ವರ ಕೃತಿ ' ಪ್ರಭುದೇವ ಪುರಾಣ ' ದಲ್ಲಿ ಅಜಗಣ್ಣ ಅಡಕವೆಂಬಲ್ಲಿದ್ದಾನೆಂದು ನಂತರ ತಂಗಿ ಇದ್ದ 'ಮಸಳಿ'ಗೆ ಬಂದು ನೆಲೆಸಿದನೆಂದುಇದೆ.೨ ' ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲೂಕಿನ 'ಮುತ್ತಗಿ' ಯಲ್ಲಿ ಅಜಗಣ್ಣ ಮುಕ್ತಾಯ್ಯರ ಸಮಾಧಿಗಳಿವೆ. ೩

ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲೂಕಿನ ಬಳ್ಳಿಗಾವೆಗೆ ಐದು ಮೈಲಿ ದೂರದಲ್ಲಿ ಮುತ್ತಿಗೆ' ಊರಿದೆ ಅದೇ ಆಕೆಯ ಊರೆಂದು ಹೇಳಲಾಗಿದೆ. ೪ ವಿಜಾಪುರ ಜಿಲ್ಲೆ ಮೊಸಳಿಕಲ್ಲು ಇಂಡಿ ತಾಲೂಕಿನಲ್ಲಿದೆ ಇದೇ ಈಕೆಯ ಜನ್ಮ ಸ್ಥಳ೫ 'ಮುತ್ತಿಗೆ' ಎಂಬ ಊರಿನಲ್ಲಿ ಇವರ ಸಮಾಧಿಗಳಿರುವುದಾಗಿ ತಿಳಿದು ಬಂದಿದೆ. ೬ ' ಲಕ್ಕುಂಡೆ ಎಂಬ ಪುರದಲ್ಲಿ ಅಜಗಣ್ಣನೆಂಬ ಶರಣನಿಹನು .....' ೭

' ಶರಣ ಅಜಗಣ್ಣನ ಸಹೋದರಿಯೂ, ಶಿಷ್ಯೆಯೂ ಆದ ಮುಕ್ತಾಯಕ್ಕ ಲಕ್ಕುಂಡಿ ಗ್ರಾಮದಲ್ಲಿ (ಧಾರವಾಡ ಜಿಲ್ಲೆ) ಜನಿಸಿ ಮೊಸಳೆಕಲ್ಲು ಗ್ರಾಮದಲ್ಲಿ (ರಾಯಚೂರು ಜಿಲ್ಲೆ) ಜೀವನ ನಡೆಸಿದ ವಿಚಾರವಂತೆ ಎಂಬುದನ್ನು ಎಲ್ಲರೂ ಒಪ್ಪಿದ್ದೇವೆ. ಅವಳು ಬದುಕಿ ಬಾಳಿದ ಮೊಸಳೆಕಲ್ಲು ಬೆಳಗಾವಿ ಜಿಲ್ಲೆ ಗ್ರಾಮವಾಗಿರದೇ ರಾಯಚೂರು ಜಿಲ್ಲೆ ಮೊಸಳೆ ಕಲ್ಲು (ದೇವದುರ್ಗ ತಾಲೂಕು) ಆಗಿದೆ. ಎಂಬುದು ನನ್ನ ಅಭಿಪ್ರಾಯ ಎಂಬುದಾಗಿ ಡಾ : ಸೊಪ್ಪಿಮಠ ಹೇಳುತ್ತಾರೆ. ೮

---

೧ : ಡಾ : ಬಸವಲಿಂಗ ಸೊಪ್ಪಿಮಠ -ಕೋ.ಬ.ಅ.ಪುಟ೧೪೯

೨ : ಸಂ: ಶಿವಕುಮಾರ ಸ್ವಾಮಿ - ಶ.ಜ. ಪುಟ ೫೧೪

೩ : ಬಸವ ಪಥ -ಸಂಪುಟ ೪ , ಸಂಚಿಕೆ ೫ ಆಗಸ್ಟ್ ೧೯೮೨ ಪುಟ ೬೨

೪ : ಕ.ಸಾ.ಪ.-ಸಂಪುಟ ೪೫, ಸಂಚಿಕೆ ೨ ಪುಟ ೫೮ ರಅಡಿ ಟಿಪ್ಪಣೆ

೫ : ಬಸವ ಪಥ ಸಂಪುಟ ೫ ,ಸಂಚಿಕೆ ೩ ಜೂನ್ ೧೯೮೩

೬ : ಸಂ:ಸಿ.ಯು. ಮಂಜುನಾಥ ಮತ್ತು ಬಸಪ್ಪ -ವ.ವ್ಯ.ಅ.ಪುಟ೪೬

೭ : ಸಂ : ಎಸ್. ಉಮಾಪತಿ -ಉ.ಬ.ಭೈ.ಉ. ಕಥೆ ೨೦೫, ಪುಟ೬

೮ : ಡಾ: ಬಸವಲಿಂಗ ಸೊಪ್ಪಿ ಮಠ -ಆ.ಸಂಪುಟ ೧, ಪುಟ೭೬

ಈ ಎಲ್ಲಾ ಅಭಿಪ್ರಾಯಗಳನ್ನು ಗಮನಿಸಿದಾಗ ಇವುಗಳಲ್ಲಿ ' ಲಕ್ಕುಂಡಿ - ಮೊಸಳಿ ಕಲ್ಲು - ಅಡಿಕೆ - ಅಡಕ- ಮುತ್ತಿಗೆ' ಎಂಬ ಊರುಗಳ ಉಲ್ಲೇಖ ಕಂಡು ಬರುತ್ತದೆ. ನಾವೀಗ ಇವರ ಸ್ಥಳವನ್ನು ನಿಖರವಾಗಿ ಈ ಮುಂದಿನಂತೆ ಸ್ಪಷ್ಟಗೊಳಿಸುತ್ತೇವೆ:

ಮುಕ್ತಾಯಕ್ಕ ವಿಜಾಪುರ ಜಿಲ್ಲೆಯವಳೆಂದು ಭಾವಿಸಿದರೆ ತಾಳಿಕೋಟೆ ಹತ್ತಿರ ಲಕ್ಕುಂಡಿ ಗ್ರಾಮವಿದೆ ಇದೊಂದು ಸಣ್ಣ ಗ್ರಾಮ ಯಾವುದೇ ಐತಿಹಾಸಿಕ ಕೇಂದ್ರ ಇದಾಗಿಲ್ಲ. ಇದರಿಂದ ೪೫ ಮೈಲಿ ಅಂತರದಲ್ಲಿ ಮಸಳಿ ಇದೆ. ಗದುಗಿನ ಹತ್ತಿರ ಯಾವುದೇ ಮಸಳಿ ಕಲ್- ಮಸಳಿ ಇಲ್ಲ. ಇಂಡಿ ತಾಲೂಕಿನಲ್ಲಿ ಮಸಳಿ ಕಲ್ ಇದ್ದು ಅದು ಲಕ್ಕುಂಡಿಯಿಂದ ಬಹುದೂರವಿದೆ. ಇಲ್ಲಿಯ ಲಕ್ಕುಂಡಿ - ಮಸಳಿಕಲ್ ಗಳನ್ನು ಗಮನಿಸಿದರೆ ಯಾವುದೇ ಐತಿಹಾಸಿಕ ಸಂಗತಿಗಳಾಗಲಿ - ಐತಿಹ್ಯಗಳಾಗಲಿ ಅಜಗಣ್ಣ - ಮುಕ್ತಾಯಕ್ಕರ ಹೆಸರುಗಳಾಗಲಿ ಕಂಡುಬರುವುದಿಲ್ಲ. ಹಾಗಾಗಿ ಇನ್ನು ಮುಂದೆ ನಾವು ವಿಜಾಪುರ ಜಿಲ್ಲೆಯ ಲಕ್ಕುಂಡಿ ಮಸಳಿಕಲ್ ಗಳನ್ನು ಕೈ ಬಿಡುವುದು ಸೂಕ್ತ. ಅಂತೆಯೇ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಮುತ್ತಗಿಯಲ್ಲಿ ಇವರ ಸಮಾಧಿಗಳಿದ್ದಾವೆನ್ನುವುದಕ್ಕೆ ಅಲ್ಲಿ ಯಾವುದೇ ಕುರುಹುಗಳಿಲ್ಲ. ಅವಶೇಷಗಳಿಲ್ಲಿ ಹೀಗಾಗಿ ಇದು ಸಹ ಇವರ ನೆಲೆಯಲ್ಲ ಎಂಬುದು ಸ್ಪಷ್ಟವಾಗಿದೆ.

ಇನ್ನು ಅಡಕೆ ಗ್ರಾಮದ ಬಗ್ಗೆ ಹೇಳುವುದಾದರೆ ಇದು ಕಲಬುರ್ಗಿ ಜಿಲ್ಲೆಯ ಸೇಡಂ ತಾಲೂಕಿನಲ್ಲಿದೆ. ಈ ಅಡಕೆ ಗ್ರಾಮದಲ್ಲಿಯೂ ಯಾವೂದೇ ಅವಶೇಷಗಳಾಗಲಿ ಐತಿಹ್ಯಗಳಾಗಲಿ ಕಂಡುಬರುವುದಿಲ್ಲವಾದರೂ ಈ ಅಡಕೆ ಕಲ್ಯಾಣಕ್ಕೆ ಹೋಗುವ ಹಾದಿಯಲ್ಲಿ ಬರುವ ಕಾರಣ ಕೆಲವು ದಿನ ಅಜಗಣ್ಣ ಇದ್ದಿರಬಹುದಾದ ಸಾಧ್ಯತೆ ಇದೆ. ಆದರೆ ಈ ಕುರಿತ ಯಾವುದೇ ಆಧಾರಗಳು ಲಭ್ಯವಾಗುವುದಿಲ್ಲ. ಇದೇ ಮಾತನ್ನು ನಾವು ಗದಗ ಜಿಲ್ಲೆಯ ಲಕ್ಕುಂಡಿಗಾಗಲಿ, ರಾಯಚೂರು ಜಿಲ್ಲೆ ದೇವ ದುರ್ಗ ತಾಲೂಕಿನ ಮೊಸಳೆ ಕಲ್ಲಿಗಾಗಲಿ (ಮೊಸರ ಕಲ್ಲು - ಮಸರ ಕಲ್ಲು) ಹೇಳಲು ಬರುವುದಿಲ್ಲ.

ಇವರುಗಳ ಊರು ಮೂಲತಃ ಲಕ್ಕುಂಡಿ ಎಂಬುದಕ್ಕೆ ನಮಗೆ ಅನೇಕ ಮಾಹಿತಿಗಳು ಕಂಡು ಬರುತ್ತವೆ. ಮೊಸರ ಕಲ್ಲಿನ ಬಗ್ಗೆ ಅನೇಕ ಐತಿಹ್ಯ - ಆಧಾರಗಳು ಲಭ್ಯವಾಗುತ್ತವೆ.

ಮೊದಲು ಲಕ್ಕುಂಡಿ ಕುರಿತು ನೋಡುವುದಾದರೆ:- ಲಕ್ಕುಂಡಿಯಲ್ಲಿ ಸೋಮೇಶ್ವರನ ದೇವಾಲಯ ಇದೆ. ಅಂತೆಯೇ ಇದು ಅಜಗಣ್ಣನ ವಚನಾಂಕಿತವಾಗಿದೆ. ಹತ್ತಿರದಲ್ಲಿಯೇ ಲಕ್ಷ್ಮೇಶ್ವರ ವಿದ್ದು ಅದು ಆದಯ್ಯನು ಸೌರಾಷ್ಟ್ರದಿಂದ ಸೋಮೇಶ್ವರ ಲಿಂಗ ತಂದು ಸ್ಥಾಪಿಸಿದ್ದು ಇಲ್ಲಿಯೇ ಎಂದು ಹೇಳಲಾಗುತ್ತಿದೆ. ಬಹುಶಃ ಅಜಗಣ್ಣನು ಸಹ ಈ ಸೌರಾಷ್ಟ್ರ ಸೋಮೇಶ್ವರದಿಂದ ಪ್ರಭಾವಿತನಾಗಿದ್ದು ಕಂಡು ಬರುತ್ತದೆ. ಆದಕ್ಕೆ ಆತನ ವಚನದಲ್ಲಿರುವ ' ಮಹಾಘನ ಸೌರಾಷ್ಟ್ರ ಸೋಮೇಶ್ವರನ ಸದ್ಗುರುವೆನ್ನ ಕರಸ್ಥಲಕ್ಕೆ ಕೃಪೆಮಾಡಿದ ಕಾರಣ......' ಎಂಬ ಸಾಲುಗಳನ್ನು ಗಮನಿಸಬಹುದಾಗಿದೆ. ೧

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಲಕ್ಕುಂಡಿ ಮುಕ್ತಾಯಕ್ಕನ ತವರೂರು ಎಂಬು ಸ್ಪಷ್ಟ. ಆ ಲಕ್ಕುಂಡಿ ತಾಳಿಕೋಟೆ ಹತ್ತಿರದ ಲಕ್ಕುಂಡಿಯಾಗಿರದೇ ಗದಗ ಜಿಲ್ಲೆಯ ಲಕ್ಕುಂಡಿಯಾಗಿದೆಯೆಂದು ನಾವು ತಿಳಿಯಬೇಕು. ಇನ್ನೂ ಮೊಸರ ಕಲ್ಲಿನ ಬಗ್ಗೆ ಹೇಳುವದಾದರೆ: ಮೊಸರ ಕಲ್ಲಿನಲ್ಲಿ ಮುಕ್ತಾಯಕ್ತ - ಅಜಗಣ್ಣರನ್ನು ಕುರಿತ ಅನೇಕ ಐತಿಹ್ಯಗಳಿವೆ. ದೇವಾಲಯಗಳಿವೆ. ಪ್ರಾಚೀನ ಊರಿನ ಅವಶೇಷಗಳಿವೆ. ಇಂದಿಗೂ ಇವರ ಹೆಸರಿಡುವ ಪರಂಪರೆ ಇದೆ. ಕೆಲವು ಆಚರಣೆಗಳಿವೆ. ಮುಕ್ತಾಯಕ್ಕನ ವಂಶಸ್ಥರೆಂದು ಹೇಳಿಕೊಳ್ಳುವ ಒಂದು ಮನೆತನ ವಿದೆ. ಎಂಬುದನ್ನು ನಾವು ಗಮನಿಸಬೇಕಾದದ್ದು ಅವಶ್ಯಕವಾಗಿದೆ.

ಪ್ರಸ್ತುತ ಮೊಸರ ಕಲ್ಲು ಎಂದು ಕರೆಸಿಕೊಳ್ಳುವ ಇದರ ಪ್ರಾಚೀನ ಹೆಸರು ' ಧಾರಾನಗರ' ಎಂಬುದಾಗಿದೆ. ಸದ್ಯ ಇರುವ ಊರಿಗೆ ಹೊಂದಿ ಕೊಂಡೇ ಇರುವ ಭಾರಿ ಬೆಟ್ಟದಲ್ಲಿ ಈಗ ಹಾಳು ಬಿದ್ದ ಮನೆಗಳು, ಮಂಪಟ, ದೇವಸ್ಥಾನಗಳನ್ನು ಗಮನಿಸಬಹುದು. ಬೆಟ್ಟದಲ್ಲಿ ನೀರಿನ ಹೊಂಡಗಳಿವೆ. ಕುಡಿಯಲು ಯೋಗ್ಯವೆನ್ನುವಷ್ಟರಮಟ್ಟಿಗೆ ನೀರು ಸ್ವಚ್ಛವಾಗಿವೆ. ಮೂರುಗುಡಿಗಳು ಮೇಲೆ ಇವೆ. ಮಲ್ಲಯ್ಯ, ಬಸವಣ್ಣ, ಸಿದ್ದಯ್ಯ ಗುಡಿಗಳೆಂಬುದಾಗಿ ಇಲ್ಲಿಯ ಜನ ಕರೆಯುತ್ತಾರೆ. ಈ ಗುಡಿಗಳ ಮತ್ತೊಂದು ದಿಕ್ಕಿಗೆ ಮುಕ್ತಾಯಕ್ಕನ ಮಂಟಪವಿದೆ. ಮಂಟಪಕ್ಕಿಂತಲೂ ಅದು ಸಮಾಧಿಯಂತಿದೆ.

ಮೊದಲು ಈ ಮಂಪಟದಲ್ಲಿ ಭಾರಿ ಹುತ್ತ ಬೆಳದಿತ್ತು. ಈಗ ಅದನ್ನು ತೆಗೆಯಲಾಗಿದೆ ಬೆಟ್ಟವನ್ನು ಹತ್ತಲು ಕನಿಷ್ಟ ಎರಡುಗಂಟೆಯಾದರೂ ಬೇಕಾಗುತ್ತದೆ. ಕಡಿದಾದ ಬಂಡೆಗಳುಅಪ್ಪಿ-ತಪ್ಪಿ ಕಾಲು ಜಾರಿದರೇ ಸಾವು ಖಂಡಿತ! ಇದು ನನ್ನ ಅನುಭವಕ್ಕೆ ಬಂದ ವಿಷಯ. ಅರ್ಧ ಬೆಟ್ಟ ಹತ್ತಿದಾಗ ವಾಪಸ್ ಮರಳಬೇಕೆನಿಸಿತು. ಆದರೆ ಧೈರ್ಯ ಮಾಡಿ ಮುನ್ನುಗ್ಗಿದೆ ಜೊತೆಯಲ್ಲಿ ಕೂಲಿಯವನಿದ್ದನು. ಪೂರ್ತಿ ಬೆಟ್ಟ ಹತ್ತಿದಾಗ ಆಶ್ಚರ್ಯ ನಿರೀಕ್ಷೆ ಮಾಡಿದಂತೆ ಅಲ್ಲಿಯ ಸ್ಥಳ ಕಂಡು ಸಂತೋಷ. ಏನೋ ಸಾಧಿಸಿದ ಆನಂದ.

ಸದ್ಯ ಮುಕ್ತಾಯಕ್ಕನ ಮಂಟಪವೆಂದು ಕರೆಯುವ ಆಕೆಯ ಸಮಾದಿ ಸ್ಥಳದಲ್ಲಿ ಯಾವುದೇ ಮೂರ್ತಿಗಳಿಲ್ಲ. ಖಾಲಿಯಾಗಿದೆ. ಊರಿನ ಜನ ಇದಕ್ಕೆ ಮಜ್ಜಿಗೆ ಮಾಳವ್ವನೆಂದು ಕರೆಯುತ್ತಾರೆ. ಕೆಲವರು ಇದಕ್ಕೆ ಮುಕ್ತಾಯಕ್ಕನ ಮಂಟಪವೆನ್ನುತ್ತಾರೆ. ಈ ಮಂಟಪದ ಸುತ್ತ ಭಾರಿ ಬಂಡೆಗಳಿವೆ. ಮಂಟಪದ ಕೆಳಗಡೆ ಅನೇಕ ಮನೆಗಳಿದ್ದು ಕುರುಹುಗಳಿವೆ. ಇದೊಂದು ಹಿಂದೆ ಸಣ್ಣ ಗ್ರಾಮವಾಗಿತ್ತೆಂದು ಸ್ಪಷ್ಟವಾಗುತ್ತದೆ. ಊರಿನ ಜನರ ಹೇಳಿಕೆಯ ಪ್ರಕಾರ ಇದೇ ಸ್ಥಳದಲ್ಲಿ ಮಜ್ಜಿಗೆ ಕಡಿಯುವ ಶಿಲಾಮೂರ್ತಿ ಇತ್ತಂತೆ. ಆದರೆ ಈಗ ಅದಿಲ್ಲವಾಗಿದೆ. ಇದಕ್ಕೆ ಜನ ಮಾಳವ್ವ - ಮುಕ್ತಾಯಕ್ಕನೆಂದು ಕರೆಯುತ್ತಾರೆ. ಈ ಮುಕ್ತಾಯಕ್ಕನ ಬಗ್ಗೆ ಅಜಗಣ್ಣರ ಬಗ್ಗೆ ಈ ಪರಿಸರದಲ್ಲಿ ಕೆಲವು ಕಥೆಗಳು ಕೇಳಿ ಬರುತ್ತದೆ.

೧: ಸಂ: ಡಾ: ಎಂ.ಎಂ. ಕಲಬುರ್ಗಿ - ಸ.ವ.ಸಂ. - ೬ ವಚನ ೬, ಪುಟ ೯ - ೧೧೧

ಅಜಗಣ್ಣ ಕಲ್ಯಾಣಕ್ಕೆ ಹೊರಟಾಗ ಮುಕ್ತಾಯಕ್ಕನಿಗೆ ಮೂರು ಕುರುಹುಗಳನ್ನು ತಿಳಿಸಿ ಹೋದನಂತೆ.'' ಉಟ್ಟ ಸೀರೆ ನಿರಿಗೆ ಕಳಚುವಿಕೆ, ಮುಡಿ ಬಿಚ್ಚುವಿಕೆ, ಕಡಿಯುವ ಮೊಸರು ಕಲ್ಲಾಗುವಿಕೆ'' ಹೀಗಾದಲ್ಲಿ ನನ್ನ ಸಾವು ಖಂಡಿತವೆಂಬುದಾಗಿ ಅಜಗಣ್ಣ ಹೇಳಿದ್ದನಂತೆ. ಕೆಲವು ವರ್ಷಗಳ ಮುಕ್ತಾಯಕ್ಕನಿಗೆ ಹೇಳಿದ ಈ ಕುರುಹುಗಳು ನಿಜವಾಗಿ ಅಜಗಣ್ಣನಿಗೆ ಸಾವು ಬಂದಿತೆಂದು ದುಃಖದಲ್ಲಿ ಮುಳುಗಿಹೋದಳು . ಕಡೆಯುವ ಮೊಸರು ಕಲ್ಲಾದ ಕಾರಣ ಅಂದಿನಿಂದ ಆ ಊರಿಗೆ ಮೊಸರ ಕಲ್ಲು ಆಯಿತೆಂಬುದಾಗಿ ತಿಳಿದು ಬರುತ್ತದೆ.

ಪ್ರಾಚೀನ ಊರಿನ ಅವಶೇಷ- ಐತಿಹ್ಯ -ನಿಸರ್ಗ ಸೃಷ್ಟಿ ಗಮನಿಸಿದರೆ ಮೊಸರಕಲ್ ಮೂಲತಃ ಅದರ ಪ್ರಾಚೀನ ಹೆಸರು ಮೊಸಳಿಕಲ್ ಆಗಿರುವ ಸಾಧ್ಯತೆ ಇದೆ. ಬೆಟ್ಟದ ಬಂಡೆಗಳು ಹಳ್ಳ -ಕೆರೆಗಳಿಗೆ ಅಂಟಿಕೊಂಡು ಇಂದಿಗೂ ಕಂಡುಬರುತ್ತವೆ. ಇದು ಮೊಸಳೆಗಳು ಇರಲು ಯೋಗ್ಯ ಸ್ಥಳ ವೆಂಬುದು ಗೊತ್ತಾಗುತ್ತದೆ. ಆದರೆ ನಾವು ಬೆಟ್ಟ ಹತ್ತಿದಾಗ ನಮಗೆ ಕಂಡದ್ದು ನರಿ ,ತೋಳ , ಮಂಗಗಳ ಹೊರತಾಗಿ ಬೇರೆ ಯಾವುದೇ ಪ್ರಾಣಿಗಳು ಕಂಡು ಬರಲಿಲ್ಲ . ಹಿಂದಿನ ದಿನಗಳಲ್ಲಿ ಇಲ್ಲಿ ಮೊಸಳೆಗಳು ವಾಸವಾಗಿದ್ದ ಕಾರಣ ಈ ಊರಿಗೆ ಮೊಸಳಿಕಲ್ ಎಂಬ ಹೆಸರಿದ್ದು , ಅದು ಮುಂದೆ ಮೊಸರ ಕಲ್ ಆಗಿರುವ ಸಾಧ್ಯತೆ ಇದೆ. ಹಾಗೆಯೇ ಮುಕ್ತಾಯಕ್ಕ ಯಾವುದೋ ಕಲ್ಲಿನಲ್ಲಿ ಕುಳಿತು ಮೊಸರು ಮಾರಾಟ ಮಾಡುತ್ತಿರಬೇಕು. ಅಥವಾ ಕಡೆಯುತ್ತಿರಬೇಕು. ಆ ಕಾರಣದಿಂದ ಈ ಹೆಸರು ಬಂದಿರಬೇಕು. ಮುಂದೇ ಈಕೆ ಅಜಗಣ್ಣನೊಡನೆ ಕಲ್ಯಾಣಕ್ಕೆ ಹೋಗಿ ಮರಳಿ ತನ್ನೂರಿಗೆ ಬಂದಿರಬೇಕು. ಅಜಗಣ್ಣ ಕಲ್ಯಾಣದಲ್ಲಿಯೇ ಉಳಿದಿರಬೇಕು. ನಮಗೆ ಐತಿಹ್ಯಗಳಿಂದ -ಕಥೆಗಳಿಂದ ಯಾವುದೇ ಖಚಿತವಾದ ಮಾಹಿತಿ ದೊರೆಯುವಲ್ಲಿ ಕಷ್ಟವೆನಿಸುತ್ತದೆ. ಆದರೆ ಸದ್ಯದ ಮಟ್ಟಿಗೆ ಹೇಳುವುದಾರೆ ಅಜಗಣ್ಣನ ಸಾವನ್ನು ಕಂಡು ಅಥವಾ ಕೇಳಿ ಆಕೆಯು ಮುಂದೆ ಕೆಲವು ದಿನಗಳ ತನಕ ಬಾಳಿ ಕೊನೆಗಾಲ ಕಳೆದಿರಬೇಕೆಂದು ತಿಳಿಯುತ್ತದೆ.

ಇಷ್ಟೆಲ್ಲ ಅಂಶಗಳನ್ನು ಗಮನಿಸಿದಾಗ ನಮಗೆ ಕಂಡುಬರುವ ವಿಚಾರಗಳೆಂದರೆ ಅಜಗಣ್ಣ -ಮುಕ್ತಾಯಕ್ಕ ಮೂಲತಃ ಲಕ್ಕುಂಡಿಯವರಾದರೂ ಮುಂದೆ ಮುಕ್ತಾಯಕ್ಕಳ ವಿವಾಹವಾದ ಬಳಿಕ ಮೊಸರಕಲ್ಲಿನಲ್ಲಿ ನೆಲೆಸಿರಬೇಕು. ಅಜಗಣ್ಣ -ಮುಕ್ತಾಯಕ್ಕರ ಮೂಲ ಹೆಸರು ಸಿದ್ಧಯ್ಯ - ಮಾಳವ್ವರಾಗಿರಬಹುದಾಗಿದೆ. ಇಂದಿಗೂ ಮುಕ್ತಾಯಕ್ಕನ ಸಂಬಂಧವಾಗಿ ಮಾಳವ್ವನೆಂದು ಕರೆಯುವ ರೂಢಿಯು ಈ ಪರಿಸರದಲ್ಲಿದೆ. ಮುಂದೆ ಕಲ್ಯಾಣ ಪರಿಸರಕ್ಕೆ ಇವರು ಹೋದಾಗ ಸಿದ್ಧಯ್ಯ ಶರಣರ ಸಂಪರ್ಕದಿಂದಾಗಿ ಈ ಜಗತ್ತನ್ನು ಗೆಲ್ಲುವ ಶಕ್ತಿಯ ಜ್ಞಾನ ಪಡೆದ ಕಾರಣ ಪರ್ಯಾಯವಾಗಿ ಆತನಿಗೆ ಜಗತ್ತನ್ನು ಗೆದ್ದ ಅಣ್ಣ ಅಜಗಣ್ಣನೆಂದೂ - ಮುಕ್ತಿಯ ಮೆಟ್ಟಲೇರಿದ ಮಾಳವ್ವನನ್ನು ಮುಕ್ತಾಯಕ್ಕನೆಂದು ಕರೆದಿರಬಹುದಾದ ಸಾಧ್ಯತೆ ಇದೆ. ಅಜಗಣ್ಣನ ಮೂಲ ಹೆಸರು ಸಿದ್ಧಯ್ಯನಾಗಿರಬಹುದುವೆಂಬುದಕ್ಕೆ ಬೆಟ್ಟದ ಒಂದು ತುದಿಯಲ್ಲಿ ಸಿದ್ಧಯ್ಯನಗುಡಿ ಇದೆ .ಆದರೆ ಇದು ಗೋಪುರದ ಕೆಳಗಡೆ ಸಮಾಧಿಯಂತಿದೆ.ಇದು ಅಜಗಣ್ಣನದು ಎಂಬುದು ಸ್ಪಷ್ಟವಾಗುತ್ತದೆ. ಹಾಗಾಗಿ ಅಜಗಣ್ಣ ಮೊಸರುಕಲ್ಲಿನಲ್ಲಿಯೇ ಲಿಂಗೈಕ್ಯವಾಗಿರುವ ಸಾಧ್ಯತೆ ಇದೆ ಎಂಬುದನ್ನು ನಾವು ಊಹಿಸಬಹುದಾಗಿದೆ.

ಮುಕ್ತಾಯಕ್ಕಳು ಅಲ್ಲಮನಿಂದ ಸಮಾಧಾನ ಪಡೆದಿರಬಹುದು ಎನ್ನುವುದಕ್ಕೆ ಆಕೆಯ ವಚನ , ಪ್ರಭುವಿನ ವಚನವೇ ನಿದರ್ಶವಾಗಿದೆ .ಅಂತೆಯೇ ಅಲ್ಲಮ ಪ್ರಭುಗಳು ಧ್ಯಾನಗೈದ ' ಗೂಗಲ್ಲು ' ಮೊಸರ ಕಲ್ಲಿಗೆ ಹತ್ತಿರವಾಗಿದೆ. ಹೀಗಾಗಿ ಮೊಸರ ಕಲ್ಲು ಮುಕ್ತಾಯಕ್ಕನ ಊರು ಎಂಬುವಲ್ಲಿ ಯಾವ ಸಂದೇಹವಿಲ್ಲ. ಹಾಗೆಯೇ ಬಾಚಯ್ಯರ ಗೊಬ್ಬೂರು ಸಹ ಹತ್ತಿರವಿದೆ. ಇವರು ಕಲ್ಯಾಣ ಪರಿಸರದಿಂದ ಮರಳಿದ ಮೇಲೆ 'ಅಜಗಣ್ಣ -ಮುಕ್ತಾಯಕ್ಕ' ಎಂಬ ಹೆಸರು ಪಡೆದದ್ದು ಕಂಡುಬರುತ್ತದೆ. ಪ್ರಸ್ತುತ ಊರಿನಲ್ಲಿ ಮುಕ್ತಾಯಕ್ಕನ ಗುಡಿ ಕಟ್ಟುವ ಕೆಲಸ ನಡೆದಿದೆ. ಇಂದಿಗೂ ಊರಿನವರು ಮುಕ್ತಾಯಕ್ಕ ಕಡೆದ ಮೊಸರು ಕಲ್ಲಾದುದರ ಪ್ರತೀಕವಾಗಿ ಗುಡ್ಡಕ್ಕೆ ಬುತ್ತಿ ಕಟ್ಟಿಕೊಂಡು ಹೋಗಿ ಊಟ ಮಾಡುವ ಪದ್ಧತಿ ಇದೆ. ಪ್ರತಿ ವರ್ಷ ಜಾತ್ರೆ ಕೂಡ ನಡೆಯುತ್ತಿದೆ. ಇಲ್ಲಿ ಏನಿಲ್ಲವೆಂದರೂ ಮನೆಯಲ್ಲಿರುವ ಹೆಣ್ಣು ಮಕ್ಕಳ ಪೈಕಿ ಒಬ್ಬಳ ಹೆಸರಾದರೂ ಮುಕ್ತಾಯಕ್ಕ ಎಂದಿದೆ. ಇದಲ್ಲದೇ ಅಜಗಣ್ಣ ಎಂಬ ಹೆಸರು ಸಹ ಕಂಡು ಬರುತ್ತದೆ.

ಇವರ ವಂಶಜರೆಂದು ಹೇಳಿಕೊಳ್ಳುವ ಬಸಲಿಂಗಯ್ಯ ಸ್ವಾಮಿ ಎಂಬುವರು ಇದೇ ಊರಿನಲ್ಲಿದ್ದಾರೆ. ಅಜಗಣ್ಣನಿಗೆ ಒಬ್ಬ ಹೆಂಡತಿ ಇದ್ದಳೆಂದು ಆಕೆಯ ಹೆಸರು ಮಹಾದೇವಿಯೆಂದು ಆಕೆ ಅಜಗಣ್ಣನ ಗುಪ್ತ ಭಕ್ತಿಯನರಿಯಲಿಲ್ಲ. ಆ ಕಾರಣದಿಂದ ಅವರದಲ್ಲಿ ವಿಷಮ ದಾಂಪತ್ಯ ಮೂಡಿದ ಕಾರಣ ಆತ ತನ್ನ ಊರನ್ನು ತೊರೆದು ಮುಕ್ತಾಯಕ್ಕಳಲ್ಲಿಗೆ ಬಂದನೆಂಬುದಾಗಿ ರಾಚಪ್ಪಯ್ಯರ ಪ್ರಭುಚರಿತೆಯಿಂದ ತಿಳಿದುಬರುತ್ತದೆ.[೧] ಇದುವರೆಗಿನ ಅಂಶಗಳನ್ನು ಗಮನಿಸಿದರೆ ಇವರು ಮೂಲತಃ ಗದಗ ಜಿಲ್ಲೆಯ ಲಕ್ಕುಂಡಿಯವರು ಮುಂದೆ ಮುಕ್ತಾಯಕ್ಕ ವಿವಾಹದ ನಂತರ ಮೊಸರ ಕಲ್ಲಿಗೆ ಬಂದು ನೆಲಸಿದ್ದಾರೆ. ಅಲ್ಲಿಂದ ಮುಂದೆ ಅಜಗಣ್ಣ ಕಲ್ಯಾಣಕ್ಕೆ ಮುಕ್ತಾಯಕ್ಕಳನ್ನು ಕರೆದು ಕೊಂಡು ಹೋಗಿ ಕೆಲವು ದಿನಗಳ ಬಳಿಕ ಮರಳಿ ಆಕೆಯನ್ನು ಕಳುಹಿಸಿ ಆತ ಕಲ್ಯಾಣದಲ್ಲಿ ಉಳಿದಿದ್ದಾನೆ. ಕೊನೆಗಾಲದಲ್ಲಿ ಪುನಃ ಆತ ಮೊಸರ ಕಲ್ಲಿಗೆ ಬಂದು ಐಕ್ಯನಾಗಿರಬೇಕು. ಆ ದು:ಖದಲ್ಲಿ ಮುಕ್ತಾಯಕ್ಕ ಕೆಲವು ದಿನಗಳ ಬಳಿಕ ಐಕ್ಯಳಾಗಿರಬೇಕು.

ಕಾಲ :

ಇವರ ಕಾಲದ ಬಗ್ಗೆ ನಿಖರವಾಗಿ ಹೇಳಲು ಶಾಸನಾಧಾರಗಳಿಲ್ಲ . ವಚನಗಳಲ್ಲಿಯೂ ಸ್ಪಷ್ಟತೆಯಿಲ್ಲ .ಸಮಕಾಲೀನರ ಕಾಲದ ಮಾಹಿತಿಯ ಹಿನ್ನೆಲೆಯಲ್ಲಿ ಇವರ ಕಾಲ ಗುರುತಿಸಬಹುದು. ಜೇಡರ ದಾಸಿಮಯ್ಯರ ಪತ್ನಿ ದುಗ್ಗಳೆ ತನ್ನ ವಚನವೊಂದರಲ್ಲಿ ' ಐಕ್ಯನಾದಡೆ ಅಜಗಣ್ಣನಂತಾಗಬೇಕು'[೨] ಎಂದು ಸ್ಮರಿಸಿದ್ದನ್ನು ನೋಡಿದರೆ ಜೇಡರ ದಾಸಿಮಯ್ಯರ ಕಿರಿಯ ಸಮಕಾಲೀನರಾದರೂ ಇವರು ಪ್ರಮುಖವಾಗಿ ಬಸವ ಸಮಕಾಲೀನರಾಗಿದ್ದರೆಂದು ಸ್ಪಷ್ಟವಾಗುತ್ತದೆ .ಹೀಗಾಗಿ ಅಜಗಣ್ಣರ ಕಾಲ ಕ್ರಿ.ಶ.೧೧೪೦ ಎಂದು ಊಹಿಸಬಹುದು. ಹಾಗೆಯೇ ಮುಕ್ತಾಯಕ್ಕಳ ಕಾಲ ಕ್ರಿ.ಶ.೧೧೪೦ರಿಂದ ಕ್ರಿ.ಶ.೧೧೮೦ರ ಸುಮಾರಿನದೆಂದು ಊಹಿಸಬಹುದು.

---

೧ : ಡಾ: ಬಸವಲಿಂಗ ಸೊಪ್ಪಿಮಠ-ಕೋ.ಬ.ಅ. ಪುಟ ೧೯೦-೧೯೧

೨ : ಸಂ: ಡಾ : ವೀರಣ್ಣ ರಾಜೂರು -ಸ.ವ.ಸಂ.-೫ ವಚನ ೧೨ , ಪುಟ ೨೨೯

ವಚನಾಂಕಿತ ಮತ್ತು ವಚನಗಳು :

ಅಜಗಣ್ಣನು ಹತ್ತು ವಚನಗಳು ಬರೆದಿರುವುದಾಗಿ ತಿಳಿದು ಬರುತ್ತದೆ.೧ ಆತನ ವಚನಾಂಕಿತ 'ಮಹಾಘನ ಸೋಮೇಶ್ವರ' (ಲಿಂಗ) ವಾಗಿದೆ. ಆತನ ವಚನಗಳ ಶಕ್ತಿ ಎಂತವಹುದೆಂಬುದಕ್ಕೆ ಆತನ ವಚನದ 'ಅರಿವೇ ಗುರು ಅನುಭಾವವಾದ ಪ್ರಸಾದಿ '೨ ಎಂಬ ಸಾಲು ನಿದರ್ಶನ ಇತನ ವಚನಗಳ ಆಧಾರದಿಂದಲೇ ಇವರಿಗೆ ಕಲ್ಯಾಣ ಶರಣರ ಸಂಪರ್ಕವಿತ್ತೆಂದು ತಿಳಿಯುತ್ತದೆ.

' ಗುರುಲಿಂಗ ಕೃಪೆಯಿಂದ ಸಜ್ಜನ ಶರಣರ ಸಂಗ ಸುಖವ ಕಂಡೇ

ಎನೆಂದು ಪಮಿ ಸುವೆನಯ್ಯ ಗುರುಲಿಂಗದ ಮಹಿಮೆಯನು

ಮಹಾಘನ ಸೋಮೇಶ್ವರನೆಂಬ ಗುರುಲಿಂಗವ ತೋರಿದನಾಗಿ೩

ಯಾವುದೇ ವಚನಗಳಲ್ಲಿ ಇವರು ಶರಣರ ಹೆಸರನ್ನು ಉಲ್ಲೇಖಿಸದಿದ್ದರೂ ಆತನ ವಚನ -ಸಮಕಾಲೀನ ಶರಣರು ಸ್ಮರಿಸುವ ಆತನ ಐಕ್ಯ ಸ್ಥಿತಿಯ ವಿವರಗಳನ್ನು ಗಮನಿಸಿದರೆ ನಮಗೆ ಇದು ಸ್ಪಷ್ಟವಾಗುತ್ತದೆ.

ಮುಕ್ತಾಯಕ್ಕನ ವಚನಾಂ ಕಿತ ಅಜಗಣ್ಣ (ಅಜಗಣ್ಣ ತಂದೆ)ಎಂಬುದಾಗಿದೆ ಆಕೆಯ ೩೭ ವಚನಗಳಲ್ಲಿ ೪ ಲೌಕಿಕ ದುಃಖ ಅಲೌಕಿಕದೊಡನೆ ಬೆರೆತು ಹೇಗೆ ಅದು ಆಧ್ಯಾತ್ಮಿಕವಾಗಿ ಸಮನ್ವಯಗೊಂಡಿದೆ ಎಂಬುದನ್ನು ಕಾಣಬಹುದು. ಈಕೆಯ ವಚನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಇದುವರೆಗೂ ವಿದ್ವಾಂಸರು ಗುರುತಿಸದೇ ಹೋಗಿರಬಹುದಾದ ಮಹತ್ವದ ಅಂಶ ನಮಗೆ ಸ್ಪಷ್ಟವಾಗಿ ಕಂಡುಬರುತ್ತದೆ.

ಆಕೆಯ ವಚನಗಳ ಉದ್ದಕ್ಕೂ ಅಜಗಣ್ಣರನ್ನು ಪರಿಚಯಿಸುತ್ತಾಳೆ. ಹಾಗಾದರೆ ಅಜಗಣ್ಣ ಯಾರು? ಎಂದು ಪ್ರಶ್ನಿಸಿಕೊಂಡಾಗ ಇದುವರೆಗೂ ಎಲ್ಲರೂ ಆಕೆ ಅಜಗಣ್ಣನ 'ತಂಗಿ' ಎಂದು ಹೇಳುತ್ತಾರೆ. ಆದರೆ ಆಕೆ '' ತಂಗಿಯಲ್ಲ -ಮಗಳೆಂಬುದು '' ನಮಗೆ ಆಕೆಯ ವಚನಗಳಿಂದಲೇ ಸ್ಪಷ್ಟವಾಗುತ್ತದೆ. ನಾವೀಗ ಮುಕ್ತಾಯಕ್ಕ ಹೇಗೆ ಅಜಗಣ್ಣನ ಮಗಳಾಗುತ್ತಾಳೆ ಎಂಬುದನ್ನು ಗಮನಿಸೋಣ:

ಶೂನ್ಯ ಸಂಪಾದನೆಯಲ್ಲಿ ಬರುವಂತೆ ಪ್ರಭುದೇವರು ಮುಕ್ತಾಯಕ್ಕನ ಕುರುಹು ಕೇಳಿದಾಗ ಆಕೆ ಹೇಳುವ ವಚನದ ಕೊನೆಯಸಾಲು 'ಎನ್ನ ಅಜಗಣ್ಣ ತಂದೆಯ ಬೆನ್ನ ಬಳಿಯವಳಾನಯ್ಯ ' ಎಂಬುದರ ಮೂಲಕ ಆಕೆಯನ್ನು ಅಜಗಣ್ಣನ ಸಹೋದರಿಯೆಂದು ಭಾವಿಸಿಕೊಂಡು ಬರಲಾಗುತ್ತಿದೆ.೫ ಇದನ್ನು ಗಮನಿಸಿದಾಗ 'ಬೆನ್ನ ಬಳಿ' ಎಂಬ ಪದ 'ಹಿಂದಿನ ವಂಶ -ಕುಲ' ಎಂದರ್ಥವಾಗುತ್ತದೆ. ಹಾಗಾದರೆ ಅಜಗಣ್ಣ ಮುಕ್ತಾಯಕ್ಕಳಗಿಂತ ಹಿಂದಿನವರೇ ಎಂಬ ಸಂಶಯ ಬರುತ್ತದೆ ಎನ್ನಲಿಕ್ಕೆ ಇದು ಸಾಧ್ಯವಾಗದು. ಕಾರಣ ಆಕೆಯ ವಚನಗಳಲ್ಲಿ ಸ್ಪಷ್ಟವಾಗಿ ಅಜಗಣ್ಣನ ಪ್ರಲಾಪವಿದೆ.

ಇಲ್ಲಿ ತಂದೆಯ ಬೆನ್ನ ಬಳಿ ಎಂಬುದನ್ನು ಲಕ್ಷ್ಯವಹಿಸಿದಾಗ ಇದು ತಂದೆಯ ವಂಶದವಳೆಂದು ಸ್ಪಷ್ಟವಾಗುತ್ತದೆ. ಇದನ್ನು ಲಕ್ಷಿಸಬೇಕಾದದ್ದು ಬಹು ಮುಖ್ಯವಾಗಿದೆ. ಹಾಗೆಯೇ ಯಾವ ವಚನದಲ್ಲಿ ಮುಕ್ತಾಯಕ್ಕ ನಿರ್ದಿಷ್ಟವಾಗಿ ತನ್ನ ಪರಿಚಯ ಹೇಳಿಲ್ಲ. ಆದರೆ ವಚನದಲ್ಲಿ ಬರುವ ತಂದೆ ಪದ ಗಮನಿಸಬೇಕು. ಇಲ್ಲಿ ಮುಕ್ತಾಯಕ್ಕ ನಿಗೂಢ ವಾದ ಅನುಭಾವದ ಅರ್ಥದ ಮೂಲಕ ಪರಿಚಯ ಮಾಡಿಕೊಡುತ್ತಾಳೆ. ಅದನ್ನೇ ಆಧರಿಸಿ ಆಕೆಯ ಕುರುಹು ಎಂಬುದಾಗಿ ಶೂನ್ಯ ಸಂಪಾದನಾಕಾರರು ಸಂಪಾದಿಸಿದನ್ನು ಸಂದೇಹಿಸಿ ಆಕೆ ಅಜಗಣ್ಣನ ಬೆನ್ನ ಹಿಂದಿನವಳು ಅಂದರೆ ಆತನ ಸಹೋದರಿ ಇರಬೇಕೆಂದು ಬಹುತೇಕ ವಿದ್ವಾಂಸರ ಅಭಿಮತವಾಗಿದೆ. ಇದಕ್ಕೆ ಸಮರ್ಥನೆ ಎಂಬಂತೆ ಚಾಮರಸನ ಪ್ರಭುಲಿಂಗಲೀಲೆಯಲ್ಲಿ ' ಒಡನೆ ಹುಟ್ಟಿದಳೊಬ್ಬಳರಿಯದೇ '೬ ಎಂಬ ಮಾತಿದೆ. ಆದರೆ ಇದೇ ಚಾಮರಸನ ಪ್ರಭುಲಿಂಗಲೀಲೆಯಲ್ಲಿ 'ಎನ್ನ ನಿಧಾನವಪ್ಪ ಅಜಗಣ್ಣ ತಂದೆಯ ನಾನದೆಂತಗಲುವೆನು'೭ ಎಂಬ ವಿಚಾರವನ್ನು ಸಹ ಅವಲೋಕಿಸಬೇಕು. ಇನ್ನೂ ಆಕೆಯ ೩೭ ವಚನ ಗಮನಿಸಿದಾಗ ಆಕೆ ಅಜಗಣ್ಣನ ಮಗಳೆಂಬುದು ಸ್ಪಷ್ಟವಾಗಬಲ್ಲುದಾಗಿದೆ.

೩೭ ವಚನಗಳಲ್ಲಿಯೇ ೨೦ ವಚನಗಳಲ್ಲಿ 'ತಂದೆ' ಎಂಬ ಪದ ಪ್ರಯೋಗವಾಗಿರುವುದನ್ನು ನಾವು ಗಮನಸಿಬೇಕಾದ ಅಂಶವಾಗಿದೆ. ಅಜಗಣ್ಣನ ಪರಿಚಯ ಮಾಡುವಾಗ ಮುಕ್ತಾಯಕ್ಕ ಬಹಳಷ್ಟು ಕಡೆ ತಂದೆಯೆಂಬುದಾಗಿ ಕೊನೆಯಲ್ಲಿ ಸಂಭೋಧನೆ ಮಾಡುತ್ತಾಳೆ.

---

೧ : ಸಂ: ಡಾ : ಎಂ.ಎಂ. ಕಲಬುರ್ಗಿ-ಸ.ವ.ಸಂ.-೬ ವಚನ ೧ -೧೦ ಪುಟ೯-೧೦೧

೨ : ಅದೇ : ವಚನ ೧ ಪುಟ೯

೩ : ಅದೇ :ವಚನ ೭ ಪುಟ ೧೦೦

೪ : ಸಂ: ಡಾ : ವೀರಣ್ಣ ರಾಜೂರು -ಸ.ವ.ಸಂ. - ೫ ಪುಟ ೨೭೧-೨೮೧

೫ : ಸಂ: ಸಂ.ಶಿ. ಭೂಸನೂರ ಮಠ-ಗೂ.ಸಿ.ಪ್ರ.ಶೂ. ವಚನ ೬ ಪುಟ ೨೫

೬ : ಸಂ: ಶಿ.ಶಿ. ಬಸವನಾಳ -ಚಾ.ಪ್ರ. -ಗತಿ೧೨ ಪದ್ಯ ೩ ಪುಟ೧೪೬

೭ : ಅದೇ :ಗತಿ೧೨ ಪದ್ಯ೬ , ಪುಟ೧೪೭

ಸಾಮಾನ್ಯವಾಗಿ ತಂದೆಯೊಬ್ಬನು ಸತ್ತಾಗ ಮಕ್ಕಳು ತಂದೆಯ ಗುಣಗಾನ ಮಾಡುತ್ತ ಅಳುವುದನ್ನು ನಾವು ಎಲ್ಲಾ ಕಡೆ ಕಾಣುತ್ತೇವೆ. ಇಂತಹ ಒಂದು ಸಾಮಾನ್ಯ ಸಂಗತಿಯನ್ನು ನಮ್ಮ ಸ್ಮರಣೆಗೆ ತಂದು ಆಲೋಚಿಸಿದಾಗ ಇಲ್ಲಿ ಶರಣೆಯರ ಈಕೆ ಸಹ ತಾನು ತನ್ನ ತಂದೆಯಿಂದ ಪಡೆಯಬೇಕಾದ ಜ್ಞಾನದಿಂದ ವಂಚಿತಳಾಗಿ ದುಃಖಿಸುವುದನ್ನು ಸ್ಪಷ್ಟವಾಗಿ ಕಾಣಬಹುದು . ಅದು ಅಣ್ಣನ ಸಾವಿನ ಶೋಕವಲ್ಲವೆಂಬುದು ನಮಗೆ ತಿಳಿದು ಬರುತ್ತದೆ. ನಮ್ಮಲ್ಲಿ ತಂದೆಗೆ ಅಣ್ಣನೆನ್ನುವ ರೂಢಿ ಇದೆ .ಅದೇ ಅಣ್ಣನಿಗೆ ತಂದೆಎನ್ನುವ ರೂಢಿಯಿಲ್ಲ. ಹೀಗಾಗಿ ಆಕೆ ಅಜಗಣ್ಣನ ಸಹೋದರಿಯಾಗಿರದೇ ಮಗಳೆಂಬುದು ಖಚಿತವಾಗುತ್ತದೆ.ಇಲ್ಲಿ ಮುಕ್ತಾಯಕ್ಕ ಅಲೌಕಿಕ ದುಃಖದ ಉತ್ಕಟತೆಯನ್ನು ಅನುಭಾವದ ನೆಲೆಯಲ್ಲಿ ನಾವು ಕಾಣುತ್ತೇವೆ .

ಸತ್ಯಕ್ಕನನ್ನು ಭೇಟಿಯಾದಾಗ ಸ್ಪಷ್ಟವಾಗಿ ಮುಕ್ತಾಯಕ್ಕ ‘ ಈ ಅಜಗಣ್ಣ ತಂದೆಯಅಗಲಿ ನಾನೆಂತು ಸೈರಿಸುವೆನೆಲೆ’ ಎನ್ನುತ್ತಾಳೆ.೧ಹಾಗೆಯೇ ಆಕೆಯ ವಚನಗಳನ್ನು ತುಂಬು ಕಾಳಜಿಯಿಂದ ಅಭ್ಯಸಿಸಿದಾಗ ಮುಕ್ತಾಯಕ್ಕಳು ಅಜಗಣ್ಣನನ್ನು ಅಣ್ಣ ಎಂದಿರುವುದು ಸಹಜವಾದ ರೂಢಿಗತ ಭಾಷೆಯಲ್ಲಿ. ಆದರೆ ತಂದೆ ಎಂದ ಸಂಭೋದಿಸಿರುವುದು ‘ಕಳ್ಳು ಬಳ್ಳಿ’ಯ ವಂಶಸಂಬಂಧದಿಂದ ಎಂಬುದು ಸ್ಪಷ್ಟವಾಗಿದೆ. ಒಂದು ವಚನ ಸ್ಪಷ್ಟವಾಗಿ ಅಜಗಣ್ಣನ ನಿಲುವು ಹೇಳುವುದರ ಜೊತೆಗೆ ಆತ ಆಕೆಯ ತಂದೆ ಎಂಬುದನ್ನು ಸ್ಪಷ್ಟವಾಗಿ ನಮಗೆ ತಿಳಿಸುತ್ತದೆ. ಆ ವಚನ ಹೀಗಿದೆ:

‘‘ ಸಚ್ಚಿದಾನಂದ ಸ್ವರೂಪವಾದ ವಾಙ್ಮನಕ್ಕೆ ಗೋಚರವಾದ

ಜ್ಞಾನಕ್ರೀಯನೊಳಕೊಂಡು ನಿಂದ ಜಂಗಮವೆ ಅಂಗಪ್ರಾಣವಾದ

ಶರಣರನೊಳಕೊಂಡು ಚಿದ್ಘನದೊಳಗೆ ಅವಿರಳೈಕ್ಯವಾದ

ಎನ್ನ ಅಜಗಣ್ಣ ತಂದೆಯನರಿದು ಶರಣೆಂಬಾತ ನೀನಾರು ಹೇಳಯ್ಯ ’೨ ಎಂದು ಅಲ್ಲಮನನ್ನು ಪ್ರಶ್ನಿಸುತ್ತಾಳೆ.

ಮೇಲಿನ ಈ ಎಲ್ಲಾಂಶಗಳಿಂದ ನಮಗೆ ಸ್ಪಷ್ಟವಾಗುವುದೆನೆಂದರೆ:

ಇದುವರೆಗೂ ಶೂನ್ಯ ಸಂಪಾದನಾ ಕಾರರು ಉಲ್ಲೇಖಿಸಿದ್ದನ್ನೇ ಸಮರ್ಥಿಸುತ್ತ ಅನೇಕ ವಿದ್ವಾಂಸರು ಈಕೆಯನ್ನು ಅಜಗಣ್ಣನ ಸಹೋದರಿ ಎಂದು ಭಾವಿಸಿ ಉಲ್ಲೇಖಿಸಿದ್ದಾರೆ. ಆನಂತರದ ಕಾವ್ಯಗಳು ಇದನ್ನೆ ಸಮರ್ಥಿಸುತ್ತದೆ. ಆದರೆ ಸ್ಪಷ್ಟವಾಗಿ ಆಕೆ ಅಜಗಣ್ಣನ ಮಗಳೆಂಬುದಕ್ಕೆ ಆಕೆಯ ವಚನಗಳೆ ಸಾಕ್ಷಿಯಾಗಿವೆ. ಆದ್ದರಿಂದ ನಾವು ಅಜಗಣ್ಣನ ಮಗಳು ಮುಕ್ತಾಯಕ್ಕನೆಂದು ಪರಿಗಣಿಸಬೇಕು. ಆಕೆ ಸಹೋದರಿ ಎಂಬುದನ್ನು ಕೈ ಬಿಡುವುದು ಬಹು ಸೂಕ್ತವಾಗಿದೆ ಎನ್ನಿಸುತ್ತದೆ. ಆಕೆಯ ಶೋಕತಪ್ತ ವಚನಗಳೇ ಇದಕ್ಕೆ ಪ್ರಬಲ ಆಧಾರವಾಗಿವೆ. ಅಜಗಣ್ಣ ಆಕೆಗೆ ತಂದೆಯಾಗಿ -ಗುರುವಾಗಿ ಮಾರ್ಗದರ್ಶಕನಾಗಿದ್ದಂತಾತನು ಸಾವನ್ನಪ್ಪಿದಾಗ ಸಹಜವಾಗಿ ಆಕೆ ಲೌಕಿಕರಂತೆ ಶೋಕಿಸಿ ಅದು ಸಾಹಿತ್ಯಿಕ ಅಭಿವ್ಯಕ್ತಿಯಾಗಿ ಆಮೂಲಕ ಅನುಭಾವದ ತಾತ್ವಿಕತೆಯನ್ನು ಪಡೆದದ್ದು ಸಹಜವಾಗಿದೆ.

ವ್ಯಕ್ತಿತ್ವ :

ಇವರ ವ್ಯಕ್ತಿತ್ವಕ್ಕೆ ಇವರ ವಚನಗಳೇ ಪ್ರಮುಖ ನಿದರ್ಶನಗಳಾಗಿವೆ. ಇವರನ್ನು ಕುರಿತು ಸಮಕಾಲೀನ ವಚನಕಾರರು ಅನೇಕ ರೀತಿಯಾಗಿ ಸ್ತುತಿಸಿದ್ದಾರೆ. ಅಜಗಣ್ಣನ ವ್ಯಕ್ತಿತ್ವದ ಬಗ್ಗೆ ಚೆನ್ನ ಬಸವಣ್ಣನವರು ಹೇಳುವ:

‘........ಅಜಗಣ್ಣನ ಐಯ್ದು ವಚನ

ಅಜಗಣ್ಣನ ಅಯ್ದು ವಚನಕ್ಕೆ ಕೂಡಲ ಚೆನ್ನ ಸಂಗಮ ದೇವ’ ೩ ಆದಯ್ಯ ‘ಅಜಗಣ್ಣನ ಆರೂಢ-ಮುಕ್ತಾಯಕ್ಕನ ಅಕ್ಕರು ’ ೪ ಎಂದರೆ ಏಲೇಶ್ವರದ ಕೇತಯ್ಯ ‘ ಅಜಗಣ್ಣಂಗೆ ಐಕ್ಯಶೀಲವೆಂದು ’ ೫ ಹಾವಿನಾಳಕಲಯ್ಯ ‘ ಎನ್ನ ಅಮಳೋಕ್ಯದಲ್ಲಿ ಸ್ವಾಯತವಾದನಯ್ಯ ಅಜಗಣ್ಣನು ’೬ . ಎನ್ನುತ್ತಾರೆ ಅಕ್ಕಮಹಾದೇವಿ ಸಹ ಅಜಗಣ್ಣನರ ಐಕ್ಯ ಸ್ಥಲ ತಿಳಿಸಿ ಅವರ ಕರುಣ ಪ್ರಸಾದ ಎನಗಾಯಿತ್ತೆಂದಿದ್ದಾಳೆ ೭ ಕಿನ್ನರಿ ಬ್ರಹ್ಮಯ್ಯ೮ ಡೋರಕಕ್ಕಯ್ಯ೯ ಢಕ್ಕೆಯ ಮಾರಯ್ಯ೧೦ ಇವರನ್ನು ಸ್ಮರಿಸಿದ್ದಾರೆ.

---

೧ : ಸಂ:ಡಾ: ವೀರಣ್ಣ ರಾಜೂರು -ಸ.ವ.ಸಂ. -೫ ವಚನ ೧೧ , ಪುಟ ೨೭೪

೨ : ಅದೇ : ವಚನ ೩೧ , ಪುಟ ೨೮೦

೩: ಸಂ:ಡಾ: ಬಿ.ವಿ.ಮಲ್ಲಾಪುರ -ಸ.ವ.ಸಂ.-೩ ವಚನ ೧೮೨, ಪುಟ ೬೮

೪ : ಸಂ: ಡಾ: ಎಂ.ಎಂ. ಕಲಬುರ್ಗಿ-ಸ.ವ.ಸಂ. ಪುಟ ೩೨೭

೫ : ಅದೇ :ವಚನ ೪೩-ಪುಟ ೬೮೯

೬ : ಸಂ:ಡಾ: ಬಿ.ಆರ್.ಹಿರೇಮಠ-ಸ.ವ.ಸಂ.-೯ ಪುಟ ೩೭೫

೭: ಸಂ: ಡಾ:ವೀರಣ್ಣ ರಾಜೂರು-ಸ.ವ.ಸಂ.-೫ ವಚನ ೨೪೩, ಪುಟ ೭೫

೮ : ಸಂ: ಡಾ: ಎಸ್ .ವಿದ್ಯಾಶಂಕರ-.ಸ.ವ.ಸಂ.೭ ವಚನ ೧೩, ಪುಟ ೨೭

೯ : ಅದೇ : ವಚನ ೨,ಪುಟ ೩೧೧

೧೦ : ಅದೇ : ವಚನ ೨೩, ಪುಟ ೯೦

೪) ಆಯ್ದಕ್ಕಿ ಮಾರಯ್ಯ ಮತ್ತು ಆಯ್ದಕ್ಕಿ ಲಕ್ಕಮ್ಮ

‘ಕಾಯಕವೇ ಕೈಲಾಸ’೧ವೆಂದುಉಸಿರಿಸಿ ಕಲ್ಯಾಣ ಶರಣರ ‘ಕಾಯಕ- ದಾಸೋಹ’ ಗಳಿಗೆ ನಿಜ ಮೌಲ್ಯವನ್ನು ತಂದು ಕೊಡುವ ಮೂಲಕ ಅದನ್ನು ಸಾಮಾಜಿಕ ಮೌಲ್ಯವಾಗಿರಿಸಿದವರು ಆಯ್ದಕ್ಕಿ ಶರಣ ದಂಪತಿಗಳು.

ಸ್ಥಳ :

ಇವರು ಲಿಂಗಸೂಗೂರು ತಾಲೂಕಿನವರೆಂಬುದು ಎಲ್ಲರೂ ಒಪ್ಪಿದ ವಿಷಯ. ಇವರು ಎರಡೋಣಿಯಾಗಲಿ ಅಥವಾ ಅಮರೇಶ್ವರದವರಾಗಲಿ ಅಲ್ಲ. ಇವರು ಇದೇ ತಾಲೂಕಿನ ‘ ಯಲಗಟ್ಟಾ’ ಗ್ರಾಮದವರೆಂಬುದು ನನಗೆ ಕ್ಷೇತ್ರ ಕಾರ್ಯದ ಮಾಹಿತಿಗಳಿಂದ ತಿಳಿದು ಬಂದಿದೆ. ಇವರು ಯಲಗಟ್ಟಾದವರೆಂಬುದಕ್ಕೆ ಇವರ ಕುರಿತಾಗಿ ಆ ಗ್ರಾಮದಲ್ಲಿ ಕೇಳಿಬರುವ ಜನರ ಮಾತುಗಳೇ ಪ್ರಮುಖ ನಿದರ್ಶನಗಳಾಗಿವೆ. ಇವರು ಅಮರೇಶ್ವರದ ಭಕ್ತರಾಗಿದ್ದವರೂ ಪ್ರತಿವರ್ಷ ಅಮರೇಶ್ವರ ದರ್ಶನ ಮಾಡಿಕೊಂಡು ಊರಿಗೆ ಹಿಂದಿರುಗುತ್ತಿದ್ದರು. ಮುಂದೆ ಅಮರೇಶ್ವರನ ಮೇಲೆ ಅಪರಿಮಿತ ಭಕ್ತಿ ಉಂಟಾಗಿ ಕೆಲವು ದಿನಗಳು ಮಾತ್ರ ಅಮರೇಶ್ವರ ಕ್ಷೇತ್ರದಲ್ಲಿ ಕಾಲ ಕಳೆದರು. ಆನಂತರ ಕಲ್ಯಾಣ ಶರಣರ ಚಳುವಳಿಗೆ ಆಕರ್ಷಿತರಾಗಿ ಕಲ್ಯಾಣಕ್ಕೆ ಹೋದರೆಂಬುದು ನಮಗೆ ತಿಳಿದು ಬರುತ್ತದೆ.

ಇಂದಿಗೂ ಯಲಗಟ್ಟಾ ಗ್ರಾಮದಲ್ಲಿ ಲಕ್ಕಮ್ಮ -ಮಾರಯ್ಯ ಹೆಸರುಗಳು ಕಂಡುಬರುತ್ತವೆ. ವಿಶೇಷವಾಗಿ ಇವೆರಡು ಹೆಸರುಗಳು ಕೆಳವರ್ಗದವರಲ್ಲಿ ಕಂಡು ಬರುತ್ತವೆ. ಈ ಕುರಿತು ಶಾಂತರಸರು ಹೇಳುವುದು ಹೀಗೆ ‘ ಒಂದು ದಿನ ಮಾರಯ್ಯ - ಲಕ್ಕಮ್ಮ ಹೊರಟು ಬಿಟ್ಟರು ಕ್ಷೇತ್ರದ ಭಕ್ತರಲ್ಲದೇ ಸುತ್ತ ಮುತ್ತನ ಹಳ್ಳಿಯಜನರು ಅವರನ್ನು ಕಳಿಸಲು ಬಂದರು. ಒಂದು ಹರದಾರಿಯ ಮೇಲಿರುವ ಕೃಷ್ಣಾನದಿಯ ವರೆಗೆ ಜನ ಅವರ ಹಿಂದೆ ಬಂದರು. ನಾವೆಯಲ್ಲಿ ಅವರನ್ನು ಕೂಡ್ರಿಸಿ ಮರಳಿ ಹೋದರು. 'ಮತ್ತೊಂದಡೆ ಶಾಂತರಸರು ‘ ಹದಿನೈದು ದಿನಗಳ ಬಳಿಕ ಶಿವಪುರಕ್ಕೆ ಬಂದರು. ಶಿವಪುರ ಕಲ್ಯಾಣದ ಒಂದು ಉಪನಗರ ವಾಗಿತ್ತು. ಬಸವಣ್ಣನವರ ನೆರವಿನಿಂದ ತ್ರಿಪುರಾಂತಕೇಶ್ವರ ದೇವಾಲಯ ಹತ್ತಿರ ಒಂದು ಗೂಡಿಸನ್ನು ಕಟ್ಟಿಕೊಂಡರು.ಕಲ್ಯಾಣದಲ್ಲಿಯೇ ಐಕ್ಯರಾದರು’ ೨ಎನ್ನುತ್ತಾರೆ. ಇವರು ತಮ್ಮ ಸ್ವಗ್ರಾಮ ತೊರೆದು ಕಲ್ಯಾಣಕ್ಕೆ ಬರುವುದಕ್ಕೆ ಕಾರಣಗಳನ್ನು ವಾಸ್ತವಿಕ ನೆಲೆಯಲ್ಲಿ ಡಾ: ಮ.ನ. ಜವರಯ್ಯ ಗುರುತಿಸಿದ್ದು ಹೀಗೆ:

‘ ಮೊದಲನೆಯದಾಗಿ , ಅವರ ಬಡತನ ; ಎರಡನೆಯದು ಆಕಾಲದಲ್ಲಿ ಕಲ್ಯಾಣ ದಲ್ಲಿ ಅವ್ಯಾಹತವಾಗಿಯೂ ತಾತ್ವಿಕ ಸಂಘಟನಾತ್ಮಕವಾಗಿಯೂ ಜರಗುತ್ತಿದ್ದ ಶರಣರ ಸಾಮಾಜಿಕ, ಧಾರ್ಮಿಕ ಚಟುವಟಿಕೆಗಳು ಈ ದಂಪತಿಗಳನ್ನು ಬಹುವಾಗಿ ಆಕರ್ಷಿಸಿದವು. ಆದರೆ ಅವರ ಬಡತನದ ವಿಷಯಮಾತ್ರ ಬೇರೆ ಬೇರೆ ಪುರಾಣ ಕಾವ್ಯಗಳಿಂದ ವ್ಯಕ್ತವಾಗುತ್ತದೆಯೇ ಹೊರತು , ಸಾಮಾಜಿಕವಾಗಿ ಅವರು ಯಾವ ಕೋಮಿ ಸೇರಿದವರು ಎಂಬುದಕ್ಕೆ ಎಲ್ಲೂ ಆಧಾರಗಳು ದೊರೆಯುವುದಲ್ಲ ಆದರೆ ಶೂದ್ರವರ್ಗದ ಯಾವುದೋ ಒಂದು ಕೋಮಿಗೆ ಸೇರಿದವರಾಗಿರಬೇಕೆಂಬುದರಲ್ಲಿ ಬಹುಶಃ ಅನುಮಾನವಿದ್ದಂತಿಲ್ಲ’ ೩ ಇದುವರೆಗಿನ ವಿಚಾರಗಳಿಂದ ತಿಳಿದು ಬರುವುದನೇಂದರೆ ಇವರು ಸ್ವಗ್ರಾಮ ಯಲಗಟ್ಟಾದವರಾಗಿದ್ದು , ದೇವರ ಸೇವೆಗಾಗಿ ಅಮರೇಶ್ವರಕ್ಕೆ ಬಂದು ಮುಂದೆ ಕಲ್ಯಾಣ ಶರಣರ ಆಂದೋಲನದಿಂದ ಪ್ರೇರಿತರಾಗಿ ಅಲ್ಲಿಗೆ ಹೋಗಿ ‘ಆಯ್ದಕ್ಕಿ ಕಾಯಕ’ವನ್ನು ಕೈ ಗೊಂಡು ಅಲ್ಲಿಯೇ ಕೊನೆಯ ದಿನಗಳನ್ನು ಕಳೆದಿರಬೇಕು.

ಕಾಲ :

ಇವರ ಕಾಲದ ಬಗ್ಗೆ ಕವಿ ಚರಿತೆ ಕಾರರು ಕ್ರಿ.ಶ.೧೧೬೦ ಎಂದು ಹೇಳಿರುವುದು ಬಹುತೇಕ ಖಚಿತವಾಗಿದೆ. ಇವರ ಬಗ್ಗೆ ಯಾವುದೇ ಶಾಸನಗಳಲ್ಲಿ ದಿದ್ದರೂ ಉತ್ತರ ಕನ್ನಡ ಜಿಲ್ಲೆಯ ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿರುವ ‘ಶಿವೋತ್ಸವ ನಾಗಲಿಂಗ ಶಿಲಾಮಂಟಪದ ಗಗ್ಗರಿ ಕಲ್ಲಿನಲ್ಲಿ’೧೦ ಜನ ಶರಣರ ಶಿಲ್ಪಗಳಿದ್ದು ಅದರಲ್ಲಿ ಒಂದು ಶಿಲ್ಪ ಆಯ್ದಕ್ಕಿ ಮಾರಯ್ಯನದಾಗಿದೆ. ಆದರೆ ಆ ಶಿಲ್ಪದ ಕಾಲ -ಕತ್ತೃವಿನ ಬಗ್ಗೆ ಮಾಹಿತಿಗಳು ಕಂಡುಬರುವುದಿಲ್ಲ. ಸದ್ಯಕ್ಕೆ ಇವರು ಬಸವ ಸಮಕಾಲೀನರೆಂದು ತಿಳಿಯುವಲ್ಲಿ ಯಾವುದೇ ತೊಂದರೆಯಿಲ್ಲವೆನಿಸುತ್ತದೆ.

ಕಾಯಕ :

ಇವರ ಕಾಯಕ ಬಗ್ಗೆ ಹಲವಾರು ವಿದ್ವಾಂಸರು ಚರ್ಚಿಸಿದ್ದರೂ ಎಲ್ಲರಲ್ಲಿ ಏಕಾಭಿಪ್ರಾಯವಿದೆ. ಇವರು ಶರಣರ ಅಂಗಳದಲ್ಲಿ ಅಥವಾ ಶಿವ ಶರಣರ ಮನೆಯಲ್ಲಿ ಒರಳುಗಳ ಸುತ್ತ ಚೆಲ್ಲಿದ ಅಕ್ಕಿಯನ್ನು ಆಯ್ದು ತಂದು ಅದರಿಂದ ಪ್ರಸಾದ ತಯಾರಿಸಿ ಜಂಗಮರಿಗೆ ನೀಡಿ ಬಳಿಕ ತಾವು ಪ್ರಸಾದ ಸ್ವೀಕರಿಸುತ್ತಿದ್ದರು. ಇಂತಹ ಅಭಿಪ್ರಾಯವನ್ನು ಕಾಲಕಾಲಕ್ಕೆ ಬಂದ ಎಲ್ಲಾ ಪುರಾಣ ಕಾವ್ಯಗಳು ಸಮರ್ಥಿಸಿವೆ. ಅವುಗಳಲ್ಲಿ ಹೆಸರಿಸಬಹುದಾದ ಕೃತಿಗಳೆಂದರೆ : - ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ , ಶಿವತತ್ವ ಚಿಂತಾಮಣಿ , ಚೆನ್ನ ಬಸವ ಪುರಾಣ , ಮರಿತೋಂಟದಾರ್ಯನ ಸಿದ್ಧೇಶ್ವರ ಪುರಾಣ, ಚೆನ್ನಪ್ಪ ಕವಿಯ ಶರಣ ಲೀಲಾಮೃತ, ಪ್ರಭುದೇವ ಪುರಾಣ ಮುಖ್ಯವಾಗಿವೆ.

---

೧ : ಸಂ: ಡಾ: ಎಂ.ಎಂ. ಕಲಬುರ್ಗಿ -ಸ.ವ.ಸಂ. -೬ ವಚನ೭ , ಪುಟ ೩೭೮

೨ : ಶಾಂತರಸ -ಆ.ಮಾ.ದಂ.ಪುಟ ೭

೩ : ಡಾ : ಮ.ನ. ಜವರಯ್ಯ -ದ.ಶ.ಶ.ಅ. ಪುಟ ೨೬೮

ಅದಕ್ಕಿಂತ ಮುಖ್ಯವಾಗಿ ಇವರ ವಚನಗಳಲ್ಲಿ ಈ ರೀತಿಯ ಭಾವ ಕಂಡು ಬರುತ್ತವೆ. ' ಕಾಯಕನಿಂದಿತ್ತು ಹೋಗಯ್ಯ ಎನ್ನಾಳ್ದನೇ ಭಾವಶುದ್ಧವಾಗಿ ಮಹಾಶರಣರ ತಿಪ್ಪೆಯ ತಪ್ಪಲ ಅಕ್ಕಿಯ ತಂದು ನಿಶ್ಚೈಸಿ ಮಾಡಬೇಕು ' ೧

'ಅಂಗವರತ......ಬಾರಯ್ಯ ' ೨ ' ತನುಮನಧನ ....ನಲ್ಲದೇ ' ೩ ಈ ಎಲ್ಲಾ ವಚನಗಳ ಹಿನ್ನೆಲೆಯಲ್ಲಿ ಅವರ ಆಯ್ದಕ್ಕಿ ಕಾಯಕದ ವಿವೇಚನೆ ನಡೆದಿದೆ. ಇದು ಅಕ್ಷರಶಃ ಅರ್ಥೈಸಿಕೊಳ್ಳುವುದು ಎಷ್ಟರ ಮಟ್ಟಿಗೆ ಸರಿ ? ಇದು ಶರಣ ಧರ್ಮಕ್ಕೆ ವಿರೋಧವಾದದು. ಕೈ ಕಟ್ಟಿ ಕುಳಿತುಕೊಂಡು ಸೋಮಾರಿಯಾಗಿ ಪ್ರತಿಫಲ ಪಡೆಯುವುದನ್ನು ಶರಣರು ಒಪ್ಪುವುದಿಲ್ಲವೆಂಬುದು ಸರ್ವರಿಗೂ ತಿಳಿದ ಸಂಗತಿ. ಆ ಹಿನ್ನೆಲೆಯಲ್ಲಿ ಇವರ ಕಾಯಕದ ಬಗ್ಗೆ ಮೊದಲ ಬಾರಿಗೆ ನಾಡಿನಲ್ಲಿ ಹೊಸ ಚಿಂತನೆಗಳನ್ನು ಡಾ : ಬಸವಲಿಂಗ ಸೊಪ್ಪಿಮಠ ತಮ್ಮ ಆಕರ ಕೃತಿಯಲ್ಲಿ ಸುಧೀರ್ಘವಾಗಿ ಚರ್ಚಿಸಿದ್ದಾರೆ. ಅವರು ಹೇಳುವ ಹಾಗೇ ' ಮಾರಯ್ಯ ನುಡಿಯುವ ಪ್ರಮಥರುಗಳ ತಿಪ್ಪೆಯ ತಪ್ಪಲಕ್ಕಿ ಆತನ ದಾಸೋಹಂ ಭಾವವನ್ನು ಭೃತ್ಯಗುಣವನ್ನು ಸೂಚಿಸುತ್ತದೆಯೆಂದು ನುಡಿಯುವುದು ಸಹಜವಾಗುತ್ತದೆ. ಇದರರ್ಥ ಮಾರಯ್ಯ ಅಕ್ಕಿಯನ್ನು ಆರಿಸುತ್ತಿದ್ದಿಲ್ಲ ಎಂದಲ್ಲ . ಅಕ್ಕಿ ಆಯುವ ಕಾಯಕಕ್ಕೆ ಹೋಗತ್ತಿದ್ದ. ಆಯ್ದು ಮನೆಗೆ ತರುತ್ತಿದ್ದಿಲ್ಲ ; ಯಾರ ಅಂಗಳದಲ್ಲಿ ಅಕ್ಕಿ ಆರಿಸುವ ಕಾಯಕಕ್ಕೆ ನಿಲ್ಲುತ್ತಿದ್ದನೋ ಅವರಿಗೆ ಅಕ್ಕಿ ಆಯ್ದು ಕೊಟ್ಟು ತಾನು ಆರಿಸಿದ ಸತ್ಯ ಶುದ್ಧ ಕಾಯಕಕ್ಕೆ ಪ್ರತಿಯಾಗಿ ಅವರುನೀಡುವ ಅಕ್ಕಿಯನ್ನು ತಂದು ಪತ್ನಿ ಲಕ್ಕಮ್ಮನ ಕೈಗಿತ್ತು ಜಂಗಮದಾಸೋಹದ ತೃಪ್ತ ಜೀವನ ಸಾಗಿಸುತ್ತಿದ್ದರೆಂದು ಹೇಳಬೇಕು ' ೪

ಅಕ್ಕಿಯನ್ನು ಆಯುವ ಕೆಲಸ ದೊಡ್ಡ ಸಮಾರಂಭಗಳಲ್ಲಿ ಕೇವಲ ಒಬ್ಬರಿಂದ ಸಾಧ್ಯವಿಲ್ಲ ಅಂದ ಸಂಧರ್ಭದಲ್ಲಿ ಹೆಣ್ಣು ಗಂಡೆಂಬ ಭೇದವಿಲ್ಲದೇ ಈ ಕೆಲಸವನ್ನು ಹಳ್ಳಿಗಳಲ್ಲಿ ಮಾಡುತ್ತಾರೆ. ಈಗಲೂ ಇಂತಹ ಪ್ರಸಂಗಳನ್ನು ಕಾಣಬಹುದು. ಅದೇ ರೀತಿ ಈ ದಂಪತಿಗಳು ಇಂತಹ ಕೆಲಸವನ್ನು ಮಾಡಿದಾಗ ಅದಕ್ಕೆ ಪ್ರತಿಫಲವಾಗಿ ಅವರು ಅಕ್ಕಿಯನ್ನು ಸ್ವೀಕರಿಸುತ್ತಿದ್ದರ ಕಾರಣ ಅವರಿಗೆ ಅವರ ಸಂಪಾದನೆಯ (ಆಯದ) ಪ್ರತಿಫಲವಾಗಿ ಬಂದ ಅಕ್ಕಿಯಿಂದಲೇ ಅವರಿಗೆ ' ಆಯದ ಅಕ್ಕಿ' ದಂಪತಿಗಳೆಂದುಕರೆಯುವುದು ಬಹು ಸೂಕ್ತವಾಗಿದೆ. ಈ ಕುರಿತು ಡಾ: ಸೊಪ್ಪಿಮಠರವರು ಹೇಳುವ ವಿಚಾರಗಳು ತುಂಬಾ ಮೌಲಿಕವಾಗಿವೆ. ಅವರು ಹೇಳುವ ಹಾಗೇ : ' ಲಕ್ಕಮ್ಮ ತನ್ನ ಒಂದು ವಚನದಲ್ಲಿ ಭಕ್ತರು ದಾಯಗಾರಿಕೆಯಲ್ಲಿ ತಂದು ದಾಸೋಹವ ಮಾಡಬಹುದೇ ? ಎಂದು ಕೇಳುತ್ತಾಳೆ ಇಲ್ಲಿ ದಾಯಗಾಗಿಕೆ ಪದ ಗಮನಾರ್ಹ. ದಾಯವೆಂದರೆ ಕೊಡುಗೆ, ಕಾಣಿಕೆ, ಕಾಣಿಕೆಯ ರೂಪದಲ್ಲಿ ಬಂದದ್ದು ಕಾಯಕವಲ್ಲ. ಅದು ದಾಸೋಹಕ್ಕೆ ಸಲ್ಲ ಎಂಬುದು ಲಕ್ಕಮ್ಮ ಮಾತಿನ ಅರ್ಥ . ದಾಯ ಅರ್ಥಾತ್ ಕಾಣಿಕೆಯನ್ನು (ಬಹುಶಃ ಬಸವಣ್ಣ ಮಾರಯ್ಯನಿಗಿತ್ತುದು) ಕಾಯಕವಲ್ಲ ಎನ್ನುವ ಲಕ್ಕಮ್ಮ ಬೇರೆಯವರ ಅಂಗಳದಲ್ಲಿ ಅಕ್ಕಿ ಆಯ್ದು ತರುವುದನ್ನು ಹೇಗೆ ಕಾಯಕವೆಂದಾಳು ? ಇನ್ನೊಬ್ಬರ ಸ್ವತ್ತಿನ ಅಪಹರಣವಾಗುವುದಿಲ್ಲವೇ ಅದು? ಈ ಅಕ್ಕಿ ಬೇಡವೆಂದು ಬಿಸಾಡಿದ್ದು ಎನ್ನುವುದಾದರೆ ಅನರ್ಹವಾದ ಈ ಅಕ್ಕಿ ಜಂಗಮದಾಸೋಹಕ್ಕೆ ಯೋಗ್ಯವಾದೀತು ಹೇಗೆ? ದುಡಿಮೆ ಮತ್ತು ದುಡಿಮೆಯ ಫಲವನ್ನು ಹೇಳದ ಕಾಯಕ ಕಾಯಕವಲ್ಲ. ಅದರಿಂದ ಮಾಡಿದ್ದು ದಾಸೋಹವಲ್ಲ . ಶರಣರಲ್ಲಿಯೇ ಇದಕ್ಕೆ ಸಮರ್ಥನೆಗಳಿವೆ.

ಕಾಯಕ ಮುಂದಿದ್ದೊಡೆ ಗುರು ದರ್ಶನವಾದಡ ಮರೆಯ ಬೇಕು ಎನ್ನುವ ಮಾರಯ್ಯ ಕಾಯಕದ ಎಚ್ಚರವನ್ನು ಸೂಕ್ಷ್ಮತೆಯನ್ನು ಹೊಂದಿರಲಾರದ ವ್ಯಕ್ತಿಯೆಂದು ನಮಗನಿಸುವುದಿಲ್ಲ. ಆದ್ದರಿಂದ ಮಾರಯ್ಯ ಅಕ್ಕಿಯನ್ನು ಬೇರೆಯವರ ಅಂಗಳದಲ್ಲಿ ಬಿದ್ದ ಆಯ್ದು ಸಂಗ್ರಹಿಸುವ ಕೆಲಸದಲ್ಲಿ ಇರದೆ ನಾವು ಮೇಲೆ ನೋಡಿದಂತೆ ಅಕ್ಕಿ ಆರಿಸುವ (ಅಕ್ಕಿ ಸ್ವಚ್ಛಗೊಳಿಸಿ ಕೊಡುವ) ಕಾಯಕದಲ್ಲಿ ಇದ್ದನೆಂದು ತಿಳಿಯವುದು ಹೆಚ್ಚು ಸೂಕ್ತವೆನಿಸುತ್ತದೆ. ೫

ಆಯ್ದಕ್ಕಿ ಪದದ ನಿಷ್ಪತ್ತಿಯನ್ನು ಸಹ ಸೊಪ್ಪಿಮಠರು ಸರಿಯಾಗಿಯೇ ಗುರುತಿಸಿ ಅದನ್ನು ' ಆಯದ ಅಕ್ಕಿ ಆಯ್ದಕ್ಕಿಯೇ ವಿನಾ' ' ಆಯ್ದ' ಅಕ್ಕಿ 'ಆಯ್ದಕ್ಕಿ' ಅಲ್ಲ ಎನ್ನುವ ವಿಚಾರ ಬಹು ಸೂಕ್ತವಾಗಿದೆ೬

ಹೀಗೆ ಇವರು ಆಯಗಾರರಾಗಿ ತಮ್ಮ ಕಾರ್ಯನಿರ್ವಹಿಸಿದರೆಂಬುದು ಸ್ಪಷ್ಟವಾಗುತ್ತದೆ. ಮಾರಯ್ಯ ನಿದಿಷ್ಟ ಕಾಯಕವನ್ನು ಮಾಡುತ್ತಿದ್ದರು ಎಂಬುದಕ್ಕೆ ಅವರ ವಚನ ' ಹಾಗದ ಕಾಯಕವ ಮಾಡಿ ಹಣವಡ್ಡವ ' ೭ ಎಂಬುದೇ ನಿದರ್ಶನವಾಗಿದೆ. ಇಲ್ಲಿ 'ಹಾಗ' ಎಂದರೆ ಚಲಾವಣೆಯ ಒಂದು ನಾಣ್ಯವೆಂಬುದು ತಿಳಿಯುತ್ತದೆ. ಹಣ, ಅಡ್ಡಗಳಿಂತ ಹಾಗದ ಬೆಲೆ ಕಡಿಮೆ ಎಂಬುದು ನಮಗೆ ಕಂಡುಬರುತ್ತದೆ.

---

೧ : ಸಂ : ಡಾ: ವೀರಣ್ಣ ರಾಜೂರು-ಸ.ವ.ಸಂ.-೫ ವಚನ೯ ,ಪುಟ೨೦೦

೨ : ಅದೇ ವಚನ ೨ ಪುಟ -೧೯

೩ : ಸಂ : ಡಾ: ಎಂ.ಎಂ. ಕಲಬುರ್ಗಿ -ಸ.ವ.ಸಂ.-೬ ವಚನ ೧೪, ಪುಟ ೩೮೦

೪ : ಡಾ: ಬಸವಲಿಂಗ ಸೊಪ್ಪಿಮಠ-ಆ.ಸಂಪುಟ ೧, ಪುಟ ೫೬

೫ : ಅದೇ : ಪುಟ ೫೭

೬ : ಅದೇ ಪುಟ ೫೮

೭ : ಸಂ : ಡಾ: ಎಂ.ಎಂ. ಕಲಬುರ್ಗಿ-ಸ.ವ.ಸಂ.-೬ ವಚನ ೩೨, ಪುಟ ೩೮೪

(ಅಂತುಂ ಕಾಣಿಯು ನಾಲ್ಕರಲಂತರುವೆ ವೀಸಮ್ಮೈದು

ವೀಸಂ ಹಾಗಂ ನಾಲ್ಕುಂ ಪಣ ಮಾಪಣ ಪತ್ತಾಗಿರೆ ಸಮನಿಸಿರ್ಕು ಗದ್ಯಾಣಂ)೧

(ನಾಲ್ಕುಕಾಣಿ = ಐದು ವೀಸ, ಐದುವೀಸ= ಒಂದು ಹಾಗ, ನಾಲ್ಕುಹಾಗ= ಒಂದ ಪಣ, ಹತ್ತು ಪಣ= ಒಂದು ಗದ್ಯಾಣ)

ಆಯ್ದಕ್ಕಿ ದಂಪತಿಗಳು ಶ್ರಮದಾಯಕ ಕೆಲಸ ಮಾಡುತ್ತಿದ್ದು ಅದು ಸತ್ಯ ಶುದ್ಧ ಕೆಲಸವಾಗಿತ್ತು. ಆಯದ ಕೆಲಸ , ಆಳುಗಳ ಕೆಲಸ, ಇರ್ವರೂ ಆಳಾಗಿ ಅಕ್ಕಿಯನ್ನು ಸ್ವಚ್ಛಗೊಳಿಸುವ ಕಾಯಕ ಮಾಡುತ್ತಿದ್ದರಿಂದಲೇ ಅವರಿಗೆ ಆಯ್ದಕ್ಕಿ ಎಂದು ಕರೆದಿರುವುದು ಬಹು ಸೂಕ್ತವಾಗಿದೆ. ಇದನ್ನು ಅನೇಕ ವಚನಗಳೇ ಸ್ಪಷ್ಟಪಡಿಸುತ್ತವೆ. ೨ ಒಟ್ಟಾರೆ ಇವರು ನಿರ್ದಿಷ್ಟ ಕಾಯಕವನ್ನು ಮಾಡುತ್ತಿದ್ದರೆಂದು ಸ್ಪಷ್ಟವಾಗುತ್ತದೆ.

ಕೃತಿ

ಆಯ್ದಕ್ಕಿ ದಂಪತಿಗಳು ಕಲ್ಯಾಣ ಪರಿಸರದಲ್ಲಿದ್ದುಕೊಂಡು ವಚನಗಳನ್ನು ರಚಿಸಿದ್ದಾರೆ. ಮಾರಯ್ಯನು ೩೨ ವಚನಗಳನ್ನು ' ಅಮರೇಶ್ವರ ಲಿಂಗ' ಅಂಕಿತದಲ್ಲಿ ರಚಿಸಿದರೆ, ಲಕ್ಕಮ್ಮನು 'ಮಾರಯ್ಯ ಪ್ರಿಯ ಅಮರೇಶ್ವರ ಲಿಂಗ' ಅಂಕಿತದಲ್ಲಿ ೨೫ ವಚನಗಳನ್ನು ರಚಿಸಿದ್ದಾರೆ. ಇವರ ವಚನದಲ್ಲಿ ಆತ್ಮನಿವೇದನೆ , ವಿಡಂಬನೆ , ಸಾಮಾಜಿಕ ವಿಶ್ಲೇಷಣೆಗಳಿದ್ದು ಅವು ಸಾಹಿತ್ಯದ ಸೊಗಡಿನ ಜೊತೆಗೆ ತಾತ್ವಿಕ ನಿಲುವನ್ನು ಕಾಯಕ ಸಿದ್ಧಾಂತದ ಹಿನ್ನೆಲೆಯಲ್ಲಿ ಚರ್ಚಿಸುತ್ತಾ ಇಡೀ ಶರಣ ಪರಂಪರೆಯಲ್ಲಿಯೇ ವಿಶಿಷ್ಟವಾಗಿವೆ.

ವ್ಯಕ್ತಿತ್ವ :

ಇವರ ವಚನಗಳೇ ಇವರ ವ್ಯಕ್ತಿತ್ವದ ಪ್ರತೀಕಗಳಾಗಿವೆ . ಬಸವಣ್ಣನಂತವರು ' ಆಯ್ದಕ್ಕಿ ಮಾರಯ್ಯನ ಮನೆಯ ಮಗನಾನು '೩ ಎಂದು ಹೇಳಿರುವುದನ್ನು ನೋಡಿದರೆ ಇವರ ವ್ಯಕ್ತಿತ್ವದ ಅರಿವಾಗುತ್ತದೆ. ಹಾಗೆಯೇ ಮೊದಲಬಾರಿಗೆ ಕಾಯಕಕ್ಕೆ ಪ್ರಾಮುಖ್ಯತೆ ನೀಡಿ ಅದನ್ನೇ ಕೈಲಾಸವೆಂದು ಕರೆದರು. ಕಾಯಕ ದಾಸೋಹ ತತ್ವಗಳಿಗೆ ತಾತ್ವಿಕ ಮೌಲ್ಯವನ್ನು ತುಂಬುವ ಜೊತೆಗೆ ಸಮಾಜದ ಬದುಕಿನಲ್ಲಿ ಅದರ ಮಹತ್ವವನ್ನು ಬಿಂಬಿಸಿದರು. ಇವರನ್ನು ಕುರಿತು ಸಮಕಾಲೀನ ಶರಣರು ವ್ಯಕ್ತಪಡಿಸಿದ ಅಭಿಪ್ರಾಯಗಳೇ ಇವರ ವ್ಯಕ್ತಿತ್ವಕ್ಕೆ ಸೂಕ್ತ ನಿದರ್ಶನಗಳಾಗಿವೆ.

---

೧ : ಸಂ : ಎಂ. ಮರಿಯಪ್ಪ ಭಟ್ಟ-ವ್ಯ.ಗ. ಪುಟ ೧-೨೪

೨ : ಸಂ : ಡಾ: ಎಂ.ಎಂ. ಕಲಬುರ್ಗಿ -ಸ.ವ.ಸಂ. -೬ ವಚನ ೧೫ , ೧೯, ಪುಟ ೩೮೦,೩೮೧

೩ : ಸಂ : ಡಾ: ಎಂ.ಎಂ. ಕಲಬುರ್ಗಿ -ಸ.ವ.ಸಂ. ೧ ವಚನ ೨೮೪ ಪುಟ ೩೪೫

೫) ಸುಂಕದ ಬಂಕಯ್ಯ (ಬಂಕಣ್ಣ)

ಏಡೆದೊರೆ ನಾಡಿನ ವ್ಯಾಪ್ತಿಗೊಳಪಟ್ಟಿದ್ದ ಮಲ್ಲಟ ಗ್ರಾಮವು ಮೊರಟ-೩೦೦ಎಂಬುದಾಗಿ ಶಾಸನಗಳ ಕಾಲದಿಂದ ಪ್ರಖ್ಯಾತವಾಗಿದೆ. ಇಲ್ಲಿಯ ಶರಣರೇ ಸುಂಕದ ಬಂಕಯ್ಯರಾಗಿದ್ದಾರೆ.

ಸ್ಥಳ :

ಇವರು ಮಾನವಿ ತಾಲೂಕಿನ 'ಮಲ್ಲಟ' ಗ್ರಾಮದವರೆಂಬುದು ಸ್ಪಷ್ಟವಾಗಿದೆ. ಬಸವ ಸಮಕಾಲೀರಾದ ಇವರ ಸಮಾಧಿಯೂ ಇಂದಿಗೂ ಮಲ್ಲಟ ಗ್ರಾಮದಲ್ಲಿದೆ. ಈತನ ಆರಾಧ್ಯ ದೈವ - ಮೆಚ್ಚಿನ ದೈವದ ದೇವಾಲಯಗಳು ಈ ಗ್ರಾಮದಲ್ಲಿವೆ. ಜೊತೆಗೆ ಸುಂಕದ ಎಂಬ ಹೆಸರಿನ ಉಪನಾಮವುಳ್ಳ ಮನೆತನದವರು ಬಹುದಿನಗ ಹಿಂದೆ ಇಲ್ಲಿ ಇದ್ದ ಸಂಗತಿ ತಿಳಿದು ಬರುತ್ತದೆ. ಇದೆಲ್ಲಕ್ಕಿಂತ ಮುಖ್ಯವಾಗಿ ಈತ ತನ್ನ ವಚನಗಳಲ್ಲಿ ಬಳಸಿದ 'ಮೂಳಿಯ ಮಕ್ಕಳು' ೧ 'ತಳವಾರ' ೨ 'ಉರವಣೆ' ೩.' ಕವಣೆ' ೪. ಎನ್ನುವ ಪದಗಳು ಈ ಪರಿಸರದಲ್ಲಿ ಇಂದಿಗೂ ಪ್ರಚಲಿತದಲ್ಲಿದೆ. ಅಷ್ಟೇ ಅಲದೇ ಈತ ಬಳಸುವ ಪ್ರಾಣಿ ಬೇಟೆಯ ರೂಪಕಗಳು - ಯುದ್ಧದ ಸನ್ನಿವೇಶಗಳನ್ನು ಸ್ಪಷ್ಟವಾಗಿ ಕಾಣಬಹುದು. ಅಂತೆಯೇ ಸಾಮಂತ ಅರಸರಾದ ಹೈಹಯರು ಮಲ್ಲಿಕಾರ್ಜುನ ದೇವಾಲಯ ನಿರ್ಮಿಸಿದ ಬಗ್ಗೆ ಇತಿಹಾಸದಿಂದ ತಿಳಿದುಬರುತ್ತದೆ. ಹೈಹಯರು ಆಳಿದ ಪ್ರದೇಶ ಇದೇ ಮಲ್ಲಟ. ಹಾಗೆಯೇ ಸುಂಕದ ಬಂಕಣ್ಣನವರು ಕುರಿತಾಗಿ ಕಾವ್ಯಗಳು ಉಲ್ಲೇಖಿಸಿದ ಮೊರಟವೇ ಮಲ್ಲಟವಾಗಿದೆ. ಈ ಎಲ್ಲಾಂಶಗಳ ಹಿನ್ನೆಲೆಯಲ್ಲಿ ಈತ ಇಂದಿನ ಮಲ್ಲಟ ಗ್ರಾಮದವನೆಂಬುದು ಸ್ಪಷ್ಟವಾಗುತ್ತದೆ. ಇದಲ್ಲದೇ ಶಾಂತಲಿಂಗ ದೇಶಿಕ ಹೇಳುವ ಮೊರಟದ ಬಂಕಯ್ಯನೇ ಸುಂಕದ ಬಂಕಣ್ಣನಾಗಿದ್ದಾನೆ. ಸುಂಕದ ಅಧಿಕಾರ ಪಡೆದ ನಂತರ ಮೊರಟದ ಬಂಕಯ್ಯ ಸುಂಕದ ಬಂಕಯ್ಯನಾಗಿದ್ದಾನೆ.

ಕಾಲ

ಕಲ್ಯಾಣ ಚಾಲುಕ್ಯರ ಕಾಲದ ಐತಿಹಾಸಿಕ ಮಾಹಿತಿಗಳು ಮಲ್ಲಟ ಗ್ರಾಮದಲ್ಲಿ ಕಂಡು ಬರುತ್ತವೆ. ಇವರ ಸಾಮಂತರಾಗಿ ಹೈಹಯರು ಕ್ರಿ.ಶ. ೧೧೪೯ರಲ್ಲಿ ಆಳ್ವಿಕೆ ನಡೆಸಿದ್ದರ ಮಾಹಿತಿ ನಮಗೆ ತಿಳಿದು ಬರುತ್ತದೆ. ಈ ಅವಧಿಯಲ್ಲಿ ಕಲ್ಯಾಣ ಚಾಲುಕ್ಯರ ಅರಸ ಮೂರನೇ ತೈಲಪ ಅಧಿಕಾರದಲ್ಲಿದ್ದನು. ಇವನ ಸಾಮಂತನಾಗಿ ಘಟ್ಟಿ ದೇವರಸ ಕ್ರಿ.ಶ. ೧೧೪೯ ರಲ್ಲಿ ಆಳ್ವಿಕೆ ನಡೆಸುತ್ತಿದ್ದು ಮಲ್ಲಿಕಾರ್ಜುನ ದೇವರಿಗೆ ದತ್ತಿ ಬಿಟ್ಟಿದುದು ಕಂಡು ಬರುತ್ತದೆ. ಮಲ್ಲಟ ಹೈಹಯರ ಕೇಂದ್ರ ಸ್ಥಳವಾಗಿದ್ದು ಆ ಕೇಂದ್ರ ಸ್ಥಳದಲ್ಲಿಯೇ ಅನೇಕ ಅಧಿಕಾರಿಗಳಿದ್ದರೆಂಬುದು ತಿಳಿದು ಬರುತ್ತದೆ. ಅಂತಹ ಅಧಿಕಾರಿಗಳಲ್ಲಿ ಸುಂಕದ ಅಧಿಕಾರಿಯೂ ಒಬ್ಬನಾಗಿದ್ದು ಬಹುಶಃ ಆ ಸುಂಕದ ಅಧಿಕಾರಿಯೇ ನಮ್ಮ ಶರಣ ಬಂಕಯ್ಯನಾಗಿರಬಹುದೇ?

ಕ್ರಿ.ಶ. ೧೧೪೯ರಲ್ಲಿ ಮಲ್ಲಿಕಾರ್ಜುದೇವರಿಗೆ ದತ್ತಿ ಬಿಟ್ಟ ವಿಷಯದ ಆಧಾರದ ಮೇಲೆ ನಾವು ಬಂಕಯ್ಯನ ಕಾಲವನ್ನು ಕ್ರಿ.ಶ. ೧೧೪೯ರ ನಂತರವೆಂದು ಪರಿಗಣಿಸುವುದು ಬಹು ಸೂಕ್ತವಾಗಿದೆ. ಮುಂದೆ ಕಲ್ಯಾಣದಲ್ಲಿ ರಾಜಕೀಯ ವೈಪರೀತ್ಯಗಳಿಂದಾಗಿ ಅನೇಕ ಬದಲಾವಣೆಗಳಾದವು. .'ಕ್ರಿ.ಶ.೧೨ನೇ ಶತಮಾನದ ಉತ್ತರಾರ್ಧದಲ್ಲಿ ಕಲ್ಯಾಣದ ಚಾಲುಕ್ಯರ ಪತನಾನಂತರ ಕಾಕತೀಯ ವಂಶದ ೨ನೇಯ ಪ್ರೋಲನು ಗೋದಾವರಿ ಮತ್ತು ಕೃಷ್ಣಾ ನದಿಗಳ ನಡುವಣ ಪ್ರದೇಶದಲ್ಲಿ ಸ್ವತಂತ್ರ ದೊರೆಯಾದನು.' ೫.

'ಕ್ರಿ.ಶ. ೧೧೫೪-೫೫ರಲ್ಲಿ ೩ನೇ ತೈಲಪನು ಕಪ್ಪವನ್ನು ಸಲ್ಲಿಸದಿದ್ದ ಕಾಕತೀಯ ರಾಜ ಪ್ರೋಲನನ್ನು ಶಿಕ್ಷಿಸಲು ಸೈನ್ಯದೊಂದಿಗೆ ಹೊರಟ ಆದರೆ ಮಧ್ಯದಲ್ಲಿಯೇ ಬಂಧಿತನಾದನು. ತನ್ನ ಚಕ್ರವರ್ತಿಯನ್ನು ರಕ್ಷಿಸಲು ಬಿಜ್ಜಳನು ಯಾವ ಪ್ರಯತ್ನ ನಡೆಸಲಿಲ್ಲ. ಅದರ ಬದಲು ಸೈನ್ಯದೊಂದಿಗೆ ಕಲ್ಯಾಣವನ್ನು ಪ್ರವೇಶಿಸಿದನು.' ೬.'ಮೂರನೇ ತೈಲನು ಕಾಕತೀಯರಿಂದ ಪರಾಭವ ಹೊಂದಿದ ಸನ್ನಿವೇಶದ ಲಾಭ ಪಡೆದು ಬಿಜ್ಜಳನು ಕ್ರಿ.ಶ. ೧೧೬೨ರಲ್ಲಿ ಕಲ್ಯಾಣವನ್ನು ವಶಪಡಿಸಿಕೊಂಡನು ಈತನು ಆಕ್ಷಣದಲ್ಲಿನ ದಂಗೆಗಳನ್ನು ಅಡಗಿಸಿದನು.' ೭. ಈ ಎಲ್ಲಾ ಸನ್ನಿವೇಶಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಮುಂದೆ ಹೈಹಯರು ಕಳಚೂರಿಗಳ ಅಧೀನದಲ್ಲಿ ರಾಜ್ಯಭಾರ ನಡೆಸಿದ್ದ ಸನ್ನಿವೇಶ ಒದಗಿರಬೇಕು. ಆಗ ಕಲ್ಯಾಣ ಕಳಚೂರಿಗಳು ತಮ್ಮ ಅನೇಕ ಸಾಮಂತ ಅರಸರ ಕೈಕೆಳಗಿನ ಅಧಿಕಾರಿಗಳನ್ನು ಕಲ್ಯಾಣಕ್ಕೆ ಕರೆಸಿಕೊಂಡಿರಬೇಕು. ಅಂತಹ ಅಧಿಕಾರಿಗಳಲ್ಲಿ ಸುಂಕದ ಬಂಕಯ್ಯನು ಇದೇ ಸಂದರ್ಭದಲ್ಲಿ ಕಲ್ಯಾಣಕ್ಕೆ ಹೋಗಿರಬೇಕು. ಹೀಗಾಗಿ ಈತ ಕ್ರಿ.ಶ. ೧೧೬೨ ಸುಮಾರಿನಲ್ಲಿ ಕಲ್ಯಾಣಕ್ಕೆ ಹೋಗಿ ಬಸವಾದಿ ಶರಣರ ಪ್ರಭಾವಕ್ಕೊಳಗಾಗಿದ್ದು ಕಂಡು ಬರುತ್ತದೆ.

---

೧. ಸಂ:ಡಾ:ಬಿ.ಆರ್. ಹಿರೇಮಠ - ಸ.ವ.ಸಂ. -೯. ವಚನ ೩೫ ಪುಟ ೨೧೭.

೨. ಅದೇ : ವಚನ ೫೨ ಪುಟ ೨೨೧

೩. ಅದೇ : ವಚನ ೭೪ ಪುಟ ೨೨೭

೪. ಅದೇ : ವಚನ ೧೦೪ ಪುಟ ೨೩೫

೫. ಡಿ.ಟಿ. ಜೋಶಿ. - ಪ್ರಾ.ಭಾ. ಇ. ಪುಟ ೩೦೭

೬. ಫಾಲಾಕ್ಷ - ಕ.ಇ.ಪ. ಪುಟ ೧೦೩

೭. ಡಿ.ಟಿ. ಜೋಶಿ - ಪ್ರಾ.ಭಾ.ಇ. ಪುಟ ೨೮೫

ಕಲ್ಯಾಣ ಕ್ರಾಂತಿಯ ತರುವಾಯ ಈತ ಪುನಃ ತನ್ನ ಮಲ್ಲಟ ಗ್ರಾಮಕ್ಕೆ ಮರಳಿ ಅಲ್ಲಿಯೇ ಕೆಲವುದಿನಗಳಿದ್ದು ಐಕ್ಯನಾಗಿರಬೇಕೆಂಬುದಕ್ಕೆ ಆತನ ಸಮಾಧಿಯೇ ಸೂಕ್ತ ನಿದರ್ಶನವಾಗಿದೆ. ಕಲ್ಯಾಣ ಕ್ರಾಂತಿ ನಡೆದ ಕಾಲ ಕ್ರಿ.ಶ. ೧೧೬೭ -೬೮ಎಂಬುದನ್ನು ಇತಿಹಾಸಗಳಿಂದ ಗಮನಿಸಿದಾಗ ಈತ ಕ್ರಿ.ಶ.೧೧೬೮ ರ ನಂತರ ಮಲ್ಲಟಕ್ಕೆ ಬಂದು ಕೊನೆಯದಿನಗಳನ್ನು ಕಳೆದನೆಂದು ಸ್ಪಷ್ಟವಾಗುತ್ತದೆ. ಕಲ್ಯಾಣದಿಂದ ಬರುವಾಗ ಶರಣರಾದ ಬಿಬ್ಬಿ ಬಾಚಯ್ಯ ಮತ್ತು ಚೆನ್ನವೀರಶ ಕಣ್ಣಣರ ಜೊತೆ ಬಂದಿರಬೇಕೆನಿಸುತ್ತದೆ. ಈತನ ವಚನಗಳಲ್ಲಿ ಪ್ರಯೋಗವಾಗಿರುವ 'ಚೆನ್ನ' ಪದದಿಂದ ಸಂದೇಹ ಬರುತ್ತದೆ. ೧ಹಾಗಾಗಿ ಈತ ಇವರ ಸಮಕಾಲೀವೆಂಬುದು ಸ್ಪಷ್ಟವಾಗುತ್ತದೆ. ಬಹುಶಃ ಈತನ ಶಿರಚ್ಛೇದನ ಪವಾಡ ಕತೆ ಕೊನೆಯಗಾಲದಲ್ಲಿ ನಡೆದಿರಬೇಕೆನಿಸುತ್ತದೆ - ಜೈನರ ಪ್ರಭಾವ ಹೊಯ್ಸಳರ ಕಾಲದಲ್ಲಿ ಪ್ರಬಲವಾಗಿತ್ತು.ಈ ಕುರಿತು ಉತ್ತರ ದೇಶದ ಬಸವಲಿಂಗನು ಹೇಳುವ ೬೩ ನೇ ಕತೆ ಹೀಗಿದೆ:

' ಬಂಕಯ್ಯನೊಂಬೊರ್ವ ಶರಣರು ಲಿಂಗಕ್ಕೆ ಮಜ್ಜನ ಮಾಡುವಾಗ ಶಂಕರ ಕೂಚಿಗನೆಂಬ ಜೈನ ಬರಲು ಲಿಂಗಕ್ಕೆ ಹಸ್ತವ ಮರೆಮಾಡಲು ನನ್ನ ಕಂಡಿಂತೇಕೆ ಮಾಡಿದೆ ಎನಲು , ಭವಿ ನೋಡಬಾರದೆನಲು , ನೀವು ಹಲವು ಕುಲದವನರು ನಾವು ಒಂದೇ ಕುಲದವರೆನಲು ನಿಂದಕ ದ್ರೋಹಿಎಂದು ಶಿರಚ್ಛೇಧನವ ಮಾಡಿದರು. ' ೨

ಇದುವರೆಗಿನ ವಿವೇಚನೆಯಿಂದ ನಾವು ಇವರ ಕಾಲಕ್ರಮವನ್ನು ಈ ಕೆಳಗಿನಂತೆ ಸೂಚಿಸಬಹುದು :

೧: ಹೈಹಯರ ಆಳ್ವಿಕೆ ಗಮನಿಸಿ ಈತನ ಜನನದ ಕಾಲವನ್ನು ಕ್ರಿ.ಶ. ೧೧೨೦ ರಸುಮಾರಿಗೆ ಎಂದು ಹೇಳಬಹುದು.

೨ : ಕ್ರಿ.ಶ.೧೧೪೯ ರಲ್ಲಿ ಹೈಹಯರಲ್ಲಿ ಸುಂಕದ ಅಧಿಕಾರಿಯಾಗಿ ನೇಮಕವಾಗಿರಬೇಕು.

೩ : ಕ್ರಿ.ಶ. ೧೧೬೨ ರಲ್ಲಿ ಕಲ್ಯಾಣದಲ್ಲಿ ನಡೆದ ರಾಜಕೀಯದ ಪಲ್ಲಟದಿಂದಾಗಿ ಈತಕಲ್ಯಾಣಕ್ಕೆ ಹೋಗಿ ಬಿಜ್ಜಳನ ಸೇವೆಯಲ್ಲಿ ತೊಡಗಿರಬೇಕು.

೪ : ಕ್ರಿ.ಶ. ೧೧೬೩ ರ ಸುಮಾರಿಗೆ ಬಸವಣ್ಣನವರ ಸಂಪರ್ಕ ಬಂದು ಶರಣ ಮಾರ್ಗದಲ್ಲಿ ಸಾಗಿರಬೇಕು೧

೫ : ಕ್ರಿ.ಶ. ೧೧೬೭-೬೮ ರ ಸುಮಾರಿನಲ್ಲಿ ಕಲ್ಯಾಣ ಕ್ರಾಂತಿ ನಡೆದ ತರುವಾಯ ಪುನಃ ಮಲ್ಲಟಕ್ಕೆ ಬಂದಿರಬೇಕು.

೬ : ಶಿರಚ್ಛೇಧನ ಘಟನೆ ನಡೆದದ್ದು ಜೈನ ಧರ್ಮ ಪ್ರಬಲವಾಗಿದ್ದ ಕಾಲ ಹೊಯ್ಸಳದ್ದು ಬಹುಶಃ ಅದು ಕ್ರಿ.ಶ. ೧೧೭೩-೧೨೨೦ ರ ಎರಡನೆಯ ವೀರಬಲ್ಲಾಳನ ಕಾಲವಾಗಿರಬೇಕು. ಇದನ್ನು ಗಮನಿಸಿದರೆ ಇವರು ಕ್ರಿ.ಶ. ೧೧೮೦ ಸುಮಾರಿನಲ್ಲಿ ಮಲ್ಲಟ ಗ್ರಾಮದಲ್ಲಿಯೇ ಐಕ್ಯರಾಗಿರಬಹುದೆಂದು ತಿಳಿಯಬಹುದಾಗಿದೆ.

ವಚನಾಂಕಿತ :

' ಸುಂಕದ ಬಂಕಣ್ಣನ ವಚನಾಂಕಿತ ಚೆನ್ನ ಬಂಕೇಶ್ವರ ಲಿಂಗ ಆದರೆ ಚೆನ್ನ ಬಂಕನಾಥ ಸಂಗ ಪ್ರಿಯ ಚೆನ್ನ ಬಂಕೇಶ್ವರ, ಚೆನ್ನ ಬಂಕೇಶ್ವರ, ವೀರ ಬಂಕೇಶ್ವರ ಅಂಕಿತದಲ್ಲಿಯೂ ಈವಚನಕಾರನ ವಚನಗಳು ದೊರಕುತ್ತವೆ. ಆದ್ದರಿಂದ ಈ ಎಲ್ಲಾ ಮುದ್ರಿಕೆಗಳ ವಚನಗಳನ್ನು ಸುಂಕದ ಬಂಕಣ್ಣನ ವಚನಗಳೆಂದೇ ಪರಿಭಾವಿಸಲಾಗಿದೆ ' ೩ಎಂದು ಸಂಪಾದಕರು ಅಭಿಪ್ರಾಯ ಪಟ್ಟಿದ್ದನ್ನು ಗಮನಿಸಿದರೆ ಅಂಕಿದಲ್ಲಿ ಖಾಚಿತ್ಯದ ಕೊರತೆ ಎದ್ದು ಕಾಣುತ್ತದೆ. ಈ ಕುರಿತು ಸಕಲ ಪುರಾತನರ ವಚನ ಕಟ್ಟಿನಲ್ಲಿ ಬರುವ ಸುಂಕದ ಬಂಕಣ್ಣಗಳ ವಚನ ' ಬಂಕೇಶ್ವರ ಲಿಂಗ 'ಎಂಬ ಅಂಕಿತದೊಂದಿಗೆ ಒಂದು ವಚನ ಉಪಲಬ್ಧವಾಗಿದ್ದು ವೀರ ಬಂಕೇಶ್ವರ ಅಂಕಿತದಲ್ಲಿ ಆತ೧೪೮ ವಚನ ರಚಿಸಿದ್ದಾಗಿ ಎಸ್. ಶಿವಣ್ಣ ಬರೆಯುತ್ತಾರೆ. ಆದರೆ ಪ್ರಸ್ತುತ ಪ್ರಕಟವಾಗಿರುವ ಸರಕಾರಿ ಸಂಪುಟ-೯ ರಲ್ಲಿ ಈತನ ೧೦೮ ವಚನಗಳಿವೆ .೪ ಇವುಗಳಲ್ಲಿ ಬಂಕೇಶ್ವರ ಲಿಂಗ ಅಂಕಿತದಲ್ಲಿ ೯೭, ಚೆನ್ನ ಬಂಕೇಶ್ವರ ಲಿಂಗ ಅಂಕಿತದಲ್ಲಿ ೫ , ಸಂಗ ಪ್ರಿಯ ಚೆನ್ನ ಬಂಕೇಶ್ವರ ಅಂಕಿತದಲ್ಲಿ ೧ ಚೆನ್ನ ಬಂಕೇಶ್ವರ ಅಂಕಿತದಲ್ಲಿ ೧ , ಚೆನ್ನ ಬಂಕನಾಥ ದೇವ ಅಂಕಿದಲ್ಲಿ ೨ , ಗುರು ಪ್ರಿಯ ಚೆನ್ನ ಬಂಕೇಶ್ವರ ಅಂಕಿತದಲ್ಲಿ ೧, ವೀರ ಬಂಕೇಶ್ವರ ಅಂಕಿತದಲ್ಲಿ ೧ ವಚನವಿದೆ.

ಈ ಅಂಕಿತಗಳನ್ನು ಗಮನಿಸಿದಾಗ ಇವರ ಬಗ್ಗೆ ನಮಗೆ ವಿಶೇಷ ಸಂಗತಿಗಳು ಕಂಡು ಬರುತ್ತವೆ. ಚೆನ್ನ ಬಂಕೇಶ್ವರ ಲಿಂಗ ಅಂಕಿತದಲ್ಲಿ ವಚನಗಳು ನಮಗೆ ಕೇವಲ೫ ಮಾತ್ರವಾಗಿ ಕಂಡರೂ ಅವುಗಳಲ್ಲಿಯ ಭಾವ ಒಬ್ಬರನ್ನು ಕುರಿತು ನಿವೇದಿಸಿದಂತಿವೆ. ಅದೇ ರೀತಿ ಚೆನ್ನ ಬಂಕೇಶ್ವರ ಅಂಕಿತದ ಒಂದು ವಚನ , ಚೆನ್ನ ಬಂಕನಾಥದೇವನ ಅಂಕಿತದ ಎರಡು ವಚನ , ಸಂಗ ಪ್ರಿಯ ಚೆನ್ನ ಬಂಕೇಶ್ವರನ ಒಂದು ವಚನಗಳ ಭಾವವು ಇದೇ ರೀತಿಯಾಗಿವೆ. ಗುರು ಪ್ರಿಯ ಚೆನ್ನ ಬಂಕೇಶ್ವರ ಅಂಕಿತದ ವಚ ನವಂತೂ ಸ್ಪಷ್ಟವಾಗಿ ಗುರುವನ್ನೇ ಕುರಿತು ಹೇಳುತ್ತದೆ. ವೀರ ಬಂಕೇಶ್ವರನ ಅಂಕಿತದ ವಚನ ಈತನದಲ್ಲವೆಂಬುದಕ್ಕೆ ಆದರ ಆಶಯವೇ ನಿದರ್ಶನವಾಗಿದೆ.

---

೧ : ಸಂ: ಡಾ: ಬಿ.ಆರ್. ಹಿರೇ ಮಠ-ಸ.ವ.ಸಂ. -೯, ವಚನ ೫೪,೯೯, ಪುಟ೨೨೧, ೨೩೩

೨ : ಸಂ : ಎಸ್.ಉಮಾಪತಿ -ಉ.ಬ.ಭೈ .ಉ. -ಪುಟ ೨೪

೩ : ಸಂ: ಡಾ: ಬಿ.ಆರ್. ಹಿರೇಮಠ -ಸ.ವ.ಸಂ. -೯ ಪ್ರಸ್ತಾವನೆ ಪುಟ ಖೂ

೪ : ಅದೇ ಪುಟ ೨೦೯-೨೩೬

ಕಲ್ಯಾಣ ಶರಣರ ಸಂಪರ್ಕಕ್ಕೆ ಬಂದಮೇಲೆ ಈತನು ತನ್ನ ವೃತ್ತಿಯನ್ನಾದಿರಿಸಿ ವಚನ ರಚಿಸಿದ್ದು ಕಂಡು ಬರುತ್ತದೆ. ಸುಂಕದ ಬಗೆಗೆ ಆ ಕಾಲದಲ್ಲಿರುವ ಸಂಗತಿಗಳನ್ನು ವಚನಗಳಲ್ಲಿ ತಿಳಿಸಿದರೆ ಆನಂತರದಲ್ಲಿ ಬರುವ ವಚನಗಳು ಶರಣ ಧರ್ಮವನ್ನು ಸ್ಪಷ್ಟವಾಗಿ ಬಿಂಬಿಸುತ್ತದೆ. ಮುಂದೆ ಆತನಿಗೆ ಬಿಬ್ಬಿ ಬಾಚಯ್ಯ ರ ಹಾಗೇ ಕಲ್ಯಾಣದಲ್ಲಿದ್ದ ಚೆನ್ನವೀರ ಶರಣರ ಸಂಪರ್ಕ ಬಂದಿರಬೇಕು. ಮುಂದೆ ಕ್ರಾಂತಿಯ ನಂತರ ಅವರೊಡನೆ ಕಲ್ಯಾಣದಿಂದ ಬಂದಿರಬೇಕು. ಹೀಗಾಗಿ ಅವರನ್ನು ಹತ್ತಿರದಿಂದ ಬಲ್ಲ ಸುಂಕದ ಬಂಕಣ್ಣನು ಆತನನ್ನು ತನ್ನ ಗುರುವಾಗಿ ಸ್ವೀಕರಿಸಿರಬೇಕೆನಿಸುತ್ತದೆ.

ತನ್ನ ವಚನದಲ್ಲಿ 'ಗುರು ಪ್ರಿಯ ಚೆನ್ನ ಬಂಕೇಶ್ವರ' ೧ ನೆಂದೆ ಸುಂಕದ ಬಂಕಣ್ಣ ಕರೆಯುತ್ತಾನೆ. ಆತ ಗುರುವನ್ನು ಚೆನ್ನ ಬಂಕನಾಥ ಎಂದು ಕರೆಯುವಾಗ ಆತನ ಮೇಲಿನ ಪ್ರೀತಿ - ಆತನ ವ್ಯಕ್ತಿತ್ವವನ್ನು ಹಿಡಿದಿಡುತ್ತಾನೆ.

ಈತನ ಇಷ್ಟ ದೈವ ಬಂಕೇಶ್ವರ ಲಿಂಗ ವೆಂದು ನಾವು ಭಾವಿಸಿದರೆ ಆ ಹೆಸರಿನ ಯಾವ ದೇವಾಲಯಗಳು ಮಲ್ಲಟದಲ್ಲಿಲ್ಲ. ಮಲ್ಲಿಕಾರ್ಜುನದೇವಾಲಯ ಮಾತ್ರವಿದೆ. ಮಲ್ಲಟದಲ್ಲಿರುವ ಈ ದೇವಾಲಯ ಪ್ರಾಚೀನಹೆಸರು ಬಂಕೇಶ್ವರ ಎಂದು ಊಹಿಸಬೇಕೆಂದರೆ ಯಾವ ಆಧಾರಗಳಿಲ್ಲ. ಅಲ್ಲದೇ ಅಲ್ಲಿರುವ ಶಾಸನಗಳು ಈ ಬಗ್ಗೆ ಏನನ್ನು ಹೇಳುವುದಿಲ್ಲ . ಪ್ರಸ್ತುತ ಇರುವ ಮಲ್ಲಿಕಾರ್ಜು ದೇವಾಲಯ ಸ್ಥಳಾಂತರ ಗೊಂಡ ದೇವಾಲಯವಾಗಿರಬೇಕೆನಿಸುತ್ತದೆ. ಅದು ಮೂಲತಃ ಈಶ್ವರ ದೇವಾಲಯವಾಗಿರಬೇಕು. ನಮ್ಮ ಈ ಊಹೆಗೆ ಕಾರಣ ಮಲ್ಲಟದಿಂದ ಸುಮಾರು ಒಂದು ಕಿ.ಮೀ. ಅಂತರದಲ್ಲಿ ಹಾಳು ಬಿದ್ದ ದೇವಾಲಯವೊಂದಿದೆ. ಸದ್ಯ ಜನ ಈಗ ಅದನ್ನು ಅಲ್ಲಮ ಪ್ರಭು ಗುಡಿಯೆಂದು ಕರೆಯುತ್ತಾರೆ. ಆದರೆ ಆ ಪಾಳು ದೇವಾಲಯದ ಮುಂದಿರುವ ಶಾಸನಗಳು ಸ್ಪಷ್ಟವಾಗಿ ಮಲ್ಲಿಕಾರ್ಜುನ ದೇವರಿಗೆ ದತ್ತಿ ಬಿಟ್ಟ ಬಗ್ಗೆ ವಿವರಗಳನ್ನು ನೀಡುತ್ತವೆ. ದೇವಾಲಯವು ಚಾಲುಕ್ಯರ ಕಾಲಕ್ಕೆ ಸೇರಿದ್ದಾಗಿದೆ. ಮೂರು ಗರ್ಭಗುಡಿಗಳಿದ್ದು ಒಂದು ನಂದಿ ಮಂಟಪವಿದೆ. ಪೂರ್ವ ದಿಕ್ಕಿಗೆ ಮುಖ್ಯ ಭಾಗವಿದೆ. ಮುಂದೆ ಕಾಲಾನಂತರ ಈ ದೇವಾಲಯ ಸ್ಥಳಾಂತರ ಹೊಂದಿ ಪ್ರಸ್ತುತ ಇರುವ ಮಲ್ಲಿಕಾರ್ಜುನ ದೇವಾಲಯದ ಸ್ಥಳದಲ್ಲಿ ಪುರ್ನಸ್ಥಾಪಿತವಾಗಿರಬೇಕೆನಿಸುತ್ತದೆ.

ಅಲ್ಲಮಪ್ರಭುಗಳು ಸಂಚಾರ ಕೈಗೊಂಡಾಗ ಸ್ವಲ್ಪಕಾಲ ಮಲ್ಲಟದ ಊರ ಹೊರಗಿನ ಗುಡಿಯಲ್ಲಿ ತಂಗಿರಬಹುದು. ಆ ಕಾರಣದಿಂದ ಆ ಗುಡಿಗೆ ಮುಂದೆ ಅಲ್ಲಮ ಪ್ರಭು ಗುಡಿ ಎಂದಾಗಿರಬೇಕೆನಿಸುತ್ತದೆ. ಊರಲ್ಲಿರುವ ಮಲ್ಲಿಕಾರ್ಜುನ ದೇವಾಲಯಕ್ಕೂ - ಹಾಳು ಬಿದ್ದ ದೇವಾಲಯದ ಕಟ್ಟಡದ ರಚನೆಯಲ್ಲಿ ವ್ಯತಾಸಗಳಿವೆ. ಆದರೆ ಇದೇ ಊರಲ್ಲಿರುವ ರಾಮ ಲಿಂಗೇಶ್ವರ ದೇವಾಲಯ ಮಾತ್ರ ರಚನೆಯಲ್ಲಿ ಹಾಳು ಬಿದ್ದ ದೇವಾಲಯವನ್ನು ಹೋಲುತ್ತದೆ.

ಮೇಲಿನ ಈ ಎಲ್ಲಾಂಶಗಳು ಕ್ಷೇತ್ರ ಕಾರ್ಯದಿಂದ ತಿಳಿದು ಬರುತ್ತಿದ್ದು ಇವುಗಳನ್ನು ವಿವೇಚಿಸಿದರೆ ಊರಲ್ಲಿರುವ ಈಶ್ವರ ಲಿಂಗವೇ ಸುಂಕದ ಬಂಕಣ್ಣನ ಇಷ್ಟದೈವವಾಗಿರಬೇಕು. ಆತ ಈಶ್ವರನನ್ನು ಆರಾಧಿಸಿ ತನ್ನ ಹೆಸರಿನೊಡನೆ ಬಂಕಣ್ಣನ ಈಶ್ವರನೆಂದು ಕರೆದಿರಬೇಕೆನಿಸುತ್ತದೆ. ಅದುವೇ ಬಂಕನ ಈಶ್ವರ - ಬಂಕೇಶ್ವರ ಆಗಿರುವ ಸಾಧ್ಯತೆ ಇದೆ. ಒಟ್ಟಾರೆ ಸುಂಕದ ಬಂಕಣ್ಣನ ಇಷ್ಟ ದೈವ ಈಶ್ವರ ಲಿಂಗವಾಗಿದ್ದು . ಆತ ತನ್ನ ಹೆಸರಿನೊಡನೆ ಅದನ್ನು ಸೇರಿಸಿ ಕೊಂಡು ಬಂಕೇಶ್ವರನೆಂದು ಕರೆದು ಮುಂದೆ ಆ ಅಂಕಿತದಲ್ಲಿಯೇ ವಚನಗಳನ್ನು ರಚಿಸಿರಬೇಕು. ಚೆನ್ನ ವೀರ ಶರಣರ ಸಂಪರ್ಕಬಂದಮೇಲೆ ಅವರ ವ್ಯಕ್ತಿತ್ವಕ್ಕೆ ಮಾರು ಹೋಗಿ ಚೆನ್ನ ಬಂಕೇಶ್ವರ ಲಿಂಗವೆಂದು ಅಂಕಿತವನ್ನು ಮಾರ್ಪಡಿಸಿಕೊಂಡಿರಬೇಕು. (ಅನೇಕ ಶರಣರು ಚೆನ್ನ ವೀರ ಶರಣರ ವ್ಯಕ್ತಿತ್ವಕ್ಕೆ ಮಾರು ಹೋದ ಪರಿಣಾಮ, ಆನಂತರ ಅವರ ಅಂಕಿತಗಳಲ್ಲಿ ಬದಲಾವಣೆ ಮಾಡಿಕೊಂಡಿರುವ ಅನೇಕ ಮಾದರಿಗಳು ನಮಗೆ ಕಲ್ಯಾಣ ಶರಣರ ಪರಿಸರದಲ್ಲಿ ಕಂಡುಬರುತ್ತವೆ.) ಸುಂಕದ ಬಂಕಣ್ಣನ ವಚನಾಂಕಿತವನ್ನು 'ಚೆನ್ನ ಬಂಕೇಶ್ವರ ಲಿಂಗವೆಂದು' ಕರೆಯುವುದು ಬಹು ಸೂಕ್ತವಾಗಿದೆ. ಸುಂಕದ ಬಂಕಣ್ಣನ ಸ್ಥಾವರ ಭಕ್ತಿ ಮುಂದೆ ಜಂಗಮ ಭಕ್ತಿಯಾದಾಗ ಅದು ಬಂಕೇಶ್ವರ ಲಿಂಗದಿಂದ ಚೆನ್ನ ಬಂಕೇಶ್ವರ ಲಿಂಗವಾಗಿ ಪ್ರಬುದ್ಧತೆ ಪಡೆದು ಕೊಂಡಿದೆನ್ನಬಹುದು .

ಕೃತಿ ಹಾಗೂ ವ್ಯಕ್ತಿತ್ವ :

ಇವರ ೧೧೮ ವಚನಗಳು ಸಮಕಾಲೀನ ಸಾಂಸ್ಕೃತಿಕ ಚಿತ್ರಣ ನೀಡುತ್ತವೆ .ಇವರ ವಚನಗಳು ಗಾತ್ರದಲ್ಲಿ ಚಿಕ್ಕದಾಗಿದ್ದರೂ ಅರ್ಥವಂತಿಕೆಯನ್ನು ಪಡೆದಿದೆ. ಭೈರವೇಶ್ವರ ಕಾವ್ಯ ನೀಡುವ ವಿವರ ಗಮನಿಸಿದರೆ ಇವರು ಉಗ್ರ ಭಕ್ತರೆಂದು ತೋರುತ್ತದೆ. ಹಾಗಾಗಿ ಮುಂದಿನ ಕಾವ್ಯಗಳು ಕೂಡ ಈತನ ಉಗ್ರತೆಯನ್ನು ಹೇಳುತ್ತವೆ. ಇದರಿಂದಾಗಿ ಈತನ ಸುತ್ತ ಪವಾಡಗಳೇ ಹಬ್ಬಿವೆ. 'ಬಸವಪುರಾಣದಲ್ಲಿ ಎರಡು , ಶಿವತತ್ವ ಚಿಂತಾಮಣಿಯಲ್ಲಿ ಎರಡು, ಪ್ರೌಢರಾಯನ ಕಾವ್ಯದಲ್ಲಿ ಒಂದು, ಗುರುರಾಜ ಚಾರಿತ್ರ್ಯದಲ್ಲಿ ಒಂದು, ಬಸವ ಪವಾಡದಲ್ಲಿ ಒಂದು . ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರದಲ್ಲಿ ಒಂದು ಪವಾಡ ಕತೆಗಳಿವೆ' ೨ ಎಂದು ಡಾ :ವ್ಹಿ. ಜಿ. ಪೂಜಾರ ಹೇಳುತ್ತಾರೆ.

ಈತನ ವಚನ ಗಮನಿಸಿದರೆ ಅಂತ ಉಗ್ರತೆ ಕಂಡು ಬರುವುದಿಲ್ಲ. ಅದರ ಬದಲಾಗಿ ಇವರೊಬ್ಬ ಶ್ರೇಷ್ಠ ಆರ್ಥಿಕ ತಜ್ಞ, ತತ್ವ ಶಾಸ್ತ್ರಜ್ಞನೆಂಬುದು ಸ್ಪಷ್ಟವಾಗುತ್ತದೆ. ಸುಂಕದ ವೃತ್ತಿಯ ಜೊತೆಯಲ್ಲಿಯೇ ಆತ್ಮ ಜ್ಞಾನದ ತಿರುಳನ್ನು ತೌಲನಿಕವಾಗಿ ವಿವೇಚಿಸುತ್ತಾನೆ. ಬಸವ ಯುಗದ ಶ್ರೇಷ್ಠ ಚಿಂತಕನಾಗಿರುವ ಸುಂಕದ ಬಂಕಣ್ಣನವರ ವಚನಗಳಲ್ಲಿ ಅಲ್ಲಮ ಪ್ರಭುವಿನ ದಾರ್ಶನಿಕತೆ ಕಂಡುಬರುತ್ತದೆ. ವಚನಗಳ ಮೂಲಕವೇ ಇವರ ಭವ್ಯ ವ್ಯಕ್ತಿತ್ವವನ್ನು ಕಂಡುಕೊಳ್ಳಬಹುದಾಗಿದೆ.

೧: ಸಂ: ಡಾ: ಬಿ.ಆರ್.ಹಿರೇಮಠ-ಸ.ವ.ಸಂ.-೯ ವಚನ ೧೦೬ , ಪುಟ ೨೩೫

೨: ಡಾ: ವ್ಹಿ.ಜಿ. ಪುಜಾರ-ವೀ.ಸಾ.ಪ.ಕ.

೬) ಉಳಿಮೇಶ್ವರದ ಚಿಕ್ಕಯ್ಯ (ಚಿಕ್ಕಣ್ಣ)

ಕಲ್ಯಾಣ ಶರಣರ ಪರಿಸರದಿಂದ ಪ್ರಭಾವಿತನಾಗಿ ತನ್ನ ಸ್ಥಾವರ ನಿಷ್ಠೆಯನ್ನು ಸಡಿಲಿಸಿ ಆ ಮೂಲಕ ಇಷ್ಟಲಿಂಗ ನಿಷ್ಠೆಯನ್ನಿರಿಸಿ ಕೊಂಡು ಬಸವಸಮಕಾಲೀನನಾಗಿ ಬದುಕಿದ ಶರಣ ಈತನಾಗಿದ್ದಾನೆ. ಈತ ನಿಜಲಿಂಗ ಚಿಕ್ಕಯ್ಯ, ಬೊಕ್ಕಸದ ಚಿಕ್ಕಣ್ಣ, ಮಲಹರ ಕಾಯಕದ ಚಿಕ್ಕಯ್ಯನಿಂದ ಬೇರೆ ಎಂಬುದು ನಾವು ಗಮನದಲ್ಲಿಟ್ಟುಕೊಳ್ಳಬೇಕು.

ಶಾಸನೋಕ್ತ ಚಿಕ್ಕಯ್ಯ ಪಂಡಿತ ಮತ್ತು ಶರಣ ವಚನಕಾರರ ಚಿಕ್ಕಣ್ಣ

ಶಾಸನದಲ್ಲಿ ಉಕ್ತನಾದ ಚಿಕ್ಕಯ್ಯಪಂಡಿತ ಕೇದಾರ ಪಂಡಿತರ ಶಿಷ್ಯನಾಗಿದ್ದಾನೆ. ಶಾಸನದಲ್ಲಿ ಕಂಡುಬರುವ ಚಿಕ್ಕಯ್ಯ ಪಂಡಿತರ ಕುರಿತು ಶಾಸನಗಳು ಸಿಂಧನೂರು ತಾಲೂಕಿನ ದೇವರ ಗುಡಿಯ ಮಲ್ಲಿಕಾರ್ಜುನ ದೇವಾಲಯದಲ್ಲಿ ಕಂಡು ಬರುತ್ತವೆ. ದೇವರ ಗುಡಿಯಲ್ಲಿಯ ಶಾಸನಗಳನ್ನು ಮೊದಲ ಬಾರಿಗೆ ಶೋಧಿಸಿ ಚಿಕ್ಕಯ್ಯ ಪಂಡಿತ ಹಾಗೂ ವಚನಕಾರ ಚಿಕ್ಕಣ್ಣ ಇರ್ವರೂ ಒಬ್ಬರೇ ಎಂಬ ಅಭಿಪ್ರಾಯವನ್ನು ಡಾ: ಎಂ.ಎಂ. ಕಲಬರ್ಗಿ ಸ್ಪಷ್ಟಪಡಿಸುತ್ತಾರೆ.೧

ಬಸವಣ್ಣನವರು ' ಚಿಕ್ಕಯ್ಯ ನೆಮ್ಮಯ್ಯ' ಎಂದು ಹೊಗಳುವ ಚಿಕ್ಕಯ್ಯ ಹುಳಿಯುಮೇಶ್ವರ ಚಿಕ್ಕಯ್ಯನೇ ಆಗಿರಬೇಕು. ಈತ ಬಸವಣ್ಣನವರಿಗಿಂತ ಹಿರಿಯನಾಗಿ ಅವರ ತರುವಾಯ ಜೀವಿಸಿದನೆಂದು ಶಾಂತರಸರು ಹೇಳುತ್ತಾರೆ.೨ ಇದರ ಜೊತೆಗೆ ನಾನು ಕ್ಷೇತ್ರ ಕಾರ್ಯ ಕೈಗೊಂಡಾಗ ದೊರೆತ ಮಾಹಿತಿ ಹಾಗೂ 'ಉಳಿಯುಮೇಶ್ವರ' ಅಂಕಿತದ ವಚನಗಳನ್ನು ಗಮನಿಸಿದಾಗ ಶಾಸನೋಕ್ತ ಚಿಕ್ಕಯ್ಯ ಪಂಡಿತ ಹಾಗೂ ಶರಣ ಚಿಕ್ಕಣ್ಣರು ಇರ್ವರೂ ಬೇರೆ ಎಂಬ ಅಂಶಗಳು ತಿಳಿದು ಬರುತ್ತದೆ.

' ಶೈವ ನೇಮಸ್ತರ ಕೈಯಲುಪದೇಶ ವಾದರೇನ್ನಯ್ಯಾ ಅಲ್ಲಿ ಏನೂ ವೂಣಯವಿಲ್ಲ.' ೩ ಎಂಬ ವಚನವನ್ನಾಧರಿಸಿ ಈತನ ಶೈವ ಮನೋಧರ್ಮವನ್ನು ಕಲಬುರ್ಗಿ ಗುರುತಿಸಿ ವಚನಕಾರ ಚಿಕ್ಕಣ್ಣ ಹಾಗೂ ಶಾಸನೋಕ್ತ ಚಿಕ್ಕಣ್ಣರಲ್ಲಿ ಯಾವ ಭೇದವನ್ನು ಕಾಣದೇ ಹೋಗಿದ್ದಾರೆನ್ನಿಸುತ್ತದೆ.

ಲಿಂಗಸೂಗೂರು ತಾಲೂಕಿನಲ್ಲಿ ' ಉಳಿಮೇಶ್ವರ ' ಎಂಬ ಊರಿದ್ದು ಅಲ್ಲಿ ಕಂಡು ಬರುವ ಕೆಲವು ಅವಶೇಷ- ಐತಿಹ್ಯಗಳನ್ನು ಅವಲೋಕಿಸಿದರೆ: ಈ ಉಳಿಮೇಶ್ವರ ಸದ್ಯ ಚಿಕ್ಕ ಗ್ರಾಮವಾಗಿದೆ. ಈ ಗ್ರಾಮಕ್ಕೆ ಹತ್ತಿರದ ಹೊಲವೊಂದರಲ್ಲಿ ಹಳ್ಳದ ದಂಡೆಯ ಮೇಲೆ ಪಾಳು ದೇವಾಲಯದ ಅನೇಕ ಅವಶೇಷಗಳು ಹೊಲದ ತುಂಬೆಲ್ಲಾ ಬಿದ್ದಿವೆ. ಸದ್ಯ ಇದಕ್ಕೆ 'ಗುಡಿ ಕಣ 'ವೆನ್ನುತ್ತಾರೆ.★

ಈ ಸ್ಥಳದಲ್ಲಿ ಭಾರಿ ಹುತ್ತವೊಂದು ಬೆಳಗಿದೆ. ಹುತ್ತದೊಳಗೆ ಅದರ ಸುತ್ತಮುತ್ತ ದೇವಾಲಯದ ಅನೇಕ ಕಲ್ಲುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಈ ದೇವಾಲಯದ ಮುಖ್ಯ ದ್ವಾರದ ಕಲ್ಲು ಎಂದು ಹೇಳಲಾಗುವ ಒಂದು ಮುರಿದ (ಭಿನ್ನ) ಬಂಡೆಗಲ್ಲು ಸದ್ಯ ಇರುವ ಊರಿನ ಹನುಮಂತ ದೇವರ ಗುಡಿಯ ಮುಂಭಾಗದಲ್ಲಿದೆ. ಇನ್ನೂ ಅನೇಕ ಕಲ್ಲು, ದ್ವಾರಬಾಗಿಲಿನ ಬಂಡೆಗಲ್ಲು, ಬರಹದ ಕೆಲವು ಕಲ್ಲುಗಳನ್ನು ಇಲ್ಲಿಂದ ಬೇರೆ ಬೇರೆ ಕಡೆಗೆ ಸಾಗಿಸಿದ ಬಗ್ಗೆ ಇಲ್ಲಿನ ಊರಿನ ಅನೇಕ ಜನ ಹೇಳುತ್ತಾರೆ. ಅಲ್ಲದೇ ಸದ್ಯ ಇರುವ ಅಗಸಿ ಬಾಗಿಲಿನೊಳಗೆ ಬರಹವಿರುವ ಕಲ್ಲನ್ನು ಸೇರಿಸಿ ಕಟ್ಟಲಾಗಿದೆ ಎನ್ನುತ್ತಾರೆ. ಬಹುಶಃ ಈ ಬರಹ ಪಾಳುಗುಡಿಗೆ ಸಂಬಂಧಿಸಿರ ಬಹುದೆಂದು ತಿಳಿದು ಬರುತ್ತದೆ. ಸದ್ಯ ಅವಶೇಷಗಳ ಮೂಲಕ ಉಳಿದಿರುವ ಈ ಪಾಳು ದೇಗುಲದ ಸ್ಥಳದಲ್ಲಿ ' ಉಳವಿಮಲ್ಲೇಶ್ವರ ಲಿಂಗ ' ಎಂಬ ಗುಡಿಯಿತ್ತೆಂದು ಜನ ಹೇಳುತ್ತಾರೆ. ಬಹುಶಃ ಈ ಉಳವಿ ಮಲ್ಲೇಶ್ವರಲಿಂಗದಿಂದಲೇ ಪ್ರಸುತ್ತ ಊರಿನ ಹೆಸರು ಉಳಿಮೇಶ್ವರ ಆಗಿರಬಹುದಾಗಿದೆ. ಅಲ್ಲದೇ ಇದಕ್ಕೆ ' ಉಳಿಮೊಸರು ' ಎಂಬುದಾಗಿ ಅಲ್ಲಿಯ ಜನ ಕರೆಯುತ್ತಾರಾದರೂ ಊರಿನ ಸರಕಾರಿ ನಾಮಫಲಕದಲ್ಲಿ 'ಉಳಿಮೇಶ್ವರ 'ಎಂದಿದೆ. ಉಳಿವಿ ಮಲ್ಲೇಶ್ವರ ಲಿಂಗ ದೇವಾಲಯ ವಿದ್ದ ಸ್ಥಳದ ನೇರಕ್ಕೆ ಅರ್ಧ ಕಿ.ಮೀ. ಅಂತರದಲ್ಲಿ ಹಳ್ಳದ ಮತ್ತೊಂದು ದಡದಲ್ಲಿ ಸಮಾಧಿ ಸ್ಥಳವೊಂದಿದೆ. ಈ ಸ್ಥಳವನ್ನು ಊರಿನ ಜನ 'ಬಸಣ್ಣೋರ ಕಾಲದ ಶರಣರ ಗದ್ದಿಗಿ' ಎಂದು ಕರೆಯುತ್ತಾರೆ. ಹೀಗಾಗಿ ಇದು ನಿಸ್ಸಂದೇಹವಾಗಿ ಬಸವ ಸಮಕಾಲೀನ ಶರಣರಾಗಿರುವ ಉಳಿಮೇಶ್ವರ ಚಿಕ್ಕಣ್ಣನವರ ಸಮಾಧಿಯೇ ಆಗಿದೆ.

ಇಂದಿಗೂ ಈ ಗ್ರಾಮದಲ್ಲಿ ಚಿಕ್ಕಣ್ಣನೆಂಬ ಹೆಸರುಗಳು ಕಂಡುಬರುತ್ತವೆ. ಇದೇ ಗ್ರಾಮದಲ್ಲಿ ಮಠವೊಂದು ಇತ್ತೆಂಬುದಾಗಿ ಜನ ಹೇಳುತ್ತಾರೆ. ಮೂರು ದಶಕಗಳ ಹಿಂದೆ ಆ ಮಠವನ್ನು ನೆಲಸಮಗೊಳಿಸಿ ಅಲ್ಲಿ ಮನೆಯನ್ನು ಕಟ್ಟಲಾಗಿದೆ ಎಂದು ಊರಿನಜನ ಹೇಳುತ್ತಾರೆ. ಇದಲ್ಲದೇ ' ದೇವರ ಗುಡಿ - ಮಲ್ಲಾಪುರ ' ಗ್ರಾಮಗಳು ಪ್ರಸ್ತುತ ಉಳಿಮೇಶ್ವರ ಗ್ರಾಮಕ್ಕೆ ೩೦ ಕಿ.ಮೀ. ಅಂತರದ ಸರಳ ರೇಖೆಯಲ್ಲಿವೆ. ಅಲ್ಲದೇ ಈತನ ವಚನಗಳ ಶೈಲಿ ಅವಲೋಕಿಸಿದಾಗ ಅವು ಸರಳವಾಗಿವೆ. ಹೀಗಾಗಿ ಈತ ಶಾಸನೋಕ್ತ ಚಿಕ್ಕಯ್ಯನಂತೆ ತರ್ಕ, ವ್ಯಾಕರಣ ಮೊದಲಾದ ಶಾಸ್ತ್ರಗಳನ್ನು ಬಲ್ಲಿದವನಲ್ಲವೆಂಬುದು ಸ್ಪಷ್ಟವಾಗುತ್ತದೆ.

---

೧ : ಡಾ : ಎಂ.ಎಂ. ಕಲಬುರ್ಗಿ -ಶಾ.ಶಿ. ಪುಟ೯೩

೨ : ಶಾಂತರಸ - ಎ.ಅ.ಕ. ಪುಟ೧೬

೩ : ಸಂ: ಡಾ: ಎಂ.ಎಂ. ಕಲಬುರ್ಗಿ -ಸ.ವ.ಸಂ. -೬ , ವಚನ೧೨, ಪುಟ೬೩೬

★ ಅನೇಕರು ಪ್ರಸ್ತುತ ಈ ಜಾಗದಲ್ಲಿ ತಮ್ಮ ತಮ್ಮ ಹೊಲದ ರಾಶಿಗಳನ್ನು ಮಾಡುತ್ತಾರೆ. ಆ ಪ್ರಯುಕ್ತ ಬಹುಶಃ ಗುಡಿಯಲ್ಲಿನ ಈ ಜಾಗದಲ್ಲಿ ಕಣ ಮಾಡುವುದರಿಂದ ಗುಡಿ ಕಣ ವೆಂಬ ಹೆಸರು ಬಂದಿರುವುದು ಕಂಡು ಬರುತ್ತದೆ.

ಶಾಸನೋಕ್ತ ಚಿಕ್ಕಯ್ಯನು ಸಹ ಉಳಿಮೇಶ್ವರ ಗ್ರಾಮದವರಾಗಿದ್ದು ಇಲ್ಲಿನ ಮಠದ ಹಾಗೂ ಉಳವಿ ಮಲ್ಲೇಶ್ವರ ಲಿಂಗ ದೇವಸ್ಥಾನದ ಮುಖ್ಯ ಆಚಾರ್ಯರು - ಅರ್ಚಕರಾಗಿರಬೇಕೆನಿಸುತ್ತದೆ. ಚಿಕ್ಕಯ್ಯ ಪಂಡಿತನೆಂದು ಶಾಸನಗಳು ಸ್ಪಷ್ಟವಾಗಿ ಹೇಳುವುದರಿಂದ ಈತ ಉಳಿಮೇಶ್ವರರ ಚಿಕ್ಕಣ್ಣನಿಗಿಂತ ಭಿನ್ನವೆಂಬುದು ಸ್ಪಷ್ಟವಾಗತ್ತದೆ. ತಮ್ಮ ಸಮಕಾಲೀನರಾದ ಮಠದಾಚಾರ್ಯ ಚಿಕ್ಕಯ್ಯ ಪಂಡಿತರಿಂದ ವಚನಕಾರ ಚಿಕ್ಕಯ್ಯ ಕಲ್ಯಾಣಕ್ಕೆ ಬರುವ ಮೊದಲು ಅವರಿಂದ ಉಪದೇಶ ಪಡೆದಿರುವ ಸಾಧ್ಯತೆ ಇದೆ. ಹಾಗಾಗಿ ಚಿಕ್ಕಣ್ಣ ಶೈವ ನೇಮಸ್ತರ ಕೈಯಲುಪದೇಶವಾದಡೆನಯ್ಯ ಎಂದು ಹೇಳಿದ್ದು ಸಹಜವಾಗಿರಬೇಕೆನಿಸುತ್ತದೆ. ಮೂಲತಃ ಶಾಸನೋಕ್ತ ಚಿಕ್ಕಯ್ಯ ಪಂಡಿತ ಒಬ್ಬ ವಿದ್ವಾಂಸ, ಆತ ಮೂಲತಃ ಉಳಮೇಶ್ವರದಲ್ಲಿರುವ ಸ್ಥಾವರ ಲಿಂಗದ ಈಶ್ವರ ಭಕ್ತ. ಆತನ ಭಕ್ತಿಯ ಪ್ರಭಾವ ಸಹಜವಾಗಿ ಶರಣ ವಚನಕಾರ ಚಿಕ್ಕಯ್ಯ ಮೇಲಾಗಿರುವ ಸಾಧ್ಯತೆ ಇದೆ. ಮಠದಾಚಾರ್ಯ ಚಿಕ್ಕಯ್ಯ ಪಂಡಿತನ ವಿದ್ವತ್ತು, ಆತನ ಶಿವನ ನಿಷ್ಠೆ ಚಿಕ್ಕಣ್ಣನಿಗೂ ಇಷ್ಟವಾಗಿ ಆತನನ್ನು ಗುರುವಾಗಿ ಸ್ವೀಕರಿಸುವ ಸಾಧ್ಯತೆ ಇದೆ. ಇಲ್ಲಿಯ ಜನ ಹೇಳುವಹಾಗೆ ಉಳಿವಿ ಮಲ್ಲೇಶ್ವರ ಲಿಂಗದ ಗುಡಿಯ ಕೆಲವು ಕಲ್ಲಿನ ಬರಹಗಳು ಬೇರೆ ಕಡೆಗೆ ಸಾಗಿಸಿದ್ದಾರೆ. ಎಂಬುದನ್ನು ಗಮನಿಸಿದರೆ ಅವು ಬಹುಶಃ ದೇವರ ಗುಡಿಯ ಮಲ್ಲಿಕಾರ್ಜುನದೇವಾಲಯಕ್ಕೆ ಸಾಗಿಸಿರಬೇಕೆನಿಸುತ್ತದೆ. ಸದ್ಯ ದೇವರ ಗುಡಿಯಲ್ಲಿರುವ ಶಾಸನಗಳು ಉಳಿಮೇಶ್ವರ ಗ್ರಾಮದ ಶಾಸನಗಳಾಗಿರಬೇಕು. ಅಲ್ಲದೇ ಹಿಂದೆ ಬಹು ವಿಜೃಂಭಣೆಯಿಂದ 'ಸಂಕ್ರಾಂತಿ' ಸಂದರ್ಭದಲ್ಲಿ ಜಾತ್ರೆ ನಡೆಯುತ್ತಿತ್ತು ಎಂಬುದಾಗಿ ಇಲ್ಲಿಯ ಜನ ಹೇಳುತ್ತಾರೆ. ಜನರ ಮಾತಿಗೆ ಪುಷ್ಟಿಯೆಂಬಂತೆ ಸದ್ಯ ದೇವರಗುಡಿಯಲ್ಲಿರುವ ಶಾಸನ೧ ರಶಿನೇ ದತ್ತಿಯಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ದತ್ತಿ ನೀಡಿದ ಉಲ್ಲೇಖವಿದೆ. ೧ ಆದರೆ ಇದೇ ಮಾತನ್ನು ದೇವರ ಗುಡಿಯ ಗ್ರಾಮಕ್ಕೆ ಅನ್ವಯಿಸಿ ಹೇಳಲು ಸಾಧ್ಯವಿಲ್ಲ ಇಂತಹ ಯಾವುದೇ ಸುಳುಹುಗಳು ಅಲ್ಲಿ ಕಂಡುಬರುವುದಿಲ್ಲ. ಸದ್ಯ ದೇವರ ಗುಡಿಯಲ್ಲಿರುವ ಮಲ್ಲಿಕಾರ್ಜುನ ದೇವಾಲಯ ಪ್ರಾಚೀನ ಕಾಲದಲ್ಲಿನ ಹೆಸರು ಹುಳಿಯುಮೇಶ್ವರ ಎಂಬ ಅಭಿಪ್ರಾಯ ಕಲಬುರ್ಗಿಯವರು ವ್ಯಕ್ತಪಡಿಸಿದ್ದು ಅಷ್ಟೇನೂ ಸಮರ್ಪಕವಲ್ಲವೆನಿಸುತ್ತದೆ.೨

ದೇವರ ಗುಡಿಯ ಮಲ್ಲಿಕಾರ್ಜುನ ದೇವಾಲಯದ ಪ್ರಾಚೀನ ಹೆಸರಿನ ಬಗ್ಗೆ ಯಾವುದೇ ಸಬಲ ಆಧಾರಗಳಿಲ್ಲ. ಗುಡಿಯ ಮುಂದಿರುವ ಶಾಸನಗಳನ್ನು ಗಮನಿಸಿ ಮಲ್ಲಿಕಾರ್ಜುನ ದೇವಾಲಯವನ್ನು ಹುಳಿಮೇಶ್ವರ ದೇವಾಲಯವೆಂದು ಊಹಿಸುವುದು ಸರಿಯಾದ ವಿಚಾರವಲ್ಲವೆನಿಸುತ್ತದೆ. ಆದರೆ ಇದೇ ಮಾತನ್ನು ಉಳಿಮೇಶ್ವರ ಗ್ರಾಮಕ್ಕೆ ಅನ್ವಯಿಸಿ ಹೇಳಲಾಗದು. ಇಲ್ಲಿ ಮೂಲತಃ 'ಹುಳಿಯುಮೇಶ್ವರ ಲಿಂಗ' ವೆಂದು ಕರೆಯಬಹುದಾದ ದೇವಸ್ಥಾನ ಆನಂತರದಲ್ಲಿ ಜನರ ಬಾಯಲ್ಲಿ 'ಉಳವಿ ಮಲ್ಲೇಶ್ವರ ಲಿಂಗ'ದ ದೇವಾಲಯವಾಗಿ ಊರಿನ ಹೆಸರು ಸಹಜವಾಗಿ 'ಉಳಿಯುಮೇಶ್ವರ' 'ಉಳಿಮೇಶ್ವರ'ವಾಗಿರುವ ಸಾಧ್ಯತೆಗಳಿವೆ. ಈ ಎಲ್ಲಾಂಶಗಳಿಂದಾಗಿ ನಾವು ಇನ್ನೂ ಮುಂದೆ ಈ ಕೆಳಗಿನ ಅಂಶಗಳನ್ನು ಗಮನಿಸುವುದು ಬಹು ಮುಖ್ಯವಾಗಿದೆ.

೧ : ಸದ್ಯ ದೇವರಗುಡಿಯಲ್ಲಿ ದೊರೆತ ಶಾಸನಗಳಲ್ಲಿ ಉಕ್ತವಾದ ಚಿಕ್ಕಯ್ಯ ಪಂಡಿತ - ಚಿಕ್ಕಣ್ಣ ಇರ್ವರು ಭಿನ್ನರು ಒಂದೇ ಅಲ್ಲ.

೨ : ವಚನಕಾರ ಚಿಕ್ಕಣ್ಣ ಸಾಮಾನ್ಯ ಶರಣ - ಚಿಕ್ಕಯ್ಯ ಪಂಡಿತ ಶ್ರೇಷ್ಠ ವಿದ್ವಾಂಸ

೩ : ವಚನಕಾರ ಚಿಕ್ಕಣ್ಣನ ಮೇಲೆ ಪ್ರಭಾವ ಬೀರಿದ ವ್ಯಕ್ತಿ ಶಾಸನೋಕ್ತ ಚಿಕ್ಕಯಪಂಡಿತ

೪ : ಹುಳಿಯುಮೇಶ್ವರ ಲಿಂಗ ವೆಂಬ ದೇವಸ್ಥಾನದ ಹೆಸರಿನಿಂದಲೇ ಇಲ್ಲಿ ಊರು ನಿರ್ಮಾಣವಾಗಿ ದೇವಾಲಯದ ಕಾರಣದಿಂದ ಆ ಊರು ಉಳಿಯುಮೇಶ್ವರವಾಗಿ ಮುಂದೆ ಅದು ಸರಕಾರಿ ದಾಖಲೆಗಳಲ್ಲಿ ಉಳಿಮೇಶ್ವರವಾಗಿ ಈಗ ಅದು ಹಳ್ಳಿಯ ಜನರ ಬಾಯಲ್ಲಿ 'ಉಳಿಮೊಸರು' ಆಗಿ ಕಂಡುಬರುತ್ತಿದೆ.

ಚಿಕ್ಕಯ್ಯ ಪಂಡಿತ ಮಠವೊಂದರ ಆಚಾರ್ಯನು, ದೇವಾಲಯದ ಸ್ಥಾನಪತಿಯಾಗಿದ್ದನು. ವಚನಕಾರ ಚಿಕ್ಕಣ್ಣ ಊರಿನ ಒಬ್ಬ ಸಾಮಾನ್ಯ ಶರಣ, ಆತನಿಂದ ಉಪದೇಶ ಪಡೆದಾತ.

೬ : ಆರಂಭದಲ್ಲಿ ವಚನಕಾರ ಚಿಕ್ಕಣ್ಣ ಗುರುವಿನ ಅಪ್ಪಣೆಯಂತೆ ಸ್ಥಾವಲಿಂಗ ಪೂಜಿಸಿ ಮುಂದೆ ಕಲ್ಯಾಣಕ್ಕೆ ಬಂದಮೇಲೆ ಇಷ್ಟಲಿಂಗ ನಿಷ್ಠೆಯನ್ನು ಹೊಂದಿರಬೇಕೆನಿಸುತ್ತದೆ.

೭ : ಶರಣ ಚಿಕ್ಕಣ್ಣ ಪಂಡಿತನಲ್ಲ ಆತನೊಬ್ಬ ಅನುಭಾವಿ ಎಂಬುದಕ್ಕೆ ಆತನ ವಚನ - ಒಂದು ಸ್ವರ ವಚನವೇ ನಿದರ್ಶನವಾಗಿದೆ.

ಸ್ಥಳ :

ಸದ್ಯ ದೇವರ ಗುಡಿಯಲ್ಲಿ ಹುಳಿಯುಮೇಶ್ವರ ದೇವಸ್ಥಾನವೆಂದು ಕರೆಯಲ್ಪಡುವ ಯಾವುದೇ ದೇವಸ್ಥಾನವಿಲ್ಲ. ಆ ಕುರಿತ ಯಾವುದೇ ಮಾಹಿತಿಗಳುಲಭ್ಯವಿಲ್ಲ. ಮಲ್ಲಿಕಾರ್ಜುನ ದೇವಾಲಯ ಮುಂದಿರುವ ಶಾಸನಗಳ ಆಧಾರದಿಂದ ಈ ಪ್ರಾಚೀನ ದೇವಾಲಯದ ಹೆಸರು ಹುಳಿಯುಮೇಶ್ವರ ಎಂಬ ಊಹೆ ಸಮರ್ಪಕವೆನಿಸದು. ಹಾಗಾಗಿ ಚಿಕ್ಕಣ್ಣನು ಸಿಂಧನೂರು ತಾಲೂಕಿನ ದೇವಗುಡಿಯವರಾಗದೇ ಶಾಸನೋಕ್ತ ಚಿಕ್ಕಯ್ಯ ಪಂಡಿತ ಹಾಗೂ ವಚನಕಾರ ಉಳಿಮೇಶ್ವರದ ಚಿಕ್ಕಣ್ಣ ಇರ್ವರೂ ಸಮಕಾಲೀನರಾಗಿ ಉಳಿಮೇಶ್ವರದಲ್ಲಿಯೇ ಬದುಕಿದರೆಂಬುದು ಸ್ಪಷ್ಟವಾಗುತ್ತದೆ.

---

೧ : ಡಾ: ಎಂ.ಎಂ. ಕಲಬುರ್ಗಿ - ಶಾ.ಶಿ. ಪುಟ೯೨

೨ : ಅದೇ: ಪುಟ೯೦

ಕಾಲ :

ಚಿಕ್ಕಯ್ಯ ಪಂಡಿತ- ಚಿಕ್ಕಣ್ಣ ಇರ್ವರೂ ಸಮಕಾಲೀನರೆಂದು ಕಂಡು ಬರುವ ಕಾರಣ ನಾವು ಶರಣ ಚಿಕ್ಕಣ್ಣನ ಕಾಲವನ್ನು ಚಿಕ್ಕಯ್ಯ ಪಂಡಿತರ ಕಾಲದ ಮೂಲಕ ಕಂಡುಕೊಳ್ಳಬಹುದು .

' ಕ್ರಿ.ಶ.೧೧೬೮ ರಲ್ಲಿ ಸೋಮರಸ ದಂಡನಾಯಕ -ಈಶ್ವರ ದಂಡನಾಯಕ ಕ್ರಿ.ಶ. ೧೧೭೩ ಸಿಂಧರಾಚಮಲ್ಲ, ಕ್ರಿ.ಶ. ೧೨೦೨ ರಲ್ಲಿ ಹೆಮ್ಮಡಿ ದೇವರಸರು ಮತ್ತು ಸಿಂಧ ಹರಿಹರದೇವ ಇವರು ಹುಳಿಯುಮೇಶ್ವರ ದೇವರ ಮಠದಾಚಾರ್ಯರಾಗಿದ್ದ ಚಿಕ್ಕಯ್ಯ ಪಂಡಿತ ಕಾಲಕರ್ಚಿ ದತ್ತಿ ಬಿಟ್ಟಿದ್ದಾರೆ.'೧ ಇದನ್ನು ಗಮನಿಸಿದರೆ ಶಾಸನೋಕ್ತ ಚಿಕ್ಕಯ್ಯ ಪಂಡಿತ ಕ್ರಿ.ಶ. ೧೧೬೮ ರಿಂದ ಕ್ರಿ.ಶ. ೧೨೦೨ ವರೆಗೂ ಬದುಕಿದ್ದನ್ನು ನೋಡಿದರೆ ಈತನ ಕಿರಿಯ ಸಮಕಾಲೀನನಾಗಿ , ಬಸವ ಸಮಕಾಲೀನನಾಗಿ ವಚನಕಾರ ಉಳಿಮೇಶ್ವರ ಚಿಕ್ಕಣ್ಣ ಬದುಕಿರಬಹುದಾಗಿದೆ. ಕವಿ ಚರಿತೆ ಕಾರರು ಈತನ ಕಾಲ ಕ್ರಿ.ಶ.೧೧೬೦ ಎಂದಿರುವುದು ಸರಿಯಾಗಿದೆ. ಬಸವಣ್ಣನವರು ಬದನೆಕಾಯಿನ್ನು ಲಿಂಗ ಮಾಡಿದ ಪವಾಡ ಉಲ್ಲೇಖಿಸಿ ಇವರ ಕಾಲ ಕ್ರಿ.ಶ.೧೧೮೦ ಎಂದು ಎಲ್. ಬಸವರಾಜ ಊಹೆಮಾಡಿದ್ದು ಸರಿ ಎಂಬುದಾಗಿ ಕಲಬುರ್ಗಿ ಹೇಳುತ್ತಾರೆ. ೨

ಈ ಹಿನ್ನೆಲೆಯಲ್ಲಿ ನಾವುಇವರ ಕಾಲವನ್ನು ನೋಡುವುದಾದರೆ ವಚನಕಾರ ಚಿಕ್ಕಣ್ಣನು ಚಿಕ್ಕಯ್ಯ ಪಂಡಿತರಿಂದ ಪ್ರಭಾವಿತನಾಗಿರುವುದನ್ನು ಗುರುತಿಸಿದರೆ ಸುಮಾರಾಗಿ ಕ್ರಿ.ಶ. ೧೧೬೮ ರಿಂದ ಕ್ರಿ.ಶ.೧೨೩೦ ವರೆಗೂ ಬಾಳಿರಬಹುದಾಗಿದೆ.ಇದೇ ಅವಧಿಯಲ್ಲಿ ಆತ ಕಲ್ಯಾಣಕ್ಕೆ ಹೋಗಿರಬೇಕು. ಕ್ರಿ.ಶ.೧೧೪೨ ರ ಸುಮಾರಿನಲ್ಲಿ ಜನಿಸಿ , ಕ್ರಿ.ಶ.೧೧೬೮ ರ ಸುಮಾರಿನಲ್ಲಿ ಚಿಕ್ಕಯ್ಯ ಪಂಡಿತ ಉಪದೇಶ ಪಡೆದು ಕಲ್ಯಾಣಕ್ಕೆ ಹೋಗಿ ಕ್ರಾಂತಿಯ ನಂತರ ಕ್ರಿ.ಶ. ೧೧೬೮ -೬೯ ರಸುಮಾರಿಗೆ ಸ್ವ ಗ್ರಾಮಕ್ಕೆ ಮರಳಿರಬೇಕು. ಮುಂದೆ ಈತ ಇಲ್ಲಿ ಕೆಲವು ಕಾಲ ಇದ್ದು , ಜ್ಞಾನದಾಸೋಹ ನಡೆಸಿ ಕ್ರಿ.ಶ.೧೨೩೦ ರಲ್ಲಿ ಲಿಂಗೈಕ್ಯ ನಾಗಿರಬೇಕು. ಆತ ಆರಂಭದಲ್ಲಿ ಸ್ಥಾವರ ಭಕ್ತನಾಗಿ ಮುಂದೆ ಕಲ್ಯಾಣ ಶರಣರ ಸಂಪರ್ಕದಿಂದ ಇಷ್ಟಲಿಂಗ ನಿಷ್ಠೆಯನ್ನು ಹೊಂದಿದವನೆಂಬುದನ್ನು ಆತನ ವಚನಗಳಲಿಂದಲೇ ತಿಳಿಯಬಹುದು. ಈತ ಕೊನೆಗಾಲವನ್ನು ಉಳಿಮೇಶ್ವರದಲ್ಲಿಯೇ ಕಳೆದನೆಂಬುದಕ್ಕೆ ಆತನಸಮಾಧಿಯ ಅವಶೇಷಗಳೇ ಸಾಕ್ಷಿಯಾಗಿವೆ.

ವಚನಾಂಕಿತ :

ಈತನ ಅಂಕಿತ ಬಗ್ಗೆ ಅಲ್ಪಸ್ವಲ್ಪ ವ್ಯತ್ಯಾಸ ರೂಪಗಳು ಕಂಡು ಬಂದರೂ ಚಿಕ್ಕಯ್ಯ ವಚನಗಳನ್ನು ಸಂಪಾದಿಸುವವರು ' ಹುಳಿಯಮೇಶ್ವರ ' ಎಂಬ ಯೋಗ್ಯ ಪಾಠವನ್ನೇಮುದ್ರಿಕೆಯಾಗಿ ಸ್ವೀಕರಿಸಬೇಕಾಗುತ್ತದೆ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ೩ ಕಲಬುರ್ಗಿಯವರು ಮತ್ತೊಂದೆಡೆ ಉಳಿಮೇಶ್ವರ ಚಿಕ್ಕಯ್ಯನ ನಿಜವಾದ ಹೆಸರು ಉಳಿಯ ಮೇಶ್ವರ ಚಿಕ್ಕಯ್ಯನೆಂದು ಶಾಸನಗಳಿಂದ ರಚಿತವಾಗಿದ್ದರೂ ಹಸ್ತ ಪ್ರತಿಗಳಲ್ಲಿ ಪರಂಪರಾಗತವಾಗಿ ಬಂದ ಉಳಿಯುಮೇಶ್ವರ ಚಿಕ್ಕಯ್ಯ ಎಂಬುದನ್ನು ಇಲ್ಲಿ ಸ್ವೀಕರಿಸಿದ್ದೇವೆ ಎಂದು ಹೇಳುತ್ತಾರೆ. ೪ ಇವೆರಡು ಅಭಿಪ್ರಾಯ ಹಾಗೂ ಈತನ ವಚನಗಳ ಅಂಕಿತ, ಈತನ ಸ್ಥಳನಾಮ , ಇಷ್ಟದೈವದ ಹೆಸರು ಇವೆಲ್ಲವುಗಳನ್ನು ಗಮನಿಸಿದರೆ ಈತನ ಅಂಕಿತದ ಬಗ್ಗೆ ಸ್ಪಷ್ಟತೆ ಕಂಡುಬರುತ್ತದೆ.

ಒಟ್ಟು ಈತನ ೧೨ ವಚನ ಹಾಗೂ ಒಂದು ಹಾಡು ಸದ್ಯ ನಮಗೆ ಉಪಲಬ್ಧವಾಗಿದೆ. ಅಲ್ಲೆಲ್ಲ 'ಉಳಿಯುಮೇಶ್ವರ' ಎಂದಿದೆ. ಈತನ ಸ್ಥಳನಾಮ ಉಳಿಮೇಶ್ವರ-ಇಷ್ಟ ದೈವ ಉಳಿಮೇಶ್ವರದ ಈಶ್ವರ ಲಿಂಗ ಹೀಗಾಗಿ ಉಳಿಮೇಶ್ವರದ ಈಶ್ವರ ಲಿಂಗವನ್ನೇ ತನ್ನ ಆರಾಧ್ಯ ದೈವವಾಗಿರಿಸಿಕೊಂಡು ಅದನ್ನೇ ವಚನಾಂಕಿತವಾಗಿಟ್ಟುಕೊಂಡಿರುವ ಸಾಧ್ಯತ ಇದೆ. ' ಹುಳಿಯುಮೇಶ್ವರ ' ವೆಂಬುದು ಬಹು ಪ್ರಾಚೀನ ಹೆಸರಾಗಿದ್ದು ಅದು ವಚನಕಾರ ಚಿಕ್ಕಣ್ಣನ ಕಾಲಕ್ಕೆ ಜನರ ಬಾಯಲ್ಲಿ ಉಳಿಯುಮೇಶ್ವರ -ಉಳಿಯಮೇಶ್ವರವಾಗಿರಬೇಕು. ಅದನ್ನೇ ಇವರು ಸಹಜವಾಗಿ ಉಳಿಯುಮೇಶ್ವರ ಎಂದು ಸ್ವೀಕರಿಸಿದ್ದಾರೆ. ಆದ್ದರಿಂದ ಇವರ ಅಂಕಿತ ಉಳಿಯುಮೇಶ್ವರ ಎಂಬ ಕಲಬುರ್ಗಿಯವರ ಎರಡನೆಯ ಅಭಿಪ್ರಾಯ ಸರಿಯಾದುದಾಗಿದೆ.

ವ್ಯಕ್ತಿತ್ವ :

ಈತನ ವಚನಗಳ ಸರಳತೆಯನ್ನು ಅವಲೋಕಿಸಿದರೆ ಈತ ಮೂಲತಃ ಒಬ್ಬ ಸಾಮಾನ್ಯ ಶರಣನೆಂದು ಸ್ಪಷ್ಟವಾಗುತ್ತದೆ. ಈತ ಯಾವುದೇ ಧರ್ಮವನ್ನು ಆರಂಭದಲ್ಲಿ ಸ್ವೀಕರಿಸದಿದ್ದರೂ ಶಿವನಲ್ಲ ನಿಷ್ಠೆ ಹೊಂದಿದ ಭಕ್ತ . ಹಾಗಾಗಿ ಈತನ ನಿಲುವನ್ನು ಗಮನಿಸಿ ಶಾಸನೋಕ್ತ ಚಿಕ್ಕಯ್ಯನೊಂದಿಗೆ ಸಮೀಕರಿಸಿದ್ದು ಸಹಜವಾಗಿದೆ. ಸರಳವಾದ ಅಭಿವ್ಯಕ್ತಿಯಲ್ಲಿಯೇ ಗಹನವಾದ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಇಷ್ಟದೈವದಲ್ಲಿ ಸದಾ ಮೊರೆಯಿಡುವ ಕಳಕಳಿ ನೋಡಿದರೆ ಈತನ ಮೃದು ಸ್ವಭಾವದ ವ್ಯಕ್ತಿತ್ವ ಕಂಡು ಬರುತ್ತದೆ. ಈತನ ಸ್ವರ ವಚನ೫ವನ್ನು ಗಮನಿಸಿದರೆ ಸಾಮಾನ್ಯ ಶಿವಭಕ್ತನೆಂಬುದು ಸ್ಪಷ್ಟವಾಗುತ್ತದೆ. ಮುಂದೆ ಕಲ್ಯಾಣ ಶರಣರ ಪರಿಸರಕ್ಕೆ ಹೋದ ಮೇಲೆ ಆತ ಶರಣ ಧರ್ಮವನ್ನು ಸ್ವೀಕರಿಸಿ ಆ ದಿಸೆಯಲ್ಲಿ ಆಲೋಚನೆ ಮಾಡಿ ವಚನಗಳನ್ನು ಮುಂದೆ ಗಂಭೀರವಾಗಿ ರಚಿಸಿದ್ದಾನೆ.

---

೧ : ಡಾ :ಎಂ.ಎಂ. ಕಲಬುರ್ಗಿ.-ಶಾ.ಶಿ ಪುಟ ೮೮

೨ : ಡಾ : ಎಂ.ಎಂ. ಕಲಬುರ್ಗಿ ಮಾರ್ಗ -೨

೩ : ಅದೇ :

೪ :ಸಂ: ಡಾ : ಎಂ.ಎಂ. ಕಲಬುರ್ಗಿ -ಸ.ವ.ಸಂ. -೬ ಪ್ರಸ್ತಾವನೆ ಪುಟ ೨೧

೫ : ಡಾ . ಕೆ. ರವೀಂದ್ರನಾಥ -ಬ.ವ.ಸಾ. ಪುಟ ೫೦೪-೫೦೫ ಇವುಗಳನ್ನು ಪೂರ್ತಿ ಸ್ವರವಚನಕ್ಕಾಗಿ ಗಮನಿಸಿರಿ.

೩ : ಬಸವೋತ್ತರ ಯುಗದ ಶರಣರು

ಕಲ್ಯಾಣ ಕ್ರಾಂತಿ ಘಟನೆ ಕನ್ನಡ ನಾಡಿನ ಸಾಹಿತ್ಯದ ಮಟ್ಟಿಗೆ ಒಂದು ರೀತಿಯ ಅದೃಷ್ಟದ ಹಾದಿಯೇ ಎನ್ನಬಹುದು. ಮೇಲ್ನೋಟಕ್ಕೆ ಆ ಕ್ರಾಂತಿ ವಿಫಲವಾದಂತೆ ಗೋಚರಿಸಿದರು. ಅದು ವಾಸ್ತವವಾಗಿ ಸಫಲವಾದ ಸಂಪೂರ್ಣ ಕ್ರಿಯಾತ್ಮಕವಾದ ಕ್ರಾಂತಿ

ಅನುಭವ ಮಂಟಪದ ನೆಲೆ ಕಳೆದು ಕೊಂಡ ಶರಣರ ಸಮುದಾಯ ವಿವಿಧ ದಿಕ್ಕಿನೆಡೆಗೆ ಹೊನಲಂತೆ ಹರಿಯಿತು. ಆ ಕಾರಣದಿಂದಾಗಿಯೇ ಶರಣ ಸಾಹಿತ್ಯ ಅನೇಕ ಸ್ಥಳಗಳಲ್ಲಿ ಹುದುಗಿ ಸ್ವಲ್ಪ ಕಾಲ ಸ್ಥಗಿತವಾಯಿತು. ಮುಂದೆಅದು ಸಂಕಲನ ಸಂಪಾದನಾಗಳಿಗೆ ಒಳಗಾಗಿ ಬೇರೊಂದು ಸ್ವರೂಪ ಪಡೆಯಿತಾದರೂ ಸ್ವತಂತ್ರವಾಗಿಯೂ ತನ್ನ ಸ್ವರೂಪವನ್ನು ಪಡೆಯಿತು.

ಬಸವೋತ್ತರ ಯುಗದಲ್ಲಿ ಪ್ರಮುಖಶರಣರೆಲ್ಲರೂ ವಿರಕ್ತ ಪರಂಪರೆಯವರು ಎಂಬುದ ಗಮನಿಸಬೇಕಾದ ಸಂಗತಿಯಾಗಿದೆ. ಈ ಯುಗದ ಶರಣರ ನೆಲೆ ಕೇಂದ್ರಿಕೃತವಾಗದೇ ವಿಕೇಂದ್ರಿಕೃತವಾಗಿತ್ತು. ಅಂತೆಯೇ ಸಹಜವಾಗಿ ಸಾಹಿತ್ಯದಲ್ಲಿ ವೈವಿಧ್ಯತೆ ಕಂಡು ಬಂದಿತು. ತಾತ್ವಿಕಾಂಶ ಮುಖ್ಯ ವಾದರು ಸಮಕಾಲೀನ ಸಮಸ್ಯೆಗಳ ಬಗ್ಗೆ ಚಿಂತನೆಯೂ ಸಹ ನಡೆದಿದೆ. ಭಕ್ತಿ-ಜ್ಞಾನ- ವೈರಾಗ್ಯ ಗಳ ಸಂಗಮವಾಗಿ ಈ ಯುಗ ಕಾಣಿಸಿ ಕೊಂಡಿತು. ಈ ಯುಗದ ಶರಣರೇ ಶರಣ ಸಾಹಿತ್ಯದಲ್ಲಿ ಬಹುಮುಖಿಯಾದ ಪ್ರಕಾರಗಳನ್ನು ಪರಿಚಯಿಸಿದ್ದಾರೆ.

ಶರಣ ಧರ್ಮವನ್ನು ಪುನರ್‌ಸ್ಥಾಪಿಸುವ ಪ್ರಮುಖ ಉದ್ದೇಶ ಇವರದಾಗಿದೆ. ಅದನ್ನು ವೈದಿಕರೊಡನೆ ಪೈಪೋಟಿನಡೆಸುತ್ತಲೇ ಬೆಳೆಸಬೇಕಾದ ಜವಾಬ್ದಾರಿ ಇವರ ಮೇಲಿತ್ತು. ಸೈದ್ಧಾಂತಿಕ ನೆಲೆಯಲ್ಲಿ ಸಾಹಿತ್ಯ ಮೂಡಿ ಬಂದರು ತತ್ಕಾಲಿನ ಸಾಹಿತ್ಯಕ್ಕಿಂತ ಪ್ರಗತಿಪರ ವಾಗಿತ್ತೆಂಬುದು ಗಮನಿಸಬಹುದು. ಈ ಯುಗದ ಪ್ರಭಾವಲಯಕ್ಕೆ ಅತ್ಯಂತ ಸಮರ್ಥವಾಗಿ ಪ್ರತಿಕ್ರಿಯಿಸಿದ್ದು ನಮ್ಮ ರಾಯಚೂರು ಪರಿಸರದ ಶರಣ ಸಾಹಿತ್ಯ ವೆಂಬುದನ್ನು ಗಮನಿಸಬೇಕಾದ ಬಹುಮುಖ್ಯ ಸಂಗತಿಯಾಗಿದೆ. ಶರಣ ಧರ್ಮದ ಜೊತೆಗೆ ತತ್ಕಾಲೀನ ಪರಂಪರೆ-ಸಂಪ್ರದಾಯಗಳನ್ನು ಪುರಸ್ಕರಿಬೇಕಾದ ಅನಿವಾರ್ಯತೆ ಉಂಟಾಯಿತು. ಆದರೂ ಸಂಪ್ರದಾಯ ವನ್ನೇ ಮುಂದುವರೆಸಿದರು.' ಶರಣ ಸಿದ್ಧಾಂತದ ಮುಖ್ಯ ತಾತ್ವಿಕ ತಿರುಳಾದ ಅನುಭಾವವನ್ನು ತಮ್ಮ ಮುಖ್ಯ ಧೋರಣೆಯಾಗಿರಿಸಿಕೊಂಡರು. ಎಲ್ಲವನ್ನು ಅನುಭಾವದ ಅಡುಗೆಯಾಗಿಸಿದರು. ಹೀಗಾಗಿ ವಿದ್ವಾಂಸರ ವಲಯ ಇವರನ್ನು ಸೀಮಿತಗೊಳಿಸಿ ತನ್ನ ಪರಿ ಭಾಷೆಗಳಿಂದ ಮುಚ್ಚಿ ಹಾಕಿತು. ಇವರು 'ಇಹ'ಕ್ಕಿಂತ 'ಪರ'ಕ್ಕೆ ಹೆಚ್ಚು ಗಮನ ಹರಿಸಿದ್ದರಿಂದಲೇ ಇವರು ಶರಣರ ಆಶಯದಿಂದ ಬಹುದೂರ ವೆಂಬಂತೆ ಕೆಲವರಿಗೆ ಭಾಸವಾಯಿತು. ಆಗಿನ ವಿದ್ವಾಂಸರು ತನ್ನ ಮೂಗಿನ ನೇರಕ್ಕೆ ಅವರ ಸಾಹಿತ್ಯವನ್ನು-ಪರಿಸರವನ್ನು ಸೀಮಿತಗೊಳಿಸಿದರು. ಈ ಯುಗದ ಶರಣರಲ್ಲಿ ಸ್ಥಾವರ ಪೂಜೆಗೆ ಮನ್ನಣೆ ಸಿಕ್ಕರೂ ಅದು ಸಾಂಕೇತಿಕ ವೆಂಬುದನ್ನು ಮರೆಯಬಾರದು. ಹಾಗಾಗಿ ಈ ಪರಿಸರದ, ಈ ಯುಗದ ಶರಣರು ಸ್ಥಾವರದ ಜೊತೆಗೆ ಇಷ್ಟಲಿಂಗವನ್ನು ತೊರೆದು ಇಡೀ ನಿಸರ್ಗವನ್ನೇ ತಮ್ಮ ಆರಾಧ್ಯದೈವವಾಗಿರಿಸಿಕೊಂಡು ವಿಚಿತ್ರ ವೆನಿಸಿದರು. ಆ ಮೂಲಕ ತಾತ್ವಿಕಾಂಶಗಳನ್ನು ಕಟ್ಟಿ ಕೊಟ್ಟರು. ಈ ವಿಚಾರದ ಹಿನ್ನೆಲೆಯಲ್ಲಿ ನಾವಿಂದು ಶರಣ ಸಾಹಿತ್ಯದ ವ್ಯಾಪ್ತಿಯನ್ನು ಸಂಕುಚಿತಗೊಳಿಸದೆ ಅದನ್ನು - ಅದರ ಭಿತ್ತಿಯನ್ನು ವಿಶಾಲಗೊಳಿಬೇಕಾಗದ್ದು ಪ್ರತಿಯೊಬ್ಬ ಶರಣಾಭಿಮಾನಿಯ ಮನೋಧೋರಣೆ ಯಾಗಬೇಕಾದದ್ದು ಬಹು ಮುಖ್ಯವಾಗಿದೆ. ಇಂತಹ ಒಂದು ಪರಿಕಲ್ಪನೆಯೊಂದಿಗೆ ಈ ಪರಿಸರದ ಬಸವೋತ್ತರ ಯುಗ ಶರಣರನ್ನು ಪರಿಚಯಿಸಲಾಗುತ್ತದೆ. ಶರಣರ ಪಟ್ಟಿ ಸುಧೀರ್ಘವಾಗಿದ್ದರೂ ಮುಖ್ಯರಾದವರನ್ನು ಇಲ್ಲಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಸಾಹಿತ್ಯ ರಚಿಸುವ ಜೊತೆಗೆ ಕೆಲವರು ಕಂಡರೆ-ಸಾಹಿತ್ಯ ರಚಿಸದೇ ತಮ್ಮ ಸಾತ್ವಿಕ ಸಾಧನೆಯಿಂದ ನಮ್ಮ ಗಮನಸೆಳೆದ ಶರಣರು ಈ ಯುಗದಲ್ಲಿದ್ದಾರೆ. ಆ ಕಾರಣ ಈ ಯುಗದ ಸಾಹಿತ್ಯ ರಚಿಸಿದ ಮತ್ತು ತಾತ್ವಿಕ ಸಾಧನೆಯಿಂದ ಗಮನ ಸೆಳೆದ ಶರಣರನ್ನು ಕುರಿತು ನಾವೀಗ ಮುಂದಿನ ಪುಟಗಳಲ್ಲಿ ಅವಲೋಕಿಸೋಣ

(ಅ)ಸಾಹಿತ್ಯವನ್ನು ರಚಿಸಿದ ಶರಣರು

೧ : ಅಗ್ನಿವಣಿ ಹಂಪಯ್ಯ

೨ : ಜಲದುರ್ಗ ಶರಣರು

೩ : ಹೇಮಗಲ್ಲ ಹಂಪ

೪ : ಶ್ರೀ ಚಿದಾನಂದಾವಧೂತರು

೫ : ಕೂಡಲೂರು ಬಸವಲಿಂಗ ಶರಣರು

೬ : ಗೂಗಲ್ಲು ಪರಪ್ಪಯ್ಯ

೭ : ಗೊಬ್ಬೂರು ಹಂಪಣ್ಣ

೮ : ನೀರಲಕೇರಿ ಬಸವಲಿಂಗ ಶರಣರು

೯ : ಘನಮಠ ನಾಗಭೂಷಣ ಶರಣರು

೧೦ : ವೆಂಕಟಾಪುರ ಖೇಮಣ್ಣ

೧೧ : ದೇವದುರ್ಗದ ಚೆನಮಲ್ಲ

೧೨ : ಹೊಸಪೇಟೆಯ ಅಯ್ಯಪ್ಪ ಪಂಥೋಜಿ

೧೩ : ತಾಳಪಲ್ಲಿ ದಿನ್ನಿ ವೆಂಕಯ್ಯ

೧೪ : ಬಳಗಾನೂರು ಮರಿಸ್ವಾಮಿ

೧೫ : ಗೊಬ್ಬೂರು ಮಾರ್ತಾಂಡಪ್ಪ

೧೬ : ದೇವದುರ್ಗ ಆದಿ ಅಮಾತೆಪ್ಪ

೧೭ : ವಡಕಿ ತಾತಪ್ಪಯ್ಯ

೧೮ : ಹಿರೇ ಬೂದೂರಿನ ಹನುಮಂತರಾವ್

೧೯ : ರಾಯಚೂರು ಹನುಮಂತವ್ವ

೨೦ : ಸರ್ಜಾಪೂರ ಚೆನ್ನ ಬಸವ ಸ್ವಾಮಿಗಳು

೨೧ : ಕಲ್ಲೂರು ಅಡವೀಶ ಶರಣರು

(ಆ) ತಾತ್ವಿಕ ಸಾಧನೆಯಿಂದ ಹೆಸರಾದ ಶರಣರು

೧ : ಗಲಗಿನ ಶರಣರು

೨ : ನಾರದ ಗಡ್ಡೆ ಚೆನ್ನ ಬಸವ ಸ್ವಾಮಿಗಳು

೩ : ಬಿಚ್ಚಾಲಿ ಶ್ರೀ ಮಹಾಂತೇಶ್ವರರು

೪ : ನಾಗೋಲಿ ಶರಣರು

೫ : ಬಲ್ಲಟಗಿ ಶರಣರು

೬ : ಹಟ್ಟಿಯ ಲಿಂಗಾವಧೂತರು

೭ : ಸಜ್ಜಲ ಗುಡ್ಡದ ಶರಣಮ್ಮನವರು

೮ : ಅಂಕಲಿ ಮಠದ ಶರಣರು

೯ : ದೇವರ ಭೂಪುರದ ಶರಣರು

೧೦ : ಒಳಬಳ್ಳಾರಿ ಚೆನ್ನ ಬಸವ ಸ್ವಾಮಿಗಳು

೧೧ : ಉಟಕನೂರು ಬಸವಲಿಂಗ ಶರಣರು

೧೨ : ಕಳ್ಳಿ ಲಿಂಗಸೂಗೂರು ನಾಗಪ್ಪ ಶರಣರು

೧೩ : ಸಿದ್ಧರಾಮಪುರ ವಿರೂಪಯ್ಯ

೧೪ : ಹೀರಾದ ಶರಣರು

೧೫ : ಮೇಧಾವಿ ರಾಯನ ಕೋಠಾದ ಶರಣರು

೧೬ : ಆಮೀನ ಗಡದ ಹುಚ್ಚ ಬುಡ್ಡೇಶ್ವರ

೧೭ : ಮುದಗಲ್ಲಿನ ಗ್ಯಾನಪ್ಪಯ್ಯ

೧೮ : ನವಲಕಲ್ ಶರಣರು

೧೯ : ಅತ್ತನೂರು ನಿಜಾನಂದರು

೨೦ : ಗೊಬ್ಬೂರಿನ ಶರಣರು

೨೧ : ಗಲಗಿನ ಸಂಗಮನಾಥರು

೨೨ : ಜಾಗಟಗಲ್ ವೀರೂಪಾಕ್ಷಯ್ಯ

೨೩ : ವಡವಟ್ಟಿ ಲಿಂಗಪ್ಪಯ್ಯ

೨೪ : ಕವಿತಾಳದ ಶರಣರು

(ಅ) ಸಾಹಿತ್ಯ ರಚಿಸಿದ ಶರಣರು

೧ : ಅಗ್ಘವಣಿ ಹಂಪಯ್ಯ

ಕೆಳವಾಡಿನಾಡಿನ ಪ್ರಸಿದ್ಧ ಅಗ್ರಹಾರವಾಗಿದ್ದ 'ಮುಕ್ಕುಂದಾ' ಸಿಂಧನೂರು ತಾಲೂಕಿನ ಇಂದಿನ ಒಂದು ಸಣ್ಣ ಗ್ರಾಮ . ಆಗ್ರಾಮದ ನಿವಾಸಿಯಾಗಿದ್ದ ಶರಣರೇ ಅಗ್ಘವಣಿ ಹಂಪಯ್ಯ .

ಸ್ಥಳ : ಈತ ಮುಕ್ಕುಂದಪುರದವನೆಂಬ ಉಲ್ಲೇಖವನ್ನು ಸರಕಾರಿ ವಚನ ಸಂಪುಟದ ಸಂಪಾದಕರು ವ್ಯಕ್ತಪಡಿಸಿದ್ದಾರೆ. (ಸಂ. ಡಾ : ಎಂ. ಎಂ. ಕಲಬುರ್ಗಿ) ಈ ಮುಕ್ಕುಂದ ಪುರವೇ ಇಂದಿನ ಮುಕ್ಕುಂದಿಯೆಂದು ಹೇಳಲು ' ಪ್ರೌಢದೇವರಾಯನ ಕಾವ್ಯ '- 'ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ' ಗಳೇ ಪ್ರಮುಖವಾಗಿವೆ. ಆದರೆ ಮುಕ್ಕುಂದ ಪುರದಲ್ಲಿರುವ ಯಾವ ಶಾಸನಗಳಲ್ಲಿ ಈತನ ಉಲ್ಲೇಖವಿಲ್ಲ. ಐತಿಹ್ಯವೊಂದರ ಪ್ರಕಾರ ಇಲ್ಲಿ ಮುರಾರಿ ದೇವಸ್ಥಾನವಿದೆ. ಈ ಮುರಾರಿಯ ದೇವಸ್ಥಾನದಿಂದಲೇ ಈ ಊರಿಗೆ ಮುಕ್ಕುಂದ ಎಂಬ ಹೆಸರು ಬಂದಿತೆಂಬುದಾಗಿ ಸ್ಥಳಿಯರು ಹೇಳುವುದು ನನಗೆ ಕ್ಷೇತ್ರ ಕಾರ್ಯಗಳಿಂದ ತಿಳಿದು ಬಂದಿದೆ. ಮುರ ಎಂದರೆ ಇಲ್ಲಿಯ ಒಬ್ಬ ರಾಕ್ಷಸ, ಈ ರಾಕ್ಷಸನ ಉಪಟಳಕ್ಕೆ ಜನ ತತ್ತರಿಸಿದಾಗ ಹರಿ ಇಲ್ಲಿ ಬಂದು ರಾಕ್ಷಸನನ್ನು ಸಂಹರಿಸಿದ ಕಾರಣ ಮುರೇಶ್ವರ ನೆಂಬ ಹೆಸರು ಹರಿಗೆ ಬಂದು ಅದು ಮುಂದೆ ಮುರಾರಿಯಾಯಿತೆಂದು ಕಂಡು ಬರುತ್ತದೆ. ಹರಿಯ ಮತ್ತೊಂದು ಹೆಸರೇ ಮುಕ್ಕುಂದವಾಗಿದೆ. ಈಗ ಸುಮಾರು ಎರಡು ತಲೆಮಾರಿನ ಹಿಂದಿನವರೆಗೂ ಹಂಪಮ್ಮ - ಹಂಪಯ್ಯ ಹೆಸರುಗಳು ಇಲ್ಲಿ ದ್ದುದು ಕಂಡು ಬರುತ್ತದೆ. ಹಂಪೆಗೆ ಈ ಪ್ರದೇಶ ಬಹು ಹತ್ತಿರವಾಗಿದೆ. ಇದೊಂದು ಐತಿಹಾಸಿಕ ಸ್ಥಳವೆಂಬುದಕ್ಕೆ ಇಲ್ಲಿಯ ಶಾಸನ , ದೇವಾಲಯಗಳು , ಕೋಟೆ , ಜಲಕ್ರೀಡೆಯ ಮಂಟಪಗಳೇ ನಿದರ್ಶನಗಳಾಗಿವೆ. ಅಲ್ಲದೇ ಇದು ಕಂಪಿಲ ರಾಯನ ಹೆಂಡತಿಯ ಊರಾಗಿತ್ತೆಂದು ಜನರು ಹೇಳುತ್ತಾರೆ. ಹಿಂದಿನ ಹಂಪೆ ಇದಾಗಿತ್ತು ಎಂಬ ಅಭಿಪ್ರಾಯ ಕೂಡ ಇಲ್ಲಿದೆ. ಜೊತೆಗೆ ಶರಣರ ಸ್ಥಳವು ಇದಾಗಿತ್ತೆಂದು ಜನ ಉಲ್ಲೇಖಿಸುವ ಕಾರಣ ಅಗ್ಘವಣಿ ಹಂಪಯ್ಯ ಈ ಗ್ರಾಮದವರೆಂದು ಹೇಳಬಹುದಾಗಿದೆ.

ಕಾಲ : ತ.ಸು. ಶಾಮರಾಯರು ತಮ್ಮ ಕೃತಿಯಲ್ಲಿ ಈತನನ್ನು ಉಲ್ಲೇಖಿಸಿ ಕ್ರಿ.ಶ. ೧೩ ರಲ್ಲಿದ್ದರೆಂದು ಅಭಿಪ್ರಾಯ ಪಡುತ್ತಾರೆ.೧

ಇದಲ್ಲದೇ ಈತ ತನ್ನ ವಚನವೊಂದರಲ್ಲಿ ಸಮಕಾಲೀನ ಅರಸನ ಆಳ್ವಿಕೆಯ ಚಿತ್ರಣ ನೀಡುತ್ತಾನೆ. ಆ ವಚನ ಹೀಗಿದೆ :

ಹಂಸಪತಿ ಗರುಡಪತಿ ವೃಷಭ ಪತಿ ಸರ್ವಜೀವಾಧಿಪತಿ

ದೇವರಾಯ ಮಹಾರಾಯನ ಅರಸುತನ ಹೊಸತು

ಓಲಗಕ್ಕೆ ಭಾರ ಸಿಂಹಾಸನದಲ್ಲಿ ಕುಳ್ಳಿರ

ಸ್ತ್ರೀಲಂಪಟನಾಗಿ ಅಂತಃಪುರವ ಬಿಟ್ಟು ಹೊರವಂಡ

ಕಪ್ಪ ಕಾಣಿಕೆಯನೊಪ್ಪಿಸಿ ಕೊಂಬವರಿಲ್ಲ

ಗುರುವೆಂಬ ತಳವಾರನ ಆಜ್ಞೆ ಕೆಟ್ಟಿತ್ತು

ತೆರೆದ ಬಾಗಿಲ ಮುಚ್ಚುವವರಿಲ್ಲ

ಮುಚ್ಚಿದ ಬಾಗಿಲ ತೆರೆಯುವವರಿಲ್ಲ

ಹಂಪೆಯ ವಿರುಪಯ್ಯನ ಅರಸುತನ ಕೆಟ್ಟಿತ್ತು

ಭಕ್ತರೆಂಬುವವರಿನ್ನು ಬದುಕಲೇ ಬಾರದು ೨

ಈ ವಚನದಲ್ಲಿ ಬರುವ ದೇವರಾಯ ಮಹಾರಾಯನೆಂದರೆ ಬಹುಶಃ ಕಂಪಿಲರಾಯನೇ ಆಗಿರಬೇಕು. ಈತನ ಕಾಲ ಶಾಮರಾಯರು ಹೇಳಿದಂತೆ ನೋಡಿದರೆ ಈ ಅವಧಿಯಲ್ಲಿದ್ದ ಈ ಭಾಗದ ದೊರೆ ಕಂಪಿಲರಾಯನಾಗಿದ್ದಾನೆ. ಆತನ ಕಾಲ ಕ್ರಿ.ಶ.೧೩೧೬ ಆಗಿದೆ. ಅಲ್ಲದೆ ಇವರ ನಾಲ್ಕು ವಚನಗಳಲ್ಲಿ ಕಂಡುಬರುವ ಶೈಲಿ - ಬಳಸಿದ ಭಾಷೆ - ವೈದಿಕ ಶಾಹಿಯ ವಿವರನೋಡಿದರೆ ಈತ ಬಸವೋತ್ತರ ಯುಗದ ಶರಣನೆಂಬುದು ಸ್ಪಷ್ಟವಾಗಿದೆ. ಅಂತೆಯೇ ಈತನ ಕಾಲವನ್ನು ಸದ್ಯಕ್ಕೆ ಕ್ರಿ.ಶ.೧೩೦೦ ಎನ್ನುವ ಶಾಮರಾಯರ ಅಭಿಪ್ರಾಯವನ್ನು ಒಪ್ಪಬಹುದಾಗಿದೆ.

ವಚನಾಂಕಿತ : ಸದ್ಯ ಈತನ ನಾಲ್ಕು ವಚನಗಳು ೩ ಲಭ್ಯವಾಗಿದ್ದು. ಅವುಗಳ ಅಂಕಿತ ಹಂಪೆಯ ವಿರುಪ ಎಂಬುದಾಗಿದೆ. ಹಂಪೆಯ ವಿರೂಪಾಕ್ಷನೇ ಆರಾಧ್ಯ ದೈವವಾಗಿರಬೇಕು. ಭಕ್ತನೊಬ್ಬನ ಸಗಳವಾದ ಆರಾಧನೆ ಸ್ಥಿತಿಗಳಂತಿವೆ ವಚನಗಳು.

---

೧ : ತ.ಸು. ಶಾಮರಾಯ - ಶ.ಕ.ಕೋ ಪುಟ ೫೬೦

೨ : ಸಂ : ಡಾ : ಎಂ.ಎಂ. ಕಲಬುರ್ಗಿ - ಸ.ವ.ಸಂ. - ೬ ವಚನ ೩ , ಪುಟ೯೬

೩ : ಅದೇ : ವಚನ ೧ - ೪ , ಪುಟ೯೬

ಕಾಯಕ ಮತ್ತು ವ್ಯಕ್ತಿತ್ವ :

ಇವರ ಹೆಸರೇ ಹೇಳುವಹಾಗೆ ಇವರು ಅಗ್ಘವಣಿ ಕಾಯಕ ಮಾಡುತ್ತಿದ್ದರು.

' ಈತನು ಅಗ್ಘವಣಿ ಹೊತ್ತುತಂದು ಭಕ್ತರಿಗೆ ಪೂರೈಸುವ ಕಾಯಕದವನಾಗಿದ್ದನು. ಈ ಕಾಯಕದಿಂದ ಬಂದ ಹಣವನ್ನು ದಾಸೋಹಕ್ಕೆ ವ್ಯಯಿಸುವುದು ಈತನ ನಿತ್ಯ ವ್ರತವಾಗಿತ್ತು. ಆ ಕಾಲದಲ್ಲಿ ಅಗ್ಘವಣಿ ದೊರೆಯದಿರಲು ಮನೆಯ ಪಾತ್ರೆಗಳನ್ನು ಮಾರಿ ಚಿಲುಮೆ ತೊಡಿಸಿದ. ಸೆಲೆ ಕಾಣಿಸಲಿಲ್ಲ. ಕಾಯಕ ನಿಂತು ಹೋಗಿ ಸಹಜವಾಗಿ ಆದಾಯ ಕಡಿಮೆಯಾಗಲು ದಾಸೋಹ ನಿಲ್ಲುವ ಸ್ಥಿತಿ ಪ್ರಾಪ್ತವಾಯಿತು. ಆಗ ಎತ್ತರ ಬೆಟ್ಟದಿಂದ ಅಗ್ಘವಣಿ ತಂದು ದಾಸೋಹವ ಮುಂದುವರೆಸಿದ. ಈವನ ಕಾಯಕ ಭಕ್ತಿಗೆ ಶಿವ ಮೆಚ್ಚಿ ಗಣಪದವಿಯನ್ನಿತ್ತನು ' ಎಂಬುದಾಗಿ ಸಂಪಾದಕರು ಅಭಿಪ್ರಾಯ ಪಟ್ಟಿದ್ದಾರೆ೧

ಈ ಮಾತುಗಳನ್ನು ಗಮನಿಸಿದರೆ ನಮಗೆ ಈತನ ಶ್ರಮದಾಯಕ ಕಾಯಕದ ಜೊತೆಗೆ ಈತನ ವ್ಯಕ್ತಿತ್ವ ಪರಿಚಯವಾಗುತ್ತದೆ. ದಾಸೋಹಭಾವನೆ ಗಮನಿಸಿದರೆ ಈತ ಶರಣರ ಆದರ್ಶವನ್ನು ಅತ್ಯಂತ ನಿಷ್ಠೆಯಿಂದ ಪಾಲಸಿದನೆಂಬುದು ವ್ಯಕ್ತವಾಗುತ್ತದೆ.

ಮುಕ್ಕುಂದ ಗ್ರಾಮದಲ್ಲಿ ಅನ್ನ ಛತ್ರವೊಂದಿತ್ತೆಂದು ಜನ ಹೇಳಲಾಗುತ್ತಿದ್ದು ಆ ಛತ್ರದ ಮೇಲೆ ಪ್ರಸ್ತುತ ಸರಕಾರದ ಇಲಾಖೆಯ ಕಟ್ಟಡವೊಂದು ಕಟ್ಟಲಾಗಿದೆ. ಬಹುಶಃ ಇದನ್ನು ಗಮನಿಸಿದರೆ ಇದು ಅಗ್ರಹಾರರ ಅನ್ನ ಛತ್ರವಾಗಿರಬೇಕು. ಇಲ್ಲಿಯೇ ಇವರು ಅನ್ನದಾಸೋಹ ನಡೆಸುತ್ತಿರಬಹುದೆಂದು ಊಹಿಸಬಹುದಾಗಿದೆ.

ಆತನ ವಚನಗಳನ್ನು ಆತ ನಿಷ್ಠುವಾದಿ ಎಂದು ಕಂಡು ಬರುತ್ತದೆ. ಬಸವೋತ್ತರ ಯುಗದ ಪ್ರಮುಖ ಶರಣನಾದ ಈತ ಇಡೀ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅದರಲ್ಲೂ ಶರಣ ಸಾಹಿತ್ಯದಲ್ಲಿ ವಚನ ರಚನೆ ಮುಗಿದೇ ಹೋಯಿತು ಎಂಬ ಸಮಯದಲ್ಲಿ ಕಾಣಿಸಿಕೊಂಡ ಅಪೂರ್ವ ವಚನ ಕಾರ ಬಸವೋತ್ತರ ಯುಗದ ವಚನ ಪ್ರಕಾರಕ್ಕೆ ನಾಂದಿ ಹಾಡಿದ ಆದ್ಯ ವಚನಕಾರನೆನ್ನುವಲ್ಲಿ ಅತಿಶಯೋಕ್ತಿಯೇನಿಲ್ಲ.

೧ :ಸಂ : ಡಾ : ಎಂ.ಎಂ. ಕಲಬುರ್ಗಿ-ಸ.ವ.ಸಂ. -೬ ಪ್ರಸ್ತಾವನೆ ಪುಟಗಳು

೨ : ಜಲದುರ್ಗ ಶರಣರು

ಲಿಂಗಸೂರು ತಾಲೂಕಾ ಕೇಂದ್ರದಿಂದ ಹದಿನಾರು ಕಿ.ಮೀ. ಹಾಗೂ ಬಸವಸಾಗರ ಆಣೆಕಟ್ಟಿನಿಂದ ಒಂಬತ್ತು ಕಿ.ಮೀ. ಅಂತರದಲ್ಲಿರು ಕೃಷ್ಣಾನದಿಯ ನಡುಗಡ್ಡೆಯ ಮೇಲೆ ಕಟ್ಟಲ್ಪಟ್ಟಿರುವ ಕೋಟೆಯೆ ಜಲದುರ್ಗವಾಗಿದೆ. ಈ ಕೋಟೆಯ ಭಾಗದಲ್ಲಿಯೇ ನಲೆಯೂರಿ ಕೆಲವು ದಿನ ತಮ್ಮ ಜೀವನ ಕಳೆದ ಕೊಡೇಕಲ್ ಬಸವಣ್ಣ - ಆತನ ಶಿಷ್ಯರೇ ಜಲದುರ್ಗದ ಶರಣರೆಂದು ಇಲ್ಲಿ ಪರಿಭಾವಿಸಲಾಗಿದೆ.

ಸ್ಥಳ - ಕಾಲ- ಐತಿಹ್ಯಗಳ ಸ್ಥೂಲನೋಟ :

ಬಸವಣ್ಣನವರು ಲಕ್ಷದ ಮೇಲೆ ತೊಂಬತ್ತಾರು ಸಾವಿರ ವಚನ ಬರೆದಿದ್ದರೆಂದು ಪ್ರತೀತಿ. ಈ ವಚನಗಳಲ್ಲಿ ಮುದ್ದೇಬಿಹಾಳ ತಾಲೂಕಿನ 'ಹೊಕ್ರಾಣಿ'ಯಲ್ಲಿ ಆರು ಸಾವಿರ ಓದಿದರೆಂದು ಇನ್ನುಳಿದವನ್ನು ಸುರುಪುರು ತಾಲೂಕಿನ ಕೊಡೇಯಕಲ್ಲಿನಲ್ಲಿ ಪ್ರಕಟಿಸಿದರೆಂದು ಉಳಿದ ಒಂದುಲಕ್ಷ ವಚನಗಳನ್ನು ಜಲದುರ್ಗದ 'ಮಂದನಮಡು' ವಿನಲ್ಲಿ ನಿಕ್ಷೇಪವಾಗಿಟ್ಟಿದ್ದರೆಂದು ಇಲ್ಲಿ ಐತಿಹ್ಯಗಳು ಕೇಳಿ ಬರುತ್ತವೆ. ಈ ವಚನಗಳು 'ಪೆಟ್ರಿಕಿ ಗುಂಡಿ' ಯಲ್ಲಿ ಭದ್ರವಾಗಿದ್ದ ಬಗ್ಗೆ ನಂಬಿಕೆ ಇದೆ. ಈ ಗುಂಡು ಶಿವರಾತ್ರಿಯ ಹೊತ್ತಿಗೆ ನೀರಿನಿಂದ ಬಯಲಿಗೆ ಬರುತ್ತದೆಯಂತೆ ಆದಿವಸ ಇಲ್ಲಿಗೆ ನಾಲ್ಕು ಕಿ.ಮೀ. ದೂರದ 'ಅಂಚಿನಾಳ' ಗ್ರಾಮದಿಂದ ವಚನಗಳ ಓತ್ತಿಗೆಯನ್ನು ಪಾಲಕಿಯಲ್ಲಿ ಹೊತ್ತು ತಂದು ಇಲ್ಲಿಯ 'ಯಲ್ಲಮ್ಮನ ಮುಖ' ಪೂಜೆ ಮಾಡುವ ಸಂಪ್ರದಾಯ ಇಂದಿಗೂ ನಮಗೆ ಕಂಡು ಬರುತ್ತದೆ. ದಕ್ಷಿಣ ದಂಡೆಯ ಮೇಲೆ ಈ ಪೆಟ್ರಿಕಿಗುಂಡಿನ ನೇರ ಭಾಗದಲ್ಲಿ 'ಮಂಡಲಮ್ಮನ ರುಂಡವಿರುವ'(ಯಲ್ಲಮ್ಮ) ಸಣ್ಣ ಗುಡಿ ಇದೆ. ಇಲ್ಲಿ ಮಂಡಲಮ್ಮ ಬಸವಣ್ಣನವರ ಒಂದುಲಕ್ಷ ವಚನವಿರುವ ಪೆಟ್ರಿಕಿ ಗುಂಡನ್ನು ಕಾಯುತ್ತಾಳೆಂಬ ಪ್ರತೀತಿ ಇದೆ. ಮುಂದೆ ಬಸವಣ್ಣನವರೇ ಅವತರಿಸಿ ಬಂದು ಆಕಾಶಕ್ಕೆ ಛತ್ರಿಕಿ ಇಳಿಸಿದರೇ ಆ ಪೆಟ್ಟಿಕಿ ಗುಂಡು ಬಾಯ್ದರೆದು ಒಂದು ಲಕ್ಷ ವಚನಗಳು ಲಭ್ಯವಾಗುತ್ತವೆಂಬುದಾಗಿ ಇಲ್ಲಿ ಐತಿಹ್ಯಗಳು ಕೇಳಿ ಬರುತ್ತವೆ.

ಇದರ ಜೊತೆಯಲ್ಲಿಯೇ ಇನ್ನೊಂದು ಕತೆಯು ಹೀಗಿದೆ : ಜಲದುರ್ಗದಿಂದ ಕೊಡೇಕಲ್ ವರೆಗೆ ಸುರಂಗಮಾರ್ಗವಿದ್ದು ಅಲ್ಲಿಯ ಗುರುಗಳಿಗೂ ಇಲ್ಲಿಯ ಗುರುಗಳಿಗೂ ಬೀಗತನ ವಿದ್ದುದಾಗಿದೆ. ಇಲ್ಲಿಯ ಗದ್ದುಗೆಯಲ್ಲಿ ಅಂತರ್ಗತ ರತ್ನ ಖಚಿತ ಬಂಗಾರದ ಸಿಂಹಾಸನ ಇದ್ದ ಬಗ್ಗೆ, ಪ್ರಭುದೇವರು ಅಲ್ಲಿ ವಿರಾಜಮಾನರಾಗಿರುತ್ತಿದ್ದರೆಂದು ಮುಂದೆ ಚೆನ್ನ ಬಸವಣ್ಣನವರಿಗೆ ಇಲ್ಲಿಯೇ ಪಟ್ಟ ಕಟ್ಟಬೇಕೆಂದು ತೀರ್ಮಾನ ಕಾರಣಾಂತರಗಳಿಂದ ಅದು ನಡೆಯಲಿಲ್ಲವೆಂದು ಅಭಿಪ್ರಾಯ ಕೇಳಿಬರ್ರತ್ತದೆ.

ಕೊಡೇಕಲ್ಲಿನಲ್ಲೂ ಸುರಂಗಮಾರ್ಗದ ಬಾಗಿಲು ಇದೆ.ಅಲ್ಲಿ ಯಲ್ಲಮ್ಮ ಸುರಂಗದ ಬಾಗಿಲು ಕಾಯುತ್ತಿದ್ದಳಲ್ಲದೇ ಯಾರು ಒಳ ಪ್ರವೇಶಿಸದಂತೆ ನೋಡಿ ಕೊಳ್ಳುತ್ತಿದ್ದಳಂತೆ . ಕಾಲಾಂತರದಲ್ಲಿ ಬಸವಣ್ಣನವರೇ ಆ ಬಾಗಿಲಿನಿಂದ ಪ್ರಭುದೇವರನ್ನು ನೋಡಲು ಒಂದು ದಿನಬಂದಾಗ ಒಳಗೆ ಬರುವಾಗ ವಚನಗಳನ್ನು ಆಡುತ್ತ ಬರುತ್ತಿದ್ದರಂತೆ ಒಳಗಿನಿಂದ ಬರುವವರನ್ನು ಇಟುಕಿನೋಡಬಾರದೆಂಬ ಆಜ್ಞೆ ಇದ್ದಾಗಲೂ ಯಲ್ಲಮ್ಮ ಹಾಡುವುದನ್ನು ಕೇಳಿ ಕೂತೂಹಲ ತಡೆಯದೇ ಇಟುಕಿನೋಡಿದಾಗ ಆಕೆಯ ರುಂಡ -ಮುಂಡಗಳು ಬೇರ್ಪಟ್ಟು ರುಂಡ ಜಲದುರ್ಗದ ದಂಡೆಯ ಮೇಲೆ ಮುಂಡ ಕೊಡೇಕಲ್ಲಿನಲ್ಲಿ ಬಾಗಿಲಲ್ಲಿ ಬಿದ್ದಿತಂತೆ ಹಾಗೆ ಬಿದ್ದ ರುಂಡವೇ ಇಂದಿನ ದಿನ ಬಸವಣ್ಣನವರ ವಚನಕ್ಕೆ ಕಾವಲಾಗಿದ್ದಾಳಂತೆಂಬುದಾಗಿ ತಿಳಿದು ಬರುತ್ತದೆ.

ಇದು ವರೆಗಿನ ಐತಿಹ್ಯಗಳನ್ನು ನೋಡಿದರೆ ಇಲ್ಲಿ ಸ್ಪಷ್ಟವಾಗಿ ನಮಗೆ ಕಂಡು ಬರುವ ಅಂಶಗಳೆಂದರೆ ಇದು ಕಲ್ಯಾಣ ಶರಣರಿಗೆ ಸಂಬಂಧಿಸಿದಂತೆ ಅಲ್ಲ ; ಇಲ್ಲಿಯ ಬಸವಣ್ಣ ಕಲ್ಯಾಣದ ಬಸವಣ್ಣನಲ್ಲ, ಆತ ಕೊಡೆಕಲ್‌ನ ಬಸವಣ್ಣ, ಹಾಗೆಯೇ ಚೆನ್ನ ಬಸವಣ್ಣ ಇಲ್ಲಿ ಕಲ್ಯಾಣದ ಚೆನ್ನ ಬಸವಣ್ಣನಾಗಿರದೇ ತಿಂಥಿಣಿಯ ಮೋನಪ್ಪಯ್ಯನೇ ಚೆನ್ನ ಬಸವಣ್ಣನಾಗಿದ್ದಾನೆ. ಇಲ್ಲಿಯ ಅಲ್ಲಮಪ್ರಭು ಪರಮಾನಂದ ಪ್ರಭು ವಾಗಿರಬೇಕೆಂದು ಸಂದೇಹ ಉಂಟಾಗುತ್ತದೆ. ಇಂತಹ ವಿಚಾರಗಳ ಹಿನ್ನೆಲೆಯಲ್ಲೆ ಡಾ : ಬಸವಲಿಂಗ ಸೊಪ್ಪಿಮಠರವರು ತಮ್ಮ 'ಕೊಡೇಕಲ್ ಬಸವಣ್ಣ ಒಂದು ಅಧ್ಯಯನ' ಎಂಬ ಪಿಹೆಚ್.ಡಿ. ಮಹಾಪ್ರಬಂಧದಲ್ಲಿ ಸವಿಸ್ತಾರವಾಗಿ ಚರ್ಚಿಸಿ ಜಲದುರ್ಗದ ಶರಣರ ಬಗ್ಗೆ ನಾಡಿನಲ್ಲಿ ಮೊದಲಬಾರಿಗೆ ಹೊಸ ಮಾಹಿತಿಗಳನ್ನು ನೀಡುತ್ತಾರೆ.

ಜಲದುರ್ಗ ಶರಣರ ಪರಂಪರೆಯಲ್ಲಿ ಪ್ರಮುಖವಾಗಿ ಕಂಡು ಬರುವ ಹೆಸರುಗಳೆಂದರೆ : ಕೊಡೇಕಲ್ ಬಸವಣ್ಣ ಹಾಗೂ ಆತನ ಮಕ್ಕಳಾದ ರಾಚಪಯ್ಯ, ಗುಹೇಶ್ವರ, ಸಂಗಪ್ಪಯ್ಯ. ಗುರುಗಳಾದ ಪರಮಾನಂದ ಪ್ರಭು, ಆರೂಢ ಸಂಗಮೇಶ್ವರ. ಶಿಷ್ಯರಾದ ಮಂಟೇ ಸ್ವಾಮಿ, ವಡವಾಳ ನಾಗನಾಥ, ತಿಂಥಿಣಿ ಮೋನಪ್ಪಯ್ಯ, ಸಾಲೋಟಗಿ ಶಿವಯೋಗಿಶ್ವರ, ಮಳೆಯ ಪ್ರಭು,ನಾಗಾವಿ ಈರಪ್ಪಯ್ಯನವರು ಪ್ರಮುಖರೆಂಬುದು ನಮಗೆ ಡಾ : ಸೊಪ್ಪಿಮಠರವರ ವಿವರಣೆಯಿಂದ ತಿಳಿದುಬರುತ್ತದೆ. ೧ ಹಾಗೇಯೇ ಅವರು ಅಭಿಪ್ರಾಯ ಪಡುವಂತೆ

'ಕೊಡೇಕಲ್ ಬಸವಣ್ಣ ಅಮರಕಲ್ಯಾಣವಾಗಿಸಿದ ಕೊನೆಯ ಹಾಗೂ ಪ್ರಮುಖ ನೆಲೆ ಜಲದುರ್ಗವಾಗಿದೆ. ಕಡಿದಾದ ಈ ಜಲದುರ್ಗ ಬೆಟ್ಟಕ್ಕೆ ಏಳು ಕೋಟೆಗಳಿದ್ದು ಕೊನೆಯ ಕೋಟೆಯ ಪ್ರಾಂಗಣದಲ್ಲಿ ಸಂಗಮನಾಥನ ಗದ್ದುಗೆಇದೆ. ಇದು ಕೊಡೇಕಲ್ ಬಸವನ ಗುರು ಆರೂಢ ಸಂಗಮೇಶ್ವರನ ಸಮಾಧಿ ಗದ್ದುಗೆಯಾಗಿರಬೇಕು. ಇದು ಮುಸ್ಲಿಂ ವಿನ್ಯಾಸದ ದೇವಾಲಯವಾಗಿದ್ದು ಇದರ ಎದುರುಗಡೆ ಕೊಡೇಕಲ್ ಬಸವಣ್ಣ ಹಾಗೂ ತಿಂಥಿಣಿ ಮೋನಪ್ಪಯ್ಯರ ಪಾಳು ದೇಗುಲಗಳಿವೆ. ಎರಡು ಮತ್ತು ಮೂರನೆಯ ಕೋಟೆಗಳ ನಡುವಣ ಬಯಲಿನಲ್ಲಿ ಗಗನಾಪುರದ ಗಂಗಪ್ಪಯ್ಯ ಎಂಬ ತಿಂಥಿಣಿ ಮೌನಪ್ಪಯ್ಯನ ಶಿಷ್ಯನ ಪಾಳುಗುಡಿಯಲ್ಲದೇ ಕೊಡೇಕಲ್ ಮಂಡ ಎಲ್ಲಮ್ಮನವೆರಡು ಗುಡಿಗಳಿವೆ.

---

೧ : ಡಾ : ಬಸವಲಿಂಗ ಸೊಪ್ಪಿಮಠ - ಕೊ.ಬ.ಅ.-ಪುಟ೬೯-೭೦

ಎಲ್ಲಮ್ಮನ ದೇವಾಲಯಗಳ ನಡುವಣ ಇಳಕಲ್ಲಿನ ಕಚ್ಚಾ ರಸ್ತೆಯೊಂದು ಕೆಳಗಿನ ಕೃಷ್ಣಾ ತೀರದ ವರೆಗೆ ಮುಂದುವರೆದಿದ್ದು ಈ ನದಿ ಪಾತಳಿಯ ಮಧ್ಯ ಭಾಗದಲ್ಲಿ ಪೆಟ್ರಿಕಿ ಗುಂಡು ಎಂಬ ಕೊಡೇಕಲ್ ಬಸವಸಾಹಿತ್ಯ ಸಮಾಧಿಯ ನೆಲೆಯೊಂದಿದೆ. ಕೊಡೇಕಲ್ ಮಠದ ಪರಿವಾರದ ಜನ ಈ ಗುಡ್ಡ ಗಾಡಿನಲ್ಲಿದ್ದು ಕೊಡೇಕಲ್ ಬಸವನ ಪರಂಪರೆಯ ಕೊನೆಯ ಕೊಂಡಿಯಾಗಿ ಇಂದೂ ಕಾರ್ಯನಿರ್ವಹಿಸುತ್ತಿದ್ದಾರೆ.

ಗುರು ಆರೂಢ ಸಂಗಮೇಶ್ವರ, ಶಿಷ್ಯ ತಿಂಥಿಣಿ ಮೋನಪ್ಪಯ್ಯ , ಪ್ರಶಿಷ್ಯ ಗಗನಾಪುರದ ಗಂಗಪ್ಪಯ್ಯ ಇವರೆಲ್ಲ ಇಲ್ಲಿ ನೆಲೆಯಾಗಿರಬೇಕಾದರೆ ಇದು ಈ ಶರಣ ಪ್ರಮುಖರಿಂದೊಡಗೂಡಿದ ಅಮರ ಕಲ್ಯಾಣವಾಗಿತ್ತು ಎನ್ನುವಲ್ಲಿ ಸಂದೇಹವೇ ಉಳಿಯುವುದಿಲ್ಲ. ಈ ಶರಣ ಪ್ರಮುಖರು ಮುಂದೆ ತಾವೇ ಒಂದು ವಿಶಿಷ್ಟ ಹಾಗೂ ಪ್ರಭಾವಶಾಲಿ ಸಂಪ್ರದಾಯವಾಗಿ ಬೆಳೆದವರು ಎಂಬುದನ್ನು ಲಕ್ಷ್ಯಿಸಿದರೆ ಜಲದುರ್ಗ ರತ್ನ ಗದ್ದುಗೆಯಾಗಿ ಇವರನ್ನೆಲ್ಲ ರೂಪಿಸಿದ ಅಮರ ಕಲ್ಯಾಣದ ಇನ್ನೊಂದು ಕೇಂದ್ರ ಸ್ಥಾನವೆಂಬುದು ಸತ್ಯವಾಗಿ ತೋರುತ್ತದೆ. ೧

ಡಾ : ಸೊಪ್ಪಿಮಠರವರ ವಿಚಾರಗಳನ್ನು ನೋಡಿದಾಗ ಜಲದುರ್ಗ ಕೊಡೇಕಲ್ ಬಸವಣ್ಣ ಆತನ ಸಂಗಡಿಗರ ಕಾರ್ಯಕ್ಷೇತ್ರವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಮೂಲತಃ ಇಲ್ಲಿಯ ಶರಣರೆಲ್ಲರೂ ಬೇರೆ ಬೇರೆ ಕಡೆಯವರಾದರೂ - ಮುಂದೆ ವಿವಿಧ ಕಡೆ ಐಕ್ಯರಾದರೂ ಕೆಲವು ದಿನಗಳ ಕಾಲ ಜಲದುರ್ಗದಲ್ಲಿ ನೆಲೆಸಿ ತಮ್ಮ ಅಮರ ಕಲ್ಯಾಣ ಸಂಘಟನೆಯನ್ನು ಮುಂದುವರೆಸಿದರೆಂಬುದು ಸ್ಪಷ್ಟವಾಗುತ್ತದೆ. ಡಾ : ಸೊಪ್ಪಿಮಠರವರು ಕೊಡೇಕಲ್ ಬಸವಣ್ಣನ ಕಾಲವನ್ನು ಕ್ರಿ.ಶ.೧೪೪೯ ಎಂದು ಗುರುತಿಸಿದ ಕಾರಣ ಜಲದುರ್ಗ ಶರಣರ ಕಾಲ ಸ್ಪಷ್ಟವಾಗಿದೆಯೆಂದಾಗುತ್ತದೆ. ಕ್ರಿ.ಶ. ೧೫ ನೇ ಶತಕದಲ್ಲಿ ಇವರು ಬಾಳಿದವರೆಂಬುದು ಸ್ಪಷ್ಟವಾಗಿದೆ.

ಈ ಶರಣರ ಜೀವನ ವಿವರಗಳನ್ನು ಡಾ : ಸೊಪ್ಪಿಮಠರವರ ಕೃತಿಯನ್ನಾಧರಿಸಿ ಅವಲೋಕಿಸಿದರೆ ಕೊಡೇಕಲ್ ಬಸವಣ್ಣ - ಆತನ ಪರಿವಾರದವರೆಲ್ಲರೂ ಆರಂಭದಲ್ಲಿ ಕಲ್ಯಾಣ ಶರಣರ ಪರಂಪರೆಯಂತೆ ಲಿಂಗದೀಕ್ಷೆ ಪಡೆದಿದ್ದರೂ ಮುಂದೆ ಆರೂಢ ಸ್ಥಿತಿಯ ಸಂಗಮೇಶ್ವರ ಪ್ರಭಾವಕ್ಕೊಳಗಾಗಿ ಇಷ್ಟ ಲಿಂಗವನ್ನು ತ್ಯಜಿಸಿರಬೇಕೆನಿಸುತ್ತದೆ. ಆನಂತರ ನಾಥ ಪಂಥೀಯರ ಆಚರಣೆಗಳನ್ನು ಅನುಸರಿತ್ತ ಜೀವನ ನಡೆಸಿರಬಹುದಾಗಿದೆ.

ಕೊಡೇಕಲ್ ಬಸವಣ್ಣನ ಕಾಲಜ್ಞಾನ ಸಾಹಿತ್ಯವನ್ನು ಕಾಲಜ್ಞಾನ, ಖಂಡ ಜ್ಞಾನ, ನೀತಿಜ್ಞಾನ, ಭೋಧಜ್ಞಾನವೆಂದು ವರ್ಗೀಕರಿಸಲಾಗಿದೆ. ಜೊತೆಗೆ ಆತನ ಹೆಂಡತಿ ನೀಲಮ್ಮ , ಮಕ್ಕಳಾದ ರಾಚಪ್ಪಯ್ಯ- ಸಂಗಪ್ಪಯ್ಯ , ಶಿಷ್ಯರಾದ ತಿಂಥಿಣಿ ಮೋನಪ್ಪಯ್ಯ , ಮಂಟೇಸ್ವಾಮಿ, ಸಾಲೋಟಗಿ ಶಿವಯೋಗಿಶ್ವರ, ನಾಗಾವಿ ಈರಪ್ಪನವರು ಸಾಹಿತ್ಯ ರಚಿಸಿದ್ದು ತಿಳಿದುಬರುತ್ತದೆ. ಬಾಲಸಂಗಯ್ಯನ ವಚನಗಳು ಕೊಡೇಕಲ್ ಬಸವಣ್ಣನ ಮಗ ಸಂಗಪ್ಪಯ್ಯನ ವಚನಗಳೆಂಬುದಾಗಿ ಸೊಪ್ಪಿಮಠ ಅಭಿಪ್ರಾಯ ಪಡುತ್ತಾರೆ.೨

ಜಲದುರ್ಗ ಶರಣರ ಸಾಹಿತ್ಯ ಸ್ವರೂಪದ ಬಗ್ಗೆ ನಿಖರವಾಗಿ ಹೇಳಲೂ ಬಾರದಾಗಿದೆ. ವಚನ, ತತ್ವಪದ, ಸಾಂಗತ್ಯ, ಇತ್ಯಾದಿ ಪ್ರಕಾರಗಳನ್ನು ರಚಿಸಿದ್ದರೂ ಆ ಬಗ್ಗೆ ಸರಿಯಾದ ಮಾಹಿತಿ ಸಿಗುವುದಿಲ್ಲ. ಈ ಶರಣರ ಸನ್ನಿವೇಶ ಗಮನಿಸಿದರೆ ಬಸವೋತ್ತರ ಯುಗದಲ್ಲಿ ಮತ್ತೊಮ್ಮೆ ನಡೆದ ಸಾಮೂಹಿಕ ಆಂದೋಲನವಾಗಿದೆ. ಕಲ್ಯಾಣ ಶರಣರಿಗಿಂತ ಭಿನ್ನವಾಗಿ ಇವರು ತಮ್ಮ ಧರ್ಮ ಸಂಘಟನೆ, ಲೇಖನಿ-ಕತ್ತಿ ಎರಡನ್ನು ಬಳಸಿದ್ದುದು ಸಂಬರ್ಧದ ಅನಿವಾರ್ಯವೆಂದು ತೋರುತ್ತದೆ. ಹಾಗೆಯೇ ಅವರು ' ಅಮರಗನ್ನಡ ಲಿಪಿ' ಸಾಂಕೇತಿಕವಾಗಿ ಬಳಸಿಕೊಂಡದ್ದು ಮುಸ್ಲಿಮರ ಉಪಟಳದಿಂದ ತಪ್ಪಿಸುವ ಸ್ಥಳವಾಗಿಯೇ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಹಾಗೆಯೇ ಕಲ್ಯಾಣ ಕ್ರಾಂತಿಯ ನಂತರ ಸಾಹಿತ್ಯ ಉಳಿಸಲು ಶರಣರು ವಚನ ಭಂಡಾರವನ್ನು ಬೆನ್ನಿಗೆ ಕಟ್ಟಿಕೊಂಡು ತೋರಿದ ದಿಕ್ಕಿನೆಡೆಗೆ ಚದುರಿದಂತೆ ಇಲ್ಲಿಯೂ ಕೊಡೇಕಲ್ ಬಸವಣ್ಣ ಆತನ ಪರಿವಾರ ಮುಂದೆ ವಿಜಯನಗರ ಪತನವಾದಾಗ ತಮ್ಮ ಸಾಹಿತ್ಯ ಕೃತಿಯೊಂದಿಗೆ ಜಲದುರ್ಗದ ಕಡೆಗೆ ಬಂದು ನೆಲೆಸಿ ಗುಪ್ತವಾಗಿ ತಮ್ಮ ಸಂಘಟನೆ ಬೆಳೆಸಿರಬೇಕೆನಿಸುತ್ತದೆ. ಮುಂದೆ ಕೊಡೇಕಲ್ ಬಸವಣ್ಣ ಶಿಷ್ಯರನ್ನು , ಮಕ್ಕಳನ್ನು ಬೇರೆ ಬೇರೆ ಕಡೆ ಕಳುಹಿಸಿ ಧರ್ಮ ಸಂಘಟನೆಗಾಗಿ ಯತ್ನಿಸಿದ್ದನ್ನು ಕಾಣಬಹುದಾಗಿದೆ. (ವಿವರಣೆಗಾಗಿ ಡಾ : ಸೊಪ್ಪಿಮಠರವರ ಮಹಾ ಪ್ರಬಂಧ ಗಮನಿಸಬಹುದು)

ಒಟ್ಟಾರೆ ಕನ್ನಡ ನೆಲದಲ್ಲಿ ನಮ್ಮ ಸಂಸ್ಕೃತಿಯನ್ನು ಹತ್ತಿಕ್ಕಿ ಇಸ್ಲಾಂದ ಒತ್ತಾಯ ಪೂರ್ವದ ಹೇರಿಕೆ , ಮುಸ್ಲಿಂ ಅರಸರ ದೌರ್ಜನ್ಯದ ಕ್ರೂರ ಅಟ್ಟಹಾಸ ಮೆರೆಯುತ್ತಿದ್ದಾಗ ನಮ್ಮ ಕನ್ನಡದ ದೇಶಿಯತೆಯನ್ನು ರಕ್ಷಿಸುವ ಮಹೋದ್ದೇಶದಿಂದ ಜಲದುರ್ಗದ ಶರಣರು ಸಂಘಟನೆಗೊಂಡು ಸಾಮೂಹಿಕವಾದ ಮತ್ತೊಂದು ಕಲ್ಯಾಣದ ರೀತಿಯ ಚಳುವಳಿಯನ್ನು ಈ ಪರಿಸರದಲ್ಲಿ ಮೊದಲ ಬಾರಿಗೆ ಆರಂಭಿಸಿದರೆಂದು ತಿಳಿದು ಬರುತ್ತದೆ.

---

೧ : ಡಾ : ಬಸವಲಿಂಗ ಸೊಪ್ಪಿಮಠ - ಕೊ.ಬ.ಅ. - ಪುಟ ೩೩-೩೪

೨ : ಅದೇ

೩ : ಹೇಮಗಲ್ಲ ಹಂಪ (ಹೇಮನೂರು ಹಂಪ)

ಬಸವೋತ್ತರ ಯುಗದಲ್ಲಿ ವಚನ ರಚನೆಯನ್ನು ಮತ್ತೊಮ್ಮೆ ಅರ್ಥವಂತಿಕೆಯಿಂದ ರಚಿಸಿ ಹೊಸ ಯುಗಕ್ಕೆ ಚಾಲನೆ ಕೊಟ್ಟ ಶರಣರೇ ಹೇಮಗಲ್ಲಿನ (ಹೇಮನೂರು) ಹಂಪರಾಗಿದ್ದಾರೆ.

ಸ್ಥಳ :

ಇವರ ಸ್ಥಳದ ಬಗ್ಗೆ ಡಾ: ವೀರಣ್ಣ ರಾಜೂರು ಬರೆಯುತ್ತಾ ' ಇವನು ತನ್ನನ್ನು ' ಹಂಪ ' ' ಹೇಮಗಲ್ಲ ಹಂಪ ' 'ಹೇಮಗಲ್ಲ ' ಎಂದು ಕರೆದು ಕೊಂಡಿದ್ದಾನೆ. ಇಲ್ಲಿ ಹಂಪ ಎಂಬುದು ಅವನ ಹೆಸರಾದರೆ ಹೇಮಗಲ್ಲು ಎಂಬುದು ಅವನ ಸ್ಥಳವನ್ನು ಸೂಚಿಸುವ ವಿಶೇಷಣವಾಗಿದೆ. ಒಂದು ಕಡೆ (ಸ್ಥಲ ೧೬ ಅಂತ್ಯ ಕಂದ) ಹೇಮಗಲ್ಲ ಎಂಬ ಈ ವಿಶೇಷಣವನ್ನೆ ಅಂಕಿತ ನಾಮದ ರೀತಿಯಲ್ಲಿ ಬಳಸಿದುದೂ ಉಂಟು . ಸದ್ಯ ಕರ್ನಾಟಕದಲ್ಲಿ ಹೇಮಗಲ್ಲು ಎಂಬ ಹೆಸರಿನ ಊರು ಯಾವುದು ಇಲ್ಲ . ಧಾರವಾಡ ಜಿಲ್ಲೆಯ 'ಯಾವಗಲ್ಲ' ಗ್ರಾಮದ ಪ್ರಾಚೀನ ಹೆಸರು 'ಏವಗಲ್ಲು' ಇದಕ್ಕೆ ' ಹೇಮಗಲ್ಲು ' ಎಂದು ಗೌರವ ವಾಚಿಯಾಗಿ ಕರೆದಿರಬಹುದು . ಅಥವಾ ಹಂಪೆಯ ಪರಿಸರದಲ್ಲಿ ಹೇಮಕೂಟ ಇರುವುದನ್ನು ಗಮನಿಸಿದರೆ ಇದು ಆ ಪ್ರದೇಶದಲ್ಲಿ ಇದ್ದಿರಬಹುದಾದ ಒಂದು ಊರು ಆಗಿರಬೇಕು. ಇಂದು ಅದು ಹಾಳಾಗಿರಬಹುದು. ಇಲ್ಲವೇ ಬೇರೆ ಹೆಸರಿನಿಂದ ಕರೆಯಿಸಿ ಕೊಳ್ಳುತ್ತಿರುಬಹುದು . ಅಂತೂ ಹೇಮಗಲ್ಲು ಸ್ಥಳ ನಾಮವೆಂಬುದು ಮಾತ್ರ ಸತ್ಯ. ಪಂಪಾ ವಿರೂಪಾಕ್ಷನ ಪ್ರಭಾವದಿಂದ ಆ ಪ್ರದೇಶದಲ್ಲಿ ಹಂಪಣ್ಣ , ಹಂಪಮ್ಮ , ಪಂಪಾಪತಿ, ಪಂಪಾಂಬಿಕೆ ಎಂಬ ಹೆಸರುಗಳು ವ್ಯಕ್ತಿಗಳ ಅಂಕಿತನಾಮಗಳಾಗಿ ಅಧಿಕ ಪ್ರಮಾಣದಲ್ಲಿ ಬಳಕೆಯಾಗುತ್ತಿರುವುದನ್ನು ಇಂದಿಗೂ ಕಾಣುತ್ತೇವೆ. ಪ್ರಸ್ತುತ ವಚನ ಕಾರನಿಗೂ ಆ ಪ್ರಭಾವದಿಂದಲೇ ಹಂಪ ಎಂಬ ಹೆಸರು ಬಂದಿರಬೇಕು. ಹೀಗೆ ಅಂಕಿತನಾಮ ಮತ್ತು ಸ್ಥಳನಾಮ ಎರಡೂ ಹಂಪೆಯ ಪರಿಸರಕ್ಕೆ ಸಂಬಂಧ ಪಡುವುದರಿಂದ ಈತ ಅದೇ ಪ್ರದೇಶದವನಾಗಿರಬೇಕೆಂದು ಹೇಳುವುದು ಹೆಚ್ಚು ಸಮರ್ಥನೀಯವಾದ ಅಭಿಪ್ರಾಯ ವೆನಿಸುತ್ತದೆ. ೧ ಎಂಬುದಾಗಿ ಹೇಳುತ್ತಾರೆ.

ಕೇವಲ ಪರಿಸರ ಹೆಸರಿನ ಸಾಮ್ಯದಿಂದಲೇ ಈತನನ್ನು ಹಂಪೆಯ ಪರಿಸರಕ್ಕೆ ಸೀಮಿತಗೊಳಿಸುವುದು ಅಷ್ಟು ಸಮರ್ಪಕವೆನಿಸದ ಕಾರಣ ಸ್ಪಷ್ಟವಾಗಿ ಈತ ಈ ಪರಿಸರದಲ್ಲವೆಂಬುದನ್ನು ದೃಢವಾಗಿ ಹೇಳಬಹುದು. ಡಾ : ಎಂ. ಜಿ. ಬಿರಾದಾರ ರವರು ತಮ್ಮಲ್ಲಿನ ವೈಯಕ್ತಿಕ ಹಸ್ತ ಪ್ರತಿಯಲ್ಲಿನ ವಚನವೊಂದನ್ನು ಉಲ್ಲೇಖಿಸಿ ಜಾಲಹಳ್ಳಿ , ಪೊದಡಿ (ಪೊದ್ದಡ್ಡಿ) ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನಲ್ಲಿವೆ . ಜಾಲಹಳ್ಳಿಯಲ್ಲಿ ಶಾಂತದೇವರ ಗದ್ದುಗೆಯೂ ಇದೆ. ಆದರೆ ಪೊದ್ದಡ್ಡಿಯಲ್ಲಿ ರಾಚೇಶ್ವರನ ಕುರುಹು ಸಿಕ್ಕುವದಿಲ್ಲ. ಅದಕ್ಕಾಗಿ ಹೇಮಗಲ್ಲ ಹಂಪನು ಅಲ್ಲೇ ಸಮೀಪದವನಾಗಿರಬೇಕೆಂದು ಊಹಿಸಲಾಗಿದೆ. ಈ ಊಹೆಗೆ ಕಾರಣ ಇನ್ನೂ ಒಂದು ಈ ತಾಲೂಕಿನಲ್ಲಿ ಕಲ್ಲು ಪದದಿಂದ ಕೊನೆಗೊಳ್ಳುವ ಹಲವಾರು ಊರುಗಳಿವೆ. ಉದಾ : ಮಸರಕಲ್ಲು , ಗಾಗಲ್ಲು , ಗೂಗಲ್ಲು , ದೇವರಕಲ್ಲು ಆದರೆ ಹೇಮಗಲ್ಲು ಮಾತ್ರ ಸಿಕ್ಕದಾಗಿದೆ. ಹೇಮನೂರು ಎಂಬೊಂದು ಹಳ್ಳಿಯಿದೆ. ಅದೇ ಹೇಮಗಲ್ಲಾಗಿರಬೇಕೆ? ಶೋಧಿಸಬೇಕಾಗಿದೆ. ಎಂದು ಅಭಿಪ್ರಾಯ ಪಟ್ಟಿದ್ದಾರೆ.೨

ಡಾ : ಬಿರಾದಾರ ರವರ ಊಹೆಗಳು ವಾಸ್ತವಕ್ಕೆ ಹತ್ತಿರವಾಗಿದೆ. ಹೇಮಗಲ್ಲು ಸ್ಥಳದ ಬಗ್ಗೆ ನನಗೆ ಕ್ಷೇತ್ರ ಕಾರ್ಯಗಳಿಂದ ಸ್ಪಷ್ಟವಾದ ಮಾಹಿತಿಗಳು ದೊರೆಕಿವೆ. ಹೇಮನೂರು ಎಂಬುದೇ ಹೇಮಗಲ್ಲು ವೆಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಇದಕ್ಕೆ ಹಲವಾರು ನಿದರ್ಶನಗಳಿವೆ. ದೇವದುರ್ಗ ತಾಲೂಕಿನಲ್ಲಿ ಕೇವಲ ಕಲ್ಲು ಪದದಿಂದ ಕೊನೆಗೊಳ್ಳುವ ಊರುಗಳಲ್ಲದೆ, ಮರಡಿ, ದೊಡ್ಡಿಗಳಿಂದ ಕೊನೆಗೊಳ್ಳುವ ಸಾಕಷ್ಟು ಊರುಗಳಿವೆ .ಇದನ್ನು ಗಮನಿಸಿದಾಗ ಹೇಮನೂರು ಗ್ರಾಮವನ್ನು ಕೇಂದ್ರವಾಗಿರಿಸಿಕೊಂಡು ನೋಡಿದರೆ. ಈ ಊರಿನ ಸುತ್ತಲೂ ಕೊದ್ದೊಡ್ಡಿ , ಮಸರ ಕಲ್ , ಮರಡಿ ಗ್ರಾಮಗಳು ಕಂಡು ಬರುತ್ತವೆ. ಕೇವಲ ಇದೊಂದೆ ಊರಿನ ಹೆಸರು 'ಊರು' ಆಗಿರಲು ಸಾಧ್ಯವಿಲ್ಲ. ಮರಡಿ , ದೊಡ್ಡಿ , ಕಲ್ಲು ಇವುಗಳಲ್ಲಿ ಯಾವುದಾದರೂ ಒಂದು ಪದದಿಂದ ಈ ಊರು ಕೊನೆಗೊಳ್ಳಬೇಕಾಗುತ್ತದೆ. ಹಾಗಾಗಿ ಇಲ್ಲಿ ಹೇಮನೂರು ಎಂಬುದು ಹೇಮಗಲ್ಲು ಎಂಬುದರ ಪ್ರಾಚೀನ ರೂಪವಾಗಿದೆ ಎನ್ನಬಹುದು.

ವಚನಕಾರರು ತಮ್ಮ ವಚನದಲ್ಲಿ ಹೇಳುವ ಜಾಲಹಳ್ಳಿ ಸಹ ಹೇಮನೂರಿಗೆ ಹತ್ತಿರವಾಗಿಯೇ ಇದೆ. ಆತ ಹೇಳುವ ಶಾಂತದೇವರು ಸಹ ಜಾಲಹಳ್ಳಿಯ ಬೃಹನ್ಮಠದ ಪೀಠದ ಪರಂಪರೆಯ ೧೮ನೇಯ ಪೀಠಾಧಿ ಪತಿಗಳಾಗಿದ್ದಾರೆ. ಈ ಬಗ್ಗೆ ಜಾಲಹಳ್ಳಿಯಲ್ಲಿ ಕುರುಹುಗಳಿವೆ. 'ಪೊದ್ದೊಡ್ಡಿ' ಇದು ಇಂದಿನ 'ಕೊದ್ದೊಡ್ಡಿ'ಯ ಪ್ರಾಚೀನ ರೂಪವೆಂಬುದು ಸ್ಪಷ್ಟವಾಗಿದೆ. 'ಪೊಸದೊಡ್ಡಿ ' ಎಂಬುದು ಪೊದ್ದೊಡ್ಡಿಯಾಗಿಯೂ ಇದೇ ಪೊದ್ದೊಡ್ಡಿ ಇಲ್ಲಿ ಬಹುತೇಕ ವಾಸವಾಗಿರುವ ನಾಯಕ ಜನಾಂಗದ ಸಾಮಾಜಿಕ ಉಪಭಾಷೆಯಿಂದಾಗಿ 'ಕೊತ್ತದೊಡ್ಡಿ'(ಕೊತ್ತ ಎಂದರೆ ಹೊಸದೆಂದು ಅರ್ಥ) ಪರಿವರ್ತಿತವಾಗಿದೆ. ಜನಗಳ ಆಡು ಭಾಷೆಯಲ್ಲಿ ಇಂದಿನ ದಿನ ಈ ಗ್ರಾಮವನ್ನು 'ಕೊದ್ದೊಡ್ಡಿ ' ಎಂದು ಕರೆಯಲಾಗಿದೆ. ಈ ಕೊದ್ದೊಡ್ಡಿ (ಪೊದಡಿ) ಹೇಮಗಲ್ಲ ಹಂಪನು ಹೇಳುವ ರಾಚೇಶ್ವರನ ಕುರುಹುಗಳು ಈಗ ಇಲ್ಲದಿದ್ದರೂ ಇಲ್ಲಿ ವಿರಕ್ತ ಮಠವೊಂದು ಇತ್ತೆಂಬುದು ಊರಿನ ಜನಗಳು ಹೇಳತ್ತಾರೆ. ಈಗದು ನೋಡಲಾಗಿ ಸಂಪೂರ್ಣ ಹಾಳಾಗಿ ಅವಶೇಷಗಳಾಗಿ ಉಳಿದಿದೆ. ಇದೆಲ್ಲಾ ಗಮನಿಸಿದರೆ ಈತ ಹೇಮಗಲ್ಲಿನ (ಹೇಮನೂರು) ನವರೆಂಬುದು ಸ್ಪಷ್ಟವಾಗಿ ತಿಳಿದು ಬರುತ್ತದೆ.

ಈ ಶರಣರೂ ವಿರಕ್ತ ಮಠಾಧೀಶರಾಗಿದ್ದರೆಂದು ತಿಳಿಯುತ್ತದೆ. ಮೂಲತಃ ಹೇಮನೂರಿನಲ್ಲಿ ಯಾವ ಸ್ವಾಮಿಗಳೂ ಇರಲಿಲ್ಲವಂತೆ ಕೊದ್ದೊಡ್ಡಿಯ ಮಠದಿಂದಲೇ ಇಲ್ಲಿಗೆ ಸ್ವಾಮಿಗಳು ಸಾಗಿ ಬರುವ ಪರಂಪರೆ ಇತ್ತೆಂಬುದು ಜನಗಳ ಮೌಖಿಕ ವಿವರದಿಂದ ತಿಳಿದು ಬರುತ್ತದೆ. ಹಾಗಾಗಿ ರಾಚೇಶ್ವರನು ಕೊದ್ದೊಡ್ಡಿಯಲ್ಲಿದ್ದನೆಂಬುದು ಸ್ಪಷ್ಟ. ಆತನ ಶಿಷ್ಯನಾಗಿ ಹೇಮಗಲ್ಲಿನ ಹಂಪ ಅಲ್ಲಿರಬೇಕು. ಮುಂದೆ ಆತ ಹೇಮಗಲ್ಲಿಗೆ ಬಂದ ತರುವಾಯ ಆ ಊರಿನ ಹೆಸರನ್ನು ತನ್ನ ಜೊತೆಗೆ ಸೇರಿಕೊಂಡಿದ್ದಾನೆಂಬುದು ತಿಳಿದು ಬರುತ್ತದೆ.

---

೧ : ಡಾ : ವೀರಣ್ಣ ರಾಜೂರು - ಸ.ವ.ಸಂ. - ೧೪ ಪ್ರಸ್ತಾವನೆ ಪುಟ XXXV

೨ : ಡಾ: ಎಂ.ಜಿ.ಬಿರಾದಾರ - ವೀ.ಸಾ. ಪುಟ ೨೪-೨೫

ಇವರು ತಮ್ಮ ವಚನಗಳಲ್ಲಿ ಬಳಸುವ ‘ಚಕಮಕಿ ದೂದಿ’೧ ‘ ಗೌಡ - ಗೋಮಗುಸಕ ಪಂಚಾಳ ’ ೨ ‘ಬೇಡ’೩ ಇತ್ಯಾದಿ ಪದಗಳನ್ನು ಗಮನಿಸಿದರೆ ಈತ ಈ ಪರಿಸರದವರೆಂಬುದು ಮತ್ತಷ್ಟು ಸ್ಪಷ್ಟವಾಗುತ್ತದೆ.

ಇದಲ್ಲದೇ ಸದ್ಯ ಬಸವಣ್ಣನ ಗುಡಿಎಂದು ಕರೆಯುವ ಸ್ಥಳವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಅದರ ಮುಖ್ಯ ಬಾಗಿಲು ಮೊದಲು ಪೂರ್ವಕ್ಕಿತ್ತು. ಯಾವುದೋ ಕಾರಣದಿಂದ ಈಗ ಅದನ್ನು ಉತ್ತರಕ್ಕೆ ತಿರುಗಿಸಲಾಗಿದೆ. ಇದೆ ಸ್ಥಳದಲ್ಲಿ ಸುಮಾರು ನೂರು ವರ್ಷಗಳ ಹಿಂದೆ ಮಠವೊಂದಿತ್ತೆಂಬ ಅಭಿಪ್ರಾಯ ಜನಗಳದಾಗಿದೆ. ಇದು ಶರಣನೊಬ್ಬನ ಸಮಾಧಿಯಾಗಿರಬಹುದೆಂದು ಊರಿನವರ ವಿಚಾರಗಳಿಂದ ತಿಳಿದುಬರುತ್ತದೆ. ಕೊರವಣ್ಣ ಹೂಗಾರರಿಗೆ ಬಹುದಿನಗಳ ಹಿಂದೆ ಒಬ್ಬ ಜಂಗಮನ ದರ್ಶನವಾಗುತ್ತಿತಂತೆ ದಿನಾಲು ಆ ಜಂಗಮ ಬಂದು ಪ್ರಸ್ತುತ ಬಸವಣ್ಣ ದೇವಸ್ಥಾನವಿರುವ ಲಿಂಗದಲ್ಲಿ ಐಕ್ಯನಾದನೆಂದು ತಿಳಿದು ಬರುತ್ತದೆ. ಬಸವಣ್ಣನ ಗುಡಿ ಮೂಲತಃ ಸಮಾಧಿಯೆಂಬುದು ಕಂಡುಬರುತ್ತದೆ. ಈಗ ಅದನ್ನು ಅದರಲ್ಲಿರುವ ಲಿಂಗವನ್ನು ಬದಿಗಿರಿಸಿ ಅಲ್ಲಿ ನಂದಿ ವಿಗ್ರಹದ ಜೊತೆಗೆ ಅನೇಕ ವಿಗ್ರಹಗಳನ್ನು ಕಾಲಾಂತರದಲ್ಲಿ ಸೇರಿಸಿದ್ದಾರೆಂಬುದು ತಿಳಿದುಬರುತ್ತದೆ. ಈಗ ಸದ್ಯ ಇರುವ ಬಸವಣ್ಣನಗುಡಿಯೇ ಹೇಮಗಲ್ಲ ಹಂಪನ ಸಮಾಧಿಯೆಂಬುದಾಗಿ ತಿಳಿಯುತ್ತದೆ.

ಈ ಭಾಗದ ಮಾತಾಡುವ ದೇವರೆಂದೆ ಖ್ಯಾತರಾಗಿದ್ದ ಇತ್ತೀಚಿಗೆ ಲಿಂಗೈಕ್ಯರಾದ ನವಲಕಲ್ಲಿನ ಶ್ರೀ ಸೋಮಶೇಖರ ಶಿವಾಚಾರ್ಯರು ಇದು ಶರಣನೊಬ್ಬನ ಸಮಾಧಿಯೆಂಬುದಾಗಿ ಬಹುದಿನಗಳ ಹೇಳಿರುವುದಾಗಿ ಊರಿನ ಹಿರಿಯರು ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ತಿಳಿಸಿದರು.

ಇದೆಲ್ಲಕ್ಕಿಂತ ಮುಖ್ಯವಾಗಿ ಪ್ರಸ್ತುತ ಚಾವಡಿಯಿರುವ ಎದುರಿನ ಕಟ್ಟೆಯಲ್ಲಿ ಒಂದು ಬರಹ ವಿರುವ ಬಾರಿ ಗಾತ್ರದ ಗುಂಡು ಕಲ್ಲು ಕೂಡಿಸಿ ಕಟ್ಟಲಾಗಿದೆ. ಈ ಗುಂಡು ಕಲ್ಲಿನಲ್ಲಿ ‘ಹೇಮಗಲ್ಲು’ ಎಂಬ ಸ್ಥಳನಾಮವಿದ್ದು ಅಲ್ಲಿಯ ಚಾವಡಿಗೆ ಗೌಡನೊಬ್ಬನು ಆಶ್ರಯ ನೀಡಿದ್ದು ಕಂಡುಬರುತ್ತದೆ. ಬರಹ ಅಸ್ಪಷ್ಟವಾಗಿದ್ದು ಮಾಹಿತಿಗಳು ತಿಳಿಯುವುದಿಲ್ಲ. ಸದ್ಯ ಹೇಮನೂರಿನಲ್ಲಿರು ಬಂಡೆಗಲ್ಲು ಸ್ಪಷ್ಟವಾಗಿ ಹೇಮನೂರಿನ ಪ್ರಾಚೀನ ಹೆಸರು ಹೇಮಗಲ್ಲು ಎಂಬದನ್ನು ನಿಖರವಾಗಿ ತಿಳಿಸುತ್ತದೆ. ಆ ಕಾರಣ ಇನ್ನೂ ಮುಂದೆ ಹಂಪನಿಗೆ ಸಂಬಂಧಿಸಿದಂತೆ ಈ ಹೇಮಗಲ್ಲನ್ನು ಬೇರೆ ಪ್ರದೇಶದಲ್ಲಿ ಹುಡುಕುವುದನ್ನು ಬಿಟ್ಟು ಆತನ ಹೇಮಗಲ್ಲು ಇಂದಿನ ಹೇಮನೂರು ಆಗಿದೆಯೆಂಬುದು ತಿಳಿದು ಕೊಳ್ಳುವುದು ಬಹುಮುಖ್ಯವಾಗಿದೆ.

ಅನೇಕ ಐತಿಹ್ಯಗಳ ಜೊತೆ ಇಲ್ಲಿ ಸಾವಿರಾರು ವೀರಗಲ್ಲುಗಳು ಅನಾಥವಾಗಿ ಹೇಮಗಲ್ಲಿನ ಹಳ್ಳದಲ್ಲಿ ಬಿದ್ದಿವೆ. ಬಹುತೇಕ ಅವೆಲ್ಲ ಬೇಟೆಯಾಡುವ ಚಿತ್ರಗಳನ್ನು ಹೊಂದಿವೆ. ಹೇಮಗಲ್ಲ ಹಂಪರ ವಚನಗಳನ್ನು ಗಮನಿಸಿದಾಗ ಅವರು ವಚನಗಳಲ್ಲಿ ಚಿತ್ರಿಸುವ ಬೇಟೆಯ -ಕಾಳಗದ ಸನ್ನಿವೇಶಗಳು ವೀರಗಲ್ಲುಗಳ ಚಿತ್ರಗಳಿಗೆ ಬಹುಮಟ್ಟಿಗೆ ಹೋಲುತ್ತವೆ.

ಇದುವರೆಗಿನ ವಿವೇಚನೆಯಿಂದ ಮೂಲತಃ ಹಂಪರು ಹೇಮಗಲ್ಲಿನವರಾಗಿರದಿದ್ದರು ತಮ್ಮ ಜೀವನದ ಬಹುತೇಕ ದಿನಗಳನ್ನು ಇಲ್ಲಿಯೇ ಕಳೆದು ವಚನಗಳನ್ನು ರಚಿಸಿದ್ದನ್ನು ಗಮನಸಿದರೆ ಇವರು ಹೇಮಗಲ್ಲಿನವರೆಂದು ನಾವು ಇನ್ನು ಮುಂದೆ ತಿಳಿದುಕೊಳ್ಳಬಹುದಾಗಿದೆ.

ಕಾಲ : ‘ಇವನು ಸುಮಾರು ೧೭ನೆಯ ಶತಮಾನವದವನಾಗಿರಬಹುದೆಂದು ಊಹಿಸಬಹುದಾದರೂ ಸಂಪೂರ್ಣ ಪರಿಶೀಲನೆ ಇಲ್ಲದೆ ಯಾವುದನ್ನು ‘ ಇದಮಿತ್ಥಂ’ ಎಂದು ಹೇಳುವುದು ಸಾಧುವಲ್ಲ’.೪ ವೆಂಬುದಾಗಿ ಡಾ: ಬಿರಾದಾರ ಹೇಳುತ್ತಾರೆ.

ಹಂಪ ತನ್ನ ಎರಡು ವಚನಗಳಲ್ಲಿ (೧೨೮ , ೧೩೦) ಶಂಕರ ದೇವರ (೧೫೮೦) ನಾಲ್ಕು ಕಂದಗಳನ್ನು ಉದ್ಧರಣೆ ವಾಕ್ಯಗಳಂತೆ ಬಳಸಿಕೊಂಡಿದ್ದಾನೆ. ಇದರಿಂದ ಈತ ಅವನ ತರುವಾಯದಲ್ಲಿದ್ದವನೇನಿಸುತ್ತಾನೆ. ಭಂಗಿಯ ಸೊಪ್ಪು, ಸೀಸ, ಠೇವಣಿ ಮುಂತಾದ ಪದಗಳ ಬಳಕೆ ಹೆಚ್ಚು ದೇಶಿಯವಾದ ಭಾಷಾ ಶೈಲಿಗಳು ಈತನನ್ನು ೧೭ -೧೮ ನೆಯ ಶತಮಾನಕ್ಕೆ ತಂದು ನಿಲ್ಲಿಸುತ್ತವೆ ಎಂಬುದಾಗಿ ವೀರಣ್ಣ ರಾಜೂರು ಅಭಿಪ್ರಾಯ ಪಡುತ್ತಾರೆ.೫ ಹೇಮಗಲ್ಲ ಹಂಪರ ವಚನೊಂದರಲ್ಲಿ ‘ ತಾಮಸ ಬುದ್ಧಿ ದಳವಾಯಿಗಳು ’೬ ಎಂಬ ಉಲ್ಲೇಖ ಕಂಡು ಬರುತ್ತದೆ.

ಇದನ್ನು ಗಮನಿಸಿದರೆ ಮೈಸೂರು ಅರಸರ ಆಳ್ವಿಕೆಯ ಕಾಲದಲ್ಲಿ ದಳವಾಯಿಗಳು ಇದ್ದದ್ದು ತಿಳಿದು ಬರುತ್ತದೆ. ಅಲ್ಲದೇ ಇದೇ ವಚನದಲ್ಲಿ ಹಂಪರು ‘ ಪರಿಯಾಟಗೊಳಿಸುವ ಅರಸಿನ ಪ್ರಜೆ ಪರಿವಾರ ಮಂತ್ರಿ ಮನ್ನೆಯರನೆಲ್ಲ ಕೈಸೆರೆಯ ಹಿಡಿದು ಆಳುವ ಅಂಗನೇ ರಾಜ್ಯಾಧಿಪತಿಯಾದುದೇನು ಚೋದ್ಯ ಹೇಳಾ ’ ೭ ಎನ್ನುತ್ತಾನೆ.

---

೧ : ಡಾ : ವೀರಣ್ಣ ರಾಜೂರು - ಸ.ವ.ಸಂ. -೧೪ , ವಚನ ೧೧, ಪುಟ ೪೩೮

೨ : ಅದೇ : ವಚನ ೬೪ , ಪುಟ ೪೬೦

೩ : ಅದೇ : ವಚನ ೭೭, ಪುಟ ೪೬೬

೪ : ಡಾ:ಎಂ.ಜಿ. ಬಿರಾದಾರ -ವೀ.ಸಾ. ಪುಟ ೨೬

೫ : ಡಾ : ವೀರಣ್ಣ ರಾಜೂರು -ಸ.ವ.ಸಂ.-೧೪ ಪ್ರಸ್ತಾವನೆ ಪುಟ XXXVi

೬ : ಅದೇ : ವಚನ ೬೧ , ಪುಟ ೪೫೮

೭ : ಅದೇ : ವಚನ ೬೧ ಪುಟ ೪೫೯

ಇದನ್ನು ಗಮನಿಸಿದರೆ ಎರಡನೆಯ ಕಂಠೀರವ ನರಸರಾಜ ಒಡೆಯರು ಮೂಕರಾಗಿದ್ದು ಇವರು ಕೈಸನ್ನೆಯಿಂದ ಆಳ್ವಿಕೆ ನಡೆಸಿದ ತರುವಾಯ ಇವರ ಮಗ ದೊಡ್ಡ ಕೃಷ್ಣರಾಜ ಒಡೆಯರು ಕ್ರಿ.ಶ.೧೭೧೩ ರಲ್ಲಿ ಅಧಿಕಾರಕ್ಕೆ ಬರುತ್ತಾನೆ. ಇವರ ಅಸಮರ್ಥತೆಯಿಂದಾಗಿ ದಳವಾಯಿಗಳು ಪ್ರಬಲಲಾಗುತ್ತ ಬಂದರೆಂದು ಇತಿಹಾಸದಿಂದ ತಿಳಿಯುತ್ತದೆ. ೧ ಇದನ್ನು ಅವಲೋಕಿಸಿದರೆ ತಾಮಸ ಬುದ್ಧಿಯ ದಳವಾಯಿಗಳು ಈ ಕಾಲದಲ್ಲಿದ್ದರೆಂದು ತಿಳಿಯುತ್ತದೆ. ಹಾಗಾಗಿ ಈ ಕಾಲ ಕ್ರಿ.ಶ.೧೭೧೩ -೧೭೩೪ ರ ವರೆಗೆ ಕಂಡು ಬರುತ್ತದೆ. ಕಾರಣ ಹೇಮಗಲ್ಲ ಹಂಪರ ಕಾಲವೂ ಸಹಿತ೧೭ ನೇ ಶತಮಾನವೆಂದು ಡಾ : ರಾಜೂರು ಊಹಿಸಿದ್ದು ಸರಿಯಾಗಿದೆ. ಅಂತೆಯೇ ' ರಾಜರಿಲ್ಲದ ರಾಜ್ಯಕ್ಕೆ ತಸ್ಕರರ ಹಾವಳಿ ನೋಡಾ ' ೨ ಎಂಬಂಥ ವಚನಗಳನ್ನು ಸಾಲುನ್ನು ಗಮನಿಸಿದರೆ ತಸ್ಕರ ಎಂಬುದು ಮೂಲತಃ ಕನ್ನಡ ಪದವಲ್ಲ ಇದು ಪರ್ಷಿಯಾ ಪದವೆಂದು ತಿಳಿಯುತ್ತದೆ. ಮೊಗಲರ ಕಾಲದ ಈ ಪದ ದ ಪರಿಚಯ ಹಂಪನಿಗೆ ಆಗಿತ್ತೆಂದು ತೋರುತ್ತದೆ. ಹಾಗಾಗಿ ಈತನನ್ನು ೧೭ ರಿಂದ ೧೮ ಶತಮಾನದವರೆಂದು ಊಹಿಸುವುದು ಸರಿಯಾಗಿದೆ.

ಕೃತಿ :

' ಪಡುವಿಡಿಸಿದ್ದ ಮಲ್ಲಿನಾಥ ಪ್ರಭುವೇ ಅಂಕಿತದ ಹೇಮಗಲ್ಲ ಹಂಪನ ವಚನಗಳ ಕೋರಿ ಕಾಗದ (೧೨''X೬'' ಉದ್ದಗಲದ) ಹಸ್ತ ಪ್ರತಿಯೊಂದು ತಮಗೆ ಆಂಧ್ರದ ಧನಶ್ರೀಯಲ್ಲಿ ದೊರಕಿದ್ದಾಗಿ ಡಾ : ಬಿರಾದಾರ ತಿಳಿಸುತ್ತಾರೆ. ಅಲ್ಲದೆ. ಪ್ರಾರಂಭದಲ್ಲಿ ' ಪಡುವಿಡಿಸಿದ್ದ ಮಲ್ಲಿನಾಥಾಯನಮಃ ಹೇಮಗಲ್ಲಿನ ಷಟಸ್ಥಲ ಬರೆವುದಕ್ಕೆ ಶುಭಮಸ್ತು ' ಎಂದಿದೆ ೩ ಎಂಬುದಾಗಿ ಹೇಳುತ್ತಾರೆ.

ಸಮಗ್ರ ವಚನ ಸಂಪುಟ -೧೪ ರಲ್ಲಿ ಇಡೀ ಕೃತಿಯನ್ನು ಕೊಡಲಾಗಿದೆ. ೪ ಹೆಸರೇ ಹೇಳುವಂತೆ ಇದು ಷಟಸ್ಥಲಕ್ಕೆ ಸಂಬಂಧಿಸಿದ ಕೃತಿಯಾಗಿದೆ. ಇದರಲ್ಲಿ ಕೇವಲ ವಚನಗಳಿಲ್ಲ ಸ್ವರ ವಚನ, ಕಂದ, ರಗಳೆ ಸಹ ಇರುವುದು ಕಂಡುಬರುತ್ತದೆ. ಈ ಕೃತಿಯ ಸ್ವರೂಪವನ್ನು ವಚನಗಳ ಬಗ್ಗೆ ಸುಧೀರ್ಘ ವಿವರಣೆಗಳನ್ನು ಸಮಗ್ರ ವಚನ ಸಂಪುಟ ಸಂಪಾದಕರು ವಿವೇಚಿಸಿದ್ದಾರೆ೫

ಈತ ತನ್ನ ಗುರುವಿನ ಗುರುವಾದ ಸಿದ್ಧ ಮಲ್ಲಿನಾಥನನ್ನು ಅಂಕಿತವಾಗಿ ಬಳಸಿಕೊಂಡಿದ್ದು ಕಂಡು ಬರುತ್ತದೆ. ಆತನ ಬಗ್ಗೆ ವಿಶೇಷವಾದ ಭಕ್ತಿ -ಗೌರವ ಹೊಂದಿರುವುದನ್ನು ಈತನ ವಚನಕೃತಿಯ ತುಂಬೆಲ್ಲಾ ಕಾಣುತ್ತೇವೆ.

ವ್ಯಕ್ತಿತ್ವ :

ಬಸವಾದಿಶರಣರ ಆದರ್ಶವನ್ನು ಬಲವಾಗಿ ನಂಬಿ, ಸಮಕಾಲೀನ ಮೂಢತೆ, ಅಜ್ಞಾನವನ್ನು ನಿರ್ಭಯವಾಗಿ ಖಂಡಿಸಿದ್ದಾನೆ. ಮಠ ಸ್ವಾಮಿಯಾಗಿದ್ದುಕೊಂಡು ಈತ ಪಡೆದ ಲೋಕಾನುಭವ ಅಪಾರವಾದುದಾಗಿದೆ. ಈತನ ವಚನಗಳನ್ನು ಗಮನಿಸಿದರೆ ಮತ್ತೇ ಕಲ್ಯಾಣ ಶರಣರ ವಚನಗಳ ನೆನಪಾಗುತ್ತದೆ. ಒಬ್ಬ ಅನುಭಾವಿಯಾಗಿ ಈತ ತಾತ್ವಿಕವಾಗಿ ಮಾತನಾಡಿದ್ದು ಕಂಡು ಬರುತ್ತದೆ. ಸಂಸ್ಕೃತ ಶ್ಲೋಕಗಳ ಬಳಕೆಯಿಂದ ಈತ ವಿದ್ವಾಂಸನೆಂದು ಊಹಿಸಬಹುದು. ಹಾಗೆಯೇ ಈತ ತನ್ನ ಸ್ವರ ವಚನಗಳಿಗೆ ರಾಗ ನಿರ್ದೇಶನ ಮಾಡಿದ್ದನ್ನು ನೋಡಿದರೆ ಈತನಿಗೆ ಸಂಗೀತ ಜ್ಞಾನವಿದ್ದ ಬಗ್ಗೆ ತಿಳಿದು ಬರುತ್ತದೆ.

ಬಸವೋತ್ತರ ಯುಗದಲ್ಲಿ ಹಲವು ವೈಶಿಷ್ಠಗಳಿಂದ ಕೂಡಿದ ಕೃತಿಯೊಂದನ್ನು ನೀಡಿದ ಗಮನಿಸಬೇಕಾದ ಮಹಾ ಶರಣ ಹೇಮಗಲ್ಲ ಹಂಪರಾಗಿದ್ದಾರೆ.

---

೧ : ಫಾಲಾಕ್ಷ -ಕ.ಇ.ಪ. ಪುಟ ೨೧೮

೨ : ಡಾ : ವೀರಣ್ಣ ರಾಜೂರು -ಸ.ವ .ಸಂ.-೧೪ ವಚನ ೧೩೩, ಪುಟ ೪೯೭

೩ : ಡಾ: ಎಂ.ಜಿ. ಬಿರಾದಾರ -ವೀ.ಸಾ. ಪುಟ ೨೪

೪ : ಡಾ : ವೀರಣ್ಣ ರಾಜೂರು -ಸ.ವ.ಸಂ.-೧೪ ವಚನ ೧-೩೦೨, ಪುಟ ೪೩೩-೫೯೦

೫ : ಅದೇ: ಪ್ರಸ್ತಾವನೆ ಪುಟಗಳು : XXXVI-XXXXIII

೪ : ಶ್ರೀ ಚಿದಾನಂದಾವ ಧೂತರು :

ಶಕ್ತಿಯ ಆರಾಧಕರಾಗಿದ್ದ ಇವರು ಶರಣರ ಪ್ರಭಾವದಿಂದ ಪ್ರೇರಿತರಾದವರು. ಅದರಲ್ಲೂ ಅಜಗಣ್ಣ , ಘಟ್ಟಿವಾಳಯ್ಯ , ಮರುಳ ಶಂಕರ ದೇವರ ಅಂತಹ ಶರಣರ ವಚನಗಳ ಭಾವವನ್ನು ಗಮನಿಸಿ ಆ ದಿಸೆಯಲ್ಲಿ ಇವರು ಆಲೋಚಿಸಿದ್ದರೆಂಬುದಕ್ಕೆ ಅವರ ' ಪಂಚೀಕರಣ' ವೆಂಬ ವಚನ ಸಂಕಲನವೇ ನಿದರ್ಶನವಾಗಿದೆ. ಆ ಹಿನ್ನೆಲೆಯಲ್ಲಿ ಇವರನ್ನು ನಮ್ಮ ಪರಿಸರದ ಶರಣರಲ್ಲಿ ಅಡಕಗೊಳಿಸಲಾಗಿದೆ.

ಸ್ಥಳ :

ಇವರು ಮೂಲತಃ ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆ ಆದೋನಿ ತಾಲೂಕಿನ ದೊಡ್ಡ ಹರಿವಾಣದ ಕರಣಂ (ಕುಲಕರ್ಣಿ) ಮನೆತನದ ಬ್ರಾಹ್ಮಣ ಕುಲದಲ್ಲಿ ಇವರು ಜನಿಸಿದ್ದಾರೆಂಬುದು ತಿಳಿದು ಬರುತ್ತದೆ. ಮುಂದೆ ಕಾಲಾಂತರದಲ್ಲಿ ಹೆಬ್ಬಾಳದಲ್ಲಿ ಶಾಲೆ ಕಲಿತು 'ಅಯೋಧ್ಯೆ'ಯ (ಗಂಗಾವತಿ ಹತ್ತಿರದ ಚಿಕ್ಕ ಗ್ರಾಮ) ಚಿದಾನಂದನೆಂಬ ಸಾಧಕರ ಸಂಪರ್ಕಕ್ಕೆ ಬಂದು ಮುಂದೆ ಸಿದ್ಧ ಪರ್ವತಕ್ಕೆ ಬಂದು (ಅಂಬಾಮಠ) ಅಲ್ಲಿ ಸಾಧನೆಗೈದು ಪಾಳೆಯಗಾರನ ವಿನಂತಿ ಮೇರೆಗೆ ಕನಕಗಿರಿಯಲ್ಲಿ ನೆಲೆಸಿ ಅಲ್ಲಿಯೇ ಸಜೀವ ಸಮಾಧಿ ಹೊಂದುತ್ತಾರೆ.

ಕಾಲ :

ಇವರ ಕಾಲವನ್ನು ಕ್ರಿ.ಶ. ೧೭೦೦ರಿಂದ೧೭೯೦ ರವರೆಗೆ ಗುರುತಿಸುವ ಪ್ರಯತ್ನ ನಡೆದಿದೆ. ಕನಕಗಿರಿಯಲ್ಲಿ ಉಡಿಚ ನಾಯಕನ ವಂಶಸ್ಥರಾದ ಹಿರಿಯ ರಂಗಪ್ಪ ನಾಯಕನ ಪಾಳೆಯ ಪಟ್ಟಿನಲ್ಲಿ ಅವನಿಗೆ ಮಾರ್ಗದರ್ಶನ ನೀಡುತ್ತಾ ಅಲ್ಲಿಯೇ ಜೀವಂತ ಸಮಾಧಿಯಾಗುವ ಅಂಶಗಳನ್ನು ಗಮನಿಸಿದರೆ. ಹಿರಿಯ ರಂಗಪ್ಪ ನಾಯಕನ ಕಾಲ ಕ್ರಿ.ಶ. ೧೭ ನೇ ಶತಕವೆಂದು ಗುರುತಿಸಲಾಗಿದೆ. ಆ ಹಿನ್ನೆಲೆಯಲ್ಲಿ ಇವರು ಇದೇ ಸಂದರ್ಭದಲ್ಲಿದ್ದವರೆಂಬುದು ಸ್ಪಷ್ಟವಾಗಿದೆ. ಹೀಗಾಗಿ ಇವರ ಕಾಲವನ್ನು ಕ್ರಿ.ಶ. ೧೭೦೦ರಿಂದ ಕ್ರಿ.ಶ.೧೭೯೦ ಎಂದು ಗುರುತಿಸುವ ಪ್ರಯತ್ನ ಸರ್ಮಪಕವಾಗಿದೆ.

ಇವರು ಕ್ರಿ.ಶ. ೧೭೫೦ ರಲ್ಲಿ ಜನಿಸಿದರೆಂದು ಐ.ಐ. ಕಳಕಣ್ಣನವರು ಹೇಳುತ್ತಾರೆ.೧ ' ನಾನು ಸಂಶೋಧನೆ ದೃಷ್ಟಿಯಿಂದ ಸಂಚಾರ ಕೈಗೊಂಡಾಗ ಆಯಾ ಪ್ರದೇಶದ ಜನರು ಹೇಳಿದ ಹೇಳಿಕೆಗಳನ್ನು ಆಧರಿಸಿ ಅವರು ಹುಟ್ಟಿದ್ದು ಕ್ರಿ.ಶ.೧೭೦೦ ಸಮಾಧಿಸ್ಥರಾದದ್ದು ಕ್ರಿ.ಶ.೧೭೯೦ ಎಂದು ಗುರುತಿಸಿದ್ದೇನೆ'೨ ಎಂಬುದಾಗಿ ಕೂಡಲಿ ಜಗನ್ನಾಥ ಶಾಸ್ತ್ರಿ ಹೇಳುತ್ತಾರೆ.

ಶಾಸ್ತ್ರಿಗಳ ಅಭಿಪ್ರಾಯ ಸರಿಯಾಗಿದೆ . ನಾನು ಕ್ಷೇತ್ರ ಕಾರ್ಯ ಕೈಗೊಂಡಾಗ ಜೀವಂತ ಸಮಾಧಿಯಾದ ಕಾಲ ಶಾಲಿವಾಹನಶಕೆ ೧೭೦೩ ಎಂಬುದಾಗಿ ಕಂಡುಬರುತ್ತದೆ. ಶಾಲಿವಾಹನ ಶಕೆ ೧೭೦೩ ಎಂದರೆ ಕ್ರಿ.ಶ.೧೭೮೧ ಆಗುತ್ತದೆ. ಇದು ಅಷ್ಟೇನೂ ಅಂತರವಾಗಿಲ್ಲ. ಹಾಗಾಗಿ ಕ್ರಿ.ಶ.೧೭೯೦ ಎಂದಿರುವುದು ಸಹ ಸಂದೇಹ ಪಡಬೇಕಾಗಿಲ್ಲವಾದರೂ . ನೀಖರವಾಗಿ ಇನ್ನು ಮುಂದೆ ಇವರ ಕಾಲವನ್ನು ಕ್ರಿ.ಶ. ೧೭೫೦ ರಿಂದ ಕ್ರಿ.ಶ.೧೭೮೧ ವರೆಗೆ ಗುರುತಿಸುವುದು ಬಹುಸೂಕ್ತವೆನಿಸುತ್ತದೆ. ಇವರ ಜೀವಂತ ಸಮಾಧಿಯಾಗಿದ್ದು ಗಮನಿಸಿದರೆ ಇವರು ಹರೆಯದಲ್ಲಿಯೇ ಐಕ್ಯರಾದರೆಂದು ತಿಳಿದುಬರುತ್ತದೆ.

ಕೌಟುಂಬಿಕ ವಿವರ :

' ಚಿದಾನಂದಾವಧೂತರ ಪೂರ್ವಾಶ್ರಮದ ಹೆಸರು ಝುಂಕಪ್ಪ ಇವರ ತಂದೆ ಲಕ್ಷ್ಮೀಪತಿ ತಾಯಿ ಅಣ್ಣಮ್ಮ ನರಸಿಂಹ ಮತ್ತು ಚೂಡಣ್ಣ ಎಂಬ ಇಬ್ಬರೂ ಅಣ್ಣಂದಿರು. .... ಕಾಲಗತಿಸಿದಂತೆ ಲಕ್ಷ್ಮೀಪತಿಗೆ ದೊಡ್ಡ ಹರಿವಾಣದಲ್ಲಿ ಜೀವನ ಸಾಗಿಸುವುದ ಕಷ್ಟವಾಗುತ್ತದೆ. ಇವರು ಪರಿಚಯಸ್ಥರಾದ ನಾರಪ್ಪ ಎಂಬುವವರ ಸಲಹೆ ಯಂತೆ ಕುಟುಂಬ ಸಮೇತ ರಾಯಚೂರು ಜಿಲ್ಲೆಯ ಗಂಗಾವತಿ ತಾಲೂಕಿನ ಹೆಬ್ಬಾಳಕ್ಕೆ ಬಂದು ಅಲ್ಲಿ ವಾರೆಕಾರ ಮನೆತನದ ಲಕ್ಷ್ಮಕ್ಕ ಎಂಬುವರ ಆಶ್ರಯದಲ್ಲಿ ನೆಲೆಸುತ್ತಾರೆ. ಝುಂಕಣ್ಣ ಹೆಬ್ಬಾಳದ ಐಗಳ ಶಾಲೆಗೆ ಸೇರುತ್ತಾನೆ. ಇವನಲ್ಲಿರುವ ಆಧ್ಯಾತ್ಮಿಕ ಬಲವನ್ನು ಗುರುತಿಸಿದ ಐಗಳ ಶಾಲೆಯ ಗುರುಗಳು ಮತ್ತು ಲಕ್ಷ್ಮಕ್ಕ ಝುಂಕಣ್ಣನನ್ನು ಹೆಬ್ಬಾಳದ ಹತ್ತಿರವೇ ಇದ್ದ ಅಯೋಧ್ಯೆ ಎಂಬ ಊರಿನಲ್ಲಿದ್ದ ಚಿದಾನಂದ ಎಂಬ ಸಾಧಕರ ಬಳಿ ತಂದು ಬಿಡುತ್ತಾರೆ. ಅವನನ್ನು ಶಿಷ್ಯನನ್ನಾಗಿ ಪರಿಗ್ರಹಿಸಿ ಅವನಿಗೆ ಸಾಧನಾ ಮಾರ್ಗವನ್ನು ಉಪದೇಶಿಸಿ ಚಿದಾನಂದಾವಧೂತ ಎಂಬ ಸಾಧಕ ನಾಮವನ್ನು ಅನುಗ್ರಹಿಸುತ್ತಾರೆ. ' ಎಂಬುದಾಗಿ ಕೂಡಲಿ ಜಗನ್ನಾಥ ಶಾಸ್ತ್ರಿ ಹೇಳುತ್ತಾರೆ. ೩

---

೧ : ಐ.ಐ. ಕಳಕಣ್ಣನವರು - ಚಿ.ಕೃ.(ಉಪನ್ಯಾಸ ಮಾಲೆ ಕೃತಿ)

೨ : ಆಯ್ಕೆ : ಕೂಡಲಿ ಜಗನ್ನಾಥಶಾಸ್ತ್ರಿ ಪ್ರಸ್ತಾವನೆ ಪುಟ V III

೩ : ಆಯ್ಕೆ : ಕೂಡಲಿ ಜಗನ್ನಾಥ ಶಾಸ್ತ್ರಿ - ಚಿ.ಧೂ. ಪ್ರಸ್ತಾವನೆ ಪುಟ V I

' ಹುಟ್ಟಿದ ಹನ್ನೆರಡನೇ ದಿನ ಝುಂಕಪ್ಪ ಹೆಸರು ನಾಮಕರಣ, ಅಹೋಬಲ ನರಸಿಂಹದೇವರ ದೇವಸ್ಥಾನದಲ್ಲಿ ಉಪನಯನ, ಹೆಬ್ಬಾಳ ಗ್ರಾಮದ ವಾರಕಾರ ಮನೆತನದ ಲಕ್ಷ್ಮಕ್ಕನ ರೂಪದಲ್ಲಿ ಜಗದಾಂಬೆ ಕಾಣಿಸುವುದು - ದೊಡ್ಡ ಹರಿವಾಣದಲ್ಲಿ ಈಗಲೂ ಚಿದಾನಂದಾವಧೂತರ ಸಂಬಂಧಿಕರ ಮನೆಯಲ್ಲಿ ಹಿತ್ತಾಳೆ ಮೂರ್ತಿ ಇದೆ. ಅದು ಲಕ್ಷ್ಮಕ್ಕನದಾಗಿದೆ. ಆಕೆಯ ಉಪದೇಶದ ಮೇರೆಗೆ ಝುಂಕಪ್ಪ ತುಂಗಭದ್ರಾ ನದಿ ತೀರದಲ್ಲಿರುವ ಅಯೋಧ್ಯೆಗೆ ಹೋಗಿ ಅಲ್ಲಿ ಜ್ಞಾನಿಯಾದ ಕೊಂಡಪ್ಪನನ್ನು ಕಾಣುತ್ತಾನೆ. ಕೊಂಡಪ್ಪನಿಗೆ ಚಿದಾನಂದ ಗುರು ಎಂಬ ಅಭಿದಾನವಿತ್ತು. ಈ ಚಿದಾನಂದರ ಅಪ್ಪಣೆ ಮೇರೆಗೆ ಶ್ರೀ ಸಿದ್ಧ ಬುದ್ಧ ಪರ್ವತವಾಸಿಯಾದ ಬಗಳಾಂಬಾ ಪುಣ್ಯಕ್ಷೇತ್ರಕ್ಕೆ ಬಂದರು ಎಂಬುದಾಗಿ ಕಳಕಣ್ಣನವರು ಹೇಳುತ್ತಾರೆ. ೧

ಕೃತಿ :

ಇವರು ಜ್ಞಾನ ಸಿಂಧು, ಶ್ರೀದೇವಿ ಮಹಾತ್ಮೆ, ಕಾಮ ವಿಡಂಬನೆಗಳು, ಬಗಳಾಂಬ ಸ್ತೋತ್ರ, ಪಂಚೀಕರಣ ತತ್ವ, ನವಚಕ್ರ ಕುಲ ರೇಖಾ ಲಕ್ಷಣ, ಎಂಬ ಕೃತಿಗಳನ್ನು ರಚಿಸಿದ್ದಾರೆ. ಆದರೆ ಶರಣ ಸಾಹಿತ್ಯದ ಪರಿಸರಕ್ಕೆ ಸಂಬಂಧಿಸಿದಂತೆ ಇವರ ಪಂಚೀಕರಣ ಕೃತಿ ಬಹುಮುಖ್ಯವಾಗಿದೆ. ಇಲ್ಲಿ ಕೇವಲ ೧೫ ವಚನಗಳಿದ್ದರು. ಅವು ಅನುಭಾವದ ನೆಲೆಯಲ್ಲಿ ಶರಣರು ಹೇಳುವ ಹಾಗೇ ಐಕ್ಯ ಸ್ಥಿತಿಯ ನೆಲೆಯಲ್ಲಿ ಮೂಡಿ ಬಂದಿವೆ. ಅವುಗಳ ಅಂಕಿತ ' ಚಿದಾನಂದ ಸದ್ಗುರು ಪ್ರಭುವೇ' ಎಂಬುದಾಗಿದೆ. ಹಾಗೆಯೇ ವಚನ ರೂಪವನ್ನು ಸ್ತೋತ್ರವೆಂದು ಕರೆಯುವ ಬಗಳಾಂಬಾ ಸ್ತೋತ್ರದಲ್ಲಿ ೧೦೧ ಪದಗಳಿಂದು ಅವುಗಳ ಅಂಕಿತ ' ಚಿದಾನಂದ' ಎಂಬುದಾಗಿದೆ. ಇಲ್ಲಿ ಸಹ ತನ್ನ ಗುರುವನ್ನೇ ಅಂಕಿತವಾಗಿರಿಸಿಕೊಂಡಿದ್ದಾರೆ. ಅಂತೆಯೇ ಚಿದಾನಂದ ಅಂಕಿತದಿಂದ ಕೊನೆಗೊಳ್ಳುವ ೪೦೦ಕ್ಕೂ ಹೆಚ್ಚು ಕೀರ್ತನೆಗಳು ಇವರ ಆಧ್ಯಾತ್ಮದ ಐಕ್ಯ ಸ್ಥಿತಿ ಹೇಳುತ್ತವೆ.

ವ್ಯಕ್ತಿತ್ವ :

ಆ ಕಾಲದ ಪ್ರಸ್ತುತತೆಯನ್ನು ಅರಿತು ಸರ್ವ ಧರ್ಮಗಳ ಸಮನ್ವಯದ ತಿರುಳನ್ನು ಬಿಂಬಿಸುವ ಹಾಗೇ ಆಲೋಚನೆ ಮಾಡಿದವರು. ಜೀವನದ

ಓಜಸ್ಸು - ಆಧ್ಯಾತ್ಮದ ತೇಜಸ್ಸುಗಳಿಂದ ಕೂಡಿದ ಇವರ ವ್ಯಕ್ತಿತ್ವ ಸುತ್ತಲಿನ ಪರಿಸರವನ್ನೇ ಆಧ್ಯಾತ್ಮಮಯವಾಗಿರಿಸಿತು. ಜನ ಸಾಮಾನ್ಯರ ಕೋಣ, ಕತ್ತೆ ಎನ್ನುವ ಮಾತುಗಳನ್ನು ಸಹ ಆಧ್ಯಾತ್ಮದ ಪರಿಭಾಷೆಯಲ್ಲಿ ಬಳಸಿದರು. ಭಾಷೆ ಸಹಜವಾಗಿ ಮೂಡಿ ಬಂದರು. ಅರ್ಥ ಬಹುಮಾರ್ಮಿಕವಾಗಿದೆ. ಒಬ್ಬ ಪಾಳೇಯಗಾರ ಇವರ ಆಜ್ಞೆಯಂತೆ ರಾಜ್ಯ ಭಾರ ನಡೆಸುತ್ತಿರುವುದನ್ನು ಗಮನಿಸಿದರೆ ಇವರ ವ್ಯಕ್ತಿತ್ವದ ಅರಿವಾಗುತ್ತದೆ. ಒಟ್ಟಾರೆ ಒಂದೆಡೆ ಶಕ್ತಿ ಮತ್ತೊಂದೆಡೆ ಶರಣರ ವಿಚಾರಗಳನ್ನು ಸಮನ್ವಯಗೊಳಿಸಿಕೊಂಡು ಆ ಮೂಲಕ ಜನರಿಗೆ ಸರಳವಾಗಿ ಆಧ್ಯಾತ್ಮದ ತಿರುಳನ್ನು ತಿಳಿಸಿಕೊಟ್ಟ ಬಸವೋತ್ತರ ಯುಗ ಅವಧೂತ ಶರಣರಾಗಿದ್ದಾರೆ.

---

೧ : ಐ.ಐ. ಕಳಕಣ್ಣವರ - ಚಿ. ಕೃ.

೫ : ಕೂಡಲೂರು ಬಸವಲಿಂಗ ಶರಣರು

ಕಲ್ಯಾಣ ಶರಣರ ಮಹೋದ್ದೇಶದಂತೆ ಕಾಲುಗಳನ್ನೇ ಕಂಬವಾಗಿರಿಸಿ ದೇಹವನ್ನೇ ದೇಗುಲವಾಗಿರಿಸಿ ಶಿರವನ್ನೇ ಹೊನ್ನ ಕಳಸವಾಗಿರಿಸಿ ಸ್ಥಾವರ ಸಂಸ್ಕೃತಿಯನ್ನು ಜಂಗಮ ಸಂಸ್ಕೃತಿಯಾಗಿ ರೂಪಿಸಿ ಹೊಸದೊಂದು ಪರಂಪರೆಯನ್ನು ನಿರ್ಮಿಸಿದ ಶರಣ ಸಮುದಾಯದಲ್ಲಿ ಕೇಳಿಬರುವ ಪ್ರಮುಖ ಹೆಸರು ಕೂಡಲೂರು ಬಸವಲಿಂಗ ಶರಣರದಾಗಿದೆ.

ಸ್ಥಳ : ಮೂಲತಃ ಇವರು ಗುಲಬರ್ಗಾ ಜಿಲ್ಲೆಯ ಯಾದಗಿರಿ ತಾಲೂಕಿನ ' ಬಳಿಚಕ್ರ' ಗ್ರಾಮದವರೆಂಬುವಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಈ ಬಗ್ಗೆ ಅನೇಕರ ಸಹಮತವಿದೆ. ಇದೇ ಅವರ ಹುಟ್ಟಿದ ಸ್ಥಳವಾಗಿದ್ದರು ಆಧ್ಯಾತ್ಮದ ಬಗ್ಗೆ ಜ್ಞಾನವನ್ನು ಪಡೆದಿದ್ದು ಕೂಡಲೂರಿನಲ್ಲಿ ಎಂಬುದು ಬಹುತೇಕರ ಅಭಿಪ್ರಾಯ . ಹಾಗೆಯೇ ಇವರು ಮುಂದೆ ತಮ್ಮ ತತ್ವದ ತಿರುಳನ್ನು ಬೋಧಿಸಲು ರಾಯಚೂರು ಪರಿಸರವನ್ನು ಕ್ಷೇತ್ರ ವನ್ನಾಗಿ ಮಾಡಿಕೊಂಡು ಅನೇಕ ಊರುಗಳನ್ನು ಸುತ್ತಿ ಅಂತ್ಯ ಕಾಲವನ್ನು ಗೊಬ್ಬೂರಿಗೆ ಸಮೀಪದಲ್ಲಿರುವ 'ಖಾನಾಪುರ'ದಲ್ಲಿ ಕಳೆದು ಅಲ್ಲಿಯೇ ಲಿಂಗೈಕ್ಯರಾದರೆಂದು ತಿಳಿದು ಬರುತ್ತದೆ. ಇವರ ಕುರಿತಾಗಿ ಮಾಹಿತಿಗಳು ಸ್ಪಷ್ಟವಾಗಿ ಇರುವುದು ಬಹು ಅನುಕೂಲಕರವಾಗಿವೆ. ೧.

ಕಾಲ :

ಇವರು ಸುಮಾರು ೧೮ನೇ ಶತಕದ ಕೊನೆಯ ಭಾಗದಲ್ಲಿ ಬದುಕಿರ ಬಹುದೆಂದು ಶಾಂತರಸರ ಊಹಿಸುತ್ತಾರೆ. ೨. ಇವರ ಕಾಲ ಕ್ರಿ.ಶ. ೧೭೦೦ ಎಂಬ ಅಭಿಪ್ರಾಯ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪಾದಕರದಾಗಿದೆ.೩. ಇವರ ಕಾಲದ ಬಗ್ಗೆ ತಮ್ಮ ಪ್ರಬಂಧದಲ್ಲಿ ಸುಧೀರ್ಘವಾಗಿ ಚರ್ಚಿಸಿದ ಡಾ: ಎಂ.ಜಿ.ಶಾಸ್ತ್ರಿಮಠರವರು ಇವರ ಜನನ ಕಾಲವನ್ನು ಕ್ರಿ.ಶ. ೧೭೨೬ ರಿಂದ ೧೭೩೧ರ ಅವಧಿ ಎಂದಿದ್ದಾರೆ. ೪.

ಡಾ: ಎಂ.ಎಸ್. ಲಠ್ಠೆ, ಶರಣ ಬಸವೇಶ್ವರ ಪುರಾಣ , ರಾಜಶೇಖರ ಬರೆದ ಪತ್ರಗಳನ್ನು ಆಧರಿಸಿ ಡಾ: ಎಂ. ಜಿ. ಶಾಸ್ತ್ರಿಮಠರವರು ಇವರ ಕಾಲವನ್ನು ಕ್ರಿ.ಶ. ೧೭೨೫ ರಿಂದ ೧೭೯೬ ಆಗಿರುವ ಸಂಭವವಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ೫.

ಡಾ: ಬಸವರಾಜ ಸಬರದವರು ಇವರ ಕಾಲವನ್ನು ಕ್ರಿ.ಶ. ೧೭೭೦ ರಿಂದ ೧೮೫೦ ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾರೆ. ೬.

ಗೂಗಲ್ಲಿನ ಪರಪ್ಪಯ್ಯ ಇವರೊಂದಿಗೆ ಸಂವಾದ ನಡೆಸಿದ್ದರೆಂದು ತಿಳಿದು ಬರುತ್ತದೆ. ಪರಪ್ಪಯ್ಯನ ಅಹಂಕಾರ ಮೆಟ್ಟಿದರೆಂಬುದಾಗಿ ಶಾಂತರಸ ಅಭಿಪ್ರಾಯ ಪಡುತ್ತಾರೆ. ೭.

ಇದನ್ನು ಗಮನಿಸಿದರೆ ಗೂಗಲ್ಲು ಪರಪ್ಪಯ್ಯ ಕಾಲ ಕ್ರಿ.ಶ. ೧೭೮೦ ಎಂಬುದು ಖಚಿತವಾದರೆ ಆತನಿಗಿಂದ ಹಿರಿಯರಾಗಿರುವ ಇವರು ಸಹಜವಾಗಿ ಕ್ರಿ.ಶ. ೧೭೮೦ಕ್ಕಿಂತ ಮುಂಚಿನವರು ಎಂಬುದು ಸ್ಪಷ್ಟವಾಗುತ್ತದೆ. ಈ ಎಲ್ಲ ಅಂಶಗಳನ್ನು ಗಮನಿಸಿ ಇವರ ಕಾಲ ಶಾಂತರಸರು ಊಹಿಸುವಂತೆ ೧೮ನೇ ಶತಕ ಎಂಬುದು ಸಮರ್ಪಕವಾಗಿದೆ. ಇವರು ತಮ್ಮ ಹಾಡಿನಲ್ಲಿ ಬಳಸುವ ಐದು ಟೆಂಕಿ, ಆರು ದುಡ್ಡು ೮ ಇವು೧೭-೧೮ನೇ ಶತಮಾನದ ಕೊನೆಯ ತನಕ ಜಾರಿಯಲ್ಲಿದ್ದ ನಾಣ್ಯಗಳಾಗಿದ್ದವೆಂಬುದು ಗಮನಾರ್ಹ ಅಂಶವಾಗಿದೆ. ಆದ್ದರಿಂದ ಕಾಲದ ದೃಷ್ಟಿಯಿಂದ ಶಾಂತರಸರ ಅಭಿಪ್ರಾಯವೇ ಸರಿಯಾಗಿದೆ.

---

೧. ಡಾ : ಎಂ.ಜಿ. ಶಾಸ್ತ್ರಿಮಠ - ಕೂ.ಬ.ಶ.ಅ. ಅಧ್ಯಾಯ - ೨. ಮತ್ತು ಎಸ್.ಜಿ. ಸ್ವಾಮಿ - ಕೂ.ಬ.ಪ್ರಸ್ತಾವನೆ ಪುಟ VIII-X ಇವುಗಳನ್ನು ವಿವರಗಳಿಗೆ ಗಮನಿಸಿರಿ.

೨. ಶಾಂತರಸ - ಕೂ.ಬ.ಶ.ಸ್ವ - ಪ್ರಸ್ತಾವನೆ ಪುಟ - XI

೩. ಬೆಂಗಳೂರು ವಿಶ್ವ ವಿದ್ಯಾಲಯ - ಸ.ಕ.ಸಾ.ಚ. - ಸಂಪುಟ ೫ ಪುಟ ೪೮೦

೪. ಡಾ : ಎಂ. ಜಿ. ಶಾಸ್ತ್ರಿಮಠ - ಕೂ.ಬ.ಶ.ಅ. ಪುಟ ೨೫ - ೩೦

೫. ಅದೇ :

೬. ಡಾ : ಬಸವರಾಜ ಸಬರದ - ರಾ.ಜಿ.ಅ.ಕ.ಪುಟ ೧೭-೧೮

೭. ಶಾಂತರಸ - ಎ.ಅ.ಕ. ಪುಟ ೩೪ - ೩೬

೮. ಆಯ್ಕೆ : ಎಸ್. ಜಿ. ಸ್ವಾಮಿ - ಕೂ.ಬ. ಪದ್ಯ ೭೨ ಪುಟ ೬೦

ಜೀವನ ವಿವರ :

ತಂದೆ ಮಹಾದೇವಪ್ಪ , ತಾಯಿ ಗಂಗಾಂಬೆ ಎಂದು ತಿಳಿದು ಬರುತ್ತದೆ. ಇವರು ನೆಲ ಮಾಳಿಗೆಯಲ್ಲಿ ಆರು ತಿಂಗಳ ಕಾಲ ವಾಸವಾಗಿದ್ದರೆಂಬ ಅಭಿಪ್ರಾಯ ಪುರಾಣಕಾರರು ವ್ಯಕ್ತ ಪಡಿಸಿದ್ದಾರೆ. ೧. ಗಾಣಿಗನ ಮರೆವಿನಿಂದ ಈತ ಈ ಅನಿರೀಕ್ಷಿತ ತೊಂದರೆಗೊಳಗಾಗಿದ್ದನು.

ಕುರುಬನ ಬುತ್ತಿ ಊಟದ ಪ್ರಸಂಗ, ಶೌಚಕ್ಕಾಗಿ ನೀರು ತೆಗೆದುಕೊಂಡು ಹೋಗದೆ ಇರುವುದು. ಹಂಪೆಯಲ್ಲಿ ಕೆಲ ಕಾಲ ಇದ್ದ ಬಗ್ಗೆ ಮಾಹಿತಿ ಕಂಡು ಬರುತ್ತದೆ. ರೈತರ ಉದ್ಧಾರ, ಸನ್ನತಿಯ ಚಂದ್ರಲಾಂಬಾ ದರ್ಶನ ಆಕೆಯೇ ಆತನಿಗೆ 'ಕೂಡಲೂರೇಶ' ಎಂಬ ಹೆಸರು ನೀಡಿದ್ದರೆಂಬ ಬಗ್ಗೆ ಅನೇಕ ಐತಿಹ್ಯಗಳಿರುವುದನ್ನು ಪುರಾಣ ಹೇಳುತ್ತದೆ. ೨. ಬಸವ ಲಿಂಗಪ್ಪ ಕೂಡಲೂರಿನಲ್ಲಿ ಬಹಳ ಕಾಲ ಕಳೆಯುತ್ತಿರಿಂದ ಅಲ್ಲಿಯ ತಿಪ್ಪಣ್ಣನೆ ಬಸವ ಲಿಂಗನಿಗೆ ಕೂಡಲೂರೇಶನೆಂದು ಕರೆದನೆಂದು ಜನರಲ್ಲಿ ನಂಬಿಗೆ ಇದೆ. ತಿಪ್ಪಣ್ಣನು ಈತನಿಗೆ ದೀಕ್ಷೆ ನೀಡಿದನೆಂದು ಕೂಡಲೂರು ಸುತ್ತಮುತ್ತಲಿನ ಜನರೆಲ್ಲ ಹೇಳುತ್ತಾರೆ. ಕೂಡಲೂರು ತಿಪ್ಪಣ್ಣನ ಮನೆಯಲ್ಲಿ ಈತನ ಗದ್ದುಗೆ ನಿರ್ಮಿಸಿದ್ದಾರೆ. ಪಾದರಕ್ಷೆ ಕಾಯ್ದಿರಿಸಿದ್ದಾರೆ. ವಿಶ್ವ ಕರ್ಮನಾದ ತಿಪ್ಪಣ್ಣ ಆತನಿಗೆ ಯಾವ ದೀಕ್ಷೆ ನೀಡಿದನೆಂದು ಸ್ಪಷ್ಟವಾಗಿಲ್ಲ. ಅಂತ್ಯ ಕಾಲದ ಬಗ್ಗೆ ಅನೇಕ ಐತಿಹ್ಯಗಳಿವೆ. ತೊಗರಿ ಮರಿಯಪ್ಪ ಎನ್ನುವ ಮಹಾ ಯೋಗೀಶ್ವರ ಕೂಡಲೂರಿನಲ್ಲಿದ್ದನು. ಬಸವ ಲಿಂಗನನ್ನು ಚೆನ್ನಾಗಿ ಅರಿತಿದ್ದನು. ಇವರ ಜೀವನದಲ್ಲಿ ಅನೇಕ ಘಟನೆಗಳು ನಡೆದವು ಎಂಬುದಾಗಿ ಶಾಸ್ತ್ರಿ ಮಠ ಹೇಳುತ್ತಾರೆ.೩.

ಪರುಷ ಬಟ್ಟಲು, ಬಸವ ಪುರಾಣದ ಘಟನೆಗಳನ್ನು ಸ್ವಾಮಿ ಉಲ್ಲೇಖಿಸುತ್ತಾರೆ. ೪. ಇದಲ್ಲದೆ ಇವರ ಅಂತ್ಯದ ಬಗ್ಗೆ ಸವಿಸ್ತಾರವಾಗಿ ತಿಳಿಸುತ್ತಾ ಇವರದು ಕೊಲೆಯಾಗಿಲ್ಲ ಎಂದಿದ್ದಾರೆ. ೫. ಹೀಗೆ ಇವರ ಸುತ್ತ ಹಬ್ಬಿರುವ ಐತಿಹ್ಯ ಗಮನಿಸಿದರೆ ಇವರು ಮಹಾತ್ಮರಾದ ಮೇಲೆ ಈ ರೀತಿಯ ಕಥೆಗಳು ಹುಟ್ಟಿರುವ ಸಾಧ್ಯತೆ ಇದೆ.

ಕೃತಿ ಹಾಗೂ ವ್ಯಕ್ತಿತ್ವ :

ಇವರು 'ಕೂಡಲೂರೇಶ' ಅಂಕಿತದಲ್ಲಿ ೭೭೦ ತತ್ವ ಪದಗಳನ್ನು ಬರೆದಿದ್ದು ಕಂಡು ಬರುತ್ತದೆ. ಅದರಲ್ಲಿ ಸದ್ಯ ೧೭೦ ಉಪಲಬ್ದವಾಗವೆ. ತೆಲಗು, ದಖನಿ ಭಾಷೆಗಳ ಪ್ರಯೋಗವಿದೆ.

ಕ್ರಿ.ಶ.೧೯೨೦ರಲ್ಲಿ ಬಳ್ಳಾರಿ ಶೆಟ್ಟರ ಮುದ್ರಣಾಲಯದಿಂದ ಇವರ ತತ್ವ ಪದಗಳು ಪ್ರಕಟವಾಗಿದ್ದವೆಂಬುದು ಕಂಡು ಬರುತ್ತದೆ. ಅಂತೆಯೇ ಕ್ರಿ.ಶ.೧೯೬೩ರಲ್ಲಿ ಶಿವಲೆಂಕ ಎಂಬುವವರಿಂದ 'ಬ್ರಹ್ಮ ತತ್ವ ರತ್ನಾಕರ' ಎಂಬ ಹೆಸರಿನಲ್ಲಿ ೧೨೧ ಪದ್ಯಗಳು ಪ್ರಕಟವಾಗಿವೆ. ಕ್ರಿ.ಶ.೧೯೮೩ರಲ್ಲಿ ಗದುಗಿನ ವೀರಶೈವ ಅಧ್ಯಯನ ಸಂಸ್ಥೆಯಿಂದ ಶಾಂತರಸರ ಸಂಗ್ರಹ ಪ್ರಕಟವಾಗಿದೆ. ಈತ ತನ್ನ ನೋವನ್ನೇ ಹಾಡಾಗಿ ಪರಿವರ್ತಿಸಿದ್ದಾನೆ. ಅಂತೆಯೇ ಸಮಾಜದ ವಿಷಮತೆಗಳ ಕುರಿತು ನೇರವಾಗಿ ನುಡಿದಿರುವುದು ಕಂಡು ಬರುತ್ತದೆ. ಕಲ್ಯಾಣ ಶರಣರ ಆಶಯಗಳನ್ನೇ ತನ್ನ ತತ್ವ ಪ್ರತಿಪಾದನೆಗೆ ಬಳಸಿಕೊಂಡಿದ್ದಾನೆ.

ವ್ಯಕ್ತಿಗಿಂತ ಬದುಕು ದೊಡ್ಡದೆಂಬ ವಾಸ್ತವಿಕ ಅಂಶವನ್ನು ಇವರು ತಿಳಿಸಿ ಕೊಟ್ಟಿದ್ದಾರೆ. ವೃತ್ತಿಯಿಂದ ಕಾಯಿಪಲ್ಯೆ ಮಾರಾಟ ಮಾಡುತ್ತಿದ್ದರು. ವೃತ್ತಿಗಿಂತ ಆಧ್ಯಾತ್ಮದ ಕಡೆಗೆ ಇವರ ತಮ್ಮ ಒಲವನ್ನು ತೋರಿದರು. ಸಂಸಾರಿಯಾಗಿದ್ದುಕೊಂಡು ಸನ್ಯಾಸಿಯಂತೆ ಬದುಕು ನಡೆಸಿದರು ಕೊನೆಗೆ ಸಂಸಾರ ತ್ಯಜಿಸಿ ನಿಜ ವಿರಕ್ತರಾದರು. ಇವರ ತತ್ವ ಪದಗಳನ್ನು ಗಮನಿಸಿದರೆ ಅನುಭಾವದ ಜೊತೆಗೆ ಇವರ ವ್ಯಕ್ತಿತ್ವದ ಪರಿಚಯವಾಗುತ್ತದೆ. ಬದುಕಿನ ನಿಗೂಢತೆಗಳ ಒಳ ಪದರುಗಳನ್ನು ಆದರದೇ ಯಾದ ನೆಲೆಯಲ್ಲಿ ಬಿಚ್ಚಿ ಕೊಡುತ್ತಾ ಅಂತಿಮ ಸತ್ಯವನ್ನು ಕಂಡು ಕೊಳ್ಳುವಲ್ಲಿ ವ್ಯಕ್ತಿಯ ಹೊಣೆಯನ್ನು ಸ್ಪಷ್ಟವಾಗಿ ಅಭಿವ್ಯಕ್ತಿಸುತ್ತಾರೆ.

---

೧. ನರಸಿಂಹ ಗುಪ್ತ - ನ.ಶಂ. ಪು. - ಸಂಧ್ಯಿ

೨. ಅದೇ : ಸಂಧ್ಯಿ ಪದ್ಯ ೧೦೭ - ೧೧೨

೩. ಡಾ : ಎಂ.ಜಿ. ಶಾಸ್ತ್ರಿ ಮಠ - ಕೂ.ಬ.ಶ.ಅ. ಪುಟ ೬೯ - ೭೦

೪. ಆಯ್ಕೆ : ಎಸ್.ಜಿ. ಸ್ವಾಮಿ ಪ್ರಸ್ತಾವನೆ ಪುಟ -XI

೫. ಅದೇ : ಪುಟ XII

೬ :ಗೂಗಲ್ಲು ಪರಪ್ಪಯ್ಯ

ಕೃಷ್ಣೆಯ ಬಲಬದಿಗೆ ಇರುವ ಗೂಗಲ್ಲಿನ ಪ್ರಭುವನೇ ತನ್ನ ಸಾಕ್ಷಾತ್ಕಾರದ ಗುರುವಾಗಿರಿಸಿಕೊಂಡ ಶರಣರೇ ಗೂಗಲ್ಲು ಪರಪ್ಪಯ್ಯ

ಸ್ಥಳ ಮತ್ತು ಕೌಂಟುಂಬಿಕ ವಿವರ:

'ಕೃಷ್ಣಾ ನದಿಯ ದಕ್ಷಿಣದ ದಂಡೆಯ ಮೇಲೆ ಗೂಗಲ್ಲು ಉತ್ತರದ ದಂಡೆಯ ಮೇಲೆ ಬೆಂಡೆಗಂಬಳಿ ಗೂಗಲ್ಲು ಇವರ ಕರ್ಮ ಭೂಮಿಯಾದರೆ ಬೆಂಡೆ ಗಂಬಳಿ ಅವರ ಜನ್ಮ ಭೂಮಿ ಹನ್ನೆರಡನೆಯ ಶತಮಾನದ ಕಲ್ಯಾಣ ಶರಣರ ನಿಕಟ ಸಂಪರ್ಕ ಹೊಂದಿದ ಬೆಂಡೆಗಂಬಳಿಗೆ ಮರಿ ಕಲ್ಯಾಣವೆಂಬ ಪ್ರತೀತಿ ಇದೆ. ಪಂಚಾಳಮನೆತನದ ಸಾತ್ವಿಕ ದಂಪತಿಗಳಾದ ಕಾಯಕ ನಿಷ್ಠರಾದ ಜಂಗಮ ಪ್ರೇಮಿಗಳಾದ ಕಾಳಪ್ಪ ಮತ್ತು ಮಾನಮ್ಮ ಅವರ ಸುಪುತ್ರನೇ ಪರಪ್ಪ 'ಎಂಬುದಾಗಿ ಸಂಗಯ್ಯ ಸೊಪ್ಪಿನಮಠ ಹೇಳುತ್ತಾರೆ. ೧.

ಬಾಲಕನಿದ್ದಾಗಿನಿಂದಲೂ ಆಧ್ಯಾತ್ಮದಲ್ಲಿ ತೀವ್ರ ಆಸಕ್ತಿ ಹೊಂದಿದ್ದ ಇವರ ಮುಂದೆ ಒತ್ತಾಯದಿಂದ ಮದುವೆಯಾದಾಗ ಅನಿವಾರ್ಯವಾಗಿ ಸಂಸಾರ ಸಾಗಿಸಬೇಕಾಯಿತು.

'ಕದರಾಪುರದ ದಾರಿಯಲ್ಲಿ ಬುತ್ತಿ ಬಸನ ಎಂಬ ದೇವರ ಕಟ್ಟೆ ಇದೆ. ಪೇಟೆಗೆ ಸರಕು ಒಯ್ಯುವವರು ಅಕ್ಕಿ, ಬೆಳೆ, ಜೋಳ, ಬೆಲ್ಲ ಮುಂತಾದುವುಗಳನ್ನು ಲಾಭ ಕೋರಿ ಬುತ್ತಿ ಬಸವನ ಮುಂದಿಟ್ಟು ಹೋಗುತ್ತಿದ್ದರು. ಆ ಎಡೆಯೇ ಈತನ ಸಂಸಾರಕ್ಕೆ ಆಧಾರವಾಗಿತ್ತು' ಎಂಬುದಾಗಿ ಶಾಂತರಸರು ಹೇಳುತ್ತಾರೆ. ೨

ಮುಂದೆ ಪ್ರಕೃತಿ ವಿಕೋಪಕ್ಕೊಳಗಾಗಿ ಹೆಂಡತಿ ಮಕ್ಕಳನ್ನು ಕಳೆದುಕೊಂಡು ಇವರು ಸಂಸಾರದಲ್ಲಿ ವಿರಕ್ತಿ ತಾಳಿ ಆಧ್ಯಾತ್ಮದ ಕಡೆಗೆ ವಾಲಿ ಗೂಗಲ್ಲಿಗೆ ಬಂದು ನೆಲೆಸಿ ಶರಣ ಮಾರ್ಗದಲ್ಲಿ ನಡೆದು ಮಹಾ ಶರಣರಾಗುತ್ತಾರೆ.

ಇವರ ಕುರಿತಾಗಿ ಕಾಲಾನಂತರದಲ್ಲಿ ಅನೇಕ ಕತೆಗಳು ಬೆಳೆದು ಬಂದಿವೆ.

'ಕಂಬಳಿಯಿಂದ ನದಿ ದಾಟಿದ್ದು , ಮಾಟದ ಕಾಯಿ, ಮೈಲಾರ ಜಾತ್ರೆ ಪ್ರಸಂಗ, ಹಲ್ಲು ಮುರಿದ ಕತೆ, ಸೂಗೂರೇಶನ ದರ್ಶನ ಮುಂತಾದ ಪವಾಡ ಕತೆಗಳನ್ನು ಇವರ ಜೀವನದಲ್ಲಿ ಕಾಣಬಹುದು'. ೩ ಎಂಬುದಾಗಿ ಸೊಪ್ಪಿಮಠ ಅಭಿಪ್ರಾಯ ಪಟ್ಟಿದ್ದಾರೆ.

ಕಾಲ :

ಬೆಂಡಗಂಬಳಿಯ ನಿವೃತ್ತ ಶಿಕ್ಷಕರಾದ ಶ್ರೀ ಸಿದ್ಧ ಲಿಂಗಪ್ಪನವರು ರಚಿಸಿದ 'ಪರಪ್ಪಯ್ಯನವರ ಮಹಾತ್ಮೆ' ಪ್ರಕಾರ ಇವರು ಕ್ರಿ.ಶ. ೧೭೮೦ರಲ್ಲಿ ಜನಿಸಿದರೆಂದು ತಿಳಿಯುತ್ತದೆ. ಹಾಗೆಯೇ ಇವರ ಅಂತ್ಯ ಕಾಲ ಕ್ರಿ.ಶ. ೧೮೫೦ ಎನ್ನಲಾಗಿದೆ. ಕೂಡಲೂರು ಬಸವಲಿಂಗ ಶರಣರೊಡನೆ ನಡೆಸಿದ ಚರ್ಚೆ ಗಮನಿಸದರೆ ಇವರು ಕ್ರಿ.ಶ. ೧೭೮೦ ರಿಂದ ೧೮೫೦ರ ಕಾಲದವರೆನ್ನುವುದು ಸಮಪರ್ಕವಾಗಿದೆ.

ಕೃತಿ ಹಾಗೂ ವ್ಯಕ್ತಿತ್ವ :

ಇವರು 'ಪರ್ವ, ನಗರ ಪರ್ವ, ಆನೆಗೊಂದಿ ವೀರಭದ್ರ' - ಈ ನಾಲ್ಕು ಅಂಕಿತಗಳನ್ನು ಬಳಸಿ ಹಾಡುಗಳನ್ನು ರಚಿಸಿದ್ದಾರೆ. ೪. ಇವರು ತತ್ವ ಪದಗಳನ್ನು ಶಿಕ್ಷಕ ಸಿದ್ಧಲಿಂಗಪ್ಪನವರು ಸಂಗ್ರಹಿಸಿದ್ದಾರೆ. ಇನ್ನು ಪ್ರಕಟವಾಗಿಲ್ಲ.*

ಕಲ್ಯಾಣ ಶರಣರ ಆದರ್ಶ ಬದುಕಿನಲ್ಲಿ ಅಳವಡಿಸಿಕೊಂಡು ಆದರ್ಶವಾದಿಯಾಗಿ ವಿರಕ್ತ ಜೀವನ ಸಾಗಿಸಿದ ಪರಪ್ಪಯ್ಯ ಬದುಕಿನಲ್ಲಿ ಬಹಳ ಸರಳವಾಗಿ ಬದುಕಿದರು. ಸಮಕಾಲೀನ ಶರಣ ಸಂಪರ್ಕ ಪಡೆಯುವ ಜೊತೆಗೆ ಹಲವು ಸೇವಾ ಕಾರ್ಯಗಳನ್ನು ಮಾಡುತ್ತಾ ಹಂತದವರೆಗೆ ಆಧ್ಯಾತ್ಮದ ಹಂತದ ವರೆಗೆ ಶ್ರೀಸಾಮಾನ್ಯನನ್ನು ಕರೆದೊಯ್ಯುವ ಹಂಬಲ ಈತನ ಹಾಡುಗಳಿಂದ ತಿಳಿದು ಬರುತ್ತದೆ. ಈತನ ಹಾಡುಗಳಿಂದ ಈತ ಸಂಪೂರ್ಣವಾಗಿ ಕಲ್ಯಾಣ ಶರಣರ ಪ್ರಭಾವಕ್ಕೊಳಗಾಗಿದ್ದನು ಎಂದು ತಿಳಿಯುತ್ತದೆ. ಒಟ್ಟನಲ್ಲಿ ಜೀವನದಲ್ಲಿ ಕಷ್ಟ ಅನುಭವಿಸಿ ಚಿಂತಿಸದೇ ಅದನ್ನೇ ತನ್ನ ಹಾಡಾಗಿ ಪರಿವರ್ತಿಸಿದ ಈ ಪರಿಸರದ ಪ್ರಮುಖ ಶರಣ.

---

೧. ಸಂ: ಡಾ: ಬಸವಲಿಂಗ ಸೊಪ್ಪಿಮಠ - ಸೂಗೂರ ಸಂಪದ ಪುಟ ೮೧ (೧,೨ನೇ ಕಾಲಂ)

೨. ಶಾಂತರಸ - ಎ.ಅ.ಕ. ಪುಟ - ೩೪

೩. ಸಂ: ಡಾ : ಬಸಲಿಂಗ ಸೊಪ್ಪಿಮಠ - ಸೂಗೂರ ಸಂಪದ ಪುಟ ೮೨ - ೮೩

೪. ಶಾಂತರಸ - ಎ.ಅ.ಕ. ಪುಟ- ೩೪

* ಇತ್ತೀಚಿಗೆ ಡಾ. ಬಸವಲಿಂಗ ಸೊಪ್ಪಿಮಠ ಇವರು ತತ್ವಪದ ಸಂಗ್ರಹಿಸಿ ಪ್ರಕಟಿಸಿದ್ದಾರೆ.

೭ : ಗೊಬ್ಬೂರು ಹಂಪಣ್ಣ

ಬಿಬ್ಬಿ ಬಾಚಯ್ಯರಿಂದ ಹನ್ನೆರಡನೆಯ ಶತಮಾನದಲ್ಲಿಯೇ ಶರಣ ಪರಂಪರೆ ಗೊಬ್ಬೂರಿನಲ್ಲಿ ನೆಲೆಸಿತ್ತು. ಈ ಆದರ್ಶ ಆನಂತರ ಮುಂದುವರೆಯಿತೆಂಬುದಕ್ಕೆ ಗೊಬ್ಬೂರು ಹಂಪಣ್ಣರೇ ನಿದರ್ಶನವಾಗಿದ್ದಾರೆ.

ಸ್ಥಳ :

ಈತ ದೇವದುರ್ಗ ತಾಲೂಕು 'ಅರಕೇರಿ'ಯಲ್ಲಿ ಜನಿಸಿದನೆಂದು ತಿಳಿಯಲಾಗಿದೆ. ಈತ ಜನಿಸಿದ ಸ್ಥಳದ ಬಗ್ಗೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಈತ ಅರಕೇರಿಯವರು ಎನ್ನಲ್ಲಿಕ್ಕೆ ಪ್ರಸ್ತುತ ವಾರದವರ ಮನೆತನ ಸಹ ಅರಕೇರಿಯಲ್ಲಿದೆ.

ಕಾಲ :

ಈತ ಕ್ರಿ.ಶ. ೧೭೯೩ರಲ್ಲಿ ಜನಿಸಿ ೮೦ ವರ್ಷಗಳ ಕಾಲ ಬದುಕಿನೆಂದು ತಿಳಿದು ಬರುವ ಕಾರಣ ಈತನ ಲಿಂಗೈಕ್ಯ ಕಾಲ ಕ್ರಿ.ಶ. ೧೮೭೩ರೆಂದು ಹೇಳಬಹುದು.

ಕೃತಿ :

'ಮಣಿಪುರದೊಡೆಯ - ಘನವೃಷಭ' ಅಂಕಿತದಲ್ಲಿ ಈತ ಅನೇಕ ತತ್ವ ಪದ ರಚಿಸಿದ್ದಾನೆ. ಘನ ವೃಷಭ ಇದು ಆತನ ಗುರುವಿನ ಹೆಸರೆಂದು ಬಹುತೇಕವಾಗಿ ತಿಳಿದು ಬರುತ್ತದೆ. ತನ್ನ ಊರಿನ ಸಾಲಿದೊಡ್ಡ ಬಸವಪ್ಪನವರಿಂದ ಈತ ಅನುಗ್ರಹ ಪಡೆದ ಬಗ್ಗೆ ತಿಳಿದು ಬರುತ್ತಿದ್ದು ಇದನ್ನು ಗಮನಿಸಿದರೆ ಇಲ್ಲಿ ಘನ ಎಂದರೆ ದೊಡ್ಡ, ಬಸವಪ್ಪ ಎಂದರೆ ವೃಷಭ ಎಂದು ಅರ್ಥೈಸಲು ಸಾಧ್ಯವಿದೆ. ಆ ಕಾರಣ ಗುರವಿನ ಹೆಸರನ್ನೇ ಅಂಕಿತವಾಗಿರಿಸಿಕೊಂಡಿದ್ದಾರೆ.

ಈ ಕುರಿತು ರಾಮಸ್ವಾಮಿ ನುಲಿ ಹೇಳುವ ಮಾತುಗಳು ಗಮನಾರ್ಹವಾಗಿವೆ:

'ಗೊಬ್ಬೂರಿನ ಸಾಲಿ ದೊಡ್ಡ ಬಸವಪ್ಪನವರಿಂದ ಅನುಗ್ರಹ ಪಡೆದ ಅಷ್ಟೋತ್ತಿಗಾಗಲೇ ಹಂಪಣ್ಣ ಕೆಲವು ಪದ್ಯಗಳನ್ನು ಮತ್ತು ಸುಧನ್ವ, ಗಿರಿಜಾ ಕಲ್ಯಾಣ, ದಕ್ಷಬ್ರಹ್ಮ ಮೊದಲಾದ ಬೈಲಾಟಗಳನ್ನು ಬರೆದಿದ್ದ ಗುರುವಿನ ಆದೇಶದಂತೆ ಮೋಹವಿವೇಕೆಂಬ ಅರ್ಥಗರ್ಭಿತ ಬಯಲಾಟವನ್ನು ಬರೆದನು.೧'

'ಕೈವಲ್ಯ ದೀವಿಗೆ' ಇವರ ತತ್ವ ಪದಗಳ ಸಂಗ್ರಹವಾಗಿದೆ. ಇದರಲ್ಲಿ ೭೮ ಪದ್ಯಗಳಿವೆ ಇದನ್ನು ಹೂಟಗಿಯ ಶ್ರೀತಪಸ್ವಿ ಯೋಗರಾಜೇಂದ್ರ ಶಿವಾಚಾರ್ಯ ಹಿರೇಮಠ ಇವರು ೧೯೮೨ರಲ್ಲಿ ಗೊಬ್ಬೂರಿನ ಎಲಿಬೂದೆಪ್ಪನವರ ಸಹಕಾರದಿಂದ ಪ್ರಕಟಿಸಿದ್ದಾರೆಂದು ತಿಳಿದು ಬರುತ್ತದೆ.

ಕೌಟುಂಬಿಕ ವಿವರ ಮತ್ತು ವ್ಯಕ್ತಿತ್ವ :

ಇವರು ಅರಕೇರಿಯ ಲಿಂಗಾಯತ ಬಣಜಿಗರ ಕುಟುಂಬದಲ್ಲಿ ಜನಿಸಿ ಬಾಲ್ಯದಲ್ಲಿ ಆಧ್ಯಾತ್ಮದಕಡೆಗೆ ವಾಲಿ ಜ್ಞಾನಕ್ಕಾಗಿ ಊರೂರು ಅಲೆದರು. ಸಹೋದರರು ಇವರ ವರ್ತನೆಯಿಂದ ಬೇಸತ್ತು ಹೊರ ಹಾಕಿದರು. ಮುಂದೆ ಈತ ಅಲೆಮಾರಿಯಾಗಿ ಊರೂರು ತಿರುಗಿ ಗೊಬ್ಬೂರಿಗೆ ಬಂದಾಗ ಆತ ಅರಿಷಣಗಿ ಕುಟುಂಬದವರ ಮನೆಯಲ್ಲಿ ನೆಲನಿಂತರು ಅಲ್ಲಿ ಆತ ಅರಿಷಿಣ, ಬಳ್ಳೊಳ್ಳಿ ಮಾರುವ ಆ ಮನೆತನದ ಉದ್ಯೋಗ ಕೈಗೊಂಡರು ಹೀಗಾಗಿ ಅನೇಕ ಊರುಗಳನ್ನು ಸುತ್ತಿ ಲೋಕ ಜ್ಞಾನದ ಜೊತೆಗೆ ಆಧ್ಯಾತ್ಮ ಧ್ಯಾನ ಪಡೆದರು.

ಹೆಂಡತಿ ಸಿದ್ದಮ್ಮನ ಸಾವಿನ ನಂತರ ಸಂಪೂರ್ಣ ಜೀವನ ಆಧ್ಯಾತ್ಮಕ್ಕೆ ಮೀಸಲಿಟ್ಟನು. ಶಿವಾನುಭವವನ್ನು ಎಲ್ಲಾ ಕಡೆಗೂ ಪ್ರಚಾರ ಮಾಡಿದನು.

ಶಾಂತರಸರು ಹೇಳುವ ಹಾಗೆ ಇವರ ಜೀವನ ಕ್ರಮ ಹೀಗಿದೆ. 'ಬೆಳಿಗ್ಗೆ ೧೨ ಗಂಟೆತನಕ ವ್ಯಾಪಾರ, ಅಡಿಗೆ ಮಾಡಿ ಪ್ರಸಾದ ಸೇವನೆ, ಸಾಯಂಕಾಲದವರೆಗೆ ಅಭ್ಯಾಸ, ರಾತ್ರಿ ಸ್ನಾನ ಮಾಡಿ ಲಿಂಗಾರ್ಚನೆಗೈದು ಕೇವಲ ನೀರು ಕುಡಿದು ಸರಿ ರಾತ್ರಿತನಕ ಹಾಡು, ಗ್ರಂಥ ರಚನೆ, ವಾರದಲ್ಲಿ ಒಂದು ದಿನ ಮಹಾ ನಂದೀಶ್ವರ ಬೆಟ್ಟದಲ್ಲಿ ತಪಸ್ಸಿನ ಆಚರಣೆ ಮಾಡುತ್ತಿದ್ದನೆಂದು ತಿಳಿಯುತ್ತದೆ.೨'

ಈತ ಸುಲ್ತಾನ ಪುರದ ಅಕಾರಾಮ ಸಾಹೇಬನ ಬಗ್ಗೆ ಪದ್ಯ ರಚಿಸಿದ್ದು ಗಮನಿಸಿದರೆ ಈತನ ಸಮನ್ವಯತೆ ಅರಿವಾಗುತ್ತದೆ. ಈತ ಸಂಗೀತ ಜ್ಞಾನಿಯಾಗಿದ್ದು ಶ್ರೇಷ್ಠ ಅನುಭಾವಿಯಾಗಿ ಶರಣ ಪರಂಪರೆಯನ್ನು ಬೆಳೆಸಿದ್ದಾನೆ.

---

೧ : ಆಯ್ಕೆ : ರಾಮಸ್ವಾಮಿ ನುಲಿ-ಗೊ.ಹಂ.-ಪ್ರಸ್ತಾವನೆ ಪುಟ viii-ix

೨ : ಶಾಂತರಸ - ಎ. ಅ. ಕ.

೮ : ನೀರಲ ಕೇರಿ ಬಸವಲಿಂಗ ಶರಣರು

ಬಸವೋತ್ತರ ಯುಗದ ಶರಣರಿಗೆ ಸ್ವಧರ್ಮದ ಜೊತೆಗೆ ಅನ್ಯ ಧರ್ಮದ ತಿಳುವಳಿಕೆ ಅವಶ್ಯಕವಾಯಿತು. ಹಾಗೆಯೇ ಸಮನ್ವಯತೆಯ ಅಗತ್ಯತೆ ಉಂಟಾಯಿತು. ಈ ಕಾರಣದಿಂದಾಗಿ ಈ ಯುಗದ ಶರಣರಲ್ಲಿ ಶರಣ ತತ್ವಕ್ಕಿಂತ ಭಿನ್ನವಾದ ಅಂಶಗಳು ಮೂಡಿ ಬಂದಿರುವುದುಸಹಜವಾಗಿದೆ. ಆದರೂ ಅನುಭಾವ ಸಿದ್ಧಾಂತಕ್ಕೆ ಪ್ರಾಶಸ್ತ್ಯವಿದೆ.ಇಂತಹ ಸಂದರ್ಭದಲ್ಲಿ ಕಾಣುವವರೆ ನೀರಲಕೇರಿ ಬಸವಲಿಂಗ ಶರಣರಾಗಿದ್ದಾರೆ.

ಸ್ಥಳ :

ಇವರು ಮೂಲತಃ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ 'ಗೂಡೂರಿ'ನವರಾದರೂ ರಾಯಚೂರು ಜಿಲ್ಲೆಯ 'ನೀರಲಕೇರಿ' ,'ಐದನಾಳ'ಗಳನ್ನು ತಮ್ಮ ಕಾರ್ಯಕ್ಷೇತ್ರವಾನ್ನಾಗಿ ಮಾಡಿಕೊಂಡಿದ್ದಾರೆ.

ಕುಟುಂಬ ವಿವರ ಮತ್ತು ಕಾಲ :

ರಾಚಯ್ಯ ಮತ್ತು ಮಾಹಾದೇವಮ್ಮನವರ ಮಗನಾಗಿ ಇವರು ಕ್ರಿ.ಶ.೧೮೮೨ರಲ್ಲಿ ಜನಿಸಿದರೆಂದು ಅನೇಕ ಬರಹಗಾರರು ಹೇಳುವಲ್ಲಿ ಸಂದೇಹವಿಲ್ಲ. ಇವರು ಗೂಡೂರಿನಲ್ಲಿರುವಾಗ 'ಡೋಗಿಬರ'ಕಾಣಿಸಿಕೊಂಡ ಬಗ್ಗೆ ಅನೇಕ ಲೇಖಕರರು ಉಲ್ಲೇಖಿಸಿದ್ದಾರೆ (ಹಸಿವಿನಿಂದ ಸತ್ತವರ ಬುರುಡೆಗಳು ಸೂರೆಯಾಗಿ ಬಿದ್ದ ಕ್ಷಾಮವೇ ಡೋಗಿಬರ.)ಇದು ಕ್ರಿ.ಶ..೧೯೦೦ರಲ್ಲಾಯಿತೆಂಬುದನ್ನು ಗಮನಿಸಿದರೆ೧ ಇವರ ತರುವಾಯ ಡೋಗಿಬರ ಕಾಣಿಕೊಂಡಿದೆ ಎಂಬುದು ತಿಳಿದು ಬರುತ್ತದೆ.

ಡಾ : ಸೊಪ್ಪಿಮಠರವರು ಇವರ ಜೀವನ ಕುರಿತು ಬರೆಯುತ್ತ ಇವರು ಹುನಗುಂದ ತಾಲೂಕಿನ ಗೂಡೂರಿನವರೆಂಬುದಾಗಿ ಹೇಳಿ ಡೋಗಿಬರದಿಂದ ಇವರ ತಂದೆ ತಾಯಿಗಳು ಮಗನನ್ನು ಇಳಕಲ್ ಸ್ವಾಮಿಗಳಿಗೆ ನೀಡಿದಾಗ ಅವರು ಬಸವಲಿಂಗನಿಗೆ ತಮ್ಮಲ್ಲಿ ಆಶ್ರಯ ನೀಡಿ ಲಿಂಗಸೂಗೂರು ಸಾವಿರ ದೇವರ ಮಠಕ್ಕೆ ಮರಿದೇವರು ಬೇಕೆಂಬ ವಿಚಾರ ಬಂದಾಗ ಆಗ ಪೀಠಸ್ಥರಾಗಿದ್ದ ಶ್ರೀ ಪಂಚಾಕ್ಷರಿ ಸ್ವಾಮಿಗಳ ವಶಕ್ಕೆ ಇವರನ್ನು ಒಪ್ಪಿಸಿ ಹರಿಸಿದರಂತೆ ಮುಂದೆ ಪಂಚಾಕ್ಷರಿ ಸ್ವಾಮಗಳ ಮಾರ್ಗದರ್ಶನದಲ್ಲಿ ಯೋಗ್ಯಸ್ವಾಮಿಯಾಗಿ ಬೆಳೆದು ನಿಂತ ಬಸವಲಿಂಗರು ತಮ್ಮ ಗುರುಗಳ ನಂತರ ನಡೆದ ಮತ ಭೇದದಿಂದಾಗಿ ಲಿಂಗಸೂಗೂರು ಮಠಕ್ಕೆ ಸ್ವಾಮಿಯಾಗುವ ಅವಕಾಶ ಸಿಗದೇ ಶಾಖಾಮಠವಾದ ನೀರಲಕೇರಿ ಮಠಕ್ಕೆ ಪಟ್ಟವಾಗಿ ಬಂದರು. ೨ ಇದೇ ರೀತಿ ಯ ಅಭಿಪ್ರಾಯ ಡಾ : ಸಬರದ ೩ ವ್ಯಕ್ತಪಡಿಸಿದ್ದಾರೆ. ಇವರಿಗಿಂತ ಭಿನ್ನವಾದ ವಿಚಾರ ಗುರುಬಸಯ್ಯ ಅಮ್ಮಾಪುರ ಹೇಳುತ್ತಾರೆ. ' ಶಿವಾನುಭ ಚರವರ್ಯರಾದ ಇಳಕಲ್ ಮಹಾಂತ ಸ್ವಾಮಿಗಳು ಶಿವಾನುಭವ ಪ್ರಚಾರಕಾರ್ಯಕ್ಕೆ ಬಸವಲಿಂಗನೊಡನೆ ಲಿಂಗಸೂಗೂರಿಗೆ ಆಗಮಿಸುತ್ತಾರೆ. ಅಲ್ಲಿಯ ಸಾವಿರ ದೇವರ ಮಠದ ಭಕ್ತರ ಕೋರಿಕೆಯಂತೆ ಆ ಮಠಕ್ಕೆ ಬಸವಲಿಂಗನನ್ನು ಉತ್ತರಾಧಿಕಾರಿಯನ್ನಾಗಿ ಮಾಡಿ ಆ ಮಠದ ಪಂಚಾಕ್ಷರಿ ಸ್ವಾಮಿಗಳ ಕರ ಕಮಲಗಳಲಿಂದ ದೀಕ್ಷೆ ಕೊಡಿಸುತ್ತಾರೆ. ೪

ಚೆನ್ನ ಮಲ್ಲಿಕಾರ್ಜುನವರು ಹೇಳುವ ರೀತಿ ಹೀಗೆ 'ಇವರು ಗೂಡೂರು ಗ್ರಾಮದ ವೀರ ಮಹೇಶ್ವರ ದಂಪತಿಗಳ ಮಗನಾಗಿ ಕ್ರಿ.ಶ.೧೮೮೨ರಲ್ಲಿ ಜನಸಿ ಬಾಲ್ಯದಲ್ಲಿ ಧರ್ಮ-ದೇವರುಗಳ ಬಗ್ಗೆ ಆಸಕ್ತಿವಹಿಸಿ ಎಂಟು ವರುಷಗಳಾಗಿದ್ದಾಗ ಲಿಂಗ ದೀಕ್ಷೆ ಪಡೆದರು. ಆ ಸಂದರ್ಭದಲ್ಲಿ ಯಾವಗಲ್ ಗ್ರಾಮದ ಮಠಾಧಿಪತಿಗಳ ಅನುಮತಿಯಂತೆ ಗೂಡೂರು ಗ್ರಾಮದಲ್ಲಿರುವ ಯಾವಗಲ್ ಮಠದ ಉಸ್ತುವಾರಿ ನೋಡಿ ಕೊಳ್ಳುತ್ತ ದಾಸೋಹ ಕಾರ್ಯದಲ್ಲಿ ನೀರತರಾಗಿದ್ದರು. ಮಠಕ್ಕೆ ಬರುವ ಭಕ್ತರಿಗೆಲ್ಲ ಲಿಂಗತತ್ವದ ಬೋಧೆಯನ್ನು ಬಾಲಕ ಬಸವಲಿಂಗ ಶರಣರು ಬೋಧಿಸುತ್ತಿದ್ದರು. ಬಾಲ್ಯದಲ್ಲಿಯೇ ಅನೇಕಗಹನ ವಿಚಾರಗಳನ್ನು ಕುರಿತು ಗುರುಗಳೊಂದಿಗೆ ಚರ್ಚಿಸುತ್ತಿದ್ದರು. ಮುಂದೆ ಮದುವೆಯನ್ನು ತಿರಸ್ಕರಿಸಿ , ವಿರಕ್ತನ ಬಾಳಿಗೆ ತಮ್ಮನ್ನು ಸಮರ್ಪಸಿಕೊಂಡರು. ಹೀಗಿರುವಾಗ ಡೋಗಿಬರ ಕಾಣಿಸಿಕೊಂಡು ಇವರ ತಂದೆ ತಾಯಿ ಸತ್ತರು. ಅವರ ತರುವಾಯ ಮಠದ ಜವಾಬ್ದಾರಿ ಹೊತ್ತ ಇವರು ಬೋಧನೆಗೆ ಜೀವನ ಮಿಸಲಿಟ್ಟರು. ಇವರ ಪ್ರಸಿದ್ಧಿ ಸಹಿಸದ ಕೆಲವರು ಯಾವಗಲ್ ಸ್ವಾಮಿಗಳಿಗೆ ಚಾಡಿ ಹೇಳಿ ಇವರನ್ನು ಮಠದಿಂದ ಹೊರ ಹಾಕಿಸಿದರು. ನಂತರ ಇವರು ಅನೇಕ ಊರು ತಿರುಗುತ್ತ ಇಳಕಲ್‌ನ ಸ್ವಾಮಿಗಳಲ್ಲಿ ಬಂದು ಆಶ್ರಯ ಪಡೆದರು. ಮುಂದೆ ಇವರು ಇಳಕಲ್ ಸ್ವಾಮಿಗಳೊಡನೆ ಲಿಂಗಸೂಗೂರಿಗೆ ಬಂದು ಕುಲ ಗುರುಗಳಾದ ಸಾವಿರ ದೇವರ ಮಠದ ಪಂಚಾಕ್ಷರಿ ಸ್ವಾಮಿಗಳಲ್ಲಿ ಆಶ್ರಯ ಪಡೆದರು. ೫'

ಇವರನ್ನು ಲಿಂಗಸೂಗೂರಿನ ಸ್ವಾಮಿಗಳಿ ಒಪ್ಪಿಸಿದಾಗ ಹದಿನಾರು ವರ್ಷ ಆಗಿತ್ತೆಂದು ನೀರಲಕೇರಿ ಪಟ್ಟಕ್ಕೆ ಬಂದಾಗ ಇಪ್ಪತ್ತೈದು ವರ್ಷವಾಗಿತ್ತೆಂದು ಮಲ್ಲಿಕಾರ್ಜುನ ಅಭಿಪ್ರಾಯ ಪಡುತ್ತಾರೆ೬

---

೧ : ಡಿ.ಟಿ.ಜೋಶಿ - ಆ.ಭಾ.ಇ. ಪುಟ ೨೦೪

೨ : ಸಂ : ಡಾ : ಬಸವಲಿಂಗ ಸೊಪ್ಪಿಮಠ ಪ್ರಸ್ತಾವನೆ ಪುಟ ೬

೩ : ಡಾ : ಬಸವರಾಜ ಸಬರದ - ರಾ. ಜಿ.ಅ.ಕ.- ಪುಟ ೨೪

೪ : ಆಯ್ಕೆ : ಗುರುಬಸಯ್ಯ ಅಮ್ಮಾಪುರ ಪ್ರಸ್ತಾವನೆ ಪುಟ ,

೫ : ಸಂ : ಡಾ : ಬಸವಲಿಂಗ ಸೊಪ್ಪಿಮಠ-ಸೂಗೂರ ಸಂಪದ-ಪುಟ ೭೨-೭೩(ಎರಡನೇ ಕಾಲಂ)

೬ : ಅದೇ ಪುಟ ೭೩ (೧ ಮತ್ತು ೨ ನೇ ಕಾಲಂ)

ಇದುವರೆಗಿನ ಅಭಿಪ್ರಾಯ ಗಮನಿಸಿದರೆ:

ಕ್ರಿ.ಶ.೧೮೨೧ರಲ್ಲಿ ಜನಿಸಿದ ಇವರು ತಮ್ಮ ಊರಿನಲ್ಲಿರುವಾಗಲೇ ಯಾವಗಲ್ ಮಠ ದ ಸಂಪರ್ಕಕ್ಕೆ ಬಂದ ಕಾರಣ ಸಹಜವಾಗಿ ಆಧ್ಯಾತ್ಮ ದ ಕಡೆಗೆ ಮನಸ್ಸು ವಾಲಿರಬೇಕು. ಮುಂದೆ ಎಂಟು ವರುಷ ಅಂದರೆ ಕ್ರಿ.ಶ.೧೮೨೦ ರಲ್ಲಿ ಲಿಂಗದೀಕ್ಷೆಯಾದ ಬಳಿಕ ಇವರು ಮಠದಲ್ಲಿಯೇ ತಂದೆಯೊಡನೆ ಕಾರ್ಯನಿರತರಾಗುತ್ತ ರೆ.ಮುಂದೆ ಮಠದ ಜವಾಬ್ದಾರಿ ಹೊತ್ತು ಕುತಂತ್ರಿಗಳಿಂದ ದೂರವಾಗಿ ಇಳಕಲ್ ಶ್ರೀಗಳ ಸಂಪರ್ಕಕ್ಕೆ ಬಂದಾಗ ಹದಿನಾರು ವರ್ಷಆಗಿತ್ತೆಂಬುದು ಗಮನಿಸಿದರೆ ಕ್ರಿ.ಶ.೧೮೨೦ ಆಗುತ್ತದೆ. ಮುಂದೆ ನೀರಲಕೇರಿ ಪಟ್ಟಕ್ಕೆ ಬಂದಾಗ ಇಪ್ಪತ್ತೈದು ವರ್ಷ ಎಂದು ಗಮನಿಸಿದರೆ ಕ್ರಿ.ಶ.೧೮೩೭ ಆಗುತ್ತ ದೆ. ಬಹುಶ: ಡೋಗಿಬರ ಎರಡು ಸಲ ಕಂಡಿರಬೇಕು. ಮೊದಲ ಡೋಗಿ ಬರದ ಬಗ್ಗೆ ನಮಗೆ ಮಾಹಿತಿ ಇಲ್ಲ. ಆದರೂ ಕ್ರಿ.ಶ.೧೮೬೩-೬೪ ರಲ್ಲಿ ಒಂದು ಕ್ಷಾಮದ ಸೂಚನೆಇದೆ. ಇದನ್ನು ಒಪ್ಪುವುದು ಕಷ್ಟ . ಏಕೆಂದರೆ ಈ ಹೊತ್ತಿಗೆ ಇವರಿಗೆ ೬೧ ವರ್ಷ ವಾಗಿತ್ತೆಂದು ತಿಳಿದು ಬರುತ್ತದೆ. ಆ ಕಾರಣದಿಂದ ಇವರು ಗೂಡೂರಿನಲ್ಲಿರುವಾಗ ಮದುವೆಯಾಗದೇ ವಿರಕ್ತರಾಗಿ ಸ್ವಾಮಿಯಾದಾಗ ಹಲವು ಅಪವಾದಗಳು ಬಂದು ಊರನ್ನು ಬಿಟ್ಟು ದೇಶಾಂತರಕ್ಕೆ ಹೊರಟಾಗ ಮಗನ ಚಿಂತೆಯಲ್ಲಿ ತಂದೆ ತಾಯಿಗಳು ನಿಧನರಾಗಿರಬೇಕು. ಇದು ಕ್ರಿ.ಶ. ೧೮೨೮ ಆಗಿರುವ ಸಾಧ್ಯತೆ ಇದೆ. ಇದೇ ಅವಧಿಯಲ್ಲಿ ಇಳಕಲ್ ಶ್ರೀಗಳನ್ನು ಭೇಟಿಯಾಗಿರಬೇಕೆನಿಸುತ್ತದೆ. ಡೋಗಿಬರದಿಂದ ತಂದೆ ತಾಯಿಗಳು ಸತ್ತರೆಂಬುದು ಸಮರ್ಪಕವಾಗಿಲ್ಲ. ಡೋಗಿಬರ ಕಾಣಿಸಿಕೊಳ್ಳುವುದು ಕ್ರಿ.ಶ. ೧೯೦೦ರಲ್ಲಿ

ಮುಂದೆ ಇವರು ನೀರಲಕೇರಿ ಪಟ್ಟಕ್ಕೆ ಬರುವ ಹೊತ್ತಿಗೆ ಕ್ರಿ.ಶ.೧೮೩೭ ಆಗಿತ್ತು. ಎಂಬುದು ಗಮನಿಸಿದರ್ರೆ ವರ್ಷಗಳ ಕಾಲ ಗುರುಗಳ ಸೇವೆಯಲ್ಲಿದ್ದು ಸಾಕಷ್ಟು ವಿಚಾರ ತಿಳಿದು ಅವರನಂತರ ಪಟ್ಟಕ್ಕೆ ಬಂದು , ಆತರುವಾಯ ತಮ್ಮ ತತ್ವ-ಸಿದ್ಧಾಂತಗಳನ್ನು ಹಾಡಾಗಿ ಪರಿವರ್ತಿಸಿದರೆಂದು ಕಂಡು ಬರುತ್ತದೆ.

'ಘನಮಠರೊ ಡನೆ ಇವರ ಭೇಟಿ ನಡೆದಿತ್ತೆಂಬುದನ್ನು ಪುರಾಣಗಳು ಉಲ್ಲೇಖಿಸುತ್ತವೆ. ೧ ಜೊತೆಗೆ ಘನಮಠದಾರ್ಯರು ಹಾದಿಯಲ್ಲಿ ಎಮ್ಮೆ ಮೇಯಿಸುತ್ತ ನಿಂತಿದ್ದ ಇವರನ್ನು ಅರಿಯದಾಗಿ ಅಥವಾ ಅರಿತೋ ' ಏನಿದು ಉದ್ಯೋಗ' ಎಂದು ಕೇಳಿದ್ದಾರೆ. ಅದಕ್ಕೆ ಉತ್ತರವಾಗಿ ಎಂಬಂತೆ ' ತಮ್ಮ ಕೇಳೋ ಎನ್ನ ಉದ್ಯೋಗ ತಮ್ಮ ಕೇಳೋ ಎನ್ನ ವ್ಯವಹಾರ ಹಮ್ಮ ನಳಿದು ಪರಬ್ರಹ್ಮ ಚಿಂತೆಯೊಳು ಸುಮ್ಮನಿರುತ ಎರಡೆಮ್ಮೆಯ ಕಾಯುತೀನಿ' ಎಂಬ ಪದ್ಯ ಇವರಿಂದ ರಚನೆಯಾಯಿತು ಎಂಬ ಪ್ರತೀತಿ ಇದೆ. ' ೨ ಎಂಬುದಾಗಿ ಸೊಪ್ಪಿಮಠ ಹೇಳುತ್ತಾರೆ. ಹಾಗಾಗಿ ಘನಮಠದ ಕಾಲ ಕ್ರಿ.ಶ. ೧೮೨೮ ಅಥವಾ ೧೮೩೦ ಅವಧಿ ಎಂಬ ಅಭಿಪ್ರಾಯ ಇರುವ ಹಿನ್ನೆಲೆಯಲ್ಲಿ ಗಮನಿಸಿದರೆ೩ , ನಿಸ್ಸಂದೇಹವಾಗಿ ಇವರು ಕ್ರಿ.ಶ.೧೮೨೮ಕ್ಕೆ ಮುಂಚೆ ಜನಿಸಿದರೆಂಬುದು ಸ್ಪಷ್ಟವಾಗಿದೆ. ಹಾಗಾಗಿ ಕ್ರಿ.ಶ ೧೮೧೨ ಬಹುತೇಕರು ಅಭಿಪ್ರಾಯಪಟ್ಟದ್ದು ಸಮರ್ಪಕವಾಗಿದೆ. ೯ :೪:೧೯೬೩ ರಂದು ಇವರ ಶತಮಾನೋತ್ಸವ ಆಚರಿಸಿದ್ದನ್ನು ಗಮನಿಸಿದರೆ ಇವರು ಕ್ರಿ.ಶ. ೧೮೬೨ ರಲ್ಲಿ ಐಕ್ಯರಾಗಿದ್ದಾರೆಂಬುದು ಸಂದೇಹವಿಲ್ಲ. ಈ ಕಾಲವನ್ನು ' ಶ್ರೀ ಮುಖ ಸಂವತ್ಸರ ಶ್ರಾವಣ ಮಾಸದ ಶುಕ್ಲ ಪಕ್ಷ ಸೋಮವಾರ ದಶಮಿ ತಿಥಿ' ಎಂಬುದಾಗಿ ಅಮ್ಮಾಪುರ ಹೇಳುತ್ತಾರೆ. ೪

ಪ್ರತಿ ವರ್ಷ ಶ್ರಾವಣ ಮಾಸ ಶುಕ್ಲ ಪಕ್ಷ ದಶಮಿಯಂದು ಇವರ ಉತ್ಸವ ನಡೆಯುತ್ತಿರುವುದು ಮತ್ತಷ್ಟು ಸಮರ್ಥಿಸುತ್ತದೆ.ಇವರು 'ಐದನಾಳ' ಗ್ರಾಮದಲ್ಲಿ ಐಕ್ಯರಾಗಿದ್ದು ಅಲ್ಲಿಯೇ ಇವರ ಸಮಾಧಿ ಇದೆ.

ಕೃತಿ ಮತ್ತು ವ್ಯಕ್ತಿತ್ವ :

ಇವರು ನೀರಲಕೇರಿ ಮಠದ ಅಧಿಪತಿಗಳಾಗುವ ಮುಂಚೆ ಆಧ್ಯಾತ್ಮ ದ ಬಗ್ಗೆ ಸ್ವಾಮಿಗಳಿಂದ ಅನೇಕ ವಿಚಾರಗಳನ್ನು ತಿಳಿದು ಕೊಂಡಿದ್ದರು. ಮಠಾಧಿಪತಿಯಾದ ಮೇಲೆ ಇವರು ತತ್ವ ಪದಗಳನ್ನು ರಚಿಸಿರಬೇಕು. ಇವರ ಹಾಡುಗಳ ಅಂಕಿತನಾಮ ' ಗಡಿಯ ನೀರಲಕೇರೆ ಒಡೆಯ ಪಂಚಾಕ್ಷರ' ಎಂಬುದಾಗಿ ತಿಳಿದು ಬರುತ್ತದೆ. ಇವರ ತತ್ವ ಪದಗಳ ಸಂಖ್ಯೆ ಅಂದಾಜು ೫೦೦ ದಾಟಿದ್ದರು ಸದ್ಯ ದೊರೆತವು೧೮೦ ಎಂಬುದಾಗಿ ಸೊಪ್ಪಿಮಠ ಹೇಳುತ್ತಾರೆ. ೫ಮೊದಲ ಬಾರಿಗೆ೧೯೫೪ ರಲ್ಲಿ 'ಜ್ಞಾನ ಗೀತ' ಎಂಬ ಹೆಸರಿನಲ್ಲಿ ೧೮೫ ಪದ್ಯಗಳನ್ನು ಕೆಂಬಾವಿ ಗುರುಲಿಂಗಾರ್ಯ ಪ್ರಕಟಿಸಿದ್ದಾರೆ. ಮತ್ತೇ ಸೊಪ್ಪಿಮಠರು ೧೮೦ ಪದ್ಯಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಇವರ ಹಾಡುಗಳಲ್ಲಿ ಆತ್ಮ ವಿಮರ್ಶೆ, ಪರಮತ ಸಹಿಷ್ಣುತೆ, ಸಾಮಾಜಿಕ ವಿಮರ್ಶೆ ಕಂಡುಬರುತ್ತದೆ. ಸರಳವಾಗಿ ಆಧ್ಯಾತ್ಯ ವಿಚಾರಗಳನ್ನು ತಿಳಿಸುತ್ತಾರೆ.

ಆರಂಭದಿಂದಲೂ ಅನೇಕ ಕಷ್ಟ ಅನುಭವಿಸಿ ಸಹನೆಯಿಂದ ಎಲ್ಲವನ್ನು ಎದುರಿಸಿದರು. ಕಷ್ಟವನ್ನು ಹಾಡಾಗಿ , ಆಧ್ಯಾತ್ಮವಾಗಿ ಪರಿವರ್ತಿಸಿದರು. ರಾನಡೆಯವರ ' ಕನ್ನಡ ಸಂತರ ಪರಮಾರ್ಥ' ಎಂಬ ಗ್ರಂಥದಲ್ಲಿ ಇವರ ಹಾಡನ್ನು ಬಳಸಿಕೊಂಡದನ್ನು ಗಮನಿಸಿದರೆ ಇವರ ಮಹತ್ವ ಅರಿವಾಗುತ್ತದೆ. ಇವರು ತತ್ಕಾಲೀನ ಸಮಸ್ಯೆಗಳ ಬಗ್ಗೆ ಚಿಂತಿಸಿ, ಹಾಡಿದ್ದನ್ನು ಗಮನಿಸುವ ಮೂಲಕವೇ ನಾವು ಇವರ ವ್ಯಕ್ತಿತ್ವನ್ನು ಕಾಣಬಹುದು. ಶಿವ ಮತ್ತು ಶಕ್ತಿಗಳ ಸಮನ್ವಯತೆಯನ್ನು ಸಾಧಿಸಿ ಬಸವೋತ್ತರ ಯುಗದ ಶ್ರೇಷ್ಠ ಶರಣಾಗಿದ್ದಾರೆ.

---

೧ : ಅಮರಾನಥ ಶಾಸ್ತ್ರಿ -ಶ್ರೀ .ಘ.ಶಿ.ಪು.ಸಂಧಿ೧೫,ಪದ್ಯ ೬೭-೮೩, ಪುಟ ೨೦೭-೨೧೦

೨ : ಸಂ:ಡಾ: ಬಸವಲಿಂಗ ಸೊಪ್ಪಿಮಠ- ನೀ.ಬ.ಶಿ.ಸ್ವ.ಪ್ರಸ್ತಾವನೆ ಪುಟ೯

೩ : ಇದೆ: ಪ್ರಬಂಧದ ಪುಟ ೧೦೨-೧೦೪ಗಮನಿಸಿರಿ

೪ : ಆಯ್ಕೆ ಗುರುಬಸವಯ್ಯ ಅಮ್ಮಾಪುರ -ನೀ.ಬ. ಪ್ರಸ್ತಾವನೆ ಪುಟ viii

೫ : ಸಂ : ಡಾ ಈ ಬಸವಲಿಂಗ ಸೊಪ್ಪಿಮಠ- ಪ್ರಸ್ತಾವನೆ ಪುಟ೬ -

೯ : ಘನ ಮಠ ನಾಗಭೂಷಣ ಶರಣರು

[illegible]ಯುವ : ನಮ್ಮ ದೇಶದ ಮೂಲ ಬೇಡಿಕೆಯಾದ ಅನ್ನ ಸಮಸ್ಯೆಯನ್ನು ಅರಿತುಕೊಂಡು ಅನ್ನ ದಾತನ ಬಾಳು ಹಸನಾದರೇ ಜಗದ ಬಾಳೆಲ್ಲ ಹಸನಾಗಬಲ್ಲುದು ಎಂಬುದನ್ನು ತಮ್ಮ ವಿಚಾರಗಳ ತಿಳಿಸುತ್ತ ಲೌಕಿಕೋದ್ಧಾರ ಜೊತೆಗೆ ಅಲೌಕಿಕ ಜ್ಞಾನವನ್ನು ನೀಡುತ್ತಾ, ಜಗವೆಲ್ಲ ಸುತ್ತಿದ ಜಂಗಮ ಶ್ರೇಷ್ಠ - ಅವಿರಳ ಜ್ಞಾನಿ ಘನಮಠನಾಗಭೂಷಣ ಶರಣರಾಗಿದ್ದಾರೆ.

ಸ್ಥಳ :

ಇವರು ವೀರಶೈವ ಕವಿ ಇವರ ಜನ್ಮ ಸ್ಥಾನ ಬಳ್ಳಾರಿ ಜಿಲ್ಲೆಯಾದರೂ ತಮ್ಮ ಆಯುಷ್ಯವನ್ನು ಹುನಗುಂದದಲ್ಲಿ ಕಳೆದರು ಎಂಬುದಾಗಿ ಕವಿ ಚರಿತೆಕಾರರು ಅಭಿಪ್ರಾಯ ಪಡುತ್ತಾರೆ ೧.

'ಶಿವನ ಚಿತ್ಕಳೆಯೊಂದು ಆಂಧ್ರ ದೋ।

ಳವನಿಯೊಳ ದಾರೂರ ಗ್ರಾಮದ।' ಎಂದು ಅಮನಾಥ ಶಾಸ್ತ್ರಿ ಅಭಿಪ್ರಾಯ ಪಡುತ್ತಾರೆ.

ಶ್ರೀ ಘನಮಠೇಶರು ತೆಲಗು ರಾಜ್ಯದ ಅತ್ತಾಪಲಿಲ್ದಾ ಜಿಲ್ಲೆಯ ಪಟ್ಲೂರ ತಾಲೂಕ ದೋರ್ವಾಡವೆಂಬ ಚಿಕ್ಕ ಹಳ್ಳಿಯಲ್ಲಿ ಜನ್ಮಿಸಿದರೆಂಬ ಅಭಿಪ್ರಾಯ ಬಿ.ಎಂ. ಹಿರೇಮಠ-ಮಾಮನಿ ಯವರದಾಗಿದೆ. ೩

ಘನಮಠದ ನಾಗಭೂಷಣರು ಆಂಧ್ರ ಪ್ರದೇಶದ ಈಗಿನ ಹೈದ್ರಾಬಾದ್ ಜಿಲ್ಲೆಯ (ಅತ್ರಾಪ್ ಬಲ್ದಾ) ಪಟ್ಲೂರು ತಾಲೂಕಿನ ದೋರ್ವಾಡ ವೆಂಬ ಗ್ರಾಮದಲ್ಲಿ ಜನಿಸಿದರೆಂದು ಸಬರದ ಹೇಳುತ್ತಾರೆ. ೪

ತ್ರಿಲಿಂಗ ದೇಶಎಂದು ಪ್ರಸಿದ್ಧಿ ಪಡೆದಿದ್ದ ಆಂಧ್ರ ಪ್ರದೇಶದ ಅತ್ರಾಪ ಬಲ್ದ ಜಿಲ್ಲೆಯ ಪಟ್ಲೂರು ತಾಲೂಕ ದಾರೂರು ಎಂಬು ಗ್ರಾಮದಲ್ಲಿ ಜನಿಸಿದರು ಎಂಬುದಾಗಿ ಸಿ.ಶರಣಪ್ಪ ಹೇಳುತ್ತಾರೆ ೫

ಇಂದಿನ ಆಂಧ್ರದ ರಂಗಾರೆಡ್ಡಿ ಜಿಲ್ಲೆಯ ದಾರೂರಿನವರೆಂಬುದು ಸವದತ್ತಿ ಮಠ ಹೇಳುತ್ತಾರೆ. ೬

ಇದುವರೆಗಿನ ಹೇಳಿಕೆ ಗಮನಿಸಿದರೆ ಕವಿಚರಿತೆ ಕಾರರನ್ನು ಬಿಟ್ಟು ಉಳಿದವರೆಲ್ಲರ ಅಭಿಪ್ರಾಯದಲ್ಲಿ ಸಮಾನತೆ ಇದೆ. ಇವರು ಆಂಧ್ರದ ರಂಗಾರೆಡ್ಡಿ ಜಿಲ್ಲೆಯ ದಾರೂರಿನವರೆಂಬುದು ಬಹು ಸಮರ್ಪಕವಾಗಿದೆ ಇದನ್ನು ಸವದತ್ತಿ ಮಠಆಧಾರ ಸಹಿತ ಗುರುತಿಸಿ ದಾರೂರಿನಲ್ಲಿಯ 'ಪೆದ್ದ ಮಠ' ಇವರಿಗೆ ಸಂಬಂಧಿಸಿದ್ದು ಎಂಬುದಾಗಿ ಹೇಳುವ ವಿಚಾರ ಗಮನಾರ್ಹವಾಗಿದೆ. ೭

ಕಾಲ :

ಇವರ ಕಾಲದ ಬಗ್ಗೆ ವಿವಿಧ ಅಭಿಪ್ರಾಯಗಳಿವೆ.

ಜನನದ ಕಾಲ : ಇವರ ಜನನ ಕ್ರಿ.ಶ.೧೮೨೯ ಅಂದರೆ ಶಾಲಿವಾಹನ ಶಕೆ ೧೭೫೧ ಎಂಬುದಾಗಿ ಹಿರೇಮಠ - ಮಾಮನಿ ತಿಳಿಸಿದರೆ, ೮ ಹಿರೇಮಠ ಮತ್ತೊಂದು ಲೇಖನದಲ್ಲಿ ಕ್ರಿ.ಶ. ೧೮೨೮ ವಿರೋಧಿ ಸವಂತ್ಸರ ಅಶ್ವೀಜ ಶುದ್ಧ ಮಂಗಳವಾರ ಎಂದಿದ್ದಾರೆ. ೯ ಕವಿಚರಿತೆ ಕಾರರು ೧೮೩೦ ಎಂದರೆ ೧೦ ಸಬರದ ೧೮೨೦ - ೧೮೨೮ ಎಂದಿದ್ದಾರೆ

---

೧ : ಆರ್.ನರಸಿಂಹಾಚಾರ್-ಕ.ಚ.ಸಂ. ಸಂಪುಟ ೩ , ಪುಟ ೧೮೩

೨ : ಅಮರನಾಥ ಶಾಸ್ತ್ರಿ-ಶ್ರೀ.ಘ.ಶಿ.ಪು.-ಸಂಧಿ ೨-ಪದ್ಯ ೩೪, ಪುಟ ೧೬

೩ : ಬಿ..ಎಂ. ಹಿರೇಮಠ ಮತ್ತು ಮಾಮನಿ-ಘ.ಮ.ಘ.ಪುಟ ೬

೪ : ಡಾ : ಬಸವರಾಜ ಸಬರದ - ರಾ.ಜಿ.ಅ.ಕ.-ಪುಟ ೨೬

೫ : ಸಿ. ಶರಣಪ್ಪ - ಕೃ.ಘ.ಶಿ.-ಪುಟ ೩ (ಉಪನ್ಯಾಸ ಮಾಲೆ ಗ್ರಂಥ)

೬ : ಡಾ: ಸಂಗಮೇಶ ಸವದತ್ತಿಮಠ - ವೀ.ವಿ.-ಪುಟ೯೨

೭ : ಅದೇ : ಪುಟ೯೩-೯೭

೮ : ಬಿ.ಎಂ. ಹಿರೇಮಠ - ಮಾಮನಿ-ಘ.ಮ.ಘ.ಪುಟ ೬

೯ : ಸಂ: ಡಾ : ಬಸವಲಿಂಗ ಸೊಪ್ಪಿಮಠ-ಸೂಗೂರ ಸಂಪದ ಪುಟ ೭೭

೧೦ : ಆರ್. ನರಸಿಂಹಾಚಾರ್-ಕ.ಚ.ಸಂ.ಸಂಪುಟ ೩-ಪುಟ ೧೮೩

೧೧ : ಬಸವರಾಜ ಸಬರದ - ರಾ.ಜಿ.ಅ.ಕ.ಪುಟ ೨೬

‘ ಶಾಲಿವಾಹನ ಶಕೆಯು ಹದಿನೇಳ್ ।

ಮೇಲೆ ಐವತ್ತೊಂದು ನೂರಕೆ ।

ಕಾಲ ಸಂವತ್ಸರ ವಿರೋಧಿಯ ಅಶ್ವೀಯುಜ ಶುದ್ಧ ॥

ಕಾಲ ತಿಥಿ ಪಂಚಮಿಯ ಶುಭದಾ ।’ ೧ಎಂಬುದಾಗಿ ಅಮರನಾಥ ಶಾಸ್ತ್ರಿ ಅಭಿಪ್ರಾಯ ಪಡುತ್ತಾರೆ. (ಅಂದರೆ ಕ್ರಿ.ಶ.೧೮೩೦)

ಕ್ರಿ.ಶ.೧೮೨೯ ಎಂದು ಶರಣಪ್ಪ ೨, ಕ್ರಿ.ಶ.೧೮೨೮ ಎಂದು ಹಾವನೂರು , ಕ್ರಿ.ಶ.೧೮೨೬ ಎಂದು ಹಳಕಟ್ಟಿ , ಕ್ರಿ.ಶ.೧೮೨೯ ಎಂದು ವಚನಕಾರ ಯಲ್ಲಪ್ಪ ,ಇವರೆಲ್ಲರ ಅಭಿಪ್ರಾಯ ಚರ್ಚಿಸಿ ಕೆ. ಶಶಿಕಾಂತ ಕ್ರಿ.ಶ.೧೮೨೯ ಸಮರ್ಪಕವೆಂದಿದ್ದಾರೆ. ೩ ಕ್ರಿ.ಶ . ಎಂದು ತತ್ವ ಪದಗಳ ಪ್ರಾತಿನಿಧಿಕ ಸಂಕಲನೊಂದಿದಗೆ ಹೇಳಲಾಗಿದೆ. ೪ಕ್ರಿ.ಶ.೧೮೨೬ ಎಂಬುದಾಗಿ ಶಾಂತವೀರಯ್ಯ ಹೇಳುತ್ತಾರೆ. ೫-ಈ ಎಲ್ಲಾ ಹೇಳಿಕೆ ಗಮನಿಸಿದರೆ ಕವಿಚರಿತೆ ಕಾರರು ಕ್ರಿ.ಶ.೧೮೩೦ ಎಂದಿರುವುದು ತಪ್ಪಿಲ್ಲವಾದರೂ ಕ್ರಿ.ಶ. ೧೮೨೬ ಎಂಬುದನ್ನು ಇವರ ಕಾಲವಾಗಿ ಒಪ್ಪಲಾಗದು . ಅಂತೆಯೇ ಇವರ ಕಾಲವನ್ನು ಕ್ರಿ.ಶ.೧೮೨೯ ಎಂದು ಗುರುತಿಸುವುದೇ ಬಹು ಸೂಕ್ತವಾಗಿದೆ.

ಲಿಂಗೈಕ್ಯ ಕಾಲ :

‘ ಶಾಲಿವಾಹನ ಶಕೆಯಗಣಿತದ।

ಕಾಲ ಹದಿನೆಂಟ್ನೂರು ಅಂಕಿಯ ।

ಮೇಲೆ ಮತ್ತೊಂದಂಕಿ ಸಂವತ್ಸರ ಪ್ರಮಾಥಿಯಲಿ ।।

ಚಾಲನೆಯ ಮಾಸವದು ಪುಷ್ಯದ

ಕಾಲ ಶಶಿ ಪಕ್ಷದೊಳು ಬಂದಿಹ ।

ವೇಳೆಯದು ಶುಭ ಸೋಮವಾರದೊಳವರು ಗಮಿಸಿದರು॥೬ ಎಂಬುದಾಗಿ ಶಾಸ್ತ್ರಿ ಹೇಳಿದರೆ (ಕ್ರಿ.ಶ.೧೮೮೦) ಇದೇ ರೀತಿ ಅಭಿಪ್ರಾಯ ಸಬರದ ಹೇಳಿದರೆ೭ ಬಸವಪ್ಪ ಶಾಸ್ತ್ರಿ ಕ್ರಿ.ಶ.೧೮೮೬ ಎಂದು, ಹಳಕಟ್ಟಿ - ಹಾವನೂರು ಕ್ರಿ.ಶ.೧೮೮೪ ಎಂದು , ಭೂಸನೂರ ಮಠ ಕ್ರಿ.ಶ.೧೮೭೮ ಎಂದು ಹೇಳಿರುವುದನ್ನು ಚರ್ಚಿಸಿದ ಶಶಿಕಾಂತ ಕ್ರಿ.ಶ.೧೮೮೧ ಎಂದು ಅಭಿಪ್ರಾಯ ಪಟ್ಟಿದ್ದಾರೆ. ೮ ಕ್ರಿ.ಶ.೧೮೮೦ ರಲ್ಲಿ ಲಿಂಗೈಕ್ಯರಾದರೆಂದು ಈ ಕಾಲ ಶಾಲಿವಾಹನ ಶಕೆ೧೮೦೨ ಪುಷ್ಯ ಶುದ್ಧ ಅಷ್ಟಮಿ ಬುಧವಾರ ವೆಂದು ಶಾಂತವೀರಯ್ಯ ಹೇಳುತ್ತಾರೆ೯ ಕ್ರಿ.ಶ.೧೮೮೦ಎಂಬುದಾಗಿ ತತ್ವ ಪದಗಳ ಪ್ರಾತಿನಿಧಿಕ ಸಂಕಲನದಲ್ಲಿ ಹೇಳಲಾಗಿದೆ. ೧೦ ಇವರು ೩೦ ವರ್ಷ ನಿರಂತರ ಸಂಚಾರ ಮಾಡಿ ಕ್ರಿ.ಶ.೧೮೭೪ ರಂದು ನಿಧರಾದರೆಂದು ಸವದತ್ತಿ ಮಠ೧೧ ಹೇಳುತ್ತಾರೆ.

ಈ ಎಲ್ಲಾ ಹೇಳಿಕೆ ಗಮನಿಸಿದರೆ ಅಮರನಾಥ ಶಾಸ್ತ್ರಿಗಳುಕ್ರಿ.ಶ.೧೮೮೦ಎಂದಿರುವುದು ಸಂದೇಶವಿಲ್ಲ ವೆನಿಸುತ್ತದೆ. ಹಾಗೇಯೇ ಘನ ಮಠರ ಕೃಷಿಜ್ಞಾನಪ್ರದೀಪಿಕೆ ಕೃತಿಯಲ್ಲಿ ‘ ಶ್ರೀ ನೃಪ ಶಾಲಿವಾಹನ ಶಕೆ ೧೮೦೧ ಪ್ರಮಾಥಿ ನಾಮ ಸಂವಂತ್ಸರ ಮಾಘಶುದ್ಧ ೧೫ ರಲ್ಲಿ ಸಂಪೂರ್ಣಮಾದದುಶ್ರೀಶ್ರೀ ’ ೧೨ ಗಮನಿಸಿದರೆ ಈ ಕೃತಿ ಮುಕ್ತಾಯದ ಕಾಲ ಕ್ರಿ.ಶ. ೧೮೭೯ ಎಂದಾಗುವ ಕಾರಣ ಆ ತರುವಾಯ ಇವರು ಲಿಂಗೈಕ್ಯರಾಗಿರುವ ಸಾಧ್ಯತೆ ಇದೆ.

---

೧ : ಅಮನಾಥ ಶಾಸ್ತ್ರಿ -ಶ್ರೀ .ಘ.ಶಿ.ಪು. ಸಂಧಿ ೨ , ಪದ್ಯ ೪೧, ಪುಟ ೧೭

೨ : ಸಿ.ಶರಣಪ್ಪ -ಕೃ .ಘ.ಶಿ.-ಪುಟ ೩

೩ : ಕೆ. ಶಶಿಕಾಂತ -ಘ.ತ.ಅ.

೪ : ಸಂ : ಶಾಂತರಸ -ತ.ಪ್ರಾ.ಸಂ. ಪುಟ ೫೦೪

೫ : ಸಂ : ಡಾ : ಎಂ. ಚಿದಾನಂದ ಮೂರ್ತಿ ಮತ್ತು ಡಾ : ಸಿ.ಎಂ. ಮಂಜುನಾಥ - ಭೂಷಣ ಪುಟ ೨೬೪

೬ : ಅಮರನಾಥ ಶಾಸ್ತ್ರಿ -ಶ್ರೀ.ಘ.ಶಿ.ಪು. -ಸಂಧಿ ೧೬ ಪದ್ಯ ೧೯, ಪುಟ ೨೩೪

೭ : ಡಾ : ಬಸವರಾಜ ಸಬರದ -ರಾ.ಜಿ.ಅ.ಕ. ಪುಟ ೨೬

೮ : ಕೆ.ಶಶಿಕಾಂತ- ಘ.ತ.ಅ.

೯ : ಸಂ : ಡಾ : ಎಂ .ಚಿದಾನಂದ ಮೂರ್ತಿ ಮತ್ತು ಡಾ : ಸಿ.ಎಂ. ಮಂಜುನಾಥ - ಭೂಷಣ ಪುಟ ೨೬೪

೧೦ : ಸಂ : ಶಾಂತರಸ -ತ.ಪ್ರಾ.ಸಂ. ಪುಟ ೫೦೪

೧೧ : ಡಾ : ಸಂಗಮೇಶ ಸವದತ್ತಿ ಮಠ -ವೀ.ವಿ.ಪುಟ೯೩

೧೨ : ಶ್ರೀ ಘನ ಮಠ ಶಿವಯೋಗಿಗಳು -ಕೃ .ಜ್ಞಾ.ಪ್ರ.ಪುಟ ೩೩೬

ಹಾಗಾಗಿ ಕ್ರಿ.ಶ.೧೮೭೪ ಎಂಬ ಸವದತ್ತಿ ಮಠರ ಸಮರ್ಪಕವಾಗಿದೆ. ಹಾಗೆಯೇ ಇವರು ನೀರಲಕೇರಿ ಬಸವಲಿಂಗ ಶರಣರಿಗಿಂತ ಕಿರಿಯರಾದ ಕಾರಣ ಅವರನಂತರ ಅಂದರೆ ಕ್ರಿ.ಶ.೧೮೭೨ ತರುವಾಯ ಸುಮಾರು ಕನಿಷ್ಟ ಹತ್ತು ವರ್ಷಕಾಲದ ನಂತರ ಐಕ್ಯರಾದರೆಂದು ಭಾವಿಸಿದರೆ ಇವರು ಕ್ರಿ.ಶ. ೧೮೮೨ ರಂದು ಐಕ್ಯರಾದರೆಂದು ತಿಳಿಯುತ್ತದೆ. ಹಾಗಾಗಿ ಹಳಕಟ್ಟಿಯವರು ಕ್ರಿ.ಶ.೧೮೮೪ ಎಂದಿರುವುದು ಬಹು ಸಮೀಪವಾಗಿದೆ.

ಕಾಲ ದೃಷ್ಟಿಯಿಂದ ಇವರ ಅಂತಿಮ ದಿನಗಳ ಬಗ್ಗೆ ಡಾ : ಸವದತ್ತಿ ಮಠರವರು ನೀಡುವ ವಿವರಗಳು ಗಮನಾರ್ಹವಾಗಿವೆ.

' ಇತ್ತೀಚೆಗೆ ಕೃಷಿಜ್ಞಾನ ಪ್ರದೀಪಿಕೆ ಗ್ರಂಥದ ಮತ್ತೊಂದು ಹಸ್ತಪ್ರತಿ ಲಭ್ಯವಾಗಿದ್ದು ಅದು ಕುನ್ನಾಳ ಸಿದ್ಧರಾಮಪ್ಪನ ಹಸ್ತ ಪ್ರತಿಗಿಂತ ಅನೇಕ ರೀತಿಯಲ್ಲಿ ಭಿನ್ನವಾಗಿರುವುದು ನನ್ನ ಗಮನಕ್ಕೆ ಬಂದಿದೆ. ಎಂದು ಹೇಳುತ್ತಾ , ' ಗ್ರಂಥವು ಚಿದ್ಘನಮಠನಿವಾಸ ನಾಗಭೂಷಣ ಮಹಾಸ್ವಾಮಿಗಳ ಆಜ್ಞಾನುಸಾರವಾಗಿ ಸಮಸ್ತ ಸದ್ಭಕ್ತರ ಕಲ್ಯಾಣಾರ್ಥವಾಗಿ ಪ್ರವೃತಿ ಪಕರರ್ಣೆ ಹದಿನಾರು ನಿವೃತ್ತಿ ಪ್ರಕರಣ ಐದು ಇಂತೀ ಇಪ್ಪತ್ತೊಂದು ಪ್ರಕರಣಗಳಿಂದ ಆಯಾಸವಿಲ್ಲದೆ ಖಂಡೆಪ್ಪಾ ಬುಮಕಾದಂ ಚಟ್ನಹಳ್ಳಿ ಪಾಸೋಡಿ ನಂದಿ ಹಳ್ಳಿ ಇವರ ಕಡೆಯಿಂದ ರಚಿಸಲ್ಪಟ್ಟದ್ದು ಖಂಡೆಪ್ಪ ಸಾಮತ ನೆಲ್ಲಿವಿಗಿ ತಾಲೂಕ ಆಲಂದದಲ್ಲಾ ಮೌಜೆನಂದಿಹಳ್ಳಿ ಪಾಸೋಡಿ ಪಾಟೀಲ ಸಂಸ್ಥಾನ ಸುರಪುರ ತಾಲೂಕ ಶಹಾಪುರ ಮೌಜೆಚಟ್ನಾಹಳ್ಳಿ ಮಜುರುಕ ಮಕಾದುಂ ಬಿರೆದಾರ ಗೌಡ ಈತನಿಂದ ರಚಿಸಲ್ಪಟ್ಟು ಕೃಷಿ ಜ್ಞಾನ ಪ್ರದೀಪಿಕೆ ಸಮಾಪ್ತಿ ಮಂಗಲ ಮಹಾಶ್ರೀ ..... ಶಾಲಿವಾಹನಶಕ್ಕೆ ೧೮೨೨ ಪ್ಲವನಾಮ ಸಂವತ್ಸರ ಮಿತಿ ಕಾರ್ತಿಕ ಶುದ್ಧ ಗುರುವಾರ ಲೇಖನಗೊಳಿಸಿದ್ದು ಬರೆದವರು ಯಾರೆಂದರೆ ಜಿಲ್ಲಾ ಲಿಂಗಸೂಗೂರು ತಾಲೂಕ ಶಹಾಪುರು ಸುಮಂತ ಸಿರವಾಳಪೈಕಿ ಇಟಗಿ ಹಿರೇಮಠದ ಘನಲಿಂಗ ನಿಜಗುಣಪ್ಪ ದೇಸಿಕರು ಮಹಾ ಪ್ರತಿಯಿಂದ ಬರೆದಿದ್ದೆನು ಯಾರಾದರೂ ನೋಡಿ ಸಂತೋಷವಾಗಲೆಂದು ಬರೆದಿದ್ದೆನು.' ೧ ಇದನ್ನು ಗಮನಿಸಿದಾಗ ಕುನ್ನಾಳ ಸಿದ್ಧರಾಮಪ್ಪ ತರುವಾಯ ಈ ಕೃತಿ ಸ್ವಲ್ಪ ವ್ಯತ್ಯಾಸಗಳೊಂದಿಗೆ ರಚನೆಯಾಗಿರಬೇಕೆನಿಸುತ್ತದೆ. ಈ ಶರಣರು ಅಂತಿಮ ದಿನಗಳನ್ನು ಕಳೆಯಲು ಸಂತೆಕೆಲ್ಲೂರಿಗೆ ಬಂದಾಗ ರಚನೆಯಾಗಿರಬೇಕು. ಬಹುಶಃ ಅದುಕ್ರಿ.ಶ.೧೮೮೧ ರ ಸುಮಾರಿನಲ್ಲಿ ರಬೇಕು. ಈ ಕೃತಿ ಬಹುಪ್ರಚಾರ ಪಡೆದ ಕಾರಣ ಅದನ್ನು ಅನೇಕರು ಪ್ರತಿ ಮಾಡಿರಬೇಕು. ಎಂಬುದನ್ನು ಗಮನಿಸಿದರೆ ಹಾಗೆಯೇ ಅವರ ಆಜ್ಞಾನುಸಾರು ಕೃತಿ ರಚಿಸಿದ್ದನ್ನು ಗಮನಿಸಿದರೆ ಕ್ರಿ.ಶ. ೧೮೮೪ ರಲ್ಲಿ ಇವರು ಲಿಂಗೈಕ್ಯರಾದರೆಂಬ ಹಳಕಟ್ಟಿಯವರ ಅಭಿಪ್ರಾಯವೇ ಸಮಪರ್ಕವಾಗಿದೆ.

ಕುಟುಂಬ ವಿವರಗಳು :

ಇವರಜೀವನ ಕುರಿತಾಗಿ ಅನೇ ಕ ಪುರಾಣ , ಬರಹಗಳು ಅನೇಕ ಮಾಹಿತಿ ತಿಳಿಸುತ್ತವೆ. ಮಸ್ಕಿಯ ಬಸವಪ್ಪ ಶಾಸ್ತ್ರಿ , ಸಂತೆಕೆಲ್ಲೂರು ಅಮರನಾಥ ಶಾಸ್ತ್ರಿ ಬರೆದ ಪುರಾಣಗಳು, ಹಿರೇಮಠ, ಶರಣಪ್ಪ, ಸವದತ್ತಿ ಮಠ, ಇನ್ನಿತರರ ಕೃತಿಗಳಿಂದ ಇವರ ಜೀವನ ವಿವರ ಸಂಪೂರ್ಣವಾಗಿ ತಿಳಿಯಬಹುದು. ಸ್ಥೂಲವಾಗಿ ಎಲ್ಲಾ ಕೃತಿಗಳಲ್ಲಿ ಕಂಡು ಬರುವ ವಿವರ ಹೀಗಿದೆ:

ಇವರು ಮದುವೆಯಾದನಂತರ ಗಂಡ ಹೆಂಡಿರ ನಡುವೆ ವಿರಸ ಉಂಟಾಗಿ ಮನೆ ಬಿಟ್ಟು ಊರೂರು ಸಂಚರಿಸುತ್ತಾ ಕರ್ನಾಟಕದ ಕಡೆಗೆ ಬಂದು ಶರಣ ವಚನಗಳಿಂದ ಅದರಲ್ಲೂ ಬಸವ ಪುರಾಣದಿಂದ ಪ್ರಭಾವಿತರಾಗಿ ಮುಂದೆ ಬಸವಸಂದೇಶವನ್ನೇ ತಮ್ಮ ಜೀವನದ ಉಸಿರಾಗಿ ಮಾಡಿಕೊಂಡು ಪ್ರಚಾರ ನಡೆಸಿದರು. ಇವರ ಬಗ್ಗೆ ತ.ಸು. ಶಾಮರಾಯರು ಹೇಳುವುದು ಹೀಗೆ ' ಘನಮಠಾರ್ಯ ಎಂಬ ಶರಣನು ಕಾಳನ್ನು ತಿರಿತಿಂದು ಅದನ್ನು ರುಬ್ಬಿ ಬೇಯಿಸಿ ವ್ಯಂಜನವಿಲ್ಲದ ಅದನ್ನು ಬಸವನ ರೊಟ್ಟಿ ಇದು ಎಂದು ತಿನ್ನುತ್ತಿದ್ದ ಭಕ್ತನು. ಈತನು ಬಸವಪುರಾಣವನ್ನು ಜನರ ಹೃದಯದಲ್ಲಿ ಅಚ್ಚೊತ್ತಿ ನಿಲ್ಲುವಂತೆ ಪುರಾಣಿಸುತ್ತದ್ದನಂತೆ. ಜನರು ಮಠದ ಮುಂದಿನ ಬೇವಿನ ಮರದ ಮೇಲೆ ಅವನ ಧ್ವಜವನ್ನು ಹಾರಿಸಿ ಮೆರೆಸಿದರೆಂತೆ' ೨

ಕೃತಿ ಹಾಗೂ ವ್ಯಕ್ತಿತ್ವ :

ಇವರು 'ಘನಮಠವಾಸ' ಅಂಕಿತದಿಂದ ತತ್ವ ಪದಗಳನ್ನು ರಚಿಸಿದ್ದಾರೆ. ೧೯೪೩ ರಲ್ಲಿ 'ಭಕ್ತಿ ಸುಧಾಸಾರ' ಎಂಬ ಹೆಸರಿನಲ್ಲಿ ಮೊದಲ ಬಾರಿಗೆ ಧಾರವಾಡದ ಮೃತ್ಯುಂಜಯಪ್ಪ ಪ್ರಕಟಿಸಿದ್ದಾರೆ. ಆ ನಂತರ ೧೪೭ ಪದಗಳನ್ನು ೧೯೭೦ ರಲ್ಲಿ ಮಲ್ಲಿಕಾರ್ಜುನ ಸ್ವಾಮಿಗಳು ಪ್ರಕಟಿಸಿದ್ದಾರೆ. ಇವರ ಪ್ರಮುಖ ಕೃತಿ ' ಕೃಷಿ ಜ್ಞಾನ ಪ್ರದೀಪಿಕೆ ' ಯು ಪ್ರಕಟವಾಗಿದ್ದು ಅದು ಕೃಷಿಯ ಮೂಲಕ ಆಧ್ಯಾತ್ಮಿಕ ಜ್ಞಾನ ತಿಳಿಸುತ್ತದೆ.

ಇವರುಕಲ್ಯಾಣದ ಅಲ್ಲಮನಂತೆ ಸಂಚಾರಿಯಾಗಿ ಲೋಕೋದ್ಧಾರದ ಜೊತೆಗೆ ಆತ್ಮೋದ್ಧಾರ ಮಾಡಿಕೊಂಡರು ' ಶಿವಜ್ಞಾನ - ಶಿವಾನುಭ ತತ್ವ ಬೋಧನೆಗೆ ಈತನ ವ್ಯಕ್ತಿತ್ವದ ಒಂದು ಮುಖವಾದರೆ ರೈತರ ಕ್ಷೇಮಾಭ್ಯುದಯ ಇನ್ನೊಂದು ಮುಖ ವಾಗಿತ್ತು. ವ್ಯವಸಾಯದ ವಿವಿಧ ಸಮಸ್ಯೆಗಳ ಅರಿವು ಚೆನ್ನಾಗಿತ್ತು . ವಿಶೇಷವಾಗಿ ಬಾವಿ ತೋಡಿಸುವಾಗ ರೈತರು ಈತನ ಸಲಹೆ ಪಡೆಯುತ್ತಿದ್ದರಂತೆ. ' ೩ ಎಂಬುದಾಗಿ ಸಂಪಾದಕರು ಅಭಿಪ್ರಾಯ ಪಟ್ಟಿದ್ದನ್ನು ಗಮನಿಸಿದರೆ ಇವರ ವ್ಯಕ್ತಿತ್ವದ ವೈಶಿಷ್ಟತೆಯ ಅರಿವಾಗುತ್ತದೆ.

---

೧ : ಡಾ : ಸಂಗಮೇಶ ಸವದತ್ತಿ ಮಠ - ವೀ.ವಿ. ಪುಟ೯೭

೨ : ತ.ಸು. ಶಾಮರಾಯ - ಶಿ.ಕ.ಕೋ. ಪುಟ೧೩೧

೩ : ಕನ್ನಡ ವಿಷಯ ವಿಶ್ವ ಕೋಶ- ಪುಟ೫೩೭

೧೦ : ವೆಂಕಟಾಪುರ ಖೇಮಣ್ಣ

ವೃತ್ತಿಯಿಂದ ಅಕ್ಕಸಾಲಿಗನಾದರೂ ,ಪ್ರವೃತ್ತಿಯಿಂದ ಆಧ್ಯಾತ್ಮವಾದಿಯಾಗಿ ರಾಯಚೂರು ತಾಲೂಕಿನ ವೆಂಕಟಾಪುರದಲ್ಲಿ ಕ್ರಿ.ಶ. ೧೮೫೦ ಜನಿಸಿದರು. ಬಲ್ಲಟಗಿ, ಬಾಗಲವಾಡ, ಪೂಲಚಿಂತಿ, ಗೊಬ್ಬೂರು ಉಮ್ಮಡಗಿ ಮೊದಲಾದ ಊರುಗಳನ್ನು ಸುತ್ತಿ ಕೊನೆಗೆ ವೆಂಕಟಾಪುರದಲ್ಲಿ ಕ್ರಿ.ಶ. ೧೯೨೫ ರಲ್ಲಿ ನಿಧನರಾದರು. ಇವರು ಬಂಡೆಗುರುವಿನಿಂದ ದೀಕ್ಷೆ ಪಡೆದು ಆ ಗುರುವಿನ ಅಂಕಿತವನ್ನೇ ಇಟ್ಟು ಕೊಂಡು ತಮ್ಮ ಹಾಡುಗಳನ್ನು ರಚಿಸಿದರು.

ಕೃತಿ ಹಾಗೂ ವ್ಯಕ್ತಿತ್ವ :

ಇವರ ೮೧ ತತ್ವಪದಗಳನ್ನು ' ವಿದೇಹ ಕೈವಲ್ಯ ಸಾರಾಮೃತ' ಎಂಬ ಹೆಸರಿನಲ್ಲಿ ೧೯೫೭ ರಲ್ಲಿ ಬಂಡೆಪ್ಪನವರು ಶಾಂತಮೂರ್ತಿ ಪೂಲಚಿಂತಿ ಪ್ರಕಟಿಸಿದ್ದಾರೆ. ೧೯೯೨ ರಲ್ಲಿ ಮತ್ತೆ ಗಂಗಾಶ್ರೀ ಪಬ್ಲಿಕೇಷನ್ಸ್ ಮಾನವಿ ಇವರಿಂದ ಮುದ್ರಣವಾಗಿದೆ. ' ಬಂಡೇಶ' 'ಬಂಡೇಗುರು' ಅಂಕಿತದಿಂದ ಹಾಡುಗಳನ್ನು ರಚಿಸಿದ ಇವರ ಹಾಡುಗಳು ಸರಳವಾಗಿದ್ದು ಸರ್ವರಿಗೂ ಆಧ್ಯಾತ್ಮ ಜ್ಞಾನವನ್ನು ತಿಳಿಸಿಕೊಡುತ್ತದೆ. ವೃತ್ತಿಯಿಂದ ಅಕ್ಕಸಾಲಿಗನಾಗಿ ಅನುಭಾವ ಜ್ಞಾನವನ್ನು ಸರ್ವರಿಗೂ ಹಂಚಿದ್ದು ,ಗಮನಿಸಿದ ಬೇಕಾದ ಅಂಶವಾಗಿದೆ.

೧೧ : ದೇವದುರ್ಗದ ಚೆನಮಲ್ಲ

ಶಾಲಾ ಶಿಕ್ಷಕನಾಗಿದ್ದು ಕೊಂಡು ಜನಮನದಲ್ಲಿ ಆಧ್ಯಾತ್ಮ ಜ್ಞಾನ ಮೂಡಿಸಿದ ಇವರು ಕ್ರಿ.ಶ.೧೮೫೦ ರಲ್ಲಿ ದೇವದುರ್ಗದಲ್ಲಿ ಜನಸಿ೧೯೨೦ ರಂದು ಲಿಂಗಂಪೇಟೆಯಲ್ಲಿ ನಿಧನರಾದರು.

ಇವರು 'ಸುರದುರ್ಗನಾಥ' ಅಂಕಿತದಲ್ಲಿ ಅನೇಕ ತತ್ವ ಪದ ರಚಿಸಿದ್ದಾರೆ. ಅಲ್ಲದೆ 'ಕರುಣೇಶ್ವರ ಪುರಾಣ ' ಹಾಗೂ 'ಭಿಕ್ಷಾವೃತ್ತಿ ಶಿವಯೋಗಿಗಳ ಪುರಾಣ' ರಚಿಸಿದ್ದು ತಿಳಿಯುತ್ತದೆ.

ಶಾಲಾ ಕಾಯದ ಜೊತೆಗ ಪ್ರವಚನ ಮಾಡುತ್ತಿದ್ದ ಇವರು ಸತ್ಯಂ ಪೇಟೆಯಲ್ಲಿ ಇವರು ತಾಯಿಯ ಜೊತೆ ಬಹುಕಾಲ ಬಾಳಿದರು. ಲಿಂಗಂಪೇಟೆಯ ಸಾಲಿಮಠ ಇವರ ಜೀವನದ ಕೊನೆ ಉಸಿರಿನ ತನಕ ಅನುಭವ ಮಂಟಪವಾಗಿತ್ತು. ಸೊಲ್ಲಾಪುರದಲ್ಲಿ ಸಿದ್ಧರಾಮೇಶ್ವರ ಪುರಾಣ ಹೇಳಿದರು. ಇವರು ಪುರಾಣ ಹೇಳುವಾಗ ದಿನಾಲು ಗುಬ್ಬಿಯೊಂದು ಬಂದು ನಾಗೋಸಿಯ ಮೇಲೆ ಕುಳಿತಿರುತಿತ್ತು . ಪುರಾಣ ಮುಕ್ತಾಯದ ದಿನ ಅದು ಕೆಳಗೆ ಬಿದ್ದು ಸತ್ತು ಹೋಯಿತು . ಅಲ್ಲೇ ಸಮಾಧಿ ಮಾಡಿಸಿದರು. ಇವರು ಸರಳ ವ್ಯಕ್ತಿತ್ವದಿಂದ ಶರಣ ಸಿದ್ಧಾಂತವನ್ನು ಸರ್ವರಿಗೂ ತಿಳಿಸಿಕೊಟ್ಟರು.

೧೨ : ಹೊಸಪೇಟೆಯ ಅಯ್ಯಪ್ಪ ಪಂಥೋಜಿ

ಗೊಬ್ಬೂರಿನ ಹಂಪಣ್ಣ ತನ್ನ ಕಾಲಘಟ್ಟದಲ್ಲಿ ಹಲವರಲ್ಲಿ ಆಧ್ಯಾತ್ಮದ ಚೇತನ ಅರಳಿಸಿದ. ಅಂತಹ ಚೇತನಗಳಲ್ಲಿ ಹೊಸಪೇಟೆಯ ಅಯ್ಯಪ್ಪ ಪಂಥೋಜಿ ಒಬ್ಬರಾಗಿದ್ದಾರೆ.

ಇವರು ರಾಯಚೂರು ತಾಲೂಕಿನ ಹೊಸಪೇಟೆಯಲ್ಲಿ ಕ್ರಿ.ಶ.೧೮೫೨ ರಲ್ಲಿ ಜನಿಸಿ ೧೯೨೩ ರಲ್ಲಿ ಲಿಂಗೈಕ್ಯರಾದರು.

ಜೀವನ- ಕೃತಿ -ಮತ್ತು ವ್ಯಕ್ತಿತ್ವ :

ಇವರು ರಂಗಾಪುರದ ಬಸಮ್ಮನನ್ನು ವಿಹಾವವಾಗಿದ್ದರು. ವೈರಾಗ್ಯತಾಳಿ ಸಂಸಾರ ತ್ಯಜಿಸಿ ಮತ್ತೇ ಗುರು ಹಂಪಣ್ಣನ ಆಜ್ಞೆಯಂತೆ ಸಂಸಾರಕ್ಕೆ ಮರಳಿ ರಾಯಚೂರಿನಲ್ಲಿ ಪತ್ತಾಪುರದ ನರಸಪ್ಪನವರ ಅಡತಿಯಂಗಡಿಯಲ್ಲಿ ಸೇವೆ ಸಲ್ಲಿಸಿದರು. ಈತನ ಸಮಾಧಿ ಹೊಸಪೇಟೆಯಲ್ಲಿದೆ. ಇವರು ಹೆಂಬೇರಾಳ , ಬಸವಂತ ಪುರ , ತಿಮ್ಮಾಪುರಗಳಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿದರು.

'ಪಂಪಾಪತಿ ' ಅಂಕಿತದಲ್ಲಿ ಇವರ ಲಾವಣಿ, ಬೈಲಾಟದ ಪದಗಳನ್ನು ರಚಿಸಿದ್ದಾರೆ. ತತ್ವ ಪದಗಳನ್ನು ರಚಿಸಿದ್ದಾರೆ.

ಅನೇಕ ಶಿಷ್ಯರಿಗೆ ಜ್ಞಾನ ದೀಕ್ಷೆ ನೀಡಿ ಶಿವಾನುಭವದ ಸಾರವನ್ನು ವಚನ,ತತ್ವಪದಗಳ ಹಿನ್ನೆಲೆಯಲ್ಲಿ ಚರ್ಚಿಸಿ ಹೊಸಪೇಟೆಯನ್ನು ಕಲ್ಯಾಣ ಮಾದರಿಯಲ್ಲಿ ಕಟ್ಟಲು ಯೋಚಿಸಿ ಯತ್ನಸಿದ್ದರು. ಕೆಳ ವರ್ಗದಲ್ಲಿ ಹುಟ್ಟಿದರೂ ತಾತ್ವಿಕವಾಗಿ ಸರ್ವರನ್ನು ಆಕರ್ಷಿಸುವ ವ್ಯಕ್ತಿತ್ವ ಪಡೆದಿದ್ದರು.

೧೩ : ತಾಳಪಲ್ಲಿ ದಿನ್ನಿ ವೆಂಕಯ್ಯ

ಹರಿ-ಹರರನ್ನು ಸಮನ್ವಯ ಮಾಡಿಕೊಂಡು ಶಿವಭಕ್ತಿಯ ನ್ನು ಜೀವನದ ಉಸಿರಾಗಿಟ್ಟುಕೊಂಡು ಬದುಕಿದ ಶರಣ೧೩ : ತಾಳಪಲ್ಲಿ ದಿನ್ನಿ ವೆಂಕಯ್ಯ ರಾಗಿದ್ದಾರೆ.

ಇವರ ಮನೆತನದವರು ಮೂಲತಃ ಆಂಧ್ರದವರಾಗಿದ್ದರೂ ಇವರು ಮಾನವಿ ತಾಲೂಕಿನ ಹೊಕ್ರಾಣಿಯಲ್ಲಿ ಕ್ರಿ.ಶ. ೧೮೫೮ ರಲ್ಲಿ ಜನಿಸಿ ರಾಯಚೂರು ತಾಲೂಕಿನ ದಿನ್ನಿಯಲ್ಲಿ ಕ್ರಿ.ಶ.೧೯೨೫ ರಂದು ನಿಧರಾದರು.

ಕೃತಿ ಮತ್ತು ವ್ಯಕ್ತಿತ್ವ :

ಇವರು 'ನಗರೇಶ' 'ಬೋಳಬಸವೇಶ', 'ವೆಂಕಟರಮಣ' - ಈ ಅಂಕಿತದಲ್ಲಿ ತತ್ವ ಪದಗಳನ್ನು ರಚಿಸಿದ್ದಾರೆಂಬ ಪ್ರತೀತಿ ಇದೆ. ಇವರು ''ಗುಡುಗುಂಟಿ' ಅಮರೇಶ್ವರ ಕುರಿತ ಪುರಾಣ, ಶಿವ ಭಕ್ತಿ ಸಾರ ರಚಿಸಿದ್ದಾರೆ.

ಇವರು ವ್ಯವಸಾಯದ ಜೊತೆಗೆ ಹತ್ತಿಯ ವ್ಯಾಪ್ಪಾರ ಮಾಡುತ್ತಿದ್ದರು. ಹೆಂಡತಿ ಕೃಷ್ಣಮ್ಮನ ಸಾವಿನ ನಂತರ ಮನಸ್ಸು ಆಧ್ಯಾತ್ಮದ ಕಡೆಗೆ ಹೊರಡಿ ಅನೇಕ ಕೃತಿ ರಚಿಸಿದ್ದಾರೆ. ಇವರು ವೈಶ್ಯರಾದರು. ಹರಿ ಮತ್ತು ಹರ ಭಕ್ತಿ ಸಮನ್ವಯದ ಜೊತೆಯಲ್ಲಿಯೇ ಉತ್ತಮ ಬದುಕು ಸಾಗಿಸಿದರು. ಗುರು ರಾಗಲಪರ್ವಿ ಬಸಯ್ಯನ ಮೂಲಕ ವೀರಶೈವ ದೀಕ್ಷೆ ಪಡೆದು ಶರಣರಾಗಿ ಬಾಳಿದರು.

೧೪ : ಬಳಗಾನೂರು ಮರಿಸ್ವಾಮಿ

ಇವರು ಕ್ರಿ.ಶ.೧೮೭೦ ರಲ್ಲಿ ನಾಡಗೌಡ ಹಾಲಾಪುರದಲ್ಲಿ ಜನಿಸಿ ಕ್ರಿ.ಶ.೧೯೩೦ ರಲ್ಲಿ ಹೊಸಕೋಟೆಯೆಂಬಲ್ಲಿ ಐಕ್ಯರಾದರು.

ಜೀವನ -ಕೃತಿ -ವ್ಯಕ್ತಿತ್ವ :

ಇವರು ಸಿಂಧನೂರು ತಾಲೂಕಿನ ಬಳಗನೂರಿನ ವಿರಕ್ತಮಠವಾದ ಮರಿ ಸ್ವಾಮಿಗಳ ಮಠದವರಾಗಿದ್ದಾರೆ. ಇವರಿಂದಲೇ ಮಠ ಪ್ರಸಿದ್ಧಿಗೆ ಬಂದಿತು.

ಇವರು 'ಉರಗಾದ್ರಿ', 'ಉರಗಾದ್ರಿ ಗವಿ ಮಠ' ' ನಗನಾಗ' ಮೊದಲಾದ ಅಂಕಿತಗಳನ್ನು ಇಟ್ಟುಕೊಂಡು ತತ್ವ ಪದ ರಚಿಸಿದ್ದಾರೆ. ಇವರು ಇದಲ್ಲದೇ ಗಿರಿಜಾಕಲ್ಯಾಣ, ದೇವಿಯಕಥೆ, ಶಿವಜಲಂಧರ, ಮುಂತಾದ ಬಯಲಾಟಗಳನ್ನು ರಚಿಸಿದ್ದಾರೆ. ಇವರು ೭೫ ತತ್ವಪದಗಳನ್ನು ರಚಿಸಿದ್ದು ಮಸ್ಕಿಯಪ್ರಕಾಶನವೊಂದು ಅವುಗಳನ್ನು ಪ್ರಕಟಿಸಿವೆ.

ಇವರು ಶರಣಜೀವಿಗಳಾದರು ಉಳಿದ ಧರ್ಮಗಳ ಬಗ್ಗೆ ಸಹಿಷ್ಣತೆ ಹೊಂದಿದ್ದರು. ಇವರ ಪ್ರಸಿದ್ಧಿಯನ್ನು ಕಂಡು ಸಹಿಸದ ದುಷ್ಟರು ಕಷ್ಟಕೊಟ್ಟರು ಅವುಗಳನ್ನು ಸಹಿಸಿ ಧರ್ಮ ಪ್ರಚಾರ ನಡೆಸಿದರು. ಕೋರ್ಟಿಗೂ ಹೋಗಬೇಕಾದ ಪರಿಸ್ಥಿತಿ ಬಂದಿತು. ಆದರೂ ಇವರು ಎಲ್ಲವನ್ನು ಸಹಿಸಿಕೊಂಡು ಜಾತ್ಯಾತೀತ ಮನೋಭಾವದಿಂದ ಧರ್ಮಪ್ರಚಾರ ನಡೆಸಿದರು.

೧೫ : ಗೊಬ್ಬೂರು ಮಾರ್ತಾಂಡಪ್ಪ :

ಜನರಾಡುವ ಭಾಷೆಯನ್ನೇ ಬಳಸಿಕೊಂಡು ಸರಳವಾಗಿ ಆತ್ಮ ಜ್ಞಾನವನ್ನು ತಿಳಿಸಿಕೊಟ್ಟ ಶರಣ ಗೊಬ್ಬೂರು ಮಾರ್ತಾಂಡಪ್ಪ ಇವರು ಗೊಬ್ಬೂರಿನಲ್ಲಿ ಕ್ರಿ.ಶ.೧೮೮೦ ರಲ್ಲಿ ಜನಿಸಿ, ೧೯೬೦ ರಂದು ಕೊರ್ವಿಹಾಳದಲ್ಲಿ ಐಕ್ಯರಾದರು.

ಜೀವನ -ಕೃತಿ -ವ್ಯಕ್ತಿತ್ವ

ಬಸಮ್ಮ ,ರಾಚಮ್ಮ ,ಅಕ್ಕಮ್ಮ ಎಂಬ ಮೂರು ಜನ ಹೆಂಡತಿಯರನ್ನು ಹೊಂದಿದ್ದ ಇವರಿಗೆ ಬಂಡ್ಯಪ್ಪ, ಹನುಮವ್ವ, ಪ್ರಭು ಎಂಬ ಮೂರವು ಮಕ್ಕಳಿದ್ದರು. ಇವರು ಔಷಧಜ್ಞಾನವನ್ನು ಹೊಂದಿದ್ದರು. ಅನೇಕ ಪವಾಡಗಳನ್ನು ಮಾಡಿದರು.

ಗುರು ಖೇಮಣ್ಣನ ಹೆಸರನ್ನೇ ಪ್ರಧಾನವಾಗಿರಿಸಿಕೊಂಡು ' ಖೇಮಾರ್ಯ್ಯ' ಎಂಬ ಅಂಕಿತದಲ್ಲಿ ತತ್ವ ಪದಗಳನ್ನು ರಚಿಸಿದರು. ಕೂಡಲೂರು ಬಸವಲಿಂಗ ಶರಣ ತತ್ವ ಪದಗಳಿಗೆ ಮಾರು ಹೋಗಿದ್ದರು.

ಇವರು ಬದುಕಿನಲ್ಲಿ ಅನೇಕ ದ್ವಂದ್ವಗಳಿದ್ದರೂ ಆಧ್ಯಾತ್ಮ ಬದುಕಿನಲ್ಲಿ ಸಮಕಾಲೀನರಲ್ಲಿಯೇ ಉನ್ನತ ಸ್ಥಾನವನ್ನು ಪಡೆದಿದ್ದರು. ಇಂದಿಗೂ ಅವರ ಹಾಡುಗಳು ಪ್ರಚಲಿತದಲ್ಲಿವೆ. ಇವರು ವೆಂಕಟಾಪುರ, ಯಾದಗಿರಿ, ಖಾನಾಪುರ, ಜಿನ್ನಾಪುರ, ರಂಗಾಪುರ, ಯದ್ಲಾಪುರ, ಸೋಲಾಪುರ, ಮುಂಬಯಿ, ಪೂನಾ, ಆದೋನಿ, ಮುಂತಾದ ಊರುಗಳನ್ನು ಸುತ್ತಿ ಜ್ಞಾನ ಬೋಧನೆ ನೀಡಿದರು.

೧೬ : ದೇವದುರ್ಗ ಆದಿ ಅಮಾತೆಪ್ಪ

ಆಗರ್ಭ ಶ್ರೀಮಂತನಾಗಿದ್ದರು ಅಹಂಕಾರದಿಂದ ಮೆರೆಯದೇ ಕಲ್ಯಾಣ ಶರಣರ ಆದರ್ಶವನ್ನು ಹೊಂದಿ ಬಾಳಿದ ಶರಣ ದೇವದುರ್ಗ ಆದಿ ಅಮಾತೆಪ್ಪ .ಇವರು ದೇವದುರ್ಗದಲ್ಲಿಯೇ ಹುಟ್ಟಿ ಅಲ್ಲಿಯೇ ಐಕ್ಯರಾದರು.

ಕಾಲ :

ಇವರು ಕ್ರಿ.ಶ.೧೮೬೫ ರಲ್ಲಿ ಜನಿಸಿ ಕ್ರಿ.ಶ. ೧೯೩೫ ರಲ್ಲಿ ಐಕ್ಯರಾದರೆಂದು ಸಬರದ ಹೇಳುತ್ತಾರೆ.೧ ಆದರೆ ನಾನು ಇವರ ಕುಟುಂಬದವರನ್ನು ಸಂಪರ್ಕಿಸಿದಾಗ ಇವರು ಕ್ರಿ.ಶ. ೧೯೪೫ ರಲ್ಲಿ ಜನಿಸಿ, ಕ್ರಿ.ಶ.೧೯೨೭ ರಲ್ಲಿ ಐಕ್ಯರಾದರು. ಆಗ ಅವರ ವಯಸ್ಸು ೮೨ ಆಗಿತ್ತೆಂದು ತಿಳಿಸಿದರು.

ಕೌಟುಂಬಿಕ ವಿವರ :

ಇವರು ದೇವದುರ್ಗದ ಲಿಂಗಾಯತ ಆಟಗಾರ (ದೇವಾಂಗ) ಜಾತಿಯ ಆದಿ ಮನೆತನದ ಸೂಗಪ್ಪ ಮತ್ತು ಗಂಗಮ್ಮ ಎನ್ನುವವರ ಮಗನಾಗಿದ್ದರು. ವೃತ್ತಿಯಿಂದ ನೇಕಾರರಾದರೂ ಹಲವಾರು ಸಮಾಜ ಸೇವೆಗಳನ್ನು ಕೈಗೊಂಡರು. ಇವರ ವರ್ಚಸ್ಸನ್ನು ಗಮನಿಸಿದ ನಿಜಾಮ ಸರಕಾರ ಇವರನ್ನು ಲೋಕಲ್ ಫಂಡ್‌ಸಮಿತಿಯ ಸದಸ್ಯರಾಗಿ ನೇಮಿಸಿಲಾಗಿತ್ತು . ಅಲ್ಲದೇ ಬಲ್ದಿಯಾ (ಮುನಸಿಪಾಲ್ಟಿ)ದ ನಾಮಕರಣ ಸದಸ್ಯರಾಗಿದ್ದರು. ಇವರು ದೇವದುರ್ಗಕ್ಕೆ ಕೇದಾರ ಜಗದ್ಗುರುಗಳನ್ನು ಆಮಂತ್ರಿಸಿ ಶ್ರಾವಣ ಮಾಸದಲ್ಲಿ ಬೃಹತ್ ಅನ್ನ ದಾಸೋಹವನ್ನು ಕೈಗೊಂಡಿದ್ದರೆಂಬುದಾಗಿ ಅವರ ಸಂಬಂಧಿ ರಾಜಶೇಖರ ವಕೀಲರಿಂದ ತಿಳಿದು ಬರುತ್ತದೆ. ಇವರು ನುರಿತ ಆಯುರ್ವೇದ ತಜ್ಞರೂ ಸಹಿತವಾಗಿದ್ದರೂ. ಇದಲ್ಲದೇ ಇವರು ದೊಡ್ಡ ಬರಗಾಲ ಬಂದಾಗ ಕ್ರಿ.ಶ.೧೯೧೪ ರಲ್ಲಿ ಗೌರಂಪೇಟೆ ರಸ್ತೆಯ ಬಳಿ ದೊಡ್ಡ ಭಾವಿಯನ್ನು ಕಟ್ಟಿಸಿ ನೀರಿನ ವ್ಯವಸ್ಥೆ ಮಾಡಿದ್ದರು. ಹೆಣ್ಣು ಮಕ್ಕಳಿಗೆ ಶೌಚಾಲಯ ಕಟ್ಟಿಸಿದ್ದರು. ಉರ್ದು ಮತ್ತು ಕನ್ನಡ ಭಾಷೆಯಲ್ಲಿ ಪಾಂಡಿತ್ಯ ಪಡೆದಿದ್ದರು.

ಕೃತಿ ಮತ್ತು ವ್ಯಕ್ತಿತ್ವ :

ಇವರು 'ಸದಾನಂದ' ಅಂಕಿತದಲ್ಲಿ ವಚನಗಳನ್ನು , 'ದೇಹದುರ್ಗಾಧೀಶ' ಅಂಕಿತದಲ್ಲಿ ತತ್ವಪದಗಳನ್ನು ರಚಿಸಿದ್ದು ತಿಳಿದು ಬರುತ್ತದೆ. ಕ್ರಿ.ಶ.೧೯೨೦ ರಲ್ಲಿ ಸದಾನಂದಪ್ಪನ ವಚನಗಳು ಎಂಬ ಅಪ್ರಕಟಿತ ಕೃತಿ ಇದ್ದ ಬಗ್ಗೆ ಇದರ ಕೃತು ದೇವದುರ್ಗ ಆದಿ ಅಮಾತೆಪ್ಪ ಎಂದು ತಿಳಿಸಿ ಈ ಕೃತಿ ಕ್ರಿ.ಶ.೧೯೮೧ರಲ್ಲಿ ಪ್ರಕಟವಾದ ಬಗ್ಗೆ ಡಾ : ಪ್ರೀತಿ ತಿಳಿಸುತ್ತಾರೆ.೨ ಈ ಕೃತಿ ನಿಖರವಾಗಿ ರಚನೆಯಾಗಿದ್ದು ೧೯೨೦ ಆಗಿದ್ದರೂ ಕ್ರಿ.ಶ೧೯೨೩ ರಲ್ಲಿ ಬಳ್ಳಾರಿಯ ಕರ್ನಾಟಕ ಬುಕ್-ಡೀಪೊ ಪ್ರೆಸ್ಸ್‌ನಲ್ಲಿ ಅಚ್ಚಾಗಿದ್ದು ತಿಳಿದುಬರುತ್ತದೆ. ೩ ಇವರ ಇನ್ನೊಂದು ಕೃತಿ 'ಕೈವಲ್ಯನವನೀತ' ಕೃತಿ ೮:೮:೧೯೧೯ ಕ್ಕೆ ರಚನೆಯಾಗಿದ್ದ ಬಗ್ಗೆ ಲೇಖಕರೇ ಹೇಳಿದ್ದಾರೆ. ೪ ಈ ಕೃತಿಯಲ್ಲಿ ಅವರು ತಮ್ಮ ಸಿದ್ಧಾಂತ ಸಮರ್ಥನೆಗಾಗಿ ಶರಣರ ವಚನ ತತ್ವಪದ ಬಳಸಿ ಕೊಂಡಿದ್ದಾರೆ.

ಇವರು ಮೂಢನಂಬಿಕೆಗಳನ್ನು ಖಂಡಿಸಿ ವೈಚಾರಿಕತೆಯನ್ನು ಜನರಿಗೆ ತಿಳಿಸಿಕೊಟ್ಟರು. ಶ್ರೀಮಂತರಾದರೂ ಅಹಂಕಾರದಿಂದ ಮೆರೆಯದೇ ದಿನಾಲೂ ಕೆಲಸಮಾಡಿ ಬಂದ ಹಣದಿಂದ ದಾನ ಮಾಡಿ ಅನ್ನ ದಾಸೋಹ ಮಾಡಿ ಜೀವನ ಸಾಗಿಸಿದರೂ. ಹೆಣ್ಣು ಮಕ್ಕಳಿಗೆ ವಿಶೇಷ ಸೌಲಭ್ಯವನ್ನು ಕಲ್ಪಿಸಿಕೊಟ್ಟರು. ಅನೇಕರಿಗೆ ಸಹಾಯ ಮಾಡಿದರು.

೧೭ : ವಡಕಿ ತಾತಪ್ಪಯ್ಯ

ಇವರು ಕನಕಗಿರಿ ಹತ್ತಿರದ ವಡಕಿಯಲ್ಲಿ ೧೮೯೦ ರಲ್ಲಿ ಜನಿಸಿ, ೧೯೫೯ ಅಗಸ್ಟ ೧೫ ರಂದು ಯಲಗಟ್ಟಿಯಲ್ಲಿ ಐಕ್ಯರಾದರು.

ಜೀವನ ಮತ್ತು ಕೃತಿ :

ಇವರು ನಾಯಕ ಜನಾಂಗದಲ್ಲಿ ಹುಟ್ಟಿದರು. ಇವರ ಪೂರ್ವದ ಹೆಸರು ಲಕ್ಷ್ಮಪ್ಪಯ್ಯ ತಂದೆ ಬುಡ್ಡಪ್ಪಯ್ಯ , ತಾಯಿ ಗಂಗಮ್ಮ , ಗುರು ಗುಂಡೂರು ಭೀಮೇಶ, ಅಂಬಮ್ಮ ಮತ್ತು ರುದ್ರಮ್ಮ ಇಬ್ಬರು ಹೆಂಡತಿಯರನ್ನು ಗುರುತಾಯಿ, ಜೋತೆಮ್ಮ, ಚೆನ್ನಬಸಮ್ಮ ಎಂಬ ಮಕ್ಕಳನ್ನು ಹೊಂದಿದ್ದರೂ ಸಂಸಾರ ತ್ಯಜಿಸಿ ಆಧ್ಯಾತ್ಮದ ಕಡೆಗೆ ಸಾಗಿ ಜನರ ಬಾಯಲ್ಲಿ ತಾತಪ್ಪಯ್ಯ , ವಡಕೆಪ್ಪನೆಂದು ಕರೆಸಿಕೊಂಡು ಹೀರಾ, ಚಿಂಚರ್ಕಿ , ಮದರಕಲ್‌ಗಳಲ್ಲಿ ಸಂಚರಿಸಿ ಜ್ಞಾನ ಬೋಧೆ ನೀಡಿದರು.

ಇವರು ೧೩೯ ಪದಗಳುಳ್ಳ 'ಅಮೃತ ಶಿಖಾಮಣಿ' ಎಂಬ ಕೃತಿಯನ್ನು ರಚಿಸಿದರು. ಇದು ೧೯೫೭ ರಲ್ಲಿ ಪ್ರಕಟವಾಗಿದೆ. ಅನೇಕ ಶಿಷ್ಯರಿಗೆ ಮಾರ್ಗದರ್ಶನ ನೀಡಿ ಶರಣ ತತ್ವ ತಿಳಿಸಿ ಕೊಟ್ಟರು .ಇವರ ಹೆಸರಿನಲ್ಲಿ ಇಂದಿಗೂ ಉತ್ಸವ ನಡೆಯುತ್ತದೆ.

---

೧ : ಡಾ : ಬಸವರಾಜ ಸಬರದ - ರಾ. ಜಿ. ಅ. ಕ. - ಪುಟ೩೭

೨ : ಡಾ : ಪ್ರೀತಿ - ೨೦. ಶ. ವ. ಪುಟ ೭

೩ : ಡಾ : ಬಸವರಾಜ ಸಬರದ - ರಾ. ಜಿ. ಅ. ಕ. - ಪುಟ ೩೭

೪ : ಆದಿ ಅಮಾತೆಪ್ಪ - ಕೈ. ನ. ಪುಟ೧೨೦

೧೮ : ಹಿರೇ ಬೂದೂರಿನ ಹನುಮಂತರಾವ್

ಮೂಲತಃ ಬ್ರಾಹ್ಮಣನಾಗಿದ್ದರೂ ಅನ್ಯ ಜಾತಿಯ ಕನ್ಯೆಯನ್ನು ಮದುವೆ ಮಾಡಿಕೊಂಡು ಜನಾಂಗದವರ ಕಣ್ಣು ಕೆಂಪಗಾಗುವಂತೆ ಮಾಡಿ, ಆ ಮೂಲಕ ಹೊಸ ಅಲೆಯನ್ನು ಸೃಷ್ಟಿಸಿದ ಶರಣ ಹಿರೇ ಬೂದೂರಿನ ಹನುಮಂತರಾವ್.

ಇವರು ಕ್ರಿ.ಶ.೧೮೮೨ ರಲ್ಲಿ ದೇವದುರ್ಗ ತಾಲೂಕಿನ ಹಿರೇಬೂದುರಿನಲ್ಲಿ ಜನಿಸಿ ಕ್ರಿ.ಶ೯೨೦ ರಲ್ಲಿ ಐಕ್ಯರಾದರೂ. ಇವರ ಗುರು ಮೇಧಾವಿರಾಯನ ಕೋಠಾದ ಅಡಿವೀಶಾರಾಧ್ಯರು .,ಗುರುಗಳ ಹೆಸರನ್ನೇ ಅಂಕಿತವಾಗಿಸಿಕೊಂಡು ತತ್ವಪದಗಳನ್ನು ರಚಿಸಿದರು.

ಇವರ ತಂದೆ ಶ್ರೀನಿವಾಸ ರಾವ್ ಸಹಿತ ಬ್ರಾಹ್ಮಣನಾಗಿದ್ದರೂ ನೀರಲಕೇರಿ ಬಸವಲಿಂಗ ಶರಣರನ್ನು ಆರಾಧಿಸುತ್ತಿದ್ದರು. ಕೊನೆಗೆ ಬ್ರಾಹ್ಮಣ ಜನಾಂಗದಿಂದ ಬಹಿಷ್ಕಾರಕ್ಕೊಳಗಾದರೂ ಹೆದರದೇ ಜೀವಂತ ಸಮಾಧಿಯಾದರೂ. ಸಹಜವಾಗಿ ತಂದೆಯ ಪ್ರಭಾವ ಇವರಮೇಲಾಗಿತ್ತು ಮುಂದೆ ಕೋಠಾದ ಅಡವೀಶ ಶರಣರಿಂದ ಲಿಂಗ ದೀಕ್ಷೆ ಪಡೆದು ಲಿಂಗಾಯತ ಕನ್ಯೆ ಯಮನಮ್ಮಳನ್ನು ಮದುವೆ ಮಾಡಿಕೊಂಡರು. ಭಾವಿ ಪಿಟ್ಟರ್ ಕೆಲಸ ಮಾಡುತ್ತಿದ್ದರೂ ಆಧ್ಯಾತ್ಮದಲ್ಲಿ ಆಸಕ್ತಿಯನ್ನು ಹೊಂದಿ ಅನೇಕರ ಗೌರವಕ್ಕೆ ಪಾತ್ರರಾದರು

೧೯ : ರಾಯಚೂರು ಹನುಮಂತವ್ವ

ತಾರುಣ್ಯದಲ್ಲಿಯೇ ಸಂಸಾರತ್ಯಜಿಸಿ ಆಧ್ಯಾತ್ಮದ ಗುಂಗನ್ನು ಹಿಡಿಸಿಕೊಂಡು ಆ ಮೂಲಕ್ಕೆ ಸಾಹಿತ್ಯಕ್ಕೆ ಕೈಹಾಕಿದ ಆಧುನಿಕ ಪರಂಪರೆಯ ಶರಣೆಯರಲ್ಲಿ ಕಂಡುಬರುವ ಪ್ರಮುಖ ಹೆಸರು ಇವರದಾಗಿದೆ. ದೊಡ್ಡ ಬಳ್ಳಾಪುರದ ಬನವತಿ ಗ್ರಾಮದಲ್ಲಿ ಕ್ರಿ.ಶ.೧೯೦೪ ರಲ್ಲಿ ಜನಿಸಿ ಕ್ರಿ.ಶ.೧೯೮೯ ರಲ್ಲಿ ರಾಯಚೂರಿನಲ್ಲಿ ಐಕ್ಯರಾದರು.

ಜೀವನ -ಕೃತಿ -ವ್ಯಕ್ತಿತ್ವ :

ರಾಯಚೂರಿನ ಪಲ್ಲುಗಲ ನಾಗಯ್ಯನನ್ನು ಮದುವೆಯಾಗಿದ್ದರೂ ಮುಂದೆ ಆತನಿಗೆ ಬೇರೆ ಮದುವೆ ಮಾಡಿಸಿ ಸಂಸಾರತ್ಯಜಿಸಿ ರಾಯಚೂರಿನ ಭೀಮಾವದೂತರ ಆಶ್ರಮ ಸೇರಿ ಅಲ್ಲಿಯೇ ಕೊನೆಯ ತನಕ ಜೀವನ ಸಾಗಿಸಿ ಅನೇಕರಿಗೆ ಆಧ್ಯಾತ್ಮ ಜ್ಞಾನ ನೀಡಿದರು.

'ಗುರು ವೆಂಕಟೇಶ' ಅಂಕಿತದಲ್ಲಿ ೩೦೦ ಕ್ಕೂ ಹೆಚ್ಚು ತತ್ವ ಪದಗಳನ್ನು ಹಾಗೂ೧೨೨ ವಚನಗಳನ್ನು ಬರೆದಿದ್ದಾರೆ. ತನ್ನ ವೈಶ್ಯವೃತ್ತಿಯನ್ನೇ ತತ್ವಪದಗಳ ರೂಪಕಗಳನ್ನಾಗಿ ಬಳಸಿಕೊಂಡಿದ್ದಾರೆ.

ಹೆಣ್ಣಾಗಿಯೂ ಆಧ್ಯಾತ್ಮದ ವಾಸ್ತವವನ್ನು ಅರಿತು ಜನರ ಮಾತುಗಳಿಗೆ ಹೆದರದೇ ಸಂಸಾರ ತೊರೆದು, ಕಷ್ಟ ಬಂದರೂ ಸಹಿಸಿ ಕೊಂಡು ಮುಂದೆ ಅನೇಕರ ಗೌರವವಕ್ಕೆ ಪಾತ್ರರಾದರು.

೨೦ : ಸರ್ಜಾಪೂರ ಚೆನ್ನ ಬಸವ ಸ್ವಾಮಿಗಳು

ಇವರು ಮೂಲತಃ ಗುಲರ್ಬ ಜಿಲ್ಲೆಯ ಸುರಪುರ ತಾಲೂಕಿನ ಲಕ್ಷ್ಮಪುರದವರು ಇವರು ವಿಜಾಪುರದ ಅಕ್ಕನ ಮನೆಯಲ್ಲಿ ಕೆಲವು ದಿನಗಳ ಕಾಲವಿದ್ದು ಮುಂದೆ ಸನ್ಯಾಸ ದೀಕ್ಷೆ ಪಡೆದ ಮೇಲೆ ಊರೂರು ಸಂಚರಿಸಿ ಕೊನೆಗೆ ಲಿಂಗಸೂಗೂರು ತಾಲೂಕಿನ ಸರ್ಜಾಪುರದಲ್ಲಿ ಆಶ್ರಮ ನಿರ್ಮಿಸಿಕೊಂಡು ಅಲ್ಲಿಯೇ ಶಿವಾನುಭವ ಕೈಗೊಂಡು ತಮ್ಮ ಅಂತಿಮ ದಿನಗಳನ್ನು ಕಳೆದರು.

ಕೃತಿ :

ಇವರು 'ನವೀನ ನವರತ್ನ ಮಾಲೆ' ಎಂಬ ಕೃತಿಯನ್ನು ರಚಿಸಿದ್ದು , ಕೃತಿ ರಚನೆಯಲ್ಲಿ ಸಂಸ್ಕೃತ , ಹಿಂದಿ , ಕನ್ನಡ ಗ್ರಂಥಗಳನ್ನು ಉಪಯೋಗಿಸಿಕೊಂಡು ವೇದಾಂತ ಜ್ಞಾನದ ಆಧಾರದ ಮೇಲೆ ಶರಣ ತತ್ವವನ್ನು ಮತ್ತೊಂದು ರೀತಿಯಲ್ಲಿ ತಿಳಿಸಿದ್ದಾರೆ.

ಕಾಲ ಮತ್ತು ವ್ಯಕ್ತಿತ್ವ

ಇವರ ಜನನದ ಕಾಲದ ಬಗ್ಗೆ ಖಾಚಿತ್ಯ ವಿಲ್ಲದಿದ್ದರೂ ಇವರು ಐಕ್ಯರಾದ ಕಾಲ೧೯೮೪ ಮಾರ್ಚ ೨೩ ಎಂದು ತಿಳಿದು ಬರುತ್ತದೆ. ಇವರ ಉತ್ತರಾಧಿಕಾರಿಗಳಾದ ಶಾಂತಾಶ್ರಮದ ಶ್ರೀ ನಿಜಾನಂದ ಮಹಾಸ್ವಾಮಿಗಳು ಇವರು ಐಕ್ಯರಾದಾಗ ೮೦ ವರ್ಷವೆಂದು ಸ್ಪಷ್ಟಪಡಿಸಿದ್ದಾರೆ. ಹಾಗಾಗಿ ಇವರ ಜನನ ಕಾಲವನ್ನು ಕ್ರಿ.ಶ.೧೯೦೪ ಎಂದು ಗುರುತಿಸಬಹುದು. ಇವರು ಹುಬ್ಬಳ್ಳಿಯ ಸಿದ್ಧಾರೂಢರನ್ನು ಭೇಟಿಯಾಗಿ ಆಶೀರ್ವಾದ ಪಡೆದನ್ನು ಗಮನಿಸಿದರೆ(ಸಿದ್ಧಾರೂಢರು ಐಕ್ಯರಾದುದ್ದು ೨೧ -೮-೧೯೨೯)ಗಮನಿಸಿದರೆ ಇವರು ತಮ್ಮ ಹರೆಯದಲ್ಲಿ ಕಂಡಿದ್ದರೆನ್ನಬಹುದು. ವಿಜಾಪುರದ ಷಣ್ಮುಖ ಆರೂಢ ಮಠದಲ್ಲಿ ಇವರು ಜ್ಞಾನದಾಸೋಹ ನಡೆಸಿದ್ದನ್ನು ಗಮನಿಸಿದರೆ ಇವರ ಕಾಲ ೧೯೦೪ -೧೯೮೪ ಎಂಬುದಾಗಿ ಗುರುತಿಸಬಹುದು.

ಇವರು ಅಲಹಾಬಾದಿನ ಕುಂಭಮೇಳದಲ್ಲಿ ಪಾಲ್ಗೊಂಡು ಹಿಮಾಲಯದಲ್ಲಿ ಕೆಲ ಕಾಲ ತಪಸ್ಸು ಮಾಡಿದ್ದರು. ಹೊರ ರಾಜ್ಯಗಳಲ್ಲಿ ಸಂಚರಿಸಿ ಜ್ಞಾನವನ್ನು ಬೋಧಿಸಿದರು. ವಚನ ಹಾಗೂ ವೇದಾಂತವನ್ನು ಸಮನ್ವಯಗೊಳಿಸಿ ಬೋಧಿಸಿದರು. ಇವರು ಸರಳವಾದ ಜೀವನ ನಡೆಸಿ ಆಧ್ಯಾತ್ಮದ ಉನ್ನತಿ ಪಡೆದಿದ್ದರು. ಈಗ ಇವರ ಪರಂಪರೆಯನ್ನು ಶ್ರೀ ನಿಜಾನಂದ ಮಹಾಸ್ವಾಮಿಗಳು ಮುಂದುವರೆಸಿಕೊಂಡು ಹೋಗುತ್ತಿದ್ದು ತಮ್ಮ ಪ್ರೌಢವಾದ ಪ್ರವಚನಗಳ ಮೂಲಕ ಜನರ ಅಜ್ಞಾನವನ್ನು ತೊಲಗಿಸುವಲ್ಲಿ ಪ್ರಯತ್ನಿಸುತ್ತಿದ್ದಾರೆ.

೨೧ : ಕಲ್ಲೂರು ಅಡವೀಶ ಶರಣರು

ಶರಣಾಗಿದ್ದು ಕೊಂಡು ಸ್ವಾತಂತ್ರ್ಯ ಹೋರಾಟಮಾಡಿ ಆಧ್ಯಾತ್ಮ ದ ಜ್ಞಾನದ ಜೊತೆಗೆ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸಿದ ವಿಶಿಷ್ಟರೀತಿಯ ಶರಣ ಕಲ್ಲೂರು ಅಡವೀಶ ಶರಣರ.

ಜೀವನ -ಕಾಲ- ಕೃತಿ -ವ್ಯಕ್ತಿತ್ವ

ಇವರು ಮಾನವಿ ತಾಲೂಕಿನ ಕಲ್ಲೂರಿನಲ್ಲಿ ೧೯೨೧ ಜೂನ್ ೯ ರಂದು ಜನಿಸಿ ೧೯೯೫ ಫೆಬ್ರವರಿ ೧೯ ರಂದು ಐಕ್ಯರಾದರು.

ಬಸವದರ್ಶನ , ಭಗವದ್ಗೀತೆ ಉಪನ್ಯಾಸ , ಷಡಕ್ಷರಿ ಮಂತ್ರ ಮಹಿಮೆ (ಕೊಂಡಗುಳಿ ಕೇಶಿರಾಜನ ಕೃತಿಗೆ ಟೀಕೆ) ಅಂದು - ಇಂದಿನ ಹಳ್ಳಿಗಳು , ಸುಖದ ದಾರಿ, ಮನುಜ ತಪವ ಮಾಡು , (ನಿಜಗುಣರ ಬಗ್ಗೆ)ಶರಣು-ಶರಣಾರ್ಥಿ(ಏಕಾಂಕ ನಾಟಕ) ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

ಇವರು ಕಲ್ಲೂರಿನಲ್ಲಿಯೇ ನೆಲೆಸಿ ಆಧ್ಯಾತ್ಮಿಕ ಜಾಗೃತಿ ಮೂಡಿಸಿದರು. ರಜಾಕಾರರ ಹಾವಳಿಯ ಸಂದರ್ಭದಲ್ಲಿ 'ಹಮ್ ಆಜಾದ್ ಹೈ 'ಎಂದು ಘೋಷಣೆ ಕೂಗುತ್ತ ಈ ಭಾಗದ ಹೈದ್ರಾಬಾದ ಕರ್ನಾಟಕದ ವಿಮೋಚನಾ ಹೋರಾಟದಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು.

ಸರಳವಾಗಿ ಬದುಕಿ ಜನರಿಗೆ ಆಧ್ಯಾತ್ಮ ದ ಜ್ಞಾನದ ಜೊತೆಗೆ ರಾಜಕೀಯ ಪ್ರಜ್ಞೆ, ಸಾಮಾಜಿಕ ಪ್ರಜ್ಞೆಯನ್ನು ಮೂಡಿಸಿದ ವಾಸ್ತವವಾದಿ ಶರಣರಾಗಿದ್ದರು.

(ಆ) ತಾತ್ವಿಕ ಸಾಧನೆಯಿಂದ ಹೆಸರಾದ ಶರಣರು

೧ : ಗಲಗಿನ ಶರಣರು

ದೇವದುರ್ಗ ತಾಲೂಕಿನ ಗ್ರಾಮವಾಗಿರುವ ಗಲಗ ಒಂದೆಡೆ ಊರಿದ್ದರೆ, ಮತ್ತೊಂದೆಡೆ ಬೆಟ್ಟಗಳಿಂದ ಸುತ್ತುವರೆದ ಕೆಲವು ಗವಿಗಳು ಕಣ್ಣಿಗೆ ಗೋಚರಿಸುತ್ತವೆ. ಈಗ ಆ ಗವಿಗಳು ಮಂದಿರದ ಸ್ವರೂಪ ಪಡೆದಿವೆ. ಈ ಗವಿಗಳಲ್ಲಿ ನೆಲೆಸಿದ್ದ ಶರಣರೇ ಗಲಗಿನ ಶರಣರಾಗಿದ್ದಾರೆ. ಚೆನ್ನ ಬಸವೇಶ್ವರ, ಸಿದ್ಧಪ್ಪಯ್ಯ, ಫಲಾರದಯ್ಯ ಇವರು ಪ್ರಮುಖರಾಗಿದ್ದಾರೆ.

ಇವರಲ್ಲಿ ಚೆನ್ನ ಬಸವೇಶ್ವರ ದೇವಾಲಯ ವಿದ್ದು ಅದು ಮುಸ್ಲಿಂ ಶೈಲಿಯ ವಾಸ್ತುಶಿಲ್ಪವನ್ನೊಳಗೊಂಡಿದೆ. ದೇವಾಲಯದ ಕೆಳಗಡೆ ಸಿದ್ಧಪ್ಪಯ್ಯನ ಗವಿಯೂ, ಇಲ್ಲಿಗೆ ಸಮೀಪದಲ್ಲಿ ಫಲಾರದಯ್ಯನು ವಾಸವಾಗಿದ್ದನೆಂದು ಹೇಳುವ ಸ್ಥಳವೊಂದು ಕಂಡುಬರುತ್ತದೆ. ಕೊಡೇಕಲ್ ಸಂಪ್ರದಾಯ ಇಲ್ಲಿ ಕಾಣಬಹುದು. ಇಲ್ಲಿ ಗೌರಿ ಹುಣ್ಣಿಮೆಗೆ ಸೇವಾ ಕಾರ್ಯಕ್ರಮವೊಂದು ನಡೆಯುತ್ತದೆ. ಆ ಸಂದರ್ಭದಲ್ಲಿ ವಚನಗಳ ಪಠಣ ನಡೆಯುತ್ತದೆ. 'ನುಡಿಮನೆ' ಎಂಬ ಮಠವೊಂದು ಇದ್ದು ಅದು ಕೊಡೇಕಲ್ ಸಂಪ್ರದಾಯಕ್ಕೆ ಸಂಬಂಧಿಸಿರಬಹುದೆಂದು ತಿಳಿದು ಬರುತ್ತದೆ. ಈ ಶರಣರನ್ನು ಕುರಿತು ಅನೇಕ ಕಥೆಗಳು ಕೇಳಿಬರುತ್ತವೆ. ಚೆನ್ನ ಬಸವೇಶ್ವರರು ತುಂಬಿದ ಹೊಳೆಯನ್ನು ದಾಟಿದ್ದು, ಶರಣರು ಗೂಳಿಯನ್ನು ಕೊಂದು ತಿಂದಾಗ ಪುನಃ ಶರಣರ ತಾಯಿ ಅದನ್ನು ಬದುಕಿಸಿದ್ದು ಕೇಳಿ ಬರುತ್ತದೆ. ಇವರು ಹದಿಮೂರನೇ ಶತಮಾನಕ್ಕೆ ಸೇರಿದ ಸಿದ್ಧ ಸಂಪ್ರದಾಯದವರಾಗಿಬೇಕೆನಿಸುತ್ತದೆ. ಇವರ ಸಾಹಿತ್ಯದ ಬಗ್ಗೆ ಯಾವುದೇ ಮಾಹಿತಿಗಳು ಕಂಡುಬರುವುದಿಲ್ಲ. ಇವರು ಕೊಡೇಕಲ್ ಬಸವಣ್ಣನ ಕಿರಿಯ ಸಮಕಾಲೀನರೆಂದು ಹೇಳಬಹುದು.

ಇವರ ಕುರಿತು ಕೆಲವು ಮಾಹಿತಿಗಳನ್ನು ಡಾ : ಸೂಪ್ಪಿಮಠ ಗುರುತಿಸಿದ್ದಾರೆ. 'ಫಲದಾರಯ್ಯ ಪ್ರಸ್ತಾಪ, ಮಂಟೇಸ್ವಾಮಿ ಸಂಪ್ರದಾಯದ ಶ್ರೀ ಮಂಟೇಸ್ವಾಮಿ ಕಾವ್ಯದಲ್ಲಿ ಮತ್ತೇ ಮತ್ತೇ ಬರುತ್ತದೆ. ಮಂಟೇಸ್ವಾಮಿ, ರಾಚಪ್ಪಾಜಿ ಜೊತೆಗೆ ಕರೆದೊಯ್ದ ವ್ಯಕ್ತಿಗಳಲ್ಲಿ ಈ ಫಲಾರದಯ್ಯನು ಇರುವುದರಿಂದ ಗಲಗಿನಲ್ಲಿ ಕಾಣಿಸಿಕೊಳ್ಳುವ ಫಲಾರದಯ್ಯ ಆತನೇ ಇರಬೇಕು. ಗಲಗ, ಕೊಡೇಕಲ್ ಸಂಪ್ರದಾಯದ ಸ್ಥಾನವಾಗಿರುವುದರಿಂದ ಕೊಡೆಕಲ್ ಮೂಲದ ಫಲಾರದಯ್ಯ ಮಂಟೇಸ್ವಾಮಿ ಜೊತೆಗೆ ತೆರಳಿರುವುದು ಚಾರಿತ್ರಿಕವೇ ಆಗಿದೆ.'೧ ಎಂಬುದನ್ನು ಗಮನಿಸಿದರೆ ಕೊಡೇಕಲ್ ಬಸವಣ್ಣ ಆತನ ಪರಿವಾರದಲ್ಲಿ ಗಲಗಿನ ಶರಣರು ಕಂಡು ಬರುತ್ತಾರೆ. ಅವರು ಕೊನೆಗಾಲದಲ್ಲಿದ್ದು ಕೊಡೇಕಲ್ ಬಸವಣ್ಣನ ತರುವಾಯ ಆತನ ಪರಂಪರೆಯನ್ನು ಮುಂದುವರೆಸಿಬೇಕು. ಹಾಗಾಗಿ ಇವರ ಕಾಲ ೧೫ ನೇ ಶತಕದ ಅಂತ್ಯ ೧೬ನೇ ಶತಕದ ಆರಂಭವೆಂದು ಗುರುತಿಸಬಹುದಾಗಿದೆ.

೨ : ನಾರದ ಗಡ್ಡೆ ಚೆನ್ನ ಬಸವ ಸ್ವಾಮಿಗಳು

ಬೀದರ ಜಿಲ್ಲೆಯ ಲಿಂಗದ ಹಳ್ಳಿಯಲ್ಲಿ ಜನಿಸಿ ರಾಯಚೂರಿನ ಪೂರ್ವಕ್ಕೆ ೧೮ ಕಿ.ಮೀ. ದೂರದಲ್ಲಿನ ನಾರದ ಗಡ್ಡೆಯನ್ನು ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಅಪೂರ್ವ ಬಾಳನ್ನು ಬೆಳಗಿದ ಶರಣರೇ ಇವರಾಗಿದ್ದಾರೆ. ಇವರು ೧೭ನೇ ಶತಕದ ಆರಂಭದಲ್ಲಿದ್ದರೆಂದು ತಿಳಿದುಬರುತ್ತದೆ. ಯಾದವ ಗಿರಿ ಪೀಠದ ಗುರುಕರಿಬಸವಸ್ವಾಮಿಗಳಿಂದ ದೀಕ್ಷೆ ಪಡೆದು ಲೋಕ ಸಂಚಾರ ಕೈಗೊಂಡು ಶಿವಾನುಭವನ್ನು ಊರಿಂದೂರಿಗೆ ಪ್ರಚಾರ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ.

೩ : ಬಿಚ್ಚಾಲಿ ಶ್ರೀ ಮಹಾಂತೇಶ್ವರರು

೧೭ನೇ ಶತಮಾನದಲ್ಲಿದ್ದ ಇವರು ಕರ್ನಾಟಕದ ಗಡಿಭಾಗದಲ್ಲಿದ್ದು ಕೊಂಡು ಶರಣರ ಚಳುವಳಿಯನ್ನು ಮತ್ತೊಮ್ಮೆ ಬೆಳೆಸಿ ಜನರಲ್ಲಿ ಆಧ್ಯಾತ್ಮ ಜಾಗೃತಿಯನ್ನು ಮೂಡಿಸಿದರು. ಮಠದ ಸ್ವಾಮಿಗಳಾಗಿದ್ದು ಲೋಕ ಸಂಚಾರವನ್ನು ಮಾಡುತ್ತ ಅನೇಕ ಭಕ್ತರಿಗೆ ಜ್ಞಾನ ದೀಕ್ಷೆ ನೀಡಿದರು.

೪ : ನಾಗೋಲಿ ಶರಣರು

ದೇವದುರ್ಗ ತಾಲೂಕಿನ ಸಣ್ಣ ಗ್ರಾಮವಾದ ನಾಗೋಲಿಯಲ್ಲಿ ಕಂಡುಬರುವ ಶರಣರೆಂದರೆ ಹನುಮಯ್ಯ ತಾತ, ಮಠದಯ್ಯಪ್ಪ ತಾತ ಪ್ರಮುಖರಾಗಿದ್ದಾರೆ. ಹನುಮಯ್ಯ ತಾತ ಮೂಲತಃ ಆಂಧ್ರದವರಾಗಿದ್ದು ಸೇಂದಿ ಮಾರುವ ಕಾಯಕ ಹೊಂದಿದ್ದ ಇವರು ಶಿವಲಿಂಗಯ್ಯ ತಾತನವರಿಂದ ದೀಕ್ಷೆ ಪಡೆದಿದ್ದರು. ಗಿಡದ ಎಲೆ ಉದುರಿಸಿದ್ದು, ಬಂಗಾರದ ಬೇಕೆಂದಾಗ ಹಾವು ಬಿಟ್ಟದ್ದು, ಹಾವು ಕಡಿದರೆ ಔಷಧ ನೀಡುವ ಬಗ್ಗೆ ಇತ್ಯಾದಿ ಹಲವು ಕತೆಗಳು ಇವರ ಸುತ್ತ ಹಬ್ಬಿವೆ. ಇವರ ಕ್ರಿ.ಶ.೧೮೦೦ರ ಅಂತ್ಯದಲ್ಲಿ ಇದ್ದರೆಂದು ತಿಳಿಯುತ್ತದೆ.

ಮಠದಯ್ಯಪ್ಪ ತಾತನವರು ನಾಗೋಲೆಯ ಬಸಯ್ಯ ಮತ್ತು ಆದ್ಯೆಮ್ಮ ಇವರ ಹೊಟ್ಟೆಯಲ್ಲಿ ಕ್ರಿ.ಶ.೧೯೨೦ ರಲ್ಲಿ ಜನಿಸಿ ೨೦೦೦ ಆಗಸ್ಟ ೧೩ ರಂದು ಲಿಂಗೈಕ್ಯರಾದರು. ಇವರು ರಸವಿದ್ಯೆ - ವೈದ್ಯವಿದ್ಯೆಯನ್ನು ಬಲ್ಲವರಾಗಿದ್ದರೂ. ಕೆಲವು ತತ್ವಪದಗಳನ್ನು ರಚಿಸಿದ್ದಾರೆ. ಇವರ ಅನೇಕ ಶಿಷ್ಯರಲ್ಲಿ ಇಳಿಗೇರ ಭೀಮರಾಯ ಒಬ್ಬರಾಗಿದ್ದು ಇವರು ತಮ್ಮ ಗುರುಗಳ ಆದರ್ಶವನ್ನು ಪಾಲಿಸುತ್ತ ಊರಿನಲ್ಲಿ ಶಿವಾನುಭವ ಕಾರ್ಯಕ್ರಮ ನಡೆಸಿ ಜ್ಞಾನದಾಸೋಹದ ಜೊತೆಗೆ ಪ್ರತಿವರ್ಷ ಅನ್ನ ದಾಸೋಹದ ವ್ಯವಸ್ಥೆಯನ್ನು ಮಾಡುತ್ತಾರೆ.

೧ : ಸಂ : ಡಾ : ಬಸವಲಿಂಗ ಸೊಪ್ಪಿಮಠ - ಕೊ. ವ. ವಾ. - ಪ್ರಸ್ತಾವನೆ ಪುಟ ೧೩

೫ : ಬಲ್ಲಟಗಿ ಶರಣರು

ಮಾನವಿ ತಾಲೂಕಿನ ಗ್ರಾಮವಾದ ಬಲ್ಲಟಗಿಯಲ್ಲಿ ಮೂರುನೂರು ವರ್ಷಗಳ ಹಿಂದಿದ್ದ ಇಲ್ಲಿಯ ಶರಣರ ಮೂಲ ಪುರುಷರು ಗಿರಿಜಮ್ಮ ಅವ್ವನವರು. ಜನ ಇವರನ್ನು ಶಾಂಭವೀಯ ಅಪರಾವತಾರ ವೆಂದು ನಂಬಿದ್ದರು. ಆನಂತರ ಕೊಟ್ರಯ್ಯ ತಾತ, ಚೆನ್ನಯ್ಯ ತಾತ ಇಲ್ಲಿದ್ದು ಅನೇಕ ಲೀಲೆ ಮೆರೆದು ಹೆಸರುವಾಸಿಯಾಗಿದ್ದಾರೆ. ಇವರ ನಂತರ ಜಡೆಯ ತಾತನವರು ಬಹು ಪ್ರಮುಖರಾಗಿ ಕಾಣಿಸಿಕೊಳ್ಳುತ್ತಾರೆ. ಇವರು ಮರೆಯ ಸ್ವಾಮಿ ರುದ್ರಮ್ಮ ಎಂಬುವವರ ಮಗನಾಗಿ ಜನ್ಮಿಸಿ ಹಟ್ಟಿಯ ಲಿಂಗಾವಧೂತರ ಶರಣರ ಹಿರಿಯ ಸಮಕಾಲೀನರೆಂದು ತಿಳಿದು ಬರುವ ಕಾರಣ ಇವರ ಕಾಲ ಕ್ರಿ.ಶ.೧೮೯೪ ಎಂದು ಸದ್ಯಕ್ಕೆ ಭಾವಿಸಲಾಗಿದ್ದು. ಇವರು ಲಿಂಗಾವಧೂತರ ನಂತರ ಒಂದು ತಿಂಗಳ ಬಳಿಕ ಐಕ್ಯರಾದದ್ದು ಗಮನಿಸಿದರೆ ಇವರ ಅಂತ್ಯಕಾಲ ಕ್ರಿ.ಶ೧೯೩೧ ಎಂಬುದ ಸ್ಪಷ್ಟವಾಗುತ್ತದೆ. ಸದ್ಯಕ್ಕೆ ನಾವು ಇವರ ಕಾಲವನ್ನು ಕ್ರಿ.ಶ.೧೮೯೪ ರಿಂದ೧೯೩೧ ಎಂದುಗುರುತಿಸಬಹುದು. ([illegible])

ಇವರು ಅಮರಮ್ಮನೆ ಊಂದಿಗೆ ಮದುವೆಯಾಗಿ ಗುರುಬಸಯ್ಯ ಎಂಬ ಮಗನನ್ನು ಪಡೆದು ಅನೇಕ ಪವಾಡಗಳನ್ನು ಮಾಡಿದರು. ಆ ಕಾಲದ ಜೀವಂತ ದೇವರೆನಿಸಿದರು. ಇವರ ನಂತರ ಗುರುಬಸವಯ್ಯ ತಾತ, ಬಸವಲಿಂಗಯ್ಯ, ಬಸವರಾಜಯ್ಯನವರು ಇವರ ಪರಂಪರೆಯನ್ನು ಮುಂದುವರೆಸಿದ್ದಾರೆ.

೬ : ಹಟ್ಟಿಯ ಲಿಂಗಾವಧೂತರು

ಇವರು ಮೂಲತಃ ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಹರನೂರು ಎಂಬಲ್ಲಿ ಜನಿಸಿ ಮುಂದೆ ನಾವದಗೀಯ ಪರ್ವತ ಶಿವಾಚಾರ್ಯರಿಂದ ಅನುಗ್ರಹ ಪಡೆದು ಸನ್ಯಾಸತ್ವ ದೀಕ್ಷೆ ತೆಗೆದುಕೊಂಡು ಊರುಗಳನ್ನೆಲ್ಲ ಸುತ್ತಿದರು. ಕೊನೆಗೆ ಅಂತಿಮ ಕಾಲದಲ್ಲಿ ಹಟ್ಟಿ(ಪ್ರಸ್ತುತ ಹಟ್ಟಿ ಚಿನ್ನದ ಗಣಿ) ಗ್ರಾಮಕ್ಕೆ ಬಂದು ಅಲ್ಲಿಯೇ ಐಕ್ಯರಾದರು. ಚಿನ್ನದಗಣಿ ಪ್ರದೇಶದಲ್ಲಿ ಇವರ ಸಮಾಧಿ ಇದೆ.

ಕಾಲ : ಇವರ ಕಾಲವನ್ನು ನಿಖರವಾಗಿ ಕಟ್ಟಿಕೊಡಲಾಗದಿದ್ದರೂ ಕೆಲವು ಊಹೆಗಳಿಂದ ಮತ್ತು ಸಮಕಾಲೀನ ಶರಣರಿಂದ ಕಟ್ಟಿಕೊಡಬಹುದು.

೧ : ಸಿದ್ಧಾರೂಢರ ಜೀವನ ಅವಲಂಭಿಸಿ : ಸಿದ್ಧಾರೂಢರ ಜೀವನ ಗಮನಿಸಿರದರೆ ಇವರ ಸಂಪರ್ಕಕ್ಕೆ ಲಿಂಗಾವಧೂತರು ಬಂದಿದ್ದು ಜನರ ಹೇಳಿಕೆಗಳಿಂದ ತಿಳಿದು ಬರುತ್ತದೆ. ಇವರು ಹುಬ್ಬಳ್ಳಿಗೆ ಆಗಮಿಸುವುದನ್ನು ತಮ್ಮ ದಿವ್ಯಜ್ಞಾನದಿಂದ ಅರಿತ ಸಿದ್ಧಾರೂಢರು ' ಹೆಂಡಕುಡುಕ ' ಬರುತ್ತಾನೆ ಹೆಂಡ ತಂದುಇಟ್ಟಿರಿ ಎಂದರಂತೆ. ಹಾಗೆಯೇ ಲಿಂಗಯ್ಯ ತಾತನವರು ಸಹ ಇದನ್ನು ಅರಿತು ನನ್ನನ್ನು ಕುಡುಕ ನೆಂದು ಕರೆದೆಯಾ ಎಂದು ಹೇಳಿ ಬಂದುಬ್ಯಾರಲ್ ಹೆಂಡ ಕುಡಿದರಂತೆ. ಜನರ ಈ ಹೇಳಿಕೆ ಗಮನಿಸಿದರೆ ಸತ್ಯಾಸತ್ಯತೆ ಏನೇ ಇರಲಿ ಸಿದ್ಧಾರೂಢರ ಸಂಪರ್ಕಕ್ಕೆ ಇವರು ಬಂದಿದ್ದರೆಂಬುದು ಬಹು ಮುಖ್ಯವಾಗಿದೆ. ಕಾರಣ ಆ ಹಿನ್ನೆಲೆಯಲ್ಲಿ ಗಮನಿಸಿದರೆ ಸಿದ್ಧಾರೂಢರ ಕಾಲ ಈಗಾಗಲೇ ನಿರ್ಧಾರವಾದಂತೆ ಶಾಲಿವಾಹನ ಶಕೆ ೧೭೫೮ ಅಂದರೆ ಕ್ರಿ.ಶ.೧೮೩೬ ಜನನ ಕಾಲವಾದರೆ ಇವರು ಶಿವಾಧೀನರಾದ ಕಾಲ ಶಾಲಿವಾನಹನ ಶಕೆ ೧೮೫೧ ಅಂದರೆ ಕ್ರಿ.ಶ.೧೯೨೯ (೨೧-೮-೧೯೨೯) ಎಂದು ಸ್ಪಷ್ಟವಾಗಿರುವ ಕಾರಣ ಇವರು ಅವರ ಸಮಕಾಲಿನವರೆಂದು ಭಾವಿಸಿದರೆ ಇವರ ಕಾಲ ಕ್ರಿ.ಶ.೧೮೩೬ ರನಂತರದಿಂದ ಹಿಡಿದು ಕ್ರಿ.ಶ.೧೯೨೯ ರನಂತರದ ವರೆಗೂ ಇವರುವ ಸಾಧ್ಯತೆ ಇದೆ.

೨:ಬಲ್ಲಟಗಿ ಶರಣರ ಕಾಲ ಅವಲಂಬಿಸಿ : ಇದನ್ನು ಗಮನಿಸಿ ನೋಡುವುದಾದರೆ ಬಲ್ಲಟಗಿಯ ಶ್ರೀ ಜಡೆಯ ತಾತನವರ ಸಮಕಾಲೀನರಾಗಿ ಇವರು ಬಾಳಿದ್ದಾರೆ. ಜಡೆಯ ತಾತ, ಲಿಂಗಯ್ಯ ತಾತ, ಪೋತ್ನಾಳ ಕಾಸಿಂ ಸಾಹೇಬರು ಒಬ್ಬರ ನಂತರ ಒಬ್ಬರು ಐಕ್ಯರಾದ ಬಗ್ಗೆ ತಿಳಿದು ಬರುತ್ತದೆ. ಇವರು ಪರಸ್ಪರ ಮಾತನಾಡಿಕೊಂಡು ತಿಂಗಳಿಗೊಬ್ಬರಂತೆ ಐಕ್ಯರಾದರು.

ಜಡೆಯ ತಾತನವರು೧೦೦ ವರ್ಷ ಬಾಳಿದ್ದರೆಂದು ಸ್ಥಲಚರಿತ್ರೆ ಅವಲೋಕಿಸಿದಾಗ ಅವರ ಕಾಲ ಸುಮಾರು ಕ್ರಿ.ಶ.೧೮೯೪ ಆಗುತ್ತದೆ. ಇದು ಅನುಮಾನಕ್ಕೆ ಆಸ್ಪದವಾಗಿದೆ. ಏಕೆಂದರೆ ಸಿದ್ಧಾರೂಢರ ಕಿರಿಯ ಸಮಕಾಲೀನರಾಗಿ ಲಿಂಗಯ್ಯ ತಾತನವರೂ ಬರುವಾಗ ಇವರ ಸಮಕಾಲೀನರಾಗಿ ಜಡೆಯ್ಯ ತಾತನವರು ಕ್ರಿ.ಶ.೧೮೯೪ ರ ಸುಮಾರಿನಲ್ಲಿ ರಬೇಕೆನಿಸುತ್ತದೆ. ಹಾಗಾಗಿ ಇವರ ಕಾಲ ಕ್ರಿ.ಶ.೧೮೯೪ ರನಂತರ ಎಂಬುದು ಸ್ಪಷ್ಟವಾಗುತ್ತದೆ. ಹಾಗೆಯೇ ಇವರ ಲಿಂಗೈಕ್ಯ ಕಾಲ ತಿಂಗಳಿನ ಅಂತರ ಇರುವ ಕಾರಣ ಅನಂತನ ಹುಣ್ಣಿಮೆಗೆ ಜಡೆಯ್ಯ ತಾತನವರು ಲಿಂಗೈಕ್ಯ ರಾದಬಗ್ಗೆ ತಿಳಿದು ಬರುತ್ತದೆ. ಹಾಗಾಗಿ ಅವರ ನಂತರ ಒಂದು ತಿಂಗಳಿಗೆ ಐಕ್ಯರಾದರೆಂಬಐತಿಹ್ಯಗಮನಿಸಿದರೆ ಇವರು ಸೀಗೆ ಹುಣ್ಣಿಮೆಗ ಐಕ್ಯರಾದರೆಂದು ತಿಳಿಯುತ್ತದೆ. ಇದಲ್ಲದೇ ತಿಪ್ಪ ರಾಜರ ದರ್ಬಾರಿಗೆ ವಿಶೇಷ ಸಂದರ್ಭದಲ್ಲಿ ಹೋಗುವುದನ್ನು ಗಮನಿಸಿದರೆ ತಿಪ್ಪ ರಾಜರು ಗುಡುಗುಂಟೆಯ ಪಾಳೇಯಗಾರರೆಂಬುದು ಸ್ಪಷ್ಟವಾಗಿದೆ. ಇವರು ಕ್ರಿ.ಶ.೧೮೯೦ ರನಂತರ ಆಳಿದರೆಂದು ತಿಳಿದು ಬರುವ ಕಾರಣ ಲಿಂಗಯ್ಯ ತಾತನವರು ಇವರಿಗಿಂತ ಹಿರಿಯಸಮಕಾಲೀನವರೆಂಬುದು ಸ್ಪಷ್ಟವಾಗುತ್ತದೆ. ಅಂತೆಯೇ ತಿಪ್ಪ ರಾಜರು ವಿನೋಭಾಭಾವೆಯವರ ಭೂದಾನ ಚಳುವಳಿಗೆ ಸ್ಪಂದಿಸಿದನ್ನು ಗಮನಿಸಿದರೆ ಭೂದಾನ ಚಳುವಳಿ ನಡೆದ ಕಾಲ೧೯೫೧-೫೫ ತಿಪ್ಪರಾಜರು ಕ್ರಿ.ಶ.೧೯೬೦ ವರೆಗೂ ಬಾಳಿರಬಹುದು. ಹಾಗೆಯೇ ವಿನೋಭಾಭಾವೆಯವರು ಕ್ರಿ.ಶ.೧೮೯೫ ರಿಂದ೧೯೮೨ ವರೆಗೆ ಜೀವಿಸಿದ್ದರು. ಇದರ ಮೇಲೆ ನಾವು ಊಹಿಸುವುದಾದರೆ ಕ್ರಿ.ಶ.೧೮೯೫ ಕ್ಕಿಂತ ಮುಂಚಿನವರಾದ ತಿಪ್ಪರಾಜರು ವಿನೋಭಾರಿಗಿಂತ ಹಿರಿಯರು. ಅಂದಮೇಲೆ ಅವರಿಗಿಂತ ಹಿರಿಯರಾಗಿದ್ದ ಲಿಂಗಯ್ಯ ತಾತನವರು ಕ್ರಿ.ಶ.೧೮೭೦ ರ ಸುಮಾರಿನಲ್ಲಿ ಜನ್ಮಿಸಿದರೆಂಬುದು ಸ್ಪಷ್ಟವಾಗುತ್ತದೆ. ಇವರು ಲಿಂಗೈಕ್ಯರಾದಾಗ ೬೧ ವರ್ಷವಾಗಿತ್ತೆಂದು ಸ್ಥಳೀಯರ ಹೇಳಿಕೆ ಪರಿಶೀಲಿಸಿದರೆ ಇವರ ಐಕ್ಯ ಕಾಲ ಕ್ರಿ.ಶ. ೧೯೩೧ ಆಗುತ್ತದೆ.

ಇದುವರೆಗಿನ ಚರ್ಚೆಯ ಅಂಶಗಳನ್ನು ಗಮನಿಸಿದರೆ ಲಿಂಗಯ್ಯ ತಾತನವರು ಕ್ರಿ.ಶ.೧೮೬೦ ರಲ್ಲಿ ಜನನವಾಗಿರಬೇಕು. ಕ್ರಿ.ಶ.೧೮೯೦ ಸುಮಾರಿನಲ್ಲಿ ಜಡೆಯ ತಾತನವರನ್ನು ಸಂಪರ್ಕಿಸಿರಬೇಕು. ೧೯೦೦ರಲ್ಲಿ ಗುರುಗುಂಟಾದ ದರ್ಬಾರನ್ನು ಪ್ರವೇಶಿಸಿರಬೇಕು. ಹಾಗೆಯೇ ಮುಂದೆ ಕೊನೆಯದಿನಗಳಲ್ಲಿ ಹಿರಿಯ ಸಮಕಾಲೀನರಾದ ಸಿದ್ಧಾರೂಢರನ್ನು ೧೯೨೨ ರಲ್ಲಿ ಸಂಧಿಸಿರಬೇಕು . ಆ ತರುವಾಯ ಪುನಃ ಹಟ್ಟಿಗೆ ಬಂದು ಕ್ರಿ.ಶ.೧೯೩೧ ರಲ್ಲಿ ಐಕ್ಯರಾದರೆಂಬುದು ಸ್ಪಷ್ಟವಾಗಿ ತಿಳಿದುಬರುವ ಕಾರಣ ಇವರ ಕಾಲವನ್ನು ಕ್ರಿ.ಶ. ೧೮೬೦ರಿಂದ೧೯೩೧ ಎಂದು ಗುರುತಿಸುವುದು ಬಹುಸೂಕ್ತವಾಗಿದೆ.

ಜೀವನ ವಿವರ ಹಾಗೂ ವ್ಯಕ್ತಿತ್ವ :ಇವರ ಸನ್ಯಾಸಿಗಳಾಗಿದ್ದರೂ ಆಧ್ಯಾತ್ಮದ ಜ್ಞಾನದ ಜೊತೆಗೆ ರಸವಿದ್ಯೆಯ ಜ್ಞಾನವಿತ್ತೆಂದು ತಿಳಿದುಬರುತ್ತದೆ. ಬ್ರಿಟಿಷ್‌ಸಂಶೋಧಕರು ಇವರ ನೆರವನ್ನು ಪಡೆದು ನಿಧಿಶೋಧನೆಯ ಸಂದರ್ಭದಲ್ಲಿ ನೆ [illegible] ರವು ಪಡೆದರಂತೆ ಇವರ ಅವಧೂತ ಸ್ಥಿತಿಯನ್ನು ಕಂಡು ಜನರು ಇವರಿಗೆ ಲಿಂಗಾವಧೂತರೆಂದರು . ಇವರು ನಡೆದರೆ ಹೆಜ್ಜೆ ಮೂಡುತ್ತಿರಲಿಲ್ಲ, ಮಳೆ ಬಂದರೆ ಮೇಲೆ ನೀರ ಹನಿ ಬೀಳುತ್ತಿರಲಿಲ್ಲ, ಹಂಪೆಯ ಜಾತ್ರೆಯನ್ನು ಭಕ್ತರಿಗೆ ತೋರಿಸಿದ್ದು, ತಿಂಥಿಣಿ ಹೊಳೆಯನ್ನು ದಾಟಿದ್ದು, ಹಟ್ಟಿ ಛೋಟಾ ಮುಂಬಯಿ ಆದಾಗ ರೈಲು ಗಾಡಿ ಬರ್‍ತಾದ ಗಾಡಿ ಕೊನೆ ಡಬ್ಬದಾಗ ನಾನು ಇರುತೀನಿ ಎಂಬಂತಹ ಅನೇಕ ಹೇಳಿಕೆಗಳು ಇವರ ಸುತ್ತೆಲ್ಲ ಹಬ್ಬಿವೆ. ಇವರು ಅವಧೂತ ಸ್ಥಿತಿಯವರಾಗಿದ್ದರೂ, ಇಷ್ಟಲಿಂಗವನ್ನು ಕೊರಳಲ್ಲಿ ಧರಿಸಿ ಅದನ್ನು ಪೂಜಿಸುತ್ತಿದ್ದರು. ಭಿಕ್ಷಾನ್ನ ಮೂಲಕ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು. ಜನ ಕೊಟ್ಟರೆ ತಿನ್ನುತ್ತಿದ್ದರುಇಲ್ಲವಾದರೆ ಹಾಗೆ ಉಪವಾಸವಿರುತ್ತಿದ್ದರು. ಕಲ್ಯಾಣ ಶರಣರ ಆದರ್ಶಗಳು ಇವರ ಉಸಿರಾಗಿದ್ದವು.

ಹಟ್ಟಿ ಗ್ರಾಮದ ನಾಯಿಕೊಡಿ ಗದ್ದೆಪ್ಪ ಮಹಾರಾಜರು ಇವರ ಪರಮ ಶಿಷ್ಯರಾಗಿದ್ದರು.ಇವರ ಸಮಾಧಿಯ ಹತ್ತಿರದಲ್ಲಿಯೇಇವರ ಗದ್ದುಗೆ ಇದೆ. ಇವರು ಅನೇಕ ಲೀಲೆಗಳನ್ನು ಮಾಡಿ ಕಾರಣೀಕ ಪುರುಷರೆನಿಸಿಕೊಂಡಿದ್ದರು. ಇವರು ಕುಡಿಯುತ್ತಿದ್ದರೆಂದು ಬಹಳ ಜನ ನಂಬಿದ್ದಾರೆ. ಅವರು ಮದ್ಯವನ್ನು ಕುಡಿಯದೆ ಈಚಲ ನೀರಾವನ್ನು ಕುಡಿಯುತ್ತಿದ್ದರೆಂದು ಕೆಲವರು ಹೇಳುತ್ತಾರೆ. ತಾತನವರ ವ್ಯಕ್ತಿತ್ವದಿಂದ ನಮಗೆ ತಿಳಿದುಬರುವುದೆನೆಂದರೆ ಅವರು ಯಾವುದೇ ದುಶ್ಚಟದ ದಾಸರಾಗಿರಲಿಲ್ಲ. ಅವರು ಸಚ್ಚಾರಿತ್ರ್ಯದಿಂದ ಬಾಳಿ ಬದುಕಿದವರು. ಹೊರ ರಾಜ್ಯಗಳನ್ನು ಸಂಚರಿಸಿ ಶರಣರ ತತ್ವಗಳನ್ನು ಅತ್ಯಂತ ಸಾಂಕೇತಿಕವಾಗಿ, ಗಂಭೀರವಾಗಿ ಪ್ರಚಾರ ಮಾಡಿದವರು. ಮಿತ ಭಾಷಿಯಾಗಿದ್ದ ಇವರು ಅನೇಕರ ಮೇಲೆ ಪ್ರಭಾವ ಬೀರಿದ್ದರು. ಇಂದಿಗೂ ಇವರ ಸ್ಥಳ ಜಾಗೃತ ಸ್ಥಳವಾಗಿ ವರ್ಷಕ್ಕೆರಡು ಬಾರಿ ವಿಜೃಂಭಣೆಯಿಂದ ಜಾತ್ರೆ ನಡೆಯುತ್ತದೆ. ಜಾತ್ರೆಯಲ್ಲಿ ಅನ್ನದಾಸೋಹ - ಜ್ಞಾನದಾಸೋಹವನ್ನು ಶ್ರೀ ನಿಜಾನಂದ ಮಹಾಸ್ವಾಮಿಗಳು ನಡೆಸುವ ಮೂಲಕ ಇವರ ತತ್ವವನ್ನು ಇಂದಿಗೂ ಜೀವಂತವಾಗಿರಿಸಿದ್ದಾರೆಂಬುದನ್ನು ನಾವಿಲ್ಲಿ ಗಮನಿಸಬೇಕಾಗಿದೆ.

೭ : ಸಜ್ಜಲ ಗುಡ್ಡದ ಶರಣಮ್ಮನವರು

ಸಜ್ಜಲಗುಡ್ಡದ ಶರಣೆಯಾದ ಶರಣಮ್ಮನವರು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಮುದೆಯನೂರಿನಲ್ಲಿ ಕ್ರಿ.ಶ.೧೮೭೮ ರಲ್ಲಿ ಜನ್ಮಿಸಿದರು. ಕುರುಬರ ಲಿಂಗಮ್ಮನ ಮಗಳಾಗಿದ್ದ ಯಮನಮ್ಮ ಗುಡದೂರಿನ ದೊಡ್ಡ ಬಸವಾರ್ಯರಿಂದ ದೀಕ್ಷೆ ಪಡೆದು ಶರಣಮ್ಮನೆಂಬ ಹೆಸರು ಪಡೆದು ಖ್ಯಾತಿಯಾದರು. ಮಿತಭಾಷಿಯಾಗಿ ಮಾತಿಗಿಂತ ಕೃತಿ ಮುಖ್ಯವೆಂದು ತಿಳಿದು ಶರಣ ತತ್ವದಂತೆ ಬಾಳಿದರು. ಇವರ ವ್ಯಕ್ತಿತ್ವವನ್ನು ಕುರಿತು ಡಾ : ಆರ್.ಸಿ. ಹಿರೇಮಠ ಹೀಗೆ ಹೇಳುತ್ತಾರೆ ' ಪುಣ್ಯವೇ ಹಣ್ಣಾದಂತಿದ್ದ ಅವರ ಮುಖದಲ್ಲಿ ಲಿಂಗದ ತೇಜ ಮಂಗಲಮಯವಾಗಿ ಹೊರಹೊಮ್ಮುತ್ತಿತ್ತು. ಯಾರು ಬಂದರೂ ತಾಯಿಯವರ ಸನ್ನಿಧಾನದಲ್ಲಿ ತಾಯಿಯ ವಾತ್ಸಲ್ಯ ದೊರೆತು ಅವರಿಗೆ ತವರು ಮನೆ ಪ್ರೀತಿ ಆದರಗಳು ಸಲ್ಲುತ್ತಿದ್ದವು' ೧ ಜೀವನದಲ್ಲಿ ಬಹುನೊಂದು , ಬೆಂದು ಅಪ್ಪಟ ಚಿನ್ನವಾಗಿದ್ದ ಶರಣಮ್ಮನವರು ತಮ್ಮ ಕಷ್ಟ ಮತ್ತೊಬ್ಬರಿಗೆ ಬರದಿರಲಿ ಎಂದು ಬಯಸಿ ಮುಂದೆ ಅನ್ನದಾನ- ಜ್ಞಾನದಾನ ಗಳೆರಡನ್ನು ತಮ್ಮ ಕೊನೆಉಸಿರಿನ ತನಕ ನಡೆಸಿಕೊಂಡು ಬಂದರು. ಇವರು ೧೯೮೧ ರ ಎಪ್ರಿಲ್ ೨೪ ರ ಮಧ್ಯರಾತ್ರಿಯಂದು ಲಿಂಗೈಕ್ಯವಾದರು. ಇವರ ಬಗ್ಗೆ ಅನೇಕ ಬರಹಗಾರರು ಕೃತಿಗಳನ್ನು ರಚಿಸಿದ್ದಾರೆ.

೮ : ಅಂಕಲಿ ಮಠದ ಶರಣರು

ಲಿಂಗಸೂಗೂರು ತಾಲೂಕಿನ ಮಠದ ಕೇಂದ್ರ ಸ್ಥಾನವೇ ಅಂಕಲಿ ಮಠ . ತಲೆಖಾನ್(ತ್ರಲೆಕಟ್ಟು)ಹಳ್ಳಿಗೆ ಹತ್ತಿರದಲ್ಲಿದೆ. ಇಲ್ಲಿಯ ಶರಣರು ಆರೂಢ ಸಂಪ್ರದಾಯದವರೆಂದು ತಿಳಿದು ಬರುತ್ತದೆ. ಈ ಮಠದ ಶರಣರು ಮೂಲತಃ ಬೆಳಗಾವಿ ಜಿಲ್ಲೆ ಅಂಕಲಿಗೆಗೆ ಸೇರಿದವರು .ನಿರೂಪಾದಿಗಳು ಇಲ್ಲಿಯ ಮೂಲ ಪುರುಷರು. ಇವರ ನಂತರ ಅವರವಂಶಜರಾದ ಸೂಗೂರೇಶ ಫಕೀರ ಸ್ವಾಮಿಗಳು ಇಲ್ಲಿದ್ದು ಖ್ಯಾತಿ ಪಡೆದರು. ಮಠದ ಮೂಲ ಪುರುಷರು ಉಪ್ಪಲ ದೊಡ್ಡಿ ಗ್ರಾಮದ ಸ್ವಾಮಿಗಳ ಮನೆತನದಲ್ಲಿ ಜನಿಸಿದರು. ಇವರ ಮೂಲ ಹೆಸರು ವಿರೂಪಾಕ್ಷಯ್ಯ ಬಾಲಕರಿಂದಾಗಲೇ ಸಿಂಧನೂರು ತಾಲೂಕಿನ ಅಂಬಾಮಠದ ಸನ್ಯಾಸಿಗಳ ಪ್ರಭಾವಕ್ಕೊಳಗಾಗಿ ಸನ್ಯಾಸಿಗಳ ಸಂಪರ್ಕ ಪಡೆದು ಶಕ್ತಿಯ ಆರಾಧನೆಯಲ್ಲಿ ತೊಡಗಿದರು. ಮುಂದೆ ಉಪಜೀವನಕ್ಕಾಗಿ ಊರನ್ನು ಬಿಟ್ಟು ಇಳಕಲ್ಲಿಗೆ ಹೋಗಿ ಅಲ್ಲಿ ಕೈ ಮಗ್ಗದ ಕೆಲಸದಲ್ಲಿ ತೊಡಗಿ ಕೊನೆಗೆ ಅದನ್ನು ಬಿಟ್ಟು ವಿರಕ್ತ ಬದುಕನ್ನು ಸಾಗಿಸಿ ಊರೂರು ತಿರುಗಿದರು. ಇದೇ ಸಂದರ್ಭದಲ್ಲಿ ಅಂಕಲಗಿ ಅಡವಿ ಸಿದ್ಧ ಸ್ವಾಮಿಗಳ ಸಂಪರ್ಕವಾಗಿ ಅವರಲ್ಲಿ ಯೋಗವನ್ನು ಸೈದ್ಧಾಂತಿಕವಾಗಿ ಕಲಿತು ಮುಂದೆ ಅವರಿಂದ ಅನುಗ್ರಹ ಪಡೆದು ನಿರೂಪಾಧಿ ಎಂಬ ಹೆಸರನ್ನು ಪಡೆದು ಜನರಿಗೆ ಜ್ಞಾನವನ್ನು ಬೋಧಿಸುತ್ತ ಕೊನೆಗೆ ಲಿಂಗಸೂಗೂರು ತಾಲೂಕಿನ ತಲೆಖಾನ್(ತ್ರಲೆಕಟ್ಟು)ಗ್ರಾಮದಲ್ಲಿ ನೆಲೆಸಿ ಅಲ್ಲಿಯೇ ಮಠ ಕಟ್ಟಿ ಅದಕ್ಕೆ ಅಂಕಲಗಿ ಸಿದ್ಧಮಠ ಎಂದು ಕರೆದರು. ಮುಂದೆ ಅವರ ನಂತರ ಅದು ನಿರೂಪಾದಿ ಮಠವೆಂದು, ಅಂಕಲಿಮಠವೆಂದು ಖ್ಯಾತವಾಯಿತು.

೧ : ಡಾ : ಆರ್.ಸಿ. ಹಿರೇಮಠ- ಉ.ಸಿ.ಪುಟ೧೬೮-೧೯೯

ನಿರೂಪಾದಿಗಳು ಶಕ್ತಿಯ ಆರಾಧಕರಾಗಿದ್ದರೂ ಸಂಸಾರಿಗಳಾಗಿದ್ದರು. ಇವರಿಗೆ ಸೂಗೂರೇಶ್ವರ ನೆಂಬ ಮಗನಿದ್ದು ಅವರು ತಮ್ಮ ತಂದೆಯ ಮಹಿಮೆ ಕುರಿತು ಅನೇಕ ಹಾಡುಗಳನ್ನು ಬರೆದ ಬಗ್ಗೆ ತಿಳಿಯುತ್ತದೆ. ಆನಂತರ ಬಂದ ಫಕೀರಸ್ವಾಮಿ ಉತ್ತಮ ಸಾಧಕರಾಗಿದ್ದರು ಇವರಿಗೆ ವೀರಭದ್ರ, ಸೂಗೂರೇಶ ಎಂಬ ಮಕ್ಕಳಿದ್ದರೆಂದು ತಿಳಿಯುತ್ತದೆ. ಮುಂದೆ ಇವರ ವಂಶಕ್ಕೆ ಗಂಡು ಸಂತಾನ ವಾಗದೇ ಪಾರ್ವತೆಮ್ಮ ಹೆಣ್ಣು ಮಗಳು ಇದ್ದಳೆಂದು ತಿಳಿಯುತ್ತದೆ. ಮುಂದೆ ಬಸವರಾಜ ಸ್ವಾಮಿ ಎಂಬುವವರು ದತ್ತಕ್ಕೆ ಬಂದು ಸದ್ಯ ಇವರೇ ಮಠಾಧೀಶರಾಗಿದ್ದಾರೆ. ಸಿದ್ಧ ಸಂಪ್ರದಾಯದ ೧೯ನೇ ಶತಕದ ಅಂಕಲಿ ಮಠದ ಶರಣರು ತಮ್ಮ ಯೋಗ ಸಾಧನೆ ಹಾಗೂ ಅನ್ನ ದಾಸೋಹಗಳ ಮೂಲಕ ನಾಡಿನಲ್ಲಿ ಪ್ರಸಿದ್ಧರಾಗಿದ್ದಾರೆ.

೯ : ದೇವರ ಭೂಪುರದ ಶರಣರು

ಲಿಂಗಸೂಗೂರು ತಾಲೂಕಿನ ಸಣ್ಣ ಹಳ್ಳಿಯಾಗಿದ್ದ ಭೂಪುರ ಮುಂದೆ ಶ್ರೀ ಅಮರೇಶ್ವರ ಕ್ಷೇತ್ರದಿಂದಾಗಿ ದೇವರ ಭೂಪರವಾಯಿತು.

ಮಳೆಸ್ವಾಮಿಗಳು , ರುದ್ರಮುನಿ ಸ್ವಾಮಿ, ಶಾಂತ ಸ್ವಾಮಿ , ಗಜದಂಡಸ್ವಾಮಿ, ಷಣ್ಮುಖ ಸ್ವಾಮಿ , ಎರಡನೇ ಗಜದಂಡ ಸ್ವಾಮಿ ಹೀಗೆ ಹಲವು ಜನ ಪೀಠಾಧಿ ಪತಿಗಳು ಇಲ್ಲಿದ್ದರೆಂದು ತಿಳಿದು ಬರುತ್ತದೆ.

ಮಳೆಸ್ವಾಮಿಗಳು ಬಸವ ಪೂರ್ವದವರೆಂದು ಐತಿಹ್ಯಗಳಿಂದ ತಿಳಿದು ಬರುತ್ತದೆ. ಇವರು ಕಾರಣಿಕ ಬಾಲಕ ಅಮರೇಶ್ವರನಿಗೆ ದೀಕ್ಷೆ ನೀಡಿದ ಗುರುಗಳೆಂದು ಪ್ರತೀತಿ ಇದೆ . ಇವರು ಜೀವಂತ ಸಮಾಧಿಯಾದರೆಂದು ಹೇಳಲಾಗಿದ್ದರೂ ಯಾವುದೇ ಹೆಚ್ಚಿನ ಮಾಹಿತಿಗಳು ಕಂಡು ಬರುವುದಿಲ್ಲ. ದೀಕ್ಷೆ ಮತ್ತು ಜಂಗಮ ದಾಸೋಹ ಗಳ ಮೂಲಕ ಈ ಶರಣರು ಖ್ಯಾತರಾಗಿದ್ದಾರೆ.

೧೦ : ಒಳಬಳ್ಳಾರಿ ಚೆನ್ನ ಬಸವ ಸ್ವಾಮಿಗಳು

ಇವರು ಮೂಲತಃ ಮಾನವಿ ತಾಲೂಕಿನ ಪಾಮನ ಕಲ್ಲೂರಿನವರು . ವಟಗಲ್ಲಯ್ಯನಾಗಿದ್ದ ಇವರು ಕನಕ ಗಿರಿಯ ಚೆನ್ನಮಲ್ಲ ಶಿವಯೋಗಿಗಳ ಕೃಪೆಯಿಂದ ಚೆನ್ನ ಬಸವರಾಗಿ ಒಳಬಳ್ಳಾರಿಯಲ್ಲಿ ನೆಲೆಸಿ . ಅನೇಕ ಮಹತ್ವದ ಕಾರ್ಯಗಳನ್ನು ಮಾಡಿದ್ದಾರೆ. ಅನ್ನದಾಸೋಹ -ಜ್ಞಾನದಾಸೋಹದ ಮೂಲಕ ಶರಣ ತತ್ವವನ್ನು ಜೀವಂತವಾಗಿರಿಸಿದ್ದರು. ಇವರು ೧೯೦೪ ರಲ್ಲಿ ಜನಿಸಿ, ೧೯೮೨ ರ ಅಕ್ಟೋಬರ ೧೦ ರಂದು ಲಿಂಗೈಕ್ಯರಾದರು. ಮಿತಭಾಷಿಯಾದ ಇವರು ಮಾತಿಗಿಂತ ಕೃತಿಗೆ ಪ್ರಾಮುಖ್ಯತೆ ನೀಡಿ ಸರಳ ಜೀವನವನ್ನು ಸಾಗಿಸಿದ ಶರಣರಾಗಿದ್ದಾರೆ.

೧೧ : ಉಟಕನೂರು ಬಸವಲಿಂಗ ಶರಣರು

ಉಟಕನೂರಿನ ಗುರುಪಾದಯ್ಯ ವೀರಮ್ಮರ ಮಗನೇ ಇವರು. ಯಾವಾಗಲೂ ಮೌನವಾಗಿರುತ್ತಿದ್ದರು. ಇವರ ಮೌನ ಸ್ಥಿತಿ ಕಂಡ ಕೇದಾರ ಜಗದ್ಗುರುಗಳು ಮಹಾಶರಣನೆಂದು ಗುರುತಿಸಿದ್ದರು. ಕೇವಲ ಸಾಂಕೇತಿಕವಾಗಿ ಮಾತನಾಡುತ್ತಿದ್ದರು. ಅನೇಕ ಪವಾಡಗಳನ್ನು ನಡೆಸಿದರು. ೧೯೯೨ ಜನವರಿ೮ ರಂದು ಲಿಂಗೈಕ್ಯರಾದ ಇವರು ಭಕ್ತರಪಾಲಿನ ಜೀವಂತ ದೇವರಾಗಿದ್ದರು.

೧೨ : ಕಳ್ಳಿ ಲಿಂಗಸೂಗೂರು ನಾಗಪ್ಪ ಶರಣರು

ಇವರು ೧೯ನೇ ಶತಕದಲ್ಲಿದ್ದ ಮಹಿಮಾ ಪುರುಷರೆಂದು ಖ್ಯಾತರಾಗಿದ್ದಾರೆ. ಲಿಂಗಸೂಗೂರಿಗೆ ಹತ್ತಿರವಿರುವ ಕಳ್ಳಿ ಲಿಂಗಸೂಗೂರು ಗ್ರಾಮದವರು. ಇವರು ಅನೇಕ ಲೀಲೆಗಳನ್ನು ಮಾಡಿದ ಬಗ್ಗೆ ಕತೆಗಳಿವೆ. ಸದ್ಯಕ್ಕೆ ಇವರ ಬಗ್ಗೆ ಹೆಚ್ಚಿನ ಮಾಹಿತಿಗಳು ಕಂಡುಬರುವುದಿಲ್ಲ.

೧೩ : ಸಿದ್ಧರಾಮಪುರ ವಿರೂಪಯ್ಯ

ಕ್ರಿ.ಶ.೨೦ನೇಶತಕದಲ್ಲಿದ್ದರು . ಚೆನ್ನ ಬಸವಮ್ಮ ವೀರಭದ್ರಯ್ಯರ ಮಗನಾಗಿದ್ದ ಇವರು ಸಂಸಾರ ತ್ಯಜಿಸಿ ವಿರಕ್ತ ಜೀವನಸಾಗಿಸಿ ಜನರಿಗೆ ಭಕ್ತಿ ಜ್ಞಾನಗಳನ್ನು ಬೋಧಿಸಿದರು. ಕೊಡೇಕಲ್ ಬಸಪ್ಪಯ್ಯನಿಂದ ದೀಕ್ಷೆ ಪಡೆದ ಮಸೀದಿಯನ್ನು ಕಟ್ಟಿಸುವ ಮೂಲಕ ಭಾವೈಕ್ಯತೆ ಮೆರೆದರು. ಕ್ರಿ.ಶ.೧೯೩೩ ರಲ್ಲಿ ಐಕ್ಯರಾದರೆಂದು ತಿಳಿದು ಬರುತ್ತದೆ.

೧೪ : ಹೀರಾದ ಶರಣರು

ಮಾನವಿ ತಾಲೂಕಿನ ಒಂದು ಗ್ರಾಮವಾದ ಹೀರಾ ಅನೇಕರ ಶರಣರ ನೆಲೆಬೀಡಾಗಿದೆ. ಗಲಗಿನ ಸಂಗಮನಾಥನ ಶಿಷ್ಯರೇ ಬಹಳಷ್ಟು ಜನರಿದ್ದಾರೆ. ವಿವಿಧ ವೃತ್ತಿಯನ್ನು ಮಾಡುತ್ತಾ ಆಧ್ಯಾತ್ಮದ ಕುರಿತು ನಿತ್ಯವೂ ಚಿಂತನೆ ಮಾಡುತ್ತಾರೆ. ಇವರಲ್ಲಿ ಪ್ರಮುಖರಾಗಿ ಕಂಡುಬರುವ ಹೆಸರುಗಳೆಂದರೆ: ವೀರನಗೌಡ , ಕುಂಬಾರ ಚೆನ್ನಪ್ಪ , ಇಳಿಗೇರ ರಾಮಚಂದ್ರಪ್ಪ- ರಂಗಮ್ಮ ದಂಪತಿಗಳು , ಹಾರ್ಮೋನಿಯಂ ಹನುಮಂತಪ್ಪ ಮಾಸ್ತರ ಇನ್ನೂ ಮುಂತಾದವರು ಅನ್ನ ದಾಸೋಹ - ಜ್ಞಾನದಾಸೋಹ ನಡೆಸಿ ಶರಣ ಪರಂಪರೆ ಜೀವಂತವಾಗಿರಿಸಿದ್ದರು.

ಶ್ರೀ ರಾಮಚಂದ್ರಪ್ಪನವರು ೧೯೭೮ರ ಅಕ್ಟೋಬರ ೨೯ ರಂದು ಲಿಂಗೈಕ್ಯರಾದರೆ ಇವರ ಶರಣ ಪತ್ನಿ ರಂಗಮ್ಮ ೧೯೯೩ ರ ಮಾರ್ಚ ೨೭ ರಂದು ಐಕ್ಯರಾದದ್ದನ್ನು ಗಮನಿಸಿದರೆ ಹೀರಾದ ಎಲ್ಲಾ ಶರಣರ ಕಾಲ ಕ್ರಿ.ಶ.೧೯೨೦ರಿಂದ ೧೯೯೯ ರ ವರೆಗೆ ಎಂಬುದು ಸ್ಪಷ್ಟವಾಗುತ್ತದೆ.

೧೫ : ಮೇಧಾವಿ ರಾಯನ ಕೋಠಾದ ಶರಣರು

ಇವರು ಲಿಂಗಸೂಗೂರು ತಾಲೂಕಿನ ಮೇಧಾವಿ ರಾಯನ ಕೋಠಾದ ಅನುಭಾವಿಗಳು. ಇವರ ಮೂಲ ನೆಲೆ ಯಾವುದೆಂಬುದು ಸ್ಪಷ್ಟವಾಗಿಲ್ಲ. ಇವರು ಹೀರೇಬೂದೂರಿನ ಹನುಮಂತರಾವ್ ಇವರಿಗೆ ಜ್ಞಾನ ದೀಕ್ಷೆಯನ್ನು ನೀಡಿದವರಾಗಿದ್ದಾರೆ. ಇಷ್ಟು ಮಾಹಿತಿ ಬಿಟ್ಟರೆ ಸದ್ಯಕ್ಕೆ ಇವರ ಬಗ್ಗೆ ಯಾವುದೇ ಹೆಚ್ಚಿನಾಂಶಗಳು ಕಂಡುಬರುವುದಿಲ್ಲ.

೧೬ : ಅಮೀನ ಗಡದ ಹುಚ್ಚಬುಡ್ಡೇಶ್ವರ

ಇವರು ೨೦ನೇ ಶತಕದ ಆರಂಭದಲ್ಲಿದ್ದು ಅನೇಕ ಲೀಲೆಗಳನ್ನು ನಡೆಸಿದ ಬಗ್ಗೆ ತಿಳಿದು ಬರುತ್ತದೆ. ಇವರ ನೆಲೆ, ಕಾಲದ ಬಗ್ಗೆ ಯಾವುದೇ ಹೆಚ್ಚಿನ ಮಾಹಿತಿಗಳು ಕಂಡು ಬರುವುದಿಲ್ಲ.

೧೭ : ಮುದಗಲ್ಲಿನ ಗ್ಯಾನಪ್ಪಯ್ಯ

ಲಿಂಗಸೂಗೂರು ತಾಲೂಕಿನ ಮುದುಗಲ್‌ನಲ್ಲಿ ವಾಸವಾಗಿದ್ದ ಅಂತಿಮ ಜೀವನ ಕಳೆದ ಇವರು ಅನೇಕ ಶಿಷ್ಯರಿಗೆ ಆಧ್ಯಾತ್ಮ ತಿಳುವಳಿಕೆಯನ್ನು ನೀಡಿದ್ದಾರೆ. ಇವರ ಬಗ್ಗೆ ಹೆಚ್ಚಿನ ಮಾಹಿತಿಗಳು ದೊರೆಯದಿದ್ದರೂ ಅನೇಕ ಊರಲ್ಲಿ ಇವರ ಸ್ಮರಣೆಯ ಗದ್ದುಗೆಗಳು ನೋಡಿದರೆ ಇವರು ಪ್ರಭಾವಶಾಲಿ ವ್ಯಕ್ತಿಗಳೆಂದು ತಿಳಿದು ಬರುತ್ತದೆ.

೧೮ : ನವಲಕಲ್ ಶರಣರು

ಮಾನವಿ ತಾಲೂಕಿನ ಗ್ರಾಮವಾಗಿರುವ ನವಲಕಲ್‌ನ ಪ್ರಮುಖ ಶರಣರೆಂದರೆ ಬಸವಲಿಂಗಯ್ಯ, ಸೋಮಶೇಖರ, ಪಂಚಯ್ಯಪ್ಪ ಪ್ರಮುಖರಾಗಿದ್ದಾರೆ. ಈ ಶರಣರು ಗುರು ಪರಂಪರೆಗೆ ಸೇರಿದವರಾಗಿದ್ದು ಅನ್ನ ದಾಸೋಹದ ಜೊತೆಗೆ ಜ್ಞಾನ ದಾಸೋಹವನ್ನು ನಡೆಸಿದ್ದರು. ಇವರಲ್ಲಿ ಸೋಮಶೇಖರ ಶಿವಾಚಾರ್ಯರು ಮಿತ ಭಾಷಿಗಳಾಗಿದ್ದು ಜನರಿಗೆ ಸರಿಯಾದ ತಿಳುವಳಿಕೆ ನೀಡುತ್ತಿದ್ದರು. ವಾಕ್ಯ ಸಿದ್ಧ ಪುರುಷರಾಗಿದ್ದರು. ಇವರು ಕೊದ್ದೊಡ್ಡಿಯ ನುಲಿ ಜನಾಂಗದವರಿಗೆ ಲಿಂಗ ದೀಕ್ಷೆ ನೀಡಿ ಅವರಿಗೆ ಉತ್ತಮ ಸಂಸ್ಕಾರ ನೀಡಿ ಅವರ ಬಾಳನ್ನು ಬೆಳಕಾಗಿರಿಸಿದರು. ಸದ್ಯ ಪೀಠಾಧಿಪತಿಗಳಾಗಿರುವ ವೇದಮೂರ್ತಿ ಗಂಗಾಧರ ಮಹಾಸ್ವಾಮಿಗಳು ಶಿವಾನುಭವ ನಡೆಸುತ್ತ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತ ಕ್ಷೇತ್ರದಲ್ಲಿ ಜ್ಞಾನದಾಸೋಹ ನಿರಂತರವಾಗಿ ಅನ್ನದಾಸೋಹ ನಡೆಸುತ್ತ ಶರಣರ ತತ್ವಗಳನ್ನು ಜೀವಂತವಾಗಿರಿಸಿದ್ದಾರೆ.

೧೯ : ಅತ್ತನೂರು ನಿಜಾನಂದರು

ಮಾನವಿ ತಾಲೂಕಿನ ಗ್ರಾಮದ ಶರಣರಾದ ಇವರ ಬಗ್ಗೆ ಹೆಚ್ಚಿನ ಮಾಹಿತಿಗಳು ಕಂಡು ಬರದ ಕಾರಣ ಸದ್ಯಕ್ಕೆ ಏನನ್ನು ಹೇಳಲಾಗದು.

೨೦ : ಗೊಬ್ಬೂರಿನ ಶರಣರು

ದೇವದುರ್ಗ ತಾಲೂಕಿನ ಗೊಬ್ಬೂರಿನವರಾದ ಈ ಶರಣರಲ್ಲಿ ಪ್ರಮುಖರಾದವರೆಂದರೆ ಬೂದಿ ಬಸವ ಸ್ವಾಮಿಗಳು, ಶಾಂತಮೂರ್ತಿ ಸ್ವಾಮಿಗಳು ಪ್ರಮುಖರಾಗಿದ್ದಾರೆ. ಇವರ ಬಗ್ಗೆ ಸ್ಪಷ್ಟವಾದ ಮಾಹಿತಿಗಳು ಕಂಡುಬರುವುದಿಲ್ಲ. ಆದರೆ ಸದ್ಯ ಪೀಠಾಧಿಪತಿಗಳಾಗಿರುವ ಬೂದಿ ಬಸವ ಸ್ವಾಮಿಗಳು ಅನ್ನದಾಸೋಹ - ಜ್ಞಾನದಾಸೋಹ ನಡೆಸುತ್ತ ಶರಣರ ಪರಂಪರೆಯನ್ನು ಜೀವಂತವಾಗಿಟ್ಟಿದ್ದಾರೆ.

೨೧ : ಗಲಗಿನ ಸಂಗಮನಾಥರು

ದೇವದುರ್ಗ ತಾಲೂಕಿನ ಗಲಗಿನ ಗ್ರಾಮವದವರಾದ ಇವರು ಶಾಲಾ ಶಿಕ್ಷಕರಾಗಿದ್ದುಕೊಂಡು ಶ್ರೇಷ್ಠ ಅನುಭಾವಿಯಾಗಿದ್ದರು. ಇವರು ಹೀರಾ, ನವಲಕಲ್, ಕುರಕುಂದಾ ಗ್ರಾಮಗಳಲ್ಲದೇ ಹೊರ ರಾಜ್ಯಗಳಲ್ಲಿ ಅನೇಕ ಶಿಷ್ಯರನ್ನು ಹೊಂದಿದ್ದರು. ಇವರು ಪ್ರತಿನಿತ್ಯವೂ ತಮ್ಮ ಮನೆಯಲ್ಲಿಯೇ ಶಿಷ್ಯರ ಜೊತೆಗೂಡಿ ಶರಣ ತತ್ವಗಳನ್ನು ಚಿಂತನೆ ಮಾಡುತ್ತಿದ್ದರು. ಮನೆಯನ್ನು ಮಹಾಮನೆಯಾಗಿ ಮಾಡಿದ್ದರು. ಅನ್ನದಾಸೋಹದ ಜೊತೆಗೆ ಜ್ಞಾನದಾಸೋಹವನ್ನು ನಡೆಸಿದ್ದರು.

೨೨ : ಜಾಗಟಗಲ್ ವೀರೂಪಾಕ್ಷಯ್ಯ

ಇವರು ದೇವದುರ್ಗ ತಾಲೂಕಿನ ಜಾಗಟಗಲ್ ಗ್ರಾಮದವರೆಂಬುದನ್ನು ಹೊರತು ಪಡಿಸಿದರೆ ಮತ್ತಾವುದೇ ಮಾಹಿತಿಗಳು ಸದ್ಯಕ್ಕೆ ಕಂಡುಬರುವುದಿಲ್ಲ.

೨೩ : ವಡವಟ್ಟಿ ಲಿಂಗಪ್ಪಯ್ಯ

ಇವರ ಬಗ್ಗೆ ಸಹಿತ ಮಾಹಿತಿಗಳು ಕಂಡುಬರುವುದಿಲ್ಲವಾದರೂ ಇವರು ಜಾಗಟಗಲ್ ವೀರೂಪಾಕ್ಷಯ್ಯ ಶರಣರ ಒಡನಾಡಿಗಳೆಂದು ತಿಳಿದು ಬರುತ್ತದೆ.

೨೪ : ಕವಿತಾಳದ ಶರಣರು

ಮಾನವಿ ತಾಲೂಕಿನ ಕವಿತಾಳದ ಕಲ್ಮಠದ ಶರಣರೇ ಕವಿತಾಳ ಶರಣರಾಗಿದ್ದಾರೆ. ಬಸವಲಿಂಗ ಸ್ವಾಮಿಗಳು ,ಪರ್ವತಸ್ವಾಮಿಗಳು ,ಬಸವಲಿಂಗ ಸ್ವಾಮಿಗಳು , ಸಿದ್ಧಲಿಂಗ ಸ್ವಾಮಿಗಳು ಇಲ್ಲಿಯ ಪ್ರಮುಖ ಶರಣರಾಗಿದ್ದಾರೆ. ಇವರೆಲ್ಲರೂ ಪುರಾಣ, ಪ್ರವಚನ ಏರ್ಪಡಿಸುವ ಮೂಲಕ ಅನ್ನದಾಸೋಹ ಜ್ಞಾನಾದಾಸೋಹಗಳನ್ನು ನಡೆಸಿದ್ದರು. ಸಿದ್ಧಲಿಂಗ ಸ್ವಾಮಿಗಳು ಪುಸ್ತಕಗಳನ್ನು ಪ್ರಕಟಿಸಿದ್ದರು.

ಇದುವರೆಗಿನ ಪಟ್ಟೀಕರಿಸಿದ ಶರಣರಲ್ಲದೇ ದೂದಪೀರಾ ನಂತಹ ಮುಸ್ಲಿಮರು ಶರಣ ತತ್ವ ಬೆಳೆಸಿದ್ದಾರೆ.ಈ ಪರಿಸರದಲ್ಲಿ ಅದರಲ್ಲೂ ಬಸವೋತ್ತರ ಯುಗದಲ್ಲಿ ಊರಿಗೊಬ್ಬ ಶರಣರಂತೆ ಅನೇಕರು ಕಂಡು ಬರುತ್ತಾರೆ. ಎಲ್ಲರೂ ತಮ್ಮ ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಜ್ಞಾನದಾಸೋಹ ನಡೆಸುತ್ತ ಸಾಗಿದ್ದಾರೆ. ಅವರೆಲ್ಲರ ಮಾಹಿತಿ ಸಂಗ್ರಹಿಸಿ ವಿವರ ನೀಡುವುದು ಸದ್ಯದ ಮಟ್ಟಿಗೆ ಬಹು ಕಠಿಣ ಕೆಲಸ ಜೊತೆಗೆ ಅದು ಬಹು ದೀರ್ಘವ್ಯಾಪ್ತಿಯನ್ನು ಹೊಂದಿರುವ ಕಾರಣ ಇಲ್ಲಿ ಪ್ರಮುಖರನ್ನು ಮಾತ್ರ ಗುರುತಿಸಲಾಗಿದೆ.

೩.೩ ಶರಣರ ಸಾಧನೆಯ ವಿವಿಧ ಆಯಾಮಗಳ ಚಿತ್ರಣ

ರಾಯಚೂರು ಪರಿಸರದಲ್ಲಿ ಶರಣರು ಸಾಂಸ್ಕೃತಿಕ ಬರ- ಬದುಕಿನ ಭೀತಿಯನ್ನು ಎದುರಿಸುತ್ತಲೇ ಜೀವನಕ್ಕೆ ಅಣಿಯಾಗಬೇಕಾದ ಹಲವು ಪ್ರಸಂಗಗಳನ್ನು ಕಾಣುತ್ತೇವೆ. ಕಾಲಕಾಲಕ್ಕೆ ಬಂದ ಶರಣರು ತಮ್ಮ ಸಮಕಾಲೀನ ಸಮಾಜ- ಧರ್ಮ- ಬದುಕಿನ ಮೌಲ್ಯಗಳಿಗಾಗಿ ತಮ್ಮದೇ ಆದ ಮೀತಿಯಲ್ಲಿ ಆಂದೋಲವನ್ನು ಮಾಡಿದರು. ಒಬ್ಬರಿಗಿಂತ ಒಬ್ಬರು ಭಿನ್ನವಾಗಿ ಒಟ್ಟಾರೆ ಬದುಕಿನ ಜೀವನ ಗತಿಯನ್ನು ಉನ್ನತಿಗೇರಿಸುವಲ್ಲಿ ಅಮೂಲ್ಯ ಕೊಡುಗೆ ನೀಡಿದ್ದಾರೆ.

ಬಸವಪೂರ್ವಯುಗದ ಶರಣರ ಸಾಧನೆ :

ಈ ಯುಗದ ಶರಣರು ವೈಯಕ್ತಿಕವಾಗಿ ಹೋರಾಟ ನಡೆಸಿ ಇಡೀ ಸಮಾಜವನ್ನೇ ಹೊಸದಿಕ್ಕಿನೆಡೆಗೆ ತಿರುಗಿದರು . ಧರ್ಮವೆಂಬುದು ಕೆಲವರ ಹಿಡಿತದಲ್ಲಿ ಬಂಧಿಯಾದಾಗ ಜನರಿಗೆ ಧರ್ಮದ ವಾಸ್ತವ ತಿಳಿಸಿಕೊಟ್ಟರು . ಮೂಢ ಆಚರಣೆಗಳನ್ನು ತಿರಸ್ಕರಿಸಿದರು. ಸಾಮಾನ್ಯವಾಗಿ ಅರಸರು ಈ ಕಾಲದಲ್ಲಿ ಧರ್ಮ ಸಮನ್ವಯಿಗಳಾಗಿ ಕಂಡರು ಅವರು ಪ್ರಚಲಿತವಾದ- ಪ್ರಭಾವವುಳ್ಳ ಧರ್ಮಕ್ಕೆ ಆಶ್ರಯ ನೀಡಿ ಆ ಧರ್ಮದ ವಾರಸುದಾರರ ನೀತಿಗಳನ್ನು ಆಡಳಿತದಲ್ಲಿ ಅಳವಡಿಸಿಕೊಂಡರು. ಈ ಸಂದರ್ಭದಲ್ಲಿ ಅರಸರು ಇತರ ಧರ್ಮಗಳನ್ನು ದಮನ ಗೊಳಿಸುವ ಕಾರ್ಯವನ್ನು ಕೈ ಗೊಂಡರೆಂಬುದು ಸೂಕ್ಷ್ಮ ಅವಲೋಕನೆಯಿಂದ ತಿಳಿಯುತ್ತದೆ.

ಈ ಯುಗದಲ್ಲಿ ವೈದಿಕ ಧರ್ಮ ತನ್ನ ಪ್ರಬಲ ಹೀಡಿತ ಸಾಧಿಸಿತ್ತು. ತನ್ನದೇ ಆದ ಸೈದ್ಧಾಂತಿಕ ನಿಲವುಗಳನ್ನು ಪ್ರತಿಪಾದಿಸುತ್ತ ಬ್ರಾಹ್ಮಣ ವರ್ಗದ ಹಿತ ಕಾಪಾಡುತ್ತ ಇತರರನ್ನು ಬಹಳ ಹೀನಾಯವಾಗಿ ಕಾಣತೊಡಗಿತು. ಇಂತಹ ವ್ಯವಸ್ಥೆಯ ವಿರುದ್ಧ ಈ ಯುಗದ ಶರಣರು ಹೋರಾಟ ನಡೆಸಿದರು. ಇಂತಹ ಹೋರಾಟಕ್ಕೆ ಯಾವುದೇ ಸಾಮೂಹಿಕ ಬೆಂಬಲವಿರಲಿಲ್ಲ ಆದರೂ ವೈಯಕ್ತಿಕ ಮಟ್ಟದಲ್ಲಿ ಈ ಯುಗದ ಈ ಪರಿಸರದ ಶರಣರು ದಿಟ್ಟ ಹೋರಾಟ ನಡೆಸಿದರು.

ಶಂಕರ ದಾಸಿಮಯ್ಯ ಅಂದಿನ ದಿನ ಜಡತ್ವ ಗೊಂಡಿದ್ದ ಬ್ರಾಹ್ಮಣ ಧರ್ಮವನ್ನು ಧಿಕ್ಕರಿಸಿ ಮನುಷ್ಯತ್ವದ ಕಡೆಗೆ ತಮ್ಮನ್ನು ತೆರೆದು ಕೊಂಡರು .ಅದಕ್ಕಾಗಿ ವ್ಯವಸ್ಥಿತ ಹೋರಾಟವನ್ನು ಅಣಿಗೊಳಿಸಿಕೊಂಡರು. ಶರಣ ಧರ್ಮಕ್ಕೆ ಚಾಲನೆಯನ್ನು ನೀಡಿದರು. ಅಂದಿನ ರಾಜಧರ್ಮವಾಗಿದ್ದ ಜೈನ ಧರ್ಮದ ವಿರುದ್ಧ ಸಟೆದು ನಿಂತು ಹೋರಾಟ ನಡೆಸಿದಾಗ ಜೈನ್ಯರು- ವೈದಿಕರು ತತ್ತರಿಸಿ ಹೋಗಿದ್ದು ಸಮಕಾಲೀನ ಶಾಸನಗಳ ಆಧಾರದಿಂದ ಸೂಕ್ಷ್ಮವಾಗಿ ತಿಳಿಯಬಹುದು. ಅದುವರೆಗಿನ ಪ್ರಾಬಲ್ಯ ಧರ್ಮದ ಕೇಂದ್ರೀಕರಣ ನೀತಿಯನ್ನು ವಿರೋಧಿಸುವ ಜೊತೆಗೆ ಸಾಮಾನ್ಯರ ಅಜ್ಞಾನಗಳನ್ನು ಖಂಡಿಸಿ ಮನುಷ್ಯ ಧರ್ಮದ ಪರಿಕಲ್ಪನೆಗಳನ್ನು ತಿಳಿಸಿದರು.

ಜನಪದರ ಭಾವನೆಗಳನ್ನು ಅರಿತು ಕೊಂಡು ಅವರ ಆಚರಣೆಗಳನ್ನೇ ಸಾಧನವಾಗಿರಿಸಿಕೊಂಡು ಆ ಮೂಲಕ ಜನರನ್ನು ಜ್ಞಾನದ ಕಡೆಗೆ ವಾಸ್ತವ ಧರ್ಮದ ಕಡೆಗೆ ಕಣ್ಣು ತೆರೆಸಿದವರು ಢಕ್ಕೆಯ ಮಾರಯ್ಯ .ಕ್ಷುದ್ರದೇವತೆ ಮಾರಿಯ ಮೂಲಕವೇ ಜನರಿಗೆ ನಿಜವಾದ ಮಾರಿಯ ಪರಿಕಲ್ಪನೆ ತಿಳಿಸಿದರು. ಆ ಮೂಲಕ ಜನರ ಕಣ್ಣು ತೆರೆಸಿ ಮನುಷ್ಯತ್ವದ ಮಹತ್ವ ತಿಳಿಸಿ ಕೊಟ್ಟರು.

ಶಿವಜಾತ ಒಡೆಯರು, ಬಿಲ್ಲಮರಾಜರು ಪ್ರಸಾದ ಮಹತ್ವವನ್ನು ತಿಳಿಸುತ್ತ ಪ್ರಸಾದಕ್ಕೆ ಜಾತಿ ಮುಖ್ಯವಲ್ಲ ವೆಂಬುದನ್ನು ಮೊದಲಬಾರಿಗೆ ಚರಿತ್ರೆಯಲ್ಲಿ ತೊರಿಸಿಕೊಟ್ಟರು . ಈ ಯುಗದ ಶರಣರು ಮನುಷ್ಯ ಮನುಷ್ಯರನ್ನು ಪ್ರೀತಿಸುವ ಅವಶ್ಯಕತೆಯನ್ನು ಒತ್ತಿ ಹೇಳಿದರು. ಮನುಷ್ಯನ ಬದುಕಿಗೆ ಅನ್ನದ ಸಮಸ್ಯೆಯ ಬಗ್ಗೆ ತಿಳಿಸಿ, ಪ್ರತಿಯೊಬ್ಬನು ತನ್ನ ಅನ್ನವನ್ನು ತಾನೇ ಕಂಡುಕೊಳ್ಳಬೇಕೆಂಬ ಸಾರ್ವಕಾಲಿಕ ಸತ್ಯವನ್ನು ತಿಳಿಸಿದರು. ವೈಯಕ್ತಿಕ ಹೋರಾಟದ ಸಂದರ್ಭದಲ್ಲಿ ಇವರು ರಾಜತ್ವವನ್ನು ಸಹ ವಿರೋಧಿಸಿದರು. ರಾಜ ದೇಶದ ಸೇವಕನೇ ಹೊರತು ಅವನು ದೇವತೆಯಲ್ಲ ವೆಂಬುದನ್ನು ಮೊದಲಬಾರಿಗೆ ತಿಳಿಸಿ ಕೊಟ್ಟರು.

ಸರ್ವರಿಗೆ ಸಮಪಾಲು - ಸಮಬಾಳು ಸಿಗಬೇಕೆಂಬ ಆಧುನಿಕ ಮೌಲ್ಯವನ್ನು ಈ ಯುಗದ ಶರಣರು ವಾಸ್ತವಿಕವಾಗಿ , ಪ್ರಾಯೋಗಿಕವಾಗಿ ತೋರಿಸಿ ಕೊಟ್ಟರು .

ಹಲವು ನೆಲೆಗಳಲ್ಲಿ ನಿಂತು ಅವರು ಹೋರಾಟ ನಡೆಸಿದರೂ ಅವರ ಮುಖ್ಯ ಕಾಳಜಿ ಮನುಷ್ಯನ ಬದುಕನ್ನು ಎತ್ತರಿಸುವುದಾಗಿತ್ತು. ಆರ್ಥಿಕವಾಗಿ ಪ್ರತಿಯೊಬ್ಬ ಸಬಲನಾಗಲೂ ಒಂದು ಕಾಯಕ, ಸಾಮಾಜಿಕವಾಗಿ ಸಬಲನಾಗಲು ಸಮಾನತೆ- ವ್ಯಕ್ತಿ ಸ್ವಾತಂತ್ರ್ಯ , ಧಾರ್ಮಿಕವಾಗಿ ವಾಸ್ತವಿಕ ಪ್ರಜ್ಞೆ ತಾಳಲು ಮಾನವೀಯ ಮೌಲ್ಯವುಳ್ಳ ಧರ್ಮದ ಸಂಘಟನೆ . ಇವು ಈ ಯುಗದ ಶರಣರ ಆಂದೋಲನದ ವೈಶಿಷ್ಟ್ಯಗಳ ಜೊತೆಗೆ ಸಾಧನೆಗಳಾಗಿದ್ದವೆಂಬುದನ್ನು ಹೇಳಬಹುದಾಗಿದೆ. ಇವರ ಹೋರಾಟ ವ್ಯಕ್ತಿಗತ ಹಂತದಲ್ಲಿ ನಡೆದರೂ ಅದು ಮುಂದಿನ ಆಂದೋಲನಕ್ಕೆ ಸ್ಪಷ್ಟ ಸ್ವರೂಪವನ್ನು ನೀಡುವಲ್ಲಿ ಒಂದು ವೇದಿಕೆಯನ್ನು ನಿರ್ಮಿಸಿಕೊಟ್ಟಿತು.

ಅದುವರೆಗೂ ಮನುಷ್ಯನಿಗೆ ತಾನು ಏನೆಂಬುದರ ಅರಿವೇ ಇರಲಿಲ್ಲ. ಅವನಲ್ಲಿ ಅರಿವಿನ ಜಾಗೃತಿಯನ್ನು ಮೂಡಿಸಿ, ಅವನನ್ನು ಬದುಕಿನ ಕಡೆಗೆ ಎಚ್ಚರದಿಂದ ಹೆಜ್ಜೆ ಇಡುವಂತೆ ಮೊದಲ ಬಾರಿಗೆ ಈ ಯುಗದ ಶರಣರು ತೋರಿಸಿ ಕೊಟ್ಟರು. ಇವರ ಸಾಧನೆ ಅಲ್ಪವಾಗಿ ಕಂಡು ಬಂದರೂ ಮುಂದಿನ ಬಸವಪೂರ್ವ ಯುಗದ ಸಾಧನೆಗೆ ನಾಂದಿಯಾಯಿತೆಂಬುದನ್ನು ಮರೆಯಲಾಗದು. ಈ ಯುಗದ ಶರಣರ ವೈಯಕ್ತಿಕ ನೆಲೆಯ ಸಾಮಾಜಿಕ , ಧಾರ್ಮಿಕ ಹೋರಾಟ ಮುಂದಿನ ಸಂಘಟನಾತ್ಮಕ , ಸಾಮೂಹಿಕ ಆಂದೋಲನಕ್ಕೆ ಸ್ಪಷ್ಟ ಸಂಹಿತೆಯನ್ನು ಈ ಯುಗದ ಶರಣರು ಕಲ್ಪಿಸಿ ಕೊಟ್ಟರು .

ಬಸವ ಯುಗದ ಶರಣರ ಸಾಧನೆ :

ಈ ಯುಗದ ಶರಣರು ಬಸವ ಪೂರ್ವಯುಗದ ಶರಣರ ಹೋರಾಟದ ಸ್ವರೂಪಕ್ಕೆ ಒಂದು ನೂತನ ರೂಪವನ್ನು ನೀಡಿದರು. ವರ್ಣ ಧರ್ಮ-ಶರಣಧರ್ಮದ ನಡುವೆ ಇರುವ ಅತ್ಯಂತ ನಿದರ್ಶನ ಪೂರ್ವಕವಾಗಿ ತೋರಿಸುವ ಜೊತೆಯಲ್ಲಿಯೇ ಶರಣ ಧರ್ಮದ ಅಗತ್ಯತೆ - ಅನಿವಾರ್ಯತೆ ಅದರ ಜೀವನಪರ ಮೌಲ್ಯಗಳನ್ನು ಪ್ರಾಯೋಗಿಕವಾಗಿ ತೆರೆದು ತೋರಿಸಿತು. ಆ ಪರಿಣಾಮವಾಗಿಯೇ ಸರ್ವರೂ ಅದರ ಕಡೆಗೆ ಆಕರ್ಷಿತರಾದರು. ಜಡಗೊಂಡ ಮನುಸ್ಸುಗಳಿಗೆ ಚೇತನ ಉಂಟಾಯಿತು.

' ಕರ್ಮ ' ಸಿದ್ಧಾಂತವನ್ನು ಮುಂದಿಟ್ಟು ಕೊಂಡು ಧಾರ್ಮಿಕ, ಸಾಮಾಜಿಕ ನಿಯಮಗಳನ್ನು ರೂಪಿಸಿ ಸರಳವಾಗಿ ಅನ್ನ ಸಂಪಾದಿಸುವ, - ಅಧಿಕಾರದ ಗದ್ದುಗೆ ನಿರ್ಮಿಸಿಕೊಂಡು ಐಷಾರಾಮಿ ಜೀವನ ಸಾಗಿಸುವ ಸರಳ ಸಂಚಿನ ತಂತ್ರವನ್ನು ವೈದಿಕ ,ಧರ್ಮದ ಸೂತ್ರವ ನ್ನು ರೂಪಿಸಿದ್ದರು. ಇದನ್ನು ವೈಧಿಕ ಧರ್ಮ ಜನರ ನೆಲೆಯನ್ನು ಪ್ರಮುಖವಾಗಿ ಅವರ ಗುಣ ಕರ್ಮಗಳನ್ನು ಆಧರಿಸಿ ನಾಲ್ಕು ವರ್ಣಗಳನ್ನಾಗಿ ವಿಭಜಿಸಿ ಅಸಮಾನತೆಯ ಕಂದಕವನ್ನು ನಿರ್ಮಿಸಿತ್ತು. ಬ್ರಾಹ್ಮಣನಾದವನು ದೇವಸ್ವರೂಪ, ಪೂಜ್ಯನೂ ಗುರು ಪ್ರಾಜ್ಞನೂ ಎಂದು ಹೇಳಿ ಅವನಿಗೆ ಉನ್ನತ ಸ್ಥಾನ ನೀಡಿ ಉಳಿದವರನ್ನು ಕೀಳಾಗಿ ಕಾಣಲಾರಂಭಿಸಿದರು. ಜಗತ್ತಿನಲ್ಲಿ ಹುಟ್ಟಿದವರೆಲ್ಲರೂ ಬ್ರಾಹ್ಮಣರ ಸೇವೆ ಮಾಡುವ ಸಲುವಾಗಿಯೇ ಎಂಬ ವಾತಾವರಣ ನಿರ್ಮಿಸಿದರು.

ಇಂತಹ ನೀಚತನವನ್ನು , ಅವಮಾನವೀಯತೆಯನ್ನು ಶರಣರು ಖಂಡಿಸಿದರು. ಆ ಮೂಲಕ ಪ್ರತಿಯೊಬ್ಬರು ದುಡಿದು ತಿನ್ನಲೇ ಬೇಕು. ಸಮಾನರಾಗಿ ಬಾಳುವ ಹಕ್ಕು ಎಲ್ಲರಿಗೆ ಇದೆ. ಹುಟ್ಟಿದವರೆಲ್ಲರೂ ಒಂದೇ ಎಂಬ ತತ್ವವನ್ನು ಈ ಯುಗದ ಶರಣರು ತಾತ್ವಿಕವಾಗಿ ಜೊತೆಗೆ ಪ್ರಾಯೋಗಿಕವಾಗಿ ತೋರಿಸಿ ಕೊಟ್ಟರು . ವೃತ್ತಿ ಸ್ವಾತಂತ್ರ್ಯ ಮತ್ತು ವ್ಯಕ್ತಿ ಸ್ವಾತಂತ್ರ್ಯ ಕುರಿತು ಹೇಳಿದರು. ಶರಣರ ಧರ್ಮದಲ್ಲಿ ಸೇವೆಯೆಂಬುದು ಗುಲಾಮಗಿರಿಯ ಸಂಕೇತವಲ್ಲ. ಅದು ವ್ಯಕ್ತಿಯೊಬ್ಬನ ಪರಮ ಕರ್ತವ್ಯ , ಜೀವನದ ಅವಿಭಾಜ್ಯ ಅಂಗ. ಕಾಯಕ ಮಾಡದವನಿಗೆ ಸಮಾಜದಲ್ಲಿ ಸ್ಥಾನವಿಲ್ಲ ಎಂಬ ಸ್ಪಷ್ಟ ನಿಲುವನ್ನು ಈ ಪರಿಸರದ ಶರಣರು ಸಾರಿದರು. ಇದನ್ನು ನಾವು ಆಯ್ದಕ್ಕಿ ದಂಪತಿಗಳ ಮೂಲಕ ಕಾಣಬಹುದು. ಈ ಪರಿಸರದ ಶರಣರು ಆಚಾರ ಮತ್ತು ವಿಚಾರಗಳನ್ನು ಸಮನ್ವಯ ಗೊಳಿಸಿಕೊಂಡು ಅವುಗಳನ್ನು ಕಾರ್ಯ ರೂಪಕ್ಕೆ ತಂದರು.

ಕಾಯಕದಷ್ಟೇ ಪ್ರಮುಖವಾಗಿ ದಾಸೋಹ ತತ್ವವನ್ನು ಅದರ ಜೀವಂತಿಕೆಯನ್ನು ಈ ಭಾಗದ ಶರಣರು ತಮ್ಮ ವಚನಗಳಲ್ಲಿ ಅಭಿವ್ಯಕ್ತಿಸುವ ಜೊತೆಗೆ ಅದನ್ನು ಕಾರ್ಯಗತ ಗೊಳಿಸಿದರು. ಪ್ರಸಾದ ಸಂದರ್ಭದಲ್ಲಿ ಎಲ್ಲ ಶರಣರಿಂದ ಖ್ಯಾತಿ ಗಳಿಸಿದವರು ಈ ಪರಿಸರದ ಶರಣರಾದ ಗೊಬ್ಬೂರು ಬಿಬ್ಬಿ ಬಾಚಯ್ಯ, ಬಿಲ್ಲಮ ರಾಯ ಶಿವಜಾತ ಒಡೆಯರು. ಸುಂಕದ ಬಂಕಯ್ಯನಂತೂ ವೃತ್ತಿಯ ಮೂಲಕವೇ ಆಧ್ಯಾತ್ಮದ ಪರಿಯನ್ನು ತಿಳಿಸುತ್ತ ಮನುಷ್ಯ ಎಂತಹ ಆದಾಯದ ಹುದ್ದೆಯಲ್ಲಿದ್ದರೂ ಪ್ರಾಮಾಣಿಕನಾಗಿರಲು ಸಾಧ್ಯವಿದೆ ಎಂಬುದನ್ನು ತೋರಿಸಿ ಕೊಟ್ಟರು. ಮುಕ್ತಾಯಕ್ಕ ವೈಚಾರಿಕ ನಿಲುವು ಇಡೀ ಶರಣ ಪರಿಸರದಲ್ಲಿಯೇ ಗಮನಾರ್ಹವಾದಂತದ್ದು. ಈ ಪರಿಸರದ ಈ ಯುಗದ ಶರಣರ ಸಾಧನೆಯ ಆಯಾಮಗಳು ವೈವಿಧ್ಯಮಯವಾಗಿದೆ. ಬದುಕಿನ ಹಲವು ಹಂತಗಳಲ್ಲಿ ತಮ್ಮದೇ ಆದ ಖಚಿತ ನಿಲುವನ್ನು ಹೊಂದಿ ಬದುಕಿದವರು.

ಬಸವೋತ್ತರ ಯುಗದ ಶರಣರ ಸಾಧನೆ :

ಕಲ್ಯಾಣ ಕ್ರಾಂತಿಯ ನಂತರ ಶರಣ ಪರಂಪರೆಯನ್ನು ಈ ಯುಗದ ಶರಣರು ಅದನ್ನು ಮತ್ತೇ ಜೀವಂತವಾಗಿರಿಸಿದರು. ಇನ್ನೇನು ಶರಣ ಸಾಹಿತ್ಯ ಮುಗಿಯಿತು ಎಂದಾಗಲೇ ಈ ಪರಿಸರದಲ್ಲಿ ಮೂಡಿ ಬಂದ ಅಗ್ಘವಣಿ ಹಂಪಯ್ಯ ನಾಲ್ಕೇ ವಚನಗಳನ್ನು ಬರೆದರೂ ತನ್ನ ಯುಗದ ಚಾರಿತ್ರಿಕ ದಾಖಲೆಯನ್ನು ದಾಖಲಿಸುವುದರ ಜೊತೆಗೆ ಶರಣರ ಸಾಹಿತ್ಯದ ಪುನಶ್ಚೇತನ ಗೊಳಿಸಿ ಹೊಸ ಯುಗವನ್ನು ಇಡೀ ಶರಣರ ಸಾಹಿತ್ಯ ಸಂದರ್ಭದಲ್ಲಿ ಮಾಡಿದನು.

ಕಲ್ಯಾಣದ ಸಾಮೂಹಿಕ ಆಂದೋಲನದಂತೆ ಮತ್ತೊಂದು ಆಂದೋಲನ ಈ ಪರಿಸರದ ಜಲದುರ್ಗ ಶರಣರಿಂದ ನಡೆಯಿತು. ತಮ್ಮ ಸಾಹಿತ್ಯವನ್ನು ಉಳಿಸುವ ಸಲುವಾಗಿ ಜಲದುರ್ಗ ಶರಣರು ಮುಖಾಮುಖಿಯಾಗಿ ಸಂಘರ್ಷವನ್ನು ನಡೆಸಿ ಧರ್ಮ ಸಾಹಿತ್ಯವನ್ನು ಬೆಳೆಸಿದರು. ಮತ್ತೊಮ್ಮೆ ಶರಣ ಪರಂಪರೆಯನ್ನು ಸಾಮೂಹಿಕವಾಗಿ ಕಟ್ಟುವ ಪ್ರಯತ್ನ ಮಾಡಿದರು. ಸಮಯ ಕಲ್ಯಾಣದಂತೆ (ಬಸವಕಲ್ಯಾಣ) ಇದನ್ನು ಮತ್ತೊಂದು ಕಲ್ಯಾಣವಾಗಿಸುವ ಅಂದರೆ ಅಮರ ಕಲ್ಯಾಣ (ಜಲದುರ್ಗ) ವಾಗಿರಿಸುವ ಪ್ರಯತ್ನ ನಡೆದದ್ದು ಈ ಪರಿಸರದ ಶರಣರಿಂದ ಎಂಬುದ ಗಮನಿಸಬೇಕಾದ ಸಂಗತಿಯಾಗಿದೆ.

ಆನಂತರ ಬಂದ ಹೇಮಗಲ್ಲ ಹಂಪರು, ತತ್ವ ಪದಗಳನ್ನು ರಚಿಸಿದ ಶರಣರು ಶರಣ ಸಾಹಿತ್ಯವನ್ನು ಅತ್ಯಂತ ವೈವಿಧ್ಯಮಯವಾಗಿ ಬೆಳೆಸಿದರು. ಅನೇಕ ಹೊರಾಟ ದಬ್ಬಾಳಿಕೆಗಳ ಮಧ್ಯೆ ಈ ಪರಿಸರದ ಶರಣರು ಸಾಹಿತ್ಯ ಸಾಧನೆ ಮಾಡಿದ್ದು ಬಹು ಗಮರ್ನಾಹ ಸಂಗತಿಯಾಗಿದೆ. ಭಾಷೆ, ಧರ್ಮ ಸಂಸ್ಕೃತಿಗಳ ಒತ್ತಾಯದ ಹೇಳಿಕೆ ಇದ್ದರು ಅವುಗಳ ಪರದಿಯಲ್ಲಿಯೇ ಸೌಹಾರ್ದತೆ ನೆಲೆಗೊಳ್ಳುವ ಹಾಗೇ ಮಾಡಿದ್ದು ಈ ಪರಿಸರದ ಶರಣರ ಬಹುದೊಡ್ಡ ಸಾಧನೆಯಾಗಿದೆ. ಮತಾಂತರ- ಸಾಂಸ್ಕೃತಿಕ ಪರಿವರ್ತನೆಗೊಳಗಾದ ಕೆಳವರ್ಗದವರಿಗೆ ಅವರ ಮನಸ್ಸಿನ ಹೊಯ್ದಾಟಕ್ಕೆ ಸಾಂತ್ವಾನ ನೀಡಿದ್ದು ಈ ಯುಗದ ಈ ಪರಿಸರದ ಶರಣರು. ರಾಜಕೀಯ ಅಸ್ಥಿರತೆ, ಇಡೀ ಜನ ಸಮೂಹ ಭೀತಿಯ ನೆರಳಲ್ಲೆ ಕಾಲ ಕಳೆಯುವಾಗ ಶರಣರು ಸಂಸಾರದಿಂದ ಮುಕ್ತಿ ಪಡೆಯುವ ಹಂಬಲ ಹೆಚ್ಚಾಗಿ ಅನುರಕ್ತರೆಲ್ಲ ವಿರಕ್ತರಾಗ ತೊಡಗಿದರು. ಇಂತಹ ವಿರಕ್ತ ಸ್ಥಿತಿಯೇ ಅವರ ಉಭಯ ಸ್ಥಿತಿಗೆ ಅಸ್ತ್ರವಾಯಿತು. ಯುದ್ಧವಾದಿಗಳು ಒಂದೆಡೆಯಾದರೆ ವಿರಕ್ತಿಗಳು ಮತ್ತೊಂದಡೆಯಾಗಿ ಮುಖಾಮುಖಿ ಸಂಘರ್ಷ ನಡೆಸಿ ಪ್ರಭುತ್ವವನ್ನೇ ಧಿಕ್ಕರಿಸುವ ಶರಣರ ಅನುಭಾವ ಪ್ರಧಾನವಾದ ಸಾಹಿತ್ಯ ಇಲ್ಲಿ ಕಾಣಿಸಿಕೊಂಡು ಪರೋಕ್ಷವಾಗಿ ಇಡೀ ಸಮೂಹದ ಬದುಕನ್ನೇ ಬೆತ್ತಲಾಗಿರಿಸಿತು. ಬಯಲನ್ನು ನಿರ್ಬಯಲು ಗೊಳಿಸಿ ಉಭಯ ವಳಿದು ಒಂದೆನ್ನುವಭಾವ ಮೂಡಿಸಿ ಈ ಪರಿಸರದ ಶರಣರ ನಿರಂತರ ಚಲನ ಶೀಲತೆಯನ್ನು ದೃಢ ಪಡಿಸಿತು.

ಅಧ್ಯಾಯ ೦೪ :

ರಾಯಚೂರು ಪರಿಸರದ ಶರಣರ ಶರಣ ಸಾಹಿತ್ಯ ಸಮೀಕ್ಷೆ

೪:೧ ಪ್ರಮುಖ ಘಟ್ಟಗಳು

೪ :೨ ವಚನ ಪ್ರಕಾರ : ಭಾಷೆ-ತಂತ್ರ-ಧೋರಣೆ

೪:೩ ವಚನೇತರ ಪ್ರಕಾರ : ಭಾಷೆ-ತಂತ್ರ-ಧೋರಣೆ

೪: ೪ ಮುಖಾಮುಖಿ ಪ್ರಸಂಗಗಳು (ಸಂವಾದಗಳು)

೪:೧ ಪ್ರಮುಖ ಘಟ್ಟಗಳು

ಈ ಪರಿಸರದ ಶರಣರ ಶರಣ ಸಾಹಿತ್ಯವನ್ನು ಸಮಗ್ರವಾಗಿ ವಿವೇಚಿಸುವಾಗ ನಮಗೆ ಸಂಪೂರ್ಣವಾಗಿ ಬಸವಪೂರ್ವ ಯುಗ , ಬಸವ ಯುಗ, ಬಸವೋತ್ತರ ಯುಗದ ಶರಣರ ಶರಣ ಸಾಹಿತ್ಯ ಕಣ್ಮುಂದೆ ಬರುತ್ತದೆ. ಈ ಹಿನ್ನೆಲೆಯಲ್ಲಿ ನಾವು ಸಾಹಿತ್ಯಿಕವಾಗಿ ಅವರು ರಚಿಸಿದ ವಚನ, , ಸ್ವರ ವಚನ, ಶತಕ, ತತ್ವ ಪದ, ಕಂದ ಇತ್ಯಾದಿಗಳನ್ನು ವಿವೇಚಿಸಬಹುದಾಗಿದೆ. ನಾವಿಲ್ಲಿ ವಚನ ಹಾಗೂ ವಚನೇತರ ಪ್ರಕಾರ ವೆಂದು ಎರಡು ಪ್ರಮುಖ ಘಟ್ಟಗಳನ್ನು ಗಮನಿಸಬಹುದು.

ವಚನ ಪ್ರಕಾರ :

ಈ ಪರಿಸರದ ಶರಣರ ಸಾಹಿತ್ಯದಲ್ಲಿ ವಚನಮೂಡಿದ್ದು ಕಲ್ಯಾಣ ಶರಣರಿಗಿಂತ ಮೊದಲೆಂಬುದು ಸ್ಪಷ್ಟವಾಗಿ ಕಂಡು ಬರತ್ತದೆ. ಇದುವರೆಗೂ ಜೇಡರ ದಾಸಿಮಯ್ಯನೇ ಮೊದಲ ವಚನ ಕಾರನೆಂದು ವಿದ್ವಾಂಸರು ಹೇಳುತ್ತಾ ಬಂದಿದ್ದಾರೆ. ಆದರೆ ಈ ಪರಿಸರದ ಢಕ್ಕೆಯ ಮಾರಯ್ಯ , ಶಂಕರ ದಾಸಿಮ್ಮಯ್ಯರ ವಚನ ಅವಲೋಕಿಸಿದಾಗ ಹೊಸ ವಿಚಾರಗಳು ಕಂಡು ಬರುತ್ತದೆ.

ಜೇಡರ ದಾಸಿಮಯ್ಯ ಬದುಕಿದ್ದ ಕಾಲಾವಧಿ ಕ್ರಿ.ಶ.೧೦೬೦ -೧೧೫೦ ಎಂಬುದು ಈಗಾಗಲೇ ಗುರುತಿಸಲಾಗಿದೆ. ಹಾಗಾಗಿ ಬಸವಣ್ಣನವರ ಸಂಪರ್ಕಕ್ಕೆ ಜೇಡರ ದಾಸಿಮಯ್ಯ ಬಂದಿರು ಸಾಧ್ಯತೆ ಕಡಿಮೆಯಾದರೂ ಆತನ ವಚನಗಳ ಪ್ರಭಾವವಾಗಿತ್ತೆಂಬುದನ್ನು ಗುರುತಿಸಬಹುದು. ಈತನಿಗಿಂತ ಹಿರಿಯರಾಗಿದ್ದ ಶಂಕರ ದಾಸಿಮಯ್ಯ ಕ್ರಿ.ಶ.೧೦೫೫ರಿಂದ ೧೧೫೫ ವರೆಗೆ ಶಂಕರ ದಾಸಿಮಯ್ಯರಿಗಿಂತ ಹಿರಿಯರಾಗಿದ್ದ ಢಕ್ಕೆಯ ಮಾರಯ್ಯ ಕ್ರಿ.ಶ.೧೦೫೩ -೧೧೫೩ ರ ವರೆಗೆ ಬದುಕಿದ್ಧು ನಮಗೆ ಸ್ಪಷ್ಟವಾಗಿ ಕಂಡು ಬರುವ ಕಾರಣ ಜೇಡರ ದಾಸಿಮಯ್ಯನಿಗಿಂತ ಮೊದಲು ಕೈ ಹಾಕಿದ್ದು ಢಕ್ಕೆಯ ಮಾರಯ್ಯನೆಂಬುದು ತಿಳಿದು ಬರುತ್ತದೆ. ಆರಂಭದಲ್ಲಿ ತನ್ನ ಕಾಯಕವನ್ನೆ ವಸ್ತುವಾಗಿಟ್ಟು ಕೊಂಡು ಅದನ್ನೇ ಆಧ್ಯಾತ್ಮದ ಸೂಚಕಗಳನ್ನಾಗಿ ಪ್ರಯೋಗಿಸಿದ ಢಕ್ಕೆಯ ಮಾರಯ್ಯ ಮುಂದೆ ಕಲ್ಯಾಣ ಶರಣರ ಸಂಪರ್ಕಕ್ಕೆ ಬಂದಾಗ ಶರಣ ಸೈದ್ಧಾಂತಿಕ ವಿಚಾರಗಳನ್ನು ತನ್ನ ವಚನಗಳಲ್ಲಿ ಬಳಸಿದ್ದಾನೆಂಬುದು ನಮಗೆ ಸ್ಪಷ್ಟವಾಗುತ್ತದೆ.

ಕೆಲವರು ಪುರಾತನ ಕಾಲದ ಮಾದಾರ ಚೆನ್ನಯ್ಯನನ್ನೇ ವಚನ ಕಾರ ಮಾದಾರ ಚೆನ್ನಯ್ಯನೊಡನೇ ಸಮೀಕರಿಸಿ ಆತ ಬದುಕಿದ್ದ ಕಾಲ ಕ್ರಿ.ಶ.೧೦೩೦ ರಿಂದ ೧೧೨೦ ಎಂದು ಗುರುತಿಸಿ ಆತನು ಮೊದಲ ವಚನಕಾರನಾಗಿರಬಹುದೆಂಬ ಸಂದೇಹಗಳನ್ನು ವ್ಯಕ್ತಪಡಿಸಿದ್ದಾರೆ. ಆದರೇ ಮಾದಾರ ಚೆನ್ನಯ್ಯ ರ ಬಗ್ಗೆ ಹೇಳುವಾಗ ಮಾದಾರ ಚೆನ್ನಯ್ಯನೆಂಬ ಪುರಾತನನು ಬೇರೆ, ಬಸವಾದಿಗಳ ಸಮಕಾಲೀನರಾದ ವಚನಕಾರ ಮಾದಾರ ಚೆನ್ನಯ್ಯ ಬೇರೆ ಎಂಬುದಾಗಿ ಪಿ.ವಿ. ನಾರಾಯಣ ಗುರುತಿಸಿದ್ದು ಸರಿಯಾಗಿದೆ. ೧ ಆ ಹಿನ್ನೆಲೆಯಲ್ಲಿ ನಾವೀಗ ಢಕ್ಕೆಯ ಮಾರಯ್ಯನನ್ನೇ ಮೊದಲ ವಚನಕಾರನೆನ್ನ ಬಹುದು . ಬಸವಣ್ಣನವರಿಗಿಂತ ಮೊದಲೇ ಢಕ್ಕೆಯ ಮಾರಯ್ಯ ವಚನ ರಚಿಸಿದ್ದು ಗಮನಿಸಿದರೆ ವಚನ ರಚನೆಆರಂಭವಾಗಿದ್ದು ಕ್ರಿ.ಶ.೧೦೭೫ ಸುಮಾರಿಗೆ ಆಗ ಇನ್ನೂ ಬಸವಣ್ಣನವರ ಜನನವಾಗಿರಲಿಲ್ಲ. ಇದೇ ಸುಮಾರಿನಲ್ಲಿದ್ದ ಶಂಕರ ದಾಸಿಮಯ್ಯನವರು ವಚನ ರಚಿಸಿದ್ದರೆಂಬುದಕ್ಕೆ ನಮಗೆ ಹರಿಹರನ ರಗಳೆಯಲ್ಲಿ ಆತನನ್ನು ಕುರಿತು ಹರಿಹರ ಸಾಹಿತ್ಯ ಭೂಷಣ ಎಂದು ಕರೆದದ್ದು , ಜೊತೆಗೆ ಆತನ ವಚನ ಶೈಲಿಯನ್ನೇ ಹೊಲುವ ರಗಳೆ ಸಾಲುಗಳನ್ನು ಅಳವಡಿಸಿದ್ದು ನೋಡಿದರೆ ಢಕ್ಕೆಯ ಮಾರಯ್ಯನ ತರುವಾಯ ಅಥವಾ ಅವರ ಸಮಕಾಲೀನದಲ್ಲಿಯೇ ಶಂಕರ ದಾಸಿಮಯ್ಯ ವಚನ ರಚಿಸಿದ್ದು ಸ್ಪಷ್ಟವಾಗಿ ಕಂಡು ಬರುತ್ತದೆ. ೨

ಕಲ್ಯಾಣ ಶರಣರ ಸಂಪರ್ಕಕ್ಕೆ ಢಕ್ಕೆಯ ಮಾರಯ್ಯ ತೆರಳಿದಾಗ ಅಲ್ಲಿ ಈತನ ಮಾರಿ ಕುಣಿಸುವ ಕಾಯಕವನ್ನು ಶಂಕರ ದಾಸಿಮಯ್ಯ ಹಾಗೇ ಮೊದಲು ಕೆಲವರು ಆಕ್ಷೇಪಿಸಿರಬೇಕು. ಆಗ ಇದಕ್ಕೆ ತಕ್ಕ ಉತ್ತರ ಅವರು ನೀಡಿದ್ದರೆಂಬುದನ್ನು ಅವರ ವಚನಗಳಿಂದ ಸ್ಪಷ್ಟವಾಗಿ ಗುರುತಿಸಬಹುದು.೩

ವ್ಯಕ್ತಿಗತವಾಗಿ ಆರಂಭದಲ್ಲಿ ಢಕ್ಕೆಯ ಮಾರಯ್ಯ , ಶಂಕರ ದಾಸಿಮಯ್ಯರು ಮ ನುಷ್ಯತ್ವದ ನೆಲೆಗಳನ್ನು ಗುರುತಿಸಿ ಉತ್ತಮ ಮಾರ್ಗವೊಂದನ್ನು ಕಲ್ಪಿಸಿಕೊಟ್ಟು ಆ ದಾರಿಯಲ್ಲಿ ಜನರನ್ನು ಸಾಗಿಸಲು ಯತ್ನಿಸಿದರೆಂಬುದು ಸ್ಪಷ್ಟವಾಗಿ ಕಂಡು ಬರುತ್ತದೆ. ಈ ಪ್ರೇರಣೆಯೇ ಮುಂದೆ ಬಸವಣ್ಣನ ನೇತೃತ್ವದಲ್ಲಿ ಸಾಮೂಹಿಕ ಆಂದೋಲನದ ಧಾರ್ಮಿಕ ವಾತಾವರಣವನ್ನು ವಾಸ್ತವಾಗಿ ಕಟ್ಟಿ ಕೊಡಲು ಸಾಧ್ಯವಾಯಿತೆನ್ನ ಬಹುದಾಗಿದೆ.

ಹಾಗೆಯೇ ಢಕ್ಕೆಯ ಮಾರಯ್ಯರ ವಚನ ಗಮನಿಸಿದಾಗ ಬಸವಣ್ಣನಿಗಿಂತ ಹಿಂದಿನ ಕಾಲದ ಸಾಮಾಜಿಕ ವ್ಯವಸ್ಥೆ , ಸಾಂಸ್ಕೃತಿಕಾಚರಣೆಯ ಸೂಕ್ಷ್ಮವಾದ ಉಲ್ಲೇಖಗಳು ಕಂಡು ಬರುತ್ತವೆ.

---

೧ : ಡಾ : ಪಿ.ವಿ. ನಾರಾಯಣ -ವ.ಸಾ.ಪ. ಪುಟ ೮೧

೨ : ವಿವರಣೆಗಾಗಿ ಇದೇ ಪ್ರಬಂಧದ ಪುಟ ೪೬ ಗಮನಿಸಿರಿ

೩ : ಸಂ : ಡಾ : ಎಸ್ ವಿದ್ಯಾಶಂಕರ -ಸ.ವ.ಸಂ. -೭ , ವಚನ ೫,೧೪,೩೦ , ಪುಟ ೨೮೪,೨೮೭,೨೯೨

ಕವಿಯ ಹುಗತೆ ಗಮಕಿಯ ಸಂಚ

ವಾದಿಯ ಚೊಕ್ಕೆಹ-ವಾಗ್ಮಿಯ ಚೇತನ

ಇಂತೀ ಚತುಷ್ಟಯದಲ್ಲಿ ಯುಕ್ತಿವಂತನಾದಡೇನು?

ಭಕ್ತಿಯನರಿಯ ಬೇಕು, ಸತ್ಯದಲ್ಲಿ ನಡೆಯಬೇಕು

ವಿರಕ್ತಿಯಲ್ಲಿ ವಿಚಾರಿಸಿ ನಿಲ್ಲಬೇಕು

ಈಗುಣ ಢಕ್ಕೆಯ ಬೊಮ್ಮನ ಭಕ್ತಿ

ಕಾಲಾಂತಕ ಭೀಮೇಶ್ವರ ಲಿಂಗವನರಿವವನ ಸದ್ಭಕ್ತಿಯ ಯುಕ್ತಿ ೧

ಇದನ್ನು ಗಮನಿಸಿದಾಗ ಆ ಕಾಲದ ಸಾಹಿತ್ಯಿಕ-ಸಾಂಸ್ಕೃತಿಕ ವಲಯದ ವ್ಯಕ್ತಿತ್ವವನ್ನು ಢಕ್ಕೆಯ ಮಾರಯ್ಯ ಪರಿಚಯಿಸಿ ಕೊಡುತ್ತಾರೆ. ನಯಸೇನ-ದುರ್ಗಸಿಂಹರ ಸಾಹಿತ್ಯ ರಚನೆ ಹಿನ್ನೆಲೆಯಲ್ಲಿ ಈ ರೀತಿ ಹೇಳಿರಬಹುದಾಗಿದೆ. ಅದಕ್ಕಾಗಿ ಆತ ಚಾತುರ್ಯ ತಂತ್ರಗಳೇನಿದ್ದರೂ ಭಕ್ತಿ ಮತ್ತು ಸತ್ಯಗಳೇರಡು ಪ್ರಮುಖವಾಗಿರಬೇಕೆಂದು ಪ್ರತಿಪಾದಿಸುತ್ತಾನೆ. ಇಂತಹ ಹಲವಾರು ಅಂಶಗಳನ್ನು ಇವರ ವಚನಗಳಲ್ಲಿ ಕಾಣುವ ಮೂಲಕ ವಚನ ಸಾಹಿತ್ಯಕ್ಕೆ ಈ ಪರಿಸರದ ಶರಣರು ನಾಂದಿ ಹಾಡಿದ್ದಾರೆನ್ನಬಹುದು. ಆ ಕಾರಣ ಬಸವ ಪೂರ್ವಯುಗದ ಢಕ್ಕೆಯ ಮಾರಯ್ಯ-ಶಂಕರ ದಾಸಿಮಯ್ಯರೇ ಆದ್ಯ ವಚನ ಕಾರರೆಂದು ಭಾವಿಸುವುದು ಸರಿಯೆಂದು ತೋರುತ್ತದೆ. ಆದ್ದರಿಂದ ನಾವು ಇನ್ನು ಮುಂದೆ ಆದ್ಯ ವಚನ ಕಾರ ಜೇಡರ ದಾಸಿಮಯ್ಯ ಎಂದು ಭಾವಿಸದೇ ಆದ್ಯ ವಚನಕಾರ ಢಕ್ಕೆಯ ಮಾರಯ್ಯನೆಂದು ಆನಂತರ ಅದನ್ನು ತಕ್ಕ ಮಟ್ಟಿಗೆ ತನ್ನ ಸ್ತೋತ್ರದ ಗೀತೆಗಳನ್ನು ಬರೆಯುವ ಬದಲಾಗಿ ಶಂಕರ ದಾಸಿಮಯ್ಯ ವಚನ ರಚನೆಗೆ ತೊಡಗಿರಬಹುದೆಂದು ತಿಳಿದು ಬರುತ್ತದೆ.

ಬಸವಪೂರ್ವಯುಗದಲ್ಲಿ ಈ ಪರಿಸರದ ಶರಣರ ವಚನ ಸಾಹಿತ್ಯ ತಕ್ಕ ಮಟ್ಟಿಗೆ ಬೆಳೆದಿದೆ. ಬಸವಪೂರ್ವ ಯುಗದ ಪುರದ ನಾಗಣ್ಣ ವಚನ ರಚಿಸಿದ್ದರೂ ಆತನ ಹೆಚ್ಚಿನ ವಚನ ಲಭ್ಯವಾಗಿಲ್ಲ. ಲಭ್ಯವಾದ ವಚನ ಗಮನಿಸಿದರೆ ಆತ ಕಲ್ಯಾಣ ಪರಿಸರಕ್ಕೆ ಬಂದಮೇಲೆ ವಚನ ರಚಿಸಿರಬಹುದೆಂದು ತಿಳಿದು ಬರುತ್ತದೆ.

ಬಸವಪೂರ್ವ ಯುಗದಲ್ಲಿ ಇಲ್ಲಿ ಅನೇಕ ಶರಣರು ಕಂಡುಬಂದರೂ ಅವರು ಯಾರು ಯಾವುದೇ ಕೃತಿಗಳನ್ನು ರಚಿಸಿಲ್ಲವೆಂಬುದು ಸ್ಪಷ್ಟವಾಗಿ ತಿಳಿದು ಬರುತ್ತದೆ.

ವಚನ ಪ್ರಕಾರ ಇಡೀ ಶರಣ ಸಂದರ್ಭದಲ್ಲಿ ಸತ್ವಯುತವಾದ ಕಾಲ ಬಸವಯುಗವೆಂದು ಸರ್ವವಿದಿತವಾದ ಸಂಗತಿ. ಅಂತೆಯೇ ಈ ಪರಿಸರದಲ್ಲಿ ಸಹಿತ ಈ ಯುಗದಲ್ಲಿ ವಚನ ಸಾಹಿತ್ಯ ಬಹಳ ಸತ್ವಪೂರ್ಣವಾಗಿ ಮೂಡಿ ಬಂದಿತು. ಕಾಯಕ ನಿಷ್ಠೆಯಿಂದಲೇ ಹೆಸರಾದ ಆಯ್ದಕ್ಕಿ ದಂಪತಿಗಳು, ಜ್ಞಾನ-ಐಕ್ಯದ ಸ್ಥಿತಿಯ ಸಂಕೇತವಾಗಿ ನಿಂತ ಮುಕ್ತಾಯಕ್ಕ-ಅಜಗಣ್ಣರು, ಪ್ರಸಾದ ಪ್ರಸಾದಿ ಎನಿಸಿಕೊಂಡ ಬಿಬ್ಬಿ ಬಾಚಯ್ಯ, ವೃತ್ತಿಯ ಸಂಕೇತದ ಮೂಲಕ ಶರಣ ಸಿದ್ಧಾಂತ ತಿಳಿಸಿದ ಸುಂಕದ ಬಂಕಯ್ಯ, ಸಾಮಾನ್ಯ ಶಿವಭಕ್ತಿ ಮಹಿಮೆ ಸಾರಿದ ಉಳಿಮೇಶ್ವರ ಚಿಕ್ಕಯ್ಯ, ಶರಣ ಸಾಹಿತ್ಯ-ಸಿದ್ಧಾಂತವನ್ನು ಮತ್ತೊಮ್ಮೆ ಸಂಘಟಿತ ರೀತಿಯಲ್ಲಿ ಬೆಳೆಯಲು ಕಾರಣರಾದ ಚೆನ್ನವೀರ ಶರಣರು. ಇವರಲ್ಲಿ ಚೆನ್ನವೀರ ಶರಣರನ್ನು ಹೊರತು ಪಡಿಸಿ ಉಳಿದವರೆಲ್ಲರೂ ವಚನಗಳನ್ನು ರಚಿಸಿ ವಚನ ಪ್ರಕಾರವನ್ನು ಸತ್ವಯುತಗೊಳಿಸಿದ್ದಾರೆ.

ಈ ಯುಗದ ನಂತರ ವಚನ ಸಾಹಿತ್ಯ ಸ್ವಲ್ಪ ಕಣ್ಮರೆಯಾಗಿತ್ತು. ಅದು ಎರಡು ಮೂರು ದಶಕಗಳ ಕಾಲ ಕಾಣಿಸಲಿಲ್ಲವೆಂಬ ಅಭಿಪ್ರಾಯ ವಿದ್ವಾಂಸರ ವಲಯದಲ್ಲಿದೆ. ಆದರೆ ಇಡೀ ಶರಣ ಸಾಹಿತ್ಯ ಸಂದರ್ಭದಲ್ಲಿ ವಚನ ಪ್ರಕಾರ ನಿಂತು ಹೋದಾಗ ಅದನ್ನು ಮತ್ತೊಮ್ಮೆ ಚೇತನಗೊಳಿಸಿದ ಕೀರ್ತಿ ಈ ಪರಿಸರದ ಶರಣರಾದ ಅಗ್ಘವಣಿ ಹಂಪಯ್ಯರಿಗೆ ಸಲ್ಲುತ್ತದೆ. ಆದರೆ ಇವರ ನಂತರ ನಾಲ್ಕು ಶತಕಗಳ ಕಾಲ ವಚನ ಪ್ರಕಾರ ಈ ಪರಿಸರದಲ್ಲಿ ಕಾಣಿಸಲಿಲ್ಲವೆಂಬುದು ಆಶ್ಚರ್ಯ ಮೂಡಿಸುತ್ತದೆ. ಮುಂದೆ ೧೭ನೇ ಶತಕದಲ್ಲಿ ಹೇಮಗಲ್ಲ ಹಂಪರ ಮೂಲಕ ವಚನ ಪ್ರಕಾರ ಮತ್ತೊಮ್ಮೆ ಸತ್ವಯುತವಾಗಿ ಮೂಡಿಬಂದು ನಾಡಿನಲ್ಲಿ ತನ್ನ ಗಮನ ಸೆಳೆಯಿತು. ಮೊದಲಿನ ಆಶಯ ತತ್ವಗಳನ್ನು ತೆರೆದು ತೋರಿಸಿತು. ಆದರೆ ಆನಂತರ ಬೆಳೆದ ವಚನ ಸಾಹಿತ್ಯ ಅಷ್ಟಾಗಿ ಗಮನ ಸೆಳೆಯಲಿಲ್ಲ. ಇವರ ನಂತರ ಚಿದಾನಂದಾವಧೂತರು, ದೇವದುರ್ಗದ ಆದಿ ಅಮಾತೆಪ್ಪ ಇಂತಹ ಒಂದೆರೆಡು ಹೆಸರುಗಳು ಈ ಪ್ರಕಾರದಲ್ಲಿ ಕಂಡು ಬರುತ್ತದೆ.

ಆನಂತರದಲ್ಲಿ ವಚನ ಪ್ರಕಾರ ಮೂಡಿ ಬಂದರು ಅದು ಕೇವಲ ಮೇಲ್ನೋಟದ ಸ್ವರೂಪವಾಯಿತೇ ವಿನಹ ಸತ್ವಪೂರ್ಣವಾಗಿ ಮೂಡಿ ಬರಲಿಲ್ಲ. ಈ ಪ್ರಕಾರ ಈ ಪರಿಸರದಲ್ಲಿ ತನ್ನದೇ ಆದ ವೈಶಿಷ್ಟ್ಯಗಳನ್ನು ಹೊಂದಿದೆ ಎಂಬುದನ್ನು ಮುಂದೆ ವಿವರವಾಗಿ ವಿವೇಚಿಸಲಾಗುತ್ತದೆ.

೧: ಸಂ: ಡಾ: ಎಸ್ ವಿದ್ಯಾಶಂಕರ-ಸ.ವ.ಸಂ.-೭, ವಚನ ೨೪, ಪುಟ ೨೯೧

ವಚನೇತ ಪ್ರಕಾರ :

ಈ ಪರಿಸರದ ಶರಣರ ಸಮಗ್ರ ಶರಣ ಸಾಹಿತ್ಯ ಅವಲೋಕಿಸಿದಾಗ ವಚನಗಳ ಜೊತೆಯಲ್ಲಿಯೇ ಹಲವು ಪ್ರಕಾರಗಳು ಮೂಡಿ ಬಂದವು. ಆದ್ಯ ವಚನಕಾರರಲ್ಲಿ ಒಬ್ಬರಾದ ಶಂಕರ ದಾಸಿಮಯ್ಯರು ವಚನಗಳ ಜೊತೆಗೆ ಸ್ತುತಿ ಪರವಾದ ಗೀತೆಗಳನ್ನು ರಚಿಸಿದ್ದರೆಂಬುದು ನಮಗೆ ಹರಿಹರನ ರಗಳೆಯಿಂದಲೇ ಸ್ಪಷ್ಟವಾಗುವುದನ್ನು ನಾವು ಈಗಾಗಲೇ ಗುರುತಿಸಿದ್ದೇವೆ. ೧

ಈ ಪರಿಸರದಲ್ಲಿ ವಚನೇತರ ಪ್ರಕಾರ ಹಲವು ವೈವಿಧ್ಯಮಯ ರೂಪಗಳನ್ನೊಳಗೊಂಡಿದೆ. ಈ ಪ್ರಕಾರದಲ್ಲಿ ಸ್ತೋತ್ರ, ನಾಂದಿ, ಸಕೀಲ, ತಾರಾವಳಿ, ಸ್ವರ ವಚನ, ತತ್ವ ಪದ, ಕಂದ, ಶತಕ, ಪುರಾಣ ಕಾವ್ಯ ಇತ್ಯಾದಿಗಳನ್ನು ಗುರುತಿಸಬಹುದು. ಈ ವಚನೇತರ ಸಾಹಿತ್ಯ ವಿಶೇಷವಾಗಿ ಅಂತರಂಗಿಕ ಬದುಕಿಗೆ ಸಂಬಂಧಿಸಿದ್ದೆಂಬುದನ್ನು ಸೂಕ್ಷ್ಮ ಅವಲೋಕನೆಯಿಂದ ತಿಳಿದು ಬರುತ್ತದೆ.

ಈ ಪರಿಸರದ ವಚನೇತ ಸಾಹಿತ್ಯ ಆರಂಭಿಸಿದ ಮೊದಲಿಗರೆಂದರೆ ಶಂಕರ ದಾಸಿಮಯ್ಯನವರು ಬಸವ ಪೂರ್ವ ಯುಗದಲ್ಲಿ ಈ ಒಂದು ಅಂಶವನ್ನು ಬಿಟ್ಟರೆ ಹೆಚ್ಚಿನ ಯಾವುದೇ ಮಾಹಿತಿ ಕಂಡುಬರುವುದಿಲ್ಲ.

ಬಸವಯುಗಕ್ಕೆ ಬಂದಾಗಲೂ ಅಷ್ಟೇ. ಇಲ್ಲಿಯೂ ಹೇಳಿಕೊಳ್ಳುವಂತಹ ಪ್ರಕಾರಗಳು ಮೂಡಿ ಬರದಿದ್ದರೂ ಸ್ವರ ವಚನ ಪ್ರಕಾರ, ಉಳಿಮೇಶ್ವರದ ಚಿಕ್ಕಯ್ಯರೊಬ್ಬರಿಂದಲೇ ಮೂಡಿ ಬಂದಿತೆನ್ನಬಹುದು.

ಮುಂದೆ ಬಸವೋತ್ತರ ಯುಗದಲ್ಲಿ ಮಾತ್ರ ಹಲವು ವೈವಿದ್ಯಮಯ ಪ್ರಕಾರಣಗಳು ಮೂಡಿ ಬಂದವು. ಜಲದುರ್ಗ ಶರಣರ ಕಾಲಕ್ಕೆ 'ಕಾಲಜ್ಞಾನ' ಎಂಬ ವಿಶೇಷ ಪ್ರಕಾರದ ಸಾಹಿತ್ಯ ನಿರ್ಮಾಣವಾಯಿತು. ಜೊತೆಗೆ ಇವರು ತತ್ವಪದ, ಸಾಂಗತ್ಯ ಇತ್ಯಾದಿ ಪ್ರಕಾರ ರಚಿಸಿದ್ದರೂ ಆ ಬಗ್ಗೆ ಸರಿಯಾದ ಮಾಹಿತಿ ಸದ್ಯಕ್ಕೆ ಸಿಗುವುದಿಲ್ಲವಾಗಿದೆ.

ಹೇಮಗಲ್ಲ ಹಂಪರು ಕಂದ, ರಗಳೆ, ಸ್ವರ ವಚನಗಳನ್ನು ತಮ್ಮ 'ಹೇಮಗಲ್ಲ ಷಟಸ್ಥಲ'ಕೃತಿಯಲ್ಲಿ ಅಳವಡಿಸಿದ್ದನ್ನು ಗಮನಿಸಿದರೆ ಇವರ ಕಾಲದಲ್ಲಿ ಈ ಪ್ರಕಾರದಲ್ಲಿ ಶರಣರು ಸ್ವಲ್ಪ ಮಟ್ಟಿಗೆ ಹಿಡಿತ ಸಾಧಿಸಿದ್ದರೆಂಬುದು ತಿಳಿಯುತ್ತದೆ.

ಆನಂತರ 'ತತ್ವ ಪದ' ಪ್ರಕಾರ ಸಮೃದ್ಧವಾಗಿ ಈ ಪರಿಸರದಲ್ಲಿ ಬೆಳೆದು ಬಂದಿತು. ಈ ಪ್ರಕಾರವನ್ನು ಇಡೀ ಶರಣರ ಸಾಹಿತ್ಯ ಸಂದರ್ಭದಲ್ಲಿ ಸತ್ವಯುತವಾಗಿ ಬೆಳೆಸಿದ ಕೀರ್ತಿ ಈ ಪರಿಸರದ ಬಸವೋತ್ತರ ಯುಗದ ಅನೇಕ ಶರಣರಿಗೆ ಸಲ್ಲುತ್ತದೆ.

ಹಲವಾರು ಗ್ರಂಥಗಳನ್ನು ಪರಿಶೀಲಿಸಿ ಅವುಗಳ ಸಾರದೊಂದಿಗೆ ತಮ್ಮದೇಯಾದ ವಿವೇಚನೆಯನ್ನು ಕಟ್ಟಿಕೊಡುವ 'ಟೀಕಿನ ಗ್ರಂಥಗಳು' ಎಂಬ ವಿಶೇಷ ರೂಪ ಈ ಪರಿಸರದಲ್ಲಿ ಮೂಡಿ ಬಂದಿತೆಂಬುದನ್ನು ಸರ್ಜಾಪುರದ ಚೆನ್ನಬಸವ ಸ್ವಾಮಿಗಳಿಂದ ತಿಳಿಯಬಹುದು. ಆದಿ ಅಮಾತೆಪ್ಪನವರ 'ಕೈವಲ್ಯ ನವನೀತ' ಕೃತಿಯೂ ಸಹ ಇದೇ ಮಾದರಿಯದಾಗಿದೆ.

ಬಸವ ಯುಗದ ವಿಶೇಷವಾಗಿ ಕಲ್ಯಾಣ ಶರಣರು ಹಾಗೂ ಈ ಪರಿಸರದ ಶರಣರ ವಚನಗಳನ್ನು ಆಧರಿಸಿ ಶೂನ್ಯ ಸಂಪಾದನಾ ಮಾದರಿಯಲ್ಲಿ ಸಂಯೋಜಿಸಿದ ಗ್ರಂಥವೊಂದು ಹೀರಾದ ಶರಣರಿಂದ ರಚನೆಯಾದ ಬಗ್ಗೆ ತಿಳಿದು ಬರುತ್ತದೆ. ಈ ಕೃತಿ ಸಂಪೂರ್ಣವಾಗಿ ಉಪಲಬ್ದವಾಗಿಲ್ಲವಾದರೂ ನನಗೆ ಸಿಕ್ಕ ನಾಲ್ಕು ಸಣ್ಣ ಪುಟಗಳಲ್ಲಿ ಬಸವಣ್ಣ - ಪ್ರಭು - ಚೆನ್ನ ಬಸವಣ್ಣ ಇವರ ವಚನಗಳನ್ನಾಧರಿಸಿ 'ದೇಹವೇ ದೇಗುಲ' ಹೇಗೆ ಎಂಬುದನ್ನು ಇಲ್ಲಿ ವಿವೇಚಿಸಿದ್ದನ್ನು ಕಾಣಬಹುದು. ೨

ಆನಂತರ ವಚನೇತ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಟಗಲ್ ಗ್ರಾಮದಲ್ಲಿ ಹಲವಾರು ಕೋರಿಕಾಗದ ಮತ್ತು ತಾಳೆಗರಿ ಹಸ್ತಪ್ರತಿಗಳಿದ್ದರೂ ಅವುಗಳ ರಚನಾಕಾರರ ಹೆಸರು ಸ್ಪಷ್ಟವಾಗಿಲ್ಲ. ಜೊತೆಗೆ ಈ ಹಸ್ತ ಪ್ರತಿಗಳನ್ನು ಹೊಂದಿದವರು ನಮಗೆ ಕೊಡಲು ನಿರಾಕರಿಸಿದ್ದು ಬಹಳ ಬೇಸರದ ಸಂಗತಿ. ಆದ್ದರಿಂದ ಸದ್ಯಕ್ಕೆ ಈ ಕುರಿತು ಯಾವುದೇ ಮಾಹಿತಿಗಳು ಕಂಡು ಬರುವುದಿಲ್ಲ.

ಬಸವೋತ್ತರ ಯುಗದಲ್ಲಿ ಅಡವೀಶ ಶರಣರು ನಾಟಕ, ಗದ್ಯ, ವಿಮರ್ಶೆಗಳನ್ನು ಬರೆದು ವಿಶಿಷ್ಟ ಪ್ರಕಾರಗಳನ್ನು ಸೃಷ್ಟಿಸಿದ್ದಾರೆ.

ಈ ಪರಿಸರದ ಶರಣರು 'ಮಂಗಳಾರತಿ' ಹಾಡುಗಳೆಂದು ಅನೇಕ ರಚನೆ ಮಾಡಿದ್ದು ಅವು ವಿಶೇಷವಾಗಿವೆ. ವಚನೇತರ ಪ್ರಕಾರದಲ್ಲಿ ಬಹುಮುಖ್ಯವಾಗಿ ಗಮನಿಸಬೇಕಾದ ಕೃತಿಯೆಂದರೆ 'ಘನಮಠ ನಾಗಭೂಷಣ ಶರಣರ ಕೃಷಿ ಜ್ಞಾನ ಪ್ರದೀಪಿಕೆ' ಯಾಗಿದೆ. ಇಂತಹ ಹಲವಾರು ಗದ್ಯ ಪ್ರಕಾರದ ಮಾದರಿಗಳು ಈ ಪ್ರಕಾರದಲ್ಲಿ ಮೂಡಿ ಬಂದವು. ಇದಲ್ಲದೇ ಜಾನಪದ ಪ್ರಕಾರಗಳನ್ನು ಬಳಸಿಕೊಂಡು ಕೆಲವು ಶರಣರು ಲಾವಣಿ, ಹಂತಿಹಾಡು, ಬಯಲಾಟಗಳನ್ನು ರಚಿಸಿದ್ದು ವಿಶೇಷವಾಗಿದೆ.

ಒಟ್ಟಾರೆ ವಚನೇತರ ಪ್ರಕಾರ ಈ ಪರಿಸರದ ಶರಣರ ಸಾಹಿತ್ಯದಲ್ಲಿ ಗಮನಿಸಬೇಕಾದ ಅಂಶವಾಗಿದೆ. ಈ ವಚನೇತರ ಪ್ರಕಾರ ಪ್ರಮುಖವಾಗಿ ಇಹಕ್ಕಿಂತ ಪರಕ್ಕೆ ಪ್ರಾಶಸ್ತ್ಯನೀಡಿದರೂ ಸಮಾಜವನ್ನು ಕುರಿತು ಹಲವಾರು ಚಿಂತನೆಯ ಅಂಶಗಳಿವೆ. ಸಾಂಕೇತಿಕವಾಗಿ ತಮ್ಮ ವಿಚಾರಗಳನ್ನು ಈ ವಚನೇತರ ಪ್ರಕಾರ ಸ್ಪಷ್ಟ ಪಡಿಸುತ್ತ ಈ ಪರಿಸರದ ಶರಣರ ಸಾಹಿತ್ಯದ ಸಮಗ್ರತೆಯನ್ನು ನಮಗೆ ತಿಳಿಸಿ ಕೊಡುತ್ತದೆ.

---

೧ : ವಿವರಣೆಗಾಗಿ ಈ ಪ್ರಬಂಧದ ಪುಟ ೫೩ ಗಮನಿಸಿರಿ

೨ : ನನ್ನ ಬಳಿಯಿರುವ ವೈಯಕ್ತಿಕ ಅಪ್ರಕಟಿತ ಹಸ್ತಪ್ರತಿ

೪ :೨ ವಚನ ಪ್ರಕಾರ : ಭಾಷೆ-ತಂತ್ರ-ಧೋರಣೆ

ವಚನ ಸಾಹಿತ್ಯವನ್ನು ಸಾಮೂಹಿಕ ಸೃಷ್ಟಿಯೆಂದು ಭಾವಿಸಿ ವೈಯಕ್ತಿಕ ಪ್ರತಿಭಾ ಶಕ್ತಿಯನ್ನು ಹಲವರು ಗೌಣವಾಗಿರಿಸಿದ್ದಾರೆ. ಪ್ರತಿಯೊಬ್ಬ ಶರಣರು ತಮ್ಮ ಕಾಯಕದ ಪರಧಿಯಲ್ಲೇ ತಮ್ಮದೇ ಆದ ಸೃಜನಾತ್ಮಕ ಶಕ್ತಿಯನ್ನು ಅಭಿವ್ಯಕ್ತಿಸಿದ್ದಾರೆಂಬುದು ಶರಣರ ಸಾಹಿತ್ಯ ಗಮನಿಸಿದಾಗ ತಿಳಿದು ಬರುತ್ತದೆ. ಈ ಮಾತು ಈ ಪರಿಸರದ ಶರಣರ ಶರಣ ಸಾಹಿತ್ಯಕ್ಕೆನು ಹೋರತಾಗಿಲ್ಲ. ಈ ಪರಿಸರದ ಶರಣರು ಅದರಲ್ಲೂ ವಚನ ರಚನೆಗೆ ಕೈ ಹಾಕಿದ ಶರಣರು ಸಮಾಜದ ಅಸ್ತವ್ಯಸ್ತತೆ ಕಂಡು ಕೊಂಡು ಅಂತಹ ಸ್ಥಿತಿಗೆ ಸಾಹಿತ್ಯವೊದೆಂಬ ಅಂಶಅವರ ಗಮನಕ್ಕೆ ಬಂದ ಕಾರಣ ಅಂದಿನ ಜನಪ್ರಿಯ ಮಾಧ್ಯಮವಾದ ಸಾಹಿತ್ಯವನ್ನು ಬಳಸಿಕೊಂಡು ಸಮಾಜೋಧಾರ್ಮಿಕ ಚಳುವಳಿಗೆ ಅದನ್ನು ಬಳಸಿಕೊಂಡರು.

ಈ ಪರಿಸರದ ಶರಣರು ಇಂತಹ ಸಾಹಿತ್ಯ ರಚನೆಗೆ ಕೈ ಹಾಕುವ ಮುನ್ನ ಯಾವುದೇ ನಿರ್ಧಾರಿತವಾದ ಸಿದ್ಧ ಪ್ರಕಾರಗಳಿರಲಿಲ್ಲ. ತಮ್ಮ ವಿಚಾರಗಳನ್ನು ಸರಳವಾಗಿ ಅಭಿವ್ಯಕ್ತಿಸಲು ಬಯಸಿ ಶರಣರು ಸರಳವಾಗಿ ಅವುಗಳನ್ನು ಅಭಿವ್ಯಕ್ತಿಸಿದರು. ಹಿಂದಿನ ಕಾವ್ಯ ಮಾರ್ಗಗಳನ್ನು ಬದಿಗೊತ್ತಿ ಹೊಸದಾದ ಮಾರ್ಗವನ್ನು ಕಂಡು ಕೊಂಡರು. ಅದರ ಪರಿಣಾಮವಾಗಿ ಹೊಸದಾಗಿ ವಚನ ಪ್ರಕಾರ ಮೂಡಿಬಂತು. ಸಾಹಿತ್ಯವನ್ನು ರಚಿಸಬೇಕೆಂಬ ಉದ್ದೇಶ ಅವರಿಗಿರದಿದ್ದರೂ ತಮ್ಮ ಸೈದ್ಧಾಂತಿಕ ನಿಲುವುಗಳನ್ನು ಸರ್ವರಿಗೂ ತಿಳಿಸಲು ಅವರು ಸಾಹಿತ್ಯವನ್ನು ಆಯ್ಕೆ ಮಾಡಿಕೊಂಡಿದ್ದು ಸಹಜವಾಗಿದೆ. ಹಾಗಾಗಿ ಈ ಪರಿಸರದ ಶರಣರ ವಚನಗಳಲ್ಲಿ ಸಹಜವಾದ ಭಾಷೆ ಸರಳವಾಗಿದ್ದರೂ ಅದು ಅರ್ಥದ ಮೂಲಕ ಹಲವು ಆಯಾಮಗಳನ್ನು ಪಡೆದು ಕೊಂಡಿರುವುದನ್ನು ಕಾಣಬಹುದು. ಅವರ ಸಾಹಿತ್ಯದ ಮೂಲಕ ಭಾಷೆ-ತಂತ್ರ-ಧೋರಣೆಗಳನ್ನು ಗಮನಿಸಿದರೇ ಎಲ್ಲದರಲ್ಲೂ ಅವರ ಹೊಸತನ ಎದ್ದು ಕಾಣುತ್ತದೆ.

ಭಾಷೆ

ಭಾಷೆಯನ್ನು ಬಳಸುವಾಗ ಶರಣರು ತಮ್ಮ ಹಿಂದಿನ ಸಿದ್ಧಮಾರ್ಗವನ್ನೇ ಆದರ್ಶವಾಗಿರಿಸಿಕೊಳ್ಳದೇ ಸ್ವಂತಿಕೆಯನ್ನು ಕಂಡು ಕೊಂಡರು. ಈ ಪರಿಸರದ ಶರಣರು ವಚನರಚನೆಗೆ ತೊಡಗಿಸಿಕೊಂಡಾಗ ಭಾಷೆನಡುಗನ್ನಡ ಶೈಲಿಗೆ ತನ್ನನ್ನು ತೆರೆದು ಕೊಳ್ಳಲಾರಂಭಿಸಿತ್ತು. ಈ ನಡುಗನ್ನಡದ ನುಡಿಯ ಸೊಬಗನ್ನೇ ಈ ಪರಿಸರದ ಶರಣರು ಸಮರ್ಥವಾಗಿ ಬಳಸಿಕೊಂಡರು. ಜನಪರವಾದ ಜಾನಪದೀಯ ಭಾಷೆಯನ್ನೇ ಅಂದರೆ ಆಡು ಭಾಷೆಯನ್ನೇ ವಚನ ಪ್ರಕಾರದ ಅಭಿವ್ಯಕ್ತಿಗೆ ರೂಪಿಸಿಕೊಡರು. ತಮ್ಮ ಅನುಭವಕ್ಕೆ ಬಂದ ವಸ್ತು, ಸನ್ನಿವೇಶಗಳನ್ನೇ ತಮ್ಮ ವಿಷಯದ ವಸ್ತುಗಳನ್ನಾಗಿ ಆಯ್ಕೆ ಮಾಡಿಕೊಂಡು ಅದನ್ನು ಜನ ಸಾಮಾನ್ಯರಿಗೆ ವಚನಗಳ ಮೂಲಕ ತೆರೆದು ತೋರಿಸಿದರು. ಹೀಗಾಗಿ ಇಡೀ ನಿಸರ್ಗವೇ ಅವರ ಸಾಹಿತ್ಯದಲ್ಲಿ ಮೊದಲ ಬಾರಿಗೆ ಪರಿಚಯವಾಯಿತು. ಜನಪದರ ಬದುಕು - ವಿಚಾರಗಳಲ್ಲಿ ಒಂದು ಹೊಸ ಸ್ವರೂಪ ಮೂಡುವಷ್ಟರ ಮಟ್ಟಿಗೆ ಇವರ ವಚನ ಪ್ರಕಾರ ಬೆಳೆದು ಬಂದಿತು. ಇವರ ಭಾಷೆಯಲ್ಲಿ ವಿಶಿಷ್ಟವಾದ ಸೊಗಸುಗಾರಿಕೆಯನ್ನು ಕೆಲವು ವಚನಗಳ ಉದಾಹರಣೆಗಳಿಂದ ತಿಳಿದು ಕೊಳ್ಳಬಹುದಾಗಿದೆ.

ಮರೆದವರ ಮನದಲೆಲ್ಲವೂ ಮಾರಿ

ಅರಿದವರ ಮನದಲೆಲ್ಲವೂ ಸ್ವಯಂ ಜ್ಯೋತಿ

ಢಕ್ಕೆಯ ದನಿ ಉಳ್ಳನಕ್ಕ ನಿಶ್ಚೈಸಿ ಕೊಳ್ಳಿ

ಕಾಲಾಂತಕ ಭೀಮೇಶ್ವರ ಲಿಂಗವನರಿವುದಕ್ಕೆ೧

ಕಾಯಕದಲ್ಲಿ ನಿರತನಾದಡೆ ಗುರು ದರ್ಶನವಾದಡೂ ಮರೆಯಬೇಕು

ಲಿಂಗಪೂಜೆಯಾದಡೂ ಮರೆಯಬೇಕು

ಜಂಗಮ ಮುಂದೆ ನಿಂದಿದ್ದಡೂ ಹಂಗು ಹರಿಯಬೇಕು

ಕಾಯಕವೇ ಕೈಲಾಸವಾದ ಕಾರಣ

ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು೨ ಆಸೆಯೆಂಬುದು ಅರಸಿಂಗಲ್ಲದೆ

ಶಿವಭಕ್ತರಿಗುಂಟೆ ಅಯ್ಯಾ ? ರೋಷವೆಂಬುದು ಯಮದೂತರಿಗಲ್ಲದೇ ಅಜಾತರಿಗುಂಟೆ ಅಯ್ಯಾ ?

ಈ ಸಕ್ಕಿಯಾಸೆ ನಿಮಗೇಕೆ ? ಈಶ್ವರ ನೊಪ್ಪ ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ ೩

---

೧ : ಸಂ : ಡಾ : ಎಸ್.ವಿದ್ಯಾಶಂಕರ -ಸ.ವ.ಸಂ.-೭ , ವಚನ ೬೬ , ಪುಟ ೩೦೩

೨ : ಸಂ : ಡಾ : ಎಂ.ಎಂ. ಕಲಬುರ್ಗಿ -ಸ.ವ.ಸಂ. -೬ , ವಚನ ೭ , ಪುಟ ೩೭೮

೩ : ಸಂ : ಡಾ : ವೀರಣ್ಣ ರಾಜೂರೂ -ಸ.ವ.ಸಂ. -೫ ವಚನ ೬ , ಪುಟ ೨೦೦

ನುಡಿಯಲು ಬಾರದು ಕೆಟ್ಟನುಡಿಗಳ

ನಡೆಯಲು ಬಾರದು ಕೆಟ್ಟ ನಡೆಗಳ

ನುಡಿದಡೇನು ನಡೆಯದಿರ್ದಡೇನು ?

ಹಿಡಿದ ವ್ರತ ಬಿಡದಿರಲು ಅದೆ ಮಹಾಜ್ಞಾನದಾಚರಣೆ

ಎಂಬೆನು ಅಜಗಣ್ಣ ತಂದೆ೧

ಇದುವರೆಗಿನ ನಾಲ್ಕು ವಚನಗಳನ್ನು ಗಮನಿಸಿದಾಗ ನಮಗೆ ಇವುಗಳ ತಿಳಿಯಾದ ನಡುಗನ್ನಡ ಶೈಲಿಯ ಭಾಷೆ, ನೇರವಾದ ಸಹಜ ನಿರೂಪಣೆ, ಆಡು ಮಾತಿನ ದಾಟಿ, ಭಾವನೆಗಳನ್ನು ಸರಿಯಾಗಿ ಅಭಿವ್ಯಕ್ತಿಸಿದ ಭಾಷೆ ಇಲ್ಲಿ ಸ್ಪುಟವಾಗಿ ಕಂಡುಬರುತ್ತದೆ. ಇಂತಹ ಹಲವಾರು ನಿದರ್ಶನಗಳನ್ನು ಈ ಪರಿಸರದ ಶರಣರ ವಚನಗಳಲ್ಲಿ ಗುರುತಿಸಬಹುದಾಗಿದೆ. ವ್ಯಾಕರಣದ ನಿಯಮಗಳಿಗೆ ಬದ್ಧರಾಗಿ ಅವರು ತಮ್ಮ ಸಾಹಿತ್ಯವನ್ನು ರಚಿಸದಿದ್ದರೂ ಅವರ ವಚನಗಳ ಭಾಷೆಯನ್ನು ವ್ಯಾಕರಣಾಂಶಗಳ ಹಿನ್ನೆಲೆಯಲ್ಲಿ ವಿವೇಚಿಸಿದಾಗ ಹಲವಾರು ವಿಶೇಷಾಂಶಗಳು ನಮಗೆ ಕಂಡು ಬರುತ್ತವೆ. ಅಂತಹ ಅಂಶಗಳನ್ನು ನಾವೀಗ ಗಮನಿಸೋಣ.

ಕೇಶಿರಾಜನ ವ್ಯಾಕರಣ ನಿಯಮಗಳಲ್ಲಿ ಕೃತಕತೆ ಕಂಡುಬರುವುದನ್ನು ನಾವು ವಚನಕಾರರ ಭಾಷೆಯಿಂದ ತಿಳಿಯಬಹುದಾಗಿದೆ. ಕೇಶಿರಾಜ ವ್ಯಂಜನಾಂತ ಶಬ್ದಗಳು ಸ್ವರಾಂತವಾಗುವುದನ್ನು ಕುರಿತು ಹೀಗೆ ಹೇಳುತ್ತಾನೆ

' ಪಗಲಿರುಳೆಂಬಲ್ಲಿ ವಿಕ

ಲ್ಪಗತಿಯಿನಾ ವ್ಯಂಜನಾಂತದೊಳ್ ಪೇೞ್ವ.ರ್ಸೂ

ರಿಗಳಾಗಳೀಗಳೆಂಬೆಡೆ

ಗಗಲ್ಚರ್ೞ. ದೆಡೆಗಿನಾಗಮಂ ದೋಷಕರಂ೨

ಕೇಶಿರಾಜ ಈ ಸೂತ್ರದಲ್ಲಿ ತನ್ನ ನಿರ್ಧಾರ ಪ್ರಕಟಿಸಿದ್ದಾನೆ. ಆದರೆ ಈ ಪರಿಸರದ ಶರಣರ ವಚನಗಳಲ್ಲಿ ಇಂತಹ ವ್ಯಂಜನಾಂತ ಪದಗಳ ಉಲ್ಲೇಖ ವಿಪುಲವಾಗಿದೆ. ವಚನಕಾರರಲ್ಲಿ ಬಹು ಹಿಂದೆಯೇ ' ಪ' ಕಾರ 'ಹ' ಕಾರವಾಗಿದೆ ಹೀಗಾಗಲೂ ಮುಖ್ಯವಾಗಿ ಅವರು ಜನಭಾಷೆಯನ್ನು ತಮ್ಮ ಅಭಿವ್ಯಕ್ತಿಯಾಗಿ ಬಳಸಿಕೊಂಡದ್ದು ಎಂಬುದನ್ನು ನಾವಿಲ್ಲಿ ಗಮನಿಸಬಹುದಾಗಿದೆ.

ಉದಾ : ಹರಿದು೩ ಹಿಂಡಿನೊಳಗಣ೪ ಎಂಬ ಮೊದಲಾದ ಧಾತುಗಳು

ಹಣ್ಣು ಎಳೆಗಾಯಿ ನುಂಗಿ ಹೂಮರನ ಉಗುಳಿತ್ತು೫ ಹುತ್ತನೊಳಗಣ ಉಡುವಿನ ಕಣ್ಣ೬ ಹೊನ್ನ ಬಿಟ್ಟಡೇನು ಹೆಣ್ಣ ಬಿಟ್ಟಡೇನು೭ ಹೊಲೆಯರ೮ ಹೊಟ್ಟೆಯ ಹೊರೆರ್೯ ಮುಂತಾದ ನಾಮ ಪದಗಳು ಕೋಪ, ಹರ್ಷ, ದುಃಖ, ಮೆಚ್ಚುಗೆ ಸೂಚಿಸುವ ಭಾವ ಸೂಚಕಾವ್ಯಯಗಳು ಸಹ ಬಳಕೆಯಾಗಿವೆ. ಉದಾ : ಅಹುದಹುದು ಶಿವಶರಣರ ಮಹಿಮೆ೧೦ ಹಂಸೆಯ ಪಂಜರವ೧೧ ಹೃದಯದಲ್ಲಿ೧೨ ಇಂತಹ ತದ್ಭವಗಳು ಬಹಳ ಬಳಕೆಯಾಗಿವೆ.

---

೧ : ಸಂ : ಡಾ : ವೀರಣ್ಣ ರಾಜೂರು -.ಸ.ವ.ಸಂ. -೫ , ವಚನ ೨೬ , ಪುಟ ೨೭೮

೨ : ಸಂ : ಬಿ.ಟಿ. ಸಾಸನೂರು ಮತ್ತು ಎಂ.ಎಂ. ಕಲಬುರ್ಗಿ -ಕೇ.ಶ.ಸಂ.ಸೂತ್ರ ೧೧೯, ಪುಟ ೫೫

೩ : ಸಂ: ಡಾ : ಬಿ.ಆರ್.ಹಿರೇಮಠ - ಸ.ವ.ಸಂ. -೮ , ವಚನ ೧೦೧, ಪುಟ ೧೪೧

೪ : ಅದೇ : ವಚನ ೭೯ , ಪುಟ ೧೩೬

೫ : ಅದೇ : ವಚನ ೩೧ , ಪುಟ ೧೨೪

೬ : ಅದೇ : ವಚನ ೭೧ , ಪುಟ ೧೩೪

೭ : ಸಂ : ಡಾ : ವೀರಣ್ಣ ರಾಜೂರು -ಸ.ವ.ಸಂ. -೫ , ವಚನ ೧೧೫ , ಪುಟ ೯೮

೮ : ಅದೇ : ವಚನ ೧೧೩, ಪುಟ ೯೮

೯ : ಅದೇ : ವಚನ ೧೧೪ , ಪುಟ ೯೮

೧೦ : ಅದೇ : ವಚನ ೫ , ಪುಟ ೨೭೨

೧೧ : ಸಂ : ಡಾ : ವೀರಣ್ಣ ರಾಜೂರು -ಸ.ವ.ಸಂ. ೧೪ , ವಚನ ೨೮ , ಪುಟ ೪೪೫

೧೨ : ಸಂ : ಡಾ : ಬಿ.ಆರ್ .ಹಿರೇಮಠ -ಸ.ವ.ಸಂ.-೮ , ವಚನ ೨ , ಪುಟ೨

‘ಹ’ ಕಾರದ ಬಳಕೆ ಹೀಗೆ ಸ್ಪಷ್ಟವಾಗಿದ್ದರೂ ‘ಪ’ ಕಾರ ಮಾತ್ರ ವಿಶೇಷವಾಗಿ ಅದರಲ್ಲೂ ಬಸವೋತ್ತರ ಯುಗದಲ್ಲಿ ಈ ಪರಿಸರದ ಶರಣರಲ್ಲಿ ಬಳಕೆಯಾಗಿದೆ. ಇಂತಹ ಸ್ಥಿತಿಗೆ ಬಹುಶಃ ಪ್ರಾಚೀನತೇಯ ಭಾಷಾಬಿಗಿತ್ವ ಕಲ್ಪಿಸಿಕೊಡುವ ಉದ್ದೇಶ ವಿರಬಹುದೆನಿಸುತ್ತದೆ.

ಈ ಪರಿಸರದ ಶರಣರು ಕನ್ನಡ ಶಬ್ದ ಭಂಡಾರಕ್ಕೆ ಅನೇಕ ಪದಗಳನ್ನು ಪರಿಚಯಿಸಿ ಅಮೂಲ್ಯ ಕಾಣಿಕೆ ನೀಡಿದ್ದಾರೆ. ಆಡು ನುಡಿ, ಜೋಡು ನುಡಿ, ದೇಶಿಯ - ಅನ್ಯದೇಶಿಯ ಶಬ್ದಗಳನ್ನು ಬಳಸುವ ಮೂಲಕ ವಿಶೇಷ ಮೆರಗನ್ನು ಭಾಷೆಗೆ ಕಲ್ಪಿಸಿಕೊಟ್ಟಿದ್ದಾರೆ.

ಅಕ್ಕಸಾಲಿಗ, ಕಮ್ಮಾರಿಗ[೧] ಹೊಲೆಮಾದಿಗರ[೨] ಮಾವುತಿಗನ[೩] ಒಕ್ಕಲಿಗ[೪] ಹಾವಾಡಿಗಂಗೆ[೫] ಹರದಿಗ[೬] ಸೂಳುಗಾರ[೭] ಮೊದಲಾದ ತದ್ಧಿತಾಂತಗಳು,

ಇತ್ತಂಡದ ಮೊಟ್ಟೆಯ ಸುಂಕ[೮] ದಶೇಂದ್ರಿಯನಪ್ಪ[೯] ಮೊದಲಾದ ಸಮಾಸಗಳು

ಈ ಪರಿಸರದರ ಶರಣರು ಸಂಸ್ಕೃತದಿಂದ ಪದ - ಪದಸಮುಚ್ಚಯಗಳನ್ನು ವ್ಯಾಪಕವಾಗಿ ಅದರಲ್ಲೂ ಬಸವೋತ್ತರ ಯುಗದಲ್ಲಿ ಬಳಸಿಕೊಂಡಿದ್ದಾರೆ. ಇಷ್ಟು ಬಳಕೆಯಾದರೂ ಅವುಗಳಿಗೆ ವಿಶಿಷ್ಟವಾದ ಅರ್ಥ ಕವಚವನ್ನು ಆಚ್ಛಾದಿಸುವ ಮೂಲಕ ತಮ್ಮ ಸೃಜನಶೀಲತೆಯನ್ನು ವ್ಯಕ್ತಪಡಿಸಿದ್ದಾರೆ. ಭಾರತೀಯ ಸಂದರ್ಭದಲ್ಲಿ ಅದರಲ್ಲೂ ಧಾರ್ಮಿಕ ವಲಯದಲ್ಲಿ ಪ್ರಚಲಿತದಲ್ಲಿರುವ ಹಲವು ಪದಗಳಿಗೆ ಹೊಸ ಅರ್ಥ ಕಲ್ಪಿಸಿ ಜೀವಂತಿಕೆ ಸ್ವರೂಪ ನೀಡಿದ್ದಾರೆ.

ಉದಾ : ಕೈಲಾಸ- ಕಾಯಕವೇ ಕೈಲಾಸ[೧೦]

ಅರ್ಚನೆ - ಭ್ರಾಂತಳಿದು ನಿಂದಲ್ಲಿ ಅರ್ಚನೆ

ಪೂಜೆ - ವಿಕಾರವಳಿದಲ್ಲಿ ಪೂಜೆ

ನೈವೇದ್ಯ - ಸಮತೆ ನಿಂದಲ್ಲಿ ನೈವೇದ್ಯ[೧೧]

ಯೋಗ - ಸಿಡಿಲೊಳಡಿಗಿದ ಗಾತ್ರದ ತೇಜ[೧೨]

ದೇವ ಪದ - ನಿರಾಸೆ ಯೆಬುದೇ ದೇವಪದ[೧೩]

ಇದೇ ರೀತಿ ಪಾಪ-ಪುಣ್ಯ, ಸ್ವರ್ಗ-ನರಕ, ಇತ್ಯಾದಿ ಪದಗಳಿಗೆ ವಿಶೇಷ ಅರ್ಥಗಳು ಕಂಡು ಬರುತ್ತದೆ. ಈ ಪರಿಸರದ ಶರಣರು ತಮ್ಮ ಪ್ರಾದೇಶಿಕತೆಯನ್ನು ಸಹಜವಾಗಿ ವಚನಗಳ ತುಂಬೆಲ್ಲ ವ್ಯಕ್ತಪಡಿಸಿದ್ದಾರೆ. ಮಣ್ಣಿನ ವಾಸನೆ ಸರಳವಾಗಿ ಅವರ ವಚನಗಳಲ್ಲಿ ಬೆರೆತು ಕೊಂಡಿದೆ. ಉದಾ : ಹಿಂಚು ಮುಂಚುಂಟೆ ?[೧೪] ಈ ಸಕ್ಕಿಯಾಕೆ[೧೫] ಇತ್ಯಾದಿ.

---

೧ : ಸಂ : ಡಾ : ವೀರಣ್ಣ ರಾಜೂರು - ಸ.ವ.ಸಂ.-೧೪, ವಚನ ೬೫, ಪುಟ ೪೬೧

೨ : ಅದೇ : ವಚನ ೯೪, ಪುಟ ೪೭೭

೩ : ಅದೇ : ವಚನ ೯೮, ಪುಟ ೪೭೯

೪ : ಅದೇ : ವಚನ ೧೮೯, ಪುಟ ೫೨೧

೫ : ಸಂ: ಡಾ : ಬಿ.ಆರ್. ಹಿರೇಮಠ - ಸ.ವ.ಸಂ.-೯, ವಚನ ೧೯, ಪುಟ ೨೧೩

೬ : ಅದೇ : ವಚನ ೨೨, ಪುಟ ೨೧೩

೭ : ಅದೇ : ವಚನ ೨೪, ಪುಟ ೨೧೪

೮ : ಅದೇ : ವಚನ ೯, ಪುಟ ೨೧೧

೯ : ಅದೇ : ವಚನ ೬೭, ಪುಟ ೨೨೫

೧೦ : ಸಂ: ಡಾ : ಎಂ.ಎಂ. ಕಲಬುರ್ಗಿ - ಸ.ವ.ಸಂ. -೬, ವಚನ ೫೭, ಪುಟ ೩೭೮

೧೧ : ಸಂ : ಡಾ : ಬಿ.ಆರ್. ಹಿರೇಮಠ - ಸ.ವ.ಸಂ.-೮, ವಚನ ೮೪ ಪುಟ ೧೩೭

೧೨ : ಸಂ : ಡಾ: ವೀರಣ್ಣ ರಾಜೂರು - ಸ.ವ.ಸಂ.-೫, ವಚನ ೪, ಪುಟ ೨೭೨

೧೩ : ಸಂ : ಡಾ : ಎಸ್. ವಿದ್ಯಾಶಂಕರ - ಸ.ವ.ಸಂ. -೭, ವಚನ ೩೪, ಪುಟ ೨೯೩

೧೪ : ಡಾ : ವೀರಣ್ಣ ರಾಜೂರು - ಸ.ವ.ಸಂ. -೫, ವಚನ ೫, ಪುಟ ೧೯೯

೧೫ : ಅದೇ : ವಚನ ೬, ಪುಟ ೨೦೦

ಜೋಡುನುಡಿಗಳನ್ನು ಈ ಪರಿಸರದ ಶರಣರಲ್ಲಿ ವಿಪುಲವಾಗಿ ಕಾಣಬಹುದು. ಉದಾ : ತರುಗಿಡು೧ , ಗೋಮುಗುಸಕರು ೨ ಇತ್ಯಾದಿ. ಜನರ ನಡುವೆಯೇ ಬದುಕಿದ ಈ ಪರಿಸರದ ಶರಣರು ಬದುಕಿನಲ್ಲಿ ಅನುಭವಕ್ಕೆ ಬಂದ ಜನ ಬಳಕೆಯ ಮಾತುಗಳನ್ನೇ ಬಳಸಿಕೊಂಡರು. ಆ ಕಾರಣ ಇವರ ವಚನಗಳು ಎಲ್ಲರಿಗೂ ಅಪ್ಯಾಯ ಮಾನವಾಗಿವೆ ಎಂಬುದನ್ನು ಈ ಕೆಳಗಿನ ವಚನಗಳ ಸಾಲುಗಳಿಂದ ತಿಳಿಯ ಬಹುದು.

ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ೩

ಹಾಳೂರಿಂಗೆ ಧೂಳದ ಹಾವಳಿ ನೋಡಾ೪

ಅರಿವಡೆ ಮತಿಯಿಲ್ಲ ನೆನೆವಡೆ ಮನವಿಲ್ಲ ೫

ಮಾಟವಿಲ್ಲದವನ ಭಕ್ತಿ ಹಾಳೂರ ವಂಡಕ್ಕೆ ಕೋಲಹಿಡಿದಂತಾಯಿತ್ತು೬

ರಸತಾಗಿದ ರಸ ಪಾವಕಂಗೆ ಹುಸಿಯಾದಂತೆ೭

ಉಳಿಬಾಚಿಂಗೆ ಹರಿಯದ ಕೊರಡು ಕೊಡಲಿ ಕುಡುಗೋಲಿಂಗೆ ಹರಿವುದೇ ?೮

ಸಾಸುವೆಯ ಮೇಲೆ ಸಾಗರ ಹರಿವುದ ಕಂಡೆನು೯

ಇಂತಹ ಗಾದೆಗಳನ್ನು ಬಳಸಿಕೊಂಡ ಶರಣರು ಜೀವನದ ವಿವಿಧತೆಯನ್ನು ಸಮರ್ಥವಾಗಿ ಚಿತ್ರಿಸುತ್ತಾರೆ.

'ವಚನ ಕಾರರು ಕನ್ನಡ ವಾಕ್ಯ ರಚನೆಯ ವಿಶೇಷವನ್ನು ಚೆನ್ನಾಗಿ ಗ್ರಹಿಸಿದವರು . ಕನ್ನಡ ಕರ್ತೃ ಪ್ರಧಾನವಾದ ಭಾಷೆ. ಅಲ್ಲಿ ಕರ್ತರಿ ಪ್ರಯೋಗ ಮಾತ್ರ ಸಹಜ. ಕರ್ಮಣಿ ಪ್ರಯೋಗಳು ತೀರ ಅಸಹಜವಾದವು.' ಎಂದು ಹೇಳುತ್ತಾ ಡಾ: ಜಿ.ಎಸ್. ಸಿದ್ಧಲಿಂಗಯ್ಯನವರು ವಚನಗಳಲ್ಲಿ ಕಣ್ಣಲ್ಲಿ ಕಣ್ಣಿಟ್ಟು ನೋಡಿದರು ಕರ್ಮಣಿ ಪ್ರಯೋಗ ದೊರೆಯುವುದಿಲ್ಲ ಎಂದಿದ್ದಾರೆ.೧೦ ಈ ಮಾತು ಈ ಪರಿಸರದ ಶರಣರಿಗೆ ಅನ್ವಯಿಸುತ್ತದೆ.

ಅಲರೊಳಡಗಿದ ಪರಿಮಳದಂತೆ

ಪತಂಗದೊಳಡಗಿದ ಅನಲದಂತೆ

ಶಶಿಯೊಳಡಿಗಿದ ಷೋಡಶ ಕಳೆಯಂತೆ

ಉಲುಹಡಗಿದ ವಾಯುವಿನಂತೆ

ಸಿಡಿಲೊಳಡಗಿದ ಗಾತ್ರದ ತೇಜದಂತೆ

ಇರಬೇಕಯ್ಯ ಯೋಗ ಎನ್ನ ಅಜಗಣ್ಣ ತಂದೆಯಂತೆ೧೧

ಇಲ್ಲಿ ಕ್ರಿಯಾಪದವಿಲ್ಲದಿದ್ದರೂ ಕ್ರಿಯೆಯಿದೆ. ಇದು ಈಪರಿಸರದ ಶರಣರ ಸಾಹಿತ್ಯದ ವೈಶಿಷ್ಟ್ಯವಾಗಿದೆ. ಈ ಪರಿಸರದ ಶರಣರು ಕನ್ನಡ ಜೊತೆಯಲ್ಲಿಯೇ ಇತರ ಭಾಷೆಯನ್ನು , ಆ ಶಬ್ದಗಳನ್ನು ಬಳಸಿಕೊಂಡಿದ್ದಾರೆ. ಇಂತಹ ಒಂದು ಬೆಳವಣಿಗೆ ನಮಗೆ ಬಸವೋತ್ತರ ಯುಗದಲ್ಲಿಯೇ ಅಧಿಕವಾಗಿ ಕಂಡು ಬರುತ್ತದೆ.

---

೧ : ಸಂ : ಡಾ : ಬಿ.ಆರ್. ಹಿರೇಮಠ - ಸ.ವ.ಸಂ.-೯ , ವಚನ ೫೭ , ಪುಟ ೨೨೨

೨ : ಸಂ : ಡಾ : ವೀರಣ್ಣ ರಾಜೂರು - ಸ.ವ.ಸಂ. -೧೪ , ವಚನ ೬೪ , ಪುಟ ೪೬೦

೩ : ಸಂ : ಡಾ: ವೀರಣ್ಣ ರಾಜೂರು - ಸ.ವ.ಸಂ.- ೫ , ವಚನ ೧೨ , ಪುಟ ೨೦೧

೪ : ಡಾ : ವೀರಣ್ಣ ರಾಜೂರು - ಸ.ವ.ಸಂ. -೧೪ , ವಚನ ೧೩೩, ಪುಟ ೪೯೭

೫ : ಸಂ : ಡಾ: ವೀರಣ್ಣ ರಾಜೂರು - ಸ.ವ.ಸಂ.- ೫ , ವಚನ ೫ , ಪುಟ ೨೭೩

೬ : ಅದೇ : ವಚನ ೧೩ , ಪುಟ ೨೦೧

೭ : ಸಂ : ಡಾ: ಬಿ.ಆರ್. ಹಿರೇಮಠ - ಸ.ವ.ಸಂ.-೯ , ವಚನ ೫೫ , ಪುಟ ೨೨೨

೮ : ಸಂ : ಡಾ : ವೀರಣ್ಣ ರಾಜೂರು - ಸ.ವ.ಸಂ. -೧೪ , ವಚನ ೧೯೩ , ಪುಟ ೫೦೦

೯ : ಅದೇ : ವಚನ ೧೮೯ , ಪುಟ ೫೨೨

೧೦ : ಡಾ : ಜಿ.ಎಸ್. ಸಿದ್ಧಲಿಂಗಯ್ಯ - ವ.ವಾ.ಭಾ. ಪುಟ ೧೩೧-೧೩೨

೧೧ : ಸಂ : ಡಾ : ವೀರಣ್ಣ ರಾಜೂರು - ಸ.ವ.ಸಂ. -೫ ವಚನ ೪ , ಪುಟ ೨೭೨

ತಸ್ಕರರ ಹಾವಳಿ ನೋಡಾ೧ ಎಂಬಂತಹ ಅನ್ಯ ದೇಶಿಯ ಪದಗಳು , ಅನೇಕ ಸಂಸ್ಕೃತ ಪದಗಳನ್ನು ಈ ಪರಿಸರದ ಶರಣರ ಸಾಹಿತ್ಯದಲ್ಲಿ ಕಾಣಬಹುದು.

ಪ್ರಾಸವೂ ಸಹಿತ ಸಹಜತೆಯಿಂದ ಕೂಡಿದೆ.

ಅಂಗದ ಬೆಂಬಳಿಯಲು ಭಂಗವೆಂದರಿಯರು

ಲಿಂಗದ ಬೆಂಬಳಿಯಲಾದ ಪ್ರಸಾದಿಯು ೨ಅಜಗಣ್ಣರ ವಚನದ ಈ ಸಾಲುಗಳು ಆದಿ ಮಧ್ಯಪ್ರಾಸಗಳಿಂದ ಕೂಡಿವೆ. ಹಾಗೆಯೇ ಉಳಿಮೇಶ್ವರ ಚಿಕ್ಕಣ್ಣನ

ಎನ್ನ ಅಂತರಂಗದಲ್ಲಿಪ್ಪೆ ಬಾರಯ್ಯ

ಎನ್ನ ಬಹಿರಂಗದಲ್ಲಿಪ್ಪೆ ಬಾರಯ್ಯ ೩ ಇಲ್ಲಿ ಆದಿ, ಅಂತ್ಯ ಪ್ರಾಸಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಇದೇ ರೀತಿ ಆಯ್ದಕ್ಕಿ ಮಾರಯ್ಯನ

ಅಮೃತದ ಸವಿ ಸ್ವಾದಿಸುವರಿಗಲ್ಲದೆ

ಅಮೃತ ತನ್ನ ತಾ ಸ್ವಾದಿಸದ ಪರಿಯಂತೆ೪ ಇಲ್ಲಿ ಆದಿ ಪ್ರಾಸ ಸಹಜವಾಗಿದೆ. ಇದೇ ರೀತಿ ಮಧ್ಯ ಪ್ರಾಸ ವಾಗಿರುವ ಅನೇಕ ವಚನಗಳನ್ನು ಈ ಪರಿಸರದ ಶರಣರಲ್ಲಿ ಕಾಣಬಹುದಾಗಿದೆ. ಈ ಪರಿಸರದ ಶರಣರ ಪ್ರಾಮಾಣಿಕ ದಿಸೆಯಿಂದಾಗಿ ಇವರೆಲ್ಲರ ಭಾಷೆ ಸರ್ವಜನ ಗ್ರಾಹ್ಯವಾಗಲು ಕಾರಣವಾಯಿತು. ಆ ಕಾರಣದಿಂದಲೇ ಶರಣರು ಜನಸಾಮಾನ್ಯರ ಆಡು ಭಾಷೆಗೆ ಹತ್ತಿರವೆನಿಸುವ ಲಯಗಳನ್ನು -ನುಡಿಗಟ್ಟುಗಳನ್ನು ಇವರವಚನದಲ್ಲೆಲ್ಲ ಕಾಣುತ್ತೇವೆ. ಇದುವರೆಗಿನ ವಿವೇಚನೆಯಿಂದ ನಮಗೆ ಕಂಡುಬರುವುದೇನೆಂದರೆ ಈ ಪರಿಸರದ ಶರಣರು ಅಚ್ಚಗನ್ನಡ ಭಾಷೆಯನ್ನು ತತ್ವ , ನೀತಿ ಆಧ್ಯಾತ್ಮ , ಸಮಾಜ, ಧಾರ್ಮಿಕ ಚಿಂತನೆ ಮೊದಲಾದ ವಿಷಯಗಳ ವಿವರಣೆಗಾಗಿ ಸಶಕ್ತವಾಗಿ ಬಳಸಿಕೊಂಡಿದ್ದಾರೆ. ಭಾಷೆಯ ಸಮೃದ್ಧತೆ ಯ ಬಳಕೆಯ ಜೊತೆಯಲ್ಲಿಯೇ ಸಾಹಿತ್ಯದ ಸೊಬಗನ್ನು ಆ ಮೂಲಕ ಸ್ಪಷ್ಟವಾಗಿ ಗುರುತಿಸಿದ್ದಾರೆ.

ಈ ಪರಿಸರದ ಶರಣರು ಬಳಸುವ ಉಪಮೆಗಳು ಬರಿ ಹೋಲಿಕೆಯ ಮಟ್ಟದಲ್ಲಿ ನಿಲ್ಲದೇ ನಮ್ಮೆದುರಿಗೆ ಒಂದು ಸನ್ನಿವೇಶವನ್ನು ಕಲ್ಪಿಸಿಕೊಟ್ಟು ಆಡಿದ ಮಾತಿನಲ್ಲಡಗಿದ ಮನಸ್ಸಿನ ಸ್ವರೂಪವನ್ನು , ಅದನ್ನು ಅರ್ಥೈಸಿ ಕೊಳ್ಳುವ ಸಾರ್ಥಕತೆಯನ್ನು ಕಾಣಬಹುದಾಗಿದೆ. ಜೀವನದ ಗಾಢ ಅನುಭವ ಮೂಲದಿಂದಲೇ ಉಪಮೆಗಳು ಮೂಡಿ ಬಂದ ಕಾರಣ ಅವು ಜೀವಂತ ಚಿತ್ರಗಳಾಗಿ ನಮ್ಮ ಕಣ್ಮುಂದೆ ಗೋಚರಿಸುತ್ತವೆ.

ಈ ಪರಿಸರದ ಶರಣರ ವಚನಗಳಲ್ಲಿ ಉಪಮಾ ಪ್ರಪಂಚದ ವೈವಿಧ್ಯತೆ ಕಾಣಬಹುದು. ಪರ್ಣದ ಮರೆಯ ಫಲದಂತೆ-ಬಣ್ಣದ ಮರೆಯ ಬಂಗಾರದಂತೆ೫ ಢಕ್ಕೆಯ ಮಾರಯ್ಯರ ಈ ವಚನದಲ್ಲಿನ ಉಪಮೆಗಳು ಚಿಕ್ಕ ಚಿಕ್ಕ ಪ್ರತಿಮೆಗಳಾಗಿ ಅರ್ಥಗೌರವತ್ವ ತುಂಬಿ ಕೊಡುತ್ತವೆ. ಹಾಗೆಯೇ ಬೆಂದ ಮಣ್ಣಿನಂತೆ , ವಿಚ್ಛಂದವಾದ ಪಯ ಅನ್ನದಂತೆ , ೬ ಈ ವಚನದಲ್ಲಿ ಬೆಂದ ಮಣ್ಣು , ಒಡೆದ ಹಾಲು , ಅನ್ನ, ಉಪಾಯವಿಲ್ಲದ ಹೇಳಿಕೆ ಜೀವ ವಿಲ್ಲದ ದೇಹ ಇವು ಕಣ್ಣಿಗೆ ಕುರುಹುವಿನಂತೆ ತೋರಿದರು ಕೊನೆಗೆ ಮೂಲ ಕುರುಹು ಇಲ್ಲದಂತಾಗುತ್ತವೆ. ಎಂಬುದನ್ನು ನಾವು ಕೊನೆಯ ಸಾಲು ಏತಕ್ಕೂ ಸುಳುಹಿಲ್ಲದೆ ನಿಂದ ನಿಲುವು ಗಮನಿಸಿದಾಗ ಕಂಡು ಬರುತ್ತದೆ. ಕುರುಹು ಇಲ್ಲದೆ ಭೀಮೇಶ್ವರ ಲಿಂಗವನ್ನು ಅರಿಯುವ ಸ್ಥಿತಿ ಅಂತಹದು ಎಂಬುದಕ್ಕೆ ಬೆಂದ ಮಣ್ಣು , ಒಡೆದ ಹಾಲು ಅನ್ನ , ಚೇತನ ವಿಲ್ಲದ ಡಿಂಬ ಇವು ಕುರುಹು ಇಲ್ಲದ ನೆಲೆಗೆ ಪೋಷಕವಾಗಿ ನಿಂತು ಅರ್ಥಗೌರವಕ್ಕೆ ಕಾರಣವಾಗುವುದನ್ನು ನಾವಿಲ್ಲಿ ಗಮನಿಸಬಹುದಾಗಿದೆ.

ಈ ಪರಿಸರದ ಶರಣರು ಜನರಿಗೆ ಚಿರ ಪರಿಚಿತವಾದ ಉಪಮೆನ್ನು ಬಳಸಿಕೊಂಡು ಭಾಷೆಗೆ ಘನತೆ ತಂದು ಕೊಡುವ ಜೊತೆಗೆ ಸಾಹಿತ್ಯಿಕ ಮೌಲ್ಯವನ್ನು ಧ್ವನಿಪೂರ್ಣವಾಗಿರಿಸಿರುವುದನ್ನು ಈ ಪರಿಸರದ ಶರಣರ ಸಾಹಿತ್ಯದಲ್ಲಿ ಕಾಣಬಹುದು.

ಅಲರೊಳಡಗಿದ ಪರಿಮಳದಂತೆ........ಗಾತ್ರದ ತೇಜದಂತೆ೭ ಮುಕ್ತಾಯಕ್ಕನ ಈ ವಚನ ಆಕೆಯ ತಂದೆ ಸಾಧಿಸಿದ ಅದ್ವೈತ ಸ್ಥಿತಿಯನ್ನು ಸೂಕ್ತವಾದ ಉಪಮೆಗಳ ಮೂಲಕ ಕಟ್ಟಿಕೊಡುವ ಮೂಲಕ ಬಹು ಸೊಗಸಾಗಿ ಚಿತ್ರಿಸಿದ್ದನ್ನು ಕಾಣಬಹುದು. ಈಕೆಯ ಅನೇಕ ವಚನಗಳಲ್ಲಿ ಇಂತಹ ಉಪಮೆಗಳನ್ನು ಕಾಣಬಹುದು. ೮

---

೧ : ಸಂ: ಡಾ: ವೀರಣ್ಣ ರಾಜೂರು - ಸ.ವ.ಸಂ. -೧೪ , ವಚನ ೧೩೩, ಪುಟ ೪೯೭

೨ :ಸಂ: ಡಾ: ಎಂ.ಎಂ. ಕಲಬುರ್ಗಿ -ಸ.ವ.ಸಂ. -೬ ವಚನ ೧, ಪುಟ ೨೯

೩ : ಅದೇ: ವಚನ ೪ , ಪುಟ ೬೩೩

೪ : ಅದೇ: ವಚನ ೨ , ಪುಟ ೩೭೭

೫ : ಸಂ: ಡಾ: ಎಸ್.ವಿದ್ಯಾಶಂಕರ -ಸ.ವ.ಸಂ. -೭ , ವಚನ ೪೯, ಪುಟ ೨೯೮

೬ : ಅದೇ: ವಚನ ೫೮, ಪುಟ ೩೦೧

೭ : ಸಂ: ಡಾ: ವೀರಣ್ಣ ರಾಜೂರು- ಸ.ವ.ಸಂ.-೫, ವಚನ ೪ , ಪುಟ ೨೭೧-೨೭೨

೮ : ಅದೇ: ವಚನ ೫ , ಪುಟ ೨೭೨

ಇದೇ ರೀತಿ ಇಂತಹ ಉಪಮೆಗಳು ನಮಗೆ ಈ ಪರಿಸರದ ಬಸವಪೂರ್ವಯುಗದ ಶರಣರಲ್ಲಿ ಕ್ವಚಿತ್ತಾಗಿ, ಬಸವಯುಗದಲ್ಲಿ ಔಚಿತ್ಯ ಪೂರ್ಣವಾಗಿ, ಬಸವೋತ್ತರ ಯುಗದಲ್ಲಿ ಹೇರಳವಾಗಿ ನಮಗೆ ಕಂಡು ಬರುತ್ತದೆ.

ಬಿಬ್ಬಿ ಬಾಚಯ್ಯ ರಂತಹ ಶರಣರ ಬೇಡಗಿನ ತಂತ್ರದ ವಚನಗಳಲ್ಲಿ ಉಪಮೆಗಳು ಸಹ ಔಚಿತ್ಯ ಪೂರ್ಣವಾಗಿ ಬಂದಿವೆ.

ಅಗ್ನಿ ಲೋಹದಂತೆ, ಫಲ ರಸದಂತೆ

ಕಾಯ ಜೀವನದ ಪರಿಯಂತೆ ಅಂಗ ನೆಳಲಿನಂತೆ[೧] ಹೀಗೆ ಔಚಿತ್ಯಪೂರ್ಣವಾಗಿ ಉಪಮೆಗಳು ಬಂದು ಹೇಳಬೇಕಾದ ಸ್ಥಿತಿಯನ್ನು ಅದರಲ್ಲೂ ಅನುಭಾವದ ನೆಲೆಯನ್ನು ಸ್ಪಷ್ಟಪಡಿಸುವಲ್ಲಿ ಪ್ರಮುಖವಾಗಿವೆ.

ಹೇಮಗಲ್ಲ ಹಂಪರ ವಚನಗಳಲ್ಲಿ ಉಪಮೆಗಳು ಸಾಕಷ್ಟಿವೆ. ಶಿಲೆಯೊಳಗಣ ಪಾವಕದಂತೆ ತಿಲದೊಳಗಣ ತೈಲದಂತೆ[೨] ಮಾರ್ಜಾಲನ ಬಾಯೊಳು ಸಿಲ್ಕಿದ ಮೂಷಕನಂತೆ[೩], ಬೂರದ ಮರಕ್ಕೆ ಹಾರೈಸಿ ಬಂದ ಗಿಣಿ ಹಿಂಡಿನಂತೆ[೪] ಇವು ಕೇವಲ ಒಂದೆರಡು ನಿದರ್ಶನಗಳು ಮಾತ್ರ. ಈ ಪರಿಸರದ ಶರಣರ ವಚನಗಳಲ್ಲಿ ಉಪಮೆಗಳ ಭಂಡಾರವೇ ಇದೆ. ಜೀವನದ ವೈವಿಧ್ಯತೆಯನ್ನು ಅವರು ಈ ಮೂಲಕ ತೆರೆದು ತೋರಿಸಿದ್ದಾರೆ.

ದೃಷ್ಟಾಂತಗಳನ್ನು ಈ ಪರಿಸರದ ಶರಣರು ಹೇರಳವಾಗಿ ಬಳಸಿದ್ದಾರೆ.

ಅನ್ನ ಮೇಲಣ ಲವಲವಿಕೆ ನಿದ್ರೆಯ ಮೇಲಣ ಲವಲವಿಕೆ

ಅಂಗನೆಯರ ಮೇಲಣ ಲವಲವಿಕೆ ಯಿದ್ದಂತೆ ಲಿಂಗದಲ್ಲಿರಬೇಕು[೫] ಸುಂಕದ ಬಂಕಣ್ಣನವರ ಈ ವಚನದಲ್ಲಿನ ಮೂರು ದೃಷ್ಟಾಂತಗಳು ಔಚಿತ್ಯ ಪೂರ್ಣವಾಗಿದ್ದು ಮನುಷ್ಯನಿಗೆ ಅವಶ್ಯಕವಾದ ಅಷ್ಟೇ ಪ್ರಿಯವಾದ ಸಂಗತಿಗಳನ್ನು ತಿಳಿಸುತ್ತ ಅವರ ಆಶಯದ ಮೂಲವನ್ನು ಧ್ವನಿ ಪೂರ್ಣವಾಗಿ ಬಿಂಬಿಸುವಲ್ಲಿ ಸೂಕ್ತ ಪ್ರತಿಬಿಂಬಗಳಂತೆ ನಮಗೆ ಕಂಡು ಬರುತ್ತವೆ.

ಆಸೆಯೆಂಬುದು ಅರಸಿಂಗಲ್ಲದೆ, ಶಿವಭಕ್ತರಿಗುಂಟೆ ಅಯ್ಯಾ ?[೬] ಇಲ್ಲಿನ ದೃಷ್ಟಾಂತಗಳು ಒಂದಕ್ಕೊಂದು ಪೂರಕವಾಗಿದ್ದು, ತೂಕಬದ್ಧತೆಯಿಂದ ಕೂಡಿ ಜೀವನದ ಸಾರ್ಥಕತೆಯ ನೈತಿಕತೆಯ ಸ್ವರೂಪವನ್ನು ಚಿತ್ರಿಸುವಲ್ಲಿ ಸಹಪಾದ ಮಾನವಗುಣಗಳು ಶರಣರಂತವರಿಗೆ ಹೇಗೆ ಸರಿಯಲ್ಲವೆಂಬುದನ್ನು ಲಕ್ಕಮ್ಮ ಸೂಕ್ತ ದೃಷ್ಟಾಂತಗಳ ಮೂಲಕ ಹೇಳುತ್ತಾಳೆ. ಈ ರೀತಿ ನಿತ್ಯ ಜೀವನದಲ್ಲಿ ಗಮನಿಸುವ ಸಂಗತಿಯನ್ನೇ ದೃಷ್ಟಾಂತಗಳಾಗಿ ಬಳಸಿ ಕೊಂಡು ಅದಕ್ಕೆ ಮೂರ್ತ ಸ್ವರೂಪವನ್ನು ನೀಡಿ ತಾವಿಟ್ಟು ಕೊಂಡ ವಚನೋದ್ದೇಶವನ್ನು ಕಂಡು ಕೊಳ್ಳುವ ವಿಶಿಷ್ಟಾಂಶವನ್ನು ಈ ಪರಿಸರದ ಶರಣರ ಸಾಹಿತ್ಯದಲ್ಲಿ ಕಾಣಬಹುದು.

ಸ್ವಾದವಿಲ್ಲದ ಹಣ್ಣು ಸೌರಭವಿಲ್ಲದ ಕುಸುಮ

ಸಾರವಿಲ್ಲದ ದ್ರವ್ಯ ಆದಾರಿಗೆ ಯೋಗ್ಯ

ಅರಿವಿಲ್ಲದವನ ಇಷ್ಟ ಬರಿಯ ಡಂಬಕದ ಪೂಜೆ

ಅಡಿಯಿಡಲಿಲ್ಲ ಏಣಾಂಕದರ ಸೋಮೇಶ್ವರ ಲಿಂಗಕ್ಕೆ[೭] ಇಲ್ಲಿ ಬಿಬ್ಬಿ ಬಾಚಯ್ಯರು ಮೂಲ ಗುಣವನ್ನು ತಿಳಿಸುತ್ತ ಅದರ ಯೋಗ್ಯತೆ ಆಮೂಲ ಗುಣದಲ್ಲಡಗಿದೆಯೆಂಬ ದೃಷ್ಟಾಂತವನ್ನು ಕೊಡುತ್ತಾ ಅದನ್ನು ನೈಜವಾದ ಪೂಜೆಯ ಸ್ವರೂಪದೊಂದಿಗೆ ಸಮೀಕರಿಸಿದ್ದನ್ನು ಕಾಣಬಹುದು.

ಹುಸಿದು ಮಾಡಿದವರುಂಟು .... ದೇವರಿಗೆಂದು ಕುರಿತು ಆವ ಕಾಯಕ ಮಾಡಿದಡೂ ಕಾಲಾಂತಕ ಭೀಮೇಶ್ವರ ಲಿಂಗಕ್ಕೆ ಅರ್ಪಿತವು[೮] ಈ ವಚನದಲ್ಲಿ ಢಕ್ಕೆಯ ಮಾರಯ್ಯ ತನ್ನ ಹಿಂದಿನ ಪುರಾತನರ ಶಿವಭಕ್ತಿಯನ್ನು ದೃಷ್ಟಾಂತವಾಗಿರಿಸಿಕೊಂಡು ದೇವನರನ್ನು ಕುರಿತು ಎಂತಹ ಕೆಲಸ ಮಾಡಿದರೂ ಅದು ದೇವರಿಗೆ ಅರ್ಪಿತವೆಂಬುದನ್ನು ತನ್ನ ವೃತ್ತಿ ಸಮರ್ಥನೆಗಾಗಿ ಹಿಂದಿನವರ ದೃಷ್ಟಾಂತವನ್ನು ಕಟ್ಟಿ ಕೊಡುತ್ತಾನೆ. ದೇವರಿಗೆಂದು ಮಾಡುವ ಕಾಯಕ ಅದು ಅವನ ಸ್ವಾರ್ಥಕಲ್ಲ ವೆಂಬುದನ್ನು ಸೂಚ್ಯವಾಗಿ ತಿಳಿಸಿದ್ದಾರೆ.

೧: ಸಂ: ಡಾ: ಬಿ.ಆರ್.ಹಿರೇಮಠ -ಸ.ವ.ಸಂ. -೮, ವಚನ ೪೨ ರಿಂದ ೪೫, ಪುಟ ೧೨೭

೨: ಸಂ: ಡಾ: ವೀರಣ್ಣ ರಾಜೂರು -ಸ.ವ.ಸಂ. -೧೪, ವಚನ ೧೧, ಪುಟ ೪೩೮

೩: ಅದೇ: ವಚನ ೪೯, ಪುಟ ೪೫೪

೪: ಅದೇ: ವಚನ ೧೫೯, ಪುಟ ೫೦೯

೫: ಸಂ: ಡಾ: ಬಿ.ಆರ್.ಹಿರೇಮಠ -ಸ.ವ.ಸಂ. -೯, ವಚನ ೧೦೩, ಪುಟ ೨೩೪

೬: ಸಂ: ಡಾ: ವೀರಣ್ಣ ರಾಜೂರು -ಸ.ವ.ಸಂ. -೫ ವಚನ ೬, ಪುಟ ೨೦೦

೭: ಸಂ: ಡಾ: ಬಿ.ಆರ್.ಹಿರೇಮಠ -ಸ.ವ.ಸಂ. -೮, ವಚನ ೮೬, ಪುಟ ೧೩೭

೮: ಸಂ: ಡಾ: ಎಸ್.ವಿದ್ಯಾಶಂಕರ-ಸ.ವ.ಸಂ. -೭, ವಚನ ೯೦, ಪುಟ ೩೧೧

ಉಪಮೆ ದೃಷ್ಟಾಂತಗಳಂತೆಯೇ ಈ ಪರಿಸರದ ಶರಣರು ರೂಪಕಗಳನ್ನು ಬಹು ಸಮರ್ಥತಕವಾಗಿ ತಮ್ಮ ವಚನಗಳಲ್ಲಿ ಬಳಸಿಕೊಂಡಿದ್ದಾರೆ. ಈ ಪರಿಸರದ ಶರಣರು ಮಾರ್ಗ ಸಂಪ್ರದಾಯಕ್ಕೆ ಸೇರಿದ ರೂಪಕಗಳನ್ನು ಬಳಸಿ ಕೊಂಡಂತೆ ದೇಶಿ ಸಂಪ್ರದಾಯದ ರೂಪಕಗಳನ್ನು ಧಾರಾಳವಾಗಿ ವಚನಗಳ ತುಂಬೆಲ್ಲ ಬಳಸಿಕೊಂಡಿದ್ದಾರೆ. ಈ ಲೋಕದ ನಿಸರ್ಗವನ್ನೇ ರೂಪಕಗಳನ್ನಾಗಿ ಬಳಸಿ ಕೊಂಡು ಅವುಗಳ ವ್ಯಾಪ್ತಿ ಹೆಚ್ಚಿಸಿದ್ದಾರೆ.

ಪುರದ ನಾಗಣ್ಣ ಪಟ್ಟಣದ ಹಿನ್ನೆಲೆಯಲ್ಲಿ ದೇಹದಬಗೆಗಿನ ಎಚ್ಚರಿಕೆಯನ್ನು ಹೊಂದಿಸಿ ಔಚಿತ್ಯ ಪೂರ್ಣವಾಗಿ ಹೇಳಿದ್ದನ್ನು ಆತನ 'ಕಾಯವೆಂಬ ಪಟ್ಟಣಕ್ಕೆ ಸತ್ಯವೆಂಬ ಕೋಟೆಯನಿಕ್ಕಿ'೧ ಎಂಬ ವಚನದಲ್ಲಿ ಕಾಣಬಹುದು. ಇದೇ ರೀತಿ ದೇಹವನ್ನೆ ರೂಪಕವನ್ನಾಗಿರಿಸಿ ಕೊಂಡು ಈ ಪರಿಸರದ ಶರಣರಾದ ಸುಂಕದ ಬಂಕಣ್ಣನವರು ಕಾಯವನ್ನು ಒಂದು ಗ್ರಾಮಕ್ಕೆ ಹೋಲಿಸಿದ ರೀತಿ ಅವರ 'ಕಾಯದ ಜೀವದ ಮಧ್ಯದಲ್ಲೊಂದೂರ ಬಾಗಿಲಲ್ಲಿ ' ಎಂಬ ವಚನದಲ್ಲಿ ಕಾಣ ಬಹುದು. ೨ಮತ್ತೊಂದೆಡೆ ಕಾಯವನ್ನು ಭೂಮಿಗೆ ಹೋಲಿಸಿ ಆ ಭೂಮಿಯನ್ನು ಹದಮಾಡುವ ರೀತಿ ಹದಮಾಡಿ ಬೆಳೆಬೆಳೆಯುವುದಕ್ಕೆ ಎಂತವರು ಯೋಗ್ಯರೆಂಬುದನ್ನು ಚೆನ್ನ ಬಸವಣ್ಣನವರ ಹೋಲಿಕೆ ಕೊಟ್ಟು ತಮ್ಮ ವಚನದಲ್ಲಿ ಅಭಿವ್ಯಕ್ತಿಸಿದ್ದಾರೆ. ೩

ಈ ಪರಿಸರದ ಶರಣರು ತಾವು ಮಾಡುವ ಕಾಯಕವನ್ನೇ ರೂಪಕವನ್ನಾಗಿ ಅಭಿವ್ಯಕ್ತಿಸಿದ್ದನ್ನು ಢಕ್ಕೆಯ ಮಾರಯ್ಯರ ಈ ಕೆಳಗಿನ ವಚನದಿಂದ ಕಾಣಬಹುದು.

ಕಾಯವೆಂಬ ಢಕ್ಕೆಯ ಮೇಲೆ

ಜೀವವೆಂಬ ಹೊಡೆಚೆಂಡು ಬೀಳೆ

ತ್ರಿವಿಧವ ತಾ ತಾಯೆಂಬ ಆಸೆಹಿಂಡಿ ಡಿಂಡಿಯೆನುತ್ತಿದೆ

ಇಂತೀ ಉಲುಹಿನಭೇದದಲ್ಲಿ

ಹೊಲಬುದಪ್ಪದ ಗೆಲಬೇಕು ಕಾಲವೆಂಬ ಮಾರಿಯ

ಕಾಲಾಂತಕ ಭೀಮೇಶ್ವರ ಲಿಂಗವನರಿಯ ಬಲ್ಲಡೆಳ

ಈ ವಚನದಲ್ಲಿ ಢಕ್ಕೆಯ ಮಾರಯ್ಯ ತಮ್ಮ ಕಾಯಕದ ಸಹಜವಾದ ಪದಗಳನ್ನೇ ಬಳಸಿಕೊಂಡು ಧ್ವನಿಪೂರ್ಣವಾದ ರೂಪಕ ನಿರ್ಮಾಣದ ಮೂಲಕ ಅನುಭಾವದತ್ತ ರವನ್ನು ಕಾಣುವ ಮೊದಲ ಹಂತವಾಗಿ ಕಾಲವೆಂಬ ಮಾರಿಯನ್ನು ಗೆಲ್ಲುವ ಪರಿಯನ್ನು ಆ ಮೂಲಕ ಇಷ್ಟ ದೈವವನ್ನು ಅರಿಯ ಬೇಕಾದ ಮನಸ್ಥಿತಿಯನ್ನು ಸಮರ್ಪಕವಾಗಿ ಇಲ್ಲಿ ಚಿತ್ರಿಸಿದ್ದಾರೆ.

ಬಸವೋತ್ತರ ಯುಗದ ಹೇಮಗಲ್ಲ ಹಂಪರು ಈ ದೇಹವನ್ನು ಹೊಲ, ಪುರ, ಕೈಲಾಸಗಳಿಗೆ ಹೋಲಿಸಿ ಅಪೂರ್ವ ವಚನ ರಚಿಸಿದ್ದನ್ನು ನಾವು ಕಾಣಬಹುದು. ಅವರ ಎರಡು ವಚನಗಳಲ್ಲಿ ಶರಣರ ಅಂತರಂಗ ಕೈಲಾಸವಾಗಿದ್ದು ಅದನ್ನು ಕಂಡು ಕೊಳ್ಳುವ ಪರಿ ಅವನಲ್ಲಿಯೇ ಇದೇ ಎಂಬುದನ್ನು ತಿಳಿಸಿದ್ದಾರೆ. ೫ದೇಹವಷ್ಟೆ ಅಲ್ಲದೇ ನಮ್ಮ ಸುತ್ತಲಿನ ಪರಿಸರದಲ್ಲಿ ಕಂಡು ಬರುವ ಪಶು - ಪಕ್ಷಿ, ಪ್ರಾಣಿ ಇತ್ಯಾದಿಗಳನ್ನು ಅವುಗಳ ಸಾಂಕೇತಿಕ ಮಹತ್ವವನ್ನು ಅರಿತು ಕೊಂಡು ಸಶಕ್ತ ರೂಪಕಗಳಾಗಿ ತಮ್ಮ ವಚನಗಳಲ್ಲಿ ಬಳಸಿಕೊಂಡದ್ದನ್ನು ಸುಂಕದ ಬಂಕಣ್ಣನವರು ವಚನದ ತುಂಬೆಲ್ಲ ಕಾಣಬಹುದು. ಅವರು ಕತ್ತೆ೬, ಕೋಳಿ ೭, ಹಡಗು - ಕರಡಿ ೮ , ಕುದುರೆ ಆನೆ ಒಂಟೆ೯, ಜೀರುಂಡೆ೧೦ ಗೂಗೆ ಹಂಸ ಕಾಗೆ೧೧ ಇತ್ಯಾದಿಗಳನ್ನು ರೂಪಕಗಳಾಗಿ ಬಳಸಿದ್ದಾರೆ.

---

೧ : ಸಂ : ಡಾ : ಬಿ.ಆರ್ . ಹಿರೇಮಠ -ಸ.ವ.ಸಂ. -೮ , ವಚನ೪ , ಪುಟ ೩

೨: ಸಂ : ಡಾ : ಬಿ.ಆರ್ . ಹಿರೇಮಠ -ಸ.ವ.ಸಂ. -೯ ವಚನ ೩೨ , ಪುಟ ೨೧೬

೩ : ಅದೇ : ವಚನ ೧೦೪ , ಪುಟ ೨೩೫

೪ : ಸಂ : ಡಾ: ಎಸ್.ವಿದ್ಯಾಶಂಕರ -ಸ.ವ.ಸಂ. -೭ ವಚನ ೨೭ , ಪುಟ ೨೯೧

೫ :ಸಂ : ಡಾ : ವೀರಣ್ಣ ರಾಜೂರು-ಸ.ವ.ಸಂ.-೧೪ , ವಚನ ೧೫೨ , ೨೪೨ ಪುಟ ೫೦೬, ೫೪೬

೬ : ಸಂ : ಡಾ : ಬಿ.ಆರ್. ಹಿರೇಮಠ -ಸ.ವ.ಸಂ. -೯ , ವಚನ ೨೫, ಪುಟ ೨೧೪

೭ : ಅದೇ : ವಚನ ೧ , ಪುಟ ೨೦೯

೮ : ಅದೇ :ವಚನ ೧೬ ,ಪುಟ ೨೧೨

೯ : ಅದೇ ವಚನ ೨೩ , ಪುಟ ೨೧೪

೧೦ : ಅದೇ : ವಚನ ೩೩, ಪುಟ೨೧೬

೧೧ : ಅದೇ : ವಚನ ೮೭, ಪುಟ ೨೩೦

ಜನಜೀವನಕ್ಕೆ ಗೊತ್ತಿರುವ ಸಂಗತಿಗಳನ್ನಾಧರಿಸಿ ಅದಕ್ಕೆ ಸಾಹಿತ್ಯದ ರೂಪವನ್ನು ನೀಡಿ ತಮ್ಮ ಅನುಭವಗಳನ್ನು ಅಭಿವ್ಯಕ್ತಗೊಳಿಸಿದ್ದನ್ನು ನಾವು ಈ ಪರಿಸರದ ಶರಣರ ವಚನಗಳ ರೂಪಕಗಳಲ್ಲಿ ಗಮನಿಸಬಹುದಾಗಿದೆ. ಬಿಬ್ಬಿ ಬಾಚಯ್ಯನವರು ಕುರಿ, ಕುರುಬ, ತೋಳಗಳನ್ನು ರೂಪಕವಾಗಿರುಸುವ ಜೊತೆಯಲ್ಲಿಯೇ ಹುಟ್ಟಿಸಿದವರೇ ಸಂಸಾರದ ಭವನಕ್ಕೆ ತಳ್ಳುವಾಗ ನಮಗೆ ಅರಿವಿದ್ದು ಏನು ಮಾಡಲುಸಾಧ್ಯ. ಎಲ್ಲವೂ ಅವನ ಇಚ್ಛೆ ಎಂಬುದನ್ನು ದೈವದ ಹಿನ್ನೆಲೆಯಲ್ಲಿ ವಿವರಿಸುತ್ತಾರೆ.[೧]

ತನ್ನ ಅರಿವೆ ತನಗೆ ಗುರುವಾದಾಗ ಬ್ರಹ್ಮ-ಪರಬ್ರಹ್ಮ ವೆಂಬುದರಲ್ಲಿ ಯಾವುದೇ ಅರ್ಥವಿಲ್ಲವೆಂಬುದನ್ನು ಮುಕ್ತಾಯಕ್ಕ ಪರಿಚಿತವಾದ ಬಾವಿ, ಸೊಡರುಗಳ ಮೂಲಕ ಬಹು ಸುಂದರವಾಗಿ ಅಭಿವ್ಯಕ್ತಿಸುತ್ತಾರೆ. ಮನುಷ್ಯನದು ಮೂಲತಃ ಚಂಚಲ ಸ್ವಭಾವ ಈ ಚಂಚಲ ಸ್ವಭಾವಪ್ರಕಟಗೊಳ್ಳುವುದು ಅವನ ಮುಂದೆ ಗೋಚರಿಸುವ ವಿಷಯಾಮಿಷಗಳೆಂಬುದನ್ನು ಅನೇಕ ರೂಪಕಗಳಾಗಿ ಚಿತ್ರಿಸಿರುವುದನ್ನು ಈ ಪರಿಸರದ ಶರಣರ ಸಾಹಿತ್ಯದಲ್ಲಿ ಕಾಣುತ್ತೇವೆ.

ಪಶುವಿನ ಮುಂದೆ ಕಲಗಚ್ಚು ಹಾಕಿದರೂ ಅದರಿಂದ ಅಮೃತ ಪಡೆಯಲಾಗುತ್ತದೆ. ಹಾಗೆಯೇ ಹೊನ್ನು-ಹೆಣ್ಣು -ಮಣ್ಣು ಎನ್ನುವ ಆಸೆಯಾಮಿಷಗಳಿದ್ದರೂ ಅವುಗಳನ್ನು ಲಕ್ಷ್ಯಿಸದಂತೆ ಶಿವಜ್ಞಾನದ ಅಮೃತ ಎರೆದು ಅಜ್ಞಾನವನ್ನು ಹೊಡೆದೊಡಿಸಿ ನೀನು ನನ್ನನ್ನು ಕಾಡುತ್ತಿರುವೆ ಎಂಬುದನ್ನು ಹೇಮಗಲ್ಲ ಹಂಪರು ಬಹು ಸೊಗಸಾಗಿ ಪಶುವಿನ ರೂಪಕದ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ.[೨] ಇದೇ ರೀತಿ ಹಂಪರು ಮಾಯೆಯನ್ನು ಗೆಲ್ಲುವ ಪರಿ, ಅದರ ಸ್ಥಿತಿ, ಅದರಿಂದಾಗುವ ಅನಾಹುತಗಳೆನ್ನಲ್ಲ ಸೂಕ್ತವಾದ ರೂಪಕಗಳನ್ನು ಬಳಸಿ ಅನೇಕ ವಚನಗಳಲ್ಲಿ ಅಭಿವ್ಯಕ್ತಿಸಿದ್ದನ್ನು ನಾವು ಗಮನಿಸಿಬಹುದಾಗಿದೆ.[೩] ಮುಕ್ತಾಯಕ್ಕರು ಸಹ ತಮ್ಮ ವಚನದಲ್ಲಿ ಅನೇಕ ರೂಪಕಗಳನ್ನು ಬಳಸಿ ವಚನದ ಗಾಂಭೀರ್ಯತೆ ಅದರ ತಾತ್ವಿಕತೆಯನ್ನು ಸೊಗಸಾಗಿ ಚಿತ್ರಿಸಿದ್ದನ್ನು ಅವರ ಅನೇಕ ವಚನಗಳಲ್ಲಿ ಕಾಣಬಹುದಾಗಿದೆ.[೪] ಇದಲ್ಲದೇ ಇವರು ಬೊಂಬೆ[೫] ಜಲದ ಚಿತ್ತಾರ[೬], ಕೊಡ[೭] ಮುಂತಾದವುಗಳನ್ನು ಸಶಕ್ತ ರೂಪಕಗಳಾಗಿ ಬಳಸಿಕೊಂಡಿದ್ದಾರೆ.

ರೂಪಕಗಳನ್ನಲ್ಲದೇ ಪ್ರತೀಕ - ಪ್ರತಿಮೆಗಳು ಈ ಪರಿಸರದ ಶರಣರ ಸಾಹಿತ್ಯದಲ್ಲಿ ಮೂಡಿಬಂದು ಸಾಹಿತ್ಯದ ಮೌಲ್ಯವನ್ನು ಮತ್ತಷ್ಟು ಹೆಚ್ಚಿಸಿವೆ. ಜಗತ್ತಿನಲ್ಲಿ ಕಣ್ಣಿಗೆ ಕಾಣುವ ಅನುಭವ ಗಮ್ಯವಾದ ಪ್ರತಿಭೆಗಳನ್ನು ನಾವು ವಚನ ಸಂದರ್ಭದಲ್ಲಿ ಕಾಣಬಹುದಾಗಿದೆ. ಇದರಿಂದಾಗಿ ಈ ಪರಿಸರದ ಶರಣರು ತಮ್ಮ ಕಣ್ಣಿಗೆ ಕಾಣುವ ಬೂದಿಯಲ್ಲಿ ಹೊರಳುವ ಕತ್ತೆ, ಬೆಕ್ಕು, ನಾಯಿ, ಎಲೆ ಉದುರಿದ ಮರ, ಮೊರದ ಮಾರಿ ಮುಂತಾದವು ಮೊದಲ ಬಾರಿಗೆ ಶರಣರ ಮೂಲಕ ಪ್ರವೇಶ ಪಡೆದವು. ಇಂತಹ ಪ್ರತಿಮೆಗಳ ಬಗ್ಗೆ 'ಇವುಗಳಲ್ಲಿ ನಿಜವಾದ ಜೀವನದ ಉಸಿರಾಡಿದೆ. ಜನಪದ ಸತ್ವ, ದೇಶಿ ಬೆಸುಗೆಗೊಂಡಿದೆ. ಇಂದು ನವ್ಯರು ಹೇಳುವ ಮಣ್ಣಿನ ವಾಸನೆಯನ್ನು ಶರಣರು ೧೨ನೇಶತಕದಲ್ಲಿ ಅದನ್ನು ಸಾಧಿಸಿ, ಕಾವ್ಯಕ್ಕೆ ಘನತೆ ತಂದುಕೊಟ್ಟಿದ್ದಾರೆ.'[೮] ಎಂಬುದಾಗಿ ಡಾ: ವೀರಣ್ಣ ರಾಜೂರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ದೇವರು ಕೊಡುವಾಗ ಎಲ್ಲಾ ಕೊಡುತ್ತಾನೆ ಅದಕ್ಕಾಗಿ ಚಿಂತಿಸುವುದುಸರಿಯಲ್ಲವೆನ್ನುವುದನ್ನು ಅನೇಕ ಶರಣರು ಅಭಿವ್ಯಕ್ತಿಸಿದ್ದಾರೆ. ಇದನ್ನು ಸುಂದರ ಪ್ರತೀಕ - ಪ್ರತಿಮೆಗಳ ಮೂಲಕ ತಿಳಿಸಿದ್ದಾರೆ.[೯] ಈ ಪರಿಸರದ ಶರಣರ ಆತ್ಮ ವಿಮರ್ಶೆ ಸಂದರ್ಭದಲ್ಲಿ ಅನೇಕ ಸಂಗತಿಗಳನ್ನು ಪ್ರತೀಕಗಳನ್ನಾಗಿ ಬಳಸಿಕೊಂಡಿದ್ದಾರೆ.[೧೦]

ಹೀಗೆ ಈ ಪರಿಸರದ ಶರಣರು ಉಪಮೆ-ದೃಷ್ಟಾಂತ-ರೂಪಕ- ಪ್ರತಿಮೆಗಳ ಮೂಲಕ ತಮ್ಮ ವಚನಗಳನ್ನು ಅಭಿವ್ಯಕ್ತಿಸಿ ಸಾಹಿತ್ಯಿಕವಾಗಿ ಬಹು ಮಾರ್ಮಿಕ ಮೌಲ್ಯವನ್ನು ಕನ್ನಡ ಸಾಹಿತ್ಯಕ್ಕೆ ಶರಣರು ನೀಡಿ, ಆದರ್ಶ ಸಾಹಿತ್ಯವನ್ನು ನಿರ್ಮಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

---

೧ : ಸಂ : ಡಾ: ಬಿ.ಆರ್. ಹಿರೇಮಠ-ಸ.ವ.ಸಂ. - ೮, ವಚನ ೭೯, ಪುಟ ೧೩೬

೨ : ಸಂ : ಡಾ : ವೀರಣ್ಣ ರಾಜೂರು -ಸ.ವ.ಸಂ. -೧೪, ವಚನ ೫೨, ಪುಟ ೪೫೫

೩ : ಅದೇ : ವಚನ ೪೯-೫೧, ಪುಟ ೪೫೪-೪೫೫

೪ : ಡಾ : ವೀರಣ್ಣ ರಾಜೂರು -ಸ.ವ.ಸಂ. -೫, ವಚನ ೨, ಪುಟ ೨೭೧

೫ : ಅದೇ : ವಚನ ೨೫, ಪುಟ ೨೭೮

೬ : ಅದೇ : ವಚನ ೧೭, ಪುಟ ೨೭೬

೭ : ಅದೇ : ವಚನ ೧೩, ಪುಟ ೨೭೫

೮ : ಡಾ : ವೀರಣ್ಣ ರಾಜೂರು - ವ.ಅ.ಪುಟ ೬೦

೯ : ಸಂ : ಡಾ: ವೀರಣ್ಣ ರಾಜೂರು -ಸ.ವ.ಸಂ. -೫, ವಚನ ೨೧, ಪುಟ ೨೦೩

೧೦ : ಸಂ : ಡಾ : ಬಿ.ಆರ್. ಹಿರೇಮಠ -ಸ.ವ.ಸಂ. -೮, ವಚನ ೭, ಪುಟ ೪ ರಿಂದ ೫

ತಂತ್ರ :

ಶರಣರು ತಮ್ಮ ವಚನಗಳಲ್ಲಿ ಯಾವುದೇ ತಂತ್ರದ ಪರಿಕಲ್ಪನೆಯನ್ನಿಟ್ಟುಕೊಂಡು ಬರೆಯದಿದ್ದರೂ ಅವರ ವಚನಗಳಲ್ಲಿ ವಿಶಿಷ್ಟ ತಂತ್ರಗಳು ಅಂತರ್ಗತವಾಗಿರುವುದನ್ನು ನಾವು ಗಮನಿಸಬಹುದಾಗಿದೆ. ಈ ಪರಿಸರದ ಶರಣರು ಬಳಸಿದ ತಂತ್ರಗಳನ್ನು ನಾವು ಅವರ ವಚನಗಳಿಂದಲೇ ಕಂಡು ಕೊಂಡು ಈ ಕೆಳಗಿನಂತೆ ಪಟ್ಟೀಕರಿಸಬಹುದು.

೧) ಸಂಕ್ಷೇಪತೆ ೨)ಪುರಾಣ ಕ್ರಮ ೩) ಅಂಕಿತ ನಾಮ ೪) ಸಂಭಾಷಣೆ ೫)ಪ್ರೇಮಿ ಭಾವ ೬)ಬೆಡಗು ೭)ಕಥನ ಕ್ರಮ- ಇತ್ಯಾದಿಗಳು .

೧) ಸಂಕ್ಷೇಪತೆ

ಶರಣರಿಗೆ ತಮ್ಮ ತುಮುಲಗಳನ್ನು ಅಭಿವ್ಯಕ್ತಿಸಲು, ಜೊತೆಗೆ ಸೈದ್ಧಾಂತಿಕ ಸಾಮೂಹಿಕ ಆಂದೋಲನದ ವಿಷಯಗಳನ್ನು ಅಭಿವ್ಯಕ್ತಿಸಲು ಅವರು ತಮಗಿಂತ ಹಿಂದಿನ ಕಾವ್ಯ ಮಾದರಿಯನ್ನು ಅನುಕರಿಸಲಿಲ್ಲ . ಯಾವುದೇ ಛಂದಸ್ಸುಗಳಿಗೆ ಬದ್ಧರಾಗದೇ ಜನ ಜೀವನದ ಆಡು ಭಾಷೆಯನ್ನೆ ತಮ್ಮ ವಿಚಾರಗಳ ಅಭಿವ್ಯಕ್ತಿಗೆ ಬಳಸಿ ಕೊಂಡರು. ನಿದಿರ್ಷ್ಟವಾಗಿ ಗದ್ಯವೂ ಅಲ್ಲದ ಪದ್ಯವೂ ಅಲ್ಲದ ಒಂದು ವಿಶಿಷ್ಟ ರೂಪವಾಗಿ ಮೈದೋರಿದ ಕಾರಣ ಅವರಲ್ಲಿ ' ಮುಕ್ತಕ ' ರೂಪ ಮೂಡಿ ಬಂದಿತು. ಇದರಿಂದಾಗಿ ಅವರು ಕನ್ನಡದಲ್ಲಿಯೇ ಸಮರ್ಥವಾಗಿ ಸಂಕ್ಷಿಪ್ತವಾಗಿ ತಮ್ಮ ಅನುಭಾವದ ವಿಚಾರಗಳನ್ನು ಕಟ್ಟಿ ಕೊಟ್ಟಿದ್ದು ಅವರ ವಿಶಿಷ್ಟ ತಂತ್ರವಾಗಿದೆ. ಇಂತ ತಂತ್ರಗಳನ್ನು ನಾವು ಅವರ ವಚನಗಳಲ್ಲಿ ಗುರುತಿಸಬಹುದು.

ಉದಾ : ಕಾಯಕವೇ ಕೈಲಾಸ ೧ ಆಸೆಯೆಂಬುದೆ ಮಾರಿ ನಿರಾಸೆಯೆಂಬುದೆ ದೇವ ಪದ ೨ , ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ ೩, ಅರಿವಡೆ ಮತಿಯಿಲ್ಲ ನೆನೆವಡೆ ಮನವಿಲ್ಲ ೪ , ಅರಿದಡೆ ಶರಣ ಮರೆದಡೆ ಮಾನವ ೫ , - ಈ ರೀತಿ ಅನೇಕ ವಚನ ಸಾಲುಗಳನ್ನು ಗಮನಿಸಿದಾಗ ಕರಿಯನ್ನು ಕನ್ನಡಿಯಲ್ಲಿ ತೋರಿಸಿದಂತೆ ಶರಣರ ಈ ಸಂಕ್ಷೇಪತೆ ವಿಶಿಷ್ಟವಾದ ತಂತ್ರವಾಗಿದೆ.

೨)ಪುರಾಣ ಕ್ರಮ

ಪುರಾಣವನ್ನು ಶರಣರು ತಮ್ಮ ವಚನಗಳಲ್ಲಿ ವೈಭವೀಕರಿಸದೇ ಅದರ ವಾಸ್ತವ ಸ್ಥಿತಿಯನ್ನು ಕಲ್ಪಿಸಿಕೊಟ್ಟರು.

ವಾರಣಾಸಿ, ಅವಿಮುಕ್ತ ಇಲ್ಲಿಯೇ ಇದ್ದಾನೆ

ಹಿಮದ ಕೇತಾರ, ವಿರೂಪಾಕ್ಷ ಇಲ್ಲಿಯೇ ಇದ್ದಾನೆ

ಗೋಕರ್ಣ-ಸೇತು ರಾಮೇಶ್ವರ ಇಲ್ಲಿಯೇ ಇದ್ದಾನೆ

ಶ್ರೀ ಶೈಲ ಮಲ್ಲಿನಾಥ ಇಲ್ಲಿಯೇ ಇದ್ದಾನೆ

ಸಕಲಲೋಕ ಪುಣ್ಯ ಕ್ಷೇತ್ರ ಇಲ್ಲಿಯೇ ಇದ್ದಾನೆ

ಸಕಳ ಲಿಂಗ ಉಳಿಯುಮೇಶ್ವರ ತನ್ನಲ್ಲಿ ಇದ್ದಾನೆ. ೬.

ಇಲ್ಲಿ ಚಿಕ್ಕಯ್ಯ ಪೌರಾಣಿಕ ಪುಣ್ಯ ಕ್ಷೇತ್ರ ಹೆಸರಿಸಿ ಎಲ್ಲವೂ ಒಂದೇ ಎಂಬುವ ಸುಧಾರಣಾವಾದಿ ನಿಲುವು ತಳೆಯುವುದರ ಜೊತೆಗೆ ತನ್ನಲ್ಲಿಯೇ ಎಲ್ಲ ಕ್ಷೇತ್ರಗಳಿವೆ ಎಂಬ ಸತ್ಯವನ್ನು ತಿಳಿಸಿದ್ದಾರೆ. ಇದೇ ರೀತಿ ಹೇಮಗಲ್ಲ ಹಂಪರು ಪುರಾಣದ ಕಲ್ಪನೆ ಬಳಸಿಕೊಂಡು ಅದರ ನಿಜ ಸ್ಥಿತಿಯನ್ನು 'ಮನವು ಮಹಾದೇವನಲ್ಲಿ ವೇದ್ಯವಾದರೆ '೭ ಎಂಬ ವಚನದಲ್ಲಿ ತಿಳಿಸಿ ಪುರಾಣವನ್ನು ತಮ್ಮ ಅಭಿವ್ಯಕ್ತಿಯ ತಂತ್ರವಾಗಿ ಹೇಗೆ ಬಳಸಿಕೊಳ್ಳಬಹುದೆಂದು ತಿಳಿಸುತ್ತಾರೆ.

---

೧ : ಸಂ : ಡಾ : ಎಂ.ಎಂ. ಕಲಬುರ್ಗಿ -ಸ.ವ.ಸಂ. -೬ , ವಚನ ೭ , ಪುಟ ೩೭೯

೨ : ಸಂ : ಡಾ : ಎಸ್.ವಿದ್ಯಾಶಂಕರ -ಸ.ವ.ಸಂ. -೭ , ವಚನ ೩೪ , ಪುಟ ೨೯೩

೩ : ಸಂ: ಡಾ: ವೀರಣ್ಣ ರಾಜೂರು -ಸ.ವ.ಸಂ.-೫ , ವಚನ ೧೨ , ಪುಟ ೨೦೧

೪ : ಅದೇ : ವಚನ ೫ , ಪುಟ ೨೭೨

೫ : ಡಾ : ಬಿ.ಆರ್. ಹಿರೇಮಠ-ಸ.ವ.ಸಂ. -೯ ,ವಚನ ೨ , ಪುಟ ೫೪

೬. ಸಂ.ಡಾ:ಎಂ.ಎಂ.ಕಲಬುರ್ಗಿ - ಸ.ವ.ಸಂ. - ೬ ವಚನ ೧೧ ಪುಟ ೬೩೫

೭. ಸಂ.ಡಾ: ವೀರಣ್ಣ ರಾಜೂರು - ಸ.ವ.ಸಂ.೧೪ ವಚನ ೮೬ ಪುಟ ೪೭೨

೩) ಅಂಕಿತ ನಾಮ :

ಇದು ಶರಣರು ಬಳಸಿದ ವಿಶಿಷ್ಟ ತಂತ್ರವಾಗಿದೆ ಇದರಿಂದಾಗಿ ಅವರು ಆತ್ಮೀಯವಾಗಿ ವಚನಗಳನ್ನು ಅಭಿವ್ಯಕ್ತಿಸಲು ಸಾಧ್ಯವಾಯಿತು. ಆರಂಭದಲ್ಲಿ ಅಂಕಿತನಾಮಗಳನ್ನು ಸ್ಥಾವರಗಳ ಪ್ರತೀಕಗಳಾಗಿ ಬಳಸಿಕೊಂಡರು ಮುಂದೆ ಸಾಧನೆಯ ಸಿದ್ಧಿಯನ್ನು ಸಾಧಿಸಿದಾಗ ವಾಸ್ತವ ಅರಿತು ಅವುಗಳನ್ನು ಇಷ್ಟ ಲಿಂಗದ ಪ್ರತೀಕವಾಗಿ ಪರಿವರ್ತಿಸಿಕೊಂಡು ವಿಶಿಷ್ಟ ಮಹತ್ವ ನೀಡಿದ್ದಾರೆ.

ಶರಣರ ಅಂಕಿತ ನಾಮಗಳನ್ನು ಗಮನಿಸಿದಾಗ ಮುಕ್ತಾಯಕ್ಕನನ್ನು ಹೊರತು ಪಡಿಸಿ ಉಳಿದೆಲ್ಲಾ ಶರಣರು ಇಷ್ಟಲಿಂಗವನ್ನೇ ಅಂಕಿತವಾಗಿರಿಸಿಕೊಂಡಿದ್ದಾರೆ. ಮುಕ್ತಾಯಕ್ಕ ತನ್ನ ತಂದೆಯಾದ ಅಜಗಣ್ಣನನ್ನು ಅಂಕಿತವಾಗಿರಿಸಿದ್ದಾರೆ. ಆಕೆಯ ಪಾಲಿಗೆ ಆತನೇ ತಂದೆ, ಗುರು ಎಲ್ಲವೂ ಆಗಿದ್ದಾನೆ. ಶರಣರು ಬಳಸಿದ ಅಂಕಿತ ನಾಮ ಅವರು ತಮ್ಮ ಐಡೆಂಟಿಟಿ ಗುರುತಿಸಿಕೊಳ್ಳಲಲ್ಲವೆಂಬುದು ನಮಗೆ ಸ್ಪಷ್ಟವಾಗಿ ಕಂಡು ಬರುತ್ತಿದ್ದರು. ಅದು ಅವರಿಗೆ ತಮ್ಮ ವಿಚಾರ ಅಭಿವ್ಯಕ್ತಿಯ ಸ್ವಾತಂತ್ರ್ಯಕ್ಕೆ ಅವಶ್ಯಕವಾಯಿತೆಂಬುದು ಗಮನಾರ್ಹಸಂಗತಿಯಾಗಿದೆ. ವಿಚಾರ ಸ್ವಾತಂತ್ರ್ಯದ ಜೊತೆಗೆ ಸಂವಾದ ರೀತಿ, ಆತ್ಮಗತವಾದ ರೀತಿಯಲ್ಲಿ ಅವರು ತಮ್ಮ ವಿಚಾರಗಳನ್ನು ಅಭಿವ್ಯಕ್ತಿಸಲು ಇದು ಸಹಕಾರಿಯಾಯಿತು. ಈ ಕುರಿತು ಡಾ : ಪಿ.ವಿ.ನಾರಾಯಣ ಹೇಳುವಂತೆ ' ಅಂಕಿತ ಪದ್ಧತಿಯು ವಚನಕಾರರಿಗೆ ಅಪೂರ್ವಸೌಕರ್ಯವನ್ನು ಒದಗಿಸಿದೆ. ಏಕೆಂದರೆ ತನ್ನ ಒಳಗಿನದನ್ನು ಸಂಕೋಚವಿಲ್ಲದೇ ಬರಿದು ಗೊಳಿಸಬೇಕಾದ ಅಂಕಿತವು ಆತ್ಮ ಸಾಕ್ಷಿಗೆ ಸಂಕೇತವಾಯಿತು. ನಿರೂಪಿಸುವಾಗ ಸರ್ವಸಾಕ್ಷಿ ಸಂಕೇತವಾಯಿತು. ಯಾವುದೇ ಬಗೆಯಿಂದ ವಚನಕಾರರು ತಮ್ಮ ಅಂಕಿತಗಳನ್ನು ರೂಪಿಸಿಕೊಂಡಿರಲಿ ಅವರಿಗೆ ಈ ದ್ವಿವಿಧ ಉಪಯೋಗ ಸಾಧ್ಯವಾಗಿದೆ. '೧ಎಂಬುದು ಈ ಪರಿಸರದ ಶರಣರಿಗೆ ಅನ್ವಯಿಸಬಹುದು.

೪) : ಸಂಭಾಷಣೆ :

ಶರಣರು ಬಳಸಿದ ವಿಶಿಷ್ಟ ತಂತ್ರ ಇದಾಗಿದೆ. ಇದು ಶರಣರ ವಿಭಿನ್ನ ಆಯಾಮಗಳನ್ನು ಧ್ವನಿಸುತ್ತದೆ. ವಚನಗಳಲ್ಲಿ ಅಂರ್ತಗತವಾಗಿದ್ದ ನಾಟಕೀಯತೆಯನ್ನು ಗುರುತಿಸಿ ಅವುಗಳನ್ನು ಸಂಭಾವ್ಯವಾಗಿ ಸಂಯೋಜಿಸಿದ ಕೀರ್ತಿ ಶೂನ್ಯ ಸಂಪಾದನೆಯ ರೂವಾರಿಗಳಿಗೆ ಸಂದರು ಅದರ ಹಿಂದಿನ ಆಶಯ - ತಂತ್ರ ಶರಣರದೇ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಇಂತಹ ಹಲವಾರು ನಿದರ್ಶನಗಳನ್ನು ಈ ಪರಿಸರದ ಶರಣರ ಸಾಹಿತ್ಯದಲ್ಲಿ ಗಮನಿಸಬಹುದು.'ಮುಕ್ತಾಯಕ್ಕಗಳ ಸಂಪಾದನೆ'೨ಮುಕ್ತಾಯಕ್ಕ - ಅಲ್ಲಮ ಪ್ರಭು ಇವರ ನಡುವೆ ನಡೆದ ಸಂವಾದ ಇಡೀ ಕನ್ನಡ ಸಾಹಿತ್ಯ ಸಂದರ್ಭದಲ್ಲಿಯೇ ಅಪೂರ್ವವೆಂಬುದಾಗಿ ಅನೇಕ ವಿದ್ವಾಂಸರು ವಿವೇಚಿಸಿದ್ದಾರೆ. ಆಯ್ದಕ್ಕಿ ಮಾರಯ್ಯಗಳ ಸಂಪಾದನೆ೩ ಇದು ದಂಪತಿಗಳಿಬ್ಬರ ಆದರ್ಶವನ್ನು - ಅವರ ಸಮಾನತೆಯನ್ನು ವಚನಗಳ ಹಿನ್ನೆಲೆಯಲ್ಲಿ ಸಹಜ ಮಾತುಕತೆಯಂತೆ ಕಟ್ಟಿ ಕೊಡಲಾಗಿದೆ. ಹೀಗೆ ಹಲವಾರು ಸಂಭಾಷಣೆಗಳನ್ನು ಈ ಪರಿಸರದಲ್ಲಿ ಕಾಣ ಬಹುದು. ಶೂನ್ಯ ಸಂಪಾದನಾಕಾರರು ಗುರುತಿಸದೇ ಹೋದ ಹಲವು ಪ್ರಸಂಗಳನ್ನು ಈ ಪರಿಸರದಲ್ಲಿ ಕಾಣಬಹುದು. ಉದಾ : ಸತ್ಯಕ್ಕ - ಮುಕ್ತಾಯಕ್ಕ ಮತ್ತು ಢಕ್ಕೆಯ ಮಾರಯ್ಯ - ಶಂಕರದಾಸಿಮಯ್ಯರ ಸಂವಾದಗಳು ಮುಂತಾದವುಗಳನ್ನು ಅವರ ವಚನಗಳ ಹಿನ್ನೆಲೆಯಲ್ಲಿ ನಾವು ಗುರುತಿಸಬಹುದಾಗಿದೆ. ಈ ಕುರಿತು ಮುಂದೆ 'ಸಾಹಿತ್ಯ ಸಂವಾದ 'ಎಂಬ ಶೀರ್ಷಿಕೆಯಡಿ ಸುಧೀರ್ಘವಾಗಿ ಈ ಪ್ರಬಂಧದಲ್ಲಿ ಮುಂದೆ ವಿವೇಚಿಸಲಾಗುತ್ತದೆ.

೫) ಪ್ರೇಮಿ ಭಾವ :

ಪ್ರೇಮಿಭಾವದ ಪರಿಕಲ್ಪನೆಯನ್ನು ಮೊದಲ ಬಾರಿಗೆ ಅಭಿವ್ಯಕ್ತಿಸಿದವರೇ ಶರಣರು ಅವರ ಪ್ರೇಮಿ ಭಾವ ಸಂತರಿಗಿಂತ ವಿಶಿಷ್ಟವಾಗಿದ್ದು ವಿಭಿನ್ನ ನೆಲೆಯಲ್ಲಿ ತನ್ನ ಆವರಣ ಪಡೆದು ಕೊಂಡಿದೆ. ಸ್ವಯಂ ಸತಿಯಾಗಿ ತನ್ನ ಇಷ್ಟಲಿಂಗ ಪತಿಯಾಗಿ ಅದಕ್ಕಿಂತ ಹೆಚ್ಚಾಗಿ ಪ್ರೇಮಿಯಾಗಿ ತಮ್ಮ ತುಮುಲಗಳನ್ನೆಲ್ಲ ಆ ಲಿಂಗದೆದುರು ನಿವೇದಿಸಿಕೊಂಡ ಹಲವಾರು ಅಂಶಗಳು ವಚನಗಳಲ್ಲಿ ಕಂಡು ಬರುತ್ತದೆ. ಅಂತರಂಗದ ವಿನ್ಯಾಸವೇ ಇಲ್ಲಿ ಸ್ವಚ್ಛಂದವಾಗಿ ತೆರೆದು ಅದು ವಿಶಿಷ್ಟವಾದ ಸಾರ್ಥಕ್ಯ ಪಡೆದಿದೆ. ಇದನ್ನೇ ಶರಣರು ತಂತ್ರವಾಗಿಸಿ ಕೊಂಡಿದ್ದಾರೆ.

ಜೀವಾತ್ಮ - ಪರಮಾತ್ಮದೊಂದಿಗೆ ಅನುಸಂಧಾನ ಪಡೆಯುವ ಪೂರ್ಣಜ್ಞ ಸ್ಥಿತಿಯ ಭಾವವೇ ಇಂತ ವಚನಗಳಲ್ಲಿ ಕಾಣಬಹುದು. ಅನುಸಂಧಾನಕ್ಕಾಗಿ ಯತ್ನಿಸುವ ಹಂತದಲ್ಲಿನ ಕಾತುರ , ಹಂಬಲ , ಪ್ರೇಮ , ಸರಸ - ವಿರಹ ಮೊದಲಾದ ಭಾವಗಳ ತುಡಿತವನ್ನು ಇಂತಹ ವಚನಗಳಲ್ಲಿ ಕಾಣಬಹುದು. ಸುಂಕದ ಬಂಕಣ್ಣನವರ 'ಅಡಿಗಡಿಗೆ ಬಂದಡರು ತಿರ್ಪೆ..... ನೋಡೆನ್ನೊಡೆಯ ೪' ಎಂಬಲ್ಲಿ 'ಶರಣ ಸತಿ - ಲಿಂಗಪತಿ' ಭಾವ ಕಾಣಬಹುದು.

---

೧ : ಡಾ : ಪಿ.ವಿ. ನಾರಾಯಣ - ವ.ಸಾ.ಪ. - ಪುಟ ೧೫೫

೨ : ಸಂ: ಸಂ. ಶಿ. ಭೂಸನೂರ ಮಠ - ಗೂ.ಸಿ.ಪ್ರ.ಶೂ. - ಪುಟ ೨೫-೩೬

೩ : ಅದೇ - ಪುಟ ೨೨೪-೨೩೫

೪ : ಸಂ : ಡಾ : ಬಿ.ಆರ್. ಹಿರೇಮಠ-ಸ.ವ.ಸಂ.-೯ , ವಚನ ೧೦೨, ಪುಟ ೨೩೪

೬) ಬೆಡಗು :

ಶರಣರು ವಿಶಿಷ್ಟ ರೀತಿಯ ಭಾಷೆ -ಶೈಲಿಗಳನ್ನು ಬಳಸಿ ರಚಿಸಿರುವ ವಚನಗಳೇ ಬೆಡಗಿನ ವಚನಗಳು. ಇವು ವಿಶಿಷ್ಟವಾದ ಅರ್ಥ -ಸಂಪ್ರದಾಯಗಳನ್ನು ಒಳಗೊಂಡಿದೆ. ಈ ವಚನಗಳಲ್ಲಿ ವಾಚ್ಯಾರ್ಥ, ಶಬ್ದಾರ್ಥ, ವ್ಯಂಗ್ಯಾರ್ಥ ನಿಂತು ಹೋಗಿ ನಿಜವಾದ ಅರ್ಥ ಪ್ರತಿಮೆ ಸಂಕೇತಗಳ ಮೂಲಕ ಸಿದ್ಧವಾಗುತ್ತದೆ. ಪ್ರತಿಮೆ -ಸಂಕೇತಗಳನ್ನೇ ಪ್ರಧಾನವಾಗಿ ಮಾಡಿಕೊಂಡು ಅಭಿವ್ಯಕ್ತಿಸಿದ್ದೇ ಬೆಡಗು.

ಇಲ್ಲಿಯ ಶಬ್ದಗಳು ಸಂಕೇತ ವಾಹಕಗಳಾಗಿರುವುದನ್ನು ಗಮನಿಸಬಹುದಾಗಿದೆ. ಅಂತಹ ಶಬ್ದಗಳ ಸಾಮಾನ್ಯ ಅರ್ಥಗಳೆಂದರೆ : ಇಲ್ಲಿ ಬೆಂಕಿ - ಉರಿ = ಜ್ಞಾನ , ಗಾಳಿ - ಕಪಿ = ಚಂಚಲ ಸ್ವಭಾವ, ಹಂಸ = ಆತ್ಮ , ಊರು - ಪಟ್ಟಣ = ದೇಹ ಇತ್ಯಾದಿ. ಅಲೌಕಿಕ ವಿಚಾರಗಳನ್ನು ಒಂದು ರೀತಿಯ ಸಾಂಕೇತಿಕ ಭಾಷೆಯ ನೆಲೆಯಲ್ಲಿ ನಿರೂಪಿಸಿ ನಂಬಿದ ತತ್ವವನ್ನು ಈ ತಂತ್ರದಮೂಲಕ ಪ್ರತಿಪಾದಿಸಿಕೊಳ್ಳುವದಾಗಿದೆ. ಎಲ್ಲಾ ಬೆಡಗಿನ ವಚನಗಳ ಅಂತಿಮ ಸ್ಥಿತಿಯೆಂದರೆ ಐಕ್ಯ ಸ್ಥಿತಿಯ ಸಂಪೂರ್ಣತೆಯನ್ನು ಅನುಭವಿಸುವುದು. ಇಂತಹ ತಂತ್ರವನ್ನು ಬಳಸಿಕೊಂಡು ಈ ಪರಿಸರದ ಶರಣರಾದ ಬಿಬ್ಬಿ ಬಾಚಯ್ಯ , ಢಕ್ಕೆಯ ಮಾರಯ್ಯ , ಸುಂಕದ ಬಂಕಣ್ಣ, ಹೇಮಗಲ್ಲ ಹಂಪ ಇವರು ಬಹುತೇಕ ವಚನ ರಚಿಸಿದ್ದಾರೆ. ಢಕ್ಕೆಯ ಮಾರಯ್ಯ ತನ್ನ ವೃತ್ತಿಯ ಮೂಲಕವೇ ಅದೇ ಸಂಕೇತ ಬಳಸಿಕೊಂಡು ಅವುಗಳಿಗೆ ವಿಶಿಷ್ಟವಾದ ಅರ್ಥ ಕಲ್ಪಿಸಿಕೊಡುತ್ತಾನೆ. ಬಿಬ್ಬಿ ಬಾಚಯ್ಯ ಈ ತಂತ್ರದಿಂದಲೇ ತಮ್ಮ ಅನೇಕ ವಚನ ರಚಿಸಿದ್ದಾರೆ. ಈತನ ವಚನಗಳು ಸಂಕೇತಗಳನ್ನು ಒಳಗೊಂಡಿದ್ದರೂ ಅದೇ ವಚನದ ಸಾಲುಗಳಲ್ಲಿಯೇ ಅದರ ಆಶಯ ಕಂಡುಬರುವ ವಿಶಿಷ್ಟಾಂಶವನ್ನು ಕಾಣಬಹುದಾಗಿದೆ. ಇದಕ್ಕೆ ನಿದರ್ಶನವಾಗಿ ಈತನ ಒಂದು ವಚನ ಹಿಗೀದೆ.

ಪೃಥ್ವಿಯೆಂಬ ಅಂಗದ ಧರೆಯಲ್ಲಿ

ಅಪ್ಪುಯೆಂಬ ಅಸು ಹರಿವುತ್ತಿರಲಾಗಿ

ಬಹುಚಿತ್ತವೆಂಬ ಜನರು ನೆರೆದು

ಆರುವೆಂಬ ಹರುಗೋಲು ಕಟ್ಟಿದೆ

ಕುರುಹಿನ ಜಲ್ಲೆಯ ಹಿಡಿದು

ಒತ್ತುವರಿಲ್ಲದೆ ತಡಿಯಲ್ಲಿ ಕೂಗುತ್ತೈದಾರೆ

ಏಣಾಂಕಧರ ಸೋಮೇಶ್ವರ ಲಿಂಗವನರಿಯದೆ ೧ ಹಾಗೇಯೇ ಮತ್ತೊಂದೆಡೆ ಇವರು ಮನುಷ್ಯನ ದೇಹವನ್ನು ಮರಕ್ಕೆ ಹೋಲಿಸಿ ಶರೀರದ ಈ ಜೀವಾತ್ಮ ಕಾಯ ಪ್ರಸಾದ ಕಾಯವಾಗುವ ಸ್ಥಿತಿ ತಿಳಿಸಿ ಅಂತಹ ಪ್ರಸಾದ ಕಾಯ ಅರ್ಪಿತವಾಗುವುದು ದೇವರಿಗೆ ಮಾತ್ರವೆನ್ನುತ್ತಾನೆ.೨ ಆತ್ಮ ಜ್ಞಾನವನ್ನು ದೇಹವೆಂಬ ಮಡಕೆಯಲ್ಲಿ ತುಂಬಿಕೊಂಡು ಆ ಮೂಲಕ ಪಡೆಯ ಬೇಕಾದ ಮೋಕ್ಷದ ಸ್ವರೂಪವನ್ನು ತನ್ನ ವಚನಗಳಲ್ಲಿ ಹೇಳುತ್ತಾನೆ ೩ . ಇದೇ ರೀತಿ ಸುಂಕದ ಬಂಕಣ್ಣ ಮಾಯಾಸ್ವರೂಪ - ಅದರ ಬಲೆಗೆ ಸಿಕ್ಕವರನ್ನು ಕುರಿತು ಹೇಳುವ ರೀತಿ ಹೀಗೆ :

ಮುತ್ತು ಮೊಲೆಯ ನುಂಗಿತ್ತು , ಮೊಲೆ ಅಬಲೆಯ ನುಂಗಿತ್ತು

ಅಬಲೆಯ ಬಲೆಯಲ್ಲಿ , ಬಲವಂತರೆಲ್ಲರೂ ಸಿಕ್ಕಿದರು

ಸುಂಕಕ್ಕಡಹಿಲ್ಲ , ಬಂಕೇಶ್ವರ ಲಿಂಗಾ ೪

ಮತ್ತೊಂದೆಡೆ ಹರಿಯುವ ಮನಸ್ಸಿಗೆ ಕುದುರೆಯನ್ನು ಅಂಹಕಾರಕ್ಕೆ ಆನೆಯನ್ನು ಹೋಲಿಸಿ ಇತರರಿಗಿಂತ ವಿಭಿನ್ನ ಅರ್ಥಗಳನ್ನು ಚಿತ್ರಿಸುತ್ತಾರೆ.೫ ಇದೇ ರೀತಿ ಬೆಡಗಿನ ತಂತ್ರವನ್ನು ಹೇಮಗಲ್ಲ ಹಂಪರ ವಚನಗಳಲ್ಲಿ ಕಾಣಬಹುದು. ದೇಹದೊಳಗಿನ ಆತ್ಮ ಸ್ವರೂಪವನ್ನು ಕುರಿತು ಅವರು ಹೇಳುವುದು ಹೀಗೆ :

'ನೀರಮಧ್ಯೆ ಉರಿವ ಜ್ಯೋತಿ......ಊರೊಳಗೆ ಬೆಳಗುವುದ ಕಂಡೆ' ೬

---

೧ : ಸಂ : ಡಾ : ಬಿ.ಆರ್. ಹಿರೇಮಠ - ಸ.ವ.ಸಂ. -೮ , ವಚನ ೨ , ಪುಟ೧೧೮

೨ : ಅದೇ : ವಚನ ೩೫ , ಪುಟ೧೨೫

೩ : ಅದೇ : ವಚನ ೩೩ , ಪುಟ೧೨೫

೪ : ಸಂ : ಡಾ : ಬಿ.ಆರ್. ಹಿರೇಮಠ - ಸ.ವ.ಸಂ. -೯, ವಚನ ೫ , ಪುಟ೨೧೦

೫ : ಅದೇ : ವಚನ ೨೪, ಪುಟ ೨೧೪

೬ : ಸಂ : ಡಾ : ವೀರಣ್ಣ ರಾಜೂರು - ಸ.ವ.ಸಂ. -೧೪, ವಚನ ೪೩, ಪುಟ ೪೫೧

ಮಾಯೆಯ ಸ್ವರೂಪವನ್ನು ಕುರಿತು ಹೇಮಗಲ್ಲ ಹಂಪರು ಅನೇಕ ಬೆಡಗಿನ ವಚನಗಳನ್ನು ರಚಿಸಿದ್ದಾರೆ. ಅವರ ಬೆಡಗಿನ ವಚನಗಳಲ್ಲಿ ಬರುವ ಪ್ರಾಣಿ , ಪಕ್ಷಿ , ಕೀಟ, ಸಸ್ಯ ಇವುಗಳನ್ನು ಸಮರ್ಥವಾಗಿ ತಮ್ಮ ಈ ತಂತ್ರಕ್ಕೆ ಬಳಸಿಕೊಂಡಿದ್ದಾರೆ. ಈ ಪರಿಸರದ ಶರಣರ ಬೆಡಗಿನ ವಚನ ಗಮನಿಸಿದಾಗ ಬಸವಪೂರ್ವಯುಗ - ಬಸವಯುಗದಲ್ಲಿನ ವಚನಗಳ ಸ್ವರೂಪ ಬಸವೋತ್ತರ ಯುಗದ ವಚನಗಳಿಗಿಂತ ಭಿನ್ನವಾಗಿದೆ. ಸಂಸಾರ ಮತ್ತು ಹೆಣ್ಣನ್ನು ಬಸವೋತ್ತರ ಯುಗದವರು ಮಾಯೆ ಎಂದು ಭಾವಿಸಿದರೆ, ಅದಕ್ಕೆ ವಿಭಿನ್ನವಾದ ಗೌರವ ನೀಡಿದವರು ಬಸವ ಪೂರ್ವ - ಬಸವಯುಗದ ಶರಣರಾಗಿದ್ದಾರೆ. ಶರಣರ ಈ ತಂತ್ರವನ್ನೇ ಆಧುನಿಕ ಸಂದರ್ಭದಲ್ಲಿ ನವ್ಯ ಪಂಥದವರು ಬಳಸಿ ಕೊಂಡಿದ್ದಾರೆ.

೨) ಕಥನ ಕ್ರಮ :

ಕಥನ ಕ್ರಮದ ಮೂಲಕ ಬದುಕಿನ ಗಾಢ ಅನುಭವ - ಬದುಕಿನಾಚೆಗಿನ ಮತ್ತೊಂದು ಬದುಕಿನ ನಿಜಸ್ಥಿತಿಯ ಅರಿವನ್ನು ಕಂಡು ಕೊಳ್ಳಬಹುದಾಗಿದೆ. ಜನಪದರ ಬದುಕಿನ ಹಿನ್ನೆಲೆಯಲ್ಲಿ ಅವರದೇ ಪರಿಚಿತ ಪದಗಳ ಮೂಲಕ ಕಥೆಯ ಕುತೂಹಲ ಕೆರಳಿಸಿ ಆ ಮೂಲಕ ವಾಸ್ತವ ತಾತ್ವಿಕ ಪರಿಕಲ್ಪನೆಯನ್ನು ಮೂಡಿಸಿ ಅವರಲ್ಲಿ ಅನುಭಾವದ ಜಾಗೃತಿ ಮಾಡುವುದುದೇ ಈ ಕ್ರಮವನ್ನು ಶರಣರು ಬಳಸಿಕೊಳ್ಳಲು ಕಾರಣವಾಯಿತು. ಈ ಕ್ರಮದಲ್ಲಿ ವಚನಗಳ ಸ್ವರೂಪ ದೀರ್ಘವಾಗಿ, ಅರ್ಥೈಸುವಿಕೆಯಲ್ಲಿ ಕಾಠಿಣ್ಯವನ್ನು ಹೊಂದಿದ್ದರೂ ಸಾರ ಗ್ರಹಿಸುವಲ್ಲಿ ತೊಂದರೆಯೇನಿಲ್ಲ. ಇಂತಹ ಮಾದರಿ ವಚನಗಳನ್ನು ನಾವು ಈ ಪರಿಸರದ ಪುರದ ನಾಗಣ್ಣ,೧ ಹೇಮಗಲ್ಲ ಹಂಪರ ಅನೇಕ ವಚನಗಳಲ್ಲಿ ಕಾಣಬಹುದಾಗಿದೆ.

ಧೋರಣೆ :

ಈ ಪರಿಸರದ ಶರಣರ ವಚನಗಳನ್ನು ಅವಲೋಕಿಸಿದಾಗ ಧೋರಣೆಗಳನ್ನು ಎರಡು ನೆಲೆಯಲ್ಲಿ ಗುರುತಿಸಬಹುದಾಗಿದೆ.

ಒಂದು ಜನಸಾಮಾನ್ಯರ ಭಾಷೆಯಿಂದಲೇ ಅವರಿಗೆ ವಿಶೇಷವಾದ ಜ್ಞಾನದ ಅರಿವನ್ನು ಮೂಡಿಸುವುದಾದರೆ ಇನ್ನೊಂದು ಇಂತಹ ಅರಿವನ್ನು ಆತ್ಮೀಯವಾಗಿ, ಅವರ ಮನಸ್ಸು ಅದನ್ನು ಆನಂದದಿಂದ ಕೇಳುವಂತೆ ಮಾಡುವ ರೀತಿ - ಈ ಕಾರಣದಿಂದಲೇ ಶರಣರು ಹಿಂದಿನ ಸಾಹಿತ್ಯದಂತೆ ಯಾವುದೇ ಬಂಧನಗಳಿಗೆ ಬಲಿಯಾಗಲಿಲ್ಲ . ಅವರ ವಚನ ಗದ್ಯ-ಪದ್ಯ ಮಿಶ್ರಿತವಾಗಿ ಚಂಪೂವಿಗಿಂತ ಭಿನ್ನವಾಗಿ ಹಳಗನ್ನಡದ ವಚನ ಮಾದರಿಗಿಂತ ವಿಶಿಷ್ಟವಾದ ವಚನ ಪ್ರಕಾರ ಸೃಷ್ಟಿಯಾಯಿತು.ಇದನ್ನು ಸೃಷ್ಟಿಸಿಕೊಳ್ಳುವಲ್ಲಿ ಶರಣರಿಗೆ ತಮ್ಮ ತನದ ಅರಿವಿದೆ. ಆದ್ದರಿಂದಲೇ ಅವರು ಅತೀಕಲ್ಪನೆ, ರಂಜಕತೆಗಳನ್ನು ಅಳವಡಿಸಿಕೊಳ್ಳದೆ ಗದ್ಯದ ವಾಸ್ತವ - ಪದ್ಯದ ಮಧುರತೆಯನ್ನು ಮೈಗೂಡಿಸಿಕೊಂಡು ವಚನಕ್ಕೆ ಕೈ ಹಾಕಿದ್ದರೆಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದ್ದು ಅವಶ್ಯಕವಾಗಿದೆ.

ಬದುಕು - ಸಾಹಿತ್ಯಗಳೆರಡನ್ನು ಪರಸ್ಪರ ಪೂರಕವೆಂಬ ಪ್ರಗತಿಪರ ಧೋರಣೆ ಶರಣರದಾಗಿತ್ತು. ಇದೇ ರೀತಿಯಾಗಿ ಈ ಪರಿಸರದ ಶರಣರು ಕಲ್ಯಾಣ ಶರಣರಂತೆ ಬದುಕು ಮತ್ತು ಸಾಹಿತ್ಯಗಳನ್ನು ಒಂದಾಗಿ ನೋಡಿದರು. ಆದರೆ ಮುಂದೆ ಬಸವೋತ್ತರ ಯುಗದಲ್ಲಿ ಶರಣರ ಸಾಹಿತ್ಯದ ಸರಳತೆ, ಸಹಜತೆ ಕರಗಿ ಅದು ಇತರ ಪ್ರಭಾವಗಳಿಗೆ ಬಲಿಯಾಗಿ ಬೌದ್ಧಿಕ ಕಸರತ್ತು , ಅತೀ ಕಲ್ಪನೆಗಳನ್ನು ಹೊಂದಿ ವಿಭಿನ್ನವಾದ ನಿಲುವುಗಳನ್ನು ತಾಳಿತು.

ಬಸವಪೂರ್ವಯುಗ - ಬಸವಯುಗದ ವಚನಗಳಲ್ಲಿ ಕಂಡುಬರುವ ಸಂಕ್ಷಿಪ್ತತೆ, ಭಾವ ತೀವ್ರತೆ , ಅನನ್ಯತೆ ಕ್ರಮೇಣ ಕರಗಿದಂತೆ ಬಸವೋತ್ತರ ಯುಗದಲ್ಲಿ ಕಂಡು ಬರುತ್ತದೆ. ಬದುಕು- ವಾಸ್ತವಿಕತೆ -ಸುಧಾರಣಾ ಮನೋಧರ್ಮ ಬಸವಪೂರ್ವ ಯುಗ ಮತ್ತು ಬಸವಯುಗದಲ್ಲಿ ಮುಖ್ಯ ವಾದರೇ ಬಸವೋತ್ತರ ಯುಗದಲ್ಲಿ ತತ್ವದವಿವೇಚನೆ ಮುಖ್ಯವಾಗಿದೆ. ಈ ಯುಗದಲ್ಲಿ ವಚನ ರಚನೆಗೆ ಕೈ ಹಾಕಿದವರು ಸಂಸಾರವನ್ನು ತ್ಯಜಿಸಿದವರು, ವಿರಕ್ತರು, ಮಠದ ಅಧಿಪತಿಗಳಾಗಿದ್ದವರೇ ಬಹಳವೆಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಹೀಗಾಗಿ ಅವರಿಗೆ ಲೌಕಿಕ ಬದುಕಿಗಿಂತ ಅಲೌಕಿಕ ಬದುಕು ಮುಖ್ಯವೆಂಬ ಮನೋಧೋರಣೆ ಮೂಡಿಬಂದ ಕಾರಣ ಅವರ ಸಾಹಿತ್ಯ ಇದೇ ಮನೋಧರ್ಮದ ಧೋರಣೆ ಹೊಂದಿದ್ದು ಸಹಜವಾಗಿದೆ.

ತುಳಿತಕ್ಕೆ ಒಳಗಾದವರನ್ನು ಅತ್ಯಂತ ಆತ್ಮೀಯವಾಗಿ ಬದುಕು ಮತ್ತು ಬರಹದ ಮೂಲಕ ಶರಣರು ಅವರನ್ನು ಮೇಲೆತ್ತಿ ಎಲ್ಲರಂತೆ ನೋಡತೊಡಗಿದಾಗ ವಚನ ಪ್ರಕಾರ ತನ್ನ ಪ್ರಭಾವವನ್ನು ಎಲ್ಲಾ ವರ್ಗದ ಜನರಲ್ಲಿ ಪಡೆದು ಕೊಂಡಿತು. ಜನ ಭಾಷೆಗೆ ಹೊಸ ಅಭಿವ್ಯಕ್ತಿ , ಹೊಸ ಸಂವೇದನೆಯನ್ನು ಕೊಡುವ ಮೂಲಕ ಸಾಹಿತ್ಯದಲ್ಲಿ ಧೋರಣೆಯ ಹೊಸಗಾಳಿಯನ್ನು ಈ ಪರಿಸರದ ಶರಣರು ಸೃಷ್ಟಿಸಿದರು.

ಭಾಷೆಯ ಆಚೆಗೆ ಇರುವ ಸತ್ಯವನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಬೇಕೆಂಬ ವಿಶಿಷ್ಟವಾದ ಹಂಬಲ ಈ ಪರಿಸರದ ಶರಣರಿಗಿತ್ತು. ಎಂಬುದನ್ನು ನಾವು ಮುಕ್ತಾಯಕ್ಕ-ಅಜಗಣ್ಣರ ವಚನಗಳಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಸಾಮಾಜಿಕ - ಧಾರ್ಮಿಕ ಸಂಘರ್ಷದ ನೆಲೆಯಲ್ಲಿ ಇಂತಹ ಶರಣರಿಗೆ ಅದನ್ನು ಸುವ್ಯವಸ್ಥಿತವಾಗಿ ಸರ್ವರಿಗೂ ಮುಟ್ಟಸಬೇಕೆಂಬ ಮನೋಧರ್ಮದಿಂದಲೇ ಅವರು ವಿಶಿಷ್ಟ ಪ್ರಕಾರವನ್ನು ರೂಪಿಸಿಕೊಳ್ಳುವ ಅವಶ್ಯಕತೆ ಉಂಟಾಗಿ ವಚನ ಸೃಷ್ಟಿಸಿ ಕೊಂಡು ಅನುಭವವನ್ನು - ಅನುಭಾವವಾಗಿ ಪರಿವರ್ತಿಸಿ ವಚನವನ್ನು ಕೇವಲ ಸಾಹಿತ್ಯಿಕ ರಚನೆಯಾಗಿ ಉಳಿಸದೇ, ರಂಜಿಸುವ ಬರವಣಿಗೆಯಾಗದೇ, ಬದುಕನ್ನು ಬದಲಿಸುವ ದಿಕ್ಪಥವಾಯಿತು. ಜೀವನ ಪ್ರೀತಿಯೇ ಶರಣರ ಪ್ರಮುಖ ಧೋರಣೆಯಾಯಿತು.

---

೧ : ಸಂ : ಡಾ : ಬಿ.ಆರ್. ಹಿರೇಮಠ - ಸ.ವ.ಸಂ. -೮ , ವಚನ೪ ,ಪು೬೩

ಶರಣರ ವಚನಗಳ ರಚನೆಯ ಹಿನ್ನೆಲೆಯಲ್ಲಿ ಕಂಡುಬರುವ ಸಂಗತಿಗಳನ್ನು ಕುರಿತು ಬರೆಯುತ್ತ ಡಾ: ಪಿ.ವಿ.ನಾರಾಯಣರು ಹೇಳುವ ಈ ಮುಂದಿನಮಾತುಗಳನ್ನು ನಾವು ಈ ಪರಿಸರದ ಶರಣರ ವಚನಗಳ ಧೋರಣೆಗೂ ಅನ್ವಯಿಸಬಹುದಾಗಿದೆ. ಅವರು ಹೇಳಿದ ಮಾತುಗಳೆಂದರೆ:

‘ ವಚನಕಾರರ ಉದ್ದೇಶಕ್ಕೆ ಶಿಷ್ಟಕನ್ನಡ ಕಾವ್ಯಗಳ ಭಾಷಾಭಿವ್ಯಕ್ತಿಯು ಸರಿ ಹೊಂದಲಿಲ್ಲ. ಏಕೆಂದರೆ ಕಾವ್ಯಗಳು ಉದ್ದಿಷ್ಟ್ಯ ರಚನೆಗಳು, ಅನೇಕ ರೀತಿಯಿಂದ ಅವು ಸಾಹಿತ್ಯ ಕೃತಿಗಳೆಂಬ ಪ್ರಜ್ಞೆ ಆ ಕವಿಗಳಲ್ಲಿತ್ತು ; ಅವು ಜನರನ್ನು ತಲುಪಬೇಕೆಂಬ ಆಸೆಯಿತ್ತು ; ಅದರ ಹಿಂದಿನ ಉದ್ದೇಶವಾಗಿ ಜನರನ್ನು ಜೈನವೂ ಪ್ರಭಾವಿಸಬೇಕೆಂಬ ಬಯಕೆಯಿತ್ತು. ಹೀಗಾಗಿ ಪರಿಸ್ಥಿತಿಗನುಗುಣವಾಗಿ ಜೈನ ಕವಿಗಳ ಭಾಷೆ ರೂಪುಗೊಂಡಿತು. ವಚನಕಾರರು ಪರಿಸ್ಥಿತಿಗೆ ಹೊಂದಿಕೊಳ್ಳುವ ಕೆಲಸ ಮಾಡಲಿಲ್ಲ. ಏಕೆಂದರೆ ಅವರು ಪರಿಸ್ಥಿತಿಯನ್ನು ತಮ್ಮ ಹತೋಟಿಗೆ ತೆಗೆದುಕೊಂಡು ಅದನ್ನು ಬದಲಿಸಲು ಹೊರಟವರು. ತಮ್ಮ ಕಾಣ್ಕೆಗೆ ಅನುಗುಣವಾಗಿ ಅದಕ್ಕೆ ರೂಪವನ್ನೀಯಲು ತೊಡಗಿದವರು. ಹೀಗಾಗಿ ಅವರು ಬಳಸಿದ ಭಾಷೆಯೂ ಇದ್ದುದ್ದನ್ನು ಅಲ್ಪಸ್ವಲ್ಪ ವ್ಯತ್ಯಾಸಗೊಳಿಸಿ ಬಳಸುವುದಾಗಿರಲಿಲ್ಲ ; ದಿಢೀರನೆ ಹೊಚ್ಚಹೊಸ ಮಾರ್ಗವನ್ನು ರೂಪಿಸುವುದಾಗಿತ್ತು. ಆದ್ದರಿಂದ ಅವರಿಗೆ ಆದರ್ಶವೆನಿಸಿದ ಮಾದರಿಗಳಿರಲಿಲ್ಲ. ಅವನ್ನು ತಾವೇ ಕಲ್ಪಿಸಿಕೊಂಡರು. ಕಗ್ಗಾಡಿನಲ್ಲಿ ದಾರಿ ಮಾಡುವ ಸೃಷ್ಟಿಕಾರ್ಯ ಅದು. ಸರಳತೆ -ಸಹಜತೆಗಳೇ ಆದರ್ಶವಾಗಿದ್ದ ವಚನಕಾರರಿಗೆ ಕನ್ನಡದ ಸಹಜ ಮಾತುಗಾರಿಕೆಯೇ ಸಾಕಾಯಿತು. ಅವರು ಹೇಳಲು ತೊಡಗಿದುದು ಸಹಜವಾಗಿದ್ದುದರಿಂದ ಬಳಸಿದ ಭಾಷಾ ಶೈಲಿಯೂ ಸಹಜವಾಯಿತು. ಒಂದೆಡೆಆತ್ಮಗತ್ಯವೆನಿಸುವ ಮತ್ತೊಂದಡೆ ಎದುರಿಗಿರುವವನಿಗೆ ನಿರೂಪಿಸಬಯಸುವ ರೀತಿಯಿಂದಾಗಿ ವಚನಕಾರರಿಗೆ ಭಾಷೆಯ ಸೌಂದರ್ಯಕ್ಕಿಂತ ಅದರ ಸಂವಹನ ಶೀಲತೆಯು ಮುಖ್ಯವೆನಿಸಿತು. ಹೀಗಾಗಿ ಅವರು ಆಡು ಮಾತನ್ನೇ ಬಳಸಿದರು. ಆಡುವ ಎಲ್ಲಾ ಮಾತು ಕಾವ್ಯವಾಗುವುದಿಲ್ಲ. ಆದರೆ ಪ್ರತಿಭಾಶಾಲಿಯೂ ಭಾಷಾನಿಪುಣನು ಆದವನು ಸ್ಫೂರ್ತಿಯಿಂದ ಮಾತನಾಡಿದರೆ ಕಾವ್ಯವಾಗಿಯೇ ತಿರುತ್ತದೆ. ಅಂತಹ ಬಗೆಯಲ್ಲಿ ವಚನಗಳು ಕಾವ್ಯಗಳಾಗಿವೆ.’೧

ಏನೇ ಆಗಲಿ ಈ ಪರಿಸರದ ಶರಣರ ವಚನಗಳನ್ನು ಗಮನಿಸಿದಾಗ ಕಲ್ಯಾಣ ಶರಣರಿಗಿಂತ ಸಂಪೂರ್ಣವಾಗಿ ಭಿನ್ನವಾದ ಧೋರಣೆಯಾಗಿರದಿದ್ದರೂ ತಾವಿದ್ದ ಸಮಾಜದಲ್ಲಿಯೇ ಇದ್ದುಕೊಂಡು ಅದರ ಮೌಢ್ಯತೆಯನ್ನು ಜ್ಞಾನದೆಡೆಗೆ ತಿರುಗಿಸಿದ್ದು ಈ ಪರಿಸರದ ಶರಣರ ವೈಶಿಷ್ಟ್ಯತೆಯಾಗಿದೆ. ಕಲ್ಯಾಣ ಶರಣರು ಕ್ಷುದ್ರದೇವತೆಗಳನ್ನು ಹೀಯಾಳಿಸಿದರೆ ಢಕ್ಕೆಯ ಮಾರಯ್ಯನಂತಹ ಈ ಪರಿಸರದ ಶರಣರು ವಿಶಿಷ್ಟ ರೀತಿಯಲ್ಲಿ ಬಳಸಿಕೊಂಡು ಸಾಂಕೇತಿಕ ಅರ್ಥ ಕಲ್ಪಿಸಿದ್ದಾರೆ.

ಶರಣರಿಗೆ ಸಾಹಿತ್ಯ ರಚನೆ ಪ್ರಮುಖ ಉದ್ದೇಶವಾಗಿರಲಿಲ್ಲ ವೆಂಬುದಾಗಿದ್ದರೂ ತಮ್ಮ ಆದರ್ಶಗಳನ್ನು ಜನರಿಗೆ ತಿಳಿಸಿ ಅದನ್ನು ಪರಂಪರೆಯಾಗಿ ಬೆಳೆಸಬೇಕೆಂಬ ಹಂಬಲ ಮಾತ್ರ ಇದ್ದೇ ಇತ್ತು. ಆ ಕಾರಣದಿಂದಾಗಿ ತತ್ಕಾಲೀನ ಪ್ರಚುರ ಮಾಧ್ಯಮವಾದ ಸಾಹಿತ್ಯವನ್ನು ಬಳಸಿಕೊಂಡರೂ ತಮ್ಮದೇ ಆದ ವಿಶಿಷ್ಟ ತಂತ್ರ- ಆಶಯಗಳ ಮೂಲಕ ಸಾಹಿತ್ಯದ ನೂತನ ಧೋರಣೆಯನ್ನು ರೂಪಿಸಿ ಸಾಹಿತ್ಯವನ್ನು ಸರ್ವರಿಗೂ ಗ್ರಾಹ್ಯವಾಗುವಂತೆ ಮಾಡಿ ಇಡೀ ಬದುಕನ್ನೇ ಅದರ ಭಿತ್ತಿಯಾಗಿರಿಸಿದ್ದು ಶರಣರ ವಚನ ರಚನೆಯ ಪ್ರಮುಖ ಅಂಶವಾಗಿದೆ.

ಬಸವ ಪೂರ್ವ -ಬಸವಯುಗದಲ್ಲಿನ ವಚನ ಧೋರಣೆಗೂ ಬಸವೋತ್ತರ ಯುಗದ ವಚನ ಧೋರಣೆಗೂ ವ್ಯತ್ಯಾಸಗಳಿದ್ದರೂ ಮೂಲದಲ್ಲಿ ಇಡೀ ಜನಸಮುದಾಯವನ್ನು ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಮೇಲೆತ್ತುವ ಧೋರಣೆ ಈ ಪರಿಸರದ ಎಲ್ಲಾ ಕಾಲದ ಶರಣರ ಸಾಹಿತ್ಯದಲ್ಲಿ ಕಂಡು ಬರುತ್ತದೆ ಎಂಬುದನ್ನು ಅಲಕ್ಷಿಸಲಾಗದು.

೧ : ಡಾ : ಪಿ.ವಿ.ನಾರಾಯಣ -ವ.ಸ.ಪ. -ಪುಟ ೧೫೪-೧೫೫

೪ : ೩ ವಚನೇತರ ಪ್ರಕಾರ : ಭಾಷೆ-ತಂತ್ರ- ಧೋರಣೆ

ಈ ಪ್ರಕಾರದ ಸಾಹಿತ್ಯವನ್ನು ಕೆಲವರು ಶಾಸ್ತ್ರಸಾಹಿತ್ಯವೆಂದು ಕರೆಯುತ್ತಾರೆ. ವಚನಗಳಿಗಿಂತ ಭಿನ್ನವಾಗಿ ವಚನೇತರ ಪ್ರಕಾರ ಮೂಡಿ ಬಂದಿದೆ. ವಚನೇತರ ಪ್ರಕಾರ ತನ್ನದೇ ಆದ ಇತಿ ಮಿತಿಗಳಿಗೆ ಸೀಮಿತವಾಗಿರುವುದನ್ನು ಅವುಗಳ ರಚನೆಯ ಸ್ವರೂಪಗಳಿಂದಲೇ ಗುರುತಿಸಬಹುದಾಗಿದೆ. ಈ ಪ್ರಕಾರವು ಶರಣ ಸಾಹಿತ್ಯದ ಎಲ್ಲಾ ಪ್ರಕಾರರಗಳಾದ ಕಂದ, ಸ್ತೋತ್ರ, ತ್ರಿಪದಿ, ಸ್ವರ ವಚನ, ತತ್ವಪದಗಳು ಇತ್ಯಾದಿಗಳನ್ನು ಒಳಗೊಂಡಿದೆ. ವಚನೇತರ ಸಾಹಿತ್ಯ ಪ್ರಕಾರವು ಬಸವಪೂರ್ವಯುಗದಲ್ಲಿ ಆರಂಭವಾಗಿ, ಬಸವಯುಗದಲ್ಲಿ ಸ್ವಲ್ಪಮಟ್ಟಿಗೆಬೆಳೆದು, ಬಸವೋತ್ತರ ಯುಗದಲ್ಲಿ ಅತ್ಯಂತ ವಿಪುಲವಾಗಿ ಬೆಳೆದದನ್ನು ಗಮನಿಸಬಹುದಾಗಿದೆ. ಈ ಪ್ರಕಾರದ ಸಾಹಿತ್ಯದ ಲಕ್ಷಣಗಳನ್ನು ಕುರಿತು ಕೆ.ರವೀಂದ್ರನಾಥ ಈ ಕೆಳಗಿನಂತೆ ಪಟ್ಟೀಕರಿಸಿದ್ದಾರೆ.೧

೧ : ಬಹಿರಂಗ ವ್ಯಾಪಾರಕ್ಕೊಸುಗ ಸಮಾಜ ವೆಂಬ ಜಂಗಮವನ್ನು ಅವಲಂಬಿಸಬೇಕಾದ ಲಿಂಗಾಯತ ಅಂತರಂಗ ವ್ಯಾಪಾರಕ್ಕೊಸುಗ ಲಿಂಗವನ್ನು ಅವಲಂಬಿಸಬೇಕಾಗುತ್ತದೆ. ಇಂದ್ರೀಯಗಳ ಜ್ಞಾನ ಅನುಭವವೆಂಬುದು ವಚನಗಳಲ್ಲಿ, ಅತೀಂದ್ರಿಯಜ್ಞಾನ ಶಿವಾನುಭವೆಂಬುದು ವಚನೇತರ ಸಾಹಿತ್ಯದಲ್ಲಿ ನಿರ್ದಿಷ್ಟವಾಗಿಯಲ್ಲದಿದ್ದರೂ ಸಾಂದ್ರತೆಯಿಂದ ಕೂಡಿದೆ.

೨ : ಶಿಷ್ಟಪದ ಲಕ್ಷಣವಾದ ಸ್ಥಿರ ಪಾಠವನ್ನು ಹಾಗೂ ಜನಪದ ಲಕ್ಷಣವಾದ ಚರ ಪಾಠವನ್ನು ಮೈಗೂಡಿಸಿಕೊಂಡುಬೆಳೆಯಿತು. ಉದಾ: ಷಟಚಕ್ರ, ಮಿಶ್ರಾರ್ಪಣ, ಕರಣಹಸಿಗೆ, ದೀಕ್ಷಾ ವಿಧಾನಗಳಲ್ಲಿ ಶಿಷ್ಟಪಾಠದ ಸ್ಥಿತಪಾಠವಿದ್ದರೆ ಪದಮಂತ್ರಗೋಪ್ಯ, ಕಾಲಜ್ಞಾನ, ಸ್ವರವಚನಗಳಲ್ಲಿ ಜನಪದ ಚರ ಪಾಠ ಎಡೆಪಡೆದಿದೆ.

೩ : ಈ ಸಾಹಿತ್ಯ ಬೇರೆ ಬೇರೆ ಛಂದೋಪ್ರಕಾರಗಳಲ್ಲಿ ಹಾಗೂ ಸೃಷ್ಟ್ಯಾತ್ಮಕ ಮತ್ತು ಸಂಪಾದನಾತ್ಮಕ ವಚನಗಳಲ್ಲಿ ಕಾಣಿಸಿಕೊಂಡಿತಲ್ಲದೆ. ಈ ಸಾಹಿತ್ಯದ ಒಟ್ಟು ಉದ್ದೇಶ ಒಂದೇ ಆಗಿದೆ. ವಸ್ತು ಒಂದೇ ಉತ್ಪಾದನೆ ಪ್ರಕಾರ ಹಲವು ಎಂಬುದು ಈ ಸಾಹಿತ್ಯದ ಲಕ್ಷಣವಾಗಿದೆ.

೪ : ಸಾಂಕೇತಿಕ ಸಾದೃಶ್ಯಗಳು, ರೂಪಕ, ಉಪಮೆ, ಬೆಡಗು, ಬಿನ್ನಾಣಗಳು ಈ ಸಾಹಿತ್ಯದ ವಿಶೇಷ ಲಕ್ಷಣ.

೫ : ಹಾಡುಗಬ್ಬ ಪರಂಪರೆ ಉಳಿಸಿಕೊಂಡು ಬಂದಿದೆ.

೬ : ಛಂದಸ್ಸಿನ ದೃಷ್ಟಿಯಿಂದ ದ್ವಿಪದಿ, ತ್ರಿವಿಧಿ, ಚೌಪದಿ, ಸ್ತೋತ್ರ, ಮಾತ್ರಾ ಛಂದಸ್ಸು, ಅಂಶ ಛಂದಸ್ಸು, ಶ್ಲೋಕ, ಗದ್ಯ ಮುಂತಾದ ವೈವಿಧ್ಯಮಯ ಛಂದೋಬಂಧಗಳಲ್ಲಿ ಸೃಷ್ಟಿಯಾಗಿದೆ.

೭ : ತತ್ವನಿಷ್ಟವಾದ ಕಾರಣ ಇದು ವಸ್ತುಕವೇ ಹೊರತು ವರ್ಣಕವಲ್ಲ. ಬೌದ್ಧಿಕತೆಯೇ ಹೊರತು ಮನೋರಂಜಕ ವಲ್ಲ.-ಚಾರಿತ್ರಿಕ ವೈಜ್ಞಾನಿಕ, ವೈಚಾರಿಕ ಮರ್ಯಾದೆ ಕೂಡ ಈ ಸಾಹಿತ್ಯಕ್ಕಿದೆ. ಇದೆಲ್ಲವನ್ನು ಗಮನಿಸಿದಾಗ ಈ ಲಕ್ಷಣಗಳಿಗನುಸಾರವಾಗಿಯೇ ಈ ಪರಿಸರದ ಶರಣ ಸಾಹಿತ್ಯ ಕಂಡು ಬರುತ್ತದೆ. ಆದ್ಯ ವಚನಕಾರರಲ್ಲೊಬ್ಬರಾದ ಶಂಕರ ದಾಸಿಮಯ್ಯರ ಸ್ತೋತ್ರ-ಸ್ತುತಿ ಪರಂಪರೆಯಿಂದ ಆರಂಭವಾದ ಈ ಪರಂಪರೆ ಇತ್ತೀಚಿನ ತತ್ವಪದಗಳ ವರೆಗೂ ಬೆಳೆದು ಬಂದಿದೆ. ಬಸವಪೂರ್ವ - ಬಸವಯುಗದ ಆಶಯಗಳಿಗು ಸೂಕ್ಷ್ಮ ಭಿನ್ನತೆ ಕಂಡು ಬಂದರೆ ಬಸವೋತ್ತರ ಯುಗದಲ್ಲಿ ಬಹುಮಟ್ಟಿನ ಅಂತರವನ್ನು ವಚನೇತರ ಪ್ರಕಾರದಲ್ಲಿ ನಾವು ಕಂಡು ಕೊಳ್ಳಬಹುದಾಗಿದೆ. ವಚನೇತರ ಪ್ರಕಾರ ಸಮನ್ವಯತೆಯನ್ನು ಸಾಧಿಸಬೇಕಾದ ಅನಿವಾರ್ಯತೆ ಬಂದಾಗ ಅದು ಬಸವೋತ್ತರ ಯುಗದಲ್ಲಿ ಆಶಯಗಳನ್ನು ಬದಲಾವಣೆಮಾಡಿಕೊಂಡಿದ್ದು ಸಹಜವಾಗಿದೆ.

ಭಾಷೆ :

ಈ ಪ್ರಕಾರದ ಭಾಷೆ ಸರಳವಾಗಿದ್ದರೂ, ಮತ್ತೊಂದೆಡೆಸಾಂಕೇತಿಕ ಸ್ವರೂಪ ಪಡೆಯುತ್ತದೆ. ಬಸವಪೂರ್ವಯುಗದಲ್ಲಿನ ವಚನೇತರ ಸಾಹಿತ್ಯದ ಮಾಹಿತಿ ಶಂಕರದಾಸಿಮಯ್ಯರಿಂದ ಮಾತ್ರ ತಿಳಿದು ಬರುತ್ತದೆ. ಹರಿಹರನ ರಗಳೆಯಲ್ಲಿ ಕಂಡು ಬರುವ ಕೆಲವು ಸಾಲುಗಳು ಸ್ಪಷ್ಟವಾಗಿ ಅವು ಶಂಕರ ದಾಸಿಮಯ್ಯನ ಸ್ತುತಿ ರೂಪದ ಗೀತೆಗಳೆಂದು ತಿಳಿದು ಬರುತ್ತದೆ. ೨ ಇಲ್ಲಿ ಬಳಸಿದ ಭಾಷೆ ಸರಳವಾಗಿದೆ. ಆರಂಭಿಕ ಭಕ್ತಿಯ ಸ್ವರೂಪ - ಆವೇಶಪೂರಿತ ಭಕ್ತಿಯ ಸ್ವರೂಪವನ್ನು ಕಾಣಬಹುದು. ಇಷ್ಟನ್ನು ಹೊರತುಪಡಿಸಿದರೆ ವಚನೇತರ ಪ್ರಕಾರವನ್ನು ಕುರಿತು ಈ ಪರಿಸರದಲ್ಲಿ ಹೆಚ್ಚಿನ ಮಾಹಿತಿ ಕಂಡು ಬರುವುದಿಲ್ಲ. ಬಸವಯುಗದಲ್ಲಿಯೂ ಸಹಿತ ಉಳಿಮೇಶ್ವರ ಚಿಕ್ಕಯ್ಯರ ಸ್ವರ ವಚನ ಹೊರತು ಪಡಿಸಿದರೇ ಮತ್ತಾವುದೇ ಮಾಹಿತಿಗಳು ಕಂಡು ಬರುವುದಿಲ್ಲ. ಈ ಪರಿಸರದಲ್ಲಿ ಇವರೊಬ್ಬರೇ ಬಸವಯುಗದಲ್ಲಿ ವಚನೇತರ ಸಾಹಿತ್ಯ ರಚಿಸಿರಬಹುದೆಂದು ತಿಳಿದು ಬರುತ್ತದೆ. ಅವರ ' ಏವೆಸಂಸಾರ ಮಾಯಾಮಯ ' ೩.ಎಂಬ ಶೀರ್ಷಿಕೆಯಡಿ ಪ್ರಕಟವಾದ ಅವರ ಸ್ವರವಚನವನ್ನು ಗಮನಿಸಿದರೆ ಭಾಷೆಯ ಸ್ವರೂಪ ತಿಳಿದುಬರುತ್ತದೆ.

---

೧ : ಡಾ : ಕೆ.ರವೀಂದ್ರನಾಥ - ಬ.ವ.ಸಾ.-ಪ್ರಸ್ತಾವನೆ ಪುಟ೬-೭

೨ : ವಿವರಣೆಗಾಗಿ ಇದೇ ಪ್ರಬಂಧದ ಪುಟ೫೨-೫೩ ಗಮನಿಸಿರಿ

೩ : ಡಾ : ಕೆ.ರವೀಂದ್ರನಾಥ - ಬ.ವ.ಸಾ.- ಪುಟ೫೦೪ - ೫೦೫

ಕವಿಚರಿತೆಕಾರರು ಉಳಿಮೇಶ್ವರನ ರಚನೆಯನ್ನು ವಾರ್ಧಕ ಷಟ್ಪದಿಯೆಂದು ಗುರುತಿಸಿ ಇವನೇ ಈಗ ತಿಳಿದಿರುವ ಮಟ್ಟಿಗೆ ವಾರ್ಧಕ ಷಟ್ಪದಿಯನ್ನು ಮೊದಲು ಬರೆದವನೆಂದು ಅಭಿಪ್ರಾಯ ಪಟ್ಟಿದ್ದಾರೆ.೧ ಇದನ್ನು ಗಮನಿಸಿದರೆ ಮುಂದಿನ ಶರಣ ಕವಿಗಳಾದ ರಾಘವಾಂಕರಿಗೆ ಉಳಿಮೇಶ್ವರ ಚಿಕ್ಕಯ್ಯನೇ ಪ್ರೇರಣೆಯಾಗಿರಬಹುದೇನಿಸುತ್ತದೆ. ಆದರೆ ಚಿಕ್ಕಯ್ಯರ ಹೆಚ್ಚಿನ ರಚನೆಗಳು ಉಪಲಬ್ಧವಾಗದ ಕಾರಣ ಇದನ್ನು ನಿಖರವಾಗಿ ಹೇಳಲು ಸಾಧ್ಯವಿಲ್ಲ ವೆನಿಸುತ್ತದೆ.

ವಚನ ಪ್ರಕಾರಕ್ಕಿಂತ ವಚನೇತರ ಪ್ರಕಾರರ ಜನಪದರ ಬದುಕಿಗೆ ಬಹು ಹತ್ತಿರವಾಯಿತು. ಭಾಷೆಯಲ್ಲಿ ಒಂದು ರೀತಿ ಹೊಸ ಬದಲಾವಣೆಗಳು ಮೂಡಿ ಬಂದವು. ಆಡು ನುಡಿಯ ಸ್ವರೂಪ ಸಾಹಿತ್ಯವಾಗಿ ಒಡಮೂಡಿ ತನ್ನ ವಿಶಿಷ್ಟ ಅರ್ಥವಂತಿಕೆಯನ್ನು ವಚನೇತರ ಪ್ರಕಾರದ ಸಂದರ್ಭದಲ್ಲಿ ಪಡೆಯಿತು. ಪ್ರಾದೇಶಿಕತೆಯಲ್ಲಿ ಅಂತರ್ಗತವಾದ ಜನಸಾಮಾನ್ಯರು ಬಳಸುವ ವಿಶಿಷ್ಟ ನುಡಿಗಟ್ಟುಗಳು ವಚನೇತರ ಪ್ರಕಾರಗಳಲ್ಲಿ ಅದರಲ್ಲೂ ತತ್ವಪದಗಳಲ್ಲಿ ಕಾಣುತ್ತೇವೆ. ದೇಶಿಯತೆ ಬಹು ವ್ಯಾಪಕವಾಗಿ ಇಲ್ಲಿ ಕಂಡು ಬರುತ್ತದೆ. ಹೊಸಗನ್ನಡ ಆರಂಭಿಕತೆಯನ್ನು ಬಸವೋತ್ತರ ಯುಗದ ಶರಣರ ವಚನೇತಪ್ರಕಾರಗಳಲ್ಲಿ ಗುರುತಿಸಬಹುದು.

ಕಾಶಿ ಹಂಪೆ ಕೇದಾರ ಪರ್ವತನಿವಾಸಿಯೆನಿಸಿ ನೀನೇನಾದಿ

ಆಶೆ ಪಾಶದೊಳು ಸಿಲ್ಕಿ ಪೊರಗೆ ಸನ್ಯಾಸಿಯಾಗಿ ನೀನೇನಾದಿ

ವೇದ ವೇದಾಂತ ಶಾಸ್ತ್ರಾಗಮ ತರ್ಕವನೋದಿ ಬಳಲಿ ನೀನೇನಾದಿ

ಮೇದನಿಯೊಳು ಬರೆ ಬೋಧಪಡೆದು ದಶನಾದವನಾಲಿಸಿ ನೀನೇನಾದಿ (ನುಡಿ: ೨)೨

ಒಮ್ಮೆ ನೆನೆಯಲು ಜನ್ಮ ಜನ್ಮಾಂತರದ ಪಾಪ

ಗಮ್ಮನೆಯಳಿದು ಪರ

ಬ್ರಹ್ಮನಾಗೋದು ಸತ್ಯ

ಸುಮ್ಮನೆ ಕಾಲ ಕಳೆಯದಿರವ್ವ (ನುಡಿ: ೨)೩

ಸಾಧುರನು ನೆನೆಯೆಂದನು ಅವರ ಪಾದಕ್ಕೆ ಎರಗೆಂದನು

ಸಾಧು ಸತ್ಪುರುಷರ ಭೇದವ ತಿಳಿದರೆ ಬಾಧೆ ನಿನಗಿಲ್ಲೆಂದನು (ನುಡಿ: ೧)೪

ಮೇಲಿನ ಈ ಕೆಲವು ಮಾದರಿಗಳನ್ನು ಗಮನಿಸಿದರೆ ನೇರವಾದ ಸಹಜ ನಿರೂಪಣೆ, ಆಡು ಮಾತಿನ ಧಾಟಿ, ಭಾವನೆಗಳ ಸರಿಯಾದ ಅಭಿವ್ಯಕ್ತಿ ಇಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಇಂತಹ ಹಲವಾರು ಮಾದರಿಗಳನ್ನು ಈ ಪರಿಸರದ ಶರಣರಲ್ಲಿ ಗಮನಿಸಬಹುದಾಗಿದೆ.

ವ್ಯಾಕರಣದ ನಿಯಮಗಳಿಗೆ ಬದ್ಧರಾಗಿ ರಚನೆಗಳನ್ನು ಮಾಡಲಿಲ್ಲವೆಂಬುದು ಕಂಡು ಬಂದರು ಕೆಲವರು ವ್ಯಾಕರಣಾಂಶಗಳನ್ನು ಗಮನಿಸಿದ್ದರೆಂದು ತಿಳಿದು ಬರುತ್ತದೆ. ಇದನ್ನು ನಿಖರವಾಗಿ ಹೇಳಲಾಗದಿದ್ದರೂ ವಚನೇತರ ಪ್ರಕಾರದ ರಚನೆಗಳನ್ನು ವ್ಯಾಕರಣಾಂಶಗಳ ಹಿನ್ನೆಲೆಯಲ್ಲಿ ವಿವೇಚಿಸಿದಾಗ ಅನೇಕ ಅಂಶಗಳು ಕಂಡು ಬರುತ್ತದೆ.

ಆಡು ನುಡಿ, ಜೋಡುನುಡಿ, ದೇಶಿಯ, ಅನ್ಯದೇಶಿಯ ಶಬ್ದಗಳನ್ನು ಬಳಸುವ ಮೂಲಕ ವೈಶಿಷ್ಟ್ಯವನ್ನು ಎತ್ತಿ ತೋರಿಸಿ ಭಾಷಾ ಪ್ರಪಂಚಕ್ಕೆ ಅಪೂರ್ವ ಕೊಡುಗೆ ನೀಡಿದ್ದಾರೆ. ಅವುಗಳನ್ನು ಗಮನಿಸೋಣ:

ಕಾಟಿಗ೫, ಹಾದರಗಿತ್ತಿ೬ ಮೊದಲಾದ ತದ್ಧಿತಾಂತಗಳು, ಈರೇಳು೭, ಸಚ್ಚಿದಾನಂದ೮, ಮೊದಲಾದ ಸಮಾಸ ಪದಗಳು ಇದಲ್ಲದೇ ಹಲವು ಪದಗಳಿಗೆ ಹೊಸ ಅರ್ಥ ಕಲ್ಪಿಸಿದ್ದಾರೆ.

೧: ಆರ್.ನರಸಿಂಹಾಚಾರ್ -ಕ.ಚ.ಸಂ. -೧, ಅನುಬಂಧ ೨, ಪುಟ ೫೦

೨: ಆಯ್ಕೆ: ಚೆನ್ನಬಸಪ್ಪ ಬೆಟ್ಟದೂರು -ಘ.ನಾ.ಶಿ.-ಪುಟ ೪

೩: ಆಯ್ಕೆ: ರಾಮಸ್ವಾಮಿ ನುಲಿ-ಗೊ. ಹಂ.-ಪದ್ಯ ೨೩, ಪುಟ ೨೨

೪: ಸಂ: ಡಾ: ಬಸವಲಿಂಗ ಸೊಪ್ಪಿಮಠ -ನೀ.ಬ.ಶಿ.ಸ್ವ.-ಪದ್ಯ ೧೫೮, ಪುಟ ೮೭

೫: ಅದೇ: ಪದ್ಯ ೧೭೪, ನುಡಿ ೫, ಪುಟ ೧೦೩

೬: ಆಯ್ಕೆ: ಚೆನ್ನಬಸಪ್ಪ ಬೆಟ್ಟದೂರು - ಘ.ನಾ.ಶಿ.-ಪುಟ ೧, ಪಲ್ಲವಿ

೭: ಸಂ: ಡಾ: ವೀರಣ್ಣ ರಾಜೂರು -ಸ.ವ.ಸಂ. -೧೪, ಪದ ೩ ನೇ ನುಡಿ, ಪುಟ ೪೩೭

೮: ಆಯ್ಕೆ: ರಾಮಸ್ವಾಮಿ ನುಲಿ - ಗೊ.ಹಂ., ಪದ್ಯ ೨೩, ನುಡಿ ೧, ಪುಟ ೨೨

ದೇಹ-ಕಾಯವೆಂಬೋಜಗಲಿ೧

ಗಂಡ-ಪರಮಾತ್ಮನೆಂಬ ಭಾವನೆ

ಪಂಚೇಂದ್ರಿಯ-ಪೂರ್ವದಲ್ಲಿ ಐದು ಮಂದಿ,

ಅರಿಷಡ್ವರ್ಗ- ಆರುಮಂದಿ ಹುಡುಗರನ್ನು ೨

ಆಸೆ- ಆಸೆ ಎಂಬೋ ನದಿ೩ ಮಣ್ಣಿನ ವಾಸನೆ ಇವರ ಅನೇಕ ಹಾಡುಗಳಲ್ಲಿ ಅಭಿವ್ಯಕ್ತಗೊಂಡಿದೆ. ಕೇವಲ ಪದಗಳು ಮಾತ್ರ ಇರದೆ, ಇಡೀ ಹಾಡೇ ಆಯಾ ಪರಿಸರದೆಂಬುದನ್ನು ಸ್ಪಷ್ಟವಾಗಿ ಗುರುತಿಸುವಷ್ಟು ಕಂಡು ಬರುತ್ತದೆ.

ಉಣ್ಣು ಪೂರ್ವದ ಪುಸ್ತಿಳ ತಂಗ್ಯಮ್ಮ೫, ಕಡುಬ೬, ಇತ್ಯಾದಿ. ಭಾಷೆಯ ಜೀವಂತಿಕೆಗೆ ಸಹಕಾರಿಯಾದ ಜೋಡು ನುಡಿಗಳನ್ನು ಕಾಣಬಹುದು. ತರುಗುಲ್ಮ ಲತೆ ವಾನರಖಗಮೃಗ೭ ಹಮ್ಮುಗಮ್ಮು೮ ಇತ್ಯಾದಿ ಜನರ ಮಧ್ಯದಲ್ಲಿ ಜೀವಿಸಿ ಜನರ ತಿಕ್ಕುಲುತನಗಳನ್ನು ಕಂಡುಕೊಂಡ ಇವರು ಅದೇ ಭಾಷೆಯನ್ನು ಬಳಸಿ ಸಹಜವಾಗಿ ಸಾಹಿತ್ಯವನ್ನು ಹೊರಹೊಮ್ಮಿಸಿದ್ದಾರೆ.

ಕುರಿಯ ಬಗಲೊಳಿಟ್ಟು ಜಗದೊಳ್ ಕುರುಬಹುಡುಕುವಂತೆ೯

ಆಳಿಗೆ ನೀಡ್ಯಾಳ ಹಳಸಿದ ಕಡುಬ ಅಯ್ಯಗೆ ನೀಡ್ಯಾಳ ಜೋಳದ ಕಡುಬ

ಗಂಡಗನೀಡ್ಯಾಳ ಗೋಧಿಯ ಕಡುಬ ತಾಮುಚ್ಚಿ ಹೊಡೆದಾಳ ಹೂರಣಗಡುಬ೧೦

ಆಸರಿಲ್ಲದ ಏಳೆಂಟು ಮಕ್ಕಳ ಹಡೆದೆ ಆಯಾಸ ಕಳೆದೆ೧೧ ಈ ಪರಿಸರದ ಶರಣರು ಅನ್ಯ ಭಾಷೆಯ ಪ್ರಭಾವದಿಂದಾಗಿ ಅವರ ವಚನೇತರ ಪ್ರಕಾರದಲ್ಲಿ ಈ ಪರಿಸರದ ಉರ್ದು, ತೆಲುಗುಗಳ ರಚನೆಗಳನ್ನು ಸಹ ಕಾಣಬಹುದು. ಜೊತೆಗೆ ಎಲ್ಲವುಗಳನ್ನು ಮಿಶ್ರಗೊಳಿಸಿ ತಮ್ಮ ರಚನೆಗಳನ್ನು ಮಾಡಿದ್ದಾರೆ. ಅಂತಹ ರಚನೆಗೆ ಒಂದು ಉದಾಹರಣೆ ಹೀಗಿದೆ. :

ಉರ್ದು- ಬಂದೇನವಾಜ ದಸ್ಕರ ಪೀರ

ಪೈಗಂಬರಕು ದೇಖೋಭಾಯಿ

ಚಾಂದ್ ಆಯಿತೊ ಅಲ್ಲಾ ಸಾಹೇಬ್

ತುಮ್ಕು ದಯಾ ಕರ್ತಾ ಬಾಯಿ೧೨

ತೆಲಗು -ನೀ ಇಂಟಿಲೋ ಪುಟ ಒಕ್ಕ

ಮಂಚಿನಾಗ ಪಾಮು ಉನ್ನದಿ ಅಣ್ಣಾ

ದಾನಿಕಿ ಪಾಲು ಯೇಸ್ತು ನೀಕು

ಅಮೃತಾನ್ನಮು ದೊರಕುತುನ್ನದಿ ಅಣ್ಣಾ೧೩

---

೧ : ಸಂ : ಡಾ : ಬಸವಲಿಂಗ ಸೊಪ್ಪಿಮಠ-ನೀ.ಬ.ಶಿ.ಸ್ವ.-ಪದ್ಯ ೧೪೧, ಪುಟ ೭೬

೨ : ಆಯ್ಕೆ : ಎಸ್.ಜಿ. ಸ್ವಾಮಿ -ಕೂ.ಬ. -ಪದ್ಯ ೨೫ , ಪುಟ೬೧

೩ : ಆಯ್ಕೆ : ಕೂಡಲಿ ಜಗ್ಗನಾಥ ಶಾಸ್ತ್ರಿ- ಚಿ.ಧೂ. ಪದ್ಯ ೧೦ , ಪಲ್ಲವಿ , ಪುಟ೮೪

೪ : ಸಂ : ಡಾ : ಬಸವಲಿಂಗ ಸೊಪ್ಪಿಮಠ-ನೀ.ಬ.ಶಿ.ಸ್ವ.-ಪದ್ಯ೨೧ , ಪಲ್ಲವಿ ಪುಟ ೧೩

೫ : ಆಯ್ಕೆ : ಎಸ್.ಜಿ. ಸ್ವಾಮಿ -ಕೂ.ಬ. -ಪದ್ಯ೨೭ , ಪುಟ ೨೩

೬ : ಅದೇ: ಪದ್ಯ ೬೭ , ನುಡಿ೨, ಪುಟ ೫೬

೭ : ಆಯ್ಕೆ :ರಾಮಸ್ವಾಮಿ ನುಲಿ -ಗೂ.ಹಂ. ಪದ್ಯ೯ , ನುಡಿ೧ ,ಪುಟ೮

೮ : ಆಯ್ಕೆ : ಎಸ್.ಜಿ. ಸ್ವಾಮಿ -ಕೂ.ಬ. -ಪದ್ಯ೩೧, ಪುಟ ೨೬

೯ : ಆಯ್ಕೆ : ಚೆನ್ನ ಬಸಪ್ಪ ಬೆಟ್ಟದೂರು -ಘ.ನಾ.ಶಿ. -ನುಡಿ೧೫, ಪುಟ೧೨

೧೦ : ಆಯ್ಕೆ : ಎಸ್.ಜಿ. ಸ್ವಾಮಿ - ಕೂ.ಬ.- ಪದ್ಯ ೬೭ , ನುಡಿ೨, ಪುಟ ೫೬

೧೧ : ಸಂ : ಡಾ : ಬಸವಲಿಂಗ ಸೊಪ್ಪಿಮಠ-ನೀ.ಬ.ಶಿ.ಸ್ವ.-ಪದ್ಯ ೧೫೪, ನುಡಿ೨ , ಪುಟ ೭೩

೧೨ : ಆಯ್ಕೆ : ಎಸ್.ಜಿ. ಸ್ವಾಮಿ - ಕೂ.ಬ.- ಪದ್ಯ ೧೧ , ನುಡಿ೮ , ಪುಟ೧೦

೧೩ : ಅದೇ ಪದ್ಯ ೧೧, ನುಡಿ೭ , ಪುಟ೧೦

ಘನ ಮಠ ನಾಗಭೂಷಣ ಶರಣರ ಕೃಷಿ ಜ್ಞಾನ ಪ್ರದೀಪಿಕೆಯಲ್ಲಿ ಇಂತಹ ಹಲವಾರು ಅನ್ಯ ದೇಶಿಯ ಪದಗಳನ್ನು ಗಮನಿಸಬಹುದಾಗಿದೆ

' ಸತ್ತಾ ವೀಸಮೇ ಬಾರಾಗಯಾತೋ ಬಾಕಿ ಕ್ಯಾರ ಹಾ' ಎಂದು ಪ್ರಶ್ನೆ ಮಾಡಲಾಗಿ ವಜೀರನ್ನು ಹೇಳಿದ್ದು ' ದುನಿಯಾ ಡುಬ್‌ಗಯಾ ' ಎಂದು ಉತ್ತರ ಕೊಟ್ಟನು೧.

ಘನಮಠ ನಾಗಭೂಷಣ ಶರಣರು ಭಾಷೆಯ ಸೊಗಸುಗಾರಿಕೆಯನ್ನು ಅವರು ಬಳಸಿದ ಗಾಧೆಮಾತುಗಳ ಮೂಲಕವೇ ತಿಳಿಯಬಹುದಾಗಿದೆ.

ಉದಾ : ಎತ್ತು ಇಲ್ಲದ ಮನೆಗೆ ಎದೆಇಲ್ಲವು೩ , ಹಾಕೋಗೊಬ್ಬರ ಬೆಳೆನೋಡೊ ಅಬ್ಬರಳ, ಆಳಾಗಿ ಮಾಡಿ ಅರಸನಾಗಿ ಉಣ್ಣಬೇಕು೫

ಕೇವಲ ಉರ್ದು , ತೆಲಗುಗಳನ್ನಲ್ಲದೇ ಸಂಸ್ಕೃತವನ್ನು ಬಳಸಿದ್ದಾರೆ. ಹೇಮಗಲ್ಲ ಹಂಪರಲ್ಲಿ ನಾವು ಕಾಣಬಹುದಾಗಿದೆ. ೨ ಇಂತಹ ಅನೇಕ ಗಾಧೆಮಾತುಗಳನ್ನು ಸಂದರ್ಭಕ್ಕೆ ತ ಕ್ಕಂತೆ ಬಳಸಿದ್ದಾರೆ. ಅಲ್ಲದೇ ಗಾದೆ ಮಾತುಗಳ ತಮ್ಮ ವಿಚಾರ ವ್ಯಕ್ತಪಡಿಸಿದ್ದಾರೆ.

ಈ ಪರಿಸರದ ಶರಣರ ವಚನೇತರ ಪ್ರಕಾರದ ಕೃತಿಗಳನ್ನು ಅವಲೋಕಿಸಿದಾಗ ಪ್ರಾಸಗಳು ಸಹಜವಾಗಿ ಕಣ್ಮುಂದೆ ಬರುವುದನ್ನು ನಾವು ಗಮನಿಸಿಬಹುದಾಗಿದೆ. ಆದಿ ಪ್ರಾಸ, ಅಂತ್ಯಪ್ರಾಸ, ಅನು ಪ್ರಾಸಗಳಿವೆ.

ನಿನ್ನ ನೀನೇ ತಿಳಿಯೋ ಇಗ

ನಿನ್ನ ನಿಜವ ಅತಿಬೇಗ ॥ಪಲ್ಲವಿ ॥೬ - ನೀರಲಕೇರಿ ಬಸವಲಿಂಗ ಶರಣರ ಈ ರಚನೆ ಗಮನಿಸಿದಾಗ ಇಲ್ಲಿ ಆದಿ, ಅಂತ್ಯ , ಅನುಪ್ರಾಸಗಳು ಸ್ಪುಟವಾಗಿರುವುದನ್ನು ಕಾಣಬಹುದು. ಹೇಮಗಲ್ಲ ಹಂಪರ ರಗಳೆ ನೋಡಿದರು ಸಾಕು ನಮಗೆ ನಿಯತವಾಗಿ ಅವರ ಒಂದು ರಗಳೆಯಲ್ಲಿ ಆದಿ - ಅಂತ್ಯಪ್ರಾಸ ಸಹಜವಾಗಿ ಹೊರಹೊಮ್ಮುವ ಜೊತೆಗೆ ಭಾಷೆಯ ಸಹಜ ನಡಿಗೆಯನ್ನು ಸೊಗಸಾಗಿ ಚಿತ್ರಿಸುತ್ತದೆ. ೭

ಇವರಲ್ಲದೇ ಈ ಪರಿಸರದ ಗೊಬ್ಬೂರು ಹಂಪಣ್ಣ , ಆದಿ ಅಮಾತೆಪ್ಪ , ಮುಂತಾದವರ ರಚನೆಗಳಲ್ಲಿ ನಾವೀದನ್ನು ಕಾಣಬಹುದಾಗಿದೆ. ಈ ಪರಿಸರದ ಶರಣ ವಚನೇತರ ಪ್ರಕಾರದ ಸಾಹಿತ್ಯವನ್ನು ಅವಲೋಕಿಸಿದಾಗ ಜನಸಾಮಾನ್ಯರ ಭಾಷೆಯ ಯಥಾಸ್ಥಿತಿಯನ್ನೇ ಸಾಹಿತ್ಯವಾಗಿ ಮಾರ್ಪಡಿಸಿ ಅದನ್ನು ತಮ್ಮ ಭಕ್ತಿ , ಜ್ಞಾನ , ಮುಕ್ತಿಗಳಿಗೆ ಮಾಧ್ಯಮವಾಗಿಸಿಕೊಂಡು ಆ ಮೂಲಕ ಅಭಿವ್ಯಕ್ತಿಸಿದ್ದು ಗಮರ್ನಾಹವಾಗಿದೆ. ಭಾಷೆಯನ್ನು ಸಮೃದ್ಧವಾಗಿ ಬಳಸಿಕೊಂಡ ಶರಣರು ವಚನೇತರ ಸಾಹಿತ್ಯ ಪ್ರಕಾರದಲ್ಲೂ ಕೂಡ ಸೊಬಗನ್ನು ಹೆಚ್ಚಿಸಿದ್ದಾರೆ.

ಇವರು ವಚನೇತರ ಪ್ರಕಾರದಲ್ಲಿ ಬಳಸಿದ ಉಪಮೆ, ದೃಷ್ಟಾಂತ , ರೂಪಕಗಳು ಜನರ ಬದುಕಿನ ಹಿನ್ನೆಲೆಯಲ್ಲಿಯೇ ಒಡಮೂಡಿ ಅವುಗಳಿಗೆ ಅನುಭಾವದ ಗಾಢತೆಯನ್ನು ಕಲ್ಪಿಸಿ ಆ ಮೂಲಕ ವಿಶೇಷ ಮಹತ್ವವನ್ನು ಕಲ್ಪಿಸಿಕೊಟ್ಟಿದ್ದನ್ನು ತಿಳಿಯಬಹುದು. ಶರಣರು ಉಪಮೆ ಮೊದಲಾದವುಗಳಿಗೆ ಬದ್ಧರಾಗಿ ತಮ್ಮ ಸಾಹಿತ್ಯ ರಚಿಸಲಿಲ್ಲವೆಂಬುದು ನಮಗೆ ಕೂಡಲೂರು ಬಸವಲಿಂಗ ಶರಣರ ಈ ಕೆಳಗಿನ ನುಡಿಗಳಿಂದ ತಿಳಿಯುತ್ತದೆ.

ಅಡಿ ಪ್ರಾಸಗುರುಲಘು ಕನ್ನೆ ಸೊನ್ನೆಗಳೆಂಬ

ಬೆಡಗಿನ ಧೀರ್ಘ ಒತ್ತಕ್ಷರ ನಾನರಿಯೆ

ನುಡಿ ಶಬ್ದ ಬಂಧುರ ತಾಳಲಯಗಳೆಂಬ

ಪಡಿ ಪಾಟಲರಿಯದ ಪರಬ್ರಹ್ಮನ ಪದ೮

---

೧ : ಘನ ಮಠ ನಾಗಭೂಷಣ ಶಿವಯೋಗಿ - ಕೃ.ಜ್ಞಾ.ಪು.ಪ್ರಕರಣ೧೭ , ಪುಟ ೨೧೦

೨ : ಸಂ : ಡಾ : ವೀರಣ್ಣ ರಾಜೂರು -ಸ.ವ.ಸಂ. -೧೪ , ರಗಳೆ ನುಡಿ ೩೦, ಪುಟ ೫೭೬,೪೩೬-೫೮೭

೩ : ಘನ ಮಠ ನಾಗಭೂಷಣ ಶಿವಯೋಗಿ - ಕೃ.ಜ್ಞಾ.ಪು.ಪ್ರಕರಣ೧ , ಪುಟ ೨೦

೪ : ಅದೇ : ಪ್ರಕರಣ೪ , ಪುಟ ೪೩

೫ : ಅದೇ : ಪ್ರಕರಣರ೧೦, ಪುಟ ೧೨೧

೬ : ಸಂ : ಡಾ : ಬಸವಲಿಂಗ ಸೊಪ್ಪಿಮಠ-ನೀ.ಬ.ಶಿ.ಸ್ವ - ಪದ್ಯ ೫ , ಪುಟ ೩

೭ : ಸಂ : ಡಾ : ವೀರಣ್ಣ ರಾಜೂರು -ಸ.ವ.ಸಂ. -೧೪ , ರಗಳೆ ನುಡಿ೧-೫೮, ಪುಟ ೫೭೨-೫೮೦

೮ : ಆಂಸ್ಥೆ : ಎಸ್.ಜಿ. ಸ್ವಾಮಿ - ಕೂ.ಬ.ಪದ್ಯ ೬೯, ನುಡಿ೧, ಪುಟ ೫೭

ಏನೇ ಆಗಲಿ ಈ ಪರಿಸರದ ಶರಣರ ಕೆಲವು ರಚನೆಗಳನ್ನು ಉಪಮೆಯ ದೃಷ್ಟಿಯಿಂಂದ ನೋಡುವುದಾದರೆ -

ಚದುರೆಯ ಚೆಲ್ವಿಕೆ ಇನ್ನೇಷ್ಟು ಹೇಳಲಿ ಮುಖಕಳೆಯ ಚಂದ್ರನಂತೆ೧

ಚಂದ್ರನಂಥ ಕೂಸೇ ಬಯಲಿಗೆ ಬಂದರೆ ಬಹು ಲೇಸೇ೨

ಬಾಳೆಗಿಡವ ಕಡಿದು ಕಳ್ಳಿಗೆಬೇಲಿ ಯಿಕ್ಕುವನಂತೆ ಪ್ರಮಥರ

ಮೇಲೆ ಭಕ್ತಿಯುಕ್ತಿಕರ್ಮ ಜಾಲಕಿಕ್ಕಡೆ ಯಾಡುವನೆ ಹೆಡ್ಡ೩

ಜನರಿಗೆ ಪರಿಚಿತವಾದ ಉಪಮೆಗಳನ್ನು ಬಳಸಿಕೊಂಡು ಭಾಷೆಗೆ ಘನತೆ ತಂದು ಕೊಡುವ ಜೊತೆಗೆ ಸಾಹಿತ್ಯದ ಮೌಲ್ಯವನ್ನು ಹೆಚ್ಚಿಸಿ ತಮ್ಮ ಮೂಲ ಆಶಯವಾದ ಅನುಭಾವದ ಸಂಗತಿಗಳನ್ನು ಸರಳವಾಗಿ ಅಭಿವ್ಯಕ್ತಿಸಿದರು.

ಇದಲ್ಲದೇ ಗಬ್ಬೂರು ಹಂಪಣ್ಣ ರಚನೆಗಳಲ್ಲಿ ಇಂತಹ ಉಪಮೆಗಳನ್ನು ಸಾಕಷ್ಟು ಕಾಣಬಹುದಾಗಿದೆ. ಇದಲ್ಲದೇ ತಾವಿರಿಸಿಕೊಂಡ ಆಶಯಗಳಿಗನುಸಾರವಾಗಿಯೇ ಈ ಪರಿಸರದ ಶರಣರು ತಮ್ಮ ವಚನೇತರ ಪ್ರಕಾರಗಳಲ್ಲಿ ದೃಷ್ಟಾಂತಗಳನ್ನು ಸಹ ಬಳಸಿಕೊಂಡಿದ್ದಾರೆ.

ತಮಹೆಚ್ಚಿ ಜ್ಯೋತಿಯ ನುಂಗಿ, ಕಮಲ ಪರಿಮಳವ ನುಂಗಿ,

ಭ್ರಮರ ಕಂಪನೊಲ್ಲದೆ ತಾ ಬಾವಿಯ ಬೀಳೆ

ದ್ಯುಮಣಿಯನು ಜಲ ನುಂಗಿ ಕಾಳಗವಿದ ಲೋಕವೆಲ್ಲ

ಭ್ರಮಿತರಾಗಿ ಗೊಂದಿಲಿಯ ಮರ (ನ)ನೆಂಬಲಾನೆಚ್ಚತ್ತೆನೊ೪

ಈ ಸ್ವರವಚನದಲ್ಲಿ ಸೂಕ್ತವಾದ ದೃಷ್ಟಾಂತ ಬಳಸಿ ಜೀವಾತ್ಮ -ಪರಮಾತ್ಮದ ಬಗ್ಗೆ ಹೇಮಗಲ್ಲ ಹಂಪರು ಬಹು ಸುಂದರವಾಗಿ ಅಭಿವ್ಯಕ್ತಿಸಿದ್ದಾರೆ. ಮನುಷ್ಯನಾದವನು ವೇದ ಶಾಸ್ತ್ರ, ಆಗಮ, ಪುರಾಣಗಳನ್ನು ಓದಿಯೂ ಹಿಂದಿನ ಅಜ್ಞಾನ ಬೀಡದೆ ಕೆಟ್ಟನಡೆಯ ಹಾದಿಯಲ್ಲಿ ಸಾಗಿ ನಡೆ-ನುಡಿ ಸಮನ್ವಯವಿರದವನಿಗೆ ಶಿವಮುಕ್ತಿ ಸಾಧ್ಯವಿಲ್ಲವೆಂದು ಹೇಮಗಲ್ಲ ಹಂಪರು ಹೇಳುತ್ತಾರೆ. ೫

ಈ ಪರಿಸರದ ಶರಣರು ತಮ್ಮ ಅನುಭವನಕ್ಕೆ ಬಂದ ಘಟನೆಗಳನ್ನು , ಸನ್ನಿವೇಶಗಳನ್ನು ಆಧರಿಸಿ ಕೆಲವೇ ಪದಗಳ ಮೂಲಕ ನಮ್ಮ ಕಣ್ಮುಂದೆ ಚಿತ್ರವೊಂದನ್ನು ಕಟ್ಟಿ ಒಂದು ಕ್ರಿಯೆಯನ್ನು ತೋರ್ಪಡಿಸುವ ದೃಷ್ಟಾಂತಗಳನ್ನು ಅಭಿವ್ಯಕ್ತಿಸಿದ್ದನ್ನು ಕಾಣಬಹುದು.

ತತ್ವ ಅನುಭಾವದ ನೆಲೆಗೊಳಗಾದಾಗ ಉಂಟಾಗುವ ಅರ್ಥಪೂರ್ಣ ಸ್ಥಿತಿಯನ್ನು ನೀರಲಕೇರಿ ಬಸವಲಿಂಗ ಶರಣರು ತಮ್ಮ ತ್ರಿಪದಿ ರೂಪದ ರಚನೆಯೊಂದರಲ್ಲಿ ಹೇಳಿದ್ದು ಹೀಗೆ:

ರೂಪಿನೊಳು ರೂಪಾಗಿ ದೀಪಿಸುತಿಹನು

ರೂಪು ನಿರೂಪು ನೀನೆಂದ । ನಿಶ್ಚಯಿಸಿ

ಉಪಾಧಿ ರಹಿತನು ಉಪಕಾರಿ೬ ಇಲ್ಲಿಯಸಾಲುಗಳು ಕಾವ್ಯಾತ್ಮಕತೆಯನ್ನು ಪಡೆದುಕೊಳ್ಳುವುದನ್ನು ಗುರುತಿಸಬಹುದಾಗಿದೆ.

ವಚನ ಪ್ರಕಾರಕ್ಕಿಂತ ವಚನೇತರ ಪ್ರಕಾರದ ತತ್ವ ಪದಗಳು ಸರಳ ರೀತಿಯಲ್ಲಿ ಜನ ಸಾಮಾನ್ಯರಿಗೆ ತಲುಪಲು ಸಾಧ್ಯವಾಗಿದ್ದು ಬಳಸಿದ ದೃಷ್ಟಾಂತಗಳಿಂದಲೇ ಎಂಬುದು ನಮಗೆ ಸುಧೀರ್ಘ ಅವಲೋಕನೆಯಿಂದ ಕಂಡು ಬರುತ್ತದೆ. ಭಕ್ತಿ, ಜ್ಞಾನ, ವೈರಾಗ್ಯದ ಕಾಠಿಣ್ಯವನ್ನು ಜನರ ಬದುಕಿನ ಹಾಗೇ ಸರಳವೆಂಬ ರೀತಿಯಲ್ಲಿ ತೆರೆದು ತೋರಿಸಿದ್ದು ; ಸಾಮೂಹಿಕತ್ವಕ್ಕಿಂತ ವೈಯಕ್ತಿಕ ಆತ್ಮೋನ್ನತಿಗೆ ಪೂರಕವಾಗಿ ವಚನೇತರ ಪ್ರಕಾರದ ರಚನೆಗಳೆಲ್ಲವೂ ಮೂಡಿ ಬಂದವು.

---

೧ : ಸಂ : ಡಾ : ಬಸವಲಿಂಗ ಸೊಪ್ಪಿಮಠ-ನೀ.ಬ.ಶಿ. ಸ್ವ -ಪದ್ಯ ೧೬೭, ನುಡಿ೧ , ಪುಟ೯೩

೨ : ಅದೇ : ಪದ್ಯ ೧೬೨, ನುಡಿ೨ , ಪುಟ೮೯

೩ : ಆಯ್ಕೆ : ಚೆನ್ನಬಸಪ್ಪ ಬೆಟ್ಟದೂರು - ಘ.ನಾ.ಶಿ.ನುಡಿ೧೨, ಪುಟ೧೧

೪ : ಸಂ : ಡಾ : ವೀರಣ್ಣ ರಾಜೂರು -ಸ.ವ.ಸಂ. -೧೪ ,ಪದದ ನುಡಿ೩ , ಪುಟ೪೫೩

೫ : ಅದೇ : ಪುಟ೪೭೫ ,

೬ : ಸಂ : ಡಾ : ಬಸವಲಿಂಗ ಸೊಪ್ಪಿಮಠ-ನೀ.ಬ.ಶಿ. ಸ್ವ -ಪದ್ಯ ೭೩, ನುಡಿ೯, ಪುಟ೪೦

ಈ ಪರಿಸರದ ಶರಣರು ರೂಪಕಗಳನ್ನು ಬಹು ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಹೊಲವನ್ನು ದೇಹವೆನ್ನುವುದು , ವ್ಯವಸಾಯವೇ ಭಕ್ತಿಯಾಗುವುದು , ಜೀವನದ ಹೋರಾಟ ಸಂತೆಯಾಗಿರುವುದು - ಹೀಗೆ ಹಲವಾರು ಸಂಗತಿಗಳನ್ನು ನಾವಿಲ್ಲಿ ರೂಪಕವಾಗಿರುವುದನ್ನು ಕಾಣಬಹುದು.

ಸುತ್ತಲಿನ ಪರಿಸರದಲ್ಲಿ ಕಂಡು ಬರುವ ಪ್ರಾಣಿ, ಪಕ್ಷಿ, ಸಸ್ಯ ಮೊದಲಾದವುಗಳನ್ನು ಅವುಗಳ ಸಾಂಕೇತಿಕತೆ ಅರಿತುಕೊಂಡು ಅವುಗಳನ್ನು ತಮ್ಮ ರಚನೆಗಳಿಗೆ ಸಶಕ್ತ ರೂಪಕಗಳಾಗಿ ಬಳಸಿ ಕೊಂಡದ್ದನ್ನು ನಾವು ಇಲ್ಲಿ ಕಾಣಬಹುದಾಗಿದೆ. ಹೇಮಗಲ್ಲ ಹಂಪರು ಆನೆ, ಸಿಂಹ , ಹಾವು , ಹುಲಿ, ಕರಡಿಗಳನ್ನು ಬಳಸಿಕೊಂಡು ದೇವರ -ಗುರುವಿನ ವಾಸ್ತವ ಸ್ಥಿತಿಯನ್ನು ತಿಳಿಸುವಲ್ಲಿ ಬಳಸಿಕೊಂಡ ರೂಪಕಗಳು ಬಹು ಸಮರ್ಪಕವಾಗಿರುವುದನ್ನು ಕಾಣಬಹುದಾಗಿದೆ.೧

ಇದೇ ರೀತಿಯ ಅನೇಕ ರಚನೆಗಳನ್ನು ಈ ಪರಿಸರದ ಶರಣರ ವಚನೇತರ ಪ್ರಕಾರಗಳಲ್ಲಿ ಕಾಣಬಹುದಾಗಿದೆ. ವಚನೇತರ ಪ್ರಕಾರದ ತಮ್ಮ ರಚನೆಯಲ್ಲಿ ಬಳಸಿಕೊಂಡ ಪ್ರಾಣಿ ,ಪಕ್ಷಿ ರೂಪಕಗಳೆಂದರೆ : ಶುನಿ, ಸೂಕರ , ಗಾರ್ದಭಿ, ಆನೆ, ನಾಯಿ೩ ಇತ್ಯಾದಿಗಳನ್ನು ಕಾಣಬಹುದಾಗಿದೆ.

ಗೊಬ್ಬೂರು ಹಂಪಣ್ಣನವರು ಮನುಷ್ಯ ಸ್ವಭಾವನ್ನು ಪ್ರಾಣಿಗಳ ರೂಪಕಗಳ ಹಿನ್ನೆಲೆಯಲ್ಲಿ ಬಹು ಸೊಗಸಾಗಿ ಅಭಿವ್ಯಕ್ತಿಸಿದ್ದನ್ನು ನಾವು ಅವರ ಕೆಲವು ರಚನೆಗಳಲ್ಲಿ ಕಾಣಬಹುದಾಗಿದೆ . ಉದಾ: 'ಕತ್ತೆಗೆ ದಾಣಿಯನಿಟ್ಟರೆ ಕುದುರ್‍ಯಾಗದು '೪ ಇದೇ ರೀತಿ ಅವರು ತಮ್ಮ ರಚನೆಗಳಲ್ಲಿ ನಾಯಿಯನ್ನು೫ ಇಡೀ ಒಂದು ಪದ್ಯದ ತುಂಬೆಲ್ಲಾ ಬಳಸಿಕೊಂಡು ಬಳಸಿಕೊಂಡು ಅದರ ಸ್ವಭಾವದ ಹಿನ್ನೆಲೆಯಲ್ಲಿ ನೀಚ ಮನುಷ್ಯನ ಪರಿಚಯ ಮಾಡಿಕೊಡುತ್ತಾರೆ.ಹೀಗೆ ಅವರು ಒಂದು ಪ್ರಾಣಿಯನ್ನೇ ತಮ್ಮ ಪದ್ಯಗಳಲ್ಲಿ ರೂಪಕವಾಗಿರಿಸಿಕೊಂಡು ಆ ಮೂಲಕ ಮನುಷ್ಯನ ಅನುಭಾವದ ಸ್ಥಿತಿಯಲ್ಲಿಯ ಹಂತಗಳನ್ನು ಸ್ಪಷ್ಟವಾಗಿ ಪರಿಚಯಿಸಿಕೊಡುತ್ತಾರೆ.

ಗುರುವಿನ ಆಜ್ಞೆಯನುಸಾರ ವ್ಯಕ್ತಿ ಪರಮಾತ್ಮನಾಗಬಲ್ಲನು. ಆದರೆ ಅಜ್ಞಾನಿಗಳಿಗೇನು ಇದರ ರಹಸ್ಯ ಗೊತ್ತೆಂಬುದನ್ನು ಹಲವಾರು ರೂಪಕಗಳನ್ನು ಬಳಸಿ ಚಿತ್ರಿಸುತ್ತಾ ಒಂದು ನುಡಿಯಲ್ಲಿ ಗರುಡ ಮತ್ತು ಉರಗವನ್ನು ಸಮೀಕರಿಸಿ ಹೇಳುವ ಕೂಡಲೂರು ಬಸವಲಿಂಗ ಶರಣರ ರೂಪಕ ನಿರ್ಮಾಣ ಸೃಷ್ಟಿ ಅಪೂರ್ವವಾಗಿದೆ.೬

ಈ ಪರಿಸರದ ಶರಣರು ತಾವು ಮಾಡುವ ಕಾಯಕವನ್ನೇ ರೂಪಕವನ್ನಾಗಿ ತಮ್ಮ ರಚನೆಗಳನ್ನು ಅಭಿವ್ಯಕ್ತಿಸಿದ್ದಾರೆಂಬುದನ್ನು ಹಲವು ಜನರ ಪದ್ಯ, ಸ್ವರವಚನ, ತ್ರಿಪದಿ ,ಕಂದಗಳಿಂದ ತಿಳಿಯಬಹುದಾಗಿದೆ. ಉದಾ :'ವ್ಯಾಪಾರ ಉದ್ಯೋಗ ಮಾಡಲು ಹೋದರೆ..... ಸಿಗುವದಣ್ಣ' ೭ ಈ ದೇಹವನ್ನು ರೂಪಕವಾಗಿರಿಸಿಕೊಂಡು ಹಲವರು ತಮ್ಮ ಆಶಯಗಳನ್ನು ವ್ಯಕ್ತಪಡಿಸಿದ್ದನ್ನು ಕಾಣಬಹುದು. ಇದಲ್ಲದೇ ಮನುಷ್ಯನ ನೀಚತನವನ್ನು -ಸಾಚಾತನವನ್ನು ಅನೇಕ ರೂಪಕಗಳ ಮೂಲಕ ಚಿತ್ರಿಸಿ ಸ್ವಭಾವವನ್ನು ಸ್ಪುಟಗೊಳಿಸುತ್ತಾರೆ.

ಈ ಪರಿಸರದ ವಚನೇತರ ಪ್ರಕಾರಗಳನ್ನು ಅವಲೋಕಿಸಿದಾಗ ಇಲ್ಲಿ ಬಳಕೆಗೊಳ್ಳುವ ರೂಪಕಗಳು ತಮ್ಮ ಸುತ್ತಲ ಪರಿಸರದ ಸಂಗತಿಗಳನ್ನು ಆಯ್ದುಕೊಂಡು ಆ ಮೂಲಕ ತಮ್ಮ ಆಶಯಗಳನ್ನು ಸಶಕ್ತವಾಗಿ ಅಭಿವ್ಯಕ್ತಿಸಿರುವುದನ್ನು ನಾವು ಹಲವರ ರಚನೆಗಳಲ್ಲಿ ಕಾಣುತ್ತೇವೆ. ಇಲ್ಲಿ ಯಾವುದೇ ರೀತಿಯ ರೂಪಕಗಳು ಬಳಕೆಯಾಗಲಿ ಅವು ಅನುಭಾವದ ಒಂದಿಲ್ಲೊಂದು ಆಯಾಮಗಳನ್ನು ವ್ಯಕ್ತಪಡಿಸುತ್ತವೆಂಬುದನ್ನು ಗುರುತಿಸ ಬಹುದಾಗಿದೆ.

ಸಂವೇದನೆಗಳ ಸೂಕ್ಷ್ಮ ಸ್ವರೂಪ - ಮಣ್ಣಿನ ವಾಸನೆ, ಜನಪದ ಸತ್ವ - ದೇಶಿಯತೆಯನ್ನು ನವ್ಯರಿಗಿಂತ ಮೊದಲು ಸಾಧಿಸಿದವರು ಈ ಪರಿಸರದ ಶರಣರು ಅದೇ ಪರಂಪರೆ ಬಸವೋತ್ತರ ಯುಗದಲ್ಲಿ ಬೆಳೆದು ಬಂದಿತು. ಹೀಗಾಗಿ ವಚನೇತರ ಪ್ರಕಾರದಲ್ಲಿ ಸಂವೇದನೆಗಳ ಸೂಕ್ಷ್ಮ ಸ್ವರೂಪ ಅವಲೋಕಿಸಬಹುದಾಗಿದೆ. ತಳಮಳ , ಬಡತನದ ಬೆಗೆ ಇತ್ಯಾದಿಗಳನ್ನು ಚಿರಪರಿಚಿತವಾದ ಉದಾಹರಣೆಗಳ ಮೂಲಕ ಸರಳ ಹಾಗೂ ನೇರವಾದ ಶೈಲಿಯಲ್ಲಿ ಅಭಿವ್ಯಕ್ತಿಸಿದನ್ನು ಕಾಣಬಹುದು.

ವಚನ ಪ್ರಕಾರಕ್ಕಿಂತಲೂ ಸರಳವಾದ ಶೈಲಿ ವಚನೇತರ ಪ್ರಕಾರದಲ್ಲಿ ರೂಪಿತವಾದ ಕಾರಣ ವಚನಗಳಿಗಿಂತ ತತ್ವಪದಗಳು ಬಹುಬೇಗ ಜನರ ಮನಸ್ಸನ್ನು ಗೆದ್ದವು.

---

೧ : ಸಂ : ಡಾ : ವೀರಣ್ಣ ರಾಜೂರು - ಸ.ವ.ಸಂ. -೧೪, ನುಡಿ೨ , ಪುಟ೪೮೬

೨ : ಸಂ : ಡಾ : ಬಸವಲಿಂಗ ಸೊಪ್ಪಿಮಠ-ನೀ.ಬ.ಶಿ.ಸ್ವ-ಪದ್ಯ೬ , ನುಡಿ೧ , ಪುಟ೩

೩ : ಆಯ್ಕೆ : ಚೆನ್ನಬಸಪ್ಪ ಬೆಟ್ಟದೂರು -ಘ.ನಾ.ಶಿ. -ನುಡಿ೧೬ , ಪುಟ೧೬

೪ : ಆಯ್ಕೆ : ರಾಮಸ್ವಾಮಿ ನುಲಿ -ಗೊ.ಹಂ. -ಪದ್ಯ೧೨, ನುಡಿ೨ , ಪುಟ೧೦

೫ : ಅದೇ : ಪದ್ಯ೫೦, ನುಡಿ೧ -೩, ಪುಟ೪೪-೪೯

೬ : ಆಯ್ಕೆ : ಎಸ್.ಜಿ.ಸ್ವಾಮಿ-ಕೂ.ಬ., ಪದ್ಯ೫, ನುಡಿ೩, ಪುಟ೪

೭ : ಅದೇ : ಪದ್ಯ೧೧, ನುಡಿ೪, ಪುಟ೮

ವಚನೇತ ಪ್ರಕಾರಗಳ ಆಕೃತಿಯನ್ನು ಅವಲೋಕಿಸಿದಾಗ ಸಾಂಗತ್ಯದ ಸೊಗಸಿದೆ. ಪ್ರಾಸ-ಯಮಕಗಳ ಔಚಿತ್ಯ ಪೂರ್ಣ ಬಳಕೆ , ದೇಶಿಯತೆಯ ಲಯವಿದೆ. ಹಾಗೆಯೇ ದ್ವಿಪದಿ, ತ್ರಿಪದಿ, ಚೌಪದಿ , ಕಂದ ಮಟ್ಟುಗಳಲ್ಲಿ ಸೂಕ್ತವಾದ ಪ್ರತಿಭಾ ಪೂರ್ಣ ಕಾವ್ಯ ಪ್ರತಿಭೆ ಇದೆ. ಇಲ್ಲಿಯ ರಚನೆಗಳಲ್ಲಿ ತನ್ಮಯತೆ ಎದ್ದು ಕಾಣುತ್ತದೆ.

ವಚನ ಪ್ರಕಾರಕ್ಕಿಂತ ಭಿನ್ನವಾದ ರಚನೆಯ ಸ್ವರೂಪ ಇಲ್ಲಿದೆ. ಇಲ್ಲಿಯ ತತ್ವಪದಗಳನ್ನು ಅವಲೋಕಿಸಿದಾಗ ಪಲ್ಲವಿಯಲ್ಲಿಯೇ ಒಂದು ತೀರ್ಮಾನವನ್ನು ಪ್ರಕಟಿಸಿ ಅದರ ಸಮರ್ಥನೆಗಾಗಿ ಹಲವಾರು ಉದಾಹರಣೆಗಳನ್ನು ಬಳಸಿ ಕೊಳ್ಳುತ್ತಾರೆ.

ಆದಿ ಪ್ರಾಸ, ಅಂತ್ಯಪ್ರಾಸ ಇಲ್ಲಿ ಸಹಜವಾಗಿ ಕಂಡು ಬರುತ್ತದೆ. ಅಂಶಗಣದಂತೆ ಮಾತ್ರಗಣದ ಬಳಕೆಯೂ ಇಲ್ಲಿ ಹೇರಳವಾಗಿದೆಂಬುದನ್ನು ಬೇರೆ ಹೇಳಬೇಕಾಗಿಲ್ಲ . ಇಲ್ಲಿಯ ರಚನೆಗಳಲ್ಲಿ ಸಮಾನ ಧೋರಣೆ ಇರುವ ಕಾರಣ ಒಬ್ಬರ ರಚನೆಯ ಸ್ವರೂಪ ಮತ್ತೊಬ್ಬರ ರಚನೆಯಲ್ಲಿ ಕಂಡು ಬರುವುದು ಸ್ವಾಭಾವಿಕ ವಾಗಿದೆ. ಅನೇಕ ಪುನರುಕ್ತಿಗಳು ಇಲ್ಲಿ ಅನಿವಾರ್ಯವಾಗಿ ಬರುತ್ತದೆ. ಇಷ್ಟಾದರೂ ವಚನೇತರ ಪ್ರಕಾರದ ಭಾಷೆ -ಸಾಹಿತ್ಯ ಆಯಾ ಪ್ರಾದೇಶಿಕ ಸೊಗಡನ್ನು ಅತ್ಯಂತ ಸ್ಪಷ್ಟವಾಗಿ ಮೊದಲಬಾರಿಗೆ ದಾಖಲಿಸಿ ಕೊಡುತ್ತದೆಂಬುದನ್ನು ಮರೆಯಲಾಗದು.

ಒಟ್ಟಾರೆ ವಚನೇತರ ಪ್ರಕಾರ ಹಲವು ವೈವಿಧ್ಯಮಯಗಳೊಂದಿಗೆ ವಚನ ಪ್ರಕಾರಕ್ಕಿಂತಲೂ ವಿಭಿನ್ನವಾಗಿ ಈ ಪರಿಸರದಲ್ಲಿ ಬೆಳೆದು ಬಂದು ಮುಂದಿನ ಸಾಹಿತ್ಯದ ದಿಕ್ಕನ್ನೆ ಬದಲಿಸಿತು.

ತಂತ್ರ

ವಚನ ಪ್ರಕಾರದ ರಚನೆಗೆ ಕೈ ಹಾಕಿದ ಶರಣರಿಗೆ ಯಾವುದೇ ತಂತ್ರವನ್ನು ಬಳಸಿಕೊಳ್ಳಬೇಕೆಂಬ ಉದ್ದೇಶ ವಿರಲಿಲ್ಲವಾದರೂ ಅಲ್ಲಿ ಅದು ಸಹಜವಾಗಿದೆ. ಆದರೆ ವಚನೇತ ಪ್ರಕಾರದ ಶರಣರು ಉದ್ದೇಶ ಪೂರ್ವಕವಾಗಿ ತಂತ್ರ ಗಳನ್ನು ಬಳಸಿಕೊಂಡಿದ್ದಾರೆಂಬುದು ನಮಗೆ ಅವರ ರಚನೆಗಳಿಂದ ತಿಳಿದು ಬರುತ್ತದೆ. ಅವರು ಬಳಸಿ ಕೊಂಡ ಪ್ರಮುಖ ತಂತ್ರಗಳೆಂದರೆ:

೧)ಪುರಾಣ ಕ್ರಮ ೨) ಅಂಕಿತ ನಾಮ ೩) ಪ್ರೇಮಿ ಭಾವ ೪) ಬೆಡಗು ೫) ಕಥನ ಕ್ರಮ ೬) ಬುಡು ಬುಡಕ್ಯಾನ ಪದ ೭)ಜಾತಿ ಪದ್ಧತಿ ೮) ಬೈಗುಳ ಇತ್ಯಾದಿ.

೧)ಪುರಾಣ ಕ್ರಮ

ಈ ಪ್ರಕಾರದಲ್ಲಿ ಪುರಾಣ ಸಂಗತಿಗಳು ಸಾಕಷ್ಟು ಬಳಕೆಯಾದರೂ ಅವು ಭಿನ್ನವಾದ ಆಯಾಮಗಳನ್ನು ಪಡೆದು ಕೊಂಡಿದೆ. ಪುರಾಣದ ವೈಭವೀಕರಣದ ಅತಿಶಯತೆ ಇಲ್ಲದಿದ್ದರೂ ಅದನ್ನು ನಂಬಿರುವ ಮನೋಭಾವ, ಜೊತೆಯಲ್ಲಿಯೇ ಅದರ ವಾಸ್ತವ ಸ್ಥಿತಿಯನ್ನು ಕಲ್ಪಿಸಿ ಕೊಡುವ ವಿಶಿಷ್ಟಾಂಶವನ್ನು ನಾವಿಲ್ಲಿ ಕಾಣಬಹುದಾಗಿದೆ.

ಹೇಮಗಲ್ಲ ಹಂಪರು ಪುರಾಣದಲ್ಲಿ ಬರುವ ಶಿವನ ಹೊಗಳಿಕೆಯನ್ನು ಅವರ ಸ್ವರ ವಚನದಲ್ಲಿ ಕಾಣಬಹುದಾಗಿದೆ.

ತ್ರಿಪುರ ಸಂಹರ ನಿತ್ಯ ಜಯ ಜಯ.......... ಶಂಭು ಜಯ ಜಯ ೧ ಹೀಗೆ ಪುರಾಣವನ್ನು ಅಭಿವ್ಯಕ್ತಿಯ ತಂತ್ರವಾಗಿ ಶರಣರು ಬಳಸಿಕೊಂಡಿದ್ದಾರೆ. ನೀರಲಕೇರಿ ಬಸವಲಿಂಗ ಶರಣರು ಬ್ರಹ್ಮ - ವಿಷ್ಣು - ರುದ್ರೇಶ - ಸದಾಶಿವ ಎಂಬ ಎಲ್ಲಾ ಪೌರಾಣಿಕ ದೇವರುಗಳಿಲ್ಲಾ ಅವೆಲ್ಲಾ ಇದ್ದುದಾದರೆ ನಿನ್ನೊಳಗಿವೆ ಎಂಬುದನ್ನು ತಮ್ಮ ತತ್ವ ಪದಗಳಲ್ಲಿ ತಿಳಿಸಿದ್ದಾರೆ. ಹೀಗೆ ಪುರಾಣ ಕ್ರಮದ ಹಿನ್ನೆಲೆಯಲ್ಲಿ ಅವರು ಅನೇಕ ಸಂಗತಿಗಳನ್ನು ಅಭಿವ್ಯಕ್ತಿಸುವಾಗ ಸಹಜವಾಗಿ ವಿರೋಧಾಭಾಸಗಳು ಕಂಡು ಬಂದಿವೆ.

೨)ಅಂಕಿತನಾಮ

ವಚನ ಪ್ರಕಾರಕ್ಕಿಂತಲೂ ಅಂಕಿತ ನಾಮ ಇಲ್ಲಿ ವಿಶಿಷ್ಟವಾಗಿ ಬಳಕೆಯಾಗಿದೆ. ಇಲ್ಲಿ ಅಂಕಿತಗಳನ್ನು ಹೊರತು ಪಡಿಸಿ ಗಮನಿಸಿದರೆ ಎಲ್ಲಾ ರಚನೆಗಳು ಒಂದೇ ಯಾಗಿ ಕಾಣುತ್ತವೆ. ಕಾರಣ ಅವರು ಬಳಸಿಕೊಂಡ ಸಮಾನ ಆಶಯ- ಧೋರಣೆಗಳೇ ಪ್ರಮುಖವಾಗಿವೆ. ಇಷ್ಟಾದರೂ ಇಲ್ಲಿ ಅಂಕಿತನಾಮ ಬಹು ಮುಖ್ಯವಾಗಿ ಆಯಾ ಶರಣರು ಸರಳವಾಗಿ ತಮ್ಮ ತತ್ವಗಳನ್ನು ಪ್ರತಿಪಾದಿಸಿ ಅಭಿವ್ಯಕ್ತಿಸಲು ಪೂರಕವಾಗಿದೆ. ಇಷ್ಟ ದೈವದೊಂದಿಗೆ ಗುರುವನ್ನು ಅಂಕಿತವಾಗಿರಿಸಿಕೊಂಡು ಆ ಮೂಲಕ ತಮ್ಮ ರಚನೆಗಳನ್ನು ಈ ಪ್ರಕಾರದಲ್ಲಿ ಶರಣರು ಅಭಿವ್ಯಕ್ತಿಗೊಳಿಸಿದ್ದಾರೆ.

೩) ಪ್ರೇಮಿ ಭಾವ

ವಚನ ಪ್ರಕಾರಕ್ಕಿಂತಲೂ ಗಾಢವಾಗಿ ಈ ತಂತ್ರ ಬಳಕೆಯಾಗಿವೆ. ಇಲ್ಲಿ ಶರಣರು ಒಮ್ಮೆ ಪತಿಯಾಗಿ-ಸತಿಯಾಗಿ ತಮ್ಮನ್ನು ಗುರುತಿಕೊಂಡಿದ್ದನ್ನು ಕಾಣಬಹುದಾಗಿದೆ. ಪ್ರತಿಯೊಬ್ಬ ಶರಣರು ತಮ್ಮನ್ನು ಪ್ರೇಮಿಯಾಗಿ ಕಂಡು ಕೊಂಡು ಆರಾಧಿಸಿದ್ದಾರೆ. ಉದಾ : ಇನ್ಯಾಕೇ ಎನ್ನ ಮದುವಿ ಚಿಂತಿ ೩ ಎಂಬಲ್ಲಿ ಕೂಡಲೂರು ಬಸವಲಿಂಗ ಶರಣರು ತಮ್ಮನ್ನು ಸತಿಯಾಗಿ ಕಂಡು ಕೊಂಡು ನಲ್ಲನೊಡನೆ ಆಡುವ ಸರಸ ಭಾವವನ್ನು ತಮ್ಮ ತತ್ವ ಪದಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಈ ಪ್ರಕಾರದಲ್ಲಿ ಈ ತಂತ್ರಗಳನ್ನು ಬಳಸಿಕೊಂಡು ಶರಣರು ಲೌಕಿಕ-ಕೌಟುಂಬಿಕ ಸಂಗತಿಗಳನ್ನು ಅಲೌಕಿಕವಾಗಿ ಪರಿವರ್ತಿಸಿ ಅಭಿವ್ಯಕ್ತಿಸಿದ್ದನ್ನು ಕಾಣಬಹುದಾಗಿದೆ.

---

೧ : ಸಂ: ಡಾ: ವೀರಣ್ಣ ರಾಜೂರು -ಸ.ವ.ಸಂ.೧೪, ನುಡಿ ೨ , ಪುಟ ೪೩೭

೨ : ಸಂ: ಡಾ: ಬಸವಲಿಂಗ ಸೊಪ್ಪಿಮಠ -ನೀ.ಬ.ಶಿ.ಸ್ವ-ಪದ್ಯ ೩೫, ನುಡಿ ೩, ಪುಟ ೨೧

೩ : ಆಯ್ಕೆ : ಎಸ್.ಜಿ. ಸ್ವಾಮಿ - ಕೂ.ಬ.ಪದ್ಯ ೧೨, ನುಡಿ ೧-೫ , ಪುಟ ೧೧

೪) ಬೆಡಗು

ವಚನ ಪ್ರಕಾರದಲ್ಲಿ ಈ ತಂತ್ರ ಬಳಸಿದವರ ಸಂಖ್ಯೆ ಬೆರಳೆಣಿಕೆಯಷ್ಟು ಕಂಡು ಬಂದರೆ ಇಲ್ಲಿ ಅದು ಅಗಣಿತವಾಗಿದೆ. ಇದು ನಿಗೂಢತೆಯ ಅನುಭಾವವನ್ನು ಸಾಂಕೇತಿಕವಾಗಿ ಇಲ್ಲಿ ಅಭಿವ್ಯಕ್ತಿಸಿದ್ದನ್ನು ಕಾಣಬಹುದು. ಜನರಾಡುವ ಭಾಷೆಯನ್ನು ಬಳಸಿಕೊಂಡು ಅದನ್ನು ಈ ಲೋಕದಿಂದ ಭಿನ್ನ ನೆಲೆಯಲ್ಲಿ ಗುರುತಿಸುವ ಅಭಿವ್ಯಕ್ತಿಯನ್ನು ಅವರ ರಚನೆಗಳಲ್ಲಿ ಕಾಣಬಹುದು. ಈ ರೀತಿಯ ಭಾಷಾಭಿವ್ಯಕ್ತಿಯನ್ನು ಎ.ಕೆ. ರಾಮಾನುಜನ್ ರವರು process of distroying and reinventing language. ೧

ಈ ತಂತ್ರವನ್ನು ಬಳಸಿ ಶರಣರು ತಮ್ಮ ರಚನೆಗಳನ್ನು ಸಾಂಕೇತಿಕವಾಗಿ ಅಭಿವ್ಯಕ್ತಿಸಿದ್ದನ್ನು ಹೇಮಗಲ್ಲ ಹಂಪ,೨ ಕೂಡಲೂರು ಬಸಲಿಂಗ ಶರಣ, ೩ ಮುಂತಾದವರಲ್ಲಿ ಕಾಣಬಹುದಾಗಿದೆ.

೫) ಕಥನ ಕ್ರಮ

ನಿಜಜ್ಞಾನದ ಅರಿವನ್ನು ಸರಳೀಕರಣರಗೊಳಿಸಲು ಶರಣರು ಈ ತಂತ್ರವನ್ನು ಬಳಸಿದರು. ನೀರಲಕೇರಿ ಬಸವಲಿಂಗ ಶರಣರು ತಾವು ಅನುಭವಿಸಿದ ನೋವವನ್ನು ಈ ತಂತ್ರವನ್ನು ಬಳಸಿಕೊಂಡು ' ಶರಣು ಸಾಕೈಗುರು'೪ ಎಂಬಲ್ಲಿ ನೋವಿಗೆ ಕಾವ್ಯ ಶಕ್ತಿಯನ್ನು ನೀಡಿದ್ದನ್ನು ಕಾಣಬಹುದು .

ಹೇಮಗಲ್ಲ ಹಂಪರಂತೂ ತಮ್ಮ ಕಂದ ಪದ್ಯ ಹಾಗೂ ರಗಳೆಯ ಮೂಲಕ 'ಪಂಚಾಕ್ಷರಿ' ಮಹತ್ವವನ್ನು ವಿವರಿಸುತ್ತ ಅದರ ಮಹಿಮೆ , ಸಾಗಿ ಬಂದ ಕ್ರಮವನ್ನು ಈ ತಂತ್ರದ ಮೂಲಕ ಅಭಿವ್ಯಕ್ತಿಸಿದ್ದನ್ನು ಕಾಣಬಹುದಾಗಿದೆ.೫

ಕಥನ ಕ್ರಮ ತಂತ್ರವು ವೈಯಕ್ತಿಯ ಅನುಭವಗಳನ್ನು ಅನುಭಾವದ ಮಟ್ಟಕ್ಕೇರಿಸಲು ಪೂರಕವಾಗಿ ಬಳಕೆಯಾದ ಸರಳ ಹಾಗೂ ಯಶಸ್ವಿ ತಂತ್ರವಾಗಿದೆ.

೬) ಬುಡು ಬುಡುಕ್ಯಾನ ಪದ

ಅನುಭಾವವನ್ನು ಅತ್ಯಂತ ಸಮರ್ಥವಾಗಿ ಉನ್ನತ ಸ್ಥಿತಿಗೆ ಕೊಂಡೊಯ್ಯಲು ಈ ಪ್ರಕಾರದ ಶರಣರು ಬಳಸಿದ ವಿಶಿಷ್ಟ ತಂತ್ರವಾಗಿದೆ. ಪ್ರೇಮಿ ಭಾವಕ್ಕಿಂತಲೂ ಒಂದು ಹೆಜ್ಜೆ ಮುಂದಿದೆ. ಬುಡುಬುಡುಕ್ಯಾ ಎಂಬ ವಿಶಿಷ್ಟ ಜನಾಂಗದ ವ್ಯಕ್ತಿಯ ಬದುಕನ್ನೇ ಕಾವ್ಯಾಭಿವ್ಯಕ್ತಿಯ ತಂತ್ರವನ್ನಾಗಿ ಈ ಪರಿಸರದ ಶರಣರು ಬಳಸಿ ಕೊಂಡದ್ದು ವಿಶಿಷ್ಟವಾಗಿದೆ. ಇಂತಹ ರಚನೆಗೆ ನಾವು ಗೊಬ್ಬೂರು ಹಂಪಣ್ಣನ ' ಪರದೇಶದ ಬುಡು ಬುಡಿಕ್ಯನು ನಾನು '೬ ಎಂಬುದನ್ನು ಮಾದರಿಯಾಗಿ ನೋಡಬಹುದು. ಈ ಪರಿಸರದ ಶರಣರು ಲೋಕದ ಜನಪದ ಕಲೆ-ಬದುಕನ್ನು ಅತ್ಯಂತ ಎಚ್ಚರದಿಂದ ಗಮನಿಸಿ ಅದನ್ನು ಅನುಭಾವದ ಕಡೆಗೆ ತಿರುಗಿಸಿದ ರೀತಿಯನ್ನು ನಾವು ಈ ತಂತ್ರದ ಮೂಲಕ ಕಂಡು ಕೊಳ್ಳಬಹುದಾಗಿದೆ.

೭) ಜಾತಿ ಪದ್ಧತಿ :

ಇಲ್ಲಿ ಜಾತಿ ಖಂಡನೆಗೆ ಮಾತ್ರ ಬಳಕೆಯಾಗದೆ ಅದರ ಒಳಗಿನ ಸ್ಥಿತಿಯನ್ನು ಬಯಲಿಗೆಳೆದು ಅದರ ಲಕ್ಷಣಗಳನ್ನೇ ಪ್ರಮುಖವಾಗಿರಿಸಿಕೊಂಡು ಅದನ್ನು ಅನುಭಾವದೆಡೆಗೆ ತಿರುಗಿಸಿದ್ದನ್ನು ನಾವಿಲ್ಲಿ ಕಾಣಬಹುದಾಗಿದೆ. ಇಂತಹ ಉದಾಹರಣೆಗಳನ್ನು ನಾವು ಕೂಡಲೂರು ಬಸವಲಿಂಗ ಶರಣರ ' ಜೋಗೇರು ನಾವು ಜೋಗೇರು '೭ ಹಾಗೂ ' ಅಗಸರೋ ನಾವು '೮ ಎಂಬ ಪದ್ಯಗಳಲ್ಲಿ ಕಾಣಬಹುದಾಗಿದೆ. ಇದಲ್ಲದೇ ಸಮಕಾಲೀನ ಅನೇಕ ಜಾತಿ, ವೃತ್ತಿಗಳನ್ನು ತಂತ್ರಗಳನ್ನಾಗಿ ಬಳಸಿಕೊಂಡು ತಮ್ಮ ರಚನೆಗಳನ್ನು ಅಭಿವ್ಯಕ್ತಿಸಿದ್ದು ಈ ಪರಿಸರದ ಶರಣರಲ್ಲಿ ವಿಶಿಷ್ಟವಾಗಿ ಕಾಣಬಹುದಾಗಿದೆ.

೧: A.K. Ramanujan -S.S.-Page 49

೨ : ಸಂ: ಡಾ: ವೀರಣ್ಣ ರಾಜೂರು -ಸ.ವ.ಸಂ.೧೪, ನುಡಿ೧ , ಪುಟ ೫೧೦

೩ : ಆಯ್ಕೆ : ಎಸ್.ಜಿ. ಸ್ವಾಮಿ - ಕೂ.ಬ.ಪದ್ಯ ೪೮, ನುಡಿ ೨ , ಪುಟ ೪೦

೪ : ಸಂ: ಡಾ: ಬಸವಲಿಂಗ ಸೊಪ್ಪಿಮಠ -ನೀ.ಬ.ಶಿ.ಸ್ವ-ಪದ್ಯ ೧೭೪, ನುಡಿ೧-೧೩, ಪುಟ ೧೦೨-೧೦೪

೫ : ಸಂ: ಡಾ: ವೀರಣ್ಣ ರಾಜೂರು -ಸ.ವ.ಸಂ.೧೪, ನುಡಿ೧-೫೮, ಪುಟ ೫೭೨-೫೮೦

೬ : ಆಯ್ಕೆ : ರಾಮಸ್ವಾಮಿ ನುಲಿ-ಗೊ.ಹಂ.-ಪದ್ಯ ೩೯, ನುಡಿ೧-೧೬, ಪುಟ ೩೫-೩೯

೭ : ಆಯ್ಕೆ : ಎಸ್.ಜಿ. ಸ್ವಾಮಿ - ಕೂ.ಬ. ಪದ್ಯ ೫೧ , ನುಡಿ೧-೫, ಪುಟ ೪೨

೮: ಅದೇ : ಪದ್ಯ೫೪, ನುಡಿ೧-೩, ಪುಟ ೪೪-೪೫

೭) ಬೈಗುಳ

ಜನಜೀವನದ ಮಧ್ಯದಲ್ಲಿ ಬೆಳೆದು ಬಂದ ಶರಣರಿಗೆ ಶೀಲ-ಅಶ್ಲೀಲದ ಪ್ರಶ್ನೆ ಕಂಡು ಬರಲಿಲ್ಲ. ಹೇಳುವುದನ್ನು ಅತ್ಯಂತ ನಿಖರವಾಗಿ ಹೇಳಿ ಯಾವುದನ್ನು ಮುಚ್ಚಿಡಲಿಲ್ಲ. ಜನರಾಡುವ ಬೈಗುಳಗಳನ್ನೇ ಬಹು ಎಚ್ಚರಿಕೆಯಿಂದ ಗಮನಿಸಿ ಅವುಗಳನ್ನು ತಮ್ಮ ಭಾಷೆಯ ತಂತ್ರವಾಗಿರಿಸಿಕೊಂಡು ಆ ದಿಸೆಯಲ್ಲಿ ಅನೇಕ ರಚನೆಗಳನ್ನು ಈ ಪರಿಸರದ ಶರಣರು ಮಾಡಿದರು. ಇಲ್ಲಿ ಬೈಗುಳಗಳು ಕೇವಲ ವಾಚ್ಯವಾಗದೇ ಧ್ವನಿಪೂರ್ಣವಾಗಿಅವರ ಅನುಭಾವದ ನಿಷ್ಠೆಗೆ ಸಾಂಕೇತಿಕ ಸ್ವರೂಪವನ್ನು ನೀಡುತ್ತದೆ. ಜೊತೆಗೆ ಮಧ್ಯ ಯುಗದಲ್ಲಿ ಭಾರತೀಯರ ಮನಸ್ಸುಗಳಲ್ಲಿ ರೂಪ ಗೊಂಡ ಅವಿವೇಕದ 'ವಿಕ್ಟೋರಿಯನ್ ಹೈಪೋಕ್ರಿಸಿ' ವಚನೇತರಪ್ರಕಾರಗಳಲ್ಲಿ ಕಂಡು ಬರುವುದಿಲ್ಲವೆಂಬುದು ಗಮನಾರ್ಹವಾಗಿದೆ.

ಜನರ ಅಜ್ಞಾನವನ್ನು ಖಂಡಿಸಿ ಅಂತಹ ಅಜ್ಞಾನಿಗಳನ್ನು ' ಸೂಳೆಮಕ್ಕಳಿಗೆಲ್ಲಿ ಭಕ್ತಿಯದೆಲ್ಲಿಯದೋ ' ೧ ಎಂದು ಘನಮಠ ನಾಗಭೂಷಣ ಶರಣರು ಹೇಳಿದರೆ, ಮತ್ತೊಂದೆಡೆ ಕೂಡಲೂರು ಬಸವಲಿಂಗ ಶರಣರು ' ಗಂಡಸ್ತನ ಇದ್ದು ಇಲ್ಲದಂತಾಗಲಿ......... ಕುಂಡೆ ಕುಂಡೆ ಸಾಲಗಾರರೊದೆಯಲಿ' ೨ ಎಂದು ಹೇಳುತ್ತಾರೆ. ಇದಲ್ಲದೇ ಗೊಬ್ಬೂರು ಹಂಪಣ್ಣನವರು ರಂಡಿ೩ ಯರೆಪುಕಳೆ೪ ಎಂಬ ಪದಗಳನ್ನು ಬಳಸುತ್ತಾರೆ.

ಧೋರಣೆ

ಬಸವೋತ್ತರ ಯುಗದಲ್ಲಿಯೇ ಬಹುತೇಕ ವಚನೇತರ ಪ್ರಕಾರ ಮೂಡಿ ಬಂದ ಕಾರಣ ಧೋರಣೆಯಲ್ಲಿ ಸಹಜವಾಗಿ ಭಿನ್ನತೆ ಕಂಡು ಬರುತ್ತದೆ. ಬಸವಪೂರ್ವಯುಗದಲ್ಲಿನ ವೈಯಕ್ತಿಕ ಹೋರಾಟದ ಸ್ವರೂಪ ಮತ್ತೆ ಇಲ್ಲಿ ಕಂಡು ಬರುತ್ತದೆ. ಈ ಪ್ರಕಾರದ ಪ್ರಮುಖ ಧೋರಣೆ ಆತ್ಮ ಪ್ರೇರಿತವಾಗಿದೆಂಬುದನ್ನು ಗಮನಿಸಬೇಕಾಗಿದೆ.

ವಚನೇತರ ಪ್ರಕಾರದಲ್ಲಿ ರಚಿಸಿದ ಉಳಿಮೇಶ್ವರ ಚಿಕ್ಕಯ್ಯ, ಹೇಮಗಲ್ಲ ಹಂಪ, ಘನಮಠ ನಾಗಭೂಷಣ ಶರಣರ ಧೋರಣೆ ವಚನ ಪ್ರಕಾರದ ಧೋರಣೆಯಾಗಿದ್ದರೂ ಹೇಮಗಲ್ಲರ ಕಾಲಕ್ಕೆ ಅದು ಸ್ವಲ್ಪ ಮಟ್ಟಿನ ಬದಲಾವಣೆ ಪಡೆದಿತ್ತು. ಏಕದೇವತಾ ನಿಷ್ಠೆಯ ಬದಲಾಗಿ ಬಹುದೇವತೋಪಾಸನೆ ಮೂಡಿ ಬಂದು ಅದು ಪರಿಸ್ಥಿತಿಯ ಅನಿವಾರ್ಯ ಹೊಂದಾಣಿಕೆಯಾಯಿತು. ಈ ಪ್ರಕಾರದ ಶರಣರಿಗೆ ಸಮಾಜ - ಸಮಾನತೆ ಬಹುಮುಖ್ಯವಾಗದೆ ಅನುಭಾವ ಬಹುಮುಖ್ಯವಾಯಿತು.

ಇಲ್ಲಿ ಹೆಣ್ಣಿನ ಬಗ್ಗೆ ಭಯ ಆತಂಕಗಳು ಮೂಡಿ ಆಕೆ ಮೋಕ್ಷಕ್ಕೆ ಮುಳ್ಳು ಎಂದು ಭಾವಿಸಲಾಯಿತು. ಸಂಸಾರವೆಂಬುದು ಸಾಗರವಾಯಿತು. ಇಷ್ಟಾದರೂ ಇಲ್ಲಿ ಸಮಾಜದ ಬಗ್ಗೆ ಸ್ವಲ್ಪ ಮಟ್ಟಿನ ಚಿಂತನೆ ನಡೆದು ತಮ್ಮದೇಯಾದ ಮಿತಿಯಲ್ಲಿ ಅವರು ಸಮಕಾಲೀನ ಸಮಾಜವನ್ನು ವಿಮರ್ಶಿಸಿದ್ದಾರೆ.

ವಚನ ಪ್ರಕಾರ ಪ್ರತಿ ಸಂಸ್ಕೃತಿಯನ್ನು ಹುಟ್ಟು ಹಾಕಿದರೇ ಈ ಪ್ರಕಾರ ಅತಂಹ ಯಾವ ಗೋಜಿಗೆ ಹೋಗದೆ ತನ್ನದೇಯಾದ ಮಿತಿಯಲ್ಲಿ ಇಹದ ಬದುಕನ್ನು ಪರದ ಬದುಕಿನ ಹಿನ್ನೆಲೆಯಲ್ಲಿ ಕಂಡು ಕೊಂಡು ಅನೇಕ ಸಂಸ್ಕೃತಿಗಳನ್ನು ತನ್ನ ಒಡಲಾಳದೊಳಗಿಟ್ಟುಕೊಂಡು ವೈವಿಧ್ಯತೆಯಲ್ಲಿ ಏಕತೆಯನ್ನು ಮೆರೆಯಿತು. ಸಾಂಕೇತಿಕವಾಗಿ ಎಲ್ಲವನ್ನು ನೋಡುವ ದೃಷ್ಟಿ ಇಲ್ಲಿ ಬೆಳೆದು ಬಂದಿತು. ಸಾಹಿತ್ಯದಲ್ಲಿನ ಮಡಿವಂತಿಕೆಯನ್ನು ಮೊದಲಬಾರಿಗೆ ಸ್ಪಷ್ಟವಾಗಿ ಝಾಡಿಸಿತು. ಅನೇಕ ಜನಪದ ಸಾಹಿತ್ಯ ಪ್ರಕಾರಗಳಿಗೆ ತಕ್ಕ ಧ್ವನಿಯನ್ನು ನೀಡಿದ ಪರಿಣಾಮವಾಗಿ ಆರತಿ ಹಾಡು , ಜೋಗುಳ ಪದಗಳು ಸಾಹಿತ್ಯಿಕ ಮನ್ನಣೆ ಪಡೆದವು. ಬೈಗುಳಗಳು ಸಹ ವಿಶಿಷ್ಟ ಸ್ಥಾನವನ್ನು ಪಡೆದದ್ದು ಈ ಪ್ರಕಾರದ ವೈಶಿಷ್ಟ್ಯವಾಗಿದೆ.

ಎಲ್ಲಾ ಜನಗಳು ಆಧ್ಯಾತ್ಮ ಜ್ಞಾನವನ್ನು ಪಡೆದು ಅನುಭಾವಿಗಳಾಗಬೇಕೆಂಬುದೇ ಈ ಪ್ರಕಾರದ ಶರಣರಲ್ಲಿ ಅವರ ಸಾಹಿತ್ಯದಲ್ಲಿ ಕಂಡು ಬರುವ ಪ್ರಮುಖ ಧೋರಣೆಯಾಗಿದೆ. ಹೊಸ ಸಮಾಜ ನಿರ್ಮಿಸಬೇಕೆಂಬ ಧೋರಣೆ ಇಲ್ಲಿರದೇ ವೈಯಕ್ತಿಕ ಬದುಕಿನ ಬಿಡುಗಡೆಯ ಚಿಂತನೆಯ ಸೆಲೆಯೇ ಇಲ್ಲಿ ಬಹು ಮುಖ್ಯವಾಗಿದೆ.

ಒಟ್ಟಾರೆ ಈ ಪ್ರಕಾರದ ಧೋರಣೆಯನ್ನು ಕ್ರೋಢಿಕರಿಸಿ ಹೇಳುವುದಾದರೆ ಮೋಕ್ಷದ ಕಲ್ಪನೆಯನ್ನು ಸಾರ್ವತ್ರಿಕರಣ ಗೊಳಿಸುವ ಒಂದಾಂಶದ ಧೋರಣೆಯೇ ಇಲ್ಲಿ ಪ್ರಮುಖವಾಗಿ ಕಂಡು ಬರುತ್ತದೆ.

೧: ಆಯ್ಕೆ : ಚೆನ್ನಬಸಪ್ಪ ಬೆಟ್ಟದೂರು - ಘ.ನಾ.ಶಿ. -ನುಡಿ೧-೫, ಪುಟ೧-೩

೨ : ಆಯ್ಕೆ : ಎಸ್.ಜಿ. ಸ್ವಾಮಿ - ಕೂ.ಬ.-ಪದ್ಯ೧೦ , ನುಡಿ೩, ಪುಟ೮

೩.: ಆಯ್ಕೆ : ರಾಮಸ್ವಾಮಿ ನುಲಿ-ಗೊ.ಹಂ.-ಪದ್ಯ೧೪, ನುಡಿ೪, ಪುಟ೧೩

೪ : ಅದೇ : ಪದ್ಯ೪೬, ಪಲ್ಲವಿ ಪುಟ೪೫

೪ :೪ ಮುಖಾ-ಮುಖಿ ಪ್ರಸಂಗಳು (ಸಂವಾದ)

ಈ ಪರಿಸರದ ಶರಣರ ಸಾಹಿತ್ಯವನ್ನು ಅವಲೋಕಿಸಿದಾಗ ಅನೇಕ ಮುಖಾ-ಮುಖಿ ಪ್ರಸಂಗಗಳು ನಮಗೆ ಕಂಡುಬರುತ್ತವೆ. ಶರಣರ ವಚನಗಳ ಅಂತ್ಯದ ಸಂಭೋಧನೆಗಳನ್ನು ಗಮನಿಸಿಯೇ ಅವುಗಳ ಆಶಯ -ಆಕೃತಿಗಿಂತ ಒಂದು ತಾತ್ವಿಕ ನಿಲುವಿನ ಹಿನ್ನೆಲೆಯಲ್ಲಿ ಪ್ರಭುವನ್ನು ಕೇಂದ್ರವಾಗಿರಿಸಿಕೊಂಡು ಅನೇಕ ಶರಣರ ಸಂಬಂಧಗಳನ್ನು ಆಯಾ ಶರಣರ ವಚನಗಳ ಹಿನ್ನೆಲೆಯಲ್ಲಿ ಪ್ರಸಂಗಗಳಾಗಿ ಶೂನ್ಯ ಸಂಪಾದನಾಕಾರರು ಕಟ್ಟಿ ಕೊಟ್ಟಿದ್ದಾರೆ.

ಶೂನ್ಯ ಸಂಪಾದನೆ ಕಾರರು ಗಮನಿಸದ ಅನೇಕ ಸಂವಾದಗಳು ಇನ್ನೂ ಹೇರಳವಾಗಿವೆ. ಅಂತಹ ಕೆಲವು ಪ್ರಸಂಗಳನ್ನು ನಾವು ಈ ಪರಿಸರದ ಶರಣರ ಶರಣ ಸಾಹಿತ್ಯವನ್ನು ಅವಲೋಕಿಸಿದಾಗ ತಿಳಿದುಬರುತ್ತದೆ. ಅಂತಹ ಕೆಲವು ಪ್ರಮುಖ ಪ್ರಸಂಗಗಳೆಂದರೆ:

೧ : ಢಕ್ಕೆಯ ಮಾರಯ್ಯ -ಶಂಕರ ದಾಸಿಮಯ್ಯರ ಪ್ರಸಂಗ

೨ : ಮುಕ್ತಾಯಕ್ಕರ ಸಂಬಂಧ ಪ್ರಸಂಗಗಳು

೩ : ಆಯ್ದಕ್ಕಿ ದಂಪತಿಗಳ ಪ್ರಸಂಗ

೪ : ಕೂಡಲೂರು ಬಸವಲಿಂಗ ಶರಣ- ಗೂಗಲ್ಲು ಪರಪ್ಪಯ್ಯ ರ ಪ್ರಸಂಗ

೫ : ಘನಮಠ ನಾಗಭೂಷಣ ಶರಣ-ನೀರಲಕೇರಿ ಬಸವಲಿಂಗ ಶರಣರ ಪ್ರಸಂಗ

೬ : ಇತರ ಕೆಲವು ಪ್ರಸಂಗಗಳು

ಶೂನ್ಯ ಸಂಪಾದನಾಕಾರರು ಕೇವಲ ಪ್ರಭುವನ್ನು ಕೇಂದ್ರೀಕರಿಸಿಕೊಂಡ ಕಾರಣ ಪ್ರಭುವಿನ ಪ್ರಭಾವಲಯಕ್ಕೆ ಬಂದಿರುವವರನ್ನು ಮಾತ್ರ ಗುರುತಿಸಲಾಗಿದೆ. ಹಾಗೆಯೇ ಪ್ರಭುವನ್ನು ಕಂಡಂತೆ ಇತರ ಶರಣರು ಪರಸ್ಪರರನ್ನು ಕಂಡು ಸಂವಾದ ನಡೆಸಿರಲೂ ಸಾಕು. ಅಂತಹ ಸಂವಾದ ಕೆಲ ಸಂದರ್ಭದಲ್ಲಿ ಸಾಹಿತ್ಯಿಕವಾಗಿ ನಡೆದಿರಲೂ ಬಹುದು ಅದನ್ನು ಸೂಚ್ಯವಾಗಿ ತಮ್ಮ ಅಭಿವ್ಯಕ್ತಿಗೆ ಬಳಸಿಕೊಂಡಿರಬಹುದಾದ ಸಾಧ್ಯತೆಗಳಿವೆಂಬುದನ್ನು ಲಕ್ಷ್ಯದಲ್ಲಿ ರಿಸಿ ಕೊಂಡು ಅಂತಹ ಕೆಲವು ಪ್ರಸಂಗಗಳ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ.

೧ : ಢಕ್ಕೆಯ ಮಾರಯ್ಯ -ಶಂಕರ ದಾಸಿಮಯ್ಯರ ಪ್ರಸಂಗ

ಇವರಿರ್ವರು ಸಮಕಾಲೀನರಾಗಿ ಬಸವಪೂರ್ವಯುಗದಲ್ಲಿ ಬಾಳಿ , ಅಂತಿಮ ಗುರಿ ಒಂದೇಯಾಗಿದ್ದರೂ ಮಾರ್ಗಗಳು ಬಹು ಭಿನ್ನವಾಗಿದ್ದವು.

ಶಂಕರ ದಾಸಿಮಯ್ಯರ ಅಹಂಕಾರವನ್ನು ಢಕ್ಕೆಯ ಮಾರಯ್ಯ ತೊಡೆದು ಹಾಕಿದ್ದನ್ನು ನಾವು ಹರಿಹರನಲ್ಲಿ ಕಾಣದೇ ಮುಂದಿನ ಅನೇಕ ಕೃತಿ ಕಾರಲ್ಲಿ ಗಮನಿಸುತ್ತೇವೆ. ಇದನ್ನು ಲಕ್ಷ್ಯದಲ್ಲಿ ರಿಸಿಕೊಂಡು ಇವರ ವಚನಗಳನ್ನು ಎಚ್ಚರಿಕೆಯಿಂದ ಗಮನಿಸಿದರೆ ಸಂವಾದ ಸ್ವರೂಪ ಸ್ಪಷ್ಟವಾಗಿ ಕಂಡುಬರುತ್ತದೆ. ನೇರವಾಗಿ ಇವರಲ್ಲಿ ಹೆಸರಿನ ಪ್ರಸ್ತಾಪ ಕಂಡುಬರದಿದ್ದರೂ ಹರಿಹರನಂತರ ಕವಿಗಳು ಕಟ್ಟಿಕೊಡುವ ಅಹಂಕಾರ ನಿರಸನ ಪ್ರಸಂಗ ನೋಡಿದರೆ ಇವರ ವಚನಗಳು ಅದಕ್ಕೆ ಸಮರ್ಥನೆ ನೀಡುತ್ತವೆ ಎನಿಸುತ್ತದೆ.

ಢಕ್ಕೆಯ ಮಾರಯ್ಯನಿಂದ ಅಹಂಕಾರ ನಿರಸನಗೊಂಡ ಬಗ್ಗೆ ಶಂಕರ ದಾಸಿಮಯ್ಯ ನೇರವಾಗಿ ಹೇಳದಿದ್ದರೂ ಅವರ ವಚನದಲ್ಲಿ ಕಂಡುಬರುವ ' ನಿಮ್ಮ ಶರಣರ ಸಂಗದಿಂದ ' ೧ ಎಂಬ ಸಾಲು ಗಮನಾರ್ಹವಾಗಿದ್ದು ಇಲ್ಲಿ ಶರಣರ ಸಂಗ ಎಂದರೆ ಢಕ್ಕೆಯ ಮಾರಯ್ಯನ ಸಂಗವೆಂಬುದು ಸೂಚ್ಯವಾಗಿ ತಿಳಿದುಬರುತ್ತದೆ. ಹಾಗೆಯೇ ' ತಿಟ್ಟನೇ ತಿರುಗಿ ತೊಟ್ಟನೇ ತೊಳಲಿ ಬಳಲುವರ ಕಳ ಹೇಸಿಕೆಯನೋಡಾ ' ೨ ಎಂಬ ಇನ್ನೊಂದು ವಚನದ ಸಾಲು ಇದು ಢಕ್ಕೆಯ ಮಾರಯ್ಯರು ಮಾರಿಯನ್ನು ಹೊತ್ತು ಊರೂರು ತಿರುಗುವುದನ್ನು ವಿಂಡಬಿಸುವಂತಿದೆ. ಶಿವನಿಷ್ಠನಾದ ಶಂಕರ ದಾಸಿಮಯ್ಯ ಹೀಗೆ ಹಂಗಿಸಿದ್ದು ಸಹಜವಾಗಿದೆ. ಆದರೆ ಶಂಕರ ದಾಸಿಮಯ್ಯರ ಹೆಚ್ಚಿನ ವಚನಗಳು ನಮಗೆ ಉಪಲಬ್ದವಾಗದ ಕಾರಣ ಈ ಕುರಿತು ಹೆಚ್ಚಿನ ಮಾಹಿತಿಗಳು ನಮಗ ಲಭ್ಯವಾಗದು. ಆದರೆ ಇದಕ್ಕೆ ಉತ್ತರವೆಂಬಂತೆ ತಾವು ಮಾರಿಯನ್ನು ಕುಣಿಸಿ ಕೈ ಗೊಂಡಿರುವ ಕಾಯಕ ಶರಣ ಧರ್ಮದಿಂದ ಹೊರತಾಗಿಲ್ಲ ಅದನ್ನು ಅರಿತು ನಡೆಯಬೇಕೆಂಬುದನ್ನು ತಿಳಿಸುವ ಕೆಲವು ವಚನಗಳನ್ನು ಢಕ್ಕೆಯ ಮಾರಯ್ಯರಲ್ಲಿ ಕಾಣಬಹುದು.

ಶಂಕರ ದಾಸಿಮಯ್ಯರ ವಿಡಂಬನೆಗೆ ಇವರು ' ಮರೆದವರ ಮನದಲೆಲ್ಲವೂ ಮಾರಿ ' ೩ ಮತ್ತು 'ಪ್ರಳಯ ಸಂವಾರವೆಂಬ ಬಳೆಯ ಕೈಯಲಿಕ್ಕಿ ' ೪ ಎಂಬ ವಚನಗಳ ಸಾಲುಗಳನ್ನು ನೋಡಿದರೆ ಇವು ಶಂಕರ ದಾಸಿಮಯ್ಯರನ್ನು ಕುರಿತು ಹಾಕಿದ ಸವಾಲುಗಳೆನ್ನಿಸುತ್ತವೆ.

---

೧ : ಸಂ: ಡಾ: ಬಿ.ಆರ್.ಹಿರೇಮಠ -ಸ.ವ.ಸಂ. -೯, ವಚನ ೫, ಪುಟ ೫೫

೨ : ಅದೇ: ವಚನ ೨ , ಪುಟ ೫೪

೩ : ಸಂ: ಡಾ: ಎಸ್.ವಿದ್ಯಾಶಂಕರ -ಸ.ವ.ಸಂ. -೭ , ವಚನ ೬೬, ಪುಟ ೩೦೩

೪ : ಅದೇ: ವಚನ ೩೮, ಪುಟ ೨೯೫

ಈ ಸವಾಲಿಗೆ ಮುಖಾ-ಮುಖಿಯಾದ ಸಂವಾದಗಳು ನಡೆದಿರಬೇಕೆನಿಸುತ್ತದೆ. ಈ ದಿಸೆಯಲ್ಲಿ ಸಾಹಿತ್ಯಿಕ ಸಂವಾದ ಗಮನಿಸಬೇಕಾದರೆ ಶಂಕರ ದಾಸಿಮಯ್ಯರ ವಚನಗಳು ಹೆಚ್ಚಾಗಿ ಕಂಡುಬರದಿದ್ದರೂ ಈ ಸಂವಾದ ಬಹು ಧೀರ್ಘವಾಗಿ ನಡೆದಿತ್ತೆಂಬುದಕ್ಕೆ ಢಕ್ಕೆಯ ಮಾರಯ್ಯರಲ್ಲಿ ಅನೇಕ ವಚನಗಳು ಕಂಡುಬರುತ್ತವೆ. ಮಾರಿಯ ನಿಜ ಸ್ವರೂಪವನ್ನು ಹೇಳುತ್ತಾ ಅದರ ವಾಸ್ತವ ಅರಿಯಿರಿ ಎಂದು ಶಂಕರ ದಾಸಿಮಯ್ಯರನ್ನು ಇವರು ಎಚ್ಚರಿಸುತ್ತಾರೆ. ೧ ಇದಕ್ಕೆ ಸಮರ್ಥನೆಯಾಗಿ ಮಾಯೆಯ ಸ್ವರೂಪ ಹಾಗೂ ಮಾಯೆ ಎಂತಹವರಲ್ಲಿದೆಂಬುದನ್ನು ಬಹು ಅರ್ಥಗರ್ಭಿತವಾಗಿ ಢಕ್ಕೆಯ ಮಾರಯ್ಯ ತಮ್ಮ ವಚನದಲ್ಲಿ ಹೀಗೆ ಹೇಳುತ್ತಾರೆ.

ಬ್ರಹ್ಮ ಪ್ರಳಯವಾದಲ್ಲಿ ತಾ ಕೆಟ್ಟುದಿಲ್ಲ ಮಾರಿ

ವಿಷ್ಣು ಮರಣವಹಲ್ಲಿ ತಾ ಸತ್ತುದಿಲ್ಲ ಮಾರಿ

ರುದ್ರ ಯುಗ ಜುಗಂಗಳ ಗೆಲುವಲ್ಲಿ ಮಾಯೆ

ಮನಸಿಜನ ಮನವೆಲ್ಲಿತ್ತು ಅಲ್ಲಿದ್ದಳು.

ಇಂತೀ ತ್ರಿವಿಧ ಮೂರ್ತಿಗಳಲ್ಲಿ

ಮರವೆಯ ದೆಸೆಯಿಂದ ಮಾರಿಯಾಯಿತ್ತು.

ಆ ಮಾರಿಯ ಹೊತ್ತು ಭವದ ಬಾಗಿಲಲ್ಲಿ ತಿರುಗಾಡುತ್ತಿದೇನೆ

ಢಕ್ಕೆಯ ಉಲು ಹಡಗುವುದಕ್ಕೆ ಮೊದಲೆ

ಭಕ್ತಿ ಮುಕ್ತಿ ನಯರಿದು ನಿಶ್ಚಯರಾಗಿ

ಕಾಲಾಂತಕ ಭೀಮೇಶ್ವರ ಲಿಂಗವನರಿಯಬಲ್ಲಡೆ೨ ಇಲ್ಲಿ ತಾವು ಹೊತ್ತು ತಿರುಗುವ ಮಾರಿ ಎಂತಹದು, ಅದನ್ನು ನಿವಾರಿಸಲು ತಮ್ಮ ಕೆಲಸ ಏನೆಂಬುದನ್ನು ಸೂಚ್ಯವಾಗಿ ಹೇಳುತ್ತಾ ಶಂಕರ ದಾಸಿಮಯ್ಯರಿಗೆ ಸರಿಯಾದ ಉತ್ತರ ನೀಡುತ್ತಾರೆ. ಇಷ್ಟಕ್ಕೆ ಸುಮ್ಮನಿರದೇ ನಿಜವಾದ ಶರಣರ ಸ್ಥಿತಿ ಎಂತಹದು ಎಂಬುದಕ್ಕೆ 'ಪಿಂಡದಲ್ಲಿ ಪ್ರಮಾಣಿಸುವ ಗುಣ ಸರ್ವಚೇತನದಲ್ಲಿ ಚೇತರಿಸುವಂತೆ ಚೈತನ್ಯಾತ್ಮಕ ನೀನೆ' ೩ ಎಂದು ಹೇಳುವ ಮೂಲಕ ಅಂತಹ ಸ್ಥಿತಿಯಲ್ಲಿ ತಮ್ಮ ವ್ಯಕ್ತಿತ್ವ ಏನೆಂಬುದನ್ನು ಬಹು ಮಾರ್ಮಿಕವಾಗಿ ತಿಳಿಸುತ್ತಾರೆ. ಹೀಗೆ ಢಕ್ಕೆಯ ಮಾರಯ್ಯರ ಮಾರಿಯ ನಿಜವನ್ನು ಅರಿಯದ ಶಂಕರ ದಾಸಿಮಯ್ಯ ಉರಿಗಣ್ಣನ್ನು ಕಳೆದು ಕೊಂಡುಮುಂದೆ ಅದನ್ನು ಅವರಿಂದ ಮರಳಿ ಪಡೆದು ಕೊಂಡು ಕ್ಷಮೆ ಕೇಳುವುದನ್ನು ಅನೇಕ ಪುರಾಣ ಕಾವ್ಯಗಳು ಕಟ್ಟಿ ಕೊಡುವುದನ್ನು ನಾವು ಸೂಚ್ಯವಾಗಿ ಢಕ್ಕೆಯ ಮಾರಯ್ಯರ ವಚನದಲ್ಲಿ ಕಂಡಂತೆ ಶಂಕರ ದಾಸಿಮಯ್ಯರಲ್ಲಿ ಕಾಣಲು ನಮಗೆ ವಚನಗಳ ಕೊರತೆ ಇದೆ. ಮುಂದಿನ ದಿನಗಳಲ್ಲಿ ಶಂಕರ ದಾಸಿಮಯ್ಯರ ವಚನಗಳು ಹೆಚ್ಚು ಉಪಲಬ್ಧವಾದಲ್ಲಿ ಈ ಸಂವಾದಕ್ಕೆ ಮತ್ತಷ್ಟು ಗಟ್ಟಿತನ ಬರಲುಸಾಧ್ಯವಿದೆ.

೨) ಮುಕ್ತಾಯಕ್ಕರ ಸಂಬಂಧ ಪ್ರಸಂಗಳು

ಈ ಗಾಗಲೇ ಮುಕ್ತಾಯಕ್ಕನಿಗೆ ಸಂಬಂಧಿಸಿದಂತೆ ಶೂನ್ಯ ಸಂಪಾದನೆಕಾರರು ಗುರುತಿಸುವ ಅಲ್ಲಮ ಪ್ರಭುವಿನೊಡನೆ ಆಕೆ ನಡೆಸಿದ ಸಂವಾದ ಇಡೀ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅಪೂರ್ವವಾಗಿದೆ. ಅದನ್ನು ಇಲ್ಲಿ ಪುನಃ ವಚನಗಳ ಮೂಲಕ ಪ್ರಸ್ತಾಪಿಸುವುದು ಅವಶ್ಯಕತೆವಿಲ್ಲವೆನಿಸಿದರೂ ಆ ಸಂವಾದದಲ್ಲಿನ ಆಂತರ್ಯದ ಸಾರವನ್ನು ಸ್ವಲ್ಪ ಮಟ್ಟಿಗೆ ಅವಲೋಕಿಸಬಹುದು. ಪ್ರಭುವಿನೊಡನೆ ಆಕೆ ನಡೆಸಿದ ಸಂವಾದ ಬಯಲಿನ ಸ್ವರೂಪದ್ದು ಅಂತೆಯೇ ಅಜಗಣ್ಣ ಸಾಧಿಸಿದ ನಿಲುವನ್ನು ಕುರಿತು ನಡೆಯುವ ನಿರ್ವಚನ ವ್ಯಾಖ್ಯಾನ ಬಹು ಮಾರ್ಮಿಕವಾಗಿ ಒಂದು ತಾತ್ವಿಕ ಹಂದರವನ್ನು ನಿರ್ಮಿಸುತ್ತ ಆಧ್ಯಾತ್ಮಿಕತೆಯ ವಾಸ್ತವ ಚಿತ್ರವನ್ನು ಇಲ್ಲಿ ಕಟ್ಟಿ ಕೊಡಲಾಗಿದೆ. ಈ ಪ್ರಸಂಗ ಮುಕ್ತಾಯಕ್ಕನ ದಿಟ್ಟ ನಿಲುವಿನ ಜೊತೆಗೆ ಆಕೆಯ ಆಧ್ಯಾತ್ಮಿಕತೆಯ ಆಳ , ಭೌದ್ಧಿಕ ಪ್ರಖರತೆ , ಸ್ವತಂತ್ರ ಶೀಲತೆಯನ್ನು ನಮಗೆ ಪರಿಚಯಿಸಿ ಪ್ರತಿ ಮಾತನ್ನು ಕಾವ್ಯವೆಂಬಂತೆ ತೆರೆದು ತೋರಿಸುತ್ತದೆ.

ಈಕೆ ಸತ್ಯಕ್ಕನ ಜೊತೆಗೆ ಮುಖಾ-ಮುಖಿ ಸಂವಾದ ನಡೆಸಿದ್ದನ್ನು ಶರಣ ಸಾಹಿತ್ಯದಲ್ಲಿ ಮೊದಲ ಬಾರಿಗೆ ಡಾ: ಬಸವಲಿಂಗ ಸೊಪ್ಪಿಮಠ ಗುರುತಿಸಿದ್ದಾರೆ. ಈ ಪ್ರಸಂಗ ನೋಡಿದಾಗ ತಂದೆ ಅಜಗಣ್ಣನ ಸಾವಿನಿಂದ ದುಃಖಿತಳಾದ ಈಕೆಯನ್ನು ಸತ್ಯಕ್ಕ ಸಮಾಧಾನ ಗೊಳಿಸಿದ್ದು ಕಂಡು ಬರುತ್ತದೆ.೪ ಇದಲ್ಲದೇ ಈಕೆ ತಂದೆಯಾದ ಅಜಗಣ್ಣರೊಡನೆ ಸಹಿತ ಸಂವಾದಕ್ಕೆ ಇಳಿದಿದ್ದಳು ಎಂಬುದನ್ನು ಆಕೆಯ 'ಅಂಧನ ಅಂಧಕ ಓಡಿದಿಂತರಬೇಕು' ೫ 'ಉಟ್ಟುದ ತೊರೆದವಂಗೆ ಊರೇನು ಕಾಡೇನು?' ೬ ಎಂಬ ವಚನಗಳಲ್ಲಿ ಕಾಣಬಹುದಾಗಿದೆ.

೧: ಸಂ: ಡಾ: ಎಸ್.ವಿದ್ಯಾಶಂಕರ-ಸ.ವ.ಸಂ. -೭, ವಚನ೫೫, ಪುಟ೯೫೩

೨ : ಅದೇ: ವಚನ ೫೬, ಪುಟ೯೫೩

೩: ಅದೇ: ವಚನ ೫೭, ಪುಟ೯೫೩

೪: ಡಾ: ಬಸವಲಿಂಗ ಸೊಪ್ಪಿಮಠ-ಆ.ಸಂಪುಟ೧, ಪುಟ ೭೬-೭೯ ಗಮನಿಸಿರಿ

೫: ಸಂ: ಡಾ: ವೀರಣ್ಣ ರಾಜೂರು-ಸ.ವ.ಸಂ. -೫, ವಚನ೧, ಪುಟ ೨೭೧

೬: ಅದೇ: ವಚನ೯, ಪುಟ ೨೭೩

ಮುಕ್ತಾಯಕ್ಕನಲ್ಲಿ ಕಂಡುಬರುವ ವಚನಗಳಿಗೆ ಪೂರಕವಾಗಿ ಅಜಗಣ್ಣನಲ್ಲಿ ಯಾವ ವಚನಗಳು ಎಂಬುದು ಸ್ಪಷ್ಟವಾಗುವುದಿಲ್ಲ. ಏಕೆಂದರೆ ಅಜಗಣ್ಣನ ಉಪಲಬ್ಧವಚನಗಳು ಬಹು ಕಡಿಮೆಯಾಗಿದೆ. ಇವರು ಪರಸ್ಪರ ಸಂವಾದ ನಡೆಸಿದ್ದರೆಂಬುದಕ್ಕೆ ಅಜಗಣ್ಣ ಹಾಗೂ ಮುಕ್ತಾಯಕ್ಕರ ವ್ಯಕ್ತಿತ್ವದ ಸಂಪರ್ಕಕ್ಕೆ ಬಂದ ಅನೇಕ ಶರಣರ ವಿಚಾರಗಳಿಂದ ತಿಳಿಯಬಹುದು. ಮುಕ್ತಾಯಕ್ಕ ತನ್ನ ಸಂಪರ್ಕಕ್ಕೆ ಬಂದ ಹಲವಾರು ಶರಣರನ್ನು ಸಂವಾದಕ್ಕೆಳೆದಿರಬಹುದು. ಆದರೆ ಸದ್ಯಕ್ಕೆ ಈ ಕುರಿತು ಏನನ್ನು ಹೇಳಲಾಗದು.

೩) ಆಯ್ದಕ್ಕಿ ದಂಪತಿಗಳ ಪ್ರಸಂಗ

ಈ ದಂಪತಿಗಳ ದಾಂಪತ್ಯದ ಹೊಂದಾಣಿಕೆ - ಕಾಯಕ ನಿಷ್ಠೆಯ ಅವರ ವಚನಗಳ ಆಶಯದ ಆಧಾರದಿಂದಲೇ ಶೂನ್ಯ ಸಂಪಾದನೆಕಾರರು ಇವರ ಪ್ರಸಂಗವನ್ನು ಕಟ್ಟಿ ಕೊಡುತ್ತಾರೆ.೧ ಈ ಪ್ರಸಂಗ ದಂಪತಿಗಳಿಬ್ಬರ ಕಾಯಕ ನಿಷ್ಠೆ ಹಾಗೂ ಸಮಕಾಲೀನ ಸಮಾಜದ ಅರ್ಥವ್ಯವಸ್ಥೆಯ ಸ್ವರೂಪವನ್ನು ನಮ್ಮ ಕಣ್ಮುಂದೆತೆರೆದು ತೋರಿಸುತ್ತದೆ. ಇಡೀ ಶರಣ ಸಂಕುಲವನ್ನೇ ಆಯ್ದಕ್ಕಿ ಲಕ್ಕಮ್ಮ ಎಚ್ಚರಿಸಿದ ರೀತಿ ಬಹು ನಾಟಕೀಯವಾಗಿ ಶೂನ್ಯ ಸಂಪಾದನೆಕಾರು ಕಟ್ಟಿ ಕೊಡುತ್ತಾರೆ.

ಆಯ್ದಕ್ಕಿ ದಂಪತಿಗಳ ಸ್ವಾಭಿಮಾನ - ಸೌಜನ್ಯ ಪೂರ್ಣವಾದ ಪರಿಪೂರ್ಣವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಂತಿದೆ ಈ ಪ್ರಸಂಗ. ಕಾಯಕ ಒಂದು ದೇಶದ ಸಮಗ್ರ ಬೆಳವಣಿಗೆಯಲ್ಲಿ ಅವಶ್ಯಕ. ಜೊತೆಗೆ ಮಾಡುವ ಕಾಯಕಕ್ಕೆ ಸರಿಯಾದ ಚೌಕಟ್ಟನ್ನು ಪ್ರಾಯೋಗಿಕವಾಗಿ ಕಲ್ಪಿಸಿ ಕೊಟ್ಟವರು ಆಯ್ದಕ್ಕಿ ದಂಪತಿಗಳು. ಇವರ ಸಂವಾದ ಸರಳವಾಗಿದ್ದರೂ ಅರ್ಥಗರ್ಭಿತವಾಗಿದ್ದು ತತ್ವವೊಂದಕ್ಕೆ ತಳಹದಿಯಾಗಿ ನಿಲ್ಲುತ್ತದೆ. ಈ ಕುರಿತು ಡಾ : ಮ.ನ.ಜವರಯ್ಯ ಹೇಳುವಂತೆ 'ಕಾಯಕ ಸಿದ್ಧಾಂತದ ಕುರಿತ ಜಿಜ್ಞಾಸೆಯಲ್ಲಿ ಮೈಮರೆತಿದ್ದ ಅಲ್ಲಮ ಬಸವಣ್ಣರನ್ನೂ ಮೊದಲುಗೊಂಡು ಇಡೀ ಶರಣ ಸಮೂಹವನ್ನೇ ಎಚ್ಚರಿಸಿ ಸಾಕ್ಷಾತ್ ಕಾಯಕದ ಮಹತ್ವವನ್ನೇ ಅರಿವೂ ಮಾಡಿಕೊಟ್ಟ ನಿಷ್ಠುರ ಕಾಯಕವಾದ ಲಕ್ಕಮ್ಮ. ಈ ಕಾಯಕದ ಮಹತ್ವವನ್ನು ಕೇವಲ ಅನ್ಯರಿಗೆ ಮಾತ್ರವಲ್ಲದೆ ಸ್ವತಃ ತನ್ನ ಗಂಡನಿಗೆ ಮನವರಿಕೆ ಮಾಡಿಕೊಟ್ಟಳೆಂಬುದರಲ್ಲಿ ಅವರ ವ್ಯಕ್ತಿತ್ವದ ಆಗಾಧತೆಯನ್ನೇ ಅರಿಯಬಹುದಾಗಿದೆ. ಎಂಟನೂರು ವರ್ಷಗಳಷ್ಟು ಪ್ರಾಚೀನಳಾದ ಲಕ್ಕಮ್ಮನು ಮಹಿಳೆಯಾಗಿ ಅವಳ ಪ್ರಜ್ಞೆ ಅದೆಷ್ಟು ಅರ್ವಾಚೀನ ವಾಗಿ ಚಿರನೂತನವೆನಿಸಿ ತೀರಾ ಸಮಕಾಲೀನವೆಂಬುವಷ್ಟರ ಮಟ್ಟಿಗೆ ಪ್ರಸ್ತುತವೆನಿಸಿ ಕಾಯಕದಲ್ಲಿ ಮೈಮರೆತ ತನ್ನ ಪತಿಯನ್ನೇ 'ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ' ಎಂಬ ಮಾತಿನ ಮೂಲಕ ಕಾಯಕದ ಬಗೆಗೆ ಪತಿಗಿಂತಲೂ ಮುಂದಾಗಿ ಚಿಂತಿಸಿದ ಅವಳ ಜಾಗೃತ ಪ್ರಜ್ಞೆಯನ್ನಾಗಲಿ ತನ್ನ ಪತಿ ಸೇರಿದ್ದ ಶರಣರ ಸಮೂಹಕ್ಕೆ ನಮಸ್ಕರಿಸಿ ತನ್ನ ವಿಚಾರ ಮಹತ್ವವನ್ನು ಅವರ ಮುಂದಿಡುವಲ್ಲಿನ ಅವಳ ಸಂದರ್ಭಾವಧಾರಣೆಯನ್ನಾಗಲಿ ಇಲ್ಲಿ ಅರಿಯಬಹುದಾಗಿದೆ. ಅದೇ ಸಂದರ್ಭದಲ್ಲಿ ಪತಿಯನ್ನು ಸಂಭೋದಿಸುವಾಗ 'ಹೋಗಯ್ಯ ಎನ್ನಾಳ್ದನೇ' ಎನ್ನುವಲ್ಲಿನ ಅವಳ ಮಾತಿನಿಂದ ಹೊರಡುವ ಸರಸ ಮತ್ತು 'ಶೂನ್ಯಸಂಪಾದನೆ'ಕಾರನು ಈ ಸಂದರ್ಭದಲ್ಲಿ ಸೃಷ್ಟಿಸಿದ ನಾಟಕೀಯ ಸನ್ನಿವೇಶ ಸಾಹಿತ್ಯಿಕವಾಗಿ ತುಂಬಾ ಗಮನಾರ್ಹವೆನಿಸದಿರಲಾರದು.' ೨ಎಂಬುದು ಬಹು ಸಮರ್ಪಕವಾಗಿದೆ

ಈ ಮುಖಾ-ಮುಖಿ ಪ್ರಸಂಗವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಸಾಂಸ್ಕೃತಿಕ ಭಿತ್ತಿ ತೆರೆದು ಕೊಳ್ಳುತ್ತಾ ಹೋಗುತ್ತದೆ. ಕಾಯಕ ಮತ್ತು ದಾಸೋಹಭಾವದ ವಾಸ್ತವಿಕ ಆಚರಣೆ ಸ್ವರೂಪ ನಮಗೆ ಇಲ್ಲಿ ಕಂಡು ಬರುತ್ತದೆ. ಅದುವರೆಗಿನ ಸನಾತನ ಸಂಸ್ಕೃತಿಯಪತಿಯೇ ಪರದೈವ. ಪತಿಯನ್ನು ಪ್ರಶ್ನಿಸಬಾರದೆನ್ನುವ ಬೇರುಗಳನ್ನೇ ಪಲ್ಲಟಗೊಳಿಸುವ ಮೂಲಕ ವೈಚಾರಿಕ ನಿಲುವನ್ನು ತಾಳಿ ವೈಯಕ್ತಿಕ ಬದುಕಿಗಿಂತ ಸಾಮಾಜಿಕ- ಸಾಮೂಹಿಕ ಜವಾಬ್ದಾರಿ ಬಹು ಮುಖ್ಯವೆಂಬ ಸಾರ್ವಕಾಲಿಕ ಸತ್ಯವನ್ನು ಪ್ರಾಯೋಗಿಕವಾಗಿ ಗಂಡನಿಗೆ ತಿಳಿಸಿಕೊಡುವುದನ್ನು ಈಪ್ರಸಂಗದ ಮೂಲಕ ಕಾಣಬಹುದಾಗಿದೆ.

೪) ಕೂಡಲೂರು ಬಸವಲಿಂಗ ಶರಣ -ಗೂಗಲ್ಲು ಪರಪ್ಪಯ್ಯ ಪ್ರಸಂಗ

ಬಸವೋತ್ತರ ಯುಗದಲ್ಲಿ ಸಮಕಾಲೀನರಾಗಿ ಬಾಳಿದ ಇವರಿಬ್ಬರೂ ಆಧ್ಯಾತ್ಮ ಜೀವಿಗಳು. ತಮ್ಮ ಬದುಕಿನಲ್ಲಿ ಅನುಭವಿಸಿದ ನೋವು - ನಲಿವುಗಳಿಗೆ ಸಾಹಿತ್ಯಿಕ ಸ್ಪಂದನೆಗಳನ್ನು ನೀಡಿದ್ದಾರೆ. ತಮ್ಮೊಳಗಿನ ಅಹಮಿಕೆಗಳನ್ನು ವಿವೇಕದಿಂದ ಪರಸ್ಪರರು ಅರಿತುಕೊಂಡು ನಿಜ ಜ್ಞಾನವನ್ನು ಪಡೆದಿದ್ದಾರೆ. ಇವರ ಮುಖಾ -ಮುಖಿ ಸಂವಾದವನ್ನು ಅವರ ಹಾಡುಗಳಿಂದಲೇ ಗುರಿತಿಸಬಹುದಾಗಿದೆ. ಗೂಗಲ್ಲು ಪರಪ್ಪಯ್ಯರೊಂದಿಗೆ ಪ್ರಭು ಮಾತಾನಾಡುತ್ತಿದ್ದನೆಂದು ತಿಳಿದ ಬಸವ ಲಿಂಗ ಶರಣರು ತಮಗೂ ಪ್ರಭುವಿನ ದರ್ಶನ ಮಾಡಿಕೊಡಲು ಕೇಳಿದಾಗ ಆಗ ಪರಪ್ಪಯ್ಯ ಆಯಿತೆಂದು ಹೇಳಿ ಎಂದಿನಂತೆ ಪ್ರಭುವಿನ ದರ್ಶನದ ಹಾಡಾದ 'ಮಾತಾನಾಡೋ ಮಹಾದೇವ ಮಾಯಾ ಕೋಲಾಹಲ ಅಲ್ಲಮಪ್ರಭು' ೩. ಹಾಡಿದರೂ ಪ್ರಭುವಿನ ದರ್ಶನವಾಗಲಿಲ್ಲ. ಆಗ ಪರಪ್ಪಯ್ಯ ತನ್ನ ಭಕ್ತಿಗೆ ಪ್ರಭುವು ಪ್ರಸನ್ನವಾಗಲಿಲ್ಲವೆಂದು ಕಲ್ಲಿಗೆ ತನ್ನ ತಲೆಯನ್ನು ಜಜ್ಜಿಕೊಳ್ಳಹತ್ತಿದ್ದನು ಇದನ್ನು ಗಮನಿಸಿದ ಬಸವಲಿಂಗ ಶರಣರು ಈತನನ್ನು ತಡೆದು 'ನೀನು ಬರಿ ಕಲ್ಲು ಅಲ್ಲಮನನನ್ನು ಪೂಜಿಸಿದ್ದೀಯಾ, ನಿಜವಾದ ಅಲ್ಲಮನನ್ನು ಕಾಣಬೇಕೆಂದು ಹೇಳಿ ಕಲ್ಲು ಪೂಜೆಯ ಮಾಡಿ ಕಲ್ಲಿನಂತಾಗುವರೇ ಕೇಳ ಕಲ್ಲೇ' ೪. ಎಂಬ ಹಾಡನ್ನು ಹಾಡುತ್ತಾ ಅಲ್ಲಮನ ನಿಜ ಸ್ಥಿತಿಯನ್ನು ತಿಳಿಸುತ್ತಾರೆ. ಅಂತಹ ಸ್ಥಿತಿ ಅರಿಯ ಬೇಕಾದರೆ ಅದನ್ನು ಕಾಣುವ ಹೃದಯವಿರಬೇಕು. ಅದು ಆತ್ಮೀಕರಿಸಿಕೊಂಡು ನೋಡಿದರೆ ನಮ್ಮೊಳಗಿನ ಚೇತನ ಸ್ವರೂಪವೇ ನಿಜವಾದ ಅಲ್ಲಮನಾಗುತ್ತಾನೆಂದೇಳಿ ನಿಜವಾದ ಜ್ಞಾನವನ್ನು ಮೂಡಿಸುತ್ತಾರೆ.

---

೧ : ಸಂ:ಸಂ.ಶಿ.ಭೂಸನೂರ ಮಠ-ಗೂ.ಸಿ.ಪ್ರ.ಶೂ. ಪುಟ ೨೨೪-೨೩೫ರವರೆಗೆ ಗಮನಿಸಿರಿ

೨ : ಡಾ : ಮ.ನ.ಜವರಯ್ಯ - ದ.ಶ.ಶ.ಅ.ಪುಟ೨೨೦-೨೨೧

೩. ಸಂ. ಡಾ: ಬಸವಲಿಂಗಸೊಪ್ಪಿಮಠ - ಸೂಗೂರ ಸಂಪದ ಪುಟ -೮೨

೪. ಆಯ್ಕೆ : ಎಸ್. ಜಿ. ಸ್ವಾಮಿ - ಕೂ.ಬ. - ಪದ್ಯ ೫೭ ನುಡಿ ೧-೧೩ ಪುಟ ೪೭ - ೪೮

ಇವರಿಬ್ಬರ ಬಗ್ಗೆ ಮತ್ತೊಂದು ಪವಾಡ ಕತೆ ಕೇಳಿ ಬರುತ್ತದೆ. ಒಂದು ಸಲ ಕೂಡಲೂರು ಬಸವಲಿಂಗ ಶರಣರು ಪರಪ್ಪಯ್ಯನವರಿಗೆ ನಾನು ಬೇಗ ಸತ್ತರೆ ನಿನಗೆ ತಿಳಿಸುವುದಕ್ಕೆ ನಾನು ವ್ಯವಸ್ಥೆ ಮಾಡುತ್ತೇನೆ. ನೀನು ಬೇಗ ಸತ್ತರೆ ನನಗೆ ತಿಳಿಸುವ ವ್ಯವಸ್ಥೆ ಮಾಡಬೇಕೆಂದಾಗ ಪರಪ್ಪಯ್ಯ ಅದಕ್ಕೆ ಸಮ್ಮತಿಸಿದ್ದರು. ಮುಂದೆ ಪರಪ್ಪಯ್ಯ ಮೊದಲು ಸತ್ತಾಗ ಬಸವ ಲಿಂಗರು ಅಂತ್ಯ ಕ್ರಿಯೆಗೆ ಬಂದರು. ಪರಪ್ಪಯ್ಯ ದೇಹದ ಮುಂದೆ ಅವರ ಬಂಧುಗಳು ರೋಧಿಸುತ್ತಿದ್ದರು. ಆಗ ಬಸವ ಲಿಂಗ ಶರಣರು ಒಂದು ಲೋಟ ನೀರು ತರಿಸಿ ಅದರಲ್ಲಿ ವಿಷ ಬೆರೆಸಿದ ಬಳಿಕ ಪರಪ್ಪಯ್ಯ ಬಂಧುಗಳಿಗೆ ಇದನ್ನು ಯಾರಾದರು ಕುಡಿದರೆ ಪರಪ್ಪಯ್ಯ ಜೀವಂತ ಬದುಕುತ್ತಾನೆಂದು ಹೇಳಿದರು . ಯಾರೂ ಕುಡಿಯಲು ಮುಂದೆ ಬರಲಿಲ್ಲ. ಆಗ ಬಸವ ಲಿಂಗ ಶರಣರು ಸತ್ತ ದೇಹದ ಜೊತೆಗೆ ಮಾತಾಡಿ ನೋಡು ಪರಪ್ಪಯ್ಯ ಇವರೆಲ್ಲ ತಾತ್ಕಾಲಿಕವೆಂದು ನಿನಗೆ ಆ ದಿನವೇ ಹೇಳಿದ್ದೇನಲ್ಲವೇ ಎಂದು ತಿಳಿಸಿ ಆ ವಿಷವನ್ನು ತಾವು ಕುಡಿದು ಅಲ್ಲಿಂದ ಹೋಗುತ್ತಾರೆ. ಈ ಪವಾಡ ಕತೆಗೆ ಸಂಬಂಧಿಸಿದಂತೆ ಇವರಿಬ್ಬರ ಹಾಡುಗಳಲ್ಲಿ ಈ ಕುರಿತು ಯಾವುದೇ ಮಾಹಿತಿ ಕಂಡು ಬರುವುದಿಲ್ಲ. ಆ ಕಾರಣ ಇದನ್ನು ಅಲ್ಲಿಯ ತನಕ ಪವಾಡ ಕಥೆಯೆಂದು ನಂಬಬಹುದು ಹೊರತು ಇದೇ ಸತ್ಯವೆಂದು ಹೇಳಲಾಗದು. ಒಟ್ಟಾರೆ ಇವರ ಮುಖಾ - ಮುಖಿ ಸಂಘರ್ಷವು ಆಧ್ಯಾತ್ಮಿಕ, ತಾತ್ವಿಕ ತಿರುಳನ್ನು ಪಡೆದು ಕೊಂಡಿದೆ.

೫. ಘನ ಮಠದ ನಾಗಭೂಷಣ ಶರಣರು ಹಾಗೂ ನೀರಲಕೇರಿ ಬಸವಲಿಂಗ ಶರಣರ ಪ್ರಸಂಗ

ಇವರಿಬ್ಬರೂ ಸಮಕಾಲೀನರಾಗಿ ಬಾಳಿದವರು. ನಾಗಭೂಷಣ ಶರಣರು ಆಂಧ್ರದಲ್ಲಿ ಹುಟ್ಟಿ ಕನ್ನಡ ಶರಣತ್ವವನ್ನೇ ಜೀವಾಳವಾಗಿರಿಸಿಕೊಂಡರೆ ಮತ್ತೊಬ್ಬರು ರ ನೆಲದಲ್ಲಿಯೇ ಹುಟ್ಟಿ ಶರಣತ್ವದ ಜೊತೆಗೆ ಸಮನ್ವಯ ಬದುಕಿನ ಸಾಕಾರವಾಗಿ ಬಾಳಿದವರು.

ನೀರಲಕೇರಿ ಬಸವ ಲಿಂಗ ಶರಣರ ಮಹಿಮೆ ಕೇಳಿ ಘನಮಠದ ನಾಗಭೂಷಣ ಶರಣರಿಗೆ ಅವರನ್ನು ಕಾಣಬೇಕೆಂದು ಬಯಸಿ ನಿರಲಕೇರಿಗೆ ಬರುತ್ತಾರೆ. ಆಗ ಊರಿನ ಹಾದಿಯಲ್ಲಿ ಎಮ್ಮೆಗಳನ್ನು ಕಾಯುತ್ತ ನಿಂತ ಬಸವ ಲಿಂಗ ಶರಣರನ್ನು ಗುರುತಿಸದೇ ಅವರ ಬಗ್ಗೆ ವಿಚಾರಿಸುತ್ತಾರೆ. ಇವರಿಬ್ಬರ ಮುಖಾ-ಮುಖಿ ಸಂವಾದವನ್ನು ಪುರಾಣಕಾವ್ಯದಲ್ಲಿ ಕಂಡು ಬರುತ್ತದೆ. ಅದು ಹೀಗಿದೆ:

ಅಣ್ಣಗಳೆ ಹೆಸರಾಗಿಹರು ಈ ।

ಕನ್ನಡದ ನಾಡಿನೊಳು ಷಟ್‌ಸ್ಥಲ ।

ವನ್ನು ಬಲ್ಲಿದ ಬ್ರಹ್ಮ ಜ್ಞಾನಿಯು ಬಸವ ಲಿಂಗರನು ॥

ಎನ್ನ ಮನದಾಶೆಯದು ದರ್ಶನ ।

ವನ್ನು ಮಾಡಲು ಹೊರಟಿರುವೆ ನಿ ।

ವಿನ್ನು ಮುಂದಿನ ಮಾರ್ಗ ದರ್ಶನ ಮಾಡಿಸಿರಿ ಗುರುವೆ ॥೧ ಎಂದು ಘನಮಠ ನಾಗಭೂಷಣರು ಕೇಳಿದ್ದಕ್ಕೆ ನೀರಲಕೇರಿ ಬಸವಲಿಂಗ ಶರಣರು ತಾವೇ ಅವರೆಂಬುದನ್ನು ಪರಿಚಯಿಸುತ್ತಾ ಹೀಗೆ ಹೇಳುತ್ತಾರೆ.

ತಮ್ಮ ಕೇಳೈ ನಿತ್ಯ ಕಾಯಕ ।

ವೆಮ್ಮದರು ಗುರುಮಠಕ್ಕೆ ಬರುತಿಹ ।

ಬ್ರಹ್ಮ ಜಿಜ್ಞಾಸೆಗಳ ಸೇವೆಯ ಮುಖ್ಯ ಕಾಯಕವು ॥

ಹಮ್ಮು ಬಿಮ್ಮುಗಳೆಂಬ ವರಡೀ ।

ಎಮ್ಮೆಗಳ ಕಾಯುತ್ತಾ ಲಿರುವೆವು ।

ಬ್ರಹ್ಮ ಜ್ಞಾನಿಯೆ ನಿನಗ ಸ್ವಾಗತ ನಮ್ಮ ಮಠದೆಡೆಗೆ ॥೨ ಹೀಗೆ ಪರಸ್ಪರರು ತಮ್ಮ ಪರಿಚಯ ಮಾಡಿಕೊಂಡು ಆಧ್ಯಾತ್ಮ ತೃಷೆಯನ್ನು ಹಿಂಗಿಸುಕೊಳ್ಳುತ್ತಾರೆ. ಶರಣ ತತ್ವಗಳ ಬಗ್ಗೆ ಚರ್ಚಿಸುತ್ತಾರೆ ಎಂಬುದನ್ನು ಪುರಾಣದಲ್ಲಿ ಗುರುತಿಸ ಬಹುದು. ೩.

ಈ ಪೌರಾಣಿಕ ಸಂಗತಿಗಳಿಗೆ ಪೂರಕವಾಗಿ ನೀರಲಕೇರಿ ಬಸವಲಿಂಗ ಶರಣರ ತತ್ವ ಪದಗಳಲ್ಲಿ ಇಂತಹ ಸುಳಿವು ತಿಳಿದು ಬರುತ್ತದೆ.

---

೧. ಅಮರನಾಥ ಶಾಸ್ತ್ರಿಗಳು - ಶ್ರೀ. ಘ.ಶಿ.ಪು.ಸಂಧಿ ೧೫ ಪದ್ಯ ೭೧, ಪುಟ ೨೦೮

೨. ಅದೇ ಸಂಧಿ ಪದ್ಯ ೭೨ ಪುಟ ೨೦೮

೩. ಅದೇ ಸಂಧಿ ಪದ್ಯ ೭೩ - ೮೩ ಪುಟ ೨೦೮ - ೨೧೦

‘ ತಮ್ಮ ಕೇಳೋ ಎನ್ನ ಉದ್ಯೋಗ ’ ೧. ಎಂಬ ತತ್ವ ಪದಲ್ಲಿ ಇವರು ತಮ್ಮ ಅನುಭವ ಸ್ಥಿತಿಯ ನಿಲುವನ್ನು ಘನಮಠರಿಗೆ ಪರಿಚಯಿಸುತ್ತಾರೆ. ಹಾಗೆಯೇ ಮತ್ತೊಂದು ಕಡೆಗೆ ಘನಮಠ ನಾಗಭೂಷಣ ಶರಣರ ವ್ಯಕ್ತಿತ್ವವನ್ನು ಕುರಿತು ಹೋಗಳುತ್ತಾರೆ೨. ಅಂತೆಯೇ ಘನಮಠರು ಇವರನ್ನು ಕುರಿತು‘ ಶರಣೆಂಬೆ ಶರಣೆಂಬೆ’ ೩. ಎಂಬ ಹಾಡಿನಲ್ಲಿ ಇವರ ವಿರಕ್ತ ಸ್ಥಿತಿಯನ್ನು ಪರಿಚಯಿಸಿ ಕೊಡುತ್ತಾರೆ.

ಹೀಗೆ ಇವರ ಹಾಡುಗಳನ್ನು ಗಮನಿಸಿದಾಗ ಅಲ್ಲಿ ಇವರಿರ್ವರು ಪರಸ್ಪರ ಭೇಟಿಯಾಗಿ ಸಂವಾದ ನಡೆಸಿದ್ದರೆಂಬ ಪುರಾಣ ಕಾವ್ಯಗಳ ಹೇಳಿಕೆಗೆ ಪುಷ್ಠಿ ದೊರೆಯುತ್ತದೆ.

೬. ಇತರ ಪ್ರಸಂಗಗಳು

ಈ ಪರಿಸರದ ಶರಣರಾದ ಶಂಕರದಾಸಿಮಯ್ಯರು ಜೇಡರ ದಾಸಿಮಯ್ಯರೊಡನೆ ನಡೆಸಿದ ಸಂವಾದದ ಮುಖಾ-ಮುಖಿ ಪ್ರಸಂಗವನ್ನು ಇವರ ಸಾಹಿತ್ಯಾಂಶಗಳಿಂದ ಕಾಣದಿದ್ದರೂ ಸಮಕಾಲೀನ ವಚನಗಳಲ್ಲಿ ಕಂಡು ಬಂದರೂ ಇವರ ಸಂವಾದದ ಬಗ್ಗೆ ಇವರಲ್ಲಿ ಯಾವುದೇ ಹೆಚ್ಚಿನ ಮಾಹಿತಿಗಳು ಕಂಡು ಬರುವುದಿಲ್ಲ. ಈ ಕುರಿತಂತೆ ಹರಿಹರನ ರಗಳೆಯಲ್ಲಿ ಮಾತ್ರ ಇವರ ಭೇಟಿಯ ಚಿತ್ರವನ್ನು ಸೊಗಸಾಗಿ ಹರಿಹರ ಚಿತ್ರಿಸಿದ್ದಾನೆ. ೪. ಆನಂತರದ ಪಂಡಿತ ಮಲ್ಲಿಕಾರ್ಜುನ, ಭೀಮ ಕವಿ, ಲಕ್ಕಣ್ಣ ದಂಡೇಶ, ಕಿಕ್ಕೇರಿ ಆರಾಧ್ಯ ನಂಜುಂಡ ಮೊದಲಾದವರು ಈ ಘಟನೆಯನ್ನು ಪ್ರಸ್ತಾಪಿಸಿ ಸಂವಾದ ಕಟ್ಟಿಕೊಟ್ಟರು ಅದು ಹರಿಹರನಿಗಿಂತ ಬಿನ್ನವಾಗಿಲ್ಲ . ಈ ದಿಸೆಯಲ್ಲಿ ಇನ್ನೂ ಶೋಧನೆ ಅವಶ್ಯಕವಾಗಿದೆ.

ಬಸವ ಯುಗದಲ್ಲಿ ಬಿಬ್ಬಿ ಬಾಚಯ್ಯ - ಚೆನ್ನವೀರ ಶರಣರು, ಸುಂಕದ ಬಂಕಣ್ಣ - ಚೆನ್ನವೀರ ಶರಣರು ಇವರ ಬಗ್ಗೆ ಸಂವಾದದ ಸ್ವಲ್ಪ ಸುಳಿವು ಕಂಡು ಬಂದರೂ ಅದನ್ನು ನಿಖರವಾಗಿ ಸದ್ಯಕ್ಕೆ ಹೇಳಲು ಸಾಧ್ಯವಾಗುತ್ತಿಲ್ಲ.

ಅಂತೆಯೇ ಬಸವೋತ್ತರ ಯುಗದಲ್ಲಿ ಹಟ್ಟಿಯ ಲಿಂಗಾವಧೂತರು - ಸಿದ್ಧಾರೂಢರನ್ನು ಮತ್ತು ಬಲ್ಲಟಗಿ ಶರಣರನ್ನು ಕಂಡದ್ದು, ಜಲದುರ್ಗ ಶರಣರ ಸಂವಾದಗಳು, ಹೀರಾದ ಶರಣರ ಸಂವಾದಗಳು ಇತ್ಯಾದಿಗಳನ್ನು ಕೇವಲ ನಾವು ಹೆಸರಿಗೆ ಮಾತ್ರ ಉಲ್ಲೇಖಿಸ ಬಹುದಾಗಿದೆ ಹೊರತು ಇವುಗಳ ಕುರಿತು ಸದ್ಯಕ್ಕೆ ಹೆಚ್ಚಿನ ಮಾಹಿತಿಗಳು ಕಂಡು ಬರುತ್ತಿಲ್ಲ. ಕೇವಲ ಮೌಖಿಕವಾಗಿ ಇವರ ಬಗ್ಗೆ ಅನೇಕ ಕಥೆಗಳು - ಐತಿಹ್ಯಗಳು ಮಾತ್ರ ಕೇಳಿ ಬರುತ್ತವೆ.

---

೧. ಸಂ. ಡಾ: ಬಸವಲಿಂಗ ಸೊಪ್ಪಿಮಠ - ನೀ. ಬ.ಶಿ. ಸ್ವ. ಪದ್ಯ ೧೬೯ ನುಡಿ ೧-೩. ಪುಟ ೯೪

೨. ಅದೇ ಪದ್ಯ ೧೫೩ ನುಡಿ ೧- ೩ ಪುಟ ೮೩-೮೪

೩. ಆಯ್ಕೆ : ಚೆನ್ನಬಸಪ್ಪ ಬೆಟ್ಟದೂರು - ಘ.ನಾ.ಶಿ. ನುಡಿ ೧-೨೫, ಪುಟ ೩೫-೩೭

೪. ಸಂ. ಡಾ: ಎಂ.ಎಂ.ಕಲಬುರ್ಗಿ - ಹ.ರ.ಸ್ಥಲ ೨, ಪುಟ ೨೮೧- ೨೮೨

ಅಧ್ಯಾಯ ೦೫

ರಾಯಚೂರು ಪರಿಸರದ ಶರಣ ಸಾಹಿತ್ಯದಲ್ಲಿ ನಿರೂಪಿತವಾದ ಸಮಾಜ

೫ : ೧ ಸಾಮಾಜಿಕ ಹಿನ್ನೆಲೆ : ಸ್ಥಿತಿ - ಗತಿ

ರಾಯಚೂರು ಪರಿಸರದ ಶರಣರ ಸಾಮಾಜಿಕ ಹಿನ್ನೆಲೆಯ ಸ್ಥಿತಿ-ಗತಿ ಒಟ್ಟಾರೆ ನಾಡಿನ ದೃಷ್ಟಿಗಿಂತ ಭಿನ್ನವಾಗಿರಲಿಲ್ಲವಾದರೂ, ಕಲ್ಯಾಣ ಶರಣರ ಕಾಲದ ಸಾಮಾಜಿಕ ಹಿನ್ನೆಲೆ ಕೇವಲ ಬಸವ ಯುಗಕ್ಕೆ ಸಿಮೀತವಾದರೂ, ತದನಂತರ ಬಸವೋತ್ತರ ಯುಗದಲ್ಲಿನ ಸಾಮಾಜಿಕ ಹಿನ್ನೆಲೆಯ ಸ್ಥಿತಿಗತಿಗಳೇ ಬಹು ಭಿನ್ನವಾಗಿದ್ದವು.

ಈ ಪರಿಸರ ಶರಣರು ಹಲವಾರು ಸಮಸ್ಯೆಗಳನ್ನು ಎದುರಿಸುವ ಜೊತೆಗೆ ಆತಂಕಗಳ ನೆರಳಿನಲ್ಲಿಯೇ ಬದುಕಬೇಕಾಗಿತ್ತು. ಬಸವೋತ್ತರಯುಗದ ಶರಣ ಕಾಲದಲ್ಲಿ ಇಸ್ಲಾಂ ಮತ್ತು ಹಿಂದೂ ಧರ್ಮಗಳು ಮುಖಾ ಮುಖಿಯಾಗಿ ನಿಂತು ಪೈಪೋಟಿ ನಡೆಸ ತೊಡಗಿದ್ದವು. ಮುಸ್ಲಿಂ ಧಾಳಿಯಿಂದ ಬಹುತೇಕರೂ ತತ್ತರಿಸ ತೊಡಗಿದ್ದರೂ, ಇಸ್ಲಾಂ ಆಗಿ ಪರಿವರ್ತನೆಯಾಗಬೇಕು - ಇಲ್ಲವೇ ಸಾಯಬೇಕು. ಎರಡರಲ್ಲಿ ಒಂದನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಈ ಪರಿಸರದ ಶರಣರ ಮೇಲೆ ಸಹಜವಾಗಿ ಅವರ ಸಾಹಿತ್ಯದ ಮೇಲಾಗಿ, ಇಂತಹ ಸಂದಿಗ್ಧ ಸಮಯದಲ್ಲಿ ಶರಣರು ಇಸ್ಲಾಂ-ಹಿಂದೂಗಳ ನಡುವೆ ಸಾಮರಸ್ಯ ಮೂಡಿಸಬೇಕಾದ ಅನಿವಾರ್ಯತೆವುಂಟಾಗಿ ಆ ದಿಸೆಯಲ್ಲಿ ತಮ್ಮ ಸಾಹಿತ್ಯ ರಚನೆಗೆ ಕೈ ಹಾಕಿದರು.

ಈ ಪರಿಸರದ ಶರಣರು ಸಾಹಿತ್ಯ ರಚನೆಗೆ ತೊಡಗಿದಾಗ ಇಲ್ಲಿನ ಸಾಮಾಜಿಕ ಹಿನ್ನೆಲೆ - ಸ್ಥಿತಿ ಗತಿಗಳನ್ನು ಅವಲೋಕಿಸಿದರೆ:

ವೈದಿಕ ಪರಪಂರೆಯನ್ನು ಸಾರ್ವತ್ರೀಕರಣಗೊಳಿಸಿ ಅದನ್ನೇ ಇಡೀ ಜನ ಸಮುದಾಯವೇ ಒಪ್ಪಿಕೊಂಡು ಬದುಕು ಸಾಗಿಸಬೇಕೆಂದು ನಿರ್ಧರಿಸಿ ಆ ದಿಸೆಯಲ್ಲಿ ಒಂದು ವರ್ಗ ನಿರೂಪಿಸಿದ ನಂಬಿಕೆ - ಆಚರಣೆಗಳನ್ನೇ ಒತ್ತಾಯ ಪೂರ್ವಕವಾಗಿ ಎಲ್ಲರ ಮೇಲೂ ಹೇರಲೂ ನಡೆಸಿದ ವ್ಯವಸ್ಥಿತವಾದ ಸಂಚು ಒಂದೆಡೆಯಾದರೆ, ಇನ್ನೊಂದೆಡೆ ತಮ್ಮದೇ ಆದ ಸೀಮಿತ ವಲಯದಲ್ಲಿ ತಾವೇ ಕಲ್ಪಿಸಿಕೊಂಡ ಆಚರಣೆ-ದೈವ - ನಂಬಿಕೆಗಳಿಗೆ ಬದ್ಧರಾಗಿ ಆ ದಿಸೆಯಲ್ಲಿ ಅವಮಾನವೀಯ ಕೃತ್ಯಗಳೇ ಬಾಳಿನ ಯಶಸ್ಸಿಗೆ ಹಾದಿ ಎಂದು ನಂಬಿಕೆಂಡ ಕೆಳವರ್ಗ ಮತ್ತೊಂದೆಡೆ. ಇಂತಹ ಸ್ಥಿತಿ ಬಸವ ಪೂರ್ವ - ಬಸವ ಯುಗದಲ್ಲಿ ಕಂಡು ಬಂದಿತು.

ಬೌದ್ಧರ ಪ್ರಭಾವಲಯಕ್ಕೆ ಈ ಪರಿಸರ ಪ್ರಾಚೀನ ಕಾಲದಲ್ಲಿ ವ್ಯಾಪಿಸಿತ್ತೆಂಬುದರ ಬಗ್ಗೆ ಕೆಲವು ಶಾಸನಗಳ - ಅವಶೇಷಗಳ ಉಲ್ಲೇಖ ಬಿಟ್ಟರೆ ಮತ್ತೇನು ಕಾಣಸಿಗದು. ಇಡೀ ಕನ್ನಡ ನಾಡಿನ ಪರಿಸರದಿಂದಲೇ ದೂರವಾಗಿದ್ದ ಬೌದ್ಧರ ಪ್ರಭಾವ ಈ ಪರಿಸರದಿಂದ ಮಧ್ಯ ಕಾಲದ ಹೊತ್ತಿಗೆ ಕಣ್ಮರೆಯಾಗಿತ್ತು.

ಜೈನರ ಪ್ರಭಾವ ಕ್ಷೀಣಿಸಲಾರಂಭಿಸಿದರೂ ಕೆಲವು ಅರಸರು ಅದಕ್ಕೆ ರಾಜಾಶ್ರಯ ನೀಡಿದ್ದರಿಂದಲೇ ತನ್ನ ಅಸ್ತಿತ್ವವನ್ನು ಅದು ಉಳಿಸಿ ಕೊಂಡಿತ್ತು.

ಶಂಕರ ದಾಸಿಮಯ್ಯರ ಕಾಲದಲ್ಲಿ ಜೈನರ ಪ್ರಭಾವವಿತ್ತೆಂಬುದು ನಮಗೆ ತಿಳಿದುಬರುತ್ತದೆ. ಜೈನ -ಶೈವರ ನಡುವೆ ಸಂಘರ್ಷದ ವಾತಾವರಣವೇ ರೂಪಿತವಾಗಿತ್ತು.

ಬೌದ್ಧ-ಜೈನ ಧರ್ಮಗಳು ಆ ಜನಾಂಗದ ರೀತಿ -ಆಚರಣೆಗಳು ಉತ್ಕೃರ್ಷಾವಸ್ಥೆಯಲ್ಲಿದ್ದಾಗ ವೈದಿಕರು ತಮ್ಮ ನೆಲೆ ಕಳೆದು ಕೊಂಡಿದ್ದರೂ, ಆದರೆ ಅದೇ ವೈದಿಕರು ಮತ್ತೊಮ್ಮೆ ಮಧ್ಯಕಾಲದಲ್ಲಿ ಈ ಭಾಗದಲ್ಲಿಯೂ ತಲೆಯೆತ್ತಿದಾಗ ಇಲ್ಲಿಯ ಪರಿಸರದ ಸಾಮಾಜಿಕ ಸ್ಥಿತಿಗತಿಯ ಚಿತ್ರವೇ ಬದಲಾಗಿ ಹೋಯಿತು.

ವೈದಿಕರ ಶ್ರೇಣಿಕೃತ ಸಮಾಜ ವ್ಯವಸ್ಥೆ - ಶೈವರ ಪ್ರಭೇದಗಳ ಸಂಘರ್ಷ - ಬಹುದೇವತಾರಾಧನೆ ಇವೆಲ್ಲವುಗಳಿಂದಾಗಿ ಸಮಾಜಿಕ ಸ್ಥಿತಿ ಅಪಾಯಕಾರಿ ಸನ್ನಿವೇಶಕ್ಕೆ ಹಾದಿಯನ್ನು ನಿರ್ಮಿಸಿ ಕೊಟ್ಟಿತು. ಸಮಾಜ ವ್ಯವಸ್ಥೆಯ ಆಂತಕಗಳನ್ನು ಎದುರಿಸುವ ತಾಕತ್ತು ಯಾರಿಗಿರಲಿಲ್ಲ. ಕೆಲವೇ ಕೆಲವು ಗುಂಪುಗಳು ಪ್ರಾಬಲ್ಯ ಹೊಂದಿ ಉಳಿದವುಗಳನ್ನು ತಮ್ಮ ತಾಳಕ್ಕೆ ಕುಣಿಸತೊಡಗಿದ್ದವು.

ಅಗ್ರಹಾರ-ಬ್ರಹ್ಮಪುರಿಗಳು ಒಂದೆಡೆಯಾದರೆ ಇನ್ನೊಂದೆಡೆ ಆಗಾಗ್ಗೆ ಜರುಗಿದ ರಾಜಕೀಯ ಪಲ್ಲಟಗಳು ಇಡೀ ಸಮಾಜವ್ಯವಸ್ಥೆಯನ್ನು ಹದಗೆಡಿಸಿದ್ದವು. ರಾಜ ಪರಿವಾರ -ಪುರೋಹಿತ ವರ್ಗ ತಿಂದುಂಡು ಸುಖವಾಗಿದ್ದ ಸ್ಥಿತಿ ಒಂದೆಡೆಯಾದರೆ ಇವರೀರ್ವರಿಗೆ ಆ ಸುಖಕ್ಕೆ ಸಾಧನವಾಗಿ ಸಾಮಾನ್ಯರು ಮಾತ್ರ ಬಳಕೆಯಾಗಬೇಕಾದ ಅನಿವಾರ್ಯತೆ ಉಂಟಾಗಿತ್ತು.

ತೆರಿಗೆ ಹೆಚ್ಚಳ, ಮೂಲಭೂತ ಬೇಡಿಕೆಗಳಿಗಾಗಿ ಅನಿವಾರ್ಯ ನಡೆಸಬೇಕಾದ ಹೋರಾಟ, ಬಡತನ , ಮೌಢ್ಯತೆಗಳು ಅಂದಿನ ಪರಿಸರದ ಸಾಮಾಜಿಕ ವ್ಯವಸ್ಥೆಯನ್ನು ಜಿಡ್ಡುಗಟ್ಟಿಸುವಲ್ಲಿ ಪ್ರೇರಕವಾಗಿ-ಪೂರಕವಾಗಿದ್ದವು. ಪ್ರತಿಭಟನೆಯ ಸೊಲ್ಲೆ ಅಡಗಿ ಹೋಗಿತ್ತು. ಸಾಮಾಜಿಕ ಸಮಾನತೆಗೆ ಇಲ್ಲಿ ನೆಲೆಯೇ ಇರಲಿಲ್ಲ. ಝೀ ಹೂಜೂರ್ ಸಂಸ್ಕೃತಿಯೇ ಪ್ರಧಾನವಾಗಿತ್ತು.

ಜನನ , ಮದುವೆ, ಧರ್ಮ, ಜಾತಿ , ಅಧಿಕಾರ ಇವೆಲ್ಲವುಗಳ ವಿವೇಚನೆಯಿಂದ ನಾವು ಅಂದಿನ ಸಾಮಾಜಿಕ ಸ್ಥಿತಿಗತಿಯನ್ನು ಕಂಡು ಕೊಳ್ಳಬಹುದಾಗಿದೆ.

ಈ ಪರಿಸರದ ಶರಣರಿಗಿಂತ ಪೂರ್ವದಲ್ಲಿ ಇಲ್ಲಿನ ಸಮಾಜ ವ್ಯವಸ್ಥೆ ಒಂದೆಡೆ ವೈದಿಕ ನಿಷ್ಠವಾಗಿ, ಇನ್ನೊಂದೆಡೆ ಶೂದ್ರ ಆಚರಣೆಗೆ ಬದ್ಧವಾಗಿತ್ತು. ಇಂತಹ ಸಂದಿಗ್ಧ ಸ್ಥಿತಿಯಲ್ಲಿಯೇ ಶರಣ ಉದಯ ಈ ಪರಿಸರದಲ್ಲಾಯಿತು.

ಬಿಸಿಲನ್ನು ಉಸಿರಾಗಿರಿಸಿಕೊಂಡು ಬದುಕು ಸಾಗಿಸಿ ಇಲ್ಲಿಯ ಜನಗಳಿಗೆ ತುತ್ತಿನ ಚೀಲ ತುಂಬಿಕೊಳ್ಳಲು ಬಹು ಸಂಕಷ್ಟವಾಗಿತ್ತು. ಮತ್ತೊಬ್ಬರ ತುತ್ತಿನ ಚೀಲಕ್ಕೆ ಬಂಗಾರ ಸುರಿದ ಇವರಿಗೆ ಮಣ್ಣಿನ ಪುಣ್ಯವಾದರೂ ಸರಿಯಾಗಿ ಲಭಿಸಲಿಲ್ಲ.

ಅರಮನೆ -ಗುರುಮನೆಗಳಲ್ಲಿಯೇ ಪ್ರತಿಷ್ಠಿತ ಸಮಾಜದ ನಿರ್ಮಾಣ ಸಾಧ್ಯವೆಂಬ ಕಪೋಲ ಕಲ್ಪಿತ ಕಲ್ಪನೆಗಳನ್ನೇ ಹರಿಯ ಬಿಟ್ಟು ಆಕಲ್ಪನೆಗಳ ಕನಸನ್ನು ಸಾಮಾನ್ಯರಿಗೆ ನೀಡಿ ಅದರ ಸುಖವನ್ನು ಕೆಲವೇ ವರ್ಗದ ಜನರು ಅನುಭವಿಸುವಂತಾಯಿತು. ಮತ್ತೊಬ್ಬರ ಹಸಿವನ್ನು ಹಿಂಗಿಸಿದವರೇ ಹಸಿವಿನಿಂದ ನರಳಬೇಕಾದ ವಿಚಿತ್ರ ರೀತಿಯವಾತಾವರಣ ಸೃಷ್ಟಿಯಾಗಿತ್ತು. ಅನ್ನ ಬೆಳೆಯುವ ಅನ್ನದಾತನಿಗೆ ತಿಂದುಂಡು ತೇಗುವ ತಾಕತ್ತಿರದಿದ್ದರೂ , ಇದನ್ನು ಬಂಡವಾಳವಾಗಿರಿಸಿಕೊಂಡು ಹೊಟ್ಟೆ ತುಂಬಿಸಿ ಕೊಳ್ಳುವವರ ಸಂಖ್ಯೆಗೇನೂ ಕೊರತೆಯಿಲ್ಲದೇ ರಾಜರ-ವ್ಯಾಪಾರಿಗಳ- ದಲ್ಲಾಳಿಗಳ ಬೊಕ್ಕಸ ತುಂಬಿ ಅವರ ತುತ್ತಿನ ಚೀಲ ತುಳುಕಾಡುತ್ತಿತ್ತು.

ಅರಮನೆ -ಗುರುಮನೆ-ದೇವಾಲಯವನ್ನಾಧರಿಸಿ ಬೆಳೆದಿದ್ದ ಅಂದಿನ ಅರ್ಥವ್ಯವಸ್ಥೆ ಇಡೀ ಪರಿಸರದ ತಾಕತ್ತನ್ನೇ ಪ್ರಶ್ನಿಸುವಂತಾಗಿತ್ತು . ಶೋಷಿತರ ಗುಂಪೇ ನಿರ್ಮಾಣವಾಗಿತ್ತು.

ಜಾತಿ ಪದ್ಧತಿಯ ಬಗ್ಗೆ ಇದ್ದ ಧೋರಣೆ ಬಹು ಕಠಿಣವಾಗಿತ್ತು. ಜಾತಿಯೇ ಎಲ್ಲವನ್ನು ನಿರ್ಧರಿಸುವ ಸೂತ್ರವಾಗಿತ್ತು. ಜನನ ವ್ಯಕ್ತಿಯ ಬದುಕನ್ನು ನಿರ್ಧರಿಸುವ - ನಿಯಂತ್ರಿಸುವ ಅಂಶವಾಗಿದ್ದರೆ ಜಾತಿ ಅದಕ್ಕೆ ನೀರನ್ನು ಹಾಕಿ ಪೋಷಿಸಿತು. ಹಾಗಾಗಿ ವ್ಯಕ್ತಿಯ ವ್ಯಕ್ತಿತ್ವಕ್ಕೆ ಧಕ್ಕೆ ಒದಗಿತು. ಎಂತಹ ಅಸಮರ್ಥನಾದರೂ, ಎಷ್ಟೇ ಭ್ರಷ್ಟನಾದರೂ ಅವನು ಜಾತಿಯಿಂದ ಉತ್ತಮ ಕುಲದಲ್ಲಿ ಹುಟ್ಟಿದ ಮಾತ್ರಕ್ಕೆ ಅವನಿಗೆ ಎಲ್ಲಾ ಸೌಲಭ್ಯಗಳು ದೊರಕುತ್ತಿದ್ದವು. ಉತ್ತಮ ಕುಲದಲ್ಲಿ ಹುಟ್ಟಿದವನು ಏನೆಲ್ಲಾ ಮಾಡಬಹುದೆಂಬ ಭ್ರಮೆ ಎಲ್ಲರಿಗೂ ಇತ್ತು. ಈ ಜಾತಿಯ ಅತೀಯತೆಯಿಂದಾಗಿ ಇಡೀ ಸಮಾಜ ಛಿದ್ರವಿಛಿದ್ರವಾಗಿತ್ತು .ಮಾನವೀಯತೆ ಮರೆಯಾಗಿತ್ತು. ಇಂತಹ ಸ್ಥಿತಿ ಬಸವಪೂರ್ವ ಯುಗದಿಂದ ಬಸವೋತ್ತರ ಪೂರ್ವಯಗವರೆಗೆ ಸಾಗಿ ಬಂದಿತ್ತು.

ಬಸವಯುಗದಲ್ಲಿನ ಜಾತಿ ವ್ಯವಸ್ಥೆಯ ಸ್ಥಿತಿಗತಿಗಳನ್ನು ಕುರಿತು ಡಾ: ಪಿ.ವಿ.ನಾರಯಣ ಹೀಗೆ ಅಭಿಪ್ರಾಯ ಪಡುತ್ತಾರೆ. ' ಮಧ್ಯಕಾಲೀನ ಕರ್ನಾಟಕದ ಸಮಾಜವು ಕಟ್ಟುನಿಟ್ಟಾದ ಜಾತಿ ನಿಬಂಧನೆಗಳಿಗೆ ಒಳಗಾಗಿತ್ತು. ಸಮಾಜದ ತೀರಾ ಕೆಳಸ್ತರದಲ್ಲಿದ್ದವರು ಅಸ್ಪೃಶ್ಯರುಗಳಾಗಿ ಊರ ಹೊರಗೆ ವಾಸಿಸುತ್ತಾ ಸವರ್ಣೀಯರ ನಿರಂತರ ಬಹಿಷ್ಕಾರಕ್ಕೆ ಒಳಗಾಗಿದ್ದರು'.೧

ಈ ಮಾತುಗಳು ಈ ಪರಿಸರಕ್ಕೂ ಅನ್ವಯವಾಗಬಲ್ಲದೆಂದು ಬೇರೆ ಹೇಳಬೇಕಾಗಿಲ್ಲ. ಇಂದಿಗೂ ಈ ಪರಿಸರದ ಸ್ಥಿತಿ ಭಿನ್ನವಾಗಿಲ್ಲ. ಇಂದಿಗೂ ಜಾತಿಯನ್ನೇ ಆಧರಿಸಿ ಕುಡಿಯುವ ನೀರಿನ ಬಾವಿಗಳಿರುವುದನ್ನು ನಾವು ಈ ಪರಿಸರದ ಕೆಲವು ಗ್ರಾಮಗಳಲ್ಲಿ ಕಾಣಬಹುದಾಗಿದೆ. ಹಾಗೆಯೇ ಆಚರಣೆಯ ನೆಪದಲ್ಲಿ ಕೆಳಜಾತಿಯ ಜನರು ಅದರಲ್ಲೂ ಆ ಜಾತಿಯ ಹೆಂಗಸರು ಶೋಷಣೆಗೊಳಗಾಗುತ್ತಿರುವುದನ್ನು ಇಂದಿಗೂ ನೋಡಬಹುದಾಗಿದೆ.

'ಜಂಗಮ' ಎಂಬ ಶರಣರ ಪರಿಕಲ್ಪನೆ ಬೇರೆಯಾಗಿ ಅದು ಜಾತಿಯಾಗಿ ವೈದಿಕಶಾಹಿಯ ಪುನರುತ್ಥಾನವೇ ಆಗಿದೆ. ಎಂಬುದನ್ನು ಇಲ್ಲಿ ಕಾಣಬಹುದಾಗಿದೆ.

ಈ ಪರಿಸರದಲ್ಲಿ ಕಂಡು ಬರುವ ಮತ್ತೊಂದು ಸಾಮಾಜಿಕ ಕ್ರೂರ ವ್ಯವಸ್ಥೆಯೆಂದರೆ ಗುಲಾಮ ಪದ್ಧತಿ. ಬಸವಪೂರ್ವ ಯುಗದಲ್ಲಿ ಈಪದ್ಧತಿ ಬಹು ಪ್ರಚಲಿತದಲ್ಲಿತ್ತು. ದೇವಾಲಯ ಗುಲಾಮಗಿರಿಯ ಕೇಂದ್ರ ಸ್ಥಾನವಾಗಿತ್ತು. ಹಾಗೆಯೇ ರಾಜರ ಆಸ್ಥಾನಗಳು ಯುದ್ಧ ಕೈದಿಗಳನ್ನು ಗುಲಾಮರನ್ನಾಗಿ ಮಾಡಿ ಕೊಳ್ಳುತ್ತಿದ್ದರೂ ಅದು ಭಸವಯುಗದಷ್ಟರ ಹೊತ್ತಿಗೆ ಮರೆಯಾಗಿತ್ತು. ಆಗಾಗ ಮತ್ತೆ ತಲೆದೋರಿ ಬದುಕನ್ನು ಅಲ್ಲಾಡಿಸುತ್ತಿತ್ತು. ಈ ಪದ್ಧತಿ ಇಂದಿಗೂ 'ಜೀತ' ಎಂಬ ಹೆಸರಿನಲ್ಲಿ ಜೀವಂತವಾಗಿರುವುದನ್ನು ಕಾಣಬಹುದಾಗಿದೆ. ತುತ್ತು ಕೂಳಿಗಾಗಿ ಎಂದೋ ಮಾಡಿದ ಸಾಲಕ್ಕಾಗಿ ಇಂದಿಗೂ ಇಡೀ ಕುಟುಂಬವೇ ಗುಲಾಮರಾಗಿ ಬಾಳುವ ಸ್ಥಿತಿ ಈಪರಿಸರದಲ್ಲಿ ಕಂಡು ಬರುತ್ತದೆ.

ಹೆಣ್ಣಿನ ಬದುಕು ಸಹ ಅತ್ಯಂತ ಹೀನಾಯ ಸ್ಥಿತಿಯಲ್ಲಿತ್ತು. ಮನೆಯ ಗೋಡೆಗಳ ಮಧ್ಯೆ ಅವಳು ಕಾಲತಳ್ಳಬೇಕಾದ ಸ್ಥಿತಿ ಮೇಲ್ವರ್ಗದಲ್ಲಿದ್ದರೇ ಕೆಳವರ್ಗದಲ್ಲಿ ಹೆಣ್ಣು ಮಣ್ಣಲ್ಲಿ ಮಣ್ಣಾಗಿ ಹೋಗುವ ತನಕ ದುಡಿಯ ಬೇಕಾಗುತ್ತಿತ್ತು. ಬಸವಪೂರ್ವಯುಗದಲ್ಲಿ ಹೆಣ್ಣಿನ ಸ್ಥಿತಿಗತಿ ಅತ್ಯಂತ ಹೀನಾಯವಾಗಿತ್ತು.

ಬಸವ ಯುಗದಲ್ಲಿ ಸ್ವಲ್ಪ ಸುಧಾರಣೆ ಕಂಡರೂ ಅದು ಶರಣರ ಪರಿಸರದಲ್ಲಿ ಮಾತ್ರ ಸಮಾನತೆ ದೊರಕಿತೇ ಹೊರತು ಇಡೀ ಸಮಾಜದಲ್ಲಿ ದೊರಕಲಿಲ್ಲ. ಬಸವಯುಗದಲ್ಲಿ ಶರಣರು ಯಾವ ಹೆಣ್ಣನ್ನು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದಿದ್ದರೋ , ಸಮಾನತೆಯ ಸಂಕೇತವೆಂದು ತಿಳಿದಿದ್ದರೋ ಅದೇ ಹೆಣ್ಣು ಬಸವೋತ್ತರ ಯುಗದಲ್ಲಿ ಮಾಯೆಯಾಗಿ ಕಂಡಿತು. ಸಾಧನೆಯ ಹಾದಿಗೆ ಮುಳ್ಳೆಂದು ಪರಿಗಣಿಸಲಾಯಿತು. ಸಂಸಾರವೆಂಬುದು ಸುಳ್ಳಿನ ಸಂತೆಯಾಯಿತು. ಇದಕ್ಕೆ ಕಾರಣ ವೈಯಕ್ತಿಕ ಜೀವನದ ಘಟನೆಗಳು ಹಾಗೂ ಸನ್ಯಾಸತ್ವದ ಮೂಲಕ ಸಾಧಿಸಬಹುದೆಂಬ ಬದಲಾದ ನಂಬಿಕೆಗಳೇ ಇಂತಹ ನಿಲುವುಗಳಿಗೆ ಕಾರಣವಾಗಿತ್ತು.

೧: ಡಾ: ಪಿ.ವಿ.ನಾರಾಯಣ - ವ.ಸಾ.ಪ. ಪುಟ೧೯

ಬಸವ ಪೂರ್ವಯುಗದಿಂದಲೂ ಬಸವೋತ್ತರ ಯುಗದ ವರೆಗೂ ರಣರಂಗದ ವೇದಿಕೆಯಾಗಿದ್ದ ಈ ಪರಿಸರದಲ್ಲಿ ಬದುಕುವ ಜನರು ಯುದ್ಧಗಳ ಭೀತಿಯಲ್ಲಿಯೇ ಕಾಲ ಕಳೆಯ ಬೇಕಾಗಿತ್ತು.

ಯುದ್ಧಗಳನ್ನು ಉಳ್ಳವರು ಮಾಡಿ ತಮ್ಮ ತೀಟೆಯನ್ನು, ಛಲವನ್ನು ತೀರಿಸಿಕೊಂಡಾಗ ಅದರಿಂದಾದ ಹಾನಿಗೆ ಹೊಣೆಯಾಗಿ ಅದನ್ನು ತುಂಬಿ ಕೊಡಬೇಕಾದ ಸ್ಥಿತಿ ಸಾಮಾನ್ಯರ ಪಾಲಾಯಿತು. ಹೀಗಾಗಿ ಈ ಪರಿಸರದಲ್ಲಿ ಆಳಿದ ಎಲ್ಲಾ ಅರಸರು ಜನರಿಗೆ ಅನೇಕ ತೆರಿಗೆಗಳನ್ನು ಹಾಕಿ ಅವರನ್ನು ತತ್ತರಿಸುವಂತೆ ಮಾಡಿದರು. ಸಾಮಾನ್ಯ ಜನತೆಯ ಬದುಕು ನಾಯಿ ಪಾಡಾಯಿತು. ತೆರಿಗೆಯ ಭಾರದಿಂದಲೇ ಸಾಮಾನ್ಯ ಜನತೆ ತರೆಗಲೆಗಳಂತೆ ತಮ್ಮ ಜೀವನ ತೆತ್ತ ಪ್ರಸಂಗಳು ಈ ಪರಿಸರದಲ್ಲಿ ನಡೆದವು.

ಸಾಮಾನ್ಯರ ಹಣ - ಹೆಣ್ಣು - ಮಣ್ಣು ಗಳೆಲ್ಲ ಮೇಲ್ವರ್ಗದವರ ಉಪಭೋಗದ ವಸ್ತುಗಳಾಗಿದ್ದವೂ ಅವರು ಬಯಸಿದರೆ ಎಲ್ಲವನ್ನು ಒದಗಿಸಿ ಕೊಡುವ ಹೀನಾಯ ಬದುಕು ಸಾಮಾನ್ಯ ಜನರದಾಗಿತ್ತು. ಅಕ್ಷರ ಲೋಕದಿಂದ ವಂಚಿತರಾದ ಬಹುತೇಕ ಜನ ಅನೇಕ ಸಂಚುಗಳಿಗೆ ಬಲಿಯಾಗಿ ಉಳ್ಳವರ ಸೂತ್ರದ ಬೊಂಬೆಗಳಂತೆ ನರ್ತಿಸುವ ಸ್ಥಿತಿ ಉಂಟಾಗಿತ್ತು.

೫ : ೨ ಸಮಾಜ ವಿಮರ್ಶೆ : ಪ್ರತಿಭಟನೆ

ಕನ್ನಡ ನಾಡಿನ ಸಾಮಾಜಿಕ ಪರಿಸರಕ್ಕಿಂತ ಭಿನ್ನವಾದ ವೈಶಿಷ್ಟ್ಯಗಳು ಈ ಪರಿಸರದಲ್ಲಿ ಕಂಡು ಬರದಿದ್ದರೂ ಈ ಪರಿಸರದ ಶರಣರು ತಮ್ಮ ತಮ್ಮ ಸಮಕಾಲೀನ ಸಮಾಜ ವ್ಯವಸ್ಥೆಯನ್ನು ಅಂಧಾನು ಕರಣೆಯಿಂದ ಒಪ್ಪಿಕೊಳ್ಳದೆ ಆ ಸಮಾಜದ ಒಳ-ಹೊರಗುಗಳನ್ನು ಬಹು ಎಚ್ಚರಿಕೆಯಿಂದ ಗಮನಿಸಿ ಅದನ್ನು ಸೂಕ್ತ ವಿಮರ್ಶೆಗೊಳಪಡಿಸಿದರು. ಅಷ್ಟೇ ಅಲ್ಲದೇ ಸಮಾಜದ ನಿಲುವುಗಳ ವಿರುದ್ಧ ತೀವ್ರವಾದ ಪ್ರತಿಭಟನೆ ಮಾಡಿದರು. ಅವರ ಪ್ರತಿಭಟನೆ ಹಿಂಸಾತ್ಮಕ ಹೋರಾಟವಾಗಿರಲಿಲ್ಲ. ಸಮಾಜದ ಅನ್ಯಾಯ - ಅತ್ಯಾಚಾರ - ಡಾಂಭಿಕ ವರ್ತನೆಗಳ ವಿರುದ್ಧ ಕೈಗೊಂಡ ಸೂಕ್ತ ರೀತಿಯ ಸಾಮಾಜಿಕ ಸುಧಾರಣೆ ಯಾಗಿತ್ತು.

ಬಸವಪೂರ್ವ ಯುಗ : -

ಈ ಯುಗದ ಶರಣರು ಸಮಾಜ ವ್ಯವಸ್ಥೆಯ ಸಮಕಾಲೀನ ಸ್ಥಿತಿಗತಿಗಳನ್ನು ಅರಿತು ಕೊಂಡು ಅವುಗಳನ್ನು ಬಹು ಎಚ್ಚರಿಕೆಯಿಂದ ವಿಮರ್ಶಿಸಿ - ಪ್ರತಿಭಟಿಸಿದ್ದನ್ನು ನಾವು ಅವರ ಸಾಹಿತ್ಯ - ಬದುಕಿನ ಹಿನ್ನೆಲೆಯಲ್ಲಿ ಗಮನಿಸಬಹುದಾಗಿದೆ.

ಹರಿಹರನ ರಗಳೆ ಹಾಗೂ ಆನಂತರದ ಕೆಲವು ಕೃತಿಗಳನ್ನಾಧರಿಸಿ ಶಂಕರ ದಾಸಿಮಯ್ಯರ ಬದುಕನ್ನು ನೋಡಿದರೆ ಅವರು ಏಕದೇವತಾ ನಿಷ್ಠೆಯನ್ನು ಸಾರುತ್ತ - ಜನರನ್ನು ಧಾರ್ಮಿಕವಾಗಿ ವೈಚಾರಿಕ ನೆಲೆಯಲ್ಲಿ ಸಂಘಟಿಸಿರುವುದನ್ನು ಕಾಣುತ್ತೇವೆ. ಹರಿಹರ ಶಂಕರ ದಾಸಿಮಯ್ಯರ ವ್ಯಕ್ತಿತ್ವ ಚಿತ್ರಿಸಿರುವಲ್ಲಿ ವಚನಗಳೇ ಬಹುಶಃ ಆಧಾರವಾಗಿರಬೇಕೆನಿಸುತ್ತದೆ. ಆದರೆ ನಮಗೆ ಇವರ ಬಹುತೇಕ ವಚನಗಳು ಲಭ್ಯವಾಗುವುದಿಲ್ಲ. ಲಭ್ಯವಾದ ವಚನಗಳಲ್ಲೂ ಸಹಿತ ಯಾವುದೇ ಸಾಮಾಜಿಕ ಅಂಶಗಳು ದೊರೆಯಲಾರವು. ಆದರೆ ಸಮಕಾಲೀನ ಶರಣರ ವಚನಗಳನ್ನು ಗಮನಿಸಿದರೆ ಇವರ ನಿಲುವು ಹೇಗಿತ್ತೆಂಬುದನ್ನು ತಿಳಿಯ ಬಹುದಾಗಿದೆ.

ಶಂಕರ ದಾಸಿಮಯ್ಯರು ಸಮಾಜದ ಸ್ಥಗಿತ ಮೌಲ್ಯಗಳ ವಿರುದ್ಧ ಪ್ರತಿಭಟಿಸಿದ್ದನ್ನು ಚೆನ್ನಬಸವಣ್ಣನವರು ವಚನವೊಂದರಲ್ಲಿ ಸೂಚ್ಯವಾಗಿ ಉಲ್ಲೇಖಿಸಿದ್ದಾರೆ.[೧] ಸೊಡ್ಡಳ ಬಾಚರಸರ ವಚನವಂತೂ ಇವರು ಯಾವ ಮೌಲ್ಯಗಳಿಗಾಗಿ ಹೋರಾಟ ನಡೆಸಿ ಅಂದಿನ ಸಮಾಜವನ್ನು ವಾಸ್ತವಾಗಿ ವಿಮರ್ಶಿಸಿ-ಪ್ರತಿಭಟಿಸಿದರ ಸ್ವರೂಪವನ್ನು ನಮಗೆ ಪರಿಚಯ ಮಾಡಿಕೊಡುತ್ತದೆ. ಆ ವಚನ ಹೀಗಿದೆ :

ಘುಡುಘುಡಿಸಿ ಅನ್ಯದೈವಂಗಳನು

ಕೊಡೆ ಹಿಡಿಸಿದ ಪಂಜೆಯ ಮೈಲಿಗೆಯನು

ಅಡಿಗಿಸಿದ ಭೋ ದೈವಂಗಳ ದರ್ಪವನು

ಹಿಡಿಸಿದ ಭೋ ಮುದನೂರ ತವನಿಧಿ

ಉರಿಗಣ್ಣ ಬಿಟ್ಟೊಮ್ಮೆ ಹಿರಿಯ ಪ್ರತಿಮೆಯನೊಡೆದ

ಮನ್ನಣೆಯ ಮಾಡದೆ ಮಾರಿಯ ಕೈಯ ಮೊರಡಿಯ ಧಾನ್ಯಂಗಳ ಮಿಡಿಸಿದನು

ಓಂ ನಮಃ ಶಿವಾಯ ಶಂಕರ ದಾಸ ಪಂಚವದನಾ ಸೊಡ್ಡಳಾ[೨]

ಈ ವಚನ ಇವರ ವ್ಯಕ್ತಿತ್ವದ ಅನೇಕ ಸಂಗತಿಗಳನ್ನು ಬಿಂಬಿಸುವ ಜೊತೆಗೆ ಆತನ ಸಾಮಾಜಿಕ ನಿಲುವನ್ನು ಪ್ರತಿನಿಧಿಸುತ್ತದೆ.

---

೧ : ಸಂ : ಡಾ : ಬಿ.ವ್ಹಿ. ಮಲ್ಲಾಪುರ - ಸ.ವ.ಸಂ.-೩, ವಚನ ೬೦೫, ಪುಟ ೫೨೪

೨ : ಸಂ : ಡಾ : ಬಿ.ಆರ್. ಹಿರೇಮಠ -ಸ.ವ.ಸಂ. -೯ , ವಚನ ೭೬೩, ಪುಟ ೨೫೧

ಹೀಗೆ ಸಮಕಾಲೀನವಾಗಿ ಹಾಗೂ ಆತನ ವಚನಗಳಲ್ಲಿಯೂ ಅವರ ಸಮಾಜ ವಿಮರ್ಶೆ - ಪ್ರತಿಭಟನೆ ಧ್ವನಿಗಳು ಸ್ಪಷ್ಟವಾಗಿಲ್ಲದಿದ್ದರೂ ಹರಿಹರಿರಾದಿಗಳ ಕೃತಿಗಳಿಂದ ಕಂಡುಬರುವ ಸಂಗತಿಯೆಂದರೆ: ಇವರು ಮೂಲತಃ ವೈದಿಕರಾಗಿ ಅಲ್ಲಿನ ಕರ್ಮಟತೆಗಳ ವಿರುದ್ಧ ಸಿಡಿದೆದ್ದು ಹೋರಾಟಮಾಡಿದವರು. ಸಾಮಾಜಿಕ ನ್ಯಾಯಕ್ಕಾಗಿ ಏಕಾಂಗಿಯಾಗಿ ಅನೇಕ ಪ್ರತಿಭಟನೆಗಳನ್ನು ಎದುರಿಸಿ , ನೋವುಗಳನ್ನು ಸಹಿಸಿಕೊಂಡು ಜನರನ್ನು ಸರಿಯಾದ ಮಾರ್ಗದಲ್ಲಿ ಮುನ್ನಡೆಸಲು ಹಲವಾರು ಸುಧಾರಿತ ಕ್ರಮಗಳನ್ನು ಕೈಗೊಂಡು ಅನೇಕ ಊರುಗಳನ್ನು ಸಂಚರಿಸಿ ಅನೇಕ ಜನರ ತಪ್ಪುಗಳನ್ನು ತಿದ್ದಿ - ಒಳ್ಳೆಯದನ್ನು ಪುರಸ್ಕರಿಸಿ ಆದರ್ಶ ಸಮಾಜವೊಂದಕ್ಕೆ ಬೀಜವನ್ನು ಬಿತ್ತಿದವರೆನ್ನಬಹುದಾಗಿದೆ. ಇವರ ವ್ಯಕ್ತಿತ್ವದ ಉಗ್ರಸ್ವರೂಪದಿಂದಾಗಿಯೇ ಮುಂದಿನ ಕಾವ್ಯಗಳು ಇವರನ್ನು ಅತಿಶಯೋಕ್ತಿ ವ್ಯಕ್ತಿತ್ವದಿಂದ ಚಿತ್ರಸಿವೆ.

ಢಕ್ಕೆಯ ಮಾರಯ್ಯ ಇಡೀ ಸಮಕಾಲೀನ ಸಮಾಜ ವ್ಯವಸ್ಥೆಯ ಸೂಕ್ಷ್ಮತೆಯ ವ್ಯವಸ್ಥೆಗಳನ್ನು ಅರಿತುಕೊಂಡು ಅವುಗಳನ್ನು ವಿಮರ್ಶಿಸಿ- ಪ್ರತಿಭಟಿಸಿದ್ದನ್ನು ಅವರ ವಚನಗಳ ಮೂಲಕವೇ ಕಾಣಬಹುದಾಗಿದೆ. ಇವರು ವಚನಗಳ ತುಂಬೆಲ್ಲ ಡಾಂಭಿಕತೆಯನ್ನು ಸಮಾಜದ ಪೊಳ್ಳುತನಗಳನ್ನು ಬಯಲಿಗೆಳೆದು ವಾಸ್ತವದ ಪರಿಕಲ್ಪನೆ ಮೂಡಿಸುತ್ತಾರೆ. ಸಮಾಜದೊಳಗಿನ ಮನುಷ್ಯತ್ವದ ಮಹತ್ವವನ್ನು ಬಹು ಎಚ್ಚರಿಕೆಯಿಂದ ಎತ್ತಿ ತೋರಿಸುತ್ತಾರೆ.' ಸೌಭಾಗ್ಯದಿಂದ ಮಾಡುವರೆಲ್ಲರೂ ಸಂತೋಷಭಾವಿಗಳು , ಭಕ್ತಿಯಿಂದ ಮಾಡುವರೆಲ್ಲರೂ ತ್ರಿವಿಧಭಾವಿಗಳು ' ೧ ಎಂದು ಹೇಳುತ್ತಾ ಸಮಾಜದ ಜನರ ಮನೋಭೂಮಿಕೆಯ ಆಂತರ್ಯವನ್ನು ತೆರೆದು ತೋರಿಸುತ್ತಾರೆ. ಬದುಕನ್ನು ನೋಡಿದ ರೀತಿ -ಜೊತೆಗೆ ಅದನ್ನು ಸ್ವೀಕರಿಸಿ ಬಾಳುವನ ಪರಿಯನ್ನು ಈ ವಚನ ಸ್ಪಷ್ಟವಾಗಿ ತಿಳಿಸುತ್ತದೆ. ಬದುಕಿನಲ್ಲಿ ಹೇಡಿಯಾಗಿ ಕುಳಿತುಕೊಳ್ಳದೇ ಧೈರ್ಯದಿಂದ ಮುನ್ನುಗ್ಗಿ ಕಷ್ಟಗಳನ್ನು ಬದಿಗೆ ಸರಿಸಿ ಮುನ್ನಡೆಯಬೇಕು. ಸಮಾಜಕ್ಕೆ ನಮ್ಮ ಕೊಡುಗೆ ಏನೆಂಬ ಮನೋಭೂಮಿಕೆಯಿಂದ ಜೀವನ ಸಾಗಿಸುವುದೇ ಬದುಕಿನ ಪರಮ ಧ್ಯೇಯ ಎಂಬುದಾಗಿ ಇವರ ವಚನ ಸ್ಪಷ್ಟಪಡಿಸುತ್ತದೆ.

ಬಡವ -ಶ್ರೀಮಂತ , ಗಂಡು -ಹೆಣ್ಣು, ಮೇಲ್ಜಾತಿ -ಕೆಳಜಾತಿಗಳ ಸಂಘರ್ಷ - ಕುಲಮದಗಳಿಂದ ಛಿದ್ರಗೊಳ್ಳುತ್ತಿದ್ದ ಮನುಷ್ಯರ ಬದುಕನ್ನು ಬಹು ಎಚ್ಚರಿಕೆಯಿಂದ ಗಮನಿಸಿದ ಇವರು ಅವುಗಳ ವಿರುದ್ಧ ಪ್ರತಿಭಟಿಸಿ ಸರಿಯಾದ ಮಾರ್ಗವನ್ನು ತೆರೆದು ಸಮಕಾಲೀನ ಸಮಾಜದ ಪರಿಕಲ್ಪನೆಗಳನ್ನು ವಸ್ತುನಿಷ್ಠವಾಗಿ ವಿಮರ್ಶಿಸಿದರು. ಮನುಷ್ಯನಿಗೆ ಸ್ವಾತಂತ್ರ್ಯವಿಲ್ಲದಿದ್ದರೆ ಅವನ ಬದುಕು ಹೀನಾಯವಾಗಿ ಬಿಡುತ್ತದೆ ಎಂಬುದನ್ನು ಅರಿತ ಕಾರಣ ಇವರು ತಾವು ಮಾಡುವ ಕಾಯಕ ಹಾಗೂ ಅದರ ಪರಿಕರಗಳ ಮೂಲಕವೇ ತಮ್ಮ ವ್ಯಕ್ತಿ ಸ್ವಾತಂತ್ರ್ಯವನ್ನು ತೆರೆದು ತೋರಿಸುತ್ತಾ ಸಮಕಾಲೀನ ಸಮಾಜವನ್ನು ವಿಮರ್ಶಿಸಿ ಪ್ರತಿಭಟಿಸಿದ್ದನ್ನು ನಾವು ಸ್ಪಷ್ಟವಾಗಿ ಅವರ ವಚನಗಳಲ್ಲಿ ಕಾಣಬಹುದಾಗಿದೆ.

ವೈದಿಕಶಾಹಿ ಸಮಾಜ ಹೆಣ್ಣು-ಗಂಡುಗಳ ಮಧ್ಯೆ ದೊಡ್ಡ ಕಂದಕವನ್ನೆ ನಿರ್ಮಿಸಿ ಅವರ ಮಧ್ಯೆ ಸಮಾನತೆಯೆಂಬುದೆ ಇರದೇ ಹೆಣ್ಣು ಗಂಡಿಗಿಂತ ಕೆಳಸ್ತರದಲ್ಲಿದ್ದಳು. ಇದನ್ನು ಮನಗಂಡ ಇವರು ವಚನದಲ್ಲಿ ಹೀಗೆ ಹೇಳುತ್ತಾರೆ:

ಸತಿಯಗುಣವ ಪತಿನೋಡಬೇಕಲ್ಲದೆ

ಪತಿಯ ಗುಣವ ಸತಿ ನೋಡಬಹುದೆಎಂಬರು

ಸತಿಯಿಂದ ಬಂದ ಸೋಂಕು ಪತಿಗೆ ಕೇಡಲ್ಲವೆ?

ಪತಿಯಿಂದ ಬಂದ ಸೋಂಕು ಸತಿಯ ಕೇಡಲ್ಲವೆ?

ಒಂದಂಗದ ಕಣ್ಣು ಉಭಯದಲ್ಲಿ ಬಂದು ಹಿಂಗಲಿಕ್ಕೆ

ಭಂಗವಾರಿಗೆಂಬುದ ತಿಳಿದಲ್ಲಿಯೆ

ಕಾಲಾಂತಕ ಭೀಮೇಶ್ವರ ಲಿಂಗಕ್ಕೆ ಸಲೆಸಂದಿತ್ತು.೨

ಈ ವಚನದಲ್ಲಿ ಸಮಾಜ ನಿರ್ಮಿಸಿದ ಲಿಂಗ ಭೇದ ತಾರತಮ್ಯ ನೀತಿಯನ್ನು ಸೂಕ್ಷ್ಮವಾಗಿ ಇವರು ವಿಮರ್ಶಿಸುತ್ತ ಅದಕ್ಕೆ ತಕ್ಕ ಉತ್ತರದ ಮೂಲಕವೇ ಪ್ರತಿಭಟಿಸಿದ್ದನ್ನು ಕಾಣುತ್ತೇವೆ.ಈ ಪರಿಸರದ ಶರಣರು ಲಿಂಗ ಭೇಧವನ್ನು ಒಪ್ಪದೇ ಸರ್ವರಿಗೂ ವ್ಯಕ್ತಿ ಸ್ವಾತಂತ್ರ್ಯ ಅವಶ್ಯಕವೆಂಬುದನ್ನು ಅವರ ವಚನದಿಂದ ತಿಳಿಯಬಹುದಾಗಿದೆ. ಶಂಕರ ದಾಸಿಮಯ್ಯರೊಡನೆ ಇವರು ನಡೆಸಿದ ಸಂವಾದ ಗಮನಿಸಿದರೆ ಇವರು ಸಮಾಜದಲ್ಲಿ ಕೀಳೆನಿಸಿದ್ದ ಮಾರಿ ಕುಣಿತವನ್ನೇ ಶ್ರೇಷ್ಠಮಟ್ಟಕ್ಕೆ ಕೊಂಡೊಯ್ದ ಇವರ ನಿಲುವು ಬಹು ವಿಶಿಷ್ಟವಾಗಿ ಕಂಡು ಬರುತ್ತದೆ. ಕಾಯಕವನ್ನೇ ಕಲೆಯಾಗಿ ಪರಿವರ್ತಿಸಿ ಸಮಾಜದಲ್ಲಿನ ಭಾವನೆಗಳನ್ನು ಬದಲಾಯಿಸುವ ಮಟ್ಟಿಗೆ ತಮ್ಮ ವಿಚಾರಗಳನ್ನು ಅಭಿವ್ಯಕ್ತಗೊಳಿಸಿ ಕಾಯಕಕ್ಕೆ ಹೊಸ ಪರಿಕಲ್ಪನೆ ನೀಡಿದರು. ಭಕ್ತನಾದವನು ಸ್ವಾಭಿಮಾನದಿಂದ ಬದುಕಬೇಕೆಂಬುದನ್ನು ಇವರು ಪ್ರತಿಪಾದಿಸಿದ್ದನ್ನು ಅವರ ವಚನಗಳ ತುಂಬೆಲ್ಲ ಕಾಣಬಹುದು.

ಸಮಾಜದಲ್ಲಿ ಕಾಯಕದ ಬಗ್ಗೆ ಮೂಡಿದ ತಾರತಮ್ಯವನ್ನು ಗಮನಿಸಿ ಅದನ್ನು ಸೂಕ್ತವಾಗಿ ವಿಮರ್ಶಿಸಿ ಸಮಾಜದಲ್ಲಿನ ವ್ಯಕ್ತಿಗಳ ಜೀವನ ಮಾರ್ಗ ಎಂತಹದಾಗಿರಬೇಕೆಂಬುದನ್ನು ಇವರು ತಿಳಿಸುತ್ತಾರೆ.

---

೧ : ಸಂ: ಡಾ: ಎಸ್.ವಿದ್ಯಾ ಶಂಕರ - ಸ.ವ.ಸಂ.-೭ , ವಚನ ೮೮, ಪುಟ ೩೧೦

೨ : ಅದೇ: ವಚನ ೮೫, ಪುಟ ೩೦೯

ಆವ ಸ್ವಕಾಯಕದಿಂದಾದಡು ಆಗಲಿ

ಭಾವ ಶುದ್ಧವಾಗಿ ಮಾಡುವ ಜಂಗಮ ಪೂಜೆ

ಸೂರ ಹುಲ್ಲು ಚುಳುಕೋದಕ ನೇಮಕ್ರೀ ತಪ್ಪದೆ ಮಾಡುವುದೆ ದೇವ ಪೂಜೆ

ಆವ ಪ್ರಸಂಗ ಬಂದಡೆ ಖಂಡಿಸಿ ನುಡಿವುದೆ ಪಂಡಿತನಿರವು

ತ್ರಿವಿಧ ಬಂದು ಮುಂದಿರಲಿಕ್ಕೆ

ಆದರಂದವ ನೋಡದಿಪ್ಪುದೆ ನಿಸ್ಸಂಗ ಸುಸಂಗಿಯ ಇರವು

ಇಂತೀ ವಿಚಾರವನರಿದಲ್ಲಿ ಢಕ್ಕೆಯ ದನಿ ಹೊರಗಾಯಿತ್ತು

ಕಾಲಾಂತಕ ಭೀಮೇಶ್ವರ ಲಿಂಗವು ಒಳಗಾಯಿತ್ತು.[೧] ಈ ವಚನ ಸಮಾಜದಲ್ಲಿನ ಪ್ರತಿಯೊಬ್ಬರ ಜೀವನ ಸಿದ್ಧಾಂತ ಹೇಗಿಬೇಕೆಂಬುದನ್ನು ತಿಳಿಸುತ್ತದೆ. ಜೊತೆಗೆ ಹೊಗಳುಬಟ್ಟಂಗಿತವನ್ನು ಇದು ಪರೋಕ್ಷವಾಗಿ ಚಿತ್ರಿಸುತ್ತದೆ.

ಸಮಾಜದ ಜನರು ಗುರು - ಲಿಂಗ - ಜಂಗಮಕ್ಕೆ ಸರಿಯಾದ ಸೇವೆ ಸಲ್ಲಿಸದೇ ಮೋಸಗಾರರಾಗಿದ್ದಾರೆಂದು ಹೇಳುತ್ತಾ ನಿಜವಾದ ಮನುಷ್ಯನಾದವನು ಮನದಿಂದ - ಮಾತಿನಿಂದ - ಹಾಗೆಯೇ ಕೆಲಸದಿಂದ ಶುದ್ಧನಾಗಿದ್ದಾಗಲೇ ಅವನು ಒಳ್ಳೆಯ ಭಕ್ತನಾಗಲು ಸಾಧ್ಯವೆಂದು ಹೇಳುತ್ತಾ ಅಂದಿನ ಸಮಾಜದ ಜನರ ಮನೋಸ್ಥಿತಿಯನ್ನು ಸ್ಪಷ್ಟವಾಗಿ ಈ ಕೆಳಗಿನ ವಚನದ ಮೂಲಕ ಅಭಿವ್ಯಕ್ತಿಸುತ್ತಾರೆ.

ಕಾಲವಂಚಕನಾಗಿ ಗುರುವಿಂಗೆ ಮಾಡಲಿಲ್ಲ

ಕರ್ಮ ವಂಚಕನಾಗಿ ಲಿಂಗಕ್ಕೆ ಮಾಡಲಿಲ್ಲ

ಧನ ವಂಚಕನಾಗಿ ಜಂಗಮಕ್ಕೆ ಮಾಡಲಿಲ್ಲ

ತ್ರಿವಿಧ ನಿರತಂಗೆ

ಮನ ವಚನ ಕಾಯ ತ್ರಿಕರಣದಲ್ಲಿ ಶುದ್ಧವಾಗಿರ್ಪ ಸದ್ಭಕ್ತ

ಕಾಲಾಂತಕ ಭೀಮೇಶ್ವರ ಲಿಂಗವು ತಾನೆ[೨] - ಹೀಗೆ ಢಕ್ಕೆಯ ಮಾರಯ್ಯ ಸಮಕಾಲೀನ ಸಮಾಜ ಅಸಮಾನತೆ, ಜಾತಿಯವ್ಯವಸ್ಥೆ, ಲಿಂಗ ಭೇದ - ವ್ಯಕ್ತಿತ್ವದ ದೋಷ ಇತ್ಯಾದಿಗಳನ್ನು ಕುರಿತು ಸ್ಪಷ್ಟವಾಗಿ ವಿಮರ್ಶಿಸಿ ಕಟುವಾಗಿ ಪ್ರತಿಭಟಿಸಿ ಅದನ್ನು ಸರಿದಾರಿಗೆ ತರುವಲ್ಲಿ ಯತ್ನಿಸಿದ್ದನ್ನು ಕಾಣುತ್ತೇವೆ.

ಬಸವಪೂರ್ವಯುಗದ ಶರಣರಾದ ಭಿಲ್ಲಮರಾಯ - ಶಿವಜಾತ ಒಡೆಯರು, ಡೊಂಬರ ಚೆನ್ನಿಯೊಡನೇ ಹಂಬಲಿ ಸೇವಿಸಿದ ಘಟನೆ ಅಂದಿನ ಜಾತಿಯ ವಿರುದ್ಧ ನಡೆದ ಮೌನ ಪ್ರತಿಭಟನೆಯಾಗಿದೆ. ಅಂತೆಯೇ ಶಂಕರ ದಾಸಿಮಯ್ಯರ ಪ್ರತಿಮೆ ಭಗ್ನಗೊಳಿಸುವ ಘಟನೆ ಅಂದಿನ ರಾಜಸತ್ತೆಯ ವಿರುದ್ಧ ಪ್ರತಿಭಟಿಸಿದ ಮನೋಸ್ಥೈರ್ಯದ ಸಂಕೇತವಾಗಿದೆ.

ಈ ಯುಗದ ಶರಣರು ಇಡೀ ಶರಣರ ಚಳುವಳಿಗೆ ಬೀಜ ಸ್ವರೂಪರಾಗಿ ದಾರಿ ತೋರಿದರೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಬಸವ ಯುಗ ಒಂದು ನಿಶ್ಚಿತವಾದ ಸ್ವರೂಪ - ಧೋರಣೆಗಳನ್ನು ಕಂಡು ಕೊಳ್ಳುವಲ್ಲಿ ಜೊತೆಗೆ ವೈದಿಕಶಾಹಿ ಸಮಾಜವನ್ನು ವಿಮರ್ಶಿಸಿ - ಪ್ರತಿಭಟಿಸುವಲ್ಲಿ ನಾಂದಿ ಹಾಡಿದ್ದು ಬಸವಪೂರ್ವಯುಗವೇ ಎಂಬುದನ್ನು ಗಮನಿಸಬೇಕು.

ಈಯುಗದ ಶರಣರು ತಮ್ಮ ಮಿತಿಯಲ್ಲಿಯೇ ಏಕಾಂಗಿಗಳಾಗಿ ಸಮಾಜದ ನಿಲುವುಗಳನ್ನು ವಿಮರ್ಶಿಸಿ ಪ್ರತಿಭಟಿಸಿದರು. ಸಮಾನತೆಯ ವಿರುದ್ಧ ಚರಿತ್ರೆಯಲ್ಲಿ ಮೊದಲಬಾರಿಗೆ ಹೊಸ ಚಿಂತನೆಗಳನ್ನು ಮೂಡಿಸಿದರು.

ಈ ಯುಗದ ಶರಣರ ವಚನಗಳು ಬಹಳ ಉಪಲಬ್ಧವಾಗದ ಕಾರಣ ಅವರ ಸಮಾಜ ವಿಮರ್ಶೆ - ಪ್ರತಿಭಟನೆಯನ್ನು ನಾವು ಸ್ಪಷ್ಟವಾಗಿ ಗುರುತಿಸುವಲ್ಲಿ ಖಚಿತವಾದ ನಿಲುವುಗಳನ್ನು ತಾಳುವಲ್ಲಿ ಸ್ವಲ್ಪ ಕಷ್ಟದಾಯಕವೆನಿಸುತ್ತದೆ. ಆದರೂ ಒಂದು ಮಾತಂತೂ ಸತ್ಯ ಬಸವಯುಗದ ಭದ್ರವಾದ ಚಿಂತನೆಗೆ ಹದವಾದ ನೆಲವನ್ನೊದಗಿಸಿ ಬೀಜ ಬಿತ್ತಿದ್ದು ಈ ಯುಗವೆಂಬುದು ಸ್ಪಷ್ಟವಾಗಿದೆ.

---

೧ : ಸಂ : ಡಾ: ಎಸ್.ವಿದ್ಯಾಶಂಕರ-ಸ.ವ.ಸಂ.-೭ , ವಚನ ೧೪, ಪುಟ ೨೮೭

೨ : ಅದೇ : ವಚನ ೨೯, ಪುಟ ೨೯೧-೨೯೨

ಬಸವ ಯುಗ

ಈ ಯುಗದ ಶರಣರು ತಮ್ಮ ವಚನಗಳ ಮೂಲಕ ಮಾನವರ ಮಧ್ಯೆ ನಿರ್ಮಿತವಾದ ಅವಮಾನವೀಯ ಸಂಬಂಧಗಳನ್ನು ದೂರೀಕರಿಸಿ ಮನುಷ್ಯತ್ವದ ಪ್ರೀತಿಯ ನೆಲೆಯಲ್ಲಿ ಎಲ್ಲರನ್ನು ಒಂದುಗೂಡಿಸಲು ಯತ್ನಿಸಿ ಜಾತ್ಯಾತೀತ, ವರ್ಗಾತೀತ ಸಮಾಜವೊಂದರ ನಿರ್ಮಾಣಕ್ಕಿರುವ ಅಡ್ಡಿ -ಆತಂಕಗಳನ್ನು ಕಟುವಾಗಿ ಖಂಡಿಸಿದ್ದನ್ನು ಕಾಣಬಹುದಾಗಿದೆ. ಅವರ ಪ್ರತಿಭಟನೆ ಪ್ರತಿ ಹಂತದಲ್ಲೂ ಕಂಡು ಬರುತ್ತದೆ. ಜಾತಿಯಿಂದ ಯಾವ ಮನುಷ್ಯ ದೊಡ್ಡವನಾಗಲಾರನೆಂದು ಹೇಳಿ ಅಂದಿನ ಜಾತಿ ವ್ಯವಸ್ಥೆಯ ವಿರುದ್ಧ ಈ ಪರಿಸರದ ಶರಣರು ಪ್ರಬಲವಾಗಿ ಖಂಡಿಸಿದರು.

ಬಿಬ್ಬಿ ಬಾಚಯ್ಯರನ್ನು ಅವರ ಪ್ರಸಾದ ಗುಣವನ್ನು ಅನೇಕ ಶರಣರು ಕೊಂಡಾಡಿದ್ದನ್ನು ಗಮನಿಸಿದರೆ ಅವರ ಜ್ಯಾತ್ಯಾತೀತ ನಿಲುವು ಸೂಚ್ಯವಾಗಿ ಕಂಡುಬರುತ್ತದೆ.

ಈ ಪರಿಸರದಲ್ಲಿ ಬೆಳೆದು ಬಂದ ಪುರಾಣ ಕಾವ್ಯಗಳು ಶರಣರ ಜ್ಯಾತ್ಯಾತೀತ ನಿಲುವುಗಳ ಬಗ್ಗೆ ತಮ್ಮದೆಯಾದ ಅಭಿಪ್ರಾಯಗಳನ್ನು ತಿಳಿಸುತ್ತವೆ. ಸಾಂಪ್ರದಾಯಿಕ ಸಮಾಜದ ಸ್ತ್ರೀ-ಪುರುಷರ ಭಿನ್ನತೆಯನ್ನು ಪ್ರತಿಭಟಿಸುತ್ತ ಜ್ಞಾನ-ಭಕ್ತಿಗಳನ್ನು ಸಂಪಾದಿಸುವಲ್ಲಿ ಲಿಂಗಭೇದ ಸರಿಯಲ್ಲವೆಂಬುದನ್ನು ಆಯ್ದಕ್ಕಿ ಲಕ್ಕಮ್ಮರು ' ಕೂಟಕ್ಕೆ ಸತಿ ಪತಿ ಎಂಬನಾಮವಲ್ಲದೆ ಅರಿವಿಂಗೆ ಬೇರೊಂದಡಲುಂಟೆ?' ೧ ಎಂದು ಪ್ರಶ್ನಿಸುವಲ್ಲಿ ಹೆಣ್ಣು -ಗಂಡಿನ ಭೇದ ಕೇವಲ ಸಂತಾನ ಅಭಿವೃದ್ಧಿಯಲ್ಲಿ ಮಾತ್ರವಾಗಿರಬಹುದೇ ವಿನಃ ಆಧ್ಯಾತ್ಮ ನೆಲೆಯಲ್ಲಿ -ಅರಿವನ್ನು ಕಂಡು ಕೊಳ್ಳುವಲ್ಲಿ ಅಲ್ಲ; ಅಲ್ಲಿ ಅವರಿಬ್ಬರೂ ಸಮಾನರು ಎಂಬುದನ್ನು ಅವರ ವಚನದ ಈ ಸಾಲು ಸ್ಪಷ್ಟಪಡಿಸುತ್ತದೆ.

ದಾಸೋಹ ಮಾಡುವಲ್ಲಿ ಹೊನ್ನು - ಮಣ್ಣಿನಷ್ಟೇ ಅವಶ್ಯಕವಾದದ್ದು ಹೆಣ್ಣು ಎಂಬುದಾಗಿ ಆಯ್ದಕ್ಕಿ ಮಾರಯ್ಯರು ಅಭಿಪ್ರಾಯ ಪಡುತ್ತಾರೆ.೨ ವೈದಿಕ ಶಾಹಿ ಮನೋಧರ್ಮದ ಸಮಾಜ ಲಿಂಗ ತಾರತಮ್ಯವನ್ನುಂಟುಮಾಡಿ, ಹೆಣ್ಣನ್ನು ಕೇವಲ ಉಪಭೋಗ ವಸ್ತುವೆಂದು ಹೇಳು ಆಕೆಯ ಸ್ಥಾನವನ್ನು ಅತ್ಯಂತ ಕೆಳಸ್ಥರದಲ್ಲಿ ಇರಿಸಿತ್ತು. ಆದರೆ ಶರಣರು ಆಕೆ ಮಾನವನ ಸಾಧನೆಯ ಸಿದ್ಧಿಗೆ ಮೂಲವೆಂದರು.

ಸಾಮಾಜಿಕ ನೋವುಂಡ ಮಹಿಳೆ ಸಾಂತ್ವಾನ ಪಡೆದುದ್ದೇ ಶರಣ ಸಂದರ್ಭದಲ್ಲಿ ಈ ಮಾತೂ ಈ ಪರಿಸರಕ್ಕೂ ಅನ್ವಯವಾಗಬಲ್ಲದು . ಶರಣರು ಸಮಾಜದ ಎಲ್ಲಾ ಹೆಣ್ಣು ಮಕ್ಕಳ ಸ್ಥಿತಿಯನ್ನು ಸುಧಾರಿಸಬೇಕೆಂಬ ಹೆಬ್ಬಯಕೆ ಇದ್ದರೂ ಅಂದಿನ ಪರಿಸ್ಥಿತಿಯಲ್ಲಿ ಹಾಗೂ ಅವರ ಮಿತಿಯಲ್ಲಿ ಅದು ಸಾಧ್ಯವಾಗಲಿಲ್ಲ. ಲಿಂಗ ಧರಿಸಿದ, ಶರಣ ಪರಂಪರೆಯಲ್ಲಿ ಸಾಗಿದ ಹೆಣ್ಣು ಮಕ್ಕಳು ಮಾತ್ರ ಸಮಾನತೆ ಪಡೆಯುವಂತಾಯಿತು. ಇಷ್ಟಾಗಿದ್ದೇ ಆ ಕಾಲದ ಮಹಾ ಸಾಧನೆಯಾಗಿದೆ.

ಸ್ವರ್ಗ-ನರಕ -ಕೈಲಾಸಗಳೆಂಬ ಹುಸಿಯಾದ ನಂಬಿಕೆಗಳಿಗೆ ತಕ್ಕ ಪ್ರತಿಕ್ರಿಯೆಯನ್ನು ಈ ಪರಿಸರದ ಶರಣರು ನೀಡಿದ್ದಾರೆ .ಸ್ವರ್ಗ-ನರಕಗಳೆಂದು ಜನರಲ್ಲಿ ಭಯ ಹುಟ್ಟಿಸಿದ ಸಮಾಜ ವ್ಯವಸ್ಥೆಯನ್ನು ಕುರಿತು ಆಯ್ದಕ್ಕಿ ಮಾರಯ್ಯ ಪ್ರಶ್ನಿಸಿದ್ದು ಹೀಗೆ: ' ಚಿತ್ತಮುಟ್ಟಿ ಸೇವೆಯ ಮಾಡುವ ಭಕ್ತಂಗೆ ಮರ್ತ್ಯ ಕೈಲಾಸವೆಂಬುದುಂಟೆ ? ' ೩ ಹಾಗೆಯೇ ಆತನಿದ್ದ ಸ್ಥಳವೇ ಸುಕ್ಷೇತ್ರವೆನ್ನುತ್ತಾರೆ. ಅದೇ ರೀತಿ ಲಕ್ಕಮ್ಮ ' ಕೈಲಾಸವೇನು ಕೈಕೂಲಿಯೆ?' ೪ ಎಂದು ಪ್ರಶ್ನಿಸುವುದನ್ನು ಗಮನಿಸಿದರೆ ಶರಣರ ಸಮಾಜ ವಿಮರ್ಶೆ-ಪ್ರತಿಭಟನೆ ಎಷ್ಟು ತೀಕ್ಷ್ಣವಾಗಿತ್ತೆಂಬುದು ತಿಳಿದು ಬರುತ್ತದೆ.

ಆರ್ಥಿಕ ಸ್ಥಿತಿಗತಿಯ ಉತ್ತಮ ಸ್ಥಿತಿಯೇ ಒಂದು ನಾಡಿಗೆ ಭದ್ರಬುನಾದಿ. ಆರ್ಥಿಕ ಸ್ಥಿತಿ ಅವ್ಯವಸ್ಥೆಗೆ ಒಳಗಾದಾಗ ನಾಡಿನ ಸ್ಥಿತಿ ದುರಂತ . ಅಂತೆಯೇ ವ್ಯಕ್ತಿಯ ಬದುಕು ಇದಕ್ಕೆ ಹೊರತಾಗಿಲ್ಲ. ಇದನ್ನು ಗಮನಿಸಿ ಶರಣರು ಸಮಕಾಲೀನ ಸಮಾಜದ ಆರ್ಥಿಕ ಸ್ಥಿತಿಗತಿಗಳ ಅವ್ಯವಸ್ಥೆಯ ವಿರುದ್ಧ ತೀವ್ರವಾಗಿ ಪ್ರತಿಭಟಿಸಿದ್ದಾರೆ. ದುಡಿಯದೇ ತಿನ್ನುವ ಸೋಮಾರಿಗಳಿಗೆ ಸಮಾಜದಲ್ಲಿ ಜೀವಿಸಲು ಹಕ್ಕಿಲ್ಲವೆಂಬುದನ್ನು ನಿಷ್ಠುರವಾಗಿ ಹೇಳಿದ್ದಾರೆ.

ದುಡಿಮೆ - ಬದುಕು ಇವೆರಡೂ ಅವಿನಾಭಾವ ಸಂಬಂಧ ಹೊಂದಿವೆ. ಬದುಕಿಗೆ ಬೆಲೆ ಬರುವುದು ದುಡಿಮೆಯಿಂದ ಮಾತ್ರ. ಅಂತೆಯೇ ಆಯ್ದಕ್ಕಿ ಲಕ್ಕಮ್ಮ ' ಕಾಯವಳಿದ ಠಾವಿನಲ್ಲಿ ಜೀವದ ಎಡೆಯಾಟವುಂಟೆ ?' ೫ ಎಂದು ಪ್ರಶ್ನಿಸುತ್ತಾಳೆ. ಆರ್ಥಿಕ ವ್ಯವಸ್ಥೆಯ ಸುಸ್ಥಿತಿ ಅಗತ್ಯವೆಂದರಿತ ಈ ಪರಿಸರದ ಶರಣರು 'ಕಾಯಕ-ದಾಸೋಹ' ಗಳಿಗೆ ಪ್ರಾಶಸ್ತ್ಯ ನೀಡಿದರು. ಸಮಾಜದ ಜನರಿಗೆ 'ಅನ್ನ -ಅರಿವೆ-ಆಶ್ರಯ' ದೊರೆತಾಗ ಮಾತ್ರ ವ್ಯಕ್ತಿ ಸಮಾಜದಲ್ಲಿ ನೆಮ್ಮದಿಯಾಗಿ ಬಾಳಬಲ್ಲ ಎಂಬುದನ್ನು ಅರಿತ ಆಯ್ದಕ್ಕಿ ದಂಪತಿಗಳು ಕಾಯಕ-ದಾಸೋಹದ ಪರಿಕಲ್ಪನೆಗೆ ಹೊಸ ವ್ಯಾಖ್ಯೆಯನ್ನು ನೀಡಿ ಇಡೀ ಶರಣ ಪರಿಸರದಲ್ಲಿ ಅಗ್ರಗಣ್ಯರೆನಿಸಿದರು.

ತಮ್ಮ ಕಾಲದ ತೆರಿಗೆ ಪದ್ಧತಿಗಳನ್ನು ತಿಳಿಸುತ್ತ ಆ ತೆರಿಗೆಯ ಭಾರದಿಂದಾಗಿಯೇ ಸಮಾಜ ಎಷ್ಟು ಅನಾಹುತಗಳಿಗೆ ಅವಕಾಶ ಮಾಡಿಕೊಟ್ಟಿತ್ತೆಂಬುದನ್ನು ಸುಂಕದ ಬಂಕಣ್ಣನವರು ತಮ್ಮ ಅನೇಕ ವಚನಗಳಲ್ಲಿ ಅಭಿವ್ಯಕ್ತಿಸಿದ್ದಾರೆ.

---

೧ : ಸಂ : ಡಾ : ವೀರಣ್ಣ ರಾಜೂರು -ಸ.ವ.ಸಂ.-೫ , ವಚನ ೫ , ಪುಟ ೨೦೦

೨ : ಸಂ : ಡಾ : ಎಂ.ಎಂ. ಕಲಬುರ್ಗಿ-ಸ.ವ.ಸಂ. -೬ , ವಚನ ೧೧, ಪುಟ ೩೭೯

೩ : ಸಂ : ಡಾ : ಎಂ.ಎಂ. ಕಲಬುರ್ಗಿ-ಸ.ವ.ಸಂ. -೬ , ವಚನ ೨೨ , ಪುಟ ೩೮೧

೪ : ಸಂ : ಡಾ : ವೀರಣ್ಣ ರಾಜೂರು -ಸ.ವ.ಸಂ.-೫ , ವಚನ ೨೨ , ಪುಟ ೨೦೩

೫ : ಸಂ : ಡಾ : ವೀರಣ್ಣ ರಾಜೂರು -ಸ.ವ.ಸಂ.-೫ , ವಚನ ೧೦ , ಪುಟ ೨೦೧

ಇಲ್ಲಿನ ವಚನಗಳು ಅಂತಿಮವಾಗಿ ಆಧ್ಯಾತ್ಮಿಕ ನಿಲುವಿಗೆ ಪೂರಕವಾಗಿದ್ದರೂ ಅಭಿವ್ಯಕ್ತಿಸಿದ ವಿಚಾರಗಳನ್ನು ಗಮನಿಸಿದಾಗ ನಮಗೆ ಸೂಚ್ಯವಾಗಿ ಆ ಕಾಲದ ಆರ್ಥಿಕ ಸ್ಥಿತಿಯ ಗೊಂದಲಗಳನ್ನು ತಿಳಿಸುತ್ತವೆ. ಉದಾ : 'ಅರಿದಾಡುವಲ್ಲಿ ಹೊರೆ ಸುಂಕ' ೧, 'ಹೊತ್ತಾಡುವ ಹಾವಾಡಿಗಂಗೆ ಹಾವಿನ ಸುಂಕ'೨ ಇತ್ಯಾದಿಗಳನ್ನು ನಾವಿಲ್ಲಿ ಗಮನಿಸಬಹುದು.

ಮೂಲವಸ್ತು ಒಬ್ಬನದಾದರೆ ಅದನ್ನು ಅನುಭವಿಸುವರು ಮತ್ತೊಬ್ಬರು. ಹೀಗಾದಾಗ ಸಮಾಜದ ಆರ್ಥಿಕ ವ್ಯವಸ್ಥೆ ಹದ ತಪ್ಪುವುದು ಸಹಜವೆಂಬುದನ್ನು ಸುಂಕದ ಬಂಕಣ್ಣ ಹೇಳುತ್ತಾರೆ.೩

ಸಂಪತ್ತಿನ ಸಂಗ್ರಹವನ್ನು ಕುರಿತು ಶರಣರು ಕಟುವಾಗಿ ಖಂಡಿಸಿ ಪ್ರತಿಭಟಿಸಿದ್ದಾರೆ. ಸಂಪತ್ತಿನ ಸಂಗ್ರಹ - ಕೇಂದ್ರಿಕರಣ ಅರ್ಥವ್ಯವಸ್ಥೆಯ ಅಸ್ಥಿರತೆಗೆ ಕಾರಣವೆಂಬ ದೂರಾಲೋಚನೆಯನ್ನು ಈಪರಿಸರದ ಶರಣರು ಕಂಡುಕೊಂಡಿದ್ದರು. ಅದಕ್ಕಾಗಿ ಲಕ್ಕಮ್ಮ ಗಂಡನನ್ನೇ ತರಾಟೆಗೆ ತೆಗೆದುಕೊಂಡು ' ಈಸಕ್ಕಿಯಾಸೆ ನಿಮಗೇಕೆ? ' ೪ ಎಂದು ಪ್ರಶ್ನಿಸುತ್ತಾಳೆ.ಮತ್ತೊಂದಡೆ ಬಸವಣ್ಣನವರ ಸಂದೇಹ ವ್ಯಕ್ತಪಡಿಸಿ ' ಇದು ನಿಮ್ಮ ಮನವೋ ಬಸವಣ್ಣನ ಅನುಮಾನದ ಚಿತ್ತವೊ?೫ - ಎಂದುಪ್ರಶ್ನಿಸಿದ್ದನ್ನು ಗಮನಿಸಿದರೆ ಅವರು ಸಂಪತ್ತಿನ ಕೇಂದ್ರೀಕರಣ ವಿರುದ್ಧ ಪ್ರತಿಭಟಿಸಿದ್ದನ್ನು ಕಾಣಬಹುದಾಗಿದೆ.

ಕಾಯಕವೇ ಕೈಲಾಸ೬ ಎಂದು ಹೇಳಿ ಆಯ್ದಕ್ಕಿ ಮಾರಯ್ಯ ಮಾಡುವ ಕೆಲಸದ ಶ್ರೇಷ್ಠತೆಯನ್ನು ಸ್ಪಷ್ಟವಾಗಿ ಚಿತ್ರಸುತ್ತಾನೆ.

ಆಸೆಯೆಂಬ ಗುಣ ಇಡೀ ಸಮಾಜವನ್ನೆ ಆತಂಕಕ್ಕೆ ಎಡೆಮಾಡಿ ಅವನ ಬದುಕನ್ನೇ ಅಸ್ಥಿರಗೊಳಿಸಬಲ್ಲದು. ಇಂತಹ ಆಸೆಯುಳ್ಳ ಜನರ ಪ್ರವೃತ್ತಿಯನ್ನು ಈ ಪರಿಸರದ ಶರಣರು ಕಟುವಾಗಿ ಖಂಡಿಸಿದ್ದಾರೆ.

ಸಾವು ಮನುಷ್ಯರ ಬದುಕಿನಲ್ಲಿ ಖಂಡಿತ. ಸಾವಿನ ನಂತರ ದೇಹ ಮಣ್ಣಲ್ಲಿ ಮಣ್ಣಾಗಿ, ಬೆಂಕಿಯಲ್ಲಿ ಬೂದಿಯಾಗಿ, ನೀರಲ್ಲಿ ನೀರಾಗಿ ತನ್ನ ಅಸ್ತಿತ್ವವನ್ನು ಕಳೆದು ಕೊಳ್ಳುತ್ತದೆ. ಆದರೆ ಇಂತಹ ಸತ್ತ ದೇಹದ ಬಗ್ಗೆ ಸಮಾಜದ ಜನರು ಇಟ್ಟು ಕೊಂಡ ಭ್ರಮೆಗಳನ್ನು ಕುರಿತು ಬಿಬ್ಬಿ ಬಾಚಯ್ಯರು ' ಸತ್ತ ಶವಕ್ಕೆ ತಟ್ಟುಮುಟ್ಟು ಕೇಳಲೇಕೆ ? ' ೭ ಎಂದು ಪ್ರಶ್ನಿಸುತ್ತಾರೆ.

ಶಕುನ - ಭವಿಷ್ಯ - ಜ್ಯೋತಿಷ್ಯಗಳ ಬಗ್ಗೆಯೂ ಈ ಪರಿಸರದ ಶರಣರು ಪ್ರತಿಭಟಿಸಿ ಅವುಗಳ ಮೌಢ್ಯವನ್ನು ಖಂಡಿಸುತ್ತಾರೆ. ವೇದಗಳ ಕರ್ಮಕಾಂಡಕ್ಕೆ ಪೂರಕವಾಗಿ ಬೆಳೆದು ಬಂದಂತಹ ಶಕುನಗಳನ್ನು ಕಟುವಾಗಿ ಖಂಡಿಸಿ ನೇರವಾಗಿ ಪ್ರತಿಭಟಿಸುತ್ತಾರೆ. ಸಾಮಾನ್ಯ ಜನರ ಅಜ್ಞಾನ - ಬಡತನಗಳನ್ನೇ ತಮ್ಮ ಮೂಲ ಬಂಡವಾಳವಾಗಿರಿಸಿಕೊಂಡು ಮತ್ತಷ್ಟು ಅವರಲ್ಲಿ ಬದುಕಿನ ಬಗ್ಗೆ ಭಯ ಹುಟ್ಟಿಸಿ ಅದರ ಲಾಭವನ್ನು ಸೀಮಿತ ವರ್ಗ ಪಡೆದು ಕೊಳ್ಳಲು ರೂಪಿಸಿದ ವ್ಯವಸ್ಥಿತ ಹುನ್ನಾರಗಳೆಂದು ಅರ್ಥೈಸಿದ ಶರಣರಿಗೆ ಸಾಮಾಜಿಕ ಪ್ರಜ್ಞೆ ಇದ್ದುದರಿಂದಲೇಅವರು ಜನರ ಮೌಢ್ಯತೆಗಳನ್ನು ವಿಮರ್ಶಿಸಿದರು.

ಈ ಕುರಿತು ಆಯ್ದಕ್ಕಿ ಮಾರಯ್ಯ ಹೀಗೆ ಹೇಳುತ್ತಾರೆ :

ವಾರ ತಿಥಿ ಲಗ್ನಗಳೆಂದು ಬೇರೊಂದ ಮಾಡುವನ್ನಬರ

ತ್ರಿವಿಧ ಪೂಜೆ ಕೆಟ್ಟಿತ್ತು

ಗುರು ಲಿಂಗ ಜಂಗಮದ ಅನುವನರಿತುದೆ ನೇಮ

ಕಾಲ ಉಚಿತಕ್ಕೆ ಬಂದುದ ಕೂಡಿಕೊಂಬುದೆ ನಿತ್ಯ

ಈ ಗುಣ ಅಮರೇಶ್ವರ ಲಿಂಗವ ಕೂಡುವ ಕೂಟ೮ ಇಲ್ಲಿ ಇವರು ಸಾಂಪ್ರದಾಯಿಕ ನಿಲುವನ್ನು ಖಂಡಿಸುತ್ತಾರೆ.

---

೧ : ಸಂ : ಡಾ : ಬಿ.ಆರ್.ಹಿರೇಮಠ-ಸ.ವ.ಸಂ.-೯, ವಚನ ೧೨, ಪುಟ ೨೧೦

೨ : ಅದೇ : ವಚನ ೧೯, ಪುಟ ೨೧೩,

೩ : ಅದೇ : ವಚನ ೧೮, ಪುಟ ೨೧೨

೪ : ಸಂ : ಡಾ: ವೀರಣ್ಣ ರಾಜೂರು -ಸ.ವ.ಸಂ. -೫ , ವಚನ ೬ , ಪುಟ ೨೦೦

೫ : ಅದೇ : ವಚನ ೮, ಪುಟ ೨೦೦

೬ : ಸಂ : ಡಾ : ಎಂ.ಎಂ. ಕಲಬುರ್ಗಿ-ಸ.ವ.ಸಂ.-೬, ವಚನ ೭, ಪುಟ ೩೭೮

೭ : ಸಂ : ಡಾ: ಬಿ.ಆರ್. ಹಿರೇಮಠ -ಸ.ವ.ಸಂ. -೮, ವಚನ ೫ , ಪುಟ ೧೧೯

೮ : ಸಂ : ಡಾ : ಎಂ.ಎಂ. ಕಲಬುರ್ಗಿ-ಸ.ವ.ಸಂ.-೬, ವಚನ ೨೫, ಪುಟ ೩೮೨

ಬಡತನ ನಮ್ಮ ಇಂದಿನ ದೊಡ್ಡ ಸಾಮಾಜಿಕ ಸಮಸ್ಯೆ. ಇದರ ವಾಸ್ತವ ಚಿತ್ರವನ್ನು ಈ ಪರಿಸರದ ಶರಣರು ಚಿತ್ರಿಸಿದ್ದು ಹೀಗೆ:

'ಮನ ಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ

ಚಿತ್ರ ಶುದ್ಧದಲ್ಲಿ ಕಾಯಕವ ಮಾಡುವಲ್ಲಿ ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು೧'- ಇಲ್ಲಿ ಬಡತನದ ಹಿಂದಿರುವ ಸಮಾಜದ ಜನರ ಸೋಮಾರಿತನವನ್ನು ಸೂಚ್ಯವಾಗಿ ಖಂಡಿಸಿದ್ದನ್ನು ಕಾಣಬಹುದು. ಚಿತ್ತ-ಮನಸ್ಸು ಸರಿಯಾಗಿದ್ದು ಸೇವೆ ಮಾಡಿದರೆ ಯಾರಿಗೂ ಬಡತನವಿಲ್ಲವೆಂಬಾರ್ಥವನ್ನು ಈ ವಚನ ಧರಿಸುತ್ತದೆ. ಹಾಗೆಯೇ ಸಮಕಾಲೀನ ಸೋಮಾರಿ ತಂಡವೊಂದರ ಚಿತ್ರಣವನ್ನು ಆಯ್ದಕ್ಕಿ ಮಾರಯ್ಯ ಹೇಳಿದ್ದು ಹೀಗೆ:

' ನೇಮವ ಮಾಡಿಕೊಂಡು ಭಕ್ತರ ಭವನಂಗಳಹೊಕ್ಕು

ಕಾಯಕ ಸತ್ತು , ಹಣ, ಹೊನ್ನ ಬೇಡೆಹೆನೆಂಬುದು ಕಷ್ಟವಲ್ಲದ ಸದ್ಭಕ್ತಂಗೆ ಆ ಗುಣ ಅಮರೇಶ್ವರ ಲಿಂಗಕ್ಕೆ ದೂರ'೨-ಇಲ್ಲಿ ಇವರು ಸದ್ಭಕ್ತನಿಗೆ ಕಾಯಕ ಮುಖ್ಯವೆಂದು ಹೇಳುವ ಜೊತೆಗೆ ಅಂದಿನ ಮೈಗಳ್ಳರನ್ನು ನಮಗಿದು ನೆನಪಿಗೆ ತರುತ್ತದೆ. ಜೊತೆಗೆ ಇದು ಕಲ್ಯಾಣ ಪರಿಸರದಲ್ಲಿದ್ದ ಡಾಂಭಿಕ ಜಂಗಮ ವೇಷಧಾರಿಗಳನ್ನು ನೆನಪಿಸುತ್ತದೆ.

ಸಮಾಜದಲ್ಲಿ ಪ್ರಾಮಾಣಿಕತೆ ಎಂಬುದು ಬಹಳ ಮುಖ್ಯ. ಆದರೆ ಇದು ಬರಿ ಮಾತುಗಳಲ್ಲಿದೆ. ಇಂತಹ ಸ್ಥಿತಿಯನ್ನು ಗಮನಿಸಿ ಮಾತು - ಕೃತಿ ಬೇರೆಯಾಗಿರುವ ಡಾಂಭಿಕ ಜನರನ್ನು - ಅಂತಹವರ ಜ್ಞಾನದಿಂದ ಸಮಾಜ ಹಾಳಾಗಬಲ್ಲದೆಂಬುದನ್ನು ಎಚ್ಚರಿಸುತ್ತಾರೆ. ಮಾಡದೇ ಮಾಡಿದೆ ಎನ್ನುವ ವೇಷ ಡಂಭಕರನ್ನು ಕುರಿತು ಲಕ್ಕಮ್ಮ ' ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ ಕೊಡದೇ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ' ೩ ವೆನ್ನುತ್ತಾಳೆ.

ಜ್ಞಾನಕ್ಕೆ ಬಹಳ ಮಹತ್ವ ಕೊಟ್ಟ ಹಿಂದಿನ ಸಮಾಜವು ಜ್ಞಾನದ ಅನೇಕ ಭ್ರಮೆಗಳನ್ನು ಹುಟ್ಟಿಸಿ ಜ್ಞಾನ ಸುಲಭ ಸಾಧ್ಯವಲ್ಲವೆಂಬ ಹಸಿ ಸುಳ್ಳುಗಳನ್ನು ಸೃಷ್ಟಿಸಿತ್ತು. ಜ್ಞಾನವೆಂಬುದು ಬರಿ ಪುಸ್ತಕದ ಓದಿನ ಸರಕೆಂಬ ಭ್ರಮೆಯನ್ನು ಈ ಪರಿಸರದ ಶರಣರು ಕಿತ್ತೆಸೆದು ಜ್ಞಾನ ಎಲ್ಲರಲ್ಲಿ, ಎಂತವರಲ್ಲಾದರೂ ಇರಬಹುದು. ಪಡೆದ ಜ್ಞಾನವನ್ನು ಆಚರಿಸುವುದು ಬಹು ಮುಖ್ಯವೆಂದು ಶರಣರು ಸಾರಿದರು. ನಿಷ್ಠೆಯಿಂದ ಬದುಕು ಸಾಗಿಸಿದರೆ ಅದೇ ನಿಜವಾದ ಜ್ಞಾನವೆನ್ನುತ್ತಾ ಮುಕ್ತಾಯಕ್ಕ ಹೇಳಿದ್ದು ಹೀಗೆ:

' ನುಡಿಯಲು ಬಾರದ ಕೆಟ್ಟ ನುಡಿಗಳ........ ಹಿಡಿದ ವ್ರತ ಬಿಡದಿರಲು ಅದೆ ಮಹಾಜ್ಞಾನದಾಚರಣೆ' ೪

ಈ ಯುಗದ ಶರಣರು ಅಂದಿನ ಸಮಾಜದ ಅವ್ಯವಸ್ಥೆಗೆ ಕಾರಣವಾಗಿದ್ದ ಜಾತಿ, ವರ್ಗ, ಲಿಂಗ ಭೇಧಗಳ ವಿರುದ್ಧ ಸರಿಯಾದ -ವೈಚಾರಿಕ ಜ್ಞಾನವನ್ನು ಜನರಿಗೆ ತಿಳಿಸಿ ಬದುಕುವ ಸರಿ ದಾರಿಯನ್ನು ತೋರಿಸಿದರು.

ನುಡಿ -ನಡೆಗಳ ಸಮನ್ವಯತೆಯ ಸಹಕಾರವನ್ನು ಪ್ರಾಯೋಗಿಕವಾಗಿ ಸಮಾಜದ ಕಣ್ಣೆದುರು ಅವರು ತೆರೆದಿಟ್ಟ ಕಾರಣದಿಂದಲೇ ಅವರಿಗೆ ಸಮಾಜ ವಿಮರ್ಶೆ -ಪ್ರತಿಭಟನೆಮಾಡುವಲ್ಲಿ ನೈತಿಕ ನೆಲೆಯಿತ್ತು. ತಮ್ಮನ್ನು ವಿಮರ್ಶಿಸಿ ಕೊಂಡೇ ಅವರು ಸಮಾಜದ ವಿಮರ್ಶೆ-ಪ್ರತಿಭಟನೆಗೆ ತೊಡಗಿದರೆಂಬುದು ಗಮನಿಸಬೇಕಾದ ಸಂಗತಿಯಾಗಿದೆ.

ಬಸವೋತ್ತರ ಯುಗ

ಬಸವಯುಗದ ಸಾಮಾಜಿಕ ಸ್ವರೂಪ ಈ ಯುಗದಲ್ಲಿ ಮಹತ್ವ ಪೂರ್ಣ ಬದಲಾವಣೆಗೊಳಗಾಯಿತು. ಬಸವ ಯುಗದ ಸಂಘರ್ಷ -ತಳಮಳ- ಸಾಮೂಹಿಕ ಆಂದೋಲನದ ಕಾವು ದಿನಗಳೆದಂತೆ ಕಡಿಮೆಯಾಯಿತು. ಬಸವಪೂರ್ವ - ಬಸವ ಯುಗದ ಶರಣರು ಯಾವ ವೈದಿಕ ಸಮಾಜವನ್ನು, ಅದರ ಎಲ್ಲಾ ಪ್ರಕ್ರಿಯೆಗಳನ್ನು ತೊಡೆದು ಹಾಕಲು ಯತ್ನಿಸಿದ್ದರೋ ಅದೇ ವೈದಿಕ ಸಮಾಜದ ಗಾಢವಾದ ಅಪ್ಪುಗೆಯಲ್ಲಿ ಬಸವೋತ್ತರ ಯುಗ ಬಂಧಿಯಾಗುತ್ತ ನಡೆಯಿತು.

ಈ ಒಂದು ಕಾರಣದಿಂದಲೇ ಜಾತಿ, ಮೂರ್ತಿ ಪೂಜೆ, ಆಚರಣೆಗಳು, ಪುರೋಹಿತ ಶಾಹಿಯ ಪುನರುತ್ಥಾನ, ಲಿಂಗ ಭೇದ, ಮತೀಯ ವಿರಸಗಳೆಲ್ಲ ಕಾಣಿಸಿ ಕೊಂಡವೆಂಬುದನ್ನು ಸಹಿತ ಅಲ್ಲಗಳೆಯಲಾಗುದು. ಇಷ್ಟಾದರೂ ಈ ಯುಗದ ಶರಣರು ತಮ್ಮದೇ ಆದ ಮಿತಿಯಲ್ಲಿ ಇವುಗಳ ವಿರುದ್ಧ ಹೋರಾಟ ನಡೆಸಿದರು. ಅಂತೆಯೇ ಸಾಮರಸ್ಯದ ಸ್ಥಾಪನೆ ಅವರಿಗೆ ಅವಶ್ಯಕವಾಗಿ ಆ ದಿಸೆಯಲ್ಲಿ ಪ್ರಯತ್ನಸಿದರು. ಬಸವ ಯುಗದ ತೀವ್ರತೆ ಕಂಡುಬರಲಿಲ್ಲವಾದರೂ ಜಡಗೂಂಡ ಸಮಾಜಕ್ಕೆ ಮತ್ತೊಮ್ಮೆ ಚುರುಕನ್ನು ಮುಟ್ಟಿಸುವಲ್ಲಿ, ಸಮಾಜದ ಓರೆ-ಕೋರೆಗಳನ್ನು ಕಂಡು ವಿಮರ್ಶಿಸಿ ಪ್ರತಿಭಟಿಸಿದ್ದಲ್ಲಿ ಈ ಯುಗದ ಶರಣರನ್ನು ಅಲಕ್ಷ್ಯ ಮಾಡಲಾಗದು.

೧: ಸಂ: ಡಾ: ವೀರಣ್ಣ ರಾಜೂರು -ಸ.ವ.ಸಂ. -೫, ವಚನ೨೧, ಪುಟ ೨೦೩

೨: ಸಂ: ಡಾ: ಎಂ.ಎಂ. ಕಲಬುರ್ಗಿ-ಸ.ವ.ಸಂ.-೬, ವಚನ ೧೮, ಪುಟ ೩೮೦

೩: ಸಂ: ಡಾ: ವೀರಣ್ಣ ರಾಜೂರು -ಸ.ವ.ಸಂ. -೫, ವಚನ ೧೨, ಪುಟ ೨೦೧

೪: ಅದೇ: ವಚನ ೨೬, ಪುಟ ೨೭೮

ಈ ಯುಗದ ಹೇಮಗಲ್ಲ ಹಂಪರು ಬಸವಯುಗದ ಆಶಯಗಳ ಪ್ರತಿರೂಪವಾಗಿಯೇ ತಮ್ಮ ವಿಚಾರಗಳನ್ನು ಅಭಿವ್ಯಕ್ತಿಸಿ ಸಮಾಜವನ್ನು ಕೂಲಂಕುಷವಾಗಿ ಅವಲೋಕಿಸಿ ವಿಮರ್ಶಿಸಿ ಆ ಮೂಲಕ ಪ್ರತಿಭಟಿಸಿದ್ದನ್ನು ಕಾಣಬಹುದಾಗಿದೆ. ಜಾತಿ ಮತ್ತು ಕುಲಗಳನ್ನು ಕುರಿತು ನಿರ್ಭಿಡೆಯಿಂದ ಇವರು ಮಾತನಾಡುತ್ತಾರೆ.

ಹೊಲೆಯೊಳು ಹುಟ್ಟಿ, ಹೊಲೆಯಳು ಬೆಳೆದು

ಕುಲಮದಕೆ ಹೋರಾಡುತಿಪ್ಪರಯ್ಯಾ..........

........................ಕುಲಕ್ಕೆ ಹೋರಾಡು ತಿಪ್ಪರಯ್ಯಾ೧ ಮತ್ತೊಂದಡೆ ನಿಸರ್ಗದ ಸಹಜ ಸ್ಥಿತಿಯನ್ನು ತಿಳಿಸುತ್ತ ಆ ನಿಸರ್ಗದ ಸಮತೆಯ ಮೂಲಕವೇ ಈ ಸಮಾಜದ ಜಾತಿ ವ್ಯವಸ್ಥೆಯನ್ನು ಕುರಿತು ಪ್ರಶ್ನಿಸುತ್ತಲೇ ಅದಕ್ಕೆ ತಕ್ಕುದಾದ ಉತ್ತರವನ್ನು ನೀಡಿದ್ದು ಹೀಗೆ:

ಜಲ ಹರಿವೆಡೆಯಲ್ಲಿ ಹೊಲಗೇರಿ ಉತ್ತಮಗೇರಿ

ಅಮೇಧ್ಯದ ಗೇರಿಯೆಂದು ನೋಡಿ ಹರಿವುದೆ?

ಹರಿಯದು; ಅದಕ್ಕೆಲ್ಲ ಸಮ.

ಅಗ್ನಿ ಶ್ವಪಚರ ಮನೆ, ಗೃಹಸ್ಥರ ಮನೆ, ಬೇಡ ಮಾದಿಗ

ಹದಿನೆಂಟು ಜಾತಿ ಎಂದು ಅಡಿಯಿಡಲು ಮುನಿವುದೆ? ಮುನಿಯದು೨

ಮತ್ತೊಂದಡೆ ಕುಲಮದಕ್ಕೆ ಸಮಾಜ ಹೋರಾಡುವುದನ್ನು ಕುರಿತು 'ಕುಲಮದಕ್ಕೆ ಹೋರಾಡಿ ಕೆಟ್ಟುದು ಕೋಟಿ' ೩ ಎಂದು ಹೇಳಿ ಅಂದಿನ ಸಮಾಜದ ಜಾತಿಯ ತೀವ್ರಸ್ವರೂಪ ಹೇಳುತ್ತಾರೆ.

ಸಮಾಜದ ಅನೇಕ ವಿಕೃತವಾದ - ಅವಮಾನವೀಯ ಆಚರಣೆಗಳನ್ನು ಪ್ರಬಲವಾಗಿ ಖಂಡಿಸಿದ್ದು ಹೀಗೆ:

ಯೋನಿಯ ತೆರೆದು, ಬತ್ತಲೆಯಾಗಿ, ಚಿಕ್ಕದು ದೊಡ್ಡದು,

ಹೆಣ್ಣು ಗಂಡು ಊರು ರಾಜ್ಯವೆಲ್ಲ ನೋಡು ವಂದದಿ ನಡೆವರು.

ನಡೆದು ನಮ್ಮ ಮಲ್ಲಾರಿಯ ಹರಕೆ ಮುಟ್ಟಿತೆಂದು ನುಡಿವ

ಹೊಲೆಯರ ನಾಯಕನರಕದಲ್ಲಿಕ್ಕುವ

ನಮ್ಮ ಪರಮ ಗುರು ಪಡುವಿಡಿ ಸಿದ್ಧ ಮಲ್ಲಿನಾಥ ಪ್ರಭುವೇ೪

ವೇದ ಶಾಸ್ತ್ರಗಳನ್ನು ಓದುವುದರಲ್ಲಿಯೇ ಸಮಯ ವ್ಯರ್ಥಗೊಳಿಸಿ ನಿಜವಾದ ಜ್ಞಾನ ಪಡಿಯದೇ ಅಜ್ಞಾನಿಯಾದ ಸಮಾಜ ಚಿತ್ರಣವನ್ನು ತಮ್ಮ ವಚನಗಳ ಮೂಲಕ ಇವರು ಖಂಡಿಸುತ್ತಾರೆ.೫ ಹಾಗೆಯೇ ಇವರು ಭೂತ, ಪ್ರೇತ, ಪಿಶಾಚಿಗಳ ವಾಸ್ತವ ತಿಳಿಸಿ ಸುಮ್ಮನೆ ಸುಳ್ಳುಗಳನ್ನು ಸೃಷ್ಟಿಸಿ ಅದರ ಪ್ರತಿಫಲ ಪಡೆದು ಜೀವಿಸಿ ಜನರನ್ನು ಮೌಢ್ಯಕ್ಕೆ ಬಲಿಯಾಗಿರಿಸುವವರನ್ನು ಖಂಡಿಸುತ್ತಾರೆ. ೬

---

೧ : ಸಂ: ಡಾ: ವೀರಣ್ಣ ರಾಜೂರು - ಸ.ವ.ಸಂ. - ೧೪, ವಚನ ೯೪, ಪುಟ ೪೭೭

೨ : ಅದೇ: ವಚನ ೭೭, ಪು ೪೬೬

೩ : ಅದೇ: ವಚನ ೯೬, ಪುಟ ೪೭೮

೪ : ಅದೇ: ವಚನ ೨೩೪, ಪುಟ ೫೪೩-೫೪೪

೫ : ಅದೇ: ವಚನ ೮೬, ಪುಟ ೪೭೨

೬ : ಅದೇ: ವಚನ ೨೮೩, ಪುಟ ೫೭೧

ವೇದವನೋದಿ ವ್ಯಾಧಿ ಪರಿಹಾರವಾಗದು.

ಶಾಸ್ತ್ರವನೋದಿ ಸಂಕಲ್ಪ ಹಿಂಗದು

ಪುರಾಣವನೋದಿ ಪೂರ್ವ ಕರ್ಮವ ಕಳೆಯಲರಿಯರು

ಆಗಮವನೋದಿ ಅಂಗದೋಳು ಹೊರಗಿಪ್ಪ

ಅಷ್ಟಮದವ ಕಳೆಯಲರಿಯರು ೧ಈ ವಚನ ಪೂರೋಹಿತಶಾಹಿ ಹಿಡಿತದ ಹಿಂದಿರುವ ಯೋಜಿತ ತಂತ್ರವನ್ನು , ಅವರ ಮೋಸಗಾರಿಕೆಯನ್ನು ಸಮಾಜದ ಮೇಲೆ ಅವರು ಸಾಧಿಸಿದ ಕಪಿ ಮುಷ್ಠಿಯನ್ನು ತೆರದು ತೋರಿಸುತ್ತದೆ. ಹೀಗೆ ಇವರು ಸಮಕಾಲೀನ ಸಮಾಜದ ಇಡೀ ಬದುಕನ್ನೆ ತಮ್ಮ ಲೋಕಾನುಭವದ ಹಿನ್ನೆಲೆಯಲ್ಲಿ ಅತ್ಯಂತ ಸಾರವತ್ತಾಗಿ ಚಿತ್ರಿಸುತ್ತಾರೆ.

ಕೇವಲ ವೈಯತ್ತಿಕ ಲಾಭಕ್ಕಾಗಿ ಗುರುವಾಗಿ ಶಿಷ್ಯನಿಗೆ ದೀಕ್ಷೆ ನೀಡುವ ಭಂಡಗುರುವರ್ಗವನ್ನು ಅವರ ನೀಚತನವನ್ನು ಕಟುವಾಗಿ ಖಂಡಿಸಿದ್ದು ಹೀಗೆ:

ಪಟ್ಟವ ಕಟ್ಟಿದಮೇಲೆ ಲಕ್ಷಣವನರಸಲುಂಟೇನಯ್ಯಾ?

ಕೂಡುಂಡು ಜಾತಿ ಭೇದವ ನರಸಲುಂಟೇನಯ್ಯಾ ?

............ಕಾಂಚಾಣ ಕಪ್ಪಡದಾಸೆಗೆ ದೀಕ್ಷವ ಮಾಡಿ

ಹಿಂದೆ ಉಣಬಾರದೆಂಬ ಶೀಲವ ಹಿಡಿದರೆ೨ ಆಸೆಯನ್ನು ಕುರಿತು ಇವರು ಬಹುವಾಗಿ ಖಂಡಿಸಿ, ಆಸೆ ಸಮಾಜದ ಪಾಶವಾಗಿದೆ ಎನ್ನುತ್ತಾರೆ. ' ಯತಿಗಳು ಆಸೆರೋಷವ ಕಳಿಯಲರಿಯದೇ ಮತಿಭ್ರಷ್ಟರಾದರು ' ೩ ಇಲ್ಲಿ ಆಸೆಯನ್ನು ಮಾಯೆಗೆ ಹೋಲಿಸಿ ಅದು ಎಂತವರನ್ನು ಬಿಡದು ಎಂಬುದನ್ನು ತಿಳಿಸುತ್ತದೆ.

ಇವರು ಆಧ್ಯಾತ್ಮದ ಪರಿಭಾಷೆಯನ್ನು ಬಳಸಿಕೊಂಡಿದ್ದರೂ ತಮ್ಮ ಸಮಕಾಲೀನ ಆಡಳಿತ ವರ್ಗದವರ ಹೊಣೆಗೆಡಿತವನ್ನು , ಅವರ ಆಡಳಿತ ಸ್ಥಿತಿಯನ್ನು ಬಹು ಮಾರ್ಮಿಕವಾಗಿ ಚಿತ್ರಿಸಿ ಕೊಡುವುದನ್ನು ನಾವು ಅವರ ವಚನದಿಂದ ತಿಳಿಯಬಹುದಾಗಿದೆ.

ಹಾರುವರು ಹರಿಕಾರರು, ಗೌಡರಿಬ್ಬರು ಗೊಮಗುಸುಕರು

ಊರೊಳ ಹೊರಗೆ ಬಾರದ ಸೇನ ಬೋವರು ....

...................ರಾಜ ಮಹಾ ಕ್ರೋಧಿ

ಪರಿವಾರ ಬಾಧಕರು೪ ಹೀಗೆ ಸಮಾಜದ ಬಗ್ಗೆ ಕಟುವಾಗಿ ಖಂಡಿಸಿದ ಇವರು ಹೆಣ್ಣಿನ ಸ್ಥಿತಿಗತಿಗಳ ಬಗ್ಗೆ ಯಾವುದೇ ವಿಚಾರಗಳನ್ನು ಹೇಳುವುದಿಲ್ಲ . ಬದಲಾಗಿ ಇವರು ಸಂಸಾರವನ್ನು ಮಾಯೆಯೆಂದು ಕರೆಯುತ್ತಾರೆ. ವಿರಕ್ತರಾದ ಇವರಿಗೆ ಸಂಸಾರದ ಜೀವನ ಅರ್ಥಹೀನವೆಂಬ ಭಾವನೆ ಬಂದು ಬಿಟ್ಟಿದೆ. ಇವರ ಕಾಲಕ್ಕಾಗಲೇ ಶರಣರ ಸಮಾಜ ವ್ಯವಸ್ಥೆ ಸೈದ್ಧಾಂತಿಕ ನಿಲುವುಗಳನ್ನು ಪಡೆದು ಕೊಂಡಿತ್ತು. ಆ ಕಾರಣದಿಂದಾಗಿ ಇವರು ಇಂತಹ ಅಭಿಪ್ರಾಯ ಹೊಂದಿರುವುದು ಸಹಜವಾಗಿದೆ.

ಅಗ್ಘವಣಿ ಹಂಪಯ್ಯ ತನ್ನ ಇಡೀ ಬದುಕನ್ನು ಸಮಾಜ ಸೇವೆಯಲ್ಲಿ ತೊಡಗಿಸಿ ಕೊಂಡ ಶರಣ. ಶರಣ ಮಾರ್ಗವನ್ನು ಬೆಳೆಸುವ ಸದ್ಭಕ್ತರ ಸೇವೆಯನ್ನೇ ತನ್ನ ಕಾಯಕವನ್ನಾಗಿ ಮಾಡಿಕೊಂಡು ಬದುಕಿದಾತನೆಂಬುದು ಅನೇಕ ಕೃತಿಗಳಿಂದ ತಿಳಿದು ಬರುತ್ತದೆ. ಇತನ ಹೆಚ್ಚಿನ ವಚನಗಳು ನಮಗೆ ಉಪಲಬ್ಧವಾಗದ ಕಾರಣ ಆತನ ಸಾಮಾಜಿಕ ನಿಲುವುವಿನ ಬಗ್ಗೆ ಸ್ಪಷ್ಟವಾಗಿ ಕಂಡು ಕೊಳ್ಳಲು ಅಸಾಧ್ಯವಾಗಿದೆ. ಇದುವರೆಗೂ ದೊರೆತ ಆತನ ನಾಲ್ಕು ವಚನಗಳಲ್ಲಿಯೇ ಒಂದು ವಚನ ಬಹು ಸ್ಪಷ್ಟವಾಗಿ ಅಂದಿನ ಆಡಳಿತ ವರ್ಗದ ಸ್ಥಿತಿಯನ್ನು ನಮ್ಮ ಕಣ್ಮುಂದೆ ತರುತ್ತದೆ. ಆ ವಚನ ಹೀಗಿದೆ:

'ಹಂಸ ಪತಿ ಗರುಡ ಪತಿ ವೃಷಭ ಪತಿ ಮೊದಲಾದ ಸರ್ವ ಜೀವಾಧಿ ಪತಿ ದೇವರಾಯ ಮಹಾರಾಯನ ಅರಸುತನವ ಹೊಸತು

ಓಲಗಕ್ಕೆ ಬಾರ, ಸಿಂಹಾಸನದಲ್ಲಿ ಕುಳ್ಳಿರ ಸ್ತ್ರೀ ಲಂಪಟನಾಗಿ ಅಂತಃಪುರವ ಬಿಟ್ಟು ಹೊರವಂಡ೫'

ಈ ವಚನದಲ್ಲಿ ಕಂಪಿಲ ರಾಯನ ದುರಾಡಳಿತ ಚಿತ್ರಸುತ್ತಾರೆ.

---

೧ : ಸಂ: ಡಾ: ವೀರಣ್ಣ ರಾಜೂರು - ಸ.ವ.ಸಂ. - ೧೪, ವಚನ ೮೭ , ಪುಟ ೪೭೩

೨ : ಅದೇ : ವಚನ ೨೨೨, ಪುಟ ೫೩೫-೫೩೬

೩. : ಅದೇ : ವಚನ ೧೫೦, ಪುಟ ೫೦೫,

೪ : ಅದೇ : ವಚನ ೬೪, ಪುಟ ೪೬೦

೫ : ಸಂ: ಡಾ: ಎಂ.ಎಂ. ಕಲಬುರ್ಗಿ -ಸ.ವ.ಸಂ. -೬, ವಚನ ೩, ಪುಟ ೯೬

ಅನುಭಾವವನ್ನೇ ತಮ್ಮ ಪ್ರಮುಖ ತಾತ್ವಿಕ ಭಿತ್ತಿಯನ್ನಾಗಿರಿಸಿ ಕೊಂಡ ತತ್ವ ಪದಗಳನ್ನು ರಚಿಸಿದ ಬಸವೋತ್ತರ ಯುಗದ ಶರಣರು ತಮ್ಮ ಸಮಕಾಲೀನ ಸಮಾಜವನ್ನು ತಮ್ಮ ದೆಯಾದ ಮೀತಿಯಲ್ಲಿ ಖಂಡಿಸಿದ್ದಾರೆ. ಇವರ ಕಾಲಕ್ಕಾಗಲೇ ಶರಣರ ಸಮಾಜ ಪೂರೋಹಿತದ ಅಪ್ಪುಗೆಯಲ್ಲಿ ಸಂಪೂರ್ಣವಾಗಿ ಲೀನವಾಗದಿದ್ದರೂ ಅದೇ ಶೈಲಿಯಲ್ಲಿ ಹೊಸದೊಂದು ರೀತಿಯನ್ನು ಕಂಡು ಕೊಂಡು ನವ ಪುರೋಹಿತ ಶಾಹಿಯಾಗಿತ್ತು ವ್ಯವಸ್ಥೆಯ ವಿರುದ್ಧ ಬಂಡೆದ್ದು ಮಾನವೀಯತೆಗೆ ಬೆಲೆ ಕೊಟ್ಟು ತಮ್ಮ ತತ್ವಗಳನ್ನು ಶರಣರು ಅಭಿವ್ಯಕ್ತಿಸಿದರು.

ಮದುವೆ, ಜಾತಿ, ಮಡಿ -ಮೈಲಿಗೆ , ಸಂಪತ್ತು , ಅಧಿಕಾರ ಇತ್ಯಾದಿಗಳ ಬಗ್ಗೆ ತನ್ನದೇ ಯಾದ ನಂಬಿಕೆ -ಸಂಪ್ರದಾಯಗಳನ್ನು ಸೃಷ್ಟಿಸಿಕೊಂಡು ವ್ಯವಸ್ಥಿತ ಜಾಲದಲ್ಲಿ ಈ ಪರಿಸರದ ಸಮಾಜ ಸಿಲುಕಿ ನಲಗುತ್ತಿರುವಾಗ ತತ್ವಪದಗಳ ರಚಿಸಿದ ಶರಣರು ಅವುಗಳ ವಿರುದ್ಧ ಸರಿಯಾಗಿ ಪ್ರತಿಕ್ರಿಯಿಸಿದರು.

ಹುಟ್ಟಿನ ಬಗ್ಗೆ ಈ ಯುಗದ ಶರಣರು ವೈಜ್ಞಾನಿಕವಾಗಿ -ವಾಸ್ತವಿಕವಾಗಿ ಹೇಳಿದ್ದು ಇಂದಿಗೂ ಬಹು ಮಹತ್ವ ಪೂರ್ಣವಾಗಿದೆ. ಹುಟ್ಟಿನ ಮೂಲವನ್ನು ಕುರಿತು ಕೂಡಲೂರು ಬಸವಲಿಂಗ ಶರಣರು ಹೇಳಿದ್ದು ಹೀಗೆ:

ಮುಟ್ಟಿಗಿ ತಟ್ಟಿಗಿ ಅಂತಿದ್ದಿ ಮಿಂಡಲಾಡಿ

ಮುಟ್ಟಿನೊಳಗೆ ಹುಟ್ಟಿ ಬಂದಿ ಮಿಂಡಲಾಡಿ

ಮುಟು ಅನ್ನದಿರುವ ಮತ್ತೆ ಮಿಂಡಲಾಡಿ೧ ಎಂದರೆ ನೀರಲಕೇರಿ ಬಸವಲಿಂಗ ಶರಣರು

'ರುಧಿರ ರೇತಂಗಳಿಂದ ಈ ದೇಹವಾಯ್ತು'೨ ಎಂದಿದ್ದಾರೆ. ಹುಟ್ಟಿನ ಮೂಲಕ ನಿರ್ಧರಿಸಲ್ಪಡುವ ಜಾತಿ ವ್ಯವಸ್ಥೆಯ ತಿಕ್ಕಲುತನಗಳನ್ನು ಇವರು ತಮ್ಮ ಪದಗಳಲ್ಲಿ ಖಂಡಿಸಿದ್ದಾರೆ.

ಗೊಬ್ಬೂರು ಹಂಪಣ್ಣನವರು ದೇಹದ ಭೌತಿಕ ರಚನೆ ತಿಳಿಸುತ್ತಾ

ಎಲುಚರ್ಮನರಮಾಂಸ । ಮಲದೇಹವಿದಕದು ।

ಕುಲಗೋತ್ರವ್ಯಾಕೆ ಎಲೆತಂಗೀ । ಯಂವ್ವ ನಿನ್ನ ನೆಲೆ ।

ತಿಳಿಯೆ ನೀನೆನಿಸ್ಸಂಗಿ೩ ಎಂದು ಕುಲವನ್ನು ಕುರಿತು ಪ್ರಶ್ನಿಸಿದ್ದಾರೆ. ಘನಮಠ ನಾಗಭೂಷಣ ಶರಣರು ಜಾತಿಯನ್ನು ಭ್ರಮೆ ಎಂದು ಖಂಡಿಸಿ 'ಘಾತಕಗುಣ ಸೂತಕತ್ವ ಜಾತಿ ಭ್ರಾಂತಿಯಿಂದನೇಕ । ಪಾತಕೇಷ್ಟನಾಗಿ ಸ್ವಯಃ ಜ್ಯೋತಿಯೆನಿಸಿಕೊಂಬ ಭಾವ ॥೪ ಎನ್ನುತ್ತಾರೆ. ನೀರಲಕೇರಿ ಬಸವಲಿಂಗ ಶರಣರು 'ಕುಲದಭಿಮಾನಕ್ಕೆ ಕುಸ್ತಿಯಾಡಿ ಸತ್ತವ ಸುವ್ವಾಲೆಕ್ಕಸುವ್ವಾಲೆ'೫ ಎನ್ನುತ್ತಾರೆ.

ಜನರ ಮೂಢ ಆಚರಣೆಗಳನ್ನು ಈ ಯುಗದಶರಣರು ಖಂಡಿಸುತ್ತಾರೆ. ಸಮಾಜದಿಂದ ಬಂದುದನ್ನು ಸಮಾಜಕ್ಕೆ ಅರ್ಪಿಸದೇ ಇರುವ ಲೋಭಿಗಳನ್ನು ಕುರಿತು ಬಹು ಕಟುವಾಗಿ ಖಂಡಿಸಿದ್ದು ಹೀಗೆ:

ಉಣದೆಯುಡದೆ ಕೃಪಣತನದೊಳು ಬಲು ।

ಹಣವಗಳಿಸಲೇಂ ಮೋದದೊಳು ॥

ಕುಣಿಯೊಳಗಿಡುವಾ ವೇಳೆಯೊಳು ಮ ।

ಣ್ಣನೆ ತುಂಬುವರ ವಯದೊಳು ॥೬ ಸಮಾಜದ ಜನರ ವರ್ತನೆಗಳನ್ನು ಸಾರ್ವತ್ರಿಕವಾಗಿ ಅನ್ವಯವಾಗುವಂತೆ ವಿಮರ್ಶಿಸುವ ಅದನ್ನು ಸರಳವಾಗಿ ತಿಳಿ ಹೇಳುವ ಜನರ ಬದುಕಿಗೆ ವಾಸ್ತವ ಕನ್ನಡಿಯಾಗುವಂತೆ ತಮ್ಮ ಪದಗಳ ಮೂಲಕ ಕೂಡಲೂರು ಬಸವಲಿಂಗ ಶರಣರು ಎಚ್ಚರಿಸಿದ್ದಾರೆ.೭

---

೧ : ಆಯ್ಕೆ : ಎಸ್.ಜಿ.ಸ್ವಾಮಿ- ಕೂ.ಬ. ಪದ್ಯ ೬೮, ನುಡಿ೧, ಪುಟ ೫೭

೨ : ಸಂ : ಡಾ : ಬಸವಲಿಂಗ ಸೊಪ್ಪಿಮಠ- ನೀ.ಬ.ಶಿ.ಸ್ವ.- ಪದ್ಯ ೧೭೨, ನುಡಿ ೩೭, ಪುಟ ೧೦೦

೩ : ಆಯ್ಕೆ : ರಾಮಸ್ವಾಮಿ ನುಲಿ -ಗೊ.ಹಂ. -ಪದ್ಯ ೧೪, ನುಡಿ ೧೪ , ಪುಟ ೧೪

೪ : ಆಯ್ಕೆ : ಚೆನ್ನಬಸಪ್ಪ ಬೆಟ್ಟದೂರು-ಘ.ನಾ.ಶಿ.- ನುಡಿ೯ , ಪುಟ ೬

೫ : ಸಂ : ಡಾ : ಬಸವಲಿಂಗ ಸೊಪ್ಪಿಮಠ- ನೀ.ಬ.ಶಿ.ಸ್ವ -ಪದ್ಯ ೧೬೬, ನುಡಿ ೬ , ಪುಟ೯೨

೬ : ಆಯ್ಕೆ : ಚೆನ್ನಬಸಪ್ಪ ಬೆಟ್ಟದೂರು-ಘ.ನಾ.ಶಿ.- ನುಡಿ೩ , ಪುಟ ೮

೭ : ಆಯ್ಕೆ : ಎಸ್.ಜಿ.ಸ್ವಾಮಿ -ಕೂ.ಬ.-ಪದ್ಯ ೬೦, ನುಡಿ ೧-೨ , ಪುಟ ೫೦-೫೧

'ಗುರುವಿನ ಮಂತ್ರ ನಿನಗೊಂದ ಹೇಳುತೀನಿ' ೧ ಎಂಬ ಪದ್ಯದಲ್ಲಿ ಕೂಡಲೂರು ಬಸವಲಿಂಗ ಶರಣರು ಇಡೀ ಸಾಮಾಜಿಕ ವ್ಯವಸ್ಥೆಯ ಸ್ವರೂಪ ನಮ್ಮ ಕಣ್ಣೆದುರಿಗೆ ತಂದು ಜನಪರ - ಜೀವನಪರವಾದ ಕಾಳಜಿ ಪೂರ್ವಕ ಚಿಂತನೆ ಮಾಡಿದ್ದನ್ನು ಕಾಣಬಹುದು.

ಈ ಯುಗದ ಶರಣರು ತಾವುಕಂಡ ಸಮಾಜವನ್ನು ನಿರ್ಭಯವಾಗಿ, ಅಷ್ಟೆ ಸಮತೂಕವಾಗಿ ಖಂಡಿಸಿದ್ದಾರೆ. ಹೆಣ್ಣಿನ ಬಗ್ಗೆ ಹಗುರವಾದ ಅಭಿವ್ಯಕ್ತಿಗಳು ಇವರಲ್ಲಿ ಕಂಡು ಬಂದರೂ ಅದು ಹೆಣ್ಣಿನ ಬಗ್ಗೆ ತಿರಸ್ಕಾರದಿಂದಲ್ಲ ಸಂಸಾರದ ಅತೀ ವ್ಯಾಮೋಹದ ಬಗ್ಗೆ ಎಚ್ಚರಿಕೆ ನೀಡಿದ್ದು ಆಗಿದೆ.

ಜಲದುರ್ಗ ಶರಣರು ಸಾಮಾಜಿಕ ವಿಮರ್ಶೆಯನ್ನು ಅದರಲ್ಲೂ ಮುಖ್ಯವಾಗಿ ಸಮಕಾಲೀನ ಆಡಳಿತ ಶಾಹಿಯವಿರುದ್ಧ ಉಗ್ರವಾಗಿ ಪ್ರತಿಭಟಿಸಿದ್ದನ್ನು ಅವರ ಅನೇಕ ರಚನೆಗಳಲ್ಲಿ ನಾವು ಗಮನಿಸುತ್ತೆವೆ. ಜಾತಿಯನ್ನು ವಿರೋಧಿಸಿ ಇವರು ಬದುಕಿದರೂ ಉಳಿದವರು ಇವರನ್ನು ಹೀನಾಯವಾಗಿ ಕಾಣುವನುದನ್ನು ಗಮನಿಸಿದರೆ ಅಂದಿನ ಗಾಢವಾದ ಜಾತಿ ವ್ಯವಸ್ಥೆಯಲ್ಲಿ ಯಾವ ರೀತಿಯಾಗಿ ಏಕಾಂಗಿಯಾಗಿ ಪ್ರತಿಭಟಿಸಿದರೆಂಬುದನ್ನು ಗಮನಿಸಿದರೆ ಅಚ್ಚರಿಯಾಗುತ್ತದೆ.

ಈ ಯುಗದ ಶರಣರು ಸಮಾಜ ವಿಮರ್ಶೆಗಿಂತ ಆತ್ಮ ವಿಮರ್ಶೆಗೆ ಬಹು ಪ್ರಮುಖ ಸ್ಥಾನ ನೀಡಿದ್ದಾರೆಂಬುದನ್ನು ಗಮನಿಸಬೇಕು. ಹಾಗಾಗಿ ಸಂದರ್ಭಕ್ಕೆ ಅನುಗುಣವಾಗಿ ತಾವು ಕಂಡ ಸಮಾಜವನ್ನು ಅದರ ನೀಚತನಗಳನ್ನು ಬಯಲಿಗೆಳೆದಿದ್ದಾರೆ. ಸ್ವವಿಮರ್ಶೆಯ ಮೂಲಕ ಸಮಾಜ ವಿಮರ್ಶೆಯನ್ನು ಮಾಡಿ ಬದುಕಿನಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಿದ್ದಾರೆ. ಬದುಕಿನಲ್ಲಿ ಅನೇಕ ನೋವುಗಳನ್ನು ಅನುಭವಿಸಿದ ಈ ಶರಣರಿಗೆ ಆರ್ಥಿಕ ಸ್ಥಿತಿಯ ಏರಿಳಿತಗಳೆ ಅವರಿಗೆ ಬಹುದೊಡ್ಡ ಪಾಠವನ್ನು ಕಲಿಸಿವೆ.

೫ : ೩ ಶರಣರು ಕಟ್ಟಬಯಸಿದ ಸಮಾಜ

ಸಂಪ್ರದಾಯಗಳು ಅನೇಕ ಶತಕಗಳಿಂದ ಸಮಾಜವನ್ನು ಜಡಗೊಳಿಸಿ, ಮಾನವರ ಬದುಕನ್ನು ತನ್ನ ಕಪಿಮುಷ್ಠಿಯಲ್ಲಿ ಹಿಡಿದು ಕೊಂಡಾಗ ಅನಿವಾರ್ಯವಾಗಿ ಶರಣರು ಸಮಾಜ ವಿಮರ್ಶೆ - ಪ್ರತಿಭಟನೆಗೆ ತೊಡಗಬೇಕಾಯಿತು. ಸಮಾಜದ ವ್ಯವಸ್ಥೆಯ ಬದುಕು ಸುಂದರವಾಗದ ಹೊರತು ತಾವಿಟ್ಟು ಕೊಂಡ ಧ್ಯೇಯ- ಆದರ್ಶ - ಧಾರ್ಮಿಕ ಸಿದ್ಧಾಂತಗಳಿಗೆ ನಿಶ್ಚಿತ ನೆಲೆಗಳಿಗೆ ಬೆಲೆಯಿಲ್ಲವೆಂಬುದನ್ನು ಅರ್ಥೈಸಿಕೊಂಡಿದ್ದರು. ಹೊಸ ವ್ಯವಸ್ಥೆಯನ್ನು ಹುಟ್ಟು ಹಾಕಬೇಕಾದಾಗ ಹಳೆಯದರ ವಿರುದ್ಧ ಅನಿವಾರ್ಯವಾಗಿ ಪ್ರತಿಭಟಿಸಬೇಕಾಯಿತು. ಈ ಪ್ರತಿಭಟನೆಯ ಹಿಂದೆ ಯಾವುದೇ ದ್ವೇಷಗಳಿರಲಿಲ್ಲ. ಮನುಷ್ಯರ ಮೇಲಿನ ಪ್ರೀತಿಯೇ ಅವರನ್ನು ಸಮಾಜ ವಿಮರ್ಶೆ ಮಾಡಲು ಹಚ್ಚಿತು. ಶರಣರ ವಿಮರ್ಶೆ ಅಧರಕ್ಕೆ ಕಹಿಯಾಗಿ ಉದರಕ್ಕೆ ಸಿಹಿಯಾಗಿತ್ತು. ಪ್ರೀತಿಯೇ ಬದುಕಿನ ನೀತಿ ಸೂತ್ರವಾಗಬೇಕೆಂದು ಬಯಸಿ ಆಹಿನ್ನೆಲೆಯಲ್ಲಿ ಸಮಾಜವನ್ನು ಕಟ್ಟಲು ಬಯಸಿದರು. ಇವರು ಕಟ್ಟಬಯಸಿದ ಸಮಾಜವನ್ನು ನಾವು ಪ್ರಮುಖವಾಗಿ ಈ ಕೆಳಗಿನ ಅಂಶಗಳ ಮೂಲಕ ಗುರುತಿಸಬಹುದಾಗಿದೆ. :

೧ : ಸ್ವಾತಂತ್ರ್ಯ

೨ : ಆರ್ಥಿಕ ವ್ಯವಸ್ಥೆ (ಸಮಾನತೆ)

೩ : ಜ್ಯಾತ್ಯಾತೀತ ಸಮಾಜ

೪ : ಮೌಲ್ಯಧಾರಿತ ವ್ಯವಸ್ಥೆ - ಇತ್ಯಾದಿ

೧ : ಸ್ವಾತಂತ್ರ್ಯ

ಅನ್ನಕ್ಕಿಂತಲೂ ಜೀವಿಗೆ ಅವ್ಯಶಕವಾದದ್ದು ಸ್ವಾತಂತ್ರ್ಯ. ಇದಕ್ಕಾಗಿ ಕಾಲಕಾಲದಿಂದಲೂ ಅನೇಕ ರೀತಿಯಲ್ಲಿ ಸಂಘರ್ಷ ನಡೆಯುತ್ತ ಬಂದಿದೆ. ಶರಣರಿಗಿಂತ ಪೂರ್ವದಲ್ಲಿ ಸ್ವತಂತ್ರವೆಂಬುದು ಕನಸಾಗಿತ್ತು. ಇದನ್ನು ಗಮನಿಸಿದ ಶರಣರು ಮೊದಲಬಾರಿಗೆ ಇದರ ಕಲ್ಪನೆಯನ್ನು ಮೂಡಿಸಿದರು. ಈಪರಿಸರದ ಶರಣರು ಕಲ್ಯಾಣ ಶರಣರಂತೆ ರಾಜಪ್ರಭುತ್ವವನ್ನು ಕುರಿತು ಪ್ರತಿಭಟಿಸಿದ್ದನ್ನು ಗಮನಿಸಿದರೆ ಅವರ ಸ್ವಾತಂತ್ರ್ಯದ ಪರಿಕಲ್ಪನೆಯ ಅರಿವು ನಮಗಾಗುತ್ತದೆ. ಬಸವಪೂರ್ವಯುಗದ ಶಂಕರ ದಾಸಿಮಯ್ಯ ರಾಜರ ವಿರುದ್ಧವೇ ಸವಾಲು ಎಸೆದು ಅವರ ಸಮ್ಮುಖದಲ್ಲಿಯೇ ವಿಷ್ಣು ಪ್ರತಿಮೆಯನ್ನು ಭಗ್ನಗೊಳಿಸಿದ ಘಟನೆಯನ್ನು ಗಮನಿಸಿದರೆ ಆತ ರಾಜಪ್ರಭುತ್ವದ ವಿರುದ್ಧ ಸಿಡಿದೆದ್ದು ನಿಂತ ಅವರ ವೈಯಕ್ತಿಕ ಪ್ರತಿಭಟನೆಯ ಹಿಂದೆ ಸ್ವಾತಂತ್ರದ ಹಂಬಲವನ್ನು ಕಾಣಬಹುದಾಗಿದೆ.

ಢಕ್ಕೆಯ ಮಾರಯ್ಯನಂತಹ ಶರಣರು ತಾವು ಕುಣಿಸುವ ಮಾರಿ - ಢಕ್ಕೆಯ ವಾದ್ಯದ ಮೂಲಕವೇ ಶರಣತ್ವವನ್ನು ಸರ್ವರಿಗೂ ತಿಳಿಸಿ ಅವರಲ್ಲಿ ಅರಿವಿನ ವಿವೇಕವನ್ನು ಮೂಡಿಸಿದ್ದು ಅವರಿಗಿರುವ ಸ್ವಾತಂತ್ರದ ಮೂಲ ತುಡಿತವೇ ಕಾರಣವಾಗಿದೆನ್ನಬಹುದಾಗಿದೆ. ಶರಣೇ ಲಕ್ಕಮ್ಮ ತನ್ನ ವಚನದಲ್ಲಿ 'ಆಸೆ' ಎಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ?'೨ಎಂಬುದಾಗಿ ಪ್ರಶ್ನಿಸಿ ರಾಜ ಪ್ರಭುತ್ವದ ಸ್ವರೂಪ ಬಗ್ಗೆ ಸೂಚ್ಯವಾಗಿ ತಿಳಿಸುತ್ತಾಳೆ.

೧ : ಆಯ್ಕೆ : ಎಸ್.ಜಿ. ಸ್ವಾಮಿ - ಕೂ.ಬ. - ಪದ್ಯ ೬೫, ನುಡಿ೧-೫, ಪುಟ ೫೪

೨ : ಸಂ : ಡಾ : ವೀರಣ್ಣ ರಾಜೂರು - ಸ.ವ.ಸಂ. - ೫, ವಚನ ೬, ಪುಟ ೨೦೦

ಜೊತೆಗೆ ಆ ಪ್ರಭುತ್ವದ ಅಸ್ತಿವಾರದ ವಿರುದ್ಧವೇ ಅವರು ಪ್ರತಿಭಟಿಸಿ ಅದಕ್ಕಿಂತ ಭಿನ್ನವಾದ ಸ್ವತಂತ್ರವುಳ್ಳ ಪ್ರಜಾ ಪ್ರಭುತ್ವದ ಸ್ಥಾಪನೆಗೆ ಬಯಸಿದ್ದರೆಂಬುದು ನಮಗೆ ಸ್ಪಷ್ಟವಾಗಿ ಗೋಚರಿಸುತ್ತದೆ. ತಾವು ಕಟ್ಟ ಬಯಸಿದ ಸಮಾಜಕ್ಕೆ ರಾಜಪ್ರಭುತ್ವದ ಛಾಯೆ ಇರಬಾರದೆಂಬ ಆಶಯ ಲಕ್ಕಮ್ಮನದಾಗಿದೆ. ಇದೇ ರೀತಿ ನಿಲುವನ್ನು ಢಕ್ಕೆಯ ಮಾರಯ್ಯ 'ಭೂರಿ ಆವಾರಿಗಳಲ್ಲಿ ಮಾಡುವುದೆರಾಜತ್ವ' ೧ ಎಂದು ಹೇಳಿ ಅಂದಿನ ರಾಜರ ಕೇಂದ್ರೀಕರಣ ವ್ಯವಸ್ಥೆಯ ವಿರುದ್ಧ ಪ್ರಶ್ನಿಸಿ ವಿಕೇಂದ್ರೀಕರಣದ ಬಗ್ಗೆ ಒತ್ತಿ ಹೇಳುತ್ತಾನೆ.

ಸ್ವಾತಂತ್ರ್ಯದ ಅಭಿವ್ಯಕ್ತಿ ಕೆಳವರ್ಗದಲ್ಲಿಯೇ ಮೊದಲು ಧ್ವನಿತವಾಗಿರುವುದನ್ನು ನಾವು ಇಲ್ಲಿ ಬಹು ಮುಖ್ಯವಾಗಿ ಗಮನಿಸಬೇಕಾಗುತ್ತದೆ. ರಾಜ ಪ್ರಭುತ್ವವನ್ನು ಕೊನೆಗಾಣಿಸಿದ ಮೇಲೆಯೇ ನಾವು ಆಂತರಿಕವಾದ ಸ್ವಾತಂತ್ರ್ಯದ ಬಗ್ಗೆ ವಿಚಾರಿಸುತ್ತೇವೆ. ಭಾರತದ ಸಂದರ್ಭದಲ್ಲಿ ಆಗಿದ್ದು ಇದೆ. ಆಂಗ್ಲರಿಂದ ಸ್ವಾತಂತ್ರ್ಯ ಸಿಕ್ಕ ಬಳಿಕವೇ ನಾವು ಆಂತರಿಕ ಸ್ವಾತಂತ್ರ್ಯಕ್ಕಾಗಿ ಬಯಸಿ ಸಂವಿಧಾನ ರಚನೆಗೆ ತೊಡಗಿದ್ದು ; ಇದರ ಅನುಷ್ಠಾನದ ಪ್ರಾಮಾಣಿಕ ಪ್ರಯತ್ನವಾದಾಗಲೇ ಮಾತ್ರ ಸಮಗ್ರವಾದ ಸ್ವಾತಂತ್ರ್ಯವು ಸಮಾಜದಲ್ಲಿ ದೊರಕಲು ಸಾಧ್ಯವಿದೆ. ಆದರೆ ಈ ಪರಿಸರದ ಶರಣರು ತಮ್ಮ ಜೀವಿತಾವಧಿಯಲ್ಲಿಯೇ ತಾವು ಕಟ್ಟಬಯಸಿದ ಹೊಸ ಸಮಾಜಕ್ಕೆ ಇಂತಹ ಸ್ವಾತಂತ್ರ್ಯದ ಅವಶ್ಯಕತೆಯನ್ನು ರಾಜಪ್ರಭುತ್ವದ ವಿರೋಧತ್ವದ ಜೊತೆ ಜೊತೆಗೆ ಆಲೋಚಿಸಿದ್ದರು . ಇಂದಿನ ನಮ್ಮ ಸ್ವತಂತ್ರ ಭಾರತದ ಹಕ್ಕುಗಳು ಶರಣರ ಸಂದರ್ಭದಲ್ಲಿ ಕರ್ತವ್ಯಗಳಾಗಿ ಅವು ಕೇವಲ ಅಭಿವ್ಯಕ್ತಿ ಮಾಧ್ಯಮವಾಗದೇ ಆಚರಣಾ ವಿಧಿಗಳಾಗಿದ್ದವು.

ಅಂದಿನ ಸಮಾಜದಲ್ಲಿ ತೀರ ಕೇಳವರ್ಗದವರೆಂದು ಕರೆಸಿಕೊಳ್ಳುತ್ತಿದ್ದ ಮಾರಿ ಕುಣಿಸುವ ಢಕ್ಕೆಯ ಮಾರಯ್ಯನಂತವರು ಕೂಡ ತಮ್ಮ ಅನಿಸಿಕೆಗಳನ್ನು ಮುಕ್ತವಾಗಿ ಅಭಿವ್ಯಕ್ತಿಸುವ ಸ್ವಾತಂತ್ರ್ಯವಿತ್ತು . ಇಂತಹ ಪರಿಸರದ ಅವಕಾಶದಿಂದಲೇ ಢಕ್ಕೆಯ ಮಾರಯ್ಯ ಹೇಳಿದ್ದು ಹೀಗೆ:

ಮತ್ತಾರನು ನುಡಿಯದೆ ತಾನಾರೈದು ಮಾಡುವ ಪರಿಯಿನ್ನೆಂತು ?

ಸಜ್ಜನ ಶರಣರಲ್ಲಿ ಭಕ್ತಿ , ಅಸಜ್ಜನ ದುರ್ವೃತ್ತರಲ್ಲಿ ಧಿಕ್ಕಾರ .

ಬಿಡು ಮುಡಿಯಲ್ಲಿ ನಿಜ ತತ್ವವನರಿದು ಮಾಡುವುದು ಮಾಡಿಸಿಕೊಂಬುದು

ಕಾಲಾಂತಕ ಭೀಮೇಶ್ವರ ಲಿಂಗಕ್ಕೆ ಸಮರ್ಪಿತ ೨ ಇಂತಹ ಕೆಚ್ಚೆದೆ , ಧೃಡ ನಿಲುವು ನಾವು ಬಸವ ಪೂರ್ವಯುಗದಲ್ಲಿ ಕಾಣಬಹುದು. ಅರಿವಿನ ಸ್ವರೂಪ ತಿಳಿಸುತ್ತ ತನ್ನ ನೇರ ನುಡಿಗಳನ್ನು ಸೂಕ್ತ ನಿದರ್ಶನಗಳೊಂದಿಗೆ ಬಿಬ್ಬಿ ಬಾಚಯ್ಯ ಹೇಳುವುದು ಹೀಗೆ:

ಸ್ವಾದವಿಲ್ಲದ ಹಣ್ಣು , ಸೌರಭವಿಲ್ಲದ ಕುಸುಮ

ಸಾರವಿಲ್ಲದ ದ್ರವ್ಯ, ಆದಾರಿಗೆ ಯೋಗ್ಯ?

ಅರಿವಲ್ಲದವನ ಇಷ್ಟದ ಬರಿಯ ಡಂಬಕದ ಪೂಜೆ ಅಡಿಯಿಡಲಿಲ್ಲ , ಏಣಾಂಕಧರ ಸೋಮೇಶ್ವರ ಲಿಂಗಕ್ಕೆ ೩ ಈ ಪರಿಸರದ ಶರಣರ ವಚನಗಳನ್ನು ಅವಲೋಕಿಸಿದಾಗ ಅವರು ವಿಚಾರಿಸಿದ ಸ್ವಾತಂತ್ರ ಬರಿ ಅವರ ಅಭಿವ್ಯಕ್ತಿ ಸ್ವಾತಂತ್ರ್ಯವಾಗಿರದೇ ಅದು ವ್ಯಕ್ತಿ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯವೂ ಆಗಿತ್ತೆಂಬುದನ್ನು ಗಮನಿಸಬೇಕಾದ ಸಂಗತಿಯಾಗಿದೆ.

'ಬಹುಶಃ ಈ ವ್ಯಕ್ತಿ ಸ್ವಾತಂತ್ರ್ಯವೆಂಬ ವಿಷಯವನ್ನು ಹಿಡಿದು ಕೊಂಡು , ಶರಣ ಸಂಸ್ಕೃತಿಯ ಚರಿತ್ರೆಯ ಬೆಳವಣಿಗೆಯ ಮಜಲುಗಳನ್ನು ಅದು ತೆಗೆದು ಕೊಳ್ಳುತ್ತಾ ಬಂದಿರುವ ತಿರುವುಗಳನ್ನು ಪರಿಶೀಲಿಸುತ್ತಾ ನಡೆದು , ಕಡೆಯಲ್ಲಿ ಅದರ ಆದಿಯನ್ನು ಹಿಡಿದು ನಿಂತಾಗ ಶರಣರ ಸಂಸ್ಕೃತಿಯ ಮೂಲ ಧಾತುವೇ ವ್ಯಕ್ತಿ ಸ್ವಾತಂತ್ರ್ಯವೆಂಬುದು ಗೊತ್ತಾಗುತ್ತದೆ. ಒಂದುವೇಳೆ ಈ ಶರಣ ಸಂಸ್ಕೃತಿ ವಿಚಾರದ ಮೂಲ ಧಾತುವೇ ವ್ಯಕ್ತಿ ಸ್ವಾತಂತ್ರ್ಯವೆಂಬುದು ಸುಳ್ಳಾಗಿದ್ದ ಪಕ್ಷದಲ್ಲಿ ಕೇವಲ ಬಸವಣ್ಣ - ಅಲ್ಲಮರಂಥವರು ಮಾತ್ರ ಶೈವ ಸಂಸ್ಕೃತಿಯ ಧರ್ಮ ಪುರುಷರು ಎನಿಸಬಹುದಿತ್ತೇ ಹೊರತು ಕಕ್ಕಯ್ಯ, ಚೆನ್ನಯ್ಯ ರಂಥವರು ಶೈವ ಧರ್ಮದ ಆಚಾರ್ಯ ಪುರುಷರೂ ಶೈವ ಸಂಸ್ಕೃತಿಯ ಗೋತ್ರ ಪುರುಷರು ಎನಿಸಲಿಕ್ಕೆ ಸಾಧ್ಯವಿರುತ್ತಿರಲಿಲ್ಲ ಎಂಬುದನ್ನು ಸರ್ವತಾ ಮರೆಯದಿರಬೇಕು' ೪ ಎನ್ನುವ ಡಾ : ಮ.ನ. ಜವರಯ್ಯರವರ ಮಾತುಗಳನ್ನು ಈ ಪರಿಸರದ ಶರಣರಿಗೂ ಅನ್ವಯಿಸಬಹುದಾಗಿದೆ.

ಆಯ್ದಕ್ಕಿ ದಂಪತಿಗಳ 'ಕಾಯಕ' ಶರಣ ಸಮೂಹದಲ್ಲಿಯೇ ಬಹು ನಿಷ್ಠೆಯ ಕುರುಹಾಗಿ - ಸಾಂಕೇತಿಕವಾಗಿ ಪ್ರಸಂಶೆಗೆ ಒಳಪಟ್ಟಿರುವಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಶರಣರು ನೀಡಿದ ಪ್ರಾಶಸ್ತ್ಯವೇ ಮೂಲ ಕಾರಣವಾಗಿದೆ. ಯಜಮಾನ ಸಂಸ್ಕೃತಿಯ ಬೇರುಗಳನ್ನು ಹಿಡಿದು ಅಲ್ಲಾಡಿಸಿ ಯಾವ ರೀತಿಯಲ್ಲಿ ಸ್ವಾತಂತ್ರ್ಯದ ಪರಿಕಲ್ಪನೆಗಳನ್ನು ಅಭಿವ್ಯಕ್ತಿಸಿದರೆಂಬುದನ್ನು ನಾವು ಈ ಪರಿಸರದ ಶರಣರ ವಚನಗಳಲ್ಲಿ ಕಾಣಬಹುದಾಗಿದೆ.

---

೧ : ಸಂ. ಡಾ : . ಎಸ್. ವಿದ್ಯಾ ಶಂಕರ - ಸ.ವ.ಸಂ.-೭ , ವಚನ ೬೩, ಪುಟ ೩೦೨

೨ : ಅದೇ : ವಚನ ೬೪, ಪುಟ ೩೦೨

೩ : ಸಂ : ಡಾ : ಬಿ. ಆರ್. ಹಿರೇಮಠ - ಸ.ವ.ಸಂ.-೮, ವಚನ ೮೬, ಪುಟ ೧೩೭

೪ : ಡಾ : ಮ.ನ.ಜವರಯ್ಯ - ದ.ಶ.ಶ.ಅ.- ಪುಟ ೧೩೪-೧೩೫

ಕ್ಷಯ ಕಾರಣವೆಂಬ ಪಟ್ಟಣಕ್ಕೆ ಲಯಕಾರಣವೆಂಬ ಅರಸು

ಪೋಲಿಕಾರ ಪ್ರಧಾನ, ಮದೋನ್ಮತ್ತ ತಳವಾರ

ಇಂತೀ ಪಟ್ಟಣದರಸು, ಮರವೆಯ ಮಹಾರಾಜ್ಯವನು ಆಳುತ್ತಿರಲಾಗಿ

ಆತನ ಅಡಿಗೆರಗಿ ಅಂಜುವರಿಲ್ಲ ಬಂಕೇಶ್ವರ ಲಿಂಗವ ಕಂಡರಿಯದ ಕಾರಣ[೧] ಇಲ್ಲಿ ಸುಂಕದ ಬಂಕಣ್ಣನವರು ತಾತ್ವಿಕ ನೆಲೆಯಾಧರಿಸಿ ಅಭಿವ್ಯಕ್ತಿಸಿದ್ದರೂ ವಿಶಿಷ್ಟವಾದ ಸ್ವಾತಂತ್ರ್ಯದ ಸ್ವರೂಪವನ್ನು ಗುರುತಿಸಬಹುದಾಗಿದೆ.

ಮುಕ್ತಾಯಕ್ಕರ ವಚನಗಳನ್ನು ಅವಲೋಕಿಸಿದಾಗ ಆಕೆಯ ಅಭಿವ್ಯಕ್ತಿ ಸ್ವಾತಂತ್ರ್ಯದ ಜೊತೆಗೆ ವೈಚಾರಿಕ ಸ್ವಾತಂತ್ರ್ಯದ ನಿಲುವುಗಳನ್ನು ಕಾಣಬಹುದಾಗಿದೆ. ಪ್ರಭುವಿನ ಸಲಹೆಯನ್ನು ಸರ್ವರೂ ಒಮ್ಮತವೆಂಬಂತೆ ಸಮಕಾಲೀನರು ಸ್ವೀಕರಿಸುವ ಧೋರಣೆಯನ್ನು ಬಹುತೇಕರು ತಾಳಿದ್ದರೇ ಈಕೆ ಪ್ರಭುವನ್ನೇ ಪ್ರಶ್ನಿಸುತ್ತಾಳೆ. ಅದು ಸಾಮಾನ್ಯ ರೀತಿಯ ಪ್ರಶ್ನೆಯಲ್ಲ ಪ್ರಭುಗಳು ಎಸೆದ ಸವಾಲಿಗೆ ತಕ್ಕ ಸವಾಲನ್ನು ಎಸೆದ ವೈಚಾರಿಕ ನಿಲುವುಗಳನ್ನು ಗಮನಿಸಬಹುದಾಗಿದೆ. 'ತನ್ನ ತಾನರಿದೆಡೆ ನುಡಿಯೆಲ್ಲಾ ತತ್ತ್ವ ನೋಡಾ। ತನ್ನ ತಾನರಿದಡೆ ನುಡಿಯಲ್ಲಾ ಮಾಯೆ ನೋಡಾ।' ಎಂದೇಳಿದ ಪ್ರಭು 'ಎನ್ನ ಮನದೊಳಗೆ ಕಂದು ಕಲೆಯೆಂಬುದಿಲ್ಲ ನೋಡಾ'[೨] ಎಂಬುದಕ್ಕೆ ಮುಕ್ತಾಯಕ್ಕ 'ನುಡಿಯ ಹಂಗಿನ್ನೂ ನಿಮಗೆ ಹಿಂಗದು ನಡೆಯನೆಂತು ಪರರಿಗೆ ಹೇಳುವಿರಿ ?' [೩] ಎಂದು ಪ್ರಶ್ನಿಸಿದ ವೈಚಾರಿಕ ಸ್ವಾತಂತ್ರ್ಯದ ಸ್ಪಷ್ಟ ಸ್ವರೂಪವನ್ನು ನಾವಿಲ್ಲಿ ಗುರುತಿಸಬಹುದಾಗಿದೆ.

'ಇಷ್ಟಲಿಂಗ ಪೂಜೆಯನ್ನು ಪ್ರಚಾರಕ್ಕೆ ತಂದುದರಲ್ಲಿ ಬಹಳಷ್ಟು ಉದ್ದೇಶಗಳಿವೆ. ಧಾರ್ಮಿಕವಾಗಿ ಅದು ವ್ಯಕ್ತಿಗೆ ತನ್ನ ತನದ ಅರಿವಿಗೆ ಕಾರಣವಾದುದು. ಸಾಮಾಜಿಕವಾಗಿ ಅದು ವ್ಯಕ್ತಿಗೆ ಅನಿರ್ಬಂಧಿತ ಸ್ವಾತಂತ್ರ್ಯ ತಂದು ಕೊಡುತ್ತದೆ. ಸ್ಥಾವರ ಲಿಂಗದ ಅರ್ಚನೆ ದೇವಾಲಯಗಳನ್ನು ಪೋಷಿಸಿತು. ಆ ದೇವಾಲಯ ಭಾವುಕರನ್ನು ಶೋಷಿಸುವ ಸಂಸ್ಥೆಯಾಯಿತು. ಈ ಶೋಷಣೆಯ ಬೇರನ್ನೇ ಕತ್ತರಿಸುವ ಉದ್ದೇಶದಿಂದ ಬಸವ ಸ್ಥಾವರದ ಪೂಜೆಗೆ ಬದಲಾಗಿ ಇಷ್ಟ ಲಿಂಗ ಪೂಜೆಯನ್ನು ಪ್ರಚುರ ಪಡಿಸಿದ. ಇನ್ನೊಂದು ಅರ್ಥದಲ್ಲಿ ಈ ಇಷ್ಟಲಿಂಗ ಪೂಜೆ ವ್ಯಕ್ತಿ ಸ್ವಾತಂತ್ರ್ಯದ ಸಂಕೇತವಾಗಿದೆ. ವ್ಯಕ್ತಿ ಸ್ವಾತಂತ್ರ್ಯ ಸಮಾನತೆಗಳಿರುವ ನವಸಮಾಜದ ನಿರ್ಮಾಣ ಬಸವಣ್ಣನ ಧ್ಯೇಯವಾಗಿತ್ತು.'[೪] ಎನ್ನುವ ಡಾ: ಬಸವರಾಜ ಮಲಶೆಟ್ಟಿಯವರ ಮಾತುಗಳು ಈ ಪರಿಸರದ ಶರಣರಿಗೂ ಅನ್ವಯವಾಗಬಲ್ಲವು. ಈ ಪರಿಸರದ ಶರಣರ ಧ್ಯೇಯವೂ ಕೂಡ ಇದೇ ಆಗಿತ್ತು.

ಇಷ್ಟಲಿಂಗ-ಪ್ರಾಣಲಿಂಗವೂ ದೇಹ-ಆತ್ಮದಂತೆ ಎಂಬುದನ್ನು ಸರಳವಾಗಿ ತಿಳಿಸಿದ ಬಿಬ್ಬಿ ಬಾಚಯ್ಯ ಸಮಕಾಲೀನ ಶರಣ ಸಮೂಹದಲ್ಲಿ ಲಿಂಗ ಪರಿಕಲ್ಪನೆಯ ಬಗ್ಗೆ ಅನೇಕರು ಚರ್ಚೆಮಾಡಿದಾಗ ಅಂತಹ ಚರ್ಚೆಗೆ ತನ್ನದೆಯಾದ ಸ್ವಂತಿಕೆಯನ್ನು ಅಭಿವ್ಯಕ್ತಿಸಿದ್ದು ಹೀಗೆ:

ಇಷ್ಟಲಿಂಗ ಪ್ರಾಣಲಿಂಗವೆಂದು

ಭಿನ್ನ ಭಾವದಿಂದ ಹಿಂಗಿಸುವ ಪರಿಯಿನ್ನೆಂತೊ?

ಕಾಯದಲಿ ನೋವಾದಡೆ ಜೀವಕ್ಕೆ ಭಿನ್ನವೆ?

ಜೀವ ಹೋದಲ್ಲಿ ಕಾಯ ಉಳಿಯ ಬಲ್ಲುದೆ?

ಈ ಉಭಯದ ಭೇದವನರಿ ಏಣಾಂಕಧರ ಸೋಮೇಶ್ವರ ಲಿಂಗದಲ್ಲಿ ಪ್ರಾಣಲಿಂಗಿಯಾಗಬಲ್ಲಡೆ ?[೫] ನಮ್ಮ ಸಂವಿಧಾನದಲ್ಲಿ ಲಭ್ಯವಿರುವ ಶಾಂತಿಯುತ ಸಭೆಯನ್ನು ನಡೆಸುವ ಹಕ್ಕಿನ ಸ್ವಾತಂತ್ರ್ಯವನ್ನು ಈ ಪರಿಸರದ ಶರಣರು ಪಡೆದಿದ್ದರೆಂಬುದನ್ನು ಅವರು ಅಂದಿನ ಅನುಭವ ಮಂಟಪದಲ್ಲಿ ಭಾಗವಹಿಸಿ ಮುಕ್ತವಾಗಿ ತಮ್ಮದೇಯಾದ ಅಭಿಪ್ರಾಯಗಳನ್ನು ತಿಳಿಸಿದ್ದನ್ನು ನಾವು ಗಮನಿಸಬಹುದಾಗಿದೆ.

'ಪರಮ ಸುಖ ಪರಿಣಾಮಕ್ಕೆ ಮಹಾನುಭಾವಿಗಳ ಸಂಗವೇ ಬೇಕು. ಮಹಾನುಭಾವಿಗಳ ಸಂಗದಿಂದಲ್ಲದೇ ವಿಶ್ರಾಮವಿಲ್ಲ.' [೬] ಎನ್ನುವ ಶಂಕರ ದಾಸಿಮಯ್ಯರ ವಚನದ ಸಾಲುಗಳನ್ನು ನೋಡಿದಾಗ ಶರಣರ ಸಂಗ, ವೇದಿಕೆಗಳ ಬಗ್ಗೆ ನಮಗೆ ತಿಳಿದು ಬರುತ್ತದೆ. ಪರಸ್ಪರ ಚರ್ಚೆಯ ಮೂಲಕ ತಮ್ಮ ಕಲ್ಪಿತ ಕಲ್ಯಾಣಮಯವಾದ ಸಮಾಜವನ್ನು ಅವರು ಕಟ್ಟಲು ಬಯಸಿದ್ದರೆಂದು ತಿಳಿಯುತ್ತದೆ.

---

೧ : ಸಂ: ಡಾ:ಬಿ.ಆರ್.ಹಿರೇಮಠ - ಸ.ವ.ಸಂ.-೯ ,ವಚನ ೫೨, ಪುಟ ೨೨೧

೨ : ಸಂ: ಸಂ.ಶಿ. ಭೂಸನೂರ ಮಠ- ಗೂ.ಸಿ.ಪ್ರ.ಶೂ.-ಪುಟ ೩೩,

೩ : ಅದೇ: ಪುಟ ೩೩

೪ : ಸಂ: ಶಾಂತರಸ -ಕಾ.ಪ. ಪುಟ ೬೬೭

೫ : ಸಂ: ಡಾ: ಬಿ.ಆರ್.ಹಿರೇಮಠ- ಸ.ವ.ಸಂ. -೮, ವಚನ ೫೫, ಪುಟ ೧೩೦

೬ : ಡಾ: ಬಿ.ಆರ್.ಹಿರೇಮಠ -ಸ.ವ.ಸಂ. -೯, ವಚನ ೩ , ಪುಟ ೫೪

ಮನುಷ್ಯ ಮೂಲತಃ ಸಂಘ ಜೀವಿ. ಒಬ್ಬಂಟಿಗನಾಗಿ ಸಮಾಜದಲ್ಲಿ ಬಾಳಲು ಶಕ್ಯವಿಲ್ಲವೆಂಬ ಅರಿತಿದ್ದ ಶರಣರು ತಮ್ಮ ದೇಯಾದ ಪರಿಸರದಲ್ಲಿ ಹಲವುರು ಕೂಡಿ ತಮ್ಮ ದೇಯಾದ ಸಂಗವನ್ನು - ಸಂಘಟನೆಯನ್ನು ಪಡೆದಿದ್ದರೆಂಬುದನ್ನು ಗಮನಿಸಿದರೆ ಆಶ್ಚರ್ಯವಾಗುತ್ತದೆ.

ರಾಜ ಪ್ರಭುತ್ವದ ಅಂದಿನ ಪರಿಸರದಲ್ಲಿ ಗಡಿಯನ್ನು ಮೀರಿ ಹೊರ ಸಂಚಾರ ಕೈಗೊಳ್ಳುವುದು ಬಹು ಕಠಿಣ ಕೆಲಸ ; ಅದು ಯಾವುದೇ ಸಂಚಾರ ಸಂಪರ್ಕ ಮಾಧ್ಯಮಗಳಿಲ್ಲದ ಕಾಲದಲ್ಲಿ ಇನ್ನೂ ಕಠಿಣವಾಗಿದೆ. ಇಂತಹ ಸಂದರ್ಭದಲ್ಲಿ ಈ ಪರಿಸರದ ಶರಣರು ತಮ್ಮ ಜ್ಞಾನವನ್ನು ತಮ್ಮ ಪರಿಸರವನ್ನು ದಾಟಿ ಪ್ರಚಾರ ಮಾಡಿದರೆಂಬುದನ್ನು ನಾವು ಈ ಪರಿಸರದ ಢಕ್ಕೆಯ ಮಾರಯ್ಯ - ಶಂಕರ ದಾಸಿಮಯ್ಯರ ಬದುಕನ್ನು ಅವಲೋಕಿಸಿದಾಗ ಕಂಡು ಬರುತ್ತದೆ. ಇಡೀ ಸಮಾಜವನ್ನು ಇವರಿಬ್ಬರೂ ಜಂಗಮಗೊಳಿಸಲು ಯತ್ನಿಸಿದರು.

ವೃತ್ತಿ ಸ್ವಾತಂತ್ರ್ಯ ನಾವು ಈ ಪರಿಸರದ ಶರಣರಲ್ಲಿ ವಿಶೇಷವಾಗಿ ಗಮನಿಸಬಹುದಾಗಿದೆ. ತಮ್ಮ ಕೆಲಸದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಪಡೆದಿದ್ದರು. ಮಾರಿ ಕುಣಿಸುವ ಕಲೆಯನ್ನು ಕಾಯಕವನ್ನಾಗಿ ಮಾಡಿ- ಆ ಕಾಯಕವನ್ನೇ ವಿಶಿಷ್ಟ್ಯ ಕಲೆಯನ್ನಾಗಿ ಮಾಡಿ ಅದನ್ನು ಅನುಭಾವ ಜ್ಞಾನಕ್ಕೆ ಮಾಧ್ಯಮವಾಗಿ ಮಾಡಿಕೊಂಡು ಢಕ್ಕೆಯ ಮಾರಯ್ಯ ಜನರಲ್ಲಿ ಅರಿವಿನ ವಿವೇಕವನ್ನು ತಮ್ಮ ತಮ್ಮ ವೃತ್ತಿಗಳ ಮೂಲಕವೇ ಕಂಡು ಕೊಳ್ಳಬಹುದೆಂಬುದನ್ನು ತಮ್ಮ ಜೀವನದ ಮೂಲಕ ತೋರಿಸಿ ಕೊಟ್ಟರು. ಶರಣರ ದುಡಿಮೆಯ ಸ್ವಾತಂತ್ರ್ಯ ಎಲ್ಲಾ ಕೆಲಸಗಳಿಗೂ ಸಮಾನ ಗೌರವ ಕಲ್ಪಿಸಿ ಕೊಟ್ಟಿತು. ಇಂತಹ ಹೊಸದಾದ ಗಾಳಿಯೊಂದು ಬಿಸಿದಾಗ ಸಮಾಜದ ವಾತಾವರಣವೇ ಬದಲಾಗಿ ವೃತ್ತಿ ಗೌರವ ಹೆಚ್ಚಾಯಿತು. ಇದರಿಂದಾಗಿ ಸಮಾಜದಲ್ಲಿ ಪರಪಿಂಡಗಳ - ದಂಡಪಿಂಡಗಳ ಹಾವಳಿ ಕಡಿಮೆಯಾಗಿ ಸ್ವಪಿಂಡಗಳ ಸ್ವಾವಲಂಬಿ ಬದುಕಿಗೆ ಹೆಚ್ಚು ಪ್ರಾಶಸ್ತ್ಯ ಸಿಕ್ಕಿತು.

ಸ್ವಾತಂತ್ರ್ಯದ ಪರಿಕಲ್ಪನೆಯೇ ಶರಣರು ಕಟ್ಟ ಬಯಸಿದ ಸಮಾಜಕ್ಕೆ ಅಡಿಗಲ್ಲಾಗಿತ್ತು. ಸ್ವತಂತ್ರ್ಯ ವಿದ್ದಾಗಲೇ ಏನೆಲ್ಲವನ್ನು ಸಾಧಿಸಬಹುದೆಂಬ ವಾಸ್ತವಿಕ ಸತ್ಯವನ್ನು ಕಂಡು ಕೊಂಡ ಶರಣರು ಮೊದಲು ಅದಕ್ಕಾಗಿ ಧ್ವನಿಯೆತ್ತಿ ಆ ಹಿನ್ನೆಲೆಯಲ್ಲಿ ತಮ್ಮ ಆಲೋಚನೆಗಳನ್ನು - ಪರಿಕಲ್ಪನೆಗಳನ್ನು ಹರಿಯಬಿಟ್ಟು ಆ ನೆಲೆಯಲ್ಲಿ ಸಮಾಜವನ್ನು ಕಟ್ಟಲು ಬಯಸಿದರು. ಅದಕ್ಕಾಗಿ ಜನರಲ್ಲಿ ಸ್ವಾತಂತ್ರ್ಯದ ನೈಜ ಪರಿಕಲ್ಪನೆಯ ವಿಚಾರವನ್ನು ತಿಳಿಸಿ ಹೇಳಿದರು.

ಇಂತಹ ಸಾರ್ವತ್ರಿಕವಾದ ಸ್ವಾತಂತ್ರ್ಯದ ಪರಿಕಲ್ಪನೆಯಿಂದಲೇ ಶರಣರು ಆದರ್ಶ ಸಮಾಜವನ್ನು ಕಟ್ಟುವಲ್ಲಿ ಮುಂದೆ ಹಲವಾರು ಪ್ರಗತಿ ಪರ ನಿರ್ಧಾರಗಳನ್ನು ಕೈಗೊಳ್ಳಲು ಕಾರಣವಾಯಿತು.

೨ : ಆರ್ಥಿಕ ವ್ಯವಸ್ಥೆ (ಸಮಾನತೆ)

ಪರದ ಬದುಕಿನಷ್ಟೇ ಇಹದು ಬದುಕು ಮುಖ್ಯವೆಂದು ಪರಿಗಣಿಸಿದ ಶರಣರಿಗೆ ಆರ್ಥಿಕ ಸಮಾನತೆಯ ವಿಚಾರ ಧಾರೆ ಅವಶ್ಯಕವಾಯಿತು. ವೈದಿಕ ಶಾಹಿ ಸಮಾಜದ ಕಲ್ಪನೆಯ ನಿಷ್ಕಾಮ ಕರ್ಮಕ್ಕಿಂತ ಭಿನ್ನವಾದ ಸೈದ್ಧಾಂತಿಕ ನಿಲುವನ್ನು ಅರ್ಥವ್ಯವಸ್ಥೆಯ ಸಂದರ್ಭದಲ್ಲಿ ಶರಣರು ತಾಳಿದ್ದರು.

ಸಂಪತ್ತಿನ ಸಮೃದ್ಧ ಉತ್ಪಾದನೆ, ವಿತರಣೆ, ಸಮಾನ ಹಂಚಿಕೆ, ವೃತ್ತಿ ಗೌರವ ಸಮಾನತೆಗಳಿಂದ ಕೂಡಿದ; ಕಾಯಕ - ದಾಸೋಹ ನಿಷ್ಠವಾದ ಉದಾತ್ತವಾದ ಅರ್ಥವ್ಯವಸ್ಥೆಯ ಮೂಲಕ ಸಮಾಜವನ್ನು ಕಟ್ಟಲು ಬಯಸಿ ಆ ದಿಸೆಯಲ್ಲಿ ಶ್ರಮಿಸಿದರು.

ಕಾಯಕದಲಿ ನಿರತನಾದೊಡೆ ಗುರು ದರ್ಶನವಾದಡೂ ಮರೆಯಬೇಕು

ಲಿಂಗ ಪೂಜೆಯಾದಡೂ ಮರೆಯಬೇಕು

ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು

ಕಾಯಕವೇ ಕೈಲಾಸವಾದ ಕಾರಣ ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು೧- ಆಯ್ದಕ್ಕಿ ಮಾರಯ್ಯರ ಈ ವಚನ ಇಡೀ ಅರ್ಥವ್ಯವಸ್ಥೆಯ ಬಗ್ಗೆ ಶರಣರು ಹೊಂದಿದ ನಿಲುವನ್ನು ತೋರಿಸುತ್ತದೆ. ಗುರು ಲಿಂಗ ಜಂಗಮಗಳಿಗಿಂತಲೂ ಮಿಗಿಲಾಗಿ ಸಮಾಜ ಮುಖ್ಯ ವೆಂಬ ಅಂಶ ಇಲ್ಲಿ ಧ್ವನಿತವಾಗಿದೆ. ವ್ರತ - ನಿಯಮಗಳಿಗಿಂತ ಮಾಡುವ ಕೆಲಸ ಶ್ರೇಷ್ಠವೆಂಬ ಶರಣರ ಆದರ್ಶದಿಂದಾಗಿ ಅವರ ಕೆಲಸವೇ ಕೈಲಾಸವಾಗಿದ್ದು ಸಹಜವಾಗಿದೆ. ಆ ಕಾರಣದಿಂದಾಗಿ ಸಮಾಜ ಭದ್ರ ಬುನಾದಿಗೆ ಕಾಯಕ ಅವಶ್ಯಕವೆಂಬುದನ್ನು ಇಲ್ಲಿ ಹೇಳಲಾಗಿದೆ.

ಆರ್ಥಿಕ ಅಸಮಾನತೆಗೆ ಕಾರಣವಾಗಿದ್ದ ಧರ್ಮ ಸಿದ್ಧಾಂತವನ್ನು ತೊಲಗಿಸಬೇಕೆಂಬ ಆಲೋಚನೆಯಿಂದಲೇ ಶರಣರು ವೈದಿಕಶಾಹಿ ಸಮಾಜ ನಿರ್ಮಿಸಿದ ಕರ್ಮ ಸಿದ್ಧಾಂತದ ಸ್ಥಾನದಲ್ಲಿ ಕಾಯಕ ಸಿದ್ಧಾಂತವನ್ನು ಪ್ರತಿಪಾದಿಸಿ ಸಮಾಜದ ಸಮಾನತೆಗೆ ಯತ್ನಿಸಿತು. ವೈದಿಕಶಾಹಿ ಸಮಾಜದಲ್ಲಿ ಸೇವೆಗೆ ಪ್ರಾಧಾನ್ಯವಿರದೇ ಗುಲಾಮಗಿರಿಗೆ ಅವಕಾಶವಿತ್ತು. ಶರಣರ ಸಮಾಜ ಇದನ್ನು ದೂರೀಕರಿಸಿ ಸೇವೆಯನ್ನು ಉನ್ನತ ಸ್ಥಾನಕ್ಕೇರಿಸಿತು. ಈ ಕುರಿತು ಲಕ್ಕಮ್ಮ ಹೇಳುವ ಹಾಗೇ 'ಮನಶುದ್ಧವಿಲ್ಲದವಂಗೆ ....ಸೇವೆಯುಳ್ಳನ್ನಕ್ಕರ '೨ ಎಂಬುದು ಸೇವೆಯ ಘನತೆಯನ್ನು ತೋರಿಸುತ್ತದೆ.

೧ : ಸಂ : ಡಾ : ಎಂ.ಎಂ. ಕಲಬುರ್ಗಿ - ಸ.ವ.ಸಂ.-೬, ವಚನ ೭ , ಪುಟ೩೮೭

೨ : ಸಂ : ಡಾ : ವೀರಣ್ಣ ರಾಜೂರು - ಸ.ವ.ಸಂ.-೫ , ವಚನ ೨೧, ಪುಟ ೨೦೩

ಅನ್ನ- ಅರಿವೆ -ಆಶ್ರಯಗಳಿಗಾಗಿ ಮಾನವ ನಿರಂತರ ಹೋರಾಟ ನಡೆಸುತ್ತಲೇ ಇರುತ್ತಾನೆ . ಇಂತಹ ಹೋರಾಟವನ್ನು ಮನಗಂಡ ಶರಣರು ಅನೇಕ ವೃತ್ತಿಗಳ ಮಧ್ಯೆ ಸಮಾನತೆ ತಂದು ಎಲ್ಲಾ ವೃತ್ತಿಗಳ ಬಗ್ಗೆ ಗೌರವ ಹೆಚ್ಚಿಸಿ ಸಮಾನತೆಗೆ ಕಾರಣರಾದರು. ಕಾಯಕ ಸಮಾಜದ ಅರ್ಥ ವ್ಯವಸ್ಥೆಯ ಒಂದು ಮುಖ ವಾದರೆ ದಾಸೋಹ ಇನ್ನೊಂದು ಮುಖವಾಗಿದೆ.

ಪ್ರತಿ ಕೆಲಸಕ್ಕೆ ನಿಖರವಾದ ಉದ್ದೇಶವಿರುತ್ತದೆ. ಪ್ರತಿ ಕೆಲಸದ ಹಿಂದೆ ಇರುವ ಪ್ರೇರಣೆ ಅನ್ನದ ಬೇಡಿಕೆ. ಆದರೆ ಶರಣರಲ್ಲಿ ಇದು ವೈಯಕ್ತಿಕ ಮಟ್ಟದಲ್ಲಿ ನಿಲ್ಲಲಿಲ್ಲ. ಕಾಯಕದಿಂದ ಭೋಗಿಸುವುದೇ ಶರಣರಿಗೆ ಮುಖ್ಯವಾಗದೇ ಸಂಯಮತೆಯಿಂದ ದಾಸೋಹಕ್ಕೆ ಪ್ರಾಧಾನ್ಯತೆ ನೀಡಿದರು. ಶರಣರ ದಾಸೋಹ ದಾನಕ್ಕಿಂತ ಭಿನ್ನವಾಗಿದ್ದು, ಅಹಂಕಾರ ರಹಿತವಾದ ಸಮರ್ಪಣ ಭಾವದಿಂದ ಕೂಡಿತ್ತು .ಮಾಡಿದ ಕಾಯಕದಿಂದ ಬಂದ ಪ್ರತಿಫಲವನ್ನು ತಾನೂ ಅನುಭವಿಸಿ ಉಳಿದಿದ್ದನ್ನು ಸಮಾಜಕ್ಕರ್ಪಿಸಿ ಸರ್ವರೂ ಒಂದೇಂಬ ಭಾವವನ್ನು ಎತ್ತಿ ತೋರಿಸುವುದೇ ದಾಸೋಹದ ಹಿಂದಿರುವ ತತ್ವವಾಗಿದೆ. ಮಧುರವಾದ ಭಾಂದವ್ಯದ ಬೆಸುಗೆ ದಾಸೋಹವಾಗಿದೆ. ಆದರೆ ಇಂತಹ ದಾಸೋಹ ಕಾಯಕ ನಿಷ್ಠವಾಗಿರಬೇಕು. ದಾಸೋಹವೆಂದರೆ ಮತ್ತೊಬ್ಬರನ್ನು ಬೇಡಿ ಮಾಡುವುದಲ್ಲ. ಅಂತಹ ಬೇಡಿ ತಂದು ಮಾಡುವ ದಾಸೋಹವನ್ನು ಆಯ್ದಕ್ಕಿ ಮಾರಯ್ಯ ' ಬೇಡಿ ತಂದು ದಾಸೋಹವ ಮಾಡುವನ್ನ ಬರ ಪಂಗುಳನ ಪಯಣದಂತೆ' ೧ ಎನ್ನತ್ತಾರೆ. ಇದೇ ರೀತಿ ಲಕ್ಕಮ್ಮ ' ಭಕ್ತರು ಕಾಯಕವೆಂದು ದಾಯಗಾರಿಕೆಯಲ್ಲಿ ತಂದು ದಾಸೋಹವ ಮಾಡಬಹುದೆ? ' ೨ ಎಂದು ಪ್ರಶ್ನಿಸುತ್ತಾರೆ.

' ಈ ದಾಸೋಹವೆಂಬುದು ಶರಣರು ಸೃಷ್ಟಿಸಿ ಅವಿರತವೂ ಅನುಷ್ಠಾನಗೊಳಿಸಿದ ಒಂದು ವಿಶಿಷ್ಟ ಬಗೆಯ ಸಂಪ್ರದಾಯ . ಶರಣ ಸಮಾಜವನ್ನು ಸಮರ್ಥವಾಗಿ ಕಟ್ಟಲು ಮತ್ತು ಶರಣರನ್ನು ಏಕೈಕ ಉದ್ದೇಶದ ಸಲುವಾಗಿ , ಏಕೈಕ ವೇದಿಕೆಯ ಮೇಲೆ ಅವರನ್ನು ಒಂದುಗೂಡಿಸುತ್ತ ಶರಣರಲ್ಲಿ ಅನುಗಾಲವೂ ಸೌಹಾರ್ದ ಸಂಬಂಧವನ್ನು ಶ್ರೀಮಂತಗೊಳಿಸಿ ಮುನ್ನಡೆಸಿದ ಹಲವಾರು ಕಾರ್ಯಕ್ರಮಗಳಲ್ಲಿ ಒಂದು, ಈ ದಾಸೋಹ .ಒಬ್ಬನಿಗೆ ಎಷ್ಟು ಅಗತ್ಯವೋ ಅಷ್ಟನ್ನು ಮಾತ್ರ ಪಡೆಯತಕ್ಕದ್ದೆಂಬುದು ಶರಣ ಸಮಾಜದ ಅರ್ಥ ವ್ಯವಸ್ಥೆಯ ಪ್ರಥಮ ಲಕ್ಷಣ ; ಅದನ್ನೂ ದುಡಿದೇ ಪಡೆಯಬೇಕು. ಒಂದುವೇಳೆ ಒಬ್ಬ ವ್ಯಕ್ತಿ ತಾನು ಪಡೆದದ್ದು ತನ್ನ ಅಗತ್ಯಕ್ಕಿಂತ ಹೆಚ್ಚಿದ್ದ ಸಂದರ್ಭದಲ್ಲಿ ಅದನ್ನು ತಪ್ಪದೇ ದಾಸೋಹದ ಸಲುವಾಗಿ ವಿನಿಯೋಗಿಸಬೇಕು. ಸ್ವಲ್ಪ ಸರಳಗೊಳಿಸಿ ಹೇಳುವುದಾದರೆ, ದಾಸೋಹವೆಂದರೆ ಸಹ ಶರಣರಿಗೆ ಅಂದರೆ ಇಲ್ಲದವನಿಗೆ ಅಥವಾ ದುಡಿದು ಹಸಿದವನಿಗೆ ಉಣ ಬಡಿಸಿ ಸತ್ಕರಿಸುವುದೆಂದು ಅರ್ಥ. ಇದನ್ನೊಂದು ಬಗೆಯ ಧರ್ಮಾರ್ಥಿಕ ಸಹಕಾರವೆಂದರೆ ತಪ್ಪಾಗಲಾರದು. '೩ ಎನ್ನವ ಡಾ :ಮ.ನ. ಜವರಯ್ಯರ ಮಾತುಗಳನ್ನು ಈ ಪರಿಸರದ ಶರಣರಿಗೂ ಅನ್ವಯಿಸಬಹುದಾಗಿದೆ. .

ಕಲ್ಯಾಣ ಶರಣರನ್ನು ಅನುಸರಿಸಿದ ಈ ಪರಿಸರದ ಶರಣರು ತಾವೂ ಕಟ್ಟಬಯಸಿದ ಸಮಾಜಕ್ಕೆ ಕಾಯಕವನ್ನು ಮತ್ತು ಅದಕ್ಕೆ ಪೂರಕವಾಗಿ ದಾಸೋಹವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದು ಅವರ ಸಮೃದ್ಧ ಅರ್ಥವ್ಯವಸ್ಥೆಯ ಸಂಕೇತವಾಗಿದೆ. ಹಾಗಾಗಿ ಅವರ ಪರಿಕಲ್ಪನೆ ವಚನಗಳಲ್ಲಿ ಉಳಿಯದೇ ಅದೊಂದು ಆಂದೋಲನವಾಗಿ ಮಾರ್ಪಟ್ಟು ಇಡೀ ಸಮಾಜದಲ್ಲಿ ಕ್ರಾಂತಿಯ ಅಲೆಗಳನ್ನು ಎಬ್ಬಿಸಿದ್ದು ಸಹಜವಾಗಿದೆ. ಸಮಾಜದ ಅನೇಕ ಸಮಸ್ಯೆಗಳಿಗೆ ಪ್ರಬಲ ಶಕ್ತಿಯಾಗಿ, ಮನುಕುಲದ ಅಂತಃ ಶಕ್ತಿಯನ್ನು ಜಾಗ್ರತಗೊಳಿಸಿತು. ಶರಣರ ಕಾಯಕ ಪರಿಕಲ್ಪನೆ ಸಮಾಜದಲ್ಲಿ ದುಡಿಮೆಯ ಧೋರಣೆಯನ್ನು ಬದಲಾಯಿಸಿತು. ಎಲ್ಲಾ ಕೆಲಸಗಳು ಮುಖ್ಯವೆಂದು ಭಾವಿಸಲಾಯಿತು. ಹಾಗೆಯೇ ಮಾಡುವ ಕಾಯಕವೆಂದರೆ ಯಾಂತ್ರಿಕ ರೀತಿಯ ಕೆಲಸವಲ್ಲ . ಮಾಡುವ ಕಾಯಕ ಸತ್ಯ -ಶುದ್ಧ -ಪ್ರಮಾಣಿಕವಾಗಿರಬೇಕೆಂಬುದೇ ಶರಣರ ಪ್ರಮುಖ ಆಶಯವಾಗಿತ್ತು. ಈ ಕಾರಣದಲಿಂದಲೇ ಅವರು ಕಾಯಕದ ಬಗ್ಗೆ ಹೊಸದಾದ ಪರಿಕಲ್ಪನೆಗಳನ್ನು ನೀಡಿದರು. ಮಾಡುವ ಕಾಯಕ ಯಾವುದೇ ಆಗಿರಲಿ ಅದರಲ್ಲಿ ಅಹಂಕಾರವಿಲ್ಲದೇ ನಿಗರ್ವಿಯಾಗಿ ಮಾಡಬೇಕೆಂಬುದಾಗಿ ಮಾರಯ್ಯ ಹೇಳುತ್ತಾರೆ. ೪ ಮತ್ತೊಂದೆಡೆ ಆ ಕಾಯಕ ' ನೀನೆಂಬುದ ಭಾವಿಸಿ ಮಾಡಿದಾಗವೆ ಕಾಯಕ ಶುದ್ಧವಾಯಿತ್ತು '೫ ಎನ್ನುತ್ತಾರೆ . ಆಯ್ದಕ್ಕಿ ಲಕ್ಕಮ್ಮ ' ಭಾವ ಶುದ್ಧವಾಗಿ ನಿಶ್ಚೈಸಿ' ೬ ಮಾಡಬೇಕೆನ್ನುತ್ತಾರೆ.

ಹಾಗೆಯೇ ಅನ್ಯಾಯ -ಅನೀತಿಗಳಿಂದ ಮಾಡುವ ಕಾಯಕವನ್ನು ಈ ಪರಿಸರದ ಶರಣರು ಖಂಡಿಸಿ ಅಂತಹ ಕಾಯಕದಿಂದ ಯಾವುದೇ ಪ್ರಯೋಜನ ವಿಲ್ಲವೆನ್ನುತ್ತಾರೆ. ಅದಕ್ಕಾಗಿ ಆಯ್ದಕ್ಕಿ ಮಾರಯ್ಯ ' ಹಾಗದ ಕಾಯಕವ ಮಾಡಿ , ಹಣವಡ್ಡವ ತಾ ಎಂಬಲ್ಲಿ ಸತ್ಯದ ಕಾಯಕ ಉಂಟೆ? '೭ ಎಂದು ಪ್ರಶ್ನಿಸುತ್ತಾರೆ. ಕಾಯಕಕ್ಕೆ ಗೌರವ -ದೈವತ್ವವನ್ನು ಶರಣರು ಏಕಕಾಲಕ್ಕೆ ಕಲ್ಪಿಸಿ ಕೊಟ್ಟರು.

---

೧ : ಸಂ: ಡಾ : ಎಂ.ಎಂ. ಕಲಬುರ್ಗಿ -ಸ.ವ.ಸಂ.-೬ ,ವಚನ೧೯, ಪುಟ ೩೮೧

೨ : ಸಂ: ಡಾ: ವೀರಣ್ಣ ರಾಜೂರು -ಸ.ವ.ಸಂ.-೫ , ವಚನ ೨೦, ಪುಟ ೨೦೩

೩ : ಡಾ : ಮ.ನ. ಜವರಯ್ಯ -ದ.ಶ.ಶ.ಅ. ಪುಟ ೧೩೦-೧೩೧

೪ : ಸಂ: ಡಾ : ಎಸ್.ವಿದ್ಯಾಶಂಕರ -ಸ.ವ.ಸಂ.-೭, ವಚನ ೫೩, ಪುಟ೭೯

೫ : ಅದೇ : ವಚನ ೭೯, ಪುಟ ೩೦೭

೬ : ಸಂ: ಡಾ : ವೀರಣ್ಣ ರಾಜೂರು -ಸ.ವ.ಸಂ. -೫, ವಚನ೯, ಪುಟ ೨೦೦

೭ : ಸಂ: ಡಾ : ಎಂ.ಎಂ. ಕಲಬುರ್ಗಿ -ಸ.ವ.ಸಂ.-೬, ವಚನ ೩೨, ಪುಟ ೩೮೪

ಈ ತಾರತಮ್ಯ ನೀತಿಯನ್ನು ಕುರಿತು ಡಾ : ದೇ.ಜ.ಗೌ ರವರು ಹೇಳುವ ಮಾತುಗಳು ಬಹು ಸೂಕ್ತವಾಗಿದ್ದು ಹೀಗಿದೆ : ' ತಾರತಮ್ಯ ವೆಣಿಸಿದಾಗಲೇ ಕಾಯಕಕ್ಕೆ ಮುಟ್ಟುಚಿಟ್ಟು ತಟ್ಟುತ್ತದೆ ಲೋಕದ ಪ್ರತಿಯೊಂದು ವಸ್ತುವೂ ಪ್ರೋಟಾನ್, ನ್ಯೂಟ್ರಾನ್ ಮತ್ತು ಎಲೆಕ್ಟ್ರಾನ್‌ಗಳಿಂದ ರೂಪಗೊಳ್ಳುತದೆಂಬುದಕ್ಕೆ ವಿಜ್ಞಾನವೇ ಸಾಕ್ಷಿ ನುಡಿಯುತ್ತದೆ. ಅಣು ಪರಮಾಣುಗಳ ಪ್ರಮಾಣ ರಚನೆಗಳಿಗನುಗುಣವಾಗಿ ವಸ್ತುಗಳಲ್ಲಿ ಭೇದ ಪ್ರಭೇದಗಳು ಂಟಾಗುತ್ತವೆ. ಗೊಬ್ಬರ ಮತ್ತೊಂದು ರೂಪವೇ ಹೂವು ; ಕೊನೆಗೆ ಹೂವೇ ಗೊಬ್ಬರವಾಗುತ್ತದೆ. ಅಂತೆಯೇ ವಸ್ತು ಸಂಸರ್ಗವುಳ್ಳ ಯಾವ ಉದ್ಯೋಗವೂ ಕೀಳಾಗಲಾರದುಅಥವಾ ಮೇಲಾಗಲಾರದು '.೧

ನಿಸರ್ಗ ಮನುಷ್ಯನಿಗೆ ಜ್ಞಾನ ಶಕ್ತಿಯನ್ನು ದಯಪಾಲಿಸಿದೆ. ಹಾಗೆಯೇ ಮನುಷ್ಯ ತನ್ನ ಜ್ಞಾನಶಕ್ತಿ -ಕ್ರೀಯಾಶಕ್ತಿಗಳ ಮೂಲಕ ತನಗೆ ಬೇಕಾದುದನ್ನು ಪಡೆಯಲು ಸಾಧ್ಯವಿದೆ . ಆದರೆ ತನ್ನೊಳಗಿನ ಈ ಅಂತರ್ಗತ ವಿಚಾರವನ್ನರಿಯದೇ ಅವನು ತನ್ನ ದಾರಿದ್ರ್ಯಕ್ಕೆ ತಾನೇ ಹೊಣೆಯಾಗುತ್ತಿದ್ದಾನೆ. ನಿಸರ್ಗದಲ್ಲಿನ ಮರಗಿಡ ಬಳ್ಳಿಗಳು ಸ್ವಯಂ ಆಹಾರವನ್ನು ತಯಾರಿಸಿಕೊಳ್ಳುವಾಗ ಮನುಷ್ಯನಾದವನು ತಯಾರಿಸಿಕೊಳ್ಳದಿದ್ದರೆ ಹೇಗೆ ? ಮನುಷ್ಯ ತನಗಿಷ್ಟವಾದ ಯಾವುದೇ ಕಾಯಕವನ್ನಾದರೂ ಮಾಡಬೇಕಾದದ್ದು ಅವನ ಕರ್ತವ್ಯವಾಗಬೇಕು. ಮಾಡುವ ಕಾಯಕದಿಂದಲೇ ಮನುಷ್ಯನ ಬಡತನ ನಿವಾರಣೆ ಸಾಧ್ಯವಿದೆ.

ಕಾಯಕದಿಂದ ಸಂಪತ್ತಿನ ಸಂಗ್ರಹವಾದ ಮೇಲೆ ಅದನ್ನು ಸರಿಯಾಗಿ ವ್ಯಯಿಸಬೇಕಾದ ಜವಾಬ್ದಾರಿಯೂ ಸಹ ಮನುಷ್ಯರಿಗಿರಬೇಕಾಗಿದೆ. ಕಾಯಕದಿಂದ ಬಂದ ಪ್ರತಿಫಲವನ್ನು ದುಶ್ಚಟಗಳಿಗೆ ಹಾಳು ಮಾಡದೇ ಅದನ್ನು ಸದ್ವಿನಿಯೋಗ ಮಾಡಬೇಕಾದದ್ದು ಪ್ರತಿಯೊಬ್ಬರ ಕರ್ತವ್ಯವಾಗಿರಬೇಕೆಂದು ಶರಣರು ಬಯಸಿ ಆ ದಿಸೆಯಲ್ಲಿ ಅವರು 'ದಾಸೋಹ'ದ ಪರಿಕಲ್ಪನೆಯನ್ನು ಜಾರಿಗೆ ತಂದು ಅದು ಸಮಾಜ ಸೇವೆಯ ಭಾಗವಾಗುವಂತೆ ರೂಪಿಸಿದರು. ದಾಸೋಹವೆಂದರೆ ಸೋಮಾರಿಗಳಿಗೆ ಅನ್ನದಾನ ಮಾಡುವುದಲ್ಲ; ದುಡಿಮೆಯನ್ನು ಸರಿಯಾಗಿ ಹಂಚಿ ಸರ್ವರೂ ತಿನ್ನಬೇಕೆಂಬುದೇ ಇದರ ತಾತ್ಪರ್ಯವಾಗಿದೆ.

ಈ ದಾಸೋಹ ತತ್ವ ಮಹಾತ್ಮಾ ಗಾಂಧೀಜಿಯವರ ಧರ್ಮ ದರ್ಶಿತ್ವ (Trusteeship)ಕ್ಕೆ ಸಮನ್ವಯ ವಾಗಬಲ್ಲದು. ಅಗತ್ಯವಿರುವಷ್ಟು ವ್ಯಕ್ತಿ ಬಳಸಿಕೊಂಡು, ಉಳಿದದ್ದನ್ನು ಸಮಾಜಕ್ಕೆ ಅರ್ಪಿಸಿ -ಸಮಾಜ ಕಲ್ಯಾಣದಲ್ಲಿ ತನ್ನ ಕಲ್ಯಾಣವನ್ನು ಕಂಡು ಕೊಳ್ಳಬೇಕೆಂಬ ಆಶಯವನ್ನು ಗಾಂಧೀಜಿ ವ್ಯಕ್ತಪಡಿಸಿದ್ದು ಹೀಗೆ:

'Suppose I have come by a fair amount of wealth , I must know that all that wealth doesnot belong to me ; what belongs to me is the right to an honourable liveihood ; no better than what enjoyed by millions of others.The rest of my wealth belongs to the community and must be used for the welfare of the community .'೨

ಈ ದಾಸೋಹ ಗಾಂಧೀಜಿಯವರ ವಿಚಾರಕ್ಕಿಂತಲೂ ಒಂದು ಪಾಲು ಮಿಗಿಲೆನ್ನಬಹುದಾಗಿದೆ. ಕಾಯಕ - ದಾಸೋಹ ಈ ಪರಿಸರದ ಶರಣರ ಎರಡು ಕಣ್ಣುಗಳಾಗಿದ್ದವೂ. ಅಂತೆಯೇ ಮಾಡುವ ದಾಸೋಹ ಡಂಬಾಚಾರದಿಂದ ಕೂಡಿದ ಆಡಂಬರವಾಗಬಾರದೆಂದು ಲಕ್ಕಮ್ಮ ಎಚ್ಚರಿಸಿ ' ಇಮ್ಮನವಾಗದ ಮುನ್ನವೇ '೩ ಮಾಡಬೇಕೆಂದಿದ್ದಾಳೆ. ದಾಸೋಹದ ತತ್ವವಿಲ್ಲದೇ ಕಾಯಕಕ್ಕೆ ಪರಿಪೂರ್ಣತೆ ಇಲ್ಲ. ಎಂದು ಭಾವಿಸಿದ ಶರಣರು ಅಂತೆಯೇ ಕಾಯಕದಿಂದ ಗಳಿಸಿದ ಸಂಪತ್ತನ್ನು ಸಂಗ್ರಹಿಸಿಡುವುದನ್ನು ಸಹ ವಿರೋಧಿಸಿದರು. ಕಲ್ಯಾಣ ಸಮಾಜವನ್ನು ಕಟ್ಟ ಬಯಸಿದ ಶರಣರಿಗೆ ಆರ್ಥಿಕ ವ್ಯವಸ್ಥೆಯ ಅಸಂಗ್ರಹ ದೃಷ್ಟಿ ಪ್ರಮುಖ ಅಂಶವಾಯಿತು. ಮಾನವ ಅತೀ ಆಸೆಯಿಂದ ಸಂಗ್ರಹಿಸಿಟ್ಟುಕೊಳ್ಳುವುದು ಒಂದು ರೀತಿಯಲ್ಲಿ ಕಳ್ಳತನವೆಂದು ಶರಣರು ಭಾವಿಸಿದ್ದರು. ಹಾಗೆಯೇ ಈ ಸಂಗ್ರಹ ಪ್ರವೃತ್ತಿ ಸಮಾಜದಲ್ಲಿ ಅಸಮಾನತೆಯನ್ನು ಪೋಷಿಸುವಲ್ಲಿ ಸಹಕಾರಿಯಾಗಬಲ್ಲದು. ಆರ್ಥಿಕ ಸಮತೋಲನ ತಪ್ಪಿ ಸಮಾಜದಲ್ಲಿನ ವ್ಯಕ್ತಿಗಳು ಸಮಾಜ ಕಂಟಕರಾಗುವ ಹಲವು ಸಾಧ್ಯತೆಗಳಿವೆ. ಇಂತಹ ದೂರ ದೃಷ್ಟಿಯನ್ನು ಗಮನಿಸಿಯೇ ಶರಣರು ತಮಗಿಂತ ಹೆಚ್ಚಿಗೆ ಸಂಗ್ರಹಿಸುವುದನ್ನು ವಿರೋದಿಸಿದರು.

ಗಾಂಧೀಜಿಯವರು ಈ ಅಸಂಗ್ರಹದ ಬಗ್ಗೆ ಬಹು ಎಚ್ಚರಿಕೆಗಳನ್ನು ಕೊಟ್ಟರು . ಸರ್ವರೂ ಹಂಚಿಕೊಂಡು ತಿಂದರೆ ಯಾರೂ ಅನ್ನದ ಸಮಸ್ಯೆಯಿಂದ ಸಾಯುವ ಸ್ಥಿತಿ ಬರುವುದಿಲ್ಲ. ಈ ಕುರಿತು ಅವರು ಹೇಳುವಂತೆ ' Nature produces enough for our wants from day to day and if any every body took enough for himself and nothing more , there would be no pauperism in this world , there would be no man dying of starvation in this world'೪ ಇದನ್ನೇ ಲಕ್ಕಮ್ಮ ' ಈ ಸಕ್ಕಿಯಾಸೆ ನಿಮಗೇಕೆ ?' ೫ ಎಂದು ಸ್ವತಃ ಪತಿಯನ್ನು ಪ್ರಶ್ನಿಸಿದ್ದರಲ್ಲಿ ಕಾಣಬಹುದು.

೧ : ಶಾಂತರಸ-ಕಾ.ಪ.ಪುಟ೬೯೩

೨ : Edt : R.K. Prabhu & U.R Rao-T.M.M.G.Page 258-259

೩ : ಸಂ : ಡಾ : ವೀರಣ್ಣ ರಾಜೂರು -ಸ.ವ.ಸಂ.-೫, ವಚನ೨೦, ಪುಟ೨೦೩

೪ :Nirmal Kumar Bose -S.F.G.page 75

೫ : ಸಂ :ಡಾ: ವೀರಣ್ಣ ರಾಜೂರು -ಸ.ವ.ಸಂ.-೫,ವಚನ೬, ಪುಟ ೨೦೦

ಸಂಪತ್ತು ಒಂದೆಡೆ ಸಂಗ್ರಹವಾಗಬಾರದು . ಅದು ಸಂಘರ್ಷಗಳಿಗೆ ಹಾದಿಯಾಗುತ್ತದೆ. ಎಂದು ಆಲೋಚಿಸಿದ ಶರಣರು ಅದರ ದುಷ್ಪರಿಣಾಮವನ್ನು ಅರಿತು ಆ ಬಗ್ಗೆ ಎಚ್ಚರಿಸಿದರು. ಸಮಾಜದಲ್ಲಿ ಬಡತನ -ನಿರುದ್ಯೋಗ ಹೆಚ್ಚಳಕ್ಕೆ ಅದು ಕಾರಣವಾಗುತ್ತದೆ. ಉತ್ಪಾದನೆಯೂ ಸಹ ಕುಸಿತವಾಗಿ ಬೇಡಿಕೆ ಅಧಿಕವಾಗಿ ಅದು ಕೆಲವರ ಪಾಲಿಗೆ ಸೀಮಿತವಾಗಿ ಬಿಡುತ್ತದೆ. ಇಂತಹ ಸ್ಥಿತಿಯನ್ನು ಆಧುನಿಕ ಆರ್ಥಿಕ ಪರಿಣತರು ' ಅರ್ಥ ವ್ಯವಸ್ಥೆಯ ಕುಸಿತ' ಎಂದು ಕರೆದಿದ್ದಾರೆ. ಬಂಡವಾಳಶಾಹಿಯನ್ನು ಬಹು ಹಿಂದೆಯೇ ಶರಣರು ವಿರೋಧಿಸಿದ್ದರು. ಬಂಡವಾಳ ಶಾಹಿಯ ಹಿಂದಿರುವ ಕ್ರೂರ ವ್ಯವಸ್ಥೆಯನ್ನು ಅವರು ಮನಗಂಡಿದ್ದರಿಂದಲೇ ಅವರು ಅದಕ್ಕೆ ಮೂಲಭೂತವಾಗಿ ಕಾರಣವಾದ ಸಂಗ್ರಹ ಪ್ರವೃತ್ತಿ ವಿರುದ್ಧ ಪ್ರತಿಭಟಿಸಿ - ಅದನ್ನು ದೂರೀಕರಿಸಿದ ಸಮಾಜವನ್ನು ಕಟ್ಟಲು ಬಯಸಿದರು.

ದೇಶದ ಉತ್ಪನ್ನ ಕೆಲವೇ ಸೀಮಿತ ವರ್ಗದಲ್ಲಿ ಕೇಂದ್ರೀಕೃತವಾದರೇ ದಾರಿದ್ರ್ಯ ತಪ್ಪದೆಂಬುದನ್ನು ಮನಗಂಡು ಅಸಂಗ್ರಹ ಪ್ರವೃತ್ತಿಗೆ ಮಾನ್ಯತೆ ನೀಡಿದರು. ಆ ಮೂಲಕ ಹಾಗೇ ನಡೆದರೂ ಕೂಡ . 'ಲಂಚರಹಿತ 'ಸಮಾಜವನ್ನು ಕಟ್ಟಲುಶರಣರು ಬಯಸಿದರು. ಲಂಚ ನಮ್ಮ ಸಮಾಜದ ಆರ್ಥಿಕ ವ್ಯವಸ್ಥೆಯ ಚಿತ್ರವನ್ನು ಬದಲಾಯಿಸಿ ಬಿಡುತ್ತದೆಂಬುದನ್ನು ಬಹು ಹಿಂದೆಯೇ ಮನಗಂಡಿದ್ದರು. ಇದು ಆರ್ಥಿಕ ವ್ಯವಸ್ಥೆಯ ಪಲ್ಲಟಕ್ಕೆ ವಿಷವೆಂದು ಭಾವಿಸಿದ ಶರಣರು ಇದನ್ನು ತೊಲಗಿಸಲು ಪ್ರಯತ್ನಿಸಿದರು. ಯೋಜನೆಗಳೆಲ್ಲ ತಲೆಕೆಳಗಾಗುವುದು ಲಂಚದಿಂದ ಎಂಬುದನ್ನು ಶರಣರು ತಿಳಿದಿದ್ದರು. ಇಂತಹ ವಿಚಾರವನ್ನು ಆಯ್ದಕ್ಕಿ ಮಾರಯ್ಯ ಸೂಚ್ಯವಾಗಿ ತನ್ನ ವಚನದಲ್ಲಿ ಹೀಗೆ ಹೇಳುತ್ತಾರೆ:

ಗೆಜ್ಜಲು ಮನೆಯ ಮಾಡಿ ಸರ್ಪಗಿಂಬಾದಂತೆ

ನಾನತ್ತಣ ದ್ರವ್ಯವ ತಂದು ಇತ್ತ ಮಾಡಿದಡೆ

ನನಗಿನ್ನೆತ್ತಣ ಮುಕ್ತಿ ಅಮರೇಶ್ವರಲಿಂಗ೧ ಗೆದ್ದಲು ಮನೆ ಮಾಡಿದಲ್ಲಿ ಹಾವು ಸೇರಿಕೊಳ್ಳುವಂತೆ ಮತ್ತೊಬ್ಬರ ದುಡಿಯದ ಹಣವನ್ನು ತಂದು ಅದನ್ನು ವ್ಯಯಿಸಿದರೆ ಮುಕ್ತಿ ದೊರೆಯದು ಅಂದರೆ ಅದರಿಂದ ಜೀವನ ಸಾರ್ಥಕವಾಗಲಾರದು. ಅಂತಹ ಸಂಪತ್ತು ಪಡೆಯುವುದು ಒಂದು ರೀತಿ ಲಂಚವೇ ಸರಿ ಎಂಬುದನ್ನು ಮಾರಯ್ಯರ ವಿಚಾರದಿಂದ ತಿಳಿಯಬಹುದಾಗಿದೆ. ಇದೇ ವಿಚಾರವನ್ನು ಸುಂಕದ ಬಂಕಣ್ಣ ' ಗಡಿವಾಡದ ಸುಂಕವ ಕದ್ದು ಹೋಗಲರಿಯದೆ' ೨ ಎಂಬಲ್ಲಿ ಗುರುತಿಸಬಹುದಾಗಿದೆ.

'ಸಾರ್ವಜನಿಕ ಹಣಕಾಸು '- ಆರ್ಥಿಕ ವ್ಯವಸ್ಥೆಯನ್ನು ಸರಿಯಾಗಿಡುವಲ್ಲಿ ಪ್ರಮುಖ ಅಂಶವಾಗಿದೆ. ಬೆಲೆಗಳ ನಿಯಂತ್ರಣ , ಆರ್ಥಿಕಾಭಿವೃದ್ಧಿಯಲ್ಲಿ ಇದರ ಪಾತ್ರ ಗಮನಾರ್ಹವಾಗಿದೆ.

ಸಾರ್ವಜನಿಕ ಹಣಕಾಸನ್ನು ಸರ್ವರ ಕಲ್ಯಾಣಕ್ಕಾಗಿ ಉಪಯೋಗಿಸಬೇಕೆ ಹೊರತು ಒಬ್ಬರ ಸುಖಕ್ಕಾಗಿ ಅಲ್ಲ. ತಮ್ಮ ಸಮಕಾಲೀನ ರಾಜ ಬೊಕ್ಕಸವನ್ನು ಉಪಯೋಗಿಸುವ ಹಕ್ಕು ಕೇವಲ ರಾಜನಿಗಷ್ಟೇ ಅಲ್ಲ ; ಸರ್ವ ಪ್ರಜೆಗಳಿಗೂ ಸೇರಿದ್ದು ಎಂಬ ಕಟು ಸತ್ಯವನ್ನು ಚರಿತ್ರೆಯಲ್ಲಿ ಮೊದಲಬಾರಿಗೆ ಶರಣರು ಸಾರಿದರು. ಇದರ ಬಗ್ಗೆ ಸರಿಯಾದ ಕಲ್ಪನೆ ಮೂಡಿಸಿ ಅದರ ಸದುಪಯೋಗವನ್ನು ಸಮಾಜಕ್ಕೆ ತಿಳಿಸಿ ಕೊಟ್ಟರು. ಸಾರ್ವಜನಿಕ ಹಣಕಾಸನ್ನು ದುರುಪಯೋಗ ಪಡಿಸಿಕೊಳ್ಳುವವರನ್ನು ಕುರಿತು ಢಕ್ಕೆಯ ಮಾರಯ್ಯ ' ಧನವಂಚಕನಾಗಿ ಜಂಗಮಕ್ಕೆ ಮಾಡಲಿಲ್ಲ'೩ ...ವೆನ್ನುತ್ತಾರೆ. ಮತ್ತೊಂದೆಡೆ ಹೇಳುವ ' ದೇವರಿಗೆಂದು ಕುರಿತು ಆವ ಕಾಯಕವ ಮಾಡಿದಡೂ ಕಾಲಾಂತಕ ಭೀಮೇಶ್ವರ ಲಿಂಗಕ್ಕೆ ಅರ್ಪಿತವಪ್ಪುದು'೪ ಎನ್ನುವಲ್ಲಿ ಸಹ ಸಮಾಜಕ್ಕೆ ಅದರ ಸೇವೆಗಾಗಿ ಎಲ್ಲಾ ಕಾಯಕದ ಪ್ರತಿಫಲಗಳು ಸೇರಬೇಕೆಂದು ಹೇಳಿರುವಲ್ಲಿ ಸಾರ್ವಜನಿಕ ಹಣಕಾಸಿನ ಸದುಪಯೋಗದ ವಿಚಾರ ಕಂಡು ಬರುತ್ತದೆ.

ಇತ್ತೀಚೆಗೆ ಹೆಚ್ಚು ಪ್ರಚಲಿತದಲ್ಲಿರುವ ಉಳಿತಾಯ - ಕೊರತೆ - ಮಿತವ್ಯಯಗಳ ಬಗ್ಗೆ ಶರಣರು ಅಂದಿನ ದಿನವೇ ತಮ್ಮ ಆಲೋಚನೆಗಳನ್ನು ತಿಳಿಸಿದರು. ಸಾರ್ವಜನಿಕ ಹಿತದೃಷ್ಟಿಯನ್ನೊಳಗೊಂಡ ಶರಣರ ಆರ್ಥಿಕ ವಿಚಾರ ಮಿತವ್ಯಯಕ್ಕೆ ಪ್ರಾಮುಖ್ಯತೆ ನೀಡಿತ್ತು . ಸಂಪತ್ತಿನ ವ್ಯರ್ಥ ಹಾನಿಯನ್ನು ಶರಣರು ಸಹಿಸಲಾರರು. ಪೂಜೆ -ನೈವೇದ್ಯಗಳಿಗಾಗಿ ಆಡಂಬರ ವೆಚ್ಚವನ್ನು ಮಾಡುವುದನ್ನು ಶರಣರು ಒಪ್ಪುವುದಿಲ್ಲ. ಅವರ ಪ್ರಕಾರ ' ಭ್ರಾಂತಳಿದು ನಿಂದಲ್ಲಿ ಅರ್ಚನೆ....... ಲಿಂಗದಲ್ಲಿ '೫ ಬಿಬ್ಬಿ ಬಾಚಯ್ಯರ ಈ ವಚನ ಮಿತವ್ಯಯವನ್ನು ಪರೋಕ್ಷವಾಗಿ ಧ್ವನಿಸುತ್ತದೆ.

---

೧ : ಸಂ : ಡಾ : ಎಂ.ಎಂ. ಕಲಬುರ್ಗಿ -ಸ.ವ.ಸಂ.-೬, ವಚನ ೧೨, ಪುಟ ೩೭೯

೨ : ಸಂ : ಡಾ : ಬಿ.ಆರ್.ಹಿರೇಮಠ -ಸ.ವ.ಸಂ. -೯, ವಚನ ೧೫, ಪುಟ ೨೧೨

೩ : ಸಂ : ಡಾ : ಎಸ್.ವಿದ್ಯಾಶಂಕರ -ಸ.ವ.ಸಂ.-೭, ವಚನ ೨೯, ಪುಟ ೨೯೨

೪ : ಅದೇ : ವಚನ ೯೦,, ಪುಟ ೩೧೦

೫ : ಸಂ : ಡಾ : ಬಿ.ಆರ್ .ಹಿರೇಮಠ-ಸ.ವ.ಸಂ. -೮ , ವಚನ ೮೪, ಪುಟ ೧೩೭

ಒಂದು ದೇಶದ ಆರ್ಥಿಕ ವ್ಯವಸ್ಥೆಯನ್ನು ಸುಸ್ಥಿತಿಯಲ್ಲಿಡಲು ಅಲ್ಲಿನ ವ್ಯಾಪಾರ ಪದ್ಧತಿ-ತೆರಿಗೆ ಕ್ರಮಗಳು ಸಹ ಬಹುಮುಖ್ಯವಾಗಿವೆ. ಅಂತೆಯೇ ವ್ಯಾಪಾರ-ತೆರಿಗೆ ಒಂದು ದೇಶದ ಆಧಾಯದ ಮೂಲಗಳು ಈ ಆದಾಯ ಮೂಲಗಳು ಅನೇಕರಿಂದ ಸಂಗ್ರಹವಾಗಿ ಒಬ್ಬನ ಸ್ವಾರ್ಥಕ್ಕೆ ಉಪಯೋಗವಾಗಬಾರದು. ಎಲ್ಲರೂ ಅವುಗಳ ಸದುಪಯೋಗ ಪಡೆಯಬೇಕೆಂಬುದೇ ಶರಣರ ಧೋರಣೆಯಾಗಿತ್ತು.

ಸುಂಕದ ಬಂಕಣ್ಣನವರು ತಮ್ಮ ಬಹುತೇಕ ವಚನಗಳಲ್ಲಿ ತಮ್ಮ ಸಮಕಾಲೀನ ಆರ್ಥಿಕ ವ್ಯವಸ್ಥೆಯ ಬಗ್ಗೆ ಅದರಲ್ಲೂ ವ್ಯಾಪಾರ ಪದ್ಧತಿ, ಸರಕು ಸಾಗಾಣಿಕೆಯ ಕ್ರಮ, ತೆರಿಗೆ ವಿಚಾರ ಇತ್ಯಾದಿಗಳನ್ನು ಬಹು ಮಾರ್ಮಿಕವಾಗಿ ತಿಳಿಸುತ್ತಾರೆ. ಅವುಗಳನ್ನು ಅವರು ಆಧ್ಯಾತ್ಮಿಕ ಛಾಯೆಯಲ್ಲಿ ಬಳಸಿ ಕೊಂಡರೂ ಅವರು ಬಳಸಿ ಕೊಂಡ ಲೋಕಾನುಭವದ ಚಿತ್ರಗಳು ಸಮಕಾಲೀನ ಆರ್ಥಿಕ ಸ್ಥಿತಿಗಳ ಮೇಲೆ ಬೆಳಕು ಚೆಲ್ಲುತ್ತವೆ.

ಅಂಬುಧಿಯಲ್ಲಿ ಹಡಗು ಬರುತ್ತಿರಲಾಗಿ

ಹಡಗಿನ ಕುಕ್ಕೊಂಬಿನ ಮೇಲೆ ಒಂದು ಕರಡಿ ಬಂದಿತ್ತು

ಆ ಕರಡಿಗೆ ಕಾಲು ಮೂರು, ಕಣ್ಣು ಒಂದು, ಬಾಲಕಡೆಯಿಲ್ಲ

ಬಂಕೇಶ್ವರ ಲಿಂಗಕ್ಕೆ ಹಡಗಿನ ಸುಂಕ ಕಡೆ ನಡುವಿಲ್ಲ.[೧] ಇಲ್ಲಿ ಸ್ಸುಂಕ ಕೊಡದಿರುವ ಕಾಳ ಸಂತೆ ಕೋರರ ಬಗ್ಗೆ ಸೂಚ್ಯವಾಗಿ ಹೇಳುತ್ತಾರೆ. ಇಂತಹ ಸಮಾಜ ದ್ರೋಹಿಗಳಿಂದ ಯಾವುದೇ ದೇಶ ಬೆಳೆಯದು. ತೆರಿಗೆಗಳ್ಳರಿಂದ ಸಮಾಜಕ್ಕೆ ಆಳುವ ಒಡೆತನಕ್ಕೆ ಬಹಳ ಅಪಾಯ ಕಟ್ಟಿಟ್ಟ ಬುತ್ತಿ. ಹಾಗೆಯೇ ಅಂದಿನ ವ್ಯಾಪಾರಿಗಳ ಮೋಸತನದ ಬಗ್ಗೆ ತಿಳಿಸುತ್ತಾ ಅಂತಹ ವ್ಯಾಪಾರದಿಂದ ಯಾವುದೇ ಸಾಧನೆಯಾಗದೇ ಕೊನೆಗು ನಾಶವಾಗುವ ಸ್ಥಿತಿಯನ್ನು ತಿಳಿಸುತ್ತಾರೆ. ಎಲ್ಲರೂ ಸುಂಕವನ್ನು ಒಡೆಯನಿಗೆ ಕೊಡಬೇಕಾದದ್ದು ಧರ್ಮವೆಂದು ಹೇಳುತ್ತಾ : ' ಸರಕ ಹೊತ್ತು ಮಾರುವ ಸೆಟ್ಟಿಗಳೆಲ್ಲರೂ ಕೊಡಿ ಬಂಕೇಶ್ವರ ಲಿಂಗಕ್ಕೆ ಸುಂಕವ '[೨] ಎನ್ನುತ್ತಾರೆ.

ಧಾರ್ಮಿಕತೆಯ ಹೆಸರಿನಲ್ಲಿ ಅನೇಕ ತೆರಿಗೆ, ಧಾನಗಳ ಹೆಸರಿನಿಂದ ಶೋಷಣೆ ಮಾಡುವ ಹಲವಾರು ಕೇಂದ್ರಗಳಿದ್ದವು. ಅಲ್ಲಿ ನಡೆಯುವ ಆರ್ಥಿಕ ಶೋಷಣೆಯನ್ನು ಶರಣರು ಖಂಡಿಸಿ ಶೋಷಣಾ ಮುಕ್ತ ಸಮಾಜವನ್ನು ನಿರ್ಮಿಸಲು ಬಯಸಿದರು. ಇವರ ಇಂತಹ ಜನಪರವಾದ ಅಲೋಚನೆಗಳು ಕಾಲಾತೀತವಾಗಿ ಇಂದಿಗೂ ಜೀವಂತವಾಗಿ ಉಳಿಯುವಲ್ಲಿ ಕಾರಣೀಭೂತವಾಗಿವೆ. ಬಸವೋತ್ತರ ಯುಗದಲ್ಲಿ ಆರ್ಥಿಕ ವ್ಯವಸ್ಥೆ ಕುರಿತು ಚಿಂತನೆ ನಡೆದರೂಅದು ಸೀಮಿತ ಪರಿಧಿಯನ್ನು ಪಡೆದು ಕೊಂಡಿರುವುದು ಸಹಜವಾಗಿದೆ. ಏಕೆಂದರೆ ಸಮಾಜ ಬದುಕಿಗಿಂತ ಅವರಿಗೆ ಆಧ್ಯಾತ್ಮದ ಬದುಕು ಬಹುಮುಖ್ಯವಾಗಿತ್ತು. ಬಸವೋತ್ತರ ಯುಗದ ಶರಣರ ಆಶಯಗಳನ್ನು ನಾವು ಸರಳವಾಗಿ ಗ್ರಹಿಸುವುದು ಕಠಿಣ. ಸಂಕೇತ, ಪ್ರತೀಕಗಳ ಮೂಲಕ ಅವರು ಮಾತನಾಡುವ ಕಾರಣ ಅವರ ಆಲೋಚನೆಗಳು ಕೆಲವು ಸಾರಿ ಅರ್ಥವೇ ಆಗುವುದಿಲ್ಲ. ಆದರೂ ಅರ್ಥ ವ್ಯವಸ್ಥೆಯ ಬಗ್ಗೆ ಅವರ ಅಭಿಪ್ರಾಯಗಳನ್ನು ಗಮನಿಸಿದರೆ ಕೆಲವುಅಂಶಗಳು ಕಂಡು ಬರುತ್ತವೆ.

ಹೇಮಗಲ್ಲ ಹಂಪರು ಸಮಕಾಲೀನ ಅರ್ಥ ವ್ಯವಸ್ಥೆಯ ಸಂಪತ್ತು, ಲೌಕಿಕ ಕಾರ್ಯಗಳ ಬಗ್ಗೆ ಅವರಿಗೆ ಅಷ್ಟಾಗಿ ಒಲವಿರದಿದ್ದರೂ ತತ್ವ ಸಮರ್ಥನೆಗಾಗಿ ಅವುಗಳನ್ನು ಬಳಸಿಕೊಳ್ಳುತ್ತಾರೆ. ಅವರ ಕಂಡದ್ದು ಆರ್ಥಿಕ ಸ್ಥಿತಿಯ ಇಹ ದೃಷ್ಟಿಯನ್ನಲ್ಲ. ಅವರಿಗೆ ಆರ್ಥಿಕ ಸ್ಥಿತಿ ಮುಖ್ಯವಾಗದೇ ಆಧ್ಯಾತ್ಮಿಕ ಸ್ಥಿತಿ ಮುಖ್ಯವಾಗಿತ್ತು. ಹಾಗಾಗಿ ಅವರು ಚಿತ್ರಿಸಿದ ಆರ್ಥಿಕ ಚಿತ್ರಗಳು ಒಮ್ಮೊಖವಾಗಿದ್ದು ಅವುಗಳಲ್ಲಿ ಋಣಾತ್ಮಕ ಪರಿಕಲ್ಪನೆಗಳಿರುವುದನ್ನು ಕಾಣಬಹುದಾಗಿದೆ. ಬಸವಯುಗದಷ್ಟು ಸತ್ವಶಾಲಿ ಆರ್ಥಿಕ ಚಿಂತನೆಗಳನ್ನು ಇಲ್ಲಿ ಕಾಣಲಾರೆವು. ಗಳಿಸುವ ಸಂಪತ್ತನ್ನು ಸ್ವಾರ್ಥಿಯಾಗಿ ಉಪಭೋಗಿಸದೇ ಸರ್ವರು ಹಂಚಿ ತಿನ್ನಬೇಕೆಂಬ ದಾಸೋಹದ ಪರಿಕಲ್ಪನೆಯನ್ನು ನಾವು ಸೂಚ್ಯವಾಗಿ ಹೇಮಗಲ್ಲ ಹಂಪರ ' ಒಡವೆ, ವಸ್ತು, ಧನ-ಧಾನ್ಯವ ಲೋಭದಿಂದ ಗಳಿಸಿ ಮಡದಿ ಮಕ್ಕಳಿಗೆಂದು ಮಡುಗಿಕೊಂಡು ಧಾನ ಧರ್ಮವ ಪರಉಪಕಾರಕ್ಕೆ ನೀಡದೆ.......'[೩] ' ಅನ್ನದ ಗೊಡವಿಲ್ಲದಾತಂಗೆ ಆರಂಭದ ಗೊಡವಿಯುಂಟೇ?'[೪] ಎನ್ನುವಲ್ಲಿ ಕಾಯಕಕ್ಕೆ ಮಹತ್ವನೀಡದ ಸೋಮಾರಿಗಳನ್ನು ಇದು ಸೂಚ್ಯವಾಗಿ ಧ್ವನಿಸುತ್ತದೆ. ಇದು ಆಧ್ಯಾತ್ಮದ ಬಗ್ಗೆ ಇದ್ದರೂ ಆರಂಭದ ಸಾಲುಗಳು ಅನ್ನದ ಸಮಸ್ಯೆಯ ಬಗ್ಗೆ ಚಿಂತಿಸದ ವ್ಯಕ್ತಿ ವ್ಯವಸಾಯದ ಬಗ್ಗೆ ಹೇಗೆ ಚಿಂತಿಸುತ್ತಾನೆಂದು ಹೇಳುವಲ್ಲಿ ಒಂದು ವರ್ಗದ ವ್ಯಕ್ತಿಗಳ ಬಗ್ಗೆ ಅಂದರೇ ಕುಳಿತು ತಿನ್ನವವರ ಬಗ್ಗೆ ಹೇಳಿದಂತೆ ಕಂಡು ಬರುತ್ತದೆ.

ಆನಂತರದ ಅನೇಕ ಶರಣರು ತಮ್ಮ ತತ್ವ ಪದಗಳ ಮೂಲಕ ಅನೇಕ ವಿಚಾರಗಳನ್ನು ತಿಳಿಸಿದ್ದಾರೆ. ನಮ್ಮ ದೇಶದ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬಾಗಿದ್ದ ಕೃಷಿಯ ಬಗ್ಗೆ ಚಿಂತನೆ ನಡೆಸಿ ಘನಮಠ ನಾಗಭೂಷಣ ಶರಣರು ಕೃಷಿಯನ್ನೇ ಕುರಿತಾಗಿ ' ಕೃಷಿ ಜ್ಞಾನಪ್ರದೀಪಿಕೆ ' ಗ್ರಂಥವನ್ನು ರಚಿಸಿದ್ದಾರೆ. ಅಲ್ಲಿ ಅವರು ಅನೇಕ ಕತೆ, ಉಪ ಕತೆ, ಗಾದೆ ಮಾತುಗಳ ಮೂಲಕ ಜನಸಾಮಾನ್ಯರಿಗೆ ತಿಳುವಳಿಕೆ ನೀಡಿ ಕೃಷಿ ಪದ್ಧತಿಗಳನ್ನು ಪರಿಚಯಿಸಿಕೊಡುತ್ತಾರೆ. ಆರ್ಥಿಕ ವ್ಯವಸ್ಥೆಯಲ್ಲಿ ಈ ಕೃತಿ ಬಹು ಮುಖ್ಯವಾಗಿದೆ. ಇಲ್ಲಿನ ಕೃಷಿ ಪದ್ಧತಿ ನಮ್ಮ ದೇಶಿಯ ಆರ್ಥಿಕ ವ್ಯವಸ್ಥೆಗೆ ಓಡಿದ ಕನ್ನಡಿಯಾಗಿದೆ. ದೇಶದ ದಾರಿದ್ರ್ಯಕ್ಕೆ ಮನುಷ್ಯನ ಸೋಮಾರಿತನವೇ ಕಾರಣ ಎಂಬುದನ್ನು ನಾವು ಈ ಕೃತಿಯ ಮೂಲಕ ಕಾಣಬಹುದಾಗಿದೆ.

---

೧ : ಸಂ: ಡಾ : ಬಿ.ಆರ್. ಹಿರೇಮಠ, ಸ.ವ.ಸಂ.-೯, ವಚನ ೧೬, ಪುಟ ೨೧೨

೨ : ಅದೇ : ವಚನ ೨೦, ಪುಟ ೨೧೩

೩ : ಸಂ: ಡಾ : ವೀರಣ್ಣ ರಾಜೂರು -ಸ.ವ.ಸಂ. -೧೪, ವಚನ ೧೦೬, ಪುಟ ೪೮೩

೪ : ಅದೇ : ವಚನ ೧೨೧, ಪುಟ ೪೮೯

ಬಸವೋತ್ತರ ಯುಗದ ತತ್ವ ಪದ ರಚಿಸಿದ ಶರಣರು ನಿರ್ದಿಷ್ಟವಾದ ಕಾಯಕ ಮಾಡುತ್ತಿದ್ದರೂ ಅದನ್ನು ಆರ್ಥಿಕ ಚಿಂತನೆಯ ವಸ್ತುವಾಗಿ ಪರಿಗಣಿಸದೇ ಅದನ್ನು ಆಧ್ಯಾತ್ಮಿಕಕ್ಕೆ ಸಾಂಕೇತಿಕವಾಗಿರಿಸಿಕೊಂಡ ಕಾರಣ ಅವರಲ್ಲಿ ನಾವು ಆರ್ಥಿಕ ಚಿಂತನೆಗಳನ್ನು ಬಸವಯುಗದಷ್ಟು ಸ್ಪಷ್ಟವಾಗಿ ಕಾಣಲು ಶಕ್ಯವಿಲ್ಲ.

೩ : ಜ್ಯಾತ್ಯಾತೀತ ಸಮಾಜ

ಮಾನವೀಯತೆಯನ್ನು ಹೊಸಕಿ ಹಾಕುತ್ತಿರುವ ಜಾತಿ ಪದ್ಧತಿಯನ್ನು ಶರಣರು ಖಂಡಿಸಿ ತಾವು ಕಟ್ಟಬಯಸುವ ಸಮಾಜಕ್ಕೆ ಜಾತ್ಯಾತೀತ ಪರಿಕಲ್ಪನೆ ತಂದು ಕೊಡಲುಬಯಸಿದರು.

ಜಾತಿಯ ಮೂಲಕ ತಾರತಮ್ಯವನ್ನು ಮಾಡಿ ಕೆಲವು ಜನ ಈ ದೇಶವನ್ನು ಅಧೋಗತಿಗೆ ತಂದಿದ್ದಾರೆ. ಮಾನವರ ಬದುಕು ಹೀನಾಯವಾಗಿದೆ. ಮಾನವ ನಿರ್ಮಿತ ಈ ಕ್ರೂರವ್ಯವಸ್ಥೆ ಇಂದಿಗೂ ಹೊಸ ಹೊಸ ಮುಖಗಳಿಂದ ಮಾನವೀಯತೆಯ ಮೇಲೆ ಸವಾರಿ ಮಾಡುತ್ತದೆ. ಅರ್ಹತೆ ಇದ್ದರೂ ಅಂತವರಿಗೆ ಯೋಗ್ಯ ಸ್ಥಾನ ಸಿಗದೇ ಜಾತಿಯ ಮೂಲಕ ಸ್ಥಾನ ದೊರೆಯುವ ಕ್ರೂರವ್ಯವಸ್ಥೆ ನಮ್ಮ ದೇಶದಲ್ಲಿದೆ. ಜಾತ್ಯಾತೀತ ವೆನಿಸಿಕೊಂಡರು ಅದು ಇಂದಿನ ದಿನ ಜಾತಿಯ ಅತೀಯತೆಯಿಂದಾಗಿ ನರಳುವಂತಾಗಿದೆ. ಅಂದಮೇಲೆ ಶರಣರ ಕಾಲದ ಪರಿಸ್ಥಿತಿಯಂತೂ ಊಹಿಸಲು ಬಹು ಕಷ್ಟವಾಗುತ್ತದೆ.

ಜಾತ್ಯಾತೀತ ಸಮಾಜದ ನಿರ್ಮಾಣದಿಂದಾಗಿಯೇ ಏನನ್ನಾದರೂ ವ್ಯಕ್ತಿಯ ಬದುಕನ್ನು ಸುಧಾರಿಸಲು ಸಾಧ್ಯವೆಂದು ತಿಳಿದಿದ್ದರೂ. ಇದಕ್ಕಾಗಿ ಅವರು ಹಲವಾರು ದಿಟ್ಟ ಕ್ರಮಗಳನ್ನು ಕೈಗೊಂಡಾಗ ಸಂಪ್ರದಾಯವಾಧಿಗಳ ಪ್ರತಿಭಟನೆಯನ್ನು ಎದುರಿಸಬೇಕಾಯಿತು. ಆದರೂ ಶರಣರು ನಿರ್ಭಯವಾಗಿ ಹಿಂದಿನ ಎಲ್ಲಾ ವ್ಯವಸ್ಥೆಯ ಕ್ರೂರತೆಗಳನ್ನು ಅಳಿಸಿ ಹಾಕಿದರು. ಆ ಮೂಲಕ ಸಾಹಿತ್ಯ ಮತ್ತು ಬದುಕಿನಲ್ಲಿ ದಿಟ್ಟ ಹೆಜ್ಜೆಗಳನ್ನು ಇಟ್ಟರು. 'ಮನೆ ಧನ ಸಕಲ ಸಂಪದ ಸೌಖ್ಯವುಳ್ಳ ನಿಮ್ಮ ಶರಣರ ತಪ್ಪಲಕ್ಕಿಯ ನಾಯ್ದು ತಂದು ಎನ್ನೊಡಲ ಹೊರೆವನಾಗಿ'೧ ಎನ್ನುವಲ್ಲಿ ಆಯ್ದಕ್ಕಿ ಮಾರಯ್ಯರು ಜಾತ್ಯಾತೀತ ಮನೋಭಾವನೇ ಗುರುತಿಸಿದ್ದಾರೆ. ಹಾಗೆಯೇ ಜಾತಿಭೇದವನ್ನು ಕುರಿತು ಹೇಮಗಲ್ಲ ಹಂಪರು 'ಕೂಡುಂಡು ಜಾತಿ ಭೇದವನ ರಸಲುಂಟೇನಯ್ಯಾ?' ೨ ಎಂದು ಪ್ರಶ್ನಿಸುತ್ತಾರೆ. ವೈದಿಕ ಶಾಹಿಸಮಾಜ ನಿರ್ಮಿಸಿದ ಕುಲವನ್ನು ಕೂಡಲೂರು ಬಸವಲಿಂಗ ಶರಣರು 'ಪತಿವ್ರತೆಯ ಕುಲವಾವುದಣ್ಣಾ ? ' ೩ ಎನ್ನುತ್ತಾರೆ.

ವೈದಿಕ ಶಾಹಿ ರೂಪಿಸಿದ ಜಾತಿಯ ವ್ಯವಸ್ಥೆಯನ್ನು ಅಳಿದು ಹಾಕಲು ಶರಣರು ನಿರಂತರ ಹೋರಾಟ ನಡೆಸಿದ ಸಂಗತಿ ಅವರ ಸಾಹಿತ್ಯದ ತುಂಬೆಲ್ಲ ಬರುತ್ತದೆ. ಶರಣರು ಮೇಲ್ವರ್ಗದವರ ಹಿಡಿತದಲ್ಲಿದ್ದ 'ವಿದ್ಯೆ-ಆಡಳಿತ-ಸಂಸ್ಕೃತಿ' ಗಳನ್ನು ಸರ್ವರಿಗೂ ಸಿಗುವಂತೆ ಮಾಡಿದ ಪ್ರಯತ್ನ ಬಹು ಸಾಧನೆಯೇ ಸರಿ.

ಬಸವೋತ್ತರ ಯುಗದಶರಣರು ತಮ್ಮ ಕಾಲಕ್ಕಾಗಲೇ ಅತ್ಯಂತ ಪ್ರಬಲವಾಗಿ ಬೇರೊಂದು ರೀತಿಯಲ್ಲಿ ಕಾಣಿಸಿಕೊಳ್ಳುತ್ತಿದ್ದ ಜಾತಿಯನ್ನು ಹಾಗೂ ಜಾತಿ-ಜಾತಿಗಳ ಮಧ್ಯೆ ನಡೆಯುತ್ತಿದ್ದ ಸಂಘರ್ಷವನ್ನು ಮನಗಂಡು ಸಮನ್ವಯ ಸಾಧಿಸಲು ಬಹುತೇಕವಾಗಿ ಶ್ರಮಿಸಿದರು. ಆ ದಿಸೆಯಲ್ಲಿ ಅವರು ಸಾಹಿತ್ಯಿಕವಾಗಿ ಅಭಿವ್ಯಕ್ತಿಸಿ ಜನ ಸಮುದಾಯದಲ್ಲಿ ಮತ ಸಾಮರಸ್ಯದ ಅವಶ್ಯಕತೆಯನ್ನು ಸಾರಿ ಹೇಳಿದರು. ಕುಲ, ಜಾತಿಗಳಿಗಿಂತ ಮನುಷ್ಯತ್ವ ದೊಡ್ಡದೆಂಬುದನ್ನು ಪ್ರಾಯೋಗಿಕವಾಗಿ ತೋರಿಸಿ ಕೊಟ್ಟರು.

೪ : ಮೌಲ್ಯಧಾರಿತ ವ್ಯವಸ್ಥೆ

ಸ್ವಾತಂತ್ರ್ಯ-ಆರ್ಥಿಕ-ಜಾತಿ-ವರ್ಗ ರಹಿತ ಇತ್ಯಾದಿ ಪರಿಕಲ್ಪನೆಗಳನ್ನು ಒಳಗೊಂಡ ಸಮಾಜವನ್ನು ಕಟ್ಟ ಬಯಸಿದ ಶರಣರು ಎಲ್ಲಕ್ಕಿಂತ ಮುಖ್ಯವಾಗಿ ತಾವು ಕಟ್ಟ ಬಯಸಿದ ಸಮಾಜದ ಮೌಲ್ಯಗಳ ಬಗ್ಗೆ ಆಲೋಚಿಸಿದರೂ ಕೂಡ.

ಅವರ ಮೌಲ್ಯಗಳ ಚಿಂತನೆ ಕಾಲದಿಂದ ಕಾಲಕ್ಕೆ ಭಿನ್ನವಾಗಿರುವುದು ಸಹಜವಾಗಿದೆ. ಬಸವಪೂರ್ವಯುಗ - ಬಸವಯುಗದ ಶರಣರ ಮೌಲ್ಯ ನಿರ್ಧಾರ ಒಂದು ಬಗೆಯಾದರೇ ಬಸವೋತ್ತರ ಯುಗದ ಶರಣರ ಮೌಲ್ಯದ ನಿರ್ಧಾರ ಮತ್ತೊಂದು ಬಗೆಯದಾಗಿದೆ. ಬಸವಪೂರ್ವ -ಬಸವಯುಗದ ಮೌಲ್ಯಗಳು ಆಧುನಿಕ ಪರಂಪರೆಯನ್ನು ಮೀರಿಸುವ ಮಾನವೀಯ ಮೌಲ್ಯಗಳನ್ನು ಒಳಗೊಂಡಿವೆ. ಬಸವೋತ್ತರ ಯುಗದಲ್ಲಿ ಕೆಲವು ಸಾಂಪ್ರದಾಯಿಕ ಮೌಲ್ಯಗಳನ್ನೇ ಪೋಷಿಸುವ ಸ್ಥಗಿತತೆಗಳನ್ನು ಕಾಣಬಹುದಾಗಿದೆ.

'ಕಾಯಕ-ದಾಸೋಹ' ಉನ್ನತ ಮೌಲ್ಯದ ಜೊತೆಗೆ ಹಲವಾರು ಮೌಲ್ಯಗಳನ್ನು ಬೆಳೆಸಿದರು. ಮೌಲ್ಯಗಳ ಪ್ರಶ್ನೆ ಬಂದಾಗ ನಮ್ಮಲ್ಲಿ ಹಲವಾರು ವಿಚಾರಗಳು ಮೂಡಿ ಬರುವದು ಸಹಜವಾಗಿದೆ.ಮೌಲ್ಯಗಳ ಕುರಿತು ವಿಚಾರಿಸುವಾಗ ಆಯಾ ಸಮಕಾಲೀನ ಚರಿತ್ರೆಯನ್ನು ಅರಿಯುವ ಜೊತೆಗೆ ಇಂದಿನ ಬದುಕಿಗೆ ಅಂದಿನ ವಿಚಾರಗಳನ್ನು ಸಹ ತೌಲನಿಕವಾಗಿ ಗಮನಿಸಬಹುದಾಗಿದೆ.

---

೧ : ಸಂ: ಡಾ: ಎಂ.ಎಂ. ಕಲಬುರ್ಗಿ- ಸ.ವ.ಸಂ.-೬, ವಚನ ೪, ಪುಟ ೩೭೮

೨ : ಸಂ:ಡಾ: ವೀರಣ್ಣ ರಾಜೂರು -ಸ.ವ.ಸಂ. -೧೪, ವಚನ ೨೨೨, ಪುಟ ೫೩೫

೩ : ಆಯ್ಕೆ :ಎಸ್.ಜಿ.ಸ್ವಾಮಿ -ಕೂ.ಬ. ಪದ್ಯ ೪೪, ಪುಟ ೩೭

'ನೀತಿ'- ಈ ಪರಿಸರದ ಶರಣರ ಪರಿಪೂರ್ಣ ಮೌಲ್ಯವಾಗಿದೆ. ಇಂದಿನ ಸಾಮಾಜಿಕ ಪರಿಸರದಲ್ಲಿ ಎಲ್ಲೆಲ್ಲೂ ಅಸಮಾಧಾನವೇ ತುಂಬಿದೆ. ಯಾಂತ್ರಿಕತೆ ಮತ್ತು ತಾಂತ್ರಿಕತೆಗಳ ಅತೀಯತೆಯಿಂದಾಗಿ ಮನುಷ್ಯತ್ವ ನಾಶವಾಗಿದೆ. ನೈತಿಕತೆಯ ದಾರಿದ್ರ್ಯತನ ಮನುಷ್ಯರ ಬದುಕನ್ನೇ ಬಲಿಯಾಗಿರಿಸಿದೆ. ಇಂತಹ ವ್ಯವಸ್ಥೆಯ ಬಗ್ಗೆ ಈ ಪರಿಸರದ ಶರಣರು ಪದೇ ಪದೇ ಎಚ್ಚರಿಕೆಯ ಮಾತುಗಳನ್ನು ನುಡಿದಿದ್ದಾರೆ. ನುಡಿ - ನಡೆಗಳ ಸಮನ್ವಯತೆಯೇ ನೈತಿಕ ಮೌಲ್ಯವನ್ನು ಪ್ರತಿಪಾದಿಸುವ ಪ್ರಮುಖ ಹೆಜ್ಜೆ ಎಂಬುದನ್ನು ಅರಿತಿದ್ದ ಈ ಪರಿಸರದ ಶರಣರು ಈ ಕುರಿತು ಹೇಳುವುದ ಹೀಗೆ : ' ನುಡಿಯಲು ಬಾರದು ಕೆಟ್ಟನುಡಿಗಳ ನಡೆಯಲು ಬಾರದು ಕೆಟ್ಟ ನಡೆಗಳ ' ೧ ಮುಕ್ತಾಯಕ್ಕರ ಈ ಮಾತುಗಳಲ್ಲಿ ಸಮನ್ವಯತೆಯ ಕ್ರಿಯಾರೂಪವನ್ನು ಗುರುತಿಸಬಹುದಾಗಿದೆ.

ಇಹ ಪರಗಳೆರಡನ್ನು ಪ್ರಮುಖವಾಗಿ ಲಕ್ಷ್ಯದಲ್ಲಿರಿಸಿಕೊಂಡಿದ್ದ ಬಸವ ಯುಗದ ಈ ಪರಿಸರದ ಶರಣರು ಸತ್ಯ ,ನೀತಿ ,ಸದಾಚಾರ , ದಯೆ ಮೊದಲಾದ ಮೌಲ್ಯಗಳನ್ನೊಳಗೊಂಡ ಮೌಲ್ಯಧಾರಿತ ವ್ಯವಸ್ಥೆಯ ಸಮಾಜವನ್ನು ಕಟ್ಟಲು ಬಯಸಿದರು. ಸಾಮಾಜಿಕ ಬದುಕಿನ ಹೋರಾಟಕ್ಕೆ ಧಾರ್ಮಿಕ ಹೋರಾಟದಷ್ಟೇ ಪ್ರಾಶಸ್ತ್ಯನೀಡಿದ್ದರಿಂದಲೇ ಈ ಪರಿಸರದ ಶರಣರ ಬದುಕು - ಬರಹಕ್ಕೆ ಇಂದಿಗೂ ಮಾನ್ಯತೆ ಇದೆ. ನಾವಿಂದು ಪ್ರತಿಪಾದಿಸುವ ಆಧುನಿಕ ಸ್ತ್ರೀವಾದಿ ಚಳುವಳಿ ನೈಜವಾಗಿ ಒಂದು ಸ್ವರೂಪವನ್ನು ಪಡೆದು ಕೊಂಡು ಅದೊಂದು ಆ ಕಾಲದ ಮತ್ತು ಈ ಕಾಲದ ಮೌಲ್ಯಧಾರಿತ ವ್ಯವಸ್ಥೆಯಲ್ಲಿ ಕಂಡು ಬರುವ ಪ್ರಮುಖ ಅಂಶವಾಗಿದೆ. ಸ್ತ್ರೀವಾದದ ಪ್ರಖರತೆ ನಮಗೆ ಮುಕ್ತಾಯಕ್ಕರ ಜೀವನ ಸಂದರ್ಭದಲ್ಲಿ ಕಂಡು ಬರುತ್ತದೆ. ಸಮಕಾಲೀನ ಭಾರತೀಯ ಸಾಂಸ್ಕೃತಿಕ ಮೌಲ್ಯ ವ್ಯವಸ್ಥೆಯಲ್ಲಿನ ಸ್ತ್ರೀವಾದಕ್ಕೆ ಈ ಪರಿಸರದ ಮುಕ್ತಾಯಕ್ಕ ಸೂಕ್ತ ನಿದರ್ಶನವಾಗುತ್ತಾಳೆ. ಅಲ್ಲಮನೊಡನೆ ಚರ್ಚೆ ಮಾಡಿದ್ದು ಕೇವಲ ತಾರ್ಕಿಕ ಕಾವ್ಯ ಸತ್ಯವಾಗಿರದೇ ಈ ಪರಿಸರದ ಶರಣರ ಗಟ್ಟಿತನದ ಸೈದ್ಧಾಂತಿಕ ಸತ್ಯವೂ ಆಗಿದೆನ್ನಬಹುದಾಗಿದೆ. ದಯಾಗುಣಕ್ಕೆ ಈ ಪರಿಸರದ ಶರಣರಲ್ಲಿ ವಿಶೇಷ ಮಹತ್ವವಿದೆ. ದಯವನ್ನೇ ಪರಮ ಧರ್ಮವೆಂದು ನಂಬಿ ಬದುಕಿ ಇಡೀ ಮನುಷ್ಯತ್ವವನ್ನೇ ಆ ದಯಾಗುಣದ ಮೂಲಕ ತೋರ್ಪಡಿಸಿದ್ದಾರೆ.

ಸರ್ವಜೀವಕ್ಕೆ ದಯವೆ ಮೂಲ ಮಂತ್ರ

ಸರ್ವರ ಭೂತ ಹಿತವೆ ದಿವ್ಯಜ್ಞಾನ ೨ ಸುಂಕದ ಬಂಕಣ್ಣನವರ ಈ ಮಾತು ಇಡೀ ಬದುಕಿಗೆ ಮೂಲ ಮಂತ್ರವೆಂಬುದನ್ನು ಕಾಣಬಹುದು. ಇದರಂತೆ ಸದಾಚಾರಕ್ಕೂ ಈ ಪರಿಸರದ ಶರಣರು ಮಹತ್ವ ನೀಡಿದ್ದಾರೆಂಬುದನ್ನು ಅಜಗಣ್ಣನವರ ' ಸಜ್ಜನವೇ ಮಜ್ಜನ ಸದಾಚಾರವೇ ಧೂಪಾರತಿ' ೩ ಎಂಬುದರ ಮೂಲಕ ಕಂಡು ಕೊಳ್ಳಬಹುದಾಗಿದೆ. ವಿನಯ ಸೌಜನ್ಯಗಳನ್ನು ಈಪರಿಸರದ ಶರಣರು ತಮ್ಮ ಬದುಕಿನ ತುಂಬೆಲ್ಲ ಕಾಪಾಡಿಕೊಂಡು ಬಂದಿದ್ದಾರೆ. ಈ ಕುರಿತು ಸುಂಕದ ಬಂಕಣ್ಣನವರು ಹೇಳುವ ಹಾಗೆ ' ನಿಂದಿಸುವನೊಬ್ಬ , ಸ್ತುತಿಸುವನೊಬ್ಬ ಇವರಿಬ್ಬರು ಪರಮ ಬಂಧುಗಳು ' ೪ ಎಂಬುದನ್ನು ಗಮನಿಸಿದರೇ ಈ ಪರಿಸರದ ಶರಣರ ವಿನಯ, ಸೌಜನ್ಯ , ತಾಳ್ಮೆಯನ್ನು ಗಮನಿಸಬಹುದಾಗಿದೆ. ಹಾಗೆಯೇ ಢಕ್ಕೆಯ ಮಾರಯ್ಯರ ' ತನುಕಾಯಕ ಮನಲಿಂಗ ದಾಸೋಹ ಜಂಗಮದಲ್ಲಿ ನಾನೆಂಬುದನಳಿದು ಮಾಡುವುದು '೫ ಎನ್ನುವುದು ಕೂಡ ಗಮನಾರ್ಹವಾಗಿದೆ. ಸೌಜನ್ಯದ ಸದ್ಗುಣವನ್ನೇ ದಿಟವನ್ನಾಗಿ ಮಾಡಬೇಕೆಂಬ ಆಶಯವನ್ನು ಸುಂಕದ ಬಂಕಣ್ಣನವರು ' ಎನ್ನ ಸಜ್ಜನಿಕೆಯ ದಿಟವ ಮಾಡೆನ್ನತಂದೆ ' ೬ ಎಂದು ಬೇಡಿಕೊಳ್ಳುತ್ತಾರೆ.

ಮನುಷ್ಯತ್ವ ಮರೆಯಾಗಿದ್ದ ಸಮಾಜದಲ್ಲಿ ಈ ಪರಿಸರದ ಶರಣರು ಹೊಸ ರೀತಿಯ ಮೌಲ್ಯಗಳನ್ನು ಪ್ರತಿಪಾದಿಸಿದರು. ಯಾರ ಹಂಗಿಲ್ಲದೇ ಮನುಷ್ಯ ಸ್ವತಂತ್ರವಾಗಿ ಬದುಕಿದಾಗ ಮಾತ್ರ ಅವನಿಗೆ ಬೆಲೆ ಇದೆ ಎಂಬುದನ್ನು ನಾವು ಈ ಪರಿಸರದ ಬಸವಯುಗದ ಶರಣರಲ್ಲಿ ಪ್ರಮುಖವಾಗಿ ಗುರುತಿಸಬಹುದಾಗಿದೆ. ಹಾಗೆಯೇ ಆಯ್ದಕ್ಕಿ ದಂಪತಿಗಳು ಸಂಪತ್ತಿನ ಅಕ್ರಮ ಸಂಗ್ರಹವನ್ನು ವಿರೋಧಿಸಿ ಮೊದಲಬಾರಿಗೆ ಮೌಲ್ಯಧಾರಿತ ವ್ಯವಸ್ಥೆಯ ಸಮಾಜ ನಿರ್ಮಾಣದ ಕಲ್ಪನೆಯನ್ನು ಪ್ರಾಯೋಗಿಕವಾಗಿ ತಮ್ಮ ಕಾಯಕ - ದಾಸೋಹಗಳ ಮೂಲಕ ತೋರಿಸಿ ಕೊಟ್ಟರು.

' ವಿರಕ್ತಿಯಲ್ಲಿ ವಿಚಾರಿಸಿ ನಿಲ್ಲಬೇಕು ' ೭ ಎನ್ನುವ ಢಕ್ಕೆಯ ಮಾರಯ್ಯರ ಮಾತು ಸ್ವಾಮಿಗಳಾಗುವವರ ಅಂತರಂಗವನ್ನೇ ಪ್ರಶ್ನಿಸುವಂತಿದೆ. ಮನುಷ್ಯರ ಬದುಕಿನಲ್ಲಿ ಯಾವುದು ನಿಜವಾದ ಮಾರಿಯೆಂದು ತಿಳಿಸಿ , ಬದುಕಿನಲ್ಲಿ ದುರಾಸೆಮಾಡದೇ ನಿರಾಸೆಯಿಂದ ಬದುಕಿದರೆ ಎಲ್ಲವೂ ಸಿಗಬಲ್ಲದು ಎಂಬ ಮೌಲ್ಯವನ್ನು ಇವರು ' ಆಸೆಯೆಂಬುದೆ ಮಾರಿ , ನಿರಾಸೆಯೆಂಬುದೆ ದೇವ ಪದ ' ೮ ಎನ್ನುವ ಮೂಲಕ ಹೊಸ ಮೌಲ್ಯವನ್ನು ಗುರುತಿಸಿದ್ದಾರೆ.

---

೧ : ಸಂ : ಡಾ : ವೀರಣ್ಣ ರಾಜೂರು - ಸ.ವ.ಸಂ.-೫, ವಚನ ೨೬, ಪುಟ ೨೭೮

೨ : ಸಂ : ಡಾ :ಬಿ.ಆರ್.ಹಿರೇಮಠ-ಸ.ವ.ಸಂ. -೯ , ವಚನ ೬೩, ಪುಟ ೨೨೪

೩ : ಸಂ : ಡಾ: ಎಂ.ಎಂ. ಕಲಬುರ್ಗಿ -ಸ.ವ.ಸಂ. -೬ , ವಚನ ೧೦, ಪುಟ ೧೦೧

೪ : ಸಂ : ಡಾ :ಬಿ.ಆರ್.ಹಿರೇಮಠ-ಸ.ವ.ಸಂ. -೯ , ವಚನ ೧೦೬, ಪುಟ ೨೩೫

೫ : ಸಂ : ಡಾ : ಎಸ್.ವಿದ್ಯಾಶಂಕರ -ಸ.ವ.ಸಂ. -೭ , ವಚನ ೫೩, ಪುಟ ೨೯೯

೬ : ಸಂ : ಡಾ :ಬಿ.ಆರ್.ಹಿರೇಮಠ-ಸ.ವ.ಸಂ. -೯ , ವಚನ ೧೦೫ , ಪುಟ ೨೩೫

೭ : ಸಂ : ಡಾ : ಎಸ್.ವಿದ್ಯಾಶಂಕರ -ಸ.ವ.ಸಂ. -೭ , ವಚನ ೨೪, ಪುಟ ೨೯೦

೮ : ಅದೇ : ವಚನ ೩೪, ಪುಟ ೨೯೩

ಬಸವಯುಗದ ಶರಣರಂತೆ ಬಸವೋತ್ತರ ಯುಗದ ಶರಣರು ಮೌಲ್ಯಧಾರಿತ ವ್ಯವಸ್ಥೆಯ ಸಮಾಜಕ್ಕೆ ಒತ್ತು ನೀಡಿದ್ದರೂ ಅವರ ಮೌಲ್ಯದ ವಿಚಾರಗಲ್ಲಿ ಕಸರತ್ತಿದೆ ಹೊರತು ಆಚರಣೆಯ ಆಳವಿಲ್ಲವೆಂಬುದು ಮೆಲ್ನೋಟಕ್ಕೆ ಕಂಡುಬರುತ್ತದೆ. ಇಷ್ಟಾದರೂ ಇವರು ಸಮಕಾಲೀನ ಮೌಲ್ಯಗಳಿಗೆ ಬೆಲೆ ಕೊಟ್ಟು ಬಾಳಿದವರು. ಇವರ ಸಾಹಿತ್ಯಿಕ ಅಭಿವ್ಯಕ್ತಿಯ ಅಂಶಗಳೆಲ್ಲವೂ ಮೌಲ್ಯವಾಗಿರಲಿಕ್ಕಿಲ್ಲ ವಾದರೂ ಬದುಕಿನಲ್ಲಿ ಎಲ್ಲರಿಗಿಂತ ಉತ್ತಮರಾಗಿ ಆ ಕಾಲದಲ್ಲಿ ಬಾಳಿದವರು ಎಂಬು ಸ್ಪಷ್ಟವಾಗಿದೆ.

ಅಗ್ಘವಣಿ ಹಂಪಯ್ಯ ಭಕ್ತಸ್ಥಿತಿಯನ್ನು ಕುರಿತು ಮಾತಾಡಿದ್ದರೂ ಪರೋಕ್ಷವಾಗಿ ಶರಣರು ಬಯಸಿದ ಮೌಲ್ಯವೆಂತಹದು ಎಂಬುದನ್ನು ಹೀಗೆ ಹೇಳುತ್ತಾನೆ:

ಹುಸಿಯ ನುಡಿಯನು ಭಕ್ತ, ವ್ಯಸನಕ್ಕಳಿಸನು ಭಕ್ತ

ವಿಷಯಂಗಳಾತಂಗೆ ತೃಣವು ನೋಡಾ ಬಯಸುವವನಲ್ಲ ಭಕ್ತ

ದಯೆಯೆಂಬುದು ತನ್ನ ಕೈಯಲ್ಲಿ ಸ್ಮರಣೆಯೆಂಬುದು ತನಗೆ ತೊತ್ತಾಗಿಪ್ಪುದು

ಕೋಪವೆಂಥದೆಂದರಿಯ ತಾಪತ್ರಯಂಗಳು ಮುಟ್ಟಲಮ್ಮವು ವ್ಯಾಪ್ತಿಗಳಡಗಿದುವು೧ ಇಲ್ಲಿ ಸತ್ಯ, ದಯೆ, ಸಹನೆ ಮೊದಲಾದಗುಣಗಳ ಬಗ್ಗೆ ಪರೋಕ್ಷವಾಗಿ ತಿಳಿಸದ್ದು ಕಂಡು ಬರುತ್ತದೆ.

ಗುರು -ಹಿರಿಯರನ್ನು ಗೌರವದಿಂದ ಕಾಣಬೇಕೆಂಬ ಸಾರ್ವಕಾಲಿಕ ಮೌಲ್ಯವನ್ನು ಹೇಮಗಲ್ಲ ಹಂಪರ ಅನೇಕ ವಚನಗಳಲ್ಲಿ ಕಾಣಬಹುದಾಗಿದೆ. ಗುರುವಿನ ಬಗ್ಗೆ ಇವರಿಗೆ ವಿಶೇಷ ಗೌರವವಿದೆ.ಇವರು ತಮ್ಮ 'ಗುರುಕರಣಸ್ಥಲ'ವೆಂದು ಒಂದು ಸ್ಥಲವನ್ನೇ ಕೃತಿಯಲ್ಲಿ ಮೀಸಲಾಗಿರಿಸಿದ್ದಾರೆ.೨

ತತ್ವಪದಗಳನ್ನು ರಚಿಸಿದ ಅನೇಕ ಶರಣರು ತಮ್ಮ ಅನೇಕ ಹಾಡುಗಳಲ್ಲಿ ಅನೇಕ ಮೌಲ್ಯಗಳ ಬಗ್ಗೆ ತಿಳಿಸಿದ್ದಾರೆ. ಕೂಡಲೂರು ಬಸವಲಿಂಗ ಶರಣರ ಹಾಡುಗಳಲ್ಲಿ ೩ ಮತ್ತು ನೀರಲಕೇರಿ ಬಸವಲಿಂಗ ಶರಣರ ಹಾಡುಗಳಲ್ಲಿ ೪ ಅನೇಕ ಮೌಲ್ಯಗಳ ಬಗ್ಗೆ ನಾವು ತಿಳಿಯಬಹುದಾಗಿದೆ.

ಇದುವರೆಗಿನ ಅವಲೋಕನೆಯಿಂದ ನಮಗೆ ಕಂಡುಬರುವುದೇನೆಂದರೆ ಶರಣರು ಪ್ರತಿಪಾದಿಸಿದ ಮೌಲ್ಯಗಳು ಆಧುನಿಕ ಮೌಲ್ಯಗಳಿಗಿಂತಲೂ ಪ್ರಗತಿಪರವಾಗಿವೆ ಎಂಬುದು ಕಂಡು ಬರುತ್ತದೆ. ಸಮಾಜದಲ್ಲಿ ಮರೆಯಾಗಿದ್ದ ಸ್ವಾತಂತ್ರ್ಯ, ಸಮಾನತೆ, ಮಾನವೀಯತೆಗಳಿಗೆ ಚರಿತ್ರೆಯಲ್ಲಿ ಮೊದಲಬಾರಿಗೆ ಹೊಸ ಅರ್ಥವನ್ನು ಕಲ್ಪಿಸಿ ಕೊಟ್ಟರು. ನಾವು ಸ್ವಾತಂತ್ರ್ಯ ಪಡೆಯಲು ಆಂಗ್ಲರೊಡನೆ ಮೂರು ಶತಕಗಳ ಕಾಲ ಹೋರಾಡಿದೆವು. ಆ ನಮಗೆ ಸಿಕ್ಕಿದ್ದು ಕೇವಲ ರಾಜಕೀಯ ಸ್ವಾತಂತ್ರ್ಯ. ನಮಗಿಂದೂ ನಮ್ಮವರಿಂದಲೇ ಸಂಪೂರ್ಣ ಸ್ವಾತಂತ್ರ್ಯ ದೊರಕಿಲ್ಲ. ಸ್ವಾತಂತ್ರ್ಯವೆಂಬುದು ಕೆಲವರ ಸೊತ್ತಾಗಿದೆ.

ಈಪರಿಸರದ ಶರಣರು ತಮ್ಮ ಸಮಕಾಲೀನ ರಾಜವ್ಯವಸ್ಥೆಯ -ಪ್ರಭುತ್ವದ ವಿರುದ್ಧ ಹೋರಾಡಿ ಅಂದಿನ ಯಜಮಾನ ಸಂಸ್ಕೃತಿಯನ್ನು ಹೊಡೆದೋಡಿಸಿ ಸಾಮಾನ್ಯ ಸಂಸ್ಕೃತಿಯನ್ನು ಪೋಷಿಸಿ ಬೆಳೆಸಿದರು.

ನಮ್ಮ ದೇಶದ ಗಾಂಧಿ, ವಿವೇಕಾನಂದ, ಪರದೇಶದ ಲೂಥರ್, ಲೆನಿನ್, ಮಾರ್ಕ್ಸ ಮುಂತಾದವರು ವಿಚಾರಗಳ ಮೂಲಕವೇ ಹೋರಾಟ ನಡೆಸಿ ಅದನ್ನು ಪ್ರಾಯೋಗಿಕವಾಗಿ ಜಾರಿಗೆ ತರುವಲ್ಲಿ ಎದುರಿಸಿದ ಆತಂಕಗಳನ್ನು ನೋಡಿದಾಗ; ಹಾಗೆಯೇ ನಾವಿಂದು ಅನೇಕ ವ್ಯವಸ್ಥೆಯ ಬಗ್ಗೆ ಆಲೋಚಿಸುತ್ತಿರುವಾಗ, ಶರಣರು ಆದಿನವೇ ತಾವು ಕಟ್ಟ ಬಯಸಿದ ಸಮಾಜದ ರೂಪು - ರೇಷಗಳ ಸ್ಪಷ್ಟವಾದ ನಿಲುವು ತಾಳಿದ ಬಗ್ಗೆ ನಮಗೆ ಆಶ್ಚರ್ಯವಾಗುತ್ತದೆ.

ಒಟ್ಟಾರೆ ನುಡಿದಂತೆ ನಡೆಯುವ ಮೂಲಕ ತಾವೇ ಮಾದರಿಗಳಾಗಿ ಇಡೀ ಸಮಾಜ ಜೀವನದಲ್ಲಿ ಹೊಸ ಪರಿವರ್ತನೆ ಮಾಡಿ ಸಮಸ್ಯಾರಹಿತ ಸಮಾಜವನ್ನು ರೂಪಿಸಿದ ಆದರ್ಶ ಸಮಾಜ ಶಿಲ್ಪಿಗಳಾಗಿದ್ದರೆಂದರೆ ಅತಿಶಯೋಕ್ತಿಯೆನಲ್ಲ.

---

೧ : ಸಂ : ಡಾ : ಎಂ.ಎಂ. ಕಲಬುರ್ಗಿ -ಸ.ವ.ಸಂ.-೬ ,ವಚನ ೪, ಪುಟ ೯೬

೨ : ಸಂ:ಡಾ: ವೀರಣ್ಣ ರಾಜೂರು -ಸ.ವ.ಸಂ. -೧೪, ವಚನ ೧೯೬-೨೨೫, ಪುಟ ೫೨೫-೫೩೮

೩ : ಆಯ್ಕೆ : ಎಸ್.ಜಿ.ಸ್ವಾಮಿ -ಕೂ.ಬ. ಪದ್ಯ ೬, ೯, ೬೪ ನುಡಿ ೧ ,೨, ೨ಪುಟ ೫, ೭, ೫೩

೪ : ಸಂ : ಡಾ : ಬಸವಲಿಂಗ ಸೊಪ್ಪಿಮಠ-ನೀ.ಬ.ಶಿ.ಸ್ವ. ,ಪದ್ಯ ೧೭೭, ನುಡಿ ೧-೨೨, ಪುಟ ೧೦೮- ೧೧೦

ಅಧ್ಯಾಯ ೦೬

ರಾಯಚೂರು ಪರಿಸರದ ಶರಣ ಸಾಹಿತ್ಯದಲ್ಲಿ ನಿರೂಪಿತವಾದ ಧರ್ಮ

೬ : ೧ ಧಾರ್ಮಿಕ ಸ್ಥಿತಿ-ಗತಿ : ಹಿನ್ನೆಲೆ

ಬಸವಪೂರ್ವ-ಬಸವ ಯುಗ :

ಈ ಪರಿಸರದ ಧಾರ್ಮಿಕ ಸ್ಥಿತಿ-ಗತಿಗಳನ್ನು ಅವಲೋಕಿಸಿದಾಗ ಇಲ್ಲಿ ಧರ್ಮಗಳ ಪರಸ್ಪರ ಪೈಪೋಟಿ -ಸಂಘರ್ಷಮಯವಾದ ವಾತಾವರಣವಿರುವುದು ಕಂಡು ಬರುತ್ತದೆ.

ಈ ಪರಿಸರದ ಮಸ್ಕಿಯ ಅಶೋಕ ಶಾಸನ ಹಾಗೂ ದೊರತ ಕೆಲವು ಅವಶೇಷಗಳನ್ನು ಅವಲೋಕಿಸಿದಾಗ ಬೌದ್ಧ ಧರ್ಮದ ಪ್ರಭಾವವಿರುವುದನ್ನು ಗುರುತಿಸಬಹುದಾಗಿದೆ. ಆದರೆ ಬೌದ್ಧ ಧರ್ಮ ಈ ಯುಗದ ಶರಣರು ಬರುವ ಹೊತ್ತಿಗೆ ಅಂದರೆ ಕ್ರಿ.ಶ.೧೧ನೇ ಶತಕದ ಪೂರ್ವಾದಕ್ಕೆ ಈ ಪರಿಸರದಿಂದ ಕಣ್ಮರೆಯಾದಂತೆ ಗೋಚರಿಸುತ್ತದೆ. ಹಾಗಾಗಿ ಈ ಧರ್ಮದ ಪ್ರಭಾವಲಯವನ್ನು ಕುರಿತು ನಮಗೆ ಏನನ್ನು ಹೇಳಲಾಗದು. ಆದರೆ ಇದೇ ಮಾತು ಜೈನ ಧರ್ಮವನ್ನು ಕುರಿತು ಹೇಳಲು ಬರುವುದಿಲ್ಲ.

ಈ ಸಂದರ್ಭದಲ್ಲಿ ಜೈನ ಧರ್ಮ ಕರ್ನಾಟಕದಲ್ಲಿಯೇ ಪ್ರಬಲವಾದ ಧರ್ಮವಾಗಿತ್ತು. ಮೇಲಾಗಿ ರಾಜಾಶ್ರಯ ಪಡೆದಿತ್ತು. ಬಸವಪೂರ್ವ ಯುಗದ ಶರಣರಾದ ಶಂಕರ ದಾಸಿಮಯ್ಯರ ಜೀವನದ ವಿವರಗಳನ್ನು ಅವಲೋಕಿಸಿದಾಗ ನಮಗೆಇದು ಸ್ಪಷ್ಟವಾಗಿ ಕಂಡು ಬರುತ್ತದೆ. ೧

ಮುಂದೆ ಜೈನ ಧರ್ಮ ಇಳಿಮುಖವಾಗುವವುದನ್ನು ಸಹ ನೋಡಬಹುದಾಗಿದೆ. ಜೈನರೊಡನೆ ನಡೆದ ಸಂಘರ್ಷ ೧೧ನೇ ಶತಕದ ಆರಂಭದ ತನಕ ನಡೆದಿತ್ತು. ಮುಂದೆ ಈ ಪರಿಸರದ ಶರಣರು ವಾಸ್ತವಿಕ ವಿಚಾರಗಳನ್ನು ಪ್ರಚುರಗೊಳಿಸಿದಾಗ ಅದು ತನ್ನ ವರ್ಚಸ್ಸನ್ನು ಕಳೆದು ಕೊಳ್ಳಲಾರಂಭಿಸಿತು.ಈ ಧರ್ಮದ ಸೈದ್ಧಾಂತಿಕ ನಿಲುವುಗಳು, ಕಾಲಕ್ರಮದಲ್ಲಿ ಜರುಗಿದ ಆಂತರಿಕ ಕಲಹ, ರಾಜಾಶ್ರಯದ ಕೊರತೆ, ವಾಸ್ತವ ಬದುಕಿನಿಂದ ದೂರವಿರುವ ತತ್ವದಿಂದಾಗಿ ಜೈನ ಧರ್ಮ ಈ ಪರಿಸರದಲ್ಲಿ ಪೈಪೋಟಿ ನೀಡದೆ ಹೋಯಿತು.

ಮುಂದೆ ಬಂದ ವೈದಿಕ ಧರ್ಮಕ್ಕೆ ಶ್ರೀ ರಾಮಾನುಜಾಚಾರ್ಯರ ಪ್ರಭಾವದಿಂದಾಗಿ ರಾಜಕೀಯ ಪ್ರೋತ್ಸಾಹ ದೊರೆಯಿತು. ಆಗ ಅದು ಶೈವ ಧರ್ಮದೊಡನೆ ಪೈಪೋಟಿ ನಡೆಸಿತು. ಮುಂದೆ ಇದುವೇ ಮನುಷ್ಯನ ಜೀವನದಲ್ಲಿ ಪ್ರಮುಖ ಧರ್ಮವಾಗತೊಡಗಿತ್ತು. ಇಡೀ ಮನುಷ್ಯ ಜನಾಂಗವನ್ನು ತನ್ನ ಬಿಗಿ ಮುಷ್ಠಿಯಲ್ಲಿ ಹಿಡಿದು ಕೊಂಡಿತ್ತು.

ಕರ್ಮ ಸಿದ್ಧಾಂತವನ್ನು ಪ್ರತಿಪಾದಿಸಿ ಜನರನ್ನು ಅಜ್ಞಾನದಲ್ಲಿ ಸಿಲುಕಿಸಿತು. ಜನರ ಅಜ್ಞಾನವನ್ನೇ ತನ್ನ ಏಳಿಗೆಯ ಸೋಪಾನವನ್ನಾಗಿ ಸೃಷ್ಟಿಸಿ ಕೊಂಡಿತು. ಈ ಧರ್ಮದ ಪ್ರವರ್ತಕರು ಸುಲಭವಾಗಿ ಹೊಟ್ಟೆ ಹೊರೆಯ ತೊಡಗಿದರು. ಧರ್ಮದ ಹೆಸರಿನಲ್ಲಿ ಹಗಲು ದರೋಡೆ ನಡೆಯ ತೊಡಗಿತು. ಧರ್ಮ ಒಂದು ವರ್ಗದ ಸೊತ್ತಾಯಿತು.

ಕರ್ಮ ಸಿದ್ಧಾಂತವನ್ನು ಗಮನಿಸಿದರೆ ಶರಣ ಧರ್ಮಕ್ಕಿಂತ ಪೂರ್ವದ ಸ್ಥಿತಿಯ ಬಗ್ಗೆ ಸ್ಪಷ್ಟ ಚಿತ್ರ ದೊರೆಯುತ್ತದೆ. ಕಪೋಲ ಕಲ್ಪಿತವಾದ ಕರ್ಮ ಕಾಂಡದಿಂದ ಮುಗ್ಧರು, ಅದರಲ್ಲೂ ಶೂದ್ರರು ಶೋಷಣೆಯಾಗುವುದನ್ನು ಕಂಡರೆ ವೈದಿಕ ಶಾಹಿ ಧರ್ಮದ ಕಳಂಕಿತ ಮುಖ ಗೋಚರ ವಾಗುತ್ತದೆ. ವೈದಿಕ ಧರ್ಮದ ಶಾಸ್ತ್ರಗಳನ್ನು ಅವಲೋಕಿಸಿದರೆ ನಮಗೆ ಧರ್ಮದ ಶೋಷಣೆಯ ಸ್ವರೂಪ ಸ್ಪಷ್ಟವಾಗಿ ಕಂಡು ಬರುತ್ತದೆ.

ಭಗವದ್ಗೀತೆಯ ಶ್ಲೋಕಗಳನ್ನು ಗಮನಿಸಿದರೆ ಸಾಕು ಈ ಧರ್ಮದ ಸ್ಥಿತಿ ಎಂತಹದು ಎಂಬುದು ನಮಗೆ ಅರಿವಾಗದೇ ಇರದು.ವೈದಿಕರೇ ಎಲ್ಲಕ್ಕೂ ಮೂಲ. ಅವರಿಂದಲೇ ಶ್ರೇಷ್ಠವಾದುದ್ದು ನಡೆಯುತ್ತದೆ ಎಂಬುದು ಅಲ್ಲಿನ ಕೆಲವು ಶ್ಲೋಕಗಳಿಂದ ತಿಳಿದು ಬರುತ್ತದೆ.

ದೇವದ್ವಿಜ ಗುರುಪ್ರಾಜ್ಞ ಪೂಜನಂ ಶೌಚ ಮಾರ್ಜವಂ

ಬ್ರಹ್ಮಚರ್ಯಮಹಿಂಸಾ ಚ ಶಾರೀರಂ ತಪ ಉಚ್ಯತೇ ೨ ಇದನ್ನು ಅವಲೋಕಿಸಿದರೇ ದೇವರು -ಗುರು -ಜ್ಞಾನಿಗಳ ಜೊತೆಯಲ್ಲಿ ಬ್ರಾಹ್ಮಣನ ಪೂಜೆಯನ್ನು ಮಾಡಿದರೆಅದು ಶಾರೀರಿಕ ತಪಸ್ಸೆಂಬ ಹಸಿ ಸುಳ್ಳನ್ನು ಕಾಣ ಬಹುದಾಗಿದೆ. ಇಲ್ಲಿ ಬ್ರಾಹ್ಮಣನಿಗೆ ಎಲ್ಲರಿಗಿಂತ ಉನ್ನತ ಸ್ಥಾನ ನೀಡಿ ಉಳಿದವರನ್ನು ಕಡೆಗಣಿಸಿರುವುದು ಕಂಡುಬರುತ್ತದೆ.ಇದು ಈ ಧರ್ಮದ ಶೋಷಣೆಯ ಒಂದು ಮುಖವಾಗಿದೆ. ಅಂತೆಯೇ ಪುರುಷಸೂಕ್ತ ೩ ಛಾಂದೋಗ್ಯೋಪನಿಷತ್೪ ಗಳನ್ನು ನೋಡಿದರೆ ವೈದಿಕ ಧರ್ಮ ಹೇಗೆ ಮಾನವೀಯತೆಯನ್ನು ಹೊಸಕಿ ಹಾಕಿ ಬ್ರಾಹ್ಮಣರೇ ಶ್ರೇಷ್ಠ ಎಂಬುದರ ಪ್ರತಿಪಾದನೆಯನ್ನು ನಾವು ಕಾಣಬಹುದಾಗಿದೆ.

---

೧ : ಇದೇ ಪ್ರಬಂಧದ ಪುಟ ೫೨-೫೫ಗಮನಿಸಿರಿ

೨ : Edt.Swami Prabhupada-B.A. ಅಧ್ಯಾಯ೧೭, ಶ್ಲೋಕ೧೪, ಪುಟ೧೬೪

೩ : ಎಚ್.ಪಿ. ವೆಂಕಟರಾವ್ -ಋ.ಸಂ. -ಮಂಡಲ೧೦, ಸೂತ್ರ೯೦, ಪುಟ೮೦೯

೪ : ಸ್ವಾಮಿ ಆದಿದೇವಾನಂದ -ಛಾ.ಉ. ಅಧ್ಯಾಯ೧೦, ಖಂಡ೧೦, ಶ್ಲೋಕ೭, ಪುಟ೨೭೭

ಸಾಮಾನ್ಯರಿಗೆ ಧರ್ಮ ನೈಜ ತಿಳುವಳಿಕೆ ನೀಡದೆ ಧರ್ಮದ ಹೆಸರಿನಲ್ಲಿ ಮುಗ್ಧರನ್ನು ಶೋಷಣೆಮಾಡಲಾಯಿತು.

ವೇದಾಭ್ಯಾಸೋ ಬ್ರಾಹ್ಮಣಸ್ಯ ಕ್ಷತ್ರಿಯಸ್ಯ ಚ ರಕ್ಷಣಂ।

ವಾರ್ತಾ ಕರ್ಮೈವ ವೈಶ್ಯಸ್ಯ ವಿಶೀಪ್ಟಾನಿ ಸ್ವಕರ್ಮಸು ॥೧ ವೇದಗಳ ಅಧ್ಯಯನ ಬ್ರಾಹ್ಮಣರು, ದೇಶದ ಸಂರಕ್ಷಣೆಯನ್ನು ಕ್ಷತ್ರಿಯರು, ವ್ಯಾಪಾರ-ಕೃಷಿಯನ್ನು ವೈಶ್ಯರು ಇವುಗಳು ವಿಶೇಷವಾದ ಕರ್ಮಗಳಾಗಿವೆ.

ಸ್ವಗಾರ್ಥ ಮುಭಯಾರ್ಥಂ ವಾ ವಿಪ್ರಾನಾರಾಧನ ಯೇತ್ತು ಸಃ।

ಜಾತ ಬ್ರಾಹ್ಮಣ ಶಬ್ದಸ್ಯ ಸಾಹ್ಯಸ್ಯ ಕೃತ ಕೃತ್ಯಾತ ॥೨ ಭೂಲೋಕ-ಸ್ವರ್ಗಲೋಕಗಳೆರಡರಲ್ಲಿ ಶೂದ್ರನಿಗೆ ಮುಕ್ತಿ ಲಭಿಸಬೇಕಾದರೆ ಬ್ರಾಹ್ಮಣರ ಸೇವೆಯನ್ನು ಮಾಡಬೇಕು.

ವಿಪ್ರ ಸೇವೈವ ಶೂದ್ರಸ್ಯ ವಿಶಿಷ್ಟಂ ಕರ್ಮಕೀರ್ತ್ಯತೇ।

ಯದ್ ತೋನ್ಯದ್ಧಿ ಕುರುತೇ ತದ್ಭವತ್ಯಸ್ಯ ನಿಷ್ಪಲಂ ॥೩ ಬ್ರಾಹ್ಮಣ ಸೇವೆಯೇ ಶೂದ್ರನಿಗೆ ಸಂತೋಷಕರ. ಅದನ್ನು ಬಿಟ್ಟರೆ ಉಳಿದುದೆಲ್ಲ ನಿಷ್ಪಲವಾಗಿರುತ್ತದೆ. ಮನುಸ್ಮೃತಿಯ ಈ ವಿಚಾರಗಳನ್ನು ಗಮನಿಸಿದಾಗ ವೈದಿಕ ಧರ್ಮ ಯಾವ ರೀತಿ ಶೋಷಣೆ ಮಾಡುತಿತ್ತೆಂದು ತಿಳಿದು ಬರುವ ಮೂಲಕ ಅಂದಿನ ಧಾರ್ಮಿಕ ಸ್ಥಿತಿಯ ಅರಿವಾಗುತ್ತದೆ.

ಪ್ರಗತಿಪರವೆನಿಸಿದ್ದ ಜೈನ-ಬೌದ್ಧರ ಗಾಢ ಪ್ರಭಾವ ಇಲ್ಲಿ ಮೂಡಿ ಬರದ ಕಾರಣ ವೈದಿಕಶಾಹಿ ಧರ್ಮ ತನ್ನ ಆಳವಾದ ಬೇರುಗಳನ್ನು ಬಿಟ್ಟು ಜನರನ್ನು ಶೋಷಣೆಗೆ ಒಳಪಡಿಸಿತು. ಜನರ ಅಜ್ಞಾನವನ್ನೇ ಬಂಡವಾಳ ಮಾಡಿಕೊಂಡು ಜ್ಯೋತಿಷ್ಯ, ವಾರ, ತಿಥಿ, ನಕ್ಷತ್ರ, ಶಕುನ ಇತ್ಯಾದಿಗಳ ಭಯದ ವಾತಾವರಣ ನಿರ್ಮಿಸಿ ಜನರ ನಿರಂತರ ಶೋಷಣೆ ಮಾಡಿತು.

ವೈದಿಕ ಧರ್ಮ ಈಪರಿಸರದಲ್ಲಿ ತನ್ನ ಪ್ರಭಾವವನ್ನು ಬಹುತೇಕ ಆವರಿಸಿ ಕೊಂಡು ಮೇಲಸ್ತರದಲ್ಲಿ ಮೆರೆಯುತ್ತಿದ್ದರೆ, ಮತ್ತೊಂದೆಡೆ ಬಹುತೇಕ ಸಾಮಾನ್ಯ ಜನತೆ ವಿವಿಧ ದೇವತಾರಾಧನೆ, ಆಚರಣೆ, ಬಲಿ ಮುಂತಾದ ಮೂಢಾಚರಣೆಗಳಿಂದ ಮೈಮರೆತು ತಮ್ಮ ಬಾಳನ್ನೇ ಬಲಿಗೊಟ್ಟಿದ್ದರು. ಇಂತಹ ಸಂದರ್ಭದಲ್ಲಿ ಮನುಷ್ಯರಲ್ಲಿ ಮಾನವೀಯತೆ ಮೂಡಿಸುವ ಧರ್ಮವೊಂದರ ಅವಶ್ಯಕತೆ ಇತ್ತು. ಆಗ ಈ ಯುಗದ ಶರಣರು ವೈದಿಕಶಾಹಿ ಧರ್ಮದ ವಿರುದ್ಧ ಸೆಟೆದು ನಿಂತರು.

ಬಸವೋತ್ತರ ಯುಗ :

ಈ ಯುಗದ ಶರಣರ ಸಂದರ್ಭದಲ್ಲಿ ಧರ್ಮದ ಸ್ಥಿತಿಯೇ ಬೇರೆಯಾಗಿತ್ತು. ಪುನ: ವೈದಿಕ ಪರಿಸರ ಮತ್ತೊಂದು ರೀತಿಯಲ್ಲಿ ಬೆಳೆದು ಬಂದಿತ್ತು. ಹಿಂದಿನ ಶರಣರ ನಿರಾಕಾರ ಶಿವ ಈ ಯುಗದಲ್ಲಿ ಸಾಕಾರವನ್ನು ಪಡೆದು ಕೊಂಡನು. ಹೀಗಾಗಿ ಹಿಂದಿನ ವೇದ-ಉಪನಿಷತ್‌ಗಳ ಆರೋಪವನ್ನು ಶಿವನಿಗೆ ಅನ್ವಯಿಸಿ ನೋಡುವ ಪರಂಪರೆ ಬೆಳೆಯಿತು. ಶಿವನ ನಾನಾ ರೂಪ, ನಾನಾ ದೇವಾಲಯ, ಅನೇಕ ಆಚರಣೆಗಳು ತಲೆದೋರಿದವು. ಜಂಗಮ ವ್ಯವಸ್ಥೆಯ ನಿಜವಾದ ಅರ್ಥ ಕಳೆದು ಹೋಗಿ ಅದು ನವ ಪುರೋಹಿತ ಶಾಹಿಯಾಯಿತು. ಆನಂತರ ಪರಕೀಯ ಆಕ್ರಮಣ, ವಸಾಹಾತುಕರಣದಿಂದಾಗಿ ಇಸ್ಲಾಂ-ಕ್ರೈಸ್ತ-ಪಾರ್ಸಿ ಧರ್ಮಗಳ ಪ್ರಭಾವ ಬೆಳೆದು ಬಂದು ಸಮನ್ವಯದ ಕೊರತೆಯಾಗಾದ ಸಹಿಷ್ಣುತೆಯನ್ನು ಕಾಪಾಡಿಕೊಂಡು ಹೋಗಬೇಕಾದ ಅನಿವಾರ್ಯವಾದ ಅತ್ಯಂತ ಸಂಕೀರ್ಣ ಧಾರ್ಮಿಕ ಸ್ಥಿತಿ ಈ ಯುಗದಲ್ಲಿ ತಲೆದೋರಿತು.

---

೧ : ಸಂ : ಈಶ್ವರ ಶಾಸ್ತ್ರಿ - ಮ.ಸ್ಮೃ. ಅಧ್ಯಾಯ ೧೦, ಶ್ಲೋಕ ೮೦

೨ : ಅದೇ : ಅಧ್ಯಾಯ ೧೦, ಶ್ಲೋಕ ೧೨೨

೩ : ಅದೇ : ಅಧ್ಯಾಯ ೧೦, ಶ್ಲೋಕ ೧೨೩.

೬ : ೨ ಶರಣ ಧರ್ಮ

ಧರ್ಮವನ್ನು ಕೇವಲ ಪರತತ್ವದ ವಿಚಾರಗಳನ್ನೊಳಗೊಂಡ ಚರ್ಚೆಗೆ ಮಾಧ್ಯಮವಾಗಿ ಶರಣರು ಬಳಸಲಿಲ್ಲ. ಅದು ಸಾಮಾಜಿಕ ಜೀವನದ ನಿರ್ವಹಣೆಯನ್ನು ಮಾಡುವಲ್ಲಿ ಶಕ್ತಿಯುತವಾಗಿರಬೇಕೆಂದು ಆಲೋಚಿಸಿ ಆ ದಿಸೆಯಲ್ಲಿ ಸರ್ವರಿಗೂ ಒಳಿತಾಗ ಬಲ್ಲ ಹೊಸ ಧರ್ಮವೊಂದನ್ನು ಹುಟ್ಟು ಹಾಕಿದರು. ಜೀವನ ಪ್ರೀತಿಯ ಜೊತೆಗೆ ವೈಚಾರಿಕ ನಿಲುವಿನ ಧರ್ಮವನ್ನು ಅವರು ಪ್ರತಿಪಾದಿಸಿದರು.

ವರ್ಣಭೇದ, ಲಿಂಗ ಭೇದ, ವರ್ಗಭೇದಗಳನ್ನು ತಿರಸ್ಕರಿಸಿ; ಜೀವನವನ್ನು ಪ್ರೀತಿಸಿ, ಒಳ ಹೊರಗುಗಳನ್ನು ಎಚ್ಚರಿಕೆಯಿಂದ ಗಮನಿಸಿ ಪ್ರತಿಯೊಂದನ್ನು ಪರೀಕ್ಷಿಸುವ ಹೊಸ ವೈಚಾರಿಕ, ನೈತಿಕ ನೆಲೆಗಟ್ಟಾಗಿ ಮೂಡಿ ಬಂದುದೇ ಶರಣ ಧರ್ಮವಾಗಿದೆ.

' ಶರಣ ಧರ್ಮ ಮುಖ್ಯವಾಗಿ ವಿರೋಧಿಸಿದ್ದು ಹಿಂದೂ ಧರ್ಮದ ಶ್ರೇಣೀಕರಣ ಸಾಮಾಜಿಕ ವ್ಯವಸ್ಥೆಯನ್ನು ಮೇಲೆ ಮಾತ್ರ 'ಸರ್ವಜನಾ ಸುಖಿನೋಭವಂತು '' ಸರ್ವಂ ಖಲ್ವಿದಂ ಬ್ರಹ್ಮಂ ' ಎಂಬ ಹುಸಿ ಘೋಷಣೆಗಳಿಂದ ಜಗತ್ತನ್ನು ಮೋಸಗೊಳಿಸುತ್ತ ದ ಒಳಗೆ ಮಾತ್ರ ಚಾತುರ್ವರ್ಣಪದ್ಧತಿಯನ್ನು ಬಲವಾಗಿ ಸಮರ್ಥಿಸುತ್ತ ಹಾಗೂ ಉಳಿಸಿ ಕೊಳುತ್ತ ಬಂದ ಹಿಂದೂ ಧರ್ಮದ ತಂತ್ರವನ್ನು ವಚನ ಕಾರ್ರರು ಅತ್ಯಂತ ತೀವ್ರವಾಗಿ ಪ್ರತಿಭಟಿಸಿದರು. ಹಿಂದೂ ಧರ್ಮಕ್ಕೆ ಕಾಲದಿಂದ ಕಾಲಕ್ಕೆ ಭಾಷ್ಯಗಳ ಭಾಷ್ಯವನ್ನು ಬರೆದ ಆಚಾರ್ಯರಾರು ಈ ಶ್ರೇಣೀಕರಣ ವ್ಯವಸ್ಥೆಯನ್ನು, ಬುದ್ಧನ ಹೊರತು ಪ್ರಶ್ನಿಸಲೇ ಇಲ್ಲ. ಯಾರ್ಯಾರು ಯಾವ್ಯಾವುದು ಎಲ್ಲೆಲ್ಲಿ ಇರಬೇಕೋ ಅದು ಅಲ್ಲಲ್ಲೆ ಇರುವುದೇ ಧರ್ಮ ಎಂದು ವ್ಯಾಖ್ಯಾನ ಬರೆಯುವುದರಲ್ಲಿಯೆ ಈ ಮಹಾ ಆಚಾರ್ಯರುಗಳ ವೈಚಾರಿಕತೆಯು ಪರ್ಯವಸಾನಗೊಂಡಿತು. ಯಾಕೆಂದರೆ ಮನುಷ್ಯರೆಲ್ಲ ಮೂಲತಃ ಸಮಾನರು ಅನ್ನುವುದನ್ನು ಒಪ್ಪುವ ಒಂದು ಉದಾರತೆಯೆ ಅವರಲ್ಲಿಲಿರಲಿಲ್ಲ. ಹೀಗೆ ಯಾವ ಧಾರ್ಮಿಕ ನಿಲುವು ಕೆಲವರ ಹಿಸಾಸಕ್ತಿಗಳನ್ನು ಮಾತ್ರ ಕಾಯುತ್ತ ಇನ್ನುಳಿದ ಸ್ತರಗಳವರನ್ನು ಶೋಷಣೆಗೆ ಗುರಿಪಡಿಸುತ್ತ ಅಮಾನವೀಯವಾಗಿದೆಯೋ ಅದನ್ನು ಸ್ಫೋಟಿಸಿ ವರ್ಣ ಸಂಕಲದ ಮೂಲಕ ಈ ಶ್ರೇಣೀಕರಣ ವ್ಯವಸ್ಥೆಯನ್ನು ಮುರಿಯುವ ಮೊದಲ ಕಾರ್ಯ ನಡೆದುದ್ದು ಶರಣ ಧರ್ಮದಿಂದ '೧ ಎನ್ನುವ ಡಾ: ಜಿ.ಎಸ್. ಶಿವರುದ್ರಪ್ಪನವರ ವಿಚಾರಗಳು ಗಮನಿಸಬೇಕಾಗಿದೆ. ಇಂತಹ ವಿಚಾರಗಳ ಹಿನ್ನೆಲೆಯಲ್ಲಿಯೇ ಶರಣ ಧರ್ಮ ಮೂಡಿ ಬಂದಿತು.

ಬಸವಪೂರ್ವ - ಬಸವಯುಗ

ಈ ಪರಿಸರದ ಶರಣರು ಕಲ್ಯಾಣ ಶರಣರ ಆದರ್ಶಗಳನ್ನಿಟ್ಟುಕೊಂಡೇ ಧರ್ಮವನ್ನು ಕಟ್ಟುವ ಆಲೋಚನೆ ಮಾಡಿ ಅವರೊಡನೆ ಕೈಜೋಡಿಸಿದರು.

ಈ ಯುಗದಲ್ಲಿ ಈ ಪರಿಸರದ ಶರಣರು ತಮ್ಮ ನೆಲೆಯಲ್ಲಿ ಪ್ರಭುಶಾಹಿ - ಪುರೋಹಿತ ಶಾಹಿಗಳನ್ನು ಪ್ರತಿಭಟಿಸಿ ದಿಟ್ಟತನದ ಹೋರಾಟ ಕೈ ಗೊಂಡು ಶರಣ ಧರ್ಮವನ್ನು ಈ ಪರಿಸರದಲ್ಲಿ ಹೊಸದಾಗಿ ನಿರ್ಮಿಸಿ ಜಡಗೊಂಡ ಧಾರ್ಮಿಕ ವ್ಯವಸ್ಥೆಯಲ್ಲಿ ಚೈತನ್ಯವನ್ನು ತುಂಬಿದರು. ಮನುಷ್ಯ - ಮನುಷ್ಯರನ್ನು ಗುರುತಿಸುವ ಮೊದಲ ಆಲೋಚನೆಯನ್ನು ಈ ಪರಿಸರದ ಶಂಕರ ದಾಸಿಮಯ್ಯ - ಢಕ್ಕೆಯ ಮಾರಯ್ಯ ಬಸವ ಪೂರ್ವ ಯುಗದಲ್ಲಿ ತೋರಿಸಿ ಕೊಟ್ಟರು. ಧರ್ಮವನ್ನು ಸಮಾನತೆಯ ಮೌಲ್ಯವೆಂದು ಸಾರಿದರು. ಧರ್ಮಕ್ಕೆ ಮೂಲ ದಯೆ ಎಂದು ಸಾರಿದರು. ದಯವೇ ಪೂಜೆ - ಜ್ಞಾನವೆಂಬ ಸಾರ್ವಕಾಲೀಕ ಸತ್ಯವನ್ನು ಈ ಪರಿಸರದ ಶರಣರಾದ ಸುಂಕದ ಬಂಕಣ್ಣನವರ ವಚನದ ಮೂಲಕ ನೋಡಬಹುದು.

ಸರ್ವ ಜೀವಕ್ಕೆ ದಯವೆ ಮೂಲ ಮಂತ್ರ

ಸರ್ವರ ಭೂತ ಹಿತವೆ ದಿವ್ಯ ಜ್ಞಾನ

ಇಂತೀ ಉಭಯವನರಿತಲ್ಲಿ ಸದಮಲ ಪೂಜೆ

ಹೀಗಲ್ಲದೆ ಬೆನ್ನ ತಡಹಿ, ಅನ್ನವನಿಕ್ಕಿ

ತಿನ್ನು ಕೊಲ್ಲು ಎಂಬುವನ ಪೂಜೆ

ಅವನನ್ನದ ಹಿರಣ್ಯದ ಒದಗು

ಅವನ ಮಾಟದ ಮರುಳಾಟ, ಏತದ ಕೂನಿಯ ಘಾತದ ವೆಜ್ಜದಂತೆ

ಅವನ ನೀತಿಯ ಇರವು ಬಂಕೇಶ್ವರ ಲಿಂಗ ೨ ಅಹಿಂಸಾ ಧರ್ಮದ ಸ್ಥಾಪನೆಯಾಗಬೇಕೆಂಬ ಸಾತ್ವಿಕ ವೈಚಾರಿಕತೆ ಇಲ್ಲಿದೆ. ಹಾಗೆಯೇ ಧರ್ಮವೆಂಬುದು ಕೇವಲ ಬೋಧೆಯ ಸರಕಲ್ಲ ಅದು ಕ್ರಿಯೆಯಾಗಿ ಆಚರಿಸುವಂತಿರಬೇಕು. ಎಂಬ ಆಶಯವನ್ನು ಹೇಳುತ್ತಾ ಇವರು ' ಧರ್ಮ ನುಡಿವಲ್ಲಿ ಕ್ರಿಯಾಧರ್ಮ ' ೩ ಎಂದಿರುವುದು ಗಮನಿಸಬಹುದಾಗಿದೆ.

---

೧ : ಸಂ : ಟಿ.ಆರ್. ಮಹಾದೇವಯ್ಯ - ಶ.ತ.ಚಿಂ. ಪುಟ ೧೫೭-೧೫೮

೨ : ಸಂ : ಡಾ : ಬಿ.ಆರ್. ಹಿರೇಮಠ - ಸ.ವ.ಸಂ. -೯, ವಚನ ೬೩, ಪುಟ ೨೨೪

೩ : ಅದೇ : ವಚನ ೯೮, ಪುಟ ೨೩೩

ಈ ಪರಿಸರದ ಶರಣರು ತಳೆದ ನಿಲುವು, ಪ್ರಗತಿಪರ ಆಲೋಚನೆಗಳು ಇಡೀ ಮನುಕುಲವನ್ನೇ ಕುರಿತಾಗಿದ್ದು ಆ ಹಿನ್ನೆಲೆಯಲ್ಲಿ ಅವರು ತಮ್ಮ ಧರ್ಮವನ್ನು ಸ್ಥಾಪಿಸಿದರು. ಶರಣರು ಸ್ಥಾಪಿಸಿದ್ದು ಹಿಂದೂ ಧರ್ಮದ ಮುಂದುವರಿಕೆಯಲ್ಲ, ಅಂತೆಯೇ ಅದು ವೀರಶೈವವಲ್ಲ - ಶೈವವಂತೂ ಮೊದಲೇ ಅಲ್ಲ. ಅದು ಸ್ಪಷ್ಟವಾಗಿ ತತ್ವಾಧಾರಿತವಾದ, ವೈಚಾರಿಕ ನಿಲುವುಗಳಿಂದ ಕೂಡಿದ ಶರಣರ ಧರ್ಮ ಅಥವಾ ಲಿಂಗಾಯತ ಧರ್ಮ. ಆದರೆ ಡಾ : ಎಂ. ಚಿದಾನಂದಮೂರ್ತಿಯಂತಹ ವಿದ್ವಾಂಸರು ಶರಣರ ಧರ್ಮ (ಲಿಂಗಾಯತ) ವನ್ನು ಹಿಂದೂವೆಂದು ಪ್ರತಿಪಾದಿಸುತ್ತಾ ಆದಿಸೆಯಲ್ಲಿ ಅವರು ' ವೀರಶೈವ ಧರ್ಮ : ಭಾರತೀಯ ಸಂಸ್ಕೃತಿ ' (ಹಿಂದೂ : ಲಿಂಗಾಯತ) ಎಂಬ ಕೃತಿಯನ್ನೇ ಬರೆದರು. ಲಿಂಗಾಯತ ಧರ್ಮವನ್ನು ಹಿಂದೂವೆಂದು ಕರೆದು ಅದಕ್ಕೆ ಪ್ರಾಚೀನತೆಯನ್ನು ಕೆಲವು ಪದಗಳ ಉಲ್ಲೇಖದ ಆಧಾರದ ಮೇಲೆ ವಿಶ್ಲೇಷಿಸುತ್ತಾರೆ. ಅಷ್ಟೇ ಅಲ್ಲದೇ ' ತಾವು ಹಿಂದೂಗಳಲ್ಲ ಎಂಬುದು ಲಿಂಗಾಯತರಿಗೆ ತಾನೇ ಅನ್ನಿಸಿದ್ದಲ್ಲ - ಅದರ ಹಿಂದೆ ಬ್ರಿಟಿಷರ ಸೂಕ್ಷ್ಮ ಪ್ರಚೋದನೆಯೂ ಇತ್ತು.'೧ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಂತೆಯೇ ಕೊನೆಯದಾಗಿ ಅವರು ' ವೀರಶೈವವು ಒಂದು ಮತವಾಗಿ ಶೈವ ಧರ್ಮದ ಕಕ್ಷೆಗೆ ಸೇರುತ್ತದೆ ; ಒಂದು ದರ್ಶನವಾಗಿ ಅದು ದ್ವೈತ - ಅದ್ವೈತಿಗಳ ಕಕ್ಷೆಗೆ ಸೇರುತ್ತದೆ ಎಂದರೆ ಅದರ ಅಸ್ತಿತ್ವ ಹಿಂದೂ ಧರ್ಮದ ಒಳಗೇ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಧರ್ಮ - ದರ್ಶನಗಳ ದೃಷ್ಟಿಯಿಂದ ಅದು ಹಿಂದೂಕಕ್ಷೆಯೊಳಗೆ ತನ್ನದೇ ವೈಶಿಷ್ಟ್ಯವನ್ನು ಹೊಂದಿದೆ.'೨ ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ೩

ನಾವಿಂದು ಯಾವುದನ್ನು ಹಿಂದೂ ಧರ್ಮವೆಂದು ಕರೆಯುತ್ತೇವೆಯೋ ಅದರ ಪ್ರಾಚೀನ ಪರಂಪರೆ ಗಮನಿಸಿದಾಗ ಅದರ ಅವಮಾನವೀಯತೆಯನ್ನು ಎತ್ತಿ ತೋರಿಸಿ ಆ ಧರ್ಮದ ಭಿನ್ನತೆಗಳನ್ನು ಪ್ರತಿಭಟಿಸಿ ಶರಣರು ಹೊಸ ಧರ್ಮದ ಪರಿಕಲ್ಪನೆಯನ್ನು ನೀಡಿದರು. ಹೀಗಿರುವಾಗ ಶರಣ ಧರ್ಮವನ್ನು ಹಿಂದೂ ಧರ್ಮವೆಂದು ಕರೆಯುವುದು ಎಷ್ಟರ ಮಟ್ಟಿಗೆ ಸರಿಯಾದುದು.? ಆದ್ದರಿಂದ ಸ್ಪಷ್ಟವಾಗಿ ಗಮನಿಸಬೇಕು ಶರಣರ ಧರ್ಮ ಹಿಂದೂ ಧರ್ಮವಲ್ಲ. ಅದಕ್ಕಿಂತಲೂ ಭಿನ್ನವಾದ ಪ್ರಗತಿಪರವಾದ ಧರ್ಮವಾಗಿದೆ. ಈ ಕುರಿತು ಡಾ : ಹಿರೇಮಲ್ಲೂರು ಈಶ್ವರನ್ ಹೇಳುವ ವಿಚಾರ ಗಮನಾರ್ಹವಾಗಿವೆ. ' ಬ್ರಾಹ್ಮಣ್ಯ ಮತ್ತು ಸಂಸ್ಕೃತೀಕರಣ ವಾದಿಗಳ ವಿಚಾರವನ್ನು ಲಿಂಗಾಯತ ಧರ್ಮವು ಸಂಪೂರ್ಣವಾಗಿ ತಿರಸ್ಕರಿಸುತ್ತದೆಯೆನ್ನುವುದಕ್ಕೆ ಪ್ರಬಲ ಕಾರಣಗಳಿವೆ. ಮೊದಲನೆಯದಾಗಿ, ಅದು ಹಿಂದೂ ಬ್ರಾಹ್ಮಣ ತತ್ವಗಳನ್ನು, , ಜಾತಿ ಪದ್ಧತಿಯನ್ನು , ಎರಡನೆಯದಾಗಿ, ಅವುಗಳನ್ನು ಸಮರ್ಥಿಸುವ ವೇದಗಳ ಪ್ರಭುತ್ವವನ್ನೂ , ಮೂರನೆಯದಾಗಿ, ಯಜ್ಞ-ಯಾಗಾದಿಗಳನ್ನು ಪಶು ಬಲಿಯನ್ನೂ , ನಾಲ್ಕನೆಯದಾಗಿ, ಮಾಟಗಾರಿಕೆಯಿಂದೊಡಗೂಡಿದ ಧಾರ್ಮಿಕ ಪ್ರಕ್ರಿಯೆಗಳನ್ನು ಇಡಿಯಾಗಿ ತಿರಸ್ಕರಿಸುತ್ತದೆ. ಲಿಂಗಾಯತ ಧರ್ಮದ ಮಾದರಿಯೂ ಮಾರ್ಗ, ದೇಶಿ ಸಂಪ್ರದಾಯಗಳ ಮಾದರಿಗೆ ಸೇರುವುದಿಲ್ಲ. ಅದು ಬ್ರಾಹ್ಮಣರ ವೇದಗಳೇ ಮೊದಲಾದ ಧಾರ್ಮಿಕ ಗ್ರಂಥಗಳ ಆಧಾರವನ್ನು ಅವುಗಳಲ್ಲಿ ವ್ಯಕ್ತವಾಗಿರುವ ವರ್ಣಾಶ್ರಮ, ದೇವರು, ಪ್ರಕ್ರಿಯೆ, ನಂಬುಗೆಗಳನ್ನು ಒಪ್ಪುವುದಿಲ್ಲವೆನ್ನುವುದಕ್ಕೆ ಈ ಪೂರ್ವದಲ್ಲಿ ಸಾಕಷ್ಟು ಆಧಾರಗಳನ್ನು ಒದಗಿಸಲಾಗಿದೆ. ವೇದಗಳ ವಿಚಾರವನ್ನೂ , ಸುಬ್ರಹ್ಮಣ್ಯ ಮೊದಲಾದ ದೇವರ ಆಕಾರಗಳನ್ನು ಸ್ವೀಕರಿಸುವುದೊತ್ತಟ್ಟಿಗಿರಲಿ , ಅವೆಲ್ಲವನ್ನು ಲಿಂಗಾಯತ ಧರ್ಮವು ಹೀಯಾಳಿಸಿ ನುಡಿಯುವುದಲ್ಲದೇ , ಸಂಸ್ಕೃತೀಕರಣಕ್ಕೆ ಬಲಿಯಾದ ದೇಶಿ ಸಂಪ್ರದಾಯದ ನಾಗಪೂಜೆ, ಗಿಡಮರ, ನದಿಬೆಟ್ಟಗಳೇ ಮೊದಲಾದ ಸ್ಥಳೀಯ ಪೂಜೆಗಳನ್ನು ಅದು ತೀವ್ರವಾಗಿ ಅಲ್ಲಗಳೆಯುತ್ತದೆ.'೪ ಮತ್ತೊಂದೆಡೆ ಇವರು ಲಿಂಗಾಯತ, ವೀರಶೈವವಲ್ಲ ಎಂಬ ಬಗ್ಗೆ ಹೇಳಿದ ವಿಚಾರಗಳು ಹೀಗಿವೆ.' ಕಳೆದ ಹನ್ನೆರಡು ವರ್ಷಗಳಲ್ಲಿ ಕರ್ನಾಟಕ , ಮಹಾರಾಷ್ಟ್ರ ಮತ್ತು ನೇರೆಯ ಪ್ರಾಂತ್ಯಗಳನ್ನು ಸಂಚರಿಸಿ , ಸಮಗ್ರ ಲಿಂಗಾಯತ ಧಾರ್ಮಿಕ ಸಾಹಿತ್ಯ ಸಂಸ್ಕೃತಿಗಳನ್ನು ಕನ್ನಡ ಹಾಗೂ ಇಂಗ್ಲೀಷನಲ್ಲೆ ಎರಡು ಪುಸ್ತಕಗಳನ್ನು ಬರೆದು ಯೂರೋಪು, ಅಮೇರಿಕೆ , ಭಾರತದಲ್ಲಿ ಪ್ರಕಟಿಸಿದ್ದೇನೆ. ' ಲಿಂಗಾಯತ' ಜೈನ ಹಾಗೂ ಬ್ರಾಹ್ಮಣ ಧಾರ್ಮಿಕ ಸಂಸ್ಕೃತಿ ಮತ್ತು ಮಠಗಳು ಕುರಿತು ಬರೆದಿರುವ ನನ್ನ ಮೂರನೆಯ ಗ್ರಂಥ ಇದೀಗ ಮುದ್ರಣಕ್ಕೆ ಹೋಗಲಿದೆ. ನನ್ನ ಅಧ್ಯಯನದಿಂದ ನನಗೆ ತಿಳಿದು ಬಂದ ಸಂಕ್ಷಿಪ್ತ ವಿವರಗಳು ಹೀಗಿವೆ. ಅಧ್ಯಯನದಿಂದ ' ವೀರಶೈವ' ಪದವು ಲಿಂಗಾಯತನದಲ್ಲ ಬಸವಣ್ಣನನದೂ ಅಲ್ಲ. ಅದು ಕಾಶ್ಮೀರ, ತಮಿಳು, ತೆಲುಗು ದೇಶದಲ್ಲಿಂದ ಬಂದ ಶಬ್ದ ಶೈವ ಧರ್ಮ ಹಾಗೂ ಶೈವ ಸಿದ್ಧಾಂತಗಳು 'ಕರ್ಮ'ವನ್ನು ಹೇಳುತ್ತವೆ. ವರ್ಣಾಶ್ರಮವನ್ನು ಪ್ರತಿಪಾದಿಸುತ್ತವೆ. ತಮಿಳುನಾಡಿನ ಶೈವ ಭಕ್ತರು ಶೂದ್ರರನ್ನೂ , ಮಹಿಳೆಯರನ್ನು ಎಂದರೆ ಸಮಾಜದ ಮುಕ್ಕಾಲು ಭಾಗವನ್ನು ತಮ್ಮ ಪ್ರಪಂಚದಿಂದ ದೂರವಾಗಿರಿಸಿ ಅವರನ್ನು ಹೊರಹಾಕಿದ್ದುಂಟು. ಪುರಾತನರು ಶೂದ್ರ ಮತ್ತು ಮಹಿಳೆಯರನ್ನು ಕಡೆಗಣಿಸಿ ಅವರನ್ನು ತಮ್ಮ ಸಂಘದಿಂದ ಹೊರ ಹಾಕಿದರು. ಆನಂತರ ಕರ್ನಾಟಕದಲ್ಲಿ ಆಕಾಲದಲ್ಲಿ ಊರ್ಜಿತಾವಸ್ಥೆಯಲ್ಲಿದ್ದ ಕಾಳಾಮುಖರು ಇನ್ನಷ್ಟು ಮುಂದೆ ಹೋಗಿ ಶೂದ್ರ ಮತ್ತು ಮಹಿಳೆಯರನ್ನು ನೋಡಲು ಆಗದು ಅವರು ಧಾರ್ಮಿಕ ಗ್ರಂಥಗಳನ್ನು ಓದಲೂ ಆಗದು. ಅವರು ಮಲೀನರು ಅವರನ್ನು ಮುಟ್ಟಿದರೆ ಮಾಲಿನ್ಯ ಉಂಟಾಗುವುದರಿಂದ ಸ್ನಾನ ಮಾಡಬೇಕೆನ್ನುವಷ್ಟರ ಮಟ್ಟಿಗೆ ಕಾಳಾಮುಖರು ಶೈವ ಧರ್ಮವನ್ನು ನಡೆಸಿಕೊಂಡು ಬಂದರು ಎನ್ನುವುದನ್ನು ಪಂಡಿತರು ಗುರುತಿಸಿದ್ದಾರೆ.

ಆ ಕಾಲದಲ್ಲಿ ಪುಣ್ಯ ಪುರುಷನೊಬ್ಬನನ್ನು ಜಾಗತಿಕ ಮಟ್ಟದಲ್ಲಿ ಪ್ರಜಾಧರ್ಮವೊಂದನ್ನು ಪ್ರಸಾರ ಮಾಡಲಿಕ್ಕೆಂದು ಬರುವ ಪ್ರವಾದಿಯ ಬರವನ್ನು ದಕ್ಷಿಣದ ಈ ಭೂಮಿ ಕಾಯ್ದುಕೊಂಡು ನಿಂತಿತ್ತು. ಆಗ ಕಾಣಿಸಿಕೊಂಡವನು ಬಾಗೇವಾಡಿಯ ಬಸವಣ್ಣ.

---

೧ : ಡಾ : ಎಂ . ಚಿದಾನಂದ ಮೂರ್ತಿ - ವೀ. ಭಾ. ಸಂ. - ಪುಟ ೫೭

೨ : ಅದೇ : ಪುಟ ೬೪

೩ : ಅದೇ : ಪುಟ ೩೧-೬೫ ವಿವರಗಳಿಗೆ ಗಮನಿಸಿರಿ.

೪ : ಡಾ : ಹಿರೇಮಲ್ಲೂರು ಈಶ್ವರನ್ - ಲಿಂ. ಧ. ಅ. ಪುಟ ೧೩೭

ಅವನುನಡೆಸಿದ ಸಾಮಾಜಿಕ ಆಂದೋಲನದಿಂದಾಗಿ ಕೇವಲ ಅರ್ಧ ಶತಮಾನದ ಅವಧಿಯಲ್ಲಿ ಕಾಳಾಮುಖ ಶೈವ ಮಾತ್ರವಲ್ಲ ಶೈವರ ಸಂಸ್ಕೃತಿಯನ್ನ ಲಿಂಗಾಯತನ ಧರ್ಮವು ನುಂಗಿತ್ತಲ್ಲದೆ, ಮುಂದಿನ ಎರಡೂವರೆ ಶತಮಾನಗಳಲ್ಲಿ ಶೈವವು ಅದರಲ್ಲಿ ಸಂಪೂರ್ಣವಾಗಿ ಕರಗಿ ಹೋದದನ್ನು ನಶಿಸಿ ಶೈವಧರ್ಮಗಳು ಎಂಬ ಬರ್ಕಲಿ ವಿಶ್ವ ವಿದ್ಯಾಲಯ ಪ್ರಕಟಿಸಿರುವ ಗ್ರಂಥದಲ್ಲಿ ವಿವರಿಸಲಾಗಿದೆ. ಆಗಿನ ಶೈವವು ಲಿಂಗಾಯತರಲ್ಲಿ ಕರಗಿ ಹೋದದಂತೆ, ಕಾಳಾಮುಖರು ಲಿಂಗಾಯತನ ಧರ್ಮವನ್ನು ಅಪ್ಪಿಕೊಂಡಿದ್ದಲ್ಲದೆ ಬಸವಣ್ಣನಿಂದ ವ್ಯವಸ್ಥಿತವಾಗಿ ಸಂಸ್ಥಾಪಿತವಾದ ಆ ಧರ್ಮದಲ್ಲಿ ಕರಗಿ ಹೋದರು. ಈಗ ನಾವು ಹೆಸರಿಸುವ ವೀರ ಶೈವವು ಕಾಳಾಮುಖರು ತಮ್ಮ ಹಿಂದೆ ಬಿಟ್ಟು ಹೋದ ಎಲುಬಿನ ಹಂದರದಲ್ಲಿ 'ಚುಕುಚುಕು' ಎನ್ನುತ್ತಾ ಆಗೀಗ ಗದ್ದಲು ಮಾಡುತ್ತಿದೆ.' ೧ ಈ ದಿಸೆಯಲ್ಲಿ ಆಲೋಚನೆಗಳನ್ನು ಬಹು ಹಿಂದೆಯೇ ಈ ಪರಿಸರದ ಶರಣರು ಮಾಡಿದ್ದರು.

ಧರ್ಮ ನಂಬಿದವರು ಮಾಡಬೇಕಾದ ಪೂಜೆ ಹೇಗಿರಬೇಕೆಂಬುದಕ್ಕೆ ಢಕ್ಕೆಯ ಮಾರಯ್ಯ 'ಅರ್ಚಿಸಿ ಪೂಜಿಸುವುದಕ್ಕೆ ಅಂಗವಾಗಿ ಮನ ನೆನೆವುದಕ್ಕೆ ಘನ ತರವಾಗಿ' ಎನ್ನುತ್ತಾರೆ.೨ ಅಂದರೆ ಇಂತಹ ಪೂಜೆಯ ನಿಜವಾದ ಧರ್ಮದ ಪೂಜೆ ಎಂಬ ಸತ್ಯ ಸಂಗತಿಯನ್ನು ಇವರು ತಿಳಿಸುತ್ತಾರೆ ಇದನ್ನು ಮತ್ತಷ್ಟು ಸ್ಪಷ್ಟವಾಗಿ ಅಜಗಣ್ಣನವರು ಹೇಳಿದ್ದು ಹೀಗೆ:

ಸಜ್ಜನವೇ ಮಜ್ಜನ, ಸದಾಚಾರವೇ ಧೂಪಾರತಿ

ಆಗಮವೇ ಪೂಜೆಯಾಗಿ ಅಂಗವಿರಹಿತವಾದಲ್ಲಿ

ಉದಯಾಸ್ತಮಾನವಿಲ್ಲದೆ ಲಿಂಗಾರ್ಚನೆ

ಮಹಾಘನ ಸೋಮೇಶ್ವರ ನಿಮ್ಮ ಶರಣಂಗೆ೩ ಈ ವಚನ ಇಂದಿನ ದಿನ ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆಯನ್ನು ಪರೋಕ್ಷವಾಗಿ ತಿಳಿಸುತ್ತಾ ನಿಜವಾದ ಪೂಜೆ ಹೇಗಿರಬೇಕು ಅಂತಹ ಪೂಜೆಗೆ ಯಾವುದೇ ಮಡಿ ಮೈಲಿಗೆಗಳ ಅಗತ್ಯವಿಲ್ಲ; ವೇಳೆಯ ಬಗ್ಗೆ ಮಿತಿಯಿಲ್ಲ. ಮನಸ್ಸು ಬಯಸಿದಾಗ ಒಳ್ಳೆಯ ವಿಚಾರ-ಆಚಾರಗಳಿಂದ ಮಾಡುವುದೇ ನಿಜವಾದ ಪೂಜೆ ಎಂಬ ಅಭಿಪ್ರಾಯ ಅಜಗಣ್ಣನವರದು. ನಿಜವಾದ ಶರಣನಿಗೆ ಸಜ್ಜನವೇ ಮಜ್ಜನವೇ ಹೊರತು ವೈದಿಕ ಶಾಹಿ ಪೋಷಿಸಿಕೊಂಡು ಬಂದಂತಹ ನದಿಯಂತಹ ಸ್ಥಳವಲ್ಲವೆನ್ನುತ್ತಾರೆ. ನದಿ ಸ್ನಾನದ ಮೂಲಕ ಪಾಪ ಪರಿಹಾರವೆಂಬ ಮೂಢತೆಯನ್ನು ಶರಣರು ಖಂಡಿಸಿದರು.

ಪೂಜೆಯನ್ನು ಮಾಡುವಾಗ ಅರಿವು ಇರಬೇಕೆಂಬ ಅಭಿಪ್ರಾಯ ಢಕ್ಕೆಯ ಮಾರಯ್ಯನದು. ಪೂಜೆ ಎಂದರೆ ಅನುಕರಣೆಯಲ್ಲ ಅದು 'ಗಡಿ ತಡಿಗೆ ಉಕ್ಕಡದ ಎಚ್ಚರಿಕೆಯಂತೆ ಅರಿದು ಪೂಜಿಸುವುದು' ೪ ಎಂದು ಎಚ್ಚರಿಸುತ್ತಾರೆ. ಶರಣರು ಯಾವುದೇ ಮೂರ್ತಿ ಪೂಜೆಯನ್ನು ಪುರಸ್ಕರಿಸಲಿಲ್ಲ. ಶರಣರು ಪುರಸ್ಕರಿಸಿದ ಶಿವ ಎಲ್ಲರ ಶಿವನಂತಲ್ಲ. ಇಷ್ಟ ಲಿಂಗವೇ ಅವರ ಶಿವ. ಅದಕ್ಕೆ ಆರಂಭದಲ್ಲಿ ಆಕಾರವಿದ್ದರೂ ಉನ್ನತ ಸ್ಥಿತಿಗೆ ಮುಟ್ಟಿದಾಗ ಅದು ನಿರಾಕಾರ. ಇದನ್ನೇ ಶರಣರು ಪ್ರೋತ್ಸಾಹಿಸಿದರು. ಅರಿವನ್ನು ಪಡೆಯಲು ಕುರುಹು ಅವಶ್ಯಕವೆಂದು ಸಾರಿ ಇಷ್ಟ ಲಿಂಗದ ಅಗತ್ಯತೆ ಮಾಡಿಕೊಟ್ಟರು. ಆ ಮೂಲಕ ದೇವನನ್ನು ಕಂಡರೇ ವಿನಃ ಜಡದೇವರುಗಳನ್ನು ಕಾಣಲಿಲ್ಲ. ಅವರ ಇಷ್ಟ ಲಿಂಗ ಚೈತನ್ಯದ ಪ್ರತೀಕ. ದೂರುಗಾಮಿ ಎಚ್ಚರಿಕೆಯಿಂದ ಸಾಮೂಹಿಕ ವಿಚಾರಧಾರೆಯಲ್ಲಿ ಸ್ವತಂತ್ರಕ್ಕೆ ಧಕ್ಕೆ ಬಾರದಿರಲಿ ಎಂಬುದನ್ನು ಕಂಡು ಇಷ್ಟ ಲಿಂಗವನ್ನೇ ವಚನಗಳ ಅಂಕಿತಗಳನ್ನಾಗಿ ಬಳಸಿಕೊಂಡರು.

ದೇವರ ಸ್ವರೂಪ ಅನಂತ. ಅದಕ್ಕೆ ಮಿತಿಯಿಲ್ಲ. ಅರಿವುದಕ್ಕೆ ಕಾಲ ವೇಳೆಗಳ ಅಗತ್ಯವಿಲ್ಲ. ಇಷ್ಟ ಲಿಂಗದ ಪೂಜೆಯ ಬಗ್ಗೆ ಅನೇಕ ವಾಸ್ತವಿಕ ವಿಚಾರಗಳನ್ನು ಢಕ್ಕೆಯ ಮಾರಯ್ಯ ತಮ್ಮ ವಚನಗಳ ಮೂಲಕ ತಿಳಿಸಿದ್ದಾರೆ.೫ ಅಂತಿಮವಾಗಿ ಅವರು ಕಂಡಂತಹ ದೇವರ ಸ್ವರೂಪ ಎಂತಹದು ಎಂಬುದನ್ನು ಅವರ 'ಸಕಲ ಸ್ಥಾವರ ಸಕಲ ಬುದ್ಬುದಂಗಳಲ್ಲಿ ....ಪ್ರಮಾಣವಾಯಿತ್ತು.೬ ವಚನದಲ್ಲಿ ಕಾಣಬಹುದಾಗಿದೆ. ಇದೇ ದೇವರ ಸ್ವರೂಪವನ್ನು ಆಯ್ದಕ್ಕಿ ಮಾರಯ್ಯ 'ಚಂದ್ರಕಾಂತ ಶಿಲೆಯಲ್ಲಿ ಬಿಂದುಅಡಗಿಪ್ಪಂತೆ...........ಅಮರೇಶ್ವರ ಲಿಂಗವೇ೭' ಎಂಬ ವಚನದಲ್ಲಿ ಹೇಳುತ್ತಾರೆ. ಹಾಗೆಯೇ ಉಳಿಮೇಶ್ವರ ಚಿಕ್ಕಯ್ಯ ಕಾಶಿ, ಕೇದಾರ, ವಾರಣಾಸಿ ಯಾವುದೇ ತೀರ್ಥಕ್ಷೇತ್ರಗಳಲ್ಲಿ ದೇವರನ್ನು ಕಾಣಲು ಶಕ್ಯವಿಲ್ಲ. ಆ ದೇವರು ಪ್ರತಿಯೊಬ್ಬರ ಹೃದಯದಲ್ಲಿ ನೆಲೆಸಿದ್ದಾನೆಂಬ ಸರಳ ಸತ್ಯವನ್ನು ಹೇಳಿದರು.೮

---

೧ : ಸಂ : ಡಾ : ಬಿ.ಜಿ. ವಿಸಾಜಿ -ಶಾಂತಿಕಿರಣ- ಸಂಪುಟ ೨೧, ಸಂಚಿಕೆ ೨, ಪುಟ ೧೩-೧೪

೨ : ಸಂ : ಡಾ :ಎಸ್.ವಿದ್ಯಾಶಂಕರ -ಸ.ವ.ಸಂ. -೭, ವಚನ ೪, ಪುಟ ೨೮೩-೨೮೪

೩ : ಸಂ : ಎಂ.ಎಂ. ಕಲಬುರ್ಗಿ-ಸ.ವ.ಸಂ. -೬, ವಚನ ೧೦ , ಪುಟ ೧೦೧

೪ : ಸಂ : ಡಾ :ಎಸ್.ವಿದ್ಯಾಶಂಕರ -ಸ.ವ.ಸಂ. -೭, ವಚನ ೪೫, ಪುಟ ೨೯೭

೫ : ಅದೇ : ವಚನ ೭೮, ಪುಟ ೩೦೭

೬ : ಅದೇ : ವಚನ ೮೪, ಪುಟ ೩೦೮-೩೦೯

೭ : ಸಂ:ಡಾ : ಎಂ.ಎಂ. ಕಲಬುರ್ಗಿ -ಸ.ವ.ಸಂ. -೬ , ವಚನ ೧೩, ಪುಟ ೩೭೯

೮ : ಅದೇ : ವಚನ ೧೧, ಪುಟ ೬೩೫

ಕರ್ಮಸಿದ್ಧಾಂತ ಮೇಲ್ನೋಟಕ್ಕೆ ಆಶಾವಾದ - ಸ್ವಾತಂತ್ರ್ಯವನ್ನು ಪ್ರೋತ್ಸಾಹಿಸುವ ನಯವಾದ ಅಪಾಯವನ್ನು ಹೇಗೆ ಸಾಮಾನ್ಯರ ಮೇಲೆ ಹೇರುತ್ತದೆಂಬುದನ್ನು [illegible] ಶ್ಲೋಕದಲ್ಲಿ ಕಾಣಬಹುದು. ಉದ್ಧರೇ ದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ ।ಆತ್ಮೈಮಹ್ಯಾತ್ಮನೋ ಬಂಧು ರಾತ್ಮೈ ವರಿಪುದಾತ್ಮನಃ ।[೧] ತನ್ನ ಉದ್ಧಾರವನ್ನು ತಾನೇ ಮಾಡಿಕೊಳ್ಳತಕ್ಕದ್ದು. ತಾನೇ ತನ್ನ ನಾಶವನ್ನು ಮಾಡಿಕೊಳ್ಳಬಾರದು. ತನಗೆ ತಾನೇ ಬಂಧುವು, ತನಗೆ ತಾನೇ ವೈರಿಯೂ ಆಗಬಹುದೆನ್ನುವ ಭಗವದ್ಗೀತೆಯ ಮಾತು ಸರ್ವರಿಗೂ ಎನ್ನುವಂತಿದ್ದರೂ ಸೂಕ್ಷ್ಮವಾಗಿ ಗಮನಿಸದರೆ ಇದು ಬ್ರಾಹ್ಮಣ್ಯದ ಪರವಾಗಿಯೇ ಇದೆ ಎಂಬುದು ತಿಳಿದು ಬರುತ್ತದೆ. ವರ್ಣಾಶ್ರಮ- ಜಾತಿ ಪದ್ಧತಿ ಪಾಲಿಸುವವರಿಗೆ ಇದು ತನ್ನ ನೆರವನ್ನು ನೀಡುತ್ತದೆ; ಹೊರತು ಅದನ್ನು ಪ್ರತಿಭಟಿಸಿದವರಿಗಲ್ಲ ವೆಂಬುದು ಸತ್ಯ. ಕರ್ಮ ಸಿದ್ಧಾಂತವನ್ನು ಮೀರಿದವರಿಗೆ ಭಾರಿ ಭಯವನ್ನು ಸೃಷ್ಟಿಸಲಾಯಿತು. ಜನರನ್ನು ಸಾಧ್ಯವಾದಷ್ಟು ಗುಲಾಮಗಿರಿಗೆ ತಳ್ಳಲಾಯಿತು. ಧಾರ್ಮಿಕ ಗುಲಾಮಗಿರಿಯನ್ನು ಸ್ಥಿರವಾಗಿರಿಸಲು ಕರ್ಮ ಸಿದ್ಧಾಂತ ಪ್ರಯತ್ನಿಸಿತು. ಸಮಾನತೆಯನ್ನು ತಮ್ಮ ಜೀವಾಳವಾಗಿರಿಸಿಕೊಂಡಿದ್ದ ಈ ಪರಿಸರದ ಶರಣರು ಸಹಜವಾಗಿ ಕರ್ಮ ಸಿದ್ಧಾಂತವನ್ನು ವಿರೋಧಿಸಿ ಅದಕ್ಕೆ ಪ್ರತಿಯಾಗಿ ಕಾಯಕ ಸಿದ್ಧಾಂತದ ಪರಿಕಲ್ಪನೆ ನೀಡಿದರು. ಕಾಯಕಕ್ಕೆ ವೃತ್ತಿ ಗೌರವ - ದೈವ ಗೌರವ ಕಲ್ಪಿಸಿ ಕಾಯಕವೇ ಕೈಲಾಸವೆಂದು ಸಾರಿದರು. ಕಾಯಕವೆಂಬುದು ಉದ್ಯೋಗವನ್ನು ಸ್ಪಷ್ಟವಾಗಿ ಸೂಚಿಸಿದರೂ ವೃತ್ತಿಗೆ ವಿಶಿಷ್ಟವಾದ ಮಹತ್ವ - ಮನುಷ್ಯರಲ್ಲಿ ಆರ್ಥಿಕ ಸ್ಥೈರ್ಯ ಪ್ರಗತಿಗೆ ಪೂರಕವಾಗಿ ಅದಕ್ಕೆ ಧಾರ್ಮಿಕ ಚೌಕಟ್ಟನ್ನು ನೀಡಲಾಯಿತೆಂಬುದು ಗಮನಾರ್ಹವಾಗಿದೆ.

ಕಾಯಕದ ಭೇದವನ್ನು ತೊಡೆದು ಹಾಕಿ ಆ ಮೂಲಕ ಸಮನಾತೆಯನ್ನು ತಂದು, ಆದರ್ಶ ಸಮಾಜಕ್ಕೆ ಪೂರಕವಾದ ನೈಜ ಧರ್ಮದ ಪರಿಕಲ್ಪನೆಯನ್ನು ಶರಣರು ನೀಡಿದರು. ನಿಷ್ಠೆಯಿಂದ ಕೆಲಸ ಮಾಡುವಾಗಲೇ ನಿಜವಾದ ಧರ್ಮ ಅರಿಯಲು ಸಾಧ್ಯವೆಂದು ತಿಳಿಸಿದರು. ಸಮಕಾಲೀನ ಧರ್ಮದ ವ್ಯವಸ್ಥೆಗಿಂತ ತಮ್ಮ ವೈಯಕ್ತಿಕ ಸ್ವಾತಂತ್ರ್ಯವುಳ್ಳ ಧರ್ಮದ ಪರಿಕಲ್ಪನೆಗೆ ಶರಣರಿಗೆ ಮುಖ್ಯವಾಗಿತ್ತು. ಆದ್ದರಿಂದಲೇ ಆಯ್ದಕ್ಕಿ ಮಾರಯ್ಯ ಅಂದಿನ ಸಂದರ್ಭದಲ್ಲಿ ಗುರು- ಲಿಂಗ - ಜಂಗಮರಿಗಿಂತಲೂ ಕಾಯಕ ಮುಖ್ಯವೆಂದರು. [೨]ಕಾಯಕವೇ ಧರ್ಮವೆಂಬ ಆಶಯ ಅವರದಾಗಿತ್ತು. ಕಾಯಕಕ್ಕಿಂತ ಯಾವ ದೇವರೂ ಮಿಗಿಲಲ್ಲ ಎಂಬ ಅಭಿಪ್ರಾಯ ಈ ಪರಿಸರದ ಶರಣರದಾಗಿದೆ.

ವೈದಿಕಶಾಹಿ ಧರ್ಮದಲ್ಲಿ ಕರ್ಮವನ್ನು ಮಾಡುವವರು ಫಲದ ಬಗ್ಗೆ ಆಪೇಕ್ಷಿಸುವಂತಿಲ್ಲ. ಅದು ಧರ್ಮಕ್ಕೆ ಒಪ್ಪಿತವಾದ ವಿಚಾರವಲ್ಲವೆಂಬುದನ್ನು ನಾವು ಸ್ಪಷ್ಟವಾಗಿ ಗೀತೆಯಲ್ಲಿ ಕಾಣಬಹುದು.

ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।

ಮಾ ಕರ್ಮ ಫಲ ಹೇತು ಭೂರ್ಮಾ ತೇ ಸಂಗೋऽಸ್ತ್ವಕರ್ಮಣಿ ॥[೩] (ಕರ್ಮವನ್ನು ಮಾಡುವುದಕ್ಕೆ ಮಾತ್ರ ನಿನಗೆ ಅಧಿಕಾರವು ಫಲಗಳಲ್ಲಿ ನಿನಗೆಎಂದಿಗೂಅಧಿಕಾರವಿಲ್ಲ. ಫಲಾಪೇಕ್ಷೆಯಿಂದ ಕರ್ಮಪ್ರವೃತ್ತನಾಗಬೇಡ ಮತ್ತು ಕರ್ಮತ್ಯಾಗದಲ್ಲಿಯೂ ಆಸಕ್ತಿಯುಳ್ಳವನಾಗಬೇಡ.)

ವೈದಿಕ ಶಾಹಿಯ ಈ ಧರ್ಮದ ಅನೀತಿಯನ್ನು ಶರಣರು ಪ್ರತಿಭಟಿಸಿದರು. ಅದರ ಹಿಂದಿರುವ ಶೋಷಣೆಯ ಸೂಕ್ಷ್ಮ ಸ್ವರೂಪವನ್ನು ಅರಿತು ನಿರ್ವಹಿಸಿದ ಕಾಯಕಕ್ಕೆ ಸರಿಯಾದ ಪ್ರತಿಫಲ ದೊರೆತಾಗಲೇಅದು ಧರ್ಮ ಸಮ್ಮತವಾದುದೆಂಬ ಹೊಸ ವಿಚಾರ ತಿಳಿಸಿದರು. ಮಾಡುತ್ತಿರುವ ವೃತ್ತಿಯನ್ನು ಉಚಿತವಾಗಿ ಮಾಡದೇ ನಿಗದಿತ ಫಲವನ್ನು ಪಡೆದು ಮಾಡಬೇಕು. ಆ ಕಾರಣ ಆ ಕಾಯಕದಲ್ಲಿ ಸತ್ಯಶುದ್ಧವಾದ ನಿಷ್ಠೆ ಅವಶ್ಯಕವೆಂದರು. ವೈದಿಕ ಶಾಹಿ ಧರ್ಮದಲ್ಲಿ ಕರ್ಮ ಶೋಷಣೆಯ ಸಂಕೇತವಾದರೆ, ಶರಣ ಧರ್ಮದಲ್ಲಿ ಕಾಯಕ ಸಮಾನತೆಯ ಸಂಕೇತವಾಗಿದೆ. ಅದುವೇ ಪ್ರತಿಯೊಬ್ಬರ ಅಂತಿಮ ಸಾಧನೆಯ ಗುರಿಯೂ ಆಗಿದೆ. ಇಂತಹ ನಿಖರವಾದ ಆಲೋಚನೆಗಳಿಂದಲೇ ಶರಣರು ತಮ್ಮ ಧರ್ಮವನ್ನು ರೂಪಿಸಿದರು. ಸ್ವರ್ಗ- ನರಕ- ಕೈಲಾಸ ಮೋಕ್ಷಗಳ ಬಗ್ಗೆ ವೈದಿಕ ಶಾಹಿಯ ಕಪೋಲ ಕಲ್ಪಿತ ಕತೆಗಳನ್ನು ಶರಣರು ಖಂಡಿಸಿ ಅವುಗಳ ಬಗ್ಗೆ ವಾಸ್ತವವನ್ನು ತಿಳಿಸಿ ಕೊಟ್ಟರು. ಕೈಲಾಸವೆಂಬುದು ಕೈ ಕೂಲಿಯಲ್ಲ [೪] ಎಂದು ಖಂಡಿಸಿದರು. ಕೈಲಾಸವೆಂದರೆ ಆತನಿದ್ದ ಕ್ಷೇತ್ರವೇ ಎಂದರು.[೫] ಶ್ರದ್ಧೆಯಿಂದ ಕಾರ್ಯ ನಿರ್ವಹಿಸುವ ವ್ಯಕ್ತಿಗೆ ಸ್ವರ್ಗ - ನರಕಗಳ ಕಲ್ಪನೆಯಾಗಲಿ, ಕೈಲಾಸ - ಮರ್ತ್ಯಗಳ ಚಿಂತೆಯಾಗಲಿ ಇರುವುದಿಲ್ಲವೆಂಬ ವಾಸ್ತವಾಂಶಗಳನ್ನು ಈ ಪರಿಸರದ ಶರಣರು ಪರಿಚಯಿಸಿ ಕೊಟ್ಟರು.

ಗಂಡು ಸಂತಾನ ವಿದ್ದವರಿಗೆ ಮೋಕ್ಷ, ಸಂಸಾರ ತ್ಯಾಗದಿಂದ ಆತ್ಮ ಸಾಕ್ಷಾತ್ಕಾರವೆಂಬ ವೈದಿಕಶಾಹಿಯ ಪರಿಕಲ್ಪನೆಗಳನ್ನು ಶರಣರು ಪುಡಿಗೊಳಿಸಿದರು. ಮೋಕ್ಷವನ್ನು ಸಂಪಾದಿಸಲು ಮತ್ತೊಂದು ಜನ್ಮದ ಅವಶ್ಯಕತೆ ಇಲ್ಲ. ಅದನ್ನು ಮನುಷ್ಯ ಜನ್ಮದಲ್ಲಿಯೇ ಬದುಕಿರುವಾಗಲೇ ಸಾಧಿಸಬಹುದೆಂದು ಸಾರಿದರು. ಢಕ್ಕೆಯ ಮಾರಯ್ಯ ಮುಕ್ತಿಯನ್ನು ಪ್ರತಿಯೊಬ್ಬ ತನ್ನಲ್ಲಿಯೇ ಕಂಡು ಕೊಳ್ಳಬಹುದೆಂಬ ಸರಳ ಸತ್ಯವನ್ನು ಪ್ರತಿಪಾದಿಸಿದರು.[೬]

---

೧ :Edt.Swami Prabhupada-B.A. ಅಧ್ಯಾಯ೬, ಶ್ಲೋಕ೫

೨ : ಸಂ : ಡಾ : ಎಂ.ಎಂ. ಕಲಬುರ್ಗಿ -ಸ.ವ.ಸಂ. -೬, ವಚನ೭, ಪುಟ೩೭೮

೩ : Edt : Swami Prabhupada B.A. ಅಧ್ಯಾಯ೭, ಶ್ಲೋಕ೪೭, ಪುಟ೧೩೨

೪ : ಸಂ : ಡಾ : ವೀರಣ್ಣ ರಾಜೂರು -ಸ.ವ.ಸಂ.-೫, ವಚನ ೨೨, ಪುಟ ೨೦೩

೫ : ಸಂ : ಡಾ : ಎಂ.ಎಂ. ಕಲಬುರ್ಗಿ- ಸ.ವ.ಸಂ.-೬, ವಚನ ೨೨ ಪುಟ ೩೮೧

೬ : ಸಂ : ಡಾ : ಎಸ್.ವಿದ್ಯಾಶಂಕರ -ಸ.ವ.ಸಂ. -೭, ವಚನ ೨೨, ಪುಟ ೨೯೦

ಶರಣರ ದೃಷ್ಟಿಯಲ್ಲಿ ಮೋಕ್ಷವೆಂದರೆ ಅದು ಜಗತ್ತಿನಿಂದ ಹೊರತಾದುದಲ್ಲ. ಆಚಾರ-ವಿಚಾರಗಳಿಂದ ಜೀವಿ ಉನ್ನತಿಗೇರಿದಾಗ ತನ್ನನ್ನೇ ಮರೆತು ಕೊಳ್ಳುವ ಎಲ್ಲವನ್ನು ಸಮರ್ಪಣ ಮಾಡುವ ಏಕಾತ್ಮದ ಸ್ಥಿತಿಯೇ ಮೋಕ್ಷ. ಶರಣರು ಇದನ್ನು ತಮ್ಮ ಪರಿಭಾಷೆಯಲ್ಲಿ ಐಕ್ಯವೆಂದರು.

ಪಾಪ-ಪುಣ್ಯಗಳ ಬಗ್ಗೆ ವೈದಿಕ ಶಾಹಿ ಧರ್ಮ ಹಲವು ಭಯಗಳನ್ನು ಹುಟ್ಟಿಸಿ ಜನರ ಬದುಕನ್ನು ಜರ್ಜರಿತಗೊಳಿಸಿದ್ದವು. ಪಾಪ-ಪುಣ್ಯಗಳು ಹುಟ್ಟಿನಿಂದ ಬಂದವುಗಳಲ್ಲ ಎಂಬುದನ್ನು ಶರಣರು ಖಂಡಿಸಿದರು. ಸ್ತ್ರೀಯರನ್ನು-ಶೂದ್ರರನ್ನು ಹುಟ್ಟಿನಿಂದಲೇ ಪಾಪಿಗಳೆಂದು ವೈದಿಕಶಾಹಿ ಧರ್ಮ ನಿರ್ಧರಿಸಿ ಅದಕ್ಕೆ ಪಾಪಗಳೇ ಕಾರಣವೆಂದು ಹೇಳಿದ್ದವು. ಇದನ್ನು ಗಮನಿಸಿದ ಶರಣರು ಅವುಗಳ ಬಗ್ಗೆ ವಾಸ್ತವ ಸಂಗತಿಗಳನ್ನು ತಿಳಿಸಿದರು. ಪೂಜಾರಿ ವರ್ಗವನ್ನು ಪುಣ್ಯವಂತರೆಂದು ಹೇಳಿದ ವೈದಿಕ ಶಾಹಿ ಧರ್ಮ ಸ್ತ್ರೀಯರನ್ನು ಶೂದ್ರರನ್ನು ಪಾಪಿಗಳೆಂದು ಕರೆಯಿತು. ಇದನ್ನು ಶರಣರು ಖಂಡಿಸಿ ಮನುಷ್ಯನ ಒಳ್ಳೆಯ ಮತ್ತು ಕೆಟ್ಟ ಗುಣಗಳೇ ಪುಣ್ಯ ಪಾಪಗಳೆಂದು ಶರಣರು ಕರೆದರು. ೧ ಪುಣ್ಯ ಪಾಪಗಳ ಬಗ್ಗೆ ಸರಿಯಾದ ತಿಳುವಳಿಕೆ ಇರಬೇಕು. ಆ ತಿಳುವಳಿಕೆ ಇರದಿದ್ದರೆ ಶಿವ ಭಕ್ತನಾಗಿಯೂ ವ್ಯರ್ಥ ಎಂಬುದನ್ನು ಪುರದ ನಾಗಣ್ಣ ಹೀಗೆ ಹೇಳುತ್ತಾರೆ:

ನಾನಾ ಯೋನಿಯಲ್ಲಿ ಬಂದು ಫಲವೇನಯ್ಯಾ

ಪುಣ್ಯ ಪಾಪ ವೆಂದರಿಯರನ್ನಕ್ಕ೨

ಹಿರಿಯರನ್ನು-ಸತ್ಯ ಶರಣರನ್ನು ಗೌರವಿಸಿ ಅವರ ಆದರ್ಶಗಳನ್ನು ಅನುಸರಿಸಿ ಬದುಕಿದರೆ ಅದುವೇ ಪುಣ್ಯವೆನ್ನುತ್ತಾರೆ ಸುಂಕದ ಬಂಕಣ್ಣ

ಕರ್ಮ ಸಿದ್ಧಾಂತಕ್ಕೆ ಪೂರಕವಾಗಿದ್ದ ಜ್ಯೋತಿಷ್ಯವನ್ನು ಅಲ್ಲಗಳೆದು ಅದು ಧರ್ಮ ವಿರೋಧ ವೆಂದು ಸಾರಿದರು. ಜ್ಯೋತಿಷ್ಯವೆಂಬ ಮೂಢಶಾಸ್ತ್ರಕ್ಕೆ ಗ್ರಹಗಳನ್ನು ಬಳಸಿಕೊಂಡು ಅವುಗಳ ವೈಜ್ಞಾನಿಕ ತತ್ವ ತಿರಸ್ಕರಿಸಿ ಧಾರ್ಮಿಕ ಕವಚ ತೊಡಿಸಲಾಯಿತು. ಗ್ರಹ-ನಕ್ಷತ್ರಗಳ ಖಗೋಳ ಶಾಸ್ತ್ರದ ಅಧ್ಯಯನ ಅಂಗಗಳೆಂಬುದನ್ನು ಮರೆಮಾಚಿ ಅದನ್ನು ಶೋಷಣೆಯ ಅಸ್ತ್ರಗಳನ್ನಾಗಿ ವೈದಿಕರು ಬಳಸಿಕೊಂಡರು. ಶರಣರು ಪ್ರತಿ ದಿನವು ಶುಭ ದಿನವೆಂದು ಸಾರಿದರು. ಮನುಷ್ಯತ್ವಕ್ಕೆ ಬೆಲೆ ನೀಡುವ ಎಲ್ಲಾ ದಿನಗಳು ಶುಭ ದಿನಗಳಾಗಿವೆ. ನೇಮವೆಂಬುದು ಕೇವಲ ಮನುಷ್ಯನ ಭ್ರಮೆಯಾಗಿದೆ. ಕಾಲ ಕೂಡಿ ಬಂದಾಗ ಮಾಡುವ ಪೂಜೆಯೇ ಶ್ರೇಷ್ಠವೆಂದು ಹೇಳುತ್ತಾ ಸಾಂಪ್ರದಾಯಕವಾಗಿ ಬಂದಂತಹ ಜ್ಯೋತಿಷ್ಯ ವಿಚಾರಗಳಿಗೆ ಶರಣರು ಕತ್ತರಿ ಹಾಕುತ್ತಾರೆ. ೪

ಶರಣ ಧರ್ಮ ತಾಳ್ಮೆ, ತ್ಯಾಗ, ಮನುಷ್ಯತ್ವ, ಸ್ವಾಭಿಮಾನ, ಸ್ವಾವಲಂಬನೆಗಳನ್ನು ಆಧರಿಸಿ ಬೆಳೆಯಿತು. ಧರ್ಮದ ತಿರುಳು ಕೇವಲ ವಿಚಾರದಲ್ಲಿ ಲೀನವಾಗಿ ಬೋಧೆಯ ಸರಕಾಗಿ ಉಳಿದರೆ ಪ್ರಯೋಜವಿಲ್ಲವೆಂದರಿತ ಶರಣರು ಅದನ್ನು ಕ್ರಿಯಾಶೀಲ ಧರ್ಮವನ್ನಾಗಿ ಬೆಳೆಸಿ ಸರ್ವರಿಗೂ ಆಪ್ಯಾಯಮಾನವಾಗುವಂತಹ ವಾತಾವರಣ ಸೃಷ್ಟಿಸಿದರು. ' ಲಿಂಗಾಯತ ಧರ್ಮವು ವಿಪ್ರ, ಅರ್ಚಕ ಮತ್ತು ಅಯ್ಯಪ್ಪನ ಧರ್ಮವಲ್ಲ. ಅದು ಶೈವರ ಅಭಿಷೇಕ, ಮಂತ್ರ, ಗಣ್ಯತಾವಾದವನ್ನು ನಾವು ಶ್ರೇಷ್ಠರು ಎಂದು ಹೇಳಿ ಕೊಳ್ಳುವವರನ್ನು ತಿರಸ್ಕರಿಸುತ್ತದೆ. ಕರ್ಮ, ಪುನರ್ಜನ್ಮ, ಸ್ವರ್ಗ-ನರಕಗಳನ್ನು ಹೊರಗೆ ಹಾಕಿದ ಪ್ರಜಾ ಧರ್ಮವಾಗಿದೆ. '೫ಎನ್ನುವ ಡಾ: ಹಿರೇಮಲ್ಲೂರು ಈಶ್ವರನ್ ರವರ ವಿಚಾರಗಳನ್ನು ಈ ಪರಿಸರದ ಶರಣ ಧರ್ಮದ ಪರಿಕಲ್ಪನೆಗೂ ಅನ್ವಯಿಸಬಹುದಾಗಿದೆ.

ಈ ಪರಿಸರದ ಶರಣ ಧರ್ಮ ಕಲ್ಯಾಣ ಶರಣ ಧರ್ಮಕ್ಕಿಂತ ಭಿನ್ನವಾಗಿರದಿದ್ದರೂ ತನ್ನದೆಯಾದ ಕೆಲವು ವೈಶಿಷ್ಟ್ಯಗಳನ್ನು ಹೊಂದಿದೆ. ಈ ಪರಿಸರದ ಶರಣರು ತಮ್ಮ ಸಮಕಾಲೀನ ಪುರೋಹಿತ ಶಾಹಿ-ಪ್ರಭುತ್ವಶಾಹಿಗಳನ್ನು ಮೊದಲ ಭಾರಿಗೆ ಧಿಕ್ಕರಿಸಿ ಶರಣ ಧರ್ಮದ ಬೀಜಗಳನ್ನು ಬಿತ್ತಿದರೆಂಬುದು ಗಮನಾರ್ಹವಾಗಿದೆ. ಕಲ್ಯಾಣ ಶರಣರ ಧರ್ಮ ಪರಿಕಲ್ಪನೆಗೆ ಒಂದು ಚೌಕಟ್ಟನ್ನು ಮೊದಲು ನಿರ್ಮಿಸಿದವರು ಈ ಪರಿಸರದ ಶರಣರು.

ಬಸವೋತ್ತರ ಯುಗ :

ಯಾವ ಶರಣರ ಧರ್ಮ ವೈದಿಕ ಶಾಹಿಯನ್ನು ಪ್ರಬಲವಾಗಿ ವಿರೋಧಿಸಿತ್ತೋ ಪುನಃ ಅದೇ ವೈದಿಕ ಶಾಹಿ ಬಸವೋತ್ತರ ಯುಗದಲ್ಲಿ ಹೊಸ ರೂಪದಲ್ಲಿ ಕಾಣಿಸಿ ಕೊಂಡಿತು. ಆಗ ಈ ಪರಿಸರದ ಈ ಯುಗದ ಶರಣರು ಸಹಜವಾಗಿ ತಮ್ಮ ಧಾರ್ಮಿಕ ಪರಿಕಲ್ಪನೆಗಳನ್ನು ಬದಲಾಯಿಸ ಕೊಳ್ಳಬೇಕಾಯಿತು. ಈ ಯುಗದ ಶರಣ ಧರ್ಮ ಕೆಲವು ಮಿತಿಗಳಿಗೆ ಒಳಪಡಬೇಕಾಯಿತು. ಚಲನ ಶೀಲವಾದ ಜಂಗಮ ಪರಿಕಲ್ಪನೆ ಜಾತಿಯ ಪರಿಕಲ್ಪನೆ ಪಡೆಯಿತು. ವೈದಿಕರ ಪುರೋಹಿತನೇ ಮುಂದೆ ಲಿಂಗಾಯತರಲ್ಲಿ ಜಂಗಮ ರೂಪವಾಗಿ ಕಾಣಿಸಿದನು. ಆ ಮೂಲಕ ಲಿಂಗಾಯತವೆಂಬ ವಿಶಾಲ ಧರ್ಮವನ್ನು ಜಾತಿಯಾಗುವಂತೆ ವ್ಯವಸ್ಥಿತ ಜಾಲವನ್ನು ಹೆಣೆಯಲಾಯಿತು. ಹಾಗಾಗಿ ಬಸವ ಯುಗದ ಶ್ರೇಷ್ಠ ಆದರ್ಶಗಳೆಲ್ಲ ತಲೆಕೆಳಗಾದವು.

---

೧ : ಸಂ : ಡಾ : ಎಸ್.ವಿದ್ಯಾ ಶಂಕರ -ಸ.ವ.ಸಂ.-೭, ವಚನ ೬೪, ಪುಟ ೩೦೨

೨ : ಸಂ : ಡಾ : ಬಿ.ಆರ್. ಹಿರೇಮಠ- ಸ.ವ.ಸಂ.-೮, ವಚನ ೬, ಪುಟ ೪

೩ : ಸಂ : ಡಾ : ಬಿ.ಆರ್. ಹಿರೇಮಠ- ಸ.ವ.ಸಂ.-೯ , ವಚನ ೧೦೭, ಪುಟ ೨೩೬

೪ : ಸಂ : ಡಾ : ಎಂ.ಎಂ. ಕಲಬುರ್ಗಿ -ಸ.ವ.ಸಂ. -೬, ವಚನ ೨೫, ಪುಟ ೩೮೨

೫ : ಸಂ : ಡಾ : ಜಿ.ಬಿ. ವಿಸಾಜಿ -ಶಾಂತಿಕಿರಣ -ಸಂಪುಟ ೨೧, ಸಂಚಿಕೆ ೨, ಪುಟ ೧೪

ಇಷ್ಟಾದರೂ ಈ ಯುಗದಲ್ಲಿ ಶರಣರು ತಮ್ಮ ದೇಯಾದ ಮಿತಿಯಲ್ಲಿ ಮಾನವೀಯತೆಗೆ ಬೆಲೆ ನೀಡಿದರು. ಈ ಯುಗದಲ್ಲಿ ಹೇಮಗಲ್ಲ ಹಂಪರು ಬಸವ ಯುಗದಷ್ಟೇ ಪ್ರಖರವಾಗಿ ತಮ್ಮ ವಿಚಾರಗಳನ್ನು ಅಭಿವ್ಯಕ್ತ ಗೊಳಿಸಿದರು. ಹರಿತವಾದ ಮಾತುಗಳಿಂದ ವೈದಿಕಶಾಹಿಯನ್ನು ಖಂಡಿಸಿದರು. ಇದನ್ನು ನಾವು ಅವರ ವಚನ ,ಸ್ವರ ವಚನಗಳಿಂದ ಕಾಣಬಹುದು. ಇಷ್ಟಾದರೂ ಇವರು ಶಿವನ ಸ್ವರೂಪವನ್ನು ಸಾಕಾರವಾಗಿ ಕಂಡರು. ಇದನ್ನು ಗಮನಿಸಿದರೆ ಇವರ ಕಾಲಕ್ಕಾಗಲೇ ಶರಣ ಧರ್ಮ ಸ್ಪಷ್ಟವಾಗಿ ತನ್ನ ವೈಚಾರಿಕತೆಯನ್ನು ಕಳೆದು ಕೊಳ್ಳಲಾರಂಭಿಸಿದಂತೆ ಕಂಡುಬರುತ್ತದೆ. ಆದರೂ ಸಹಿತ ಹೇಮಗಲ್ಲ ಹಂಪರಂತವರು ಏಕದೇವತಾ ನಿಷ್ಠೆಗೆ ಪುರಸ್ಕಾರ ನೀಡುತ್ತಾರೆ. ' ಇಷ್ಟ ಲಿಂಗವ ಮರೆದು ಬರಿಯ ಕಲ್ಲಿಗೆರುವ ಭ್ರಷ್ಟಂಗಿನ್ನೆಲ್ಲಿಯ ಶಿವಾಚಾರವಯ್ಯ '೧ ಎಂದು ಕಲ್ಲು ದೇವರ ಬಗ್ಗೆ ಖಂಡಿಸುತ್ತಾರೆ. ಹಾಗೆಯೇ ಇಷ್ಟ ಲಿಂಗ ಬಿಟ್ಟು ಕಂಡ ಕಂಡ ದೇವರಿಗೆ ಶರಣಾಗುವವರನ್ನು ಕುರಿತು ಹೇಳಿದ್ದು ಹೀಗೆ :

' ಹಸಿ ಹಂದರದಿ ಪಡೆದ ಗಂಡನ ವಂಚಿಸಿ

ವಿಷಯಾತುರದಿ ಪಿಸುಣ ಮಾನವರನಪ್ಪುವ ಹಾದರಗಿತ್ತಿಯಂತೆ

ಪಂಚ ಕಳಸವಿಕ್ಕಿ ದೇವ ಭಕ್ತರ ನಡುವೆ ಹಸ್ತ ಮಸ್ತಕವ ಸಂಯೋಗ ಮಾಡಿ

ಗುರು ಕರುಣಿಸಿ ಕೊಟ್ಟು ಪ್ರಾಣ ಲಿಂಗವನ ವಿಶ್ವಾಸವ ಮಾಡಿ

ಕ್ಷೇತ್ರ ಜಾತ್ರಿ ಲಿಂಗವ ಕಂಡು , ವಿಶ್ವಾಸ ವಿಷ್ಟು ಎರಗುವ ಪಂಚ ಮಹಾಪಾತಕರ ನೋಡಾ'೨ ಮತ್ತೊಂದೆಡೆ ಇವರು ಕೆಳವರ್ಗ ಜನ ಅಜ್ಞಾನ -ಮೌಢ್ಯಗಳಿಂದ ಅನಾಚಾರಗಳನ್ನೇ ಧಾರ್ಮಿಕ ಆಚರಣೆಯೆಂದು ಆಚರಿಸುವ ಹಲವರ ಮೂಢಭಕ್ತಿಯನ್ನು ಖಂಡಿಸಿ ಎಚ್ಚರಿಕೆ ನೀಡುತ್ತಾರೆ. ಅಂತಹ ಆಚರಣೆಗಳು ನಿಜವಾದ ಧರ್ಮವಲ್ಲ ವೆಂದು ಹೇಳುತ್ತಾರೆ.ಅಲ್ಲದೇ ತಮ್ಮ ಧೀರ್ಘ ವಚನವೊಂದರಲ್ಲಿ ಮೈಲಾರ , ಜೋಗಿ, ಭೂತ ,ಗುಗ್ಗುಳ ಇಂತಹ ಆಚರಣೆಗಳನ್ನು ಖಂಡಿಸಿ ವಾಸ್ತವ ಸಂಗತಿ ತಿಳಿಸುತ್ತಾರೆ. ೩

ಒಂದೆಡೆ ವೈಚಾರಿಕ ನಿಲುವುಗಳನ್ನು ಪ್ರತಿಪಾದಿಸಿದ ಶರಣರು ಮತ್ತೊಂದಡೆ ವೈದಿಕ ಶಾಹಿಯ ಕರ್ಮ ಸಿದ್ಧಾಂತವನ್ನು ಅಪ್ಪಿಕೊಳ್ಳುವ ದ್ವಂದ್ವ ನಿಲುವುಗಳನ್ನು ನಾವು ಈ ಯುಗದ ಶರಣರಲ್ಲಿ ಕಾಣಬಹುದಾಗಿದೆ.

ನಮ್ಮ ಅಂತರಂಗದಲ್ಲಿಯೇ ಕೈಲಾಸವಿದೆ. ಅದನ್ನು ಆಚಾರ - ಕ್ರಿಯೆ, ಶುಚಿ-ಶೀಲಗಳ ಮೂಲಕ ಕಾಣಬೇಕೆಂದು ಹೇಳಿ ಮನುಷ್ಯರ ದೇಹವನ್ನೇ ಕೈಲಾಸವೆಂದು ಈ ಯುಗದ ಶರಣರು ಅಭಿವ್ಯಕ್ತಿಸಿದ್ದಾರೆ ೪ಇಂತಹ ಸಂದರ್ಭದಲ್ಲಿ ಬಸವಯುಗದ ಶರಣರ (ಧರ್ಮ) ದ ತಿರುಳನ್ನು ಕಾಣಬಹುದಾಗಿದೆ.

ಬಸವ ಯುಗದ ಧಾರ್ಮಿಕ ಪರಿಕಲ್ಪನೆ ಆಶಯ- ಧೋರಣೆಗಳನ್ನು ಬಲವಾಗಿ ನಂಬಿದ್ದರೂ ಅವರಷ್ಟು ತೀವ್ರವಾದ , ಮೊನಚಾದ, ನಿರ್ಭೀತಿ ವಿಚಾರಗಳನ್ನು ಈ ಯುಗದ ಶರಣರು ಹೇಳುವುದಿಲ್ಲ. ಇದಕ್ಕೆ ಅಂದಿನ ವೈದಿಕ ಶಾಹಿಯ ಪ್ರಬಲತೆ ; ಮತ್ತೊಂದೆಡೆ ಇಸ್ಲಾಂ -ಕೈಸ್ತ ಧರ್ಮಗಳ ಬೆಳವಣಿಗೆಯೂ ಕಾರಣವಾಗಿತ್ತೆನ್ನಬಹುದು. ಅತ್ಯಂತ ವಿಷಮ ಸ್ಥಿತಿಯ ಧಾರ್ಮಿಕ ಪರಿಸರದಲ್ಲಿ ಹೇಮಗಲ್ಲ ಹಂಪರಂತವರು ಅತ್ಯಂತ ಎಚ್ಚರಿಕೆಯಿಂದ ಶರಣ ಧರ್ಮವನ್ನು ಮತ್ತೊಮ್ಮೆ ಕಟ್ಟಲು ಪ್ರಯತ್ನ ನಡೆಸಿದ್ದು ಮೆಚ್ಚಲೇ ಬೇಕಾದ ಸಂಗತಿಯಾಗಿದೆ.

ವಿರಕ್ತರಾಗಿದ್ದ ಇವರಿಗೆ ಸಹಜವಾಗಿ ಸಂಸಾರ ಇವರಿಗೆ ಅಷ್ಟು ಹಿತಕರವಾಗಿ ಕಂಡಿಲ್ಲ. ಹಾಗಾಗಿ ಸಂಸಾರದ ಬಗ್ಗೆ ಇವರಿಗೆ ಪ್ರಗತಿಪರ ನಿಲುವುಗಳಿರದೆ ಅದೊಂದು ಮಾಯೆ, ಬಂಧನ , ಸಾಗರ, ಪಾಪದ ಫಲವೆಂಬಂತೆ ಭಾಸವಾಗಿದೆ. ಇಂತಹ ಅನೇಕ ಗೊಂದಲ ನಿಲುವುಗಳಿಂದಾಗಿ ಇವರ ಧಾರ್ಮಿಕಪರಿಕಲ್ಪನೆಯ ಸ್ಪಷ್ಟತೆ ನಮಗೆ ಆಗುವುದಿಲ್ಲ. ವೈದಿಕಶಾಹಿ ಎಲ್ಲಾ ಸಾಹಿತ್ಯವನ್ನು ಮನುಷ್ಯರ ಸ್ವಭಾವದ ಹಿನ್ನೆಲೆಯಲ್ಲಿ ಕಂಡು ಕೇವಲ ವೇದ ಶಾಸ್ತ್ರ ಆಗಮುಗಳ ಓದಿನಿಂದ ವ್ಯಕ್ತಿ ಶ್ರೇಷ್ಠನಾಗುತ್ತಾನೆ ಎಂದು ಹೇಳಿದ್ದನ್ನು ಈ ಯುಗದ ಶರಣರು ಖಂಡಿಸಿ ವ್ಯಕ್ತಿಯ ನುಡಿಗಿಂತ ನಡೆ ಬಹಳ ಮುಖ್ಯವೆಂದರು. ಆದರೂ ಈ ಯುಗದಲ್ಲಿ ಮುಂದೆ ಲಿಂಗ ಧರಿಸುವುದು ಸಹ ಕೆಲ ವರ್ಗಕ್ಕೆ ಸೀಮಿತವಾಗಿ ಲಿಂಗಾಯತ ಧರ್ಮ ತನ್ನ ವಿಶಾಲ ದೃಷ್ಟಿಯನ್ನು ಕಳೆದು ಕೊಂಡ ಬಗ್ಗೆ ನಮಗೆ ಹೇಮಗಲ್ಲ ಹಂಪರ ವಚನಗಳ ಮೂಲಕ ಕಂಡು ಬರುತ್ತದೆ. ೫

ಹೀಗೆ ಕ್ರಮೇಣ ಶರಣರ ಭವಿ ಕಲ್ಪನೆ -ಲಿಂಗಕಟ್ಟಿಕೊಳ್ಳಲಾರದವರಿಗೆ ಅನ್ವಯಿಸತೊಡಗಿತು. ಲಿಂಗಾಯತವೆಂಬುದು ಜಾತಿಯಾಗಿ ಬೆಳೆಯುವ ಸೂಚನೆಗಳು ಕಂಡವು. ಇವರ ವಚನಗಳು ಶರಣ ಧರ್ಮ ಪರಿವರ್ತನೆಯ ಸಂದರ್ಭದಲ್ಲಿ ನಮಗೆ ಚಾರಿತ್ರಿಕ ಅಂಶಗಳಂತೆ ಬಹು ಮುಖ್ಯವಾಗುತ್ತವೆ.

---

೧ : ಸಂ: ಡಾ : ವೀರಣ್ಣ ರಾಜೂರು -ಸ.ವ.ಸಂ. ೧೪, ವಚನ ೨೪೭ , ಪುಟ ೫೪೯

೨ : ಅದೇ : ವಚನ ೨೪೬, ಪುಟ ೫೪೯

೩ : ಅದೇ : ವಚನ ೨೫೪, ಪುಟ ೫೫೪

೪ : ಅದೇ : ವಚನ ೨೪೨, ಪುಟ ೫೪೬

೫ : ಅದೇ : ವಚನ ೨೩೩, ಪುಟ ೫೪೩

ಇವರ ಕಾಲಕ್ಕೆ ಧರ್ಮವನ್ನು ತಾತ್ವಿಕ , ಸೈದ್ಧಾಂತಿಕ ನೆಲೆಯಲ್ಲಿ ಗುರುತಿಸುವ ಪರಿಕಲ್ಪನೆ ಬೆಳೆಯಿತು. ಆದರೂ ಇವರ ವಚನಗಳಲ್ಲಿ ದೇವಾಲಯದ ಬಗ್ಗೆ ಕಂಡುಬರುವ ವಿಚಾರ ಮಾತ್ರ ಬಸವಯುಗದಷ್ಟೇ ಮುಖ್ಯವಾಗಿದೆ. ಎಂಬುದನ್ನು ಗುರುತಿಸಬಹುದಾಗಿದೆ. ಈ ಯುಗದಲ್ಲಿ ತತ್ವ ಪದಗಳನ್ನು ರಚಿಸಿದ ಶರಣರಿಗೂ ಸಹಿತ ನಿಶ್ಚಿತವಾದ ಧಾರ್ಮಿಕ ಧೋರಣೆಗಳಿರಲಿಲ್ಲ. ಅವರದೇ ಆದ ಕೆಲವು ಧಾರ್ಮಿಕ ಪರಿಕಲ್ಪನೆಗಳಿದ್ದವು. ಇಷ್ಟಾದರೂ ಇವರು ಜಾತ್ಯಾತೀತ-ವರ್ಗಾತೀತ ಧರ್ಮವನ್ನು ಕಟ್ಟಲು ಯೋಚಿಸಿದ್ದು ಬಹು ಮುಖ್ಯವಾದ ಸಂಗತಿಯಾಗಿದೆ. ಬಸವಯುಗದ ಶರಣರಂತೆ ಇವರು ದೇವಾಲಯ ಸಂಸ್ಕೃತಿಯನ್ನು ವಿರೋಧಿಸಿ ಜಂಗಮ ಸಂಸ್ಕೃತಿಯನ್ನು ಪ್ರೋತ್ಸಾಹಿಸಿದ್ದಾರೆ. ಜಾತ್ಯಾತೀತವಾದ ಧಾರ್ಮಿಕ ಧೋರಣೆಗಳನ್ನು ಇವರ ಹಾಡುಗಳಲ್ಲಿ ಕಾಣಬಹುದಾಗಿದೆ.

ವೈದಿಕ ಶಾಹಿ ಸೃಷ್ಟಿಸಿದ ದೈವಗಳನ್ನು ಇವರಲ್ಲಿ ಕೆಲವರು ಖಂಡಿಸಿದರೆ , ಕೆಲವರು ಅವುಗಳನ್ನೇ ತಮ್ಮ ತತ್ವಗಳಿಗೆ ಸಂಕೇತವಾಗಿ ಬಳಸಿಕೊಂಡಿದ್ದಾರೆ. ವೈದಿಕ ಸಂಸ್ಕೃತಿಯನ್ನು ಮಟ್ಟುವಲ್ಲಿ ಬಹುತೇಕ ಸಾಫಲ್ಯ ಪಡೆದಿದ್ದ ಬಸವಯುಗದ ಶರಣರ ಧಾರ್ಮಿಕ ಚಳುವಳಿ ಆ ನಂತರ ಬಸವೋತ್ತರ ಯುಗದಲ್ಲಿ ವೈದಿಕ ಶಾಹಿಯನ್ನು ಮೆಟ್ಟಿ ನಿಲ್ಲದೇ ತಾನೇಕೆ ವೈದಿಕರಂತಾಗಬಾರದು ಎಂಬ ಯೋಚನೆ ಮೂಡಿದ ಕಾರಣದಿಂದಲೇ ವೈದಿಕ ಶಾಹಿ ಧರ್ಮದ ಪರಿಸರದಲ್ಲಿಯೇ ಸದ್ದಿಲ್ಲದೇ ಲೀನವಾಗತೊಡಗಿತು. ಶರಣರು ಇಂತಹ ಸಂದರ್ಭದಲ್ಲಿ ತಮ್ಮದೇಯಾದ ವೈಯಕ್ತಿಕ ನೆಲೆಯಲ್ಲಿ ವಿಶಿಷ್ಟವಾದ ಧಾರ್ಮಿಕ ಪರಿಸರ ಸೃಷ್ಟಿಸುವಲ್ಲಿ ಸತತ ಹೋರಾಟ ನಡೆಸಿದ್ದನ್ನು ನಾವು ಗಮನಿಸಬಹುದಾಗಿದೆ.

ಬಸವ ಯುಗದಲ್ಲಿ ಶರಣರಿಗೆ ನಿಶ್ಚಿತವಾದ ಧರ್ಮವನ್ನು ಸೃಷ್ಟಿಸುವ ಕಲ್ಪನೆ ಇದ್ದ ಕಾರಣ ಅಲ್ಲಿ ಕೆಲವು ಸೈದ್ಧಾಂತಿಕ ತತ್ವ ಮೂಡಿದರೂ ಅವು ಮಾವನವೀಯತೆ ಮೀರಿ ನಿಲ್ಲಲಿಲ್ಲ. ವೈದಿಕರ ಕರ್ಮಠವನ್ನು ವಿರೋಧಿಸುತ್ತಾ ಧರ್ಮದ ಪರಿಕಲ್ಪನೆಯ ಹೊಸ ದೃಷ್ಟಿಯನ್ನು ಬೆಳಸಲಾಯಿತು. ಆದರೆ ಈ ಯುಗದ ತತ್ವ ಪದಗಳನ್ನು ರಚಿಸಿದ ಶರಣರಲ್ಲಿ ಯಾವುದೇ ನಿರ್ದಿಷ್ಟವಾದ ಧಾರ್ಮಿಕ ಪರಿಸರವನ್ನು ರೂಪಿಸಿ ಕೊಳ್ಳಲು ಆಗಲಿಲ್ಲವಾದರೂ ತಮ್ಮದೇಯಾದ ಪರಿಕಲ್ಪನೆಗಳನ್ನು ರೂಪಿಸಲು ಯತ್ನಿಸಿದರು. ಶರಣ ಧರ್ಮವನ್ನು ಅಪ್ಪಿದ ಬಸವಯುಗದ ಶರಣರ ತತ್ವಗಳನ್ನು ಪುರಸ್ಕರಿಸಿದ ಶರಣರು ಈ ಯುಗದಲ್ಲಿ ಕಂಡು ಬಂದರೂ ಇವರ ಕಾಲಕ್ಕಾಗಲೇ ಶರಣ ಧರ್ಮಎಂಬುದು ಸೀಮಿತ ಅರ್ಥಗಳನ್ನೊಂದಿ ಸಂಕುಚಿತವಾಗಿತ್ತು. ಇಂತಹ ಸಂಧಿಗ್ಧ ಪರಿಸ್ಥಿತಿಯಲ್ಲಿ ಈ ಯುಗದ ಶರಣರು ಹೊಸದಾದ ಧಾರ್ಮಿಕ ಪರಿಕಲ್ಪನೆಯನ್ನು ಕಂಡು ಕೊಳ್ಳಲು ಯತ್ನಿಸಿದ್ದು ಗಮನಾರ್ಹವಾಗಿದೆ.

ಬಸವಯುಗದ ತೀವ್ರವಾದ ಸುಧಾರಣೆಯ , ಪ್ರಗತಿಪರವಾದ ಆಶಯ-ಧೋರಣೆಯ ಧಾರ್ಮಿಕ ಪರಿಕಲ್ಪನೆ ಇರದಿದ್ದರೂ ವೈದಿಕ ಶಾಹಿಗಿಂತ ಭಿನ್ನವಾಗಿ ; ಅದರ ಮೌಢ್ಯತೆಗಳನ್ನು ಕೈಬಿಟ್ಟು ವಾಸ್ತವಿಕ ನಡೆಗೆ ಪುರಸ್ಕರಿಸಿತೆಂಬುದನ್ನು ಗಮನಿಸಬೇಕಾಗಿದೆ.

ಈ ಯುಗದ ಶರಣರು ದೇವರ ಜಡತ್ವವನ್ನು ಅಲ್ಲಗಳೆದು ಚೈತನ್ಯಕ್ಕೆ ಪ್ರಾಮುಖ್ಯತೆ ನೀಡುತ್ತಾರೆ. ಜನರು ಆಚರಿಸುವ ಮೌಢ್ಯ ಆಚರಣೆಗಳನ್ನೇ ತಮ್ಮ ಚಿಂತನೆಗೆ ಬಳಸಿ ಆ ಧಾರ್ಮಿಕ ಆಚರಣೆಯ ವಾಸ್ತವಿಕ ಪರಿಕಲ್ಪನೆಗಳನ್ನು ತಿಳಿಸುತ್ತಾರೆ. ನಿಜವಾದ ನಾಗರಹಾವು ಇರುವುದು ಮನುಷ್ಯರ ಮನಸ್ಸಿನಲ್ಲಿ . ಮನಸ್ಸಿನಲ್ಲಿರುವ ಮೈಲಿಗೆ-ಚಂಚಲತೆ ಬಿಟ್ಟರೆ ನಿಜವಾದ ನಾಗಪೂಜೆ ಎಂಬುದಾಗಿ ಕೂಡಲೂರು ಬಸವಲಿಂಗ ಶರಣರು ಹೇಳುತ್ತಾರೆ. ೧ ಹಾಗೆಯೇ ಯಾಂತ್ರಿಕವಾಗಿ ಲಿಂಗ ಕಟ್ಟಿಕೊಂಡವರನ್ನು ಮಂಗನೆನ್ನುತ್ತಾರೆ.ಕೇವಲ ಮೇಲ್ನೋಟಕ್ಕೆ ಉತ್ತಮ ಧಾರ್ಮಿಕ ವ್ಯಕ್ತಿ ಎನಿಸಿಕೊಂಡರು ಚಾರಿತ್ರಿಕವಾಗಿ ಧಾರ್ಮಿಕ ಮನೋಧರ್ಮವಿಲ್ಲದ ವ್ಯಕ್ತಿಯ ಸ್ಥಿತಿಯನ್ನು ಇವರು 'ಏನು ಮಾಡಿದೆ ಕವಿಯೆ' ಎಂಬ ಹಾಡಿನಲ್ಲಿ ಮಾರ್ಮಿಕವಾಗಿ ಗುರುತಿಸಿತ್ತಾರೆ. ೩ಗೊಬ್ಬೂರು ಹಂಪಣ್ಣನವರು ವೈದಿಕರ ಕರ್ಮ ಸಿದ್ಧಾಂತದ ಹಿನ್ನೆಲೆಯಲ್ಲಿ ತಮ್ಮ ಧಾರ್ಮಿಕ ಪರಿಕಲ್ಪನೆ ಕಂಡುಕೊಳ್ಳುತ್ತಾರೆ. ಪಾಪ ಪುಣ್ಯಗಳ ಮೂಲಕವೇ ಗಿಡ,ಮರ,ಕ್ರಿಮಿ ರೂಪವನ್ನು ಮನುಷ್ಯ ಪಡೆಯುತ್ತಾನೆ ಎಂಬ ಸಾಂಪ್ರದಾಯಿಕ ವಿಚಾರಗಳನ್ನು ಹೇಳುತ್ತಾರೆ.೪

ನೀರಲಕೇರಿ ಬಸವಲಿಂಗ ಶರಣರು ಕಲ್ಯಾಣ ಶರಣರ ಆದರ್ಶಗಳನ್ನು ನಂಬಿ ಬದುಕುವ ಜೊತೆಗೆ ಶಕ್ತಿಯ ಆರಾಧಕರೂ ಕೂಡ ಆಗಿದ್ದರು. ಅನೇಕ ದ್ವಂದ್ವಗಳನ್ನಿಟ್ಟುಕೊಂಡೇ ಬದುಕಿದರು. ವಿಶಿಷ್ಟವಾದ ಧಾರ್ಮಿ ಪರಿಕಲ್ಪನೆ ಕಂಡುಕೊಂಡು ಆ ಮೂಲಕ ತತ್ವಗಳನ್ನು ಪ್ರಚುರ ಪಡಿಸಿದರು. ಶರಣರ ಆದರ್ಶ ಒಂದೆಡೆ ಮತ್ತೊಂದೆಡೆ ವೈದಿಕ - ಸ್ಥಾನಿಕ ಧಾರ್ಮಿಕ ನಂಬಿಕೆಗಳನ್ನು ಸ್ವೀಕರಿಸಿ ಅವುಗಳನ್ನು ಸಾಂಕೇತಿಕರಿಸಿ ಕೊಂಡು ತಮ್ಮ ವಿಚಾರಗಳನ್ನು ಖಂಡಿಸಿದರು. ವೈದಿಕ ಶಾಹಿ ನಿಲುವುಗಳನ್ನು ಖಂಡಿಸುತ್ತಾ ತನ್ನ ಬಿಟ್ಟು ದೇವರಿಲ್ಲ ಎಂಬ ಶರಣರ ಆಶಯ ಒಂದಡೆಯಾದರೆ೫ ಮತ್ತೊಂದೆಡೆ ಕರ್ಮ ಸಿದ್ಧಾಂತವನ್ನು ಒಪ್ಪಿ ' ಇರುವೆ ಮೊದಲು ಆನೆಕಡೆಯಾಗಿ ದೇಹಗಳ ಧರಿಸುತ ನರದೇಹವ ತೊಟ್ಟು ೬ . ಎನ್ನುತ್ತಾರೆ.

---

೧ : ಆಯ್ಕೆ : ಎಸ್.ಜಿ. ಸ್ವಾಮಿ - ಕೂ.ಬ. - ಪದ್ಯ ೩೫, ನುಡಿ೩ , ಪುಟ೨೯

೨ : ಅದೇ : ಪದ್ಯ ೩೮ , ನುಡಿ೪, ಪುಟ೩೧

೩ : ಅದೇ : ಪದ್ಯ ೭೧, ನುಡಿ೧-೩, ಪುಟ೫೯,

೪ : ಆಯ್ಕೆ : ರಾಮಸ್ವಾಮಿ ನುಲಿ-ಗೊ.ಹಂ. -ಪದ್ಯ೧೩, ನುಡಿ೨, ಪುಟ೧೧

೫ : ಸಂ : ಡಾ : ಬಸವಲಿಂಗ ಸೊಪ್ಪಿಮಠ-ನೀ.ಬ.ಶಿ.ಸ್ವ-ಪದ್ಯ ೩೫ ,ನುಡಿ೩, ಪುಟ೨೧

೬ : ಅದೇ : ಪದ್ಯ ೨೬ , ನುಡಿ೧,ಪುಟ೨೧

ಈ ಯುಗದಲ್ಲಿ ಎಲ್ಲರಿಗಿಂತ ಭಿನ್ನವಾಗಿ ಆಲೋಚಿಸಿದ ಘನಮಠ ನಾಗಭೂಷಣ ಶರಣರು ಬಸವಯುಗದ ಶರಣರನ್ನು ಅವರ ತತ್ವಗಳನ್ನು ತಮ್ಮ ಉಸಿರೆಂದು ತಿಳಿದು ಬದುಕಿದವರು. ವೈದಿಕರ ಕರ್ಮಠವನ್ನು ಬಹುವಾಗಿ ಖಂಡಿಸಿದ್ದಾರೆ. ಬಸವ ಯುಗದ ಧೋರಣೆಗಳನ್ನೇ ತಮ್ಮ ಹಾಡುಗಳಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಪಂಚಾಂಗವನ್ನು ಕೇಳಿದರೆ ನಿನಗೆ ಹಾನಿ ಎಂದು ಎಚ್ಚರಿಸಿದರೆ೧ ಇನ್ನೊಂದೆಡೆ ಕ್ಷುದ್ರ ದೇವತೆಗಳನ್ನು ಅವುಗಳ ಆಚರಣೆಗಳನ್ನು ಅಲ್ಲಗಳೆಯುತ್ತಾರೆ.೨ ಧರ್ಮದ ಹೆಸರಿನಲ್ಲಿ ನಡೆಯುವ ಶೋಷಣೆ, ಕಂದಾಚಾರ, ಡಂಬಾಚಾರಗಳನ್ನು ಇವರು ಖಂಡಿಸಿ ವಾಸ್ತವ ಸಂಗತಿಗಳನ್ನು ತಿಳಿಸುತ್ತಾರೆ.೩

ಈ ಯುಗದ ಶರಣರು ನಾವಿಂದು ಸಾಧಿಸಲಾಗದ ಸಮನ್ವಯತೆಯನ್ನು ಅವರು ವೈಯಕ್ತಿಕ ನೆಲೆಯಲ್ಲಿ ಸಾಧಿಸಿದ್ದರು. ಇವರ ಧರ್ಮ ಸಮನ್ವಯತೆಯನ್ನು ಮುಂದೆ ಪ್ರತ್ಯೇಕವಾಗಿ ಗಮನಿಸಲಾಗುವುದು. ಈ ಯುಗದ ಶರಣರ ಧಾರ್ಮಿಕ ದೃಷ್ಟಿ-ಪರಿಕಲ್ಪನೆ ಹೇಗಿತ್ತು ಎಂಬುದನ್ನು ಶಾಂತರಸರು ಹೀಗೆ ಹೇಳುತ್ತಾರೆ. ' ಈ ಕವಿಗಳೆಲ್ಲ ಕಾಯಕವಂತರು ಕಾಯಕವಿಲ್ಲದೇ ಬದುಕಬಾರದೆಂದು ಇವರು ಬೋಧಿಸಿದರು ಎಲ್ಲಾ ಕಾಯಕಗಳು ಪವಿತ್ರವಾದುವು ಎಂದು ಸಾರಿ ಪರಮಾರ್ಥ ಸಾಧನೆಗೆ ಇವು ಬೇಕೆ ಬೇಕು ಎಂದು ಹೇಳಿದರು. ಹಾಗೇ ನೋಡಿದರೆ ಅವರ ಕಾಯಕಗಳೇ ಪರಮಾರ್ಥಗಳಾಗಿದ್ದವು. ಪ್ರಾಮಾಣಿಕತೆ ಇನ್ನೊಬ್ಬನ ದುಃಖದಲ್ಲಿ ಭಾಗಿಯಾಗುವಿಕೆ, ಸಾಮಾನ್ಯ ವ್ಯವಹಾರ ಜ್ಞಾನ, ವೇಳೆಯ ಮಹತ್ವ, ಪರನಾರಿ ಸೋದರತನ, ಎಲ್ಲರೂ ಒಂದೆಂಬ ಭಾವನೆ ಮುಂತಾದ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ಗುಣಗಳನ್ನು ಈ ಕವಿಗಳು ಜನರಿಗೆ ಕಲಿಸಿದರು. ಕೈಲಾಸ, ಸ್ವರ್ಗ, ನರಕ, ಮುಂತಾದ ಅಪ್ರಬುದ್ಧ ವಿಚಾರಗಳನ್ನು ಅಳಿಸಿ ಇವು ಎಲ್ಲಿಯೂ ಇಲ್ಲ, ನಮ್ಮ ಜೀವನದಲ್ಲಿಯೇ ಇವೆ ಎಂಬುದನ್ನು ತಿಳಿಸಿದರು. ಈ ಭೂಮಿಯನ್ನೇ ಕೈಲಾಸ ಮಾಡಲು ಹೆಣಗಿದರು '೪ ಹಾಗೇ ಅವರು ಮುಂದೆ ಈ ಕುರಿತು ಹೇಳುತ್ತಾ ಅಭಿಪ್ರಾಯ ಪಡುವುದು ಹೀಗೆ :

' ಈ ಕವಿಗಳು ಸರ್ವ ಸಮಾನತೆಯನ್ನು ಬೆಳೆಸಿದರು . ಜಾತಿ ಮತಗಳ ಎಲ್ಲೆಗಳನ್ನು ಅಳಿಸಿದರು. ಮಾನವೀಯತೆಯನ್ನು ಮೆರೆದರು. ಸಕಲ ಜೀವದ ಲೇಸೆ ಅವರ ಧರ್ಮವಾಗಿತ್ತು. ಅಂತೆಯೇ ಅವರ ಬಾಳಿನಲ್ಲಿ ಧರ್ಮ ತಿಕ್ಕಾಟ ಬರಲಿಲ್ಲ. ಧರ್ಮ ದೊಡ್ಡದಿದ್ದರೂ ಪ್ರೀತಿ , ಅನುಕಂಪಗಳು ವ್ಯವಹಾರದಲ್ಲಿ ಅದಕ್ಕಿಂತಲೂ ಎತ್ತರಕ್ಕೆ ನಿಲ್ಲುತ್ತವೆ ಎಂಬ ಅರಿವನ್ನು ಜನರಿಗೆ ನೀಡಿದರು. ಪರ ಧರ್ಮ ಸಹಿಷ್ಣುತೆಗಿಂತ ಪರ ಧರ್ಮ ಗೌರವ ಹೆಚ್ಚಿನದು ; ಇದು ಬೆಳೆದರೆ ಸಮಾಜದ ಆರೋಗ್ಯ ಚೆನ್ನಾಗಿರುವುದು. ಈ ಕವಿಗಳು ಎಲ್ಲ ಧರ್ಮಗಳನ್ನು ಗೌರವದಿಂದ ಕಂಡರು ; ಕಟ್ಟು ಕಟ್ಟಳೆಗಳನ್ನು ಮೀರಿ ಆಯಾ ಧರ್ಮದ ದೇವರುಗಳನ್ನು ಕುರಿತು ಹಾಡಿದರು ; ಕೊನೆಗೆ ದೇವನೊಬ್ಬನೇ ಎಂಬುದನ್ನು ಮನದಟ್ಟು ಮಾಡಿ ಕೊಟ್ಟರು'.೫

ಇದುವರೆಗಿನ ಅವಲೋಕನೆಯಿಂದ ತಿಳಿದು ಬರುವುದೇನೆಂದರೆ ಬಸವಪೂರ್ವ-ಬಸವ ಯುಗದಶರಣರು ವೈದಿಕ ಶಾಹಿ ಧರ್ಮವನ್ನು ಸ್ಪಷ್ಟವಾಗಿ ಖಂಡಿಸಿ ಹೊಸ ಧರ್ಮದ ಪರಿಕಲ್ಪನೆ ನೀಡಿದರೆ; ಬಸವೋತ್ತರ ಯುಗದ ಶರಣರು (ಘನ ಮಠ ನಾಗಭೂಷಣ ಶರಣರ ಹೊರತಾಗಿ) ವೈದಿಕ ಶಾಹಿ ವಿರೋಧಿಸುತ್ತಲೇ ಮತ್ತೊಂದು ರೀತಿಯಲ್ಲಿ ಅದನ್ನು ಅಪ್ಪಿದರು. ಇವರು ಸಹಜವಾಗಿ-ಅನಿವಾರ್ಯವಾಗಿ ಹೊಂದಾಣಿಕೆಯ ಧಾರ್ಮಿಕ ಪರಿಕಲ್ಪನೆ ಹೊಂದಿದ್ದರೂ ವೈದಿಕರಿಗಿಂತ ಸುಧಾರಣಾವಾದಿ ಪರಿಕಲ್ಪನೆಯ ಧಾರ್ಮಿಕ ಧೋರಣೆ ಹೊಂದಿದ್ದರೆಂಬುದು ಗಮನಿಸಬೇಕಾದ ಸಂಗತಿಯಾಗಿದೆ.

---

೧ : ಆಯ್ಕೆ : ಚೆನ್ನಬಸಪ್ಪ ಬೆಟ್ಟದೂರು - ಘ.ನಾ.ಶಿ., ನುಡಿ ೨, ಪುಟ ೫

೨ : ಅದೇ : ನುಡಿ ೧-೧೭, ಪುಟ ೯-೧೦

೩ : ಅದೇ ನುಡಿ ೧-೧೧, ಪುಟ ೪೦-೪೧

೪ : ಸಂ : ಶಾಂತರಸ-ತ.ಪ್ರಾ.ಸಂ.-ಪುಟ xii

೫ : ಅದೇ : ಪುಟ xii

೬ : ೩ ಶರಣರ ತತ್ವ ವಿವೇಚನೆ

ಶರಣರ ತತ್ವ ವಿವೇಚನೆಯು ಧರ್ಮಾಧಾರಿತವಾಗಿದ್ದರೂ ಅದು ಕ್ರಿಯಾತ್ಮಕ, ಚಲನಾತ್ಮಕ ಸ್ವರೂಪತೆಯನ್ನು ಪಡೆದು ಕೊಂಡಿದೆ. ಶರಣರ ತತ್ವ ವಿವೇಚನೆಯ ಚಿಂತನೆಯಲ್ಲಿ ಮಾನವರ ಸಂಪೂರ್ಣ ವಿಕಾಸಕ್ಕೆ ಜ್ಞಾನ-ಕ್ರಿಯೆ- ಇಚ್ಛಾಶಕ್ತಿಗಳ ಸಾಧನೆಯ ಸಿದ್ಧಿಗೆ ಪುರಸ್ಕಾರವಿದೆ. ಆತ್ಮೋದ್ಧಾರದ ಜೊತೆಯಲ್ಲಿಯೇ ಲೋಕೋದ್ಧಾರದ ಚಿಂತನೆ ಆ ಮೂಲಕ ಯಾವುದೇ ಗೊಂದಲಗಳಿಲ್ಲದೇ ಸರ್ವರ ಏಳಿಗೆಯನ್ನು ಕಂಡು ಕೊಳ್ಳಲು ಸಾಧ್ಯವೆಂಬ ಸಾರವನ್ನು ಹೊಂದಿರುವುದೇ ಶರಣರ ತತ್ವ ವಿವೇಚನೆಯಾಗಿದೆ.

ಈ ಪರಿಸರದ ಶರಣರೇ ಇದಕ್ಕೆ ಮೊದಲು ಚಾಲನೆ ನೀಡಿ ಇಡೀ ಶರಣ ಸಮೂಹವನ್ನೇ ಬೇರೊಂದು ದಿಕ್ಪಥದೆಡೆಗೆ ಕೊಂಡೊಯ್ದರೆನ್ನಬಹುದಾಗಿದೆ. ಅಂತಹ ತಾತ್ವಿಕ ವಿವೇಚನೆಯಲ್ಲಿ ಹೆಸರಿಸಬಹುದಾದ ಈ ಪರಿಸರದ ಶರಣರೆಂದರೆ ಢಕ್ಕೆಯ ಮಾರಯ್ಯ. ಬಸವ ಪೂರ್ವಯುಗದಲ್ಲಿದ್ದು ಬಸವಯುಗದಲ್ಲಿ ಬಾಳಿದ ಇವರು ಶರಣರ ತತ್ವ ವಿವೇಚನೆಯಲ್ಲಿ ಶಿವ ಮತ್ತು ಶಕ್ತಿಗಳೆರಡರ ಪರಿಕಲ್ಪನೆ ನೀಡಿದ ಮೊದಲಿಗರು. ಇವರು ತಮ್ಮ ವಿವೇಚನೆಯಲ್ಲಿ ಯಾವುದೇ ನಿರ್ದಿಷ್ಟ ಹೆಸರನ್ನು ಬಳಸದಿದ್ದರೂ ಅದು ಕ್ರಮೇಣ ಶಕ್ತಿವಿಶಿಷ್ಟಾದ್ವೈತವೆಂದು ಹೆಸರಾಯಿತು.

ಬಸವಪೂರ್ವ-ಬಸವಯುಗ :

ಶರಣರು ಧರ್ಮವನ್ನು ತಾತ್ವಿಕ ನೆಲಗಟ್ಟಿನ ಆಧಾರದ ಮೇಲೆ ರೂಪಿಸಲು ಬಯಸಿದರು. ಹಾಗಾಗಿ ಅವರು ಇದನ್ನು ಕೈಗೆತ್ತಿ ಕೊಂಡಾಗ ಕೆಲವು ಪ್ರಮುಖ ನಿಲುವುಗಳನ್ನು (ಸೈದ್ಧಾಂತಿಕತೆ)ತಳೆಯುವುದು ಅನಿವಾರ್ಯ-ಅಗತ್ಯವೂ ಕೂಡ ಆಯಿತು. ಧರ್ಮಕ್ಕೆ ತತ್ವವೊಂದರ ಅಡಿಪಾಯ ಬೇಕಾಗಿತ್ತು. ಇಲ್ಲದೇ ಹೋದರೆ ಧರ್ಮವನ್ನು ಅರ್ಥೈಸಿಕೊಳ್ಳುವುದಾಗಲಿ ಅಥವಾ ತಿಳಿಸುವುದಾಗಲಿ ಕಷ್ಟವಾಗುತ್ತದೆ. ಆಗ ನಾಸ್ತಿಕತೆಯ ಅಪಾಯ ಎದುರಾಗುತ್ತದೆ. ತತ್ವದ ಪುರಸ್ಕಾರ ಸಿಕ್ಕರೆ ಧಾರ್ಮಿಕ ಬದುಕು ಸಾರ್ಥಕವೆನಿಸುತ್ತದೆ. ಇದನ್ನು ಸರಿಯಾಗಿಯೇ ತಿಳಿದು ಕೊಂಡಿದ್ದ ಶರಣರು ಪರಮ ಶಿವನೆ ಪರಮ ಸತ್ಯ. ಲಿಂಗ-ಅಂಗಗಳ ಸಾಮರಸ್ಯ ಸ್ಥಿತಿಯೇ ಅಂತಿಮ ಗುರಿ. ಇದನ್ನು ಸಾಧಿಸಲು ಶರಣರು ತಮ್ಮ ತತ್ವವಿವೇಚನೆಯ ಸಂದರ್ಭದಲ್ಲಿ ಬಳಸಿ ಕೊಂಡ ಮೂರು ಮುಖ್ಯಾಂಶಗಳೆಂದರೆ : ರೂಪದಂತಿರುವ ಅಷ್ಟಾವರ್ಣ, ಪ್ರಾಣದಂತಿರುವ ಪಂಚಾಚಾರ ; ಆತ್ಮದಂತಿರುವ ಷಟಸ್ಥಲಗಳೇ ಪ್ರಮುಖವಾಗಿವೆ. ನಾವು ಈ ದಿಸೆಯಲ್ಲಿ ಈ ಪರಿಸರದ ಶರಣರ ತತ್ವ ವಿವೇಚನೆಯನ್ನು ಪ್ರಮುಖವಾಗಿ ಈ ಕೆಳಗಿನ ನಾಲ್ಕು ಅಂಶಗಳ ಮೂಲಕ ಗುರುತಿಸಬಹುದಾಗಿದೆ.

೧) ಶಕ್ತಿವಿಶಿಷ್ಟಾದ್ವೈತ ೨)ಅಷ್ಟಾವರಣ ೩)ಷಟಸ್ಥಲ ೪) ಪಂಚಾಚಾರಗಳು.

೧) ಶಕ್ತಿವಿಶಿಷ್ಟಾದ್ವೈತ

ಇದರ ಕಲ್ಪನೆ ಬೆಳೆದು ಬಂದ ರೀತಿಯನ್ನು ಡಾ : ಹಿರೇಮಲ್ಲೂರು ಈಶ್ವರನ್ ಹೀಗೆ ವಿವರಿಸುತ್ತಾರೆ. 'ಶಕ್ತಿ ವಿಶಿಷ್ಟಾದ್ವೈತದ ಕಲ್ಪನೆ ಶರಣರಲ್ಲಿ ಉನ್ನತವಾದ ಆ ಕಾಲದ ಕನ್ನಡ ನಾಡಿನಲ್ಲಿ ಎಂಟನೆಯ ಶತಮಾನದಿಂದ ಪ್ರಸಾರದಲ್ಲಿದ್ದ ಶೈವ ಧರ್ಮದ ತತ್ತ್ವಗಳು ನೆಲೆಗೊಂಡಿದ್ದವು. ಅವುಗಳನ್ನು ಪ್ರಚಾರದಲ್ಲಿ ತಂದವರು ಲಾಕುಲೀಶ ಪಾಶುಪತರು. ಹನ್ನೊಂದನೆಯ ಶತಕದಲ್ಲಿ ಅವರ ಸ್ಥಾನವನ್ನು ಆಕ್ರಮಿಸಿ ಆ ಪ್ರಚಾರ ಕಾರ್ಯವನ್ನು ಮುಂದುವರಿಸಿ ಕೊಂಡು ಹೋದವರು ಕಾಳಾಮುಖರು. ದಕ್ಷಿಣ ಭಾರತದ ತಮಿಳುನಾಡಿನಲ್ಲಿ ಏಳನೆಯ ಶತಮಾನದಿಂದ ವೈಷ್ಣವ ಭಕ್ತರಾಗಿದ್ದ ಆಳ್ವಾರರೂ, ಶೈವ ಭಕ್ತರಾಗಿದ್ದ ನಾಯನ್ಮಾರರೂ ಭಕ್ತಿ ಮಾರ್ಗವನ್ನು ಅನುಸರಿಸಿ ಭಕ್ತಿ ಪಂಥದ ಪ್ರತಿಪಾದಕರಾದರು. ಹನ್ನೊಂದನೆಯ ಶತಮಾನದಲ್ಲಿ ರಾಮಾನುಜಾಚಾರ್ಯರಿಂದ ವಿಶಿಷ್ಟಾದ್ವೈತವೂ, ಹದಿಮೂರನೆಯ ಶತಮಾನದಲ್ಲಿ ಮಧ್ವಾಚಾರ್ಯರಿಂದ ದ್ವೈತ ಸಿದ್ಧಾಂತವೂ ಪ್ರತಿಪಾದಿಸಲ್ಪಟ್ಟು ಪ್ರಚಾರಕ್ಕೆ ಬಂದಿತು. ಉತ್ತರ ಭಾರತದ ಕಾಶ್ಮೀರದಲ್ಲಿ ಶೈವ ಸಿದ್ಧಾಂತವು ಅದ್ವೈತವಾದಕ್ಕೆ ಹೆಸರಾಗಿದ್ದಿತು. ತಮ್ಮ ಧರ್ಮದ ಭದ್ರತೆಗೆ ತಾತ್ತ್ವಿಕ ನೆಲೆಗಟ್ಟನ್ನು ಹಾಕುವ ಕಾರ್ಯದಲ್ಲಿ ಮಗ್ನರಾಗಿದ್ದ ಶರಣರು ಅವೆಲ್ಲ ಸಿದ್ಧಾಂತಗಳ ವಿವರಗಳನ್ನು ಬಲ್ಲವರಾಗಿದ್ದರು. ಶೈವ ಧರ್ಮದ ವಿವಿಧ ಶಾಖೆಗಳಲ್ಲಿ ವ್ಯಕ್ತವಾಗಿದ್ದ ಶಿವ, ಶಕ್ತಿ, ಸೃಷ್ಟಿ, ಕರ್ಮ, ಮೋಕ್ಷ ಮುಂತಾದ ಪ್ರಮುಖ ಭಾವಗಳನ್ನೂ, ಅವುಗಳಲ್ಲಿನ ಮುಖ್ಯಲಕ್ಷಣಗಳನ್ನು ವಿಮರ್ಶಿಸಿ ತಮ್ಮದೇ ಆದ ಶಕ್ತಿ ವಿಶಿಷ್ಟಾದ್ವೈತವನ್ನು ಪ್ರಚಾರದಲ್ಲಿ ತಂದರು.'೧ ಹೀಗೆ ಅನೇಕ ರೀತಿಯ ತತ್ವಗಳು ಸೇರಿಕೊಂಡರು ಇವರ ವಿವೇಚನೆ ಸ್ವತಂತ್ರವಾಗಿ ಬೆಳೆಯಿತು.

ಶರಣ ಧರ್ಮದ ತತ್ವ ವಿವೇಚನೆಯ ಅನ್ವಯ ಶಕ್ತಿಯು ಸ್ಥೂಲ-ಸೂಕ್ಷ್ಮಗಳೆಂಬ ಎರಡು ಪ್ರಕಾರವಾಗಿದ್ದೂ ; ಅದು ಜೀವ-ಶಿವರನ್ನು ಸಾಂಕೇತಿಸುತ್ತದೆ. ಜೀವ ಮತ್ತು ಶಿವರ ಸಾಮರಸ್ಯವಾಗುವ ವಿಶಿಷ್ಟ ತತ್ವವೇ ಶಕ್ತಿ ವಿಶಿಷ್ಟಾದ್ವೈತ. ಜೀವ-ಶಿವರಲ್ಲಿ ಕಂಡುಬರುವ 'ಶಕ್ತಿ'ಯೇ ಶಿವ ಸ್ವರೂಪವಾಗಿದ್ದು ; ಶಿವನಿಂದ ಶಕ್ತಿ ಭಿನ್ನವಾಗಿಲ್ಲ. ಅವೆರಡು ಒಂದೆಂಬುದನ್ನು ಈ ಪರಿಸರದ ಶರಣರು ಗ್ರಹಿಸಿದ್ದಾರೆ. ಜಗತ್ತನ್ನು ಬಿಟ್ಟು ಅವುಗಳಿಲ್ಲ ಎಂಬ ವಾಸ್ತವಿಕ ಅರಿವು ಕೂಡ ಶರಣರಿಗಿದೆ. ಆ ಕಾರಣದಿಂದಲೇ ಢಕ್ಕೆಯ ಮಾರಯ್ಯ ತಮ್ಮ ವಚನದಲ್ಲಿ ಶಕ್ತಿಯು ಶಿವನಲ್ಲಿಯೇ ಇರುವಂತಹದ್ದು ಎಂದಿದ್ದಾರೆ. ೨

---

೧ : ಡಾ : ಹಿರೇಮಲ್ಲೂರು ಈಶ್ವರನ್ - ಲಿಂ.ಧ.ಅ.-ಪುಟ೧೨೩

೨ : ಸಂ: ಡಾ: ಎಸ್.ವಿದ್ಯಾಶಂಕರ -ಸ.ವ.ಸಂ. ೭, ವಚನ ೬೯, ಪುಟ ೩೦೪

ಡಾ : ಹಿರೇಮಲ್ಲೂರು ಈಶ್ವರನ್ ' ಶಿವನಿಗೆ ಸೃಷ್ಟಿಯನ್ನು ನಿರ್ಮಿಸಬೇಕೆಂಬ ಇಚ್ಛೆಯುಂಟಾದಾಗ , ತನ್ನ ಲೀಲೆಗೆಂದು , ವಿನೋದಕ್ಕೆಂದು ಶಕ್ತಿಯನ್ನೊಳಗೊಂಡ ಪಂಚಭೂತಗಳನ್ನು ಸೃಷ್ಟಿಸಿದನು. ಅವುಗಳ ವಿಕಸನದ ದಾರಿಯಲ್ಲಿ ಕಾಣಿಸಿಕೊಂಡ ವ್ಯಕ್ತಿಯೂ , ಅವನು ಕಟ್ಟಿದ ಸಮಾಜವೂ ಶಕ್ತಿ ವಿಶಿಷ್ಟಾದ್ವೈತ ದೃಷ್ಟಿಯಲ್ಲಿ , ಶಿವನ ವಿಶಿಷ್ಟ ಶಕ್ತಿಯ ಘಟಕಗಳೆ ಆಗಿವೆ. ಹೀಗೆ ಶಿವ-ಶಕ್ತಿಯ ಅನ್ಯೋನ್ಯ ವಿಶಿಷ್ಟ ಸಂಬಂಧವನ್ನು ಶಕ್ತಿ ವಿಶಿಷ್ಟಾದ್ವೈತವು ಸೂಚಿಸುತ್ತದೆ. '[1]ಎಂಬ ಅಭಿಪ್ರಾಯ ಸ್ವೀಕಾರಾರ್ಹವಾಗಿದೆ. ಹೀಗಾಗಿ ಮಾರಿಯನ್ನು ಢಕ್ಕೆಯ ಮಾರಯ್ಯ ತನ್ನ ವಚನದಲ್ಲಿ ಬಳಸಿಕೊಂಡದ್ದು ಶರಣರ ತಾತ್ವಿಕ ವಿವೇಚನೆಗೆ ವಿರೋಧವಲ್ಲವೆಂಬುದು ಸ್ಪಷ್ಟವಾಗುತ್ತದೆ.

ಸರ್ವರಲ್ಲಿಯೂ ಶಿವನ ಚೈತನ್ಯವನ್ನು ಕಂಡ ಶರಣರಿಗೆ ಇಹದಲ್ಲಿದ್ದೇ ವ್ಯಕ್ತಿ ಶಿವತ್ವವನ್ನು ಪಡೆಯುವುದು ಸಾಧ್ಯವೆಂದು ಪ್ರತಿಪಾದಿಸಿದ್ದಾರೆ. ಶರಣರು ಕಂಡ ಶಿವ ನಿರಾಕಾರವಾಗಿದ್ದರೂ ಅರಿವಿಗೆ ಕುರುಹು ಅವಶ್ಯಕವೆಂದರಿತು ಇಷ್ಟ ಲಿಂಗದ ಪರಿಕಲ್ಪನೆಗೆ ಒತ್ತು ನೀಡಿದರು. ಸೃಷ್ಟಿಯ ಮೂಲ ಶಿವನೆಂಬುದನ್ನು ಶರಣರು ಒಪ್ಪಿದರೂ ಅದರ ಹಿಂದಿರುವ ಮೌಢ್ಯತೆ ಒಪ್ಪದೆ ಮನುಷ್ಯ ಮಹತ್ವವನ್ನು ತಿಳಿಸುತ್ತಾರೆ. ಇಷ್ಟ ಲಿಂಗದ ಮೂಲಕವೇ ವ್ಯಕ್ತಿ -ಶಕ್ತಿಯಾಗಿ - ಶಿವನಾಗಿ ವಿಕಾಸ ಹೊಂದಬಹುದೆಂಬ ವಿಶಿಷ್ಟವಾದ ತತ್ವದ ಪರಿಕಲ್ಪನೆಯನ್ನು ಸ್ಪಷ್ಟಪಡಿಸಲು ನಿರೂಪಿಸಿದ್ಧ ತತ್ವವೇ ಶಕ್ತಿ ವಿಶಿಷ್ಟಾದ್ವೈತವಾಗಿದೆ.

' ಶಿವ ಶಕ್ತಿಯರ ಪರಿಪೂರ್ಣವಾದ ಸಾಮರಸ್ಯವನ್ನು ಪ್ರತಿಪಾದಿಸುತ್ತದೆ. ಆದುದರಿಂದ ಈ ಸಿದ್ಧಾಂತವು ಪ್ರಕೃತಿ, ಪುರುಷ, ಪರಾಪ್ರಕೃತಿ , ಪರಬ್ರಹ್ಮ ನಾಲ್ಕು ತತ್ವಗಳನ್ನು ಒಪ್ಪುತ್ತದೆ' [2] ಡಾ : ಶೈಲಜಾ ಉಡಚಣರು ಉಲ್ಲೇಖಿಸುವ ಕುಮಾರಸ್ವಾಮಿಗಳ ಈ ಮಾತುಗಳು ಗಮನಾರ್ಹವಾಗಿವೆ.

ಜೀವಾತ್ಮ ತನ್ನ ಸಾಧನೆಗಳ ಮೂಲಕ ಪರಮಾತ್ಮವಾಗುವಲ್ಲಿ ತನ್ನ ಜೀವಾತ್ಮವನ್ನು ನಾಶಗೋಳಿಸುವಲ್ಲಿ ಶರಣರು ಸರ್ವರಿಗೂ ತೋರಿಸಿದ ತತ್ವವೇ ಶಕ್ತಿ ವಿಶಿಷ್ಟಾದ್ವೈತವಾಗಿದೆ. ಈ ಸಾಧನೆಯ ಸಾಧಿಸಲು ವ್ಯಕ್ತಿ ಶರಣರು ಸೂಚಿಸಿದ ಮೂರು ಮೆಟ್ಟಿಲುಗಳನ್ನು ಹತ್ತಬೇಕಾದುದು ಅವಶ್ಯಕ. ಆ ಮೆಟ್ಟಿಲುಗಳೇ ಅಷ್ಟಾವರಣ, ಷಟಸ್ಥಲ, ಪಂಚಾಚಾರಗಳಾಗಿವೆ.

೨) ಅಷ್ಟಾವರಣ

ಸಾಧನಕನೊಬ್ಬನು ತಾನು ಕಂಡು ಕೊಳ್ಳುವ ಸಾಧನೆಯ ಹಾದಿಯಲ್ಲಿ ಶ್ರದ್ಧೆ - ಏಕಾಗ್ರತೆ ಸಾಧಿಸಲು ಅಗತ್ಯವಾದ ಎಂಟು ತತ್ವಗಳೇ ಅಷ್ಟಾವರಣಗಳಾಗಿವೆ. ಅವುಗಳೆಂದರೆ :

೧) ಗುರು ೨) ಲಿಂಗ ೩) ಜಂಗಮ ೪)ಪಾದೋದಕ ೫) ಪ್ರಸಾದ ೬) ವಿಭೂತಿ ೭) ರುದ್ರಾಕ್ಷಿ ೮) ಮಂತ್ರ

೧) ಗುರು : ಭಾರತೀಯ ಧಾರ್ಮಿಕ ಚರಿತ್ರೆಯಲ್ಲಿಯೇ ಗುರುವಿಗೆ ಯಾವಾಗಲೂ ಉನ್ನತ ಸ್ಥಾನವಿದೆ. ದೇವರಿಗಿಂತ ಗುರು ಶ್ರೇಷ್ಠರೆಂಬ ನಂಬಿಗೆ ನಮ್ಮಲ್ಲಿದೆ. ಶರಣ ಧರ್ಮದಲ್ಲಿ ವ್ಯಕ್ತಿಗೆ ದೀಕ್ಷೆಯನ್ನಿತ್ತು , ಅವನ ಧಾರ್ಮಿಕ ಸಾಧನೆಗೆ , ಅಭ್ಯುದಯಕ್ಕೆ ಕಾರಣವಾಗಬಲ್ಲ ಮಾರ್ಗದರ್ಶಿಯೇ ಗುರುವಾಗಿದ್ದಾನೆ. ಇಂದಿನ ಪರಿಸ್ಥಿತಿಯಲ್ಲಿ ಗುರುವೆಂಬುದು ವ್ಯಕ್ತಿ ವಾಚಕವಾಗಿ, ವರ್ಗವಾಗಿ, ಶೋಷಣೆಯ ಮೂಲವಾಗಿದೆ. ವೈದಿಕ ಶಾಹಿಯ ಪುರೋಹಿತನ ಸ್ಥಾನವನ್ನು ಗುರು ಆಕ್ರಮಿಸಿದ್ದಾನೆ. ಹುಟ್ಟಿನಿಂದ, ಜಾತಿಯಿಂದ ಗುರುತ್ವ ಬೆಳೆದು ಬರುವ ನಿರಂತರ ಅಪಾಯಗಳು ಸಂಭವಿಸುತ್ತವೆ. ಆದರೆ ಶರಣರ ಪ್ರಕಾರ ಗುರು ಜಾತ್ಯಾತೀತ, ವಂಶಾತೀತನೇ ಹೊರತು ಶೋಷಿತ ವ್ಯವಸ್ಥೆಯ ಸೂತ್ರಧಾರನಲ್ಲ.

ಗುರುವನ್ನು ಕುರಿತು ಢಕ್ಕೆಯ ಮಾರಯ್ಯರ ವಿಚಾರಗಳು ಹೀಗಿವೆ : ಅವರ ಪ್ರಕಾರ ಗುರುವೆಂದರೆ -ಭಾವ ಶುದ್ಧತೆಯಿಂದ ಕೂಡಿದಾದತನು.[3] ಅಂತೆಯೇ ಆ ಗುರು ಪೂಜೆಯಲ್ಲಿ ಅಹಂಕಾರವನ್ನು ಬಿಡುವ ಜೊತೆಗೆ ಗುರುವಾದರೂ ಅಹಂಕಾರವನ್ನು ಅಳಿದಿರಬೇಕೆಂಬುದನ್ನು ಹೇಳುತ್ತಾರೆ.[4] ಹಾಗೆಯೇ ಗುರುವಿಗೆ ಬೇಡುವ ಸ್ಥಿತಿಯನ್ನು ಖಂಡಿಸುತ್ತಾರೆ[5] ಗುರುವಿನಲ್ಲಿ ಸ್ತುತಿ-ನಿಂದೆಗಳನ್ನು ವಿಚಾರಿಸದೆ[6] ಗುರುವಿಗೆ ತನು ಕೊಟ್ಟು ನಿರ್ಮುಕ್ತನಾಗಿರಬೇಕೆಂದು ಹೇಳುತ್ತಾರೆ. [7]

---

೧ : ಡಾ : ಹಿರೇಮಲ್ಲೂರು ಈಶ್ವರನ್ -ಲಿಂ. ಧ. ಅ.-ಪುಟ೧೨೪,

೨ : ಡಾ : ಶೈಲಜಾ ಉಡಚಣ - ವ.ಸಾ.ಮ.-ಪುಟ೧೭

೩ : ಸಂ : ಡಾ :ಎಸ್. ವಿದ್ಯಾಶಂಕರ -ಸ.ವ.ಸಂ. -೭, ವಚನ೪೬, ಪುಟ ೨೯೭

೪ : ಅದೇ : ವಚನ೧೦, ಪುಟ ೨೮೫

೫ : ಅದೇ : ವಚನ ೩೬, ಪುಟ ೨೯೪

೬ : ಅದೇ : ವಚನ ೬೨, ಪುಟ ೩೦೨

೭ : ಅದೇ : ವಚನ ೨೨, ಪುಟ ೨೯೦

ಗುರುವಾದರೂ ವ್ಯಕ್ತಿಯ ಭಾವನೆಗಳಿಗೂ ಸ್ಪಂದಿಸಿ ಅವರನ್ನು ಸಂತೈಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾನೆಂಬ ಆಶಯವನ್ನು ನಾವು ಮುಕ್ತಾಯಕ್ಕನ 'ಎನ್ನ ಭಾವಕ್ಕೆ ಗುರುವಾದನಯ್ಯ ಬಸವಣ್ಣನು' ೧ ಎಂಬಲ್ಲಿ ಗಮನಿಸಬಹುದು. ಗುರುವಿನ ಮಹತ್ವ ಎಷ್ಟಿದೆ, ಗುರುವಿನ ಸ್ವರೂಪ ಎಂತಹದೆಂಬುದಕ್ಕೆ ಮುಕ್ತಾಯಕ್ಕ ಲಿಂಗ, ಜಂಗಮ, ಪ್ರಸಾದ ಇದೆಲ್ಲವನ್ನು ಅರಿಯಲು; ಅವುಗಳ ನೈಜಾರ್ಥ ತಿಳಿಯಲು ಗುರು ಅವಶ್ಯಕವೆಂದು ಹೇಳುತ್ತಾರೆ. ೨ ಗುರುವಿನ ಬಗ್ಗೆ ಆಕೆಯ ನಿಲುವು ಆತ ಜ್ಞಾನ ಮೂಲವೆಂಬುದಾಗಿದೆ.೩

ತಾನೇ ಸ್ವಯಂ ಗುರುವಾಗುವಷ್ಟು ಅರ್ಹತೆ ಪಡೆದಿದ್ದ ಅಜಗಣ್ಣರು ಗುರುವಿನ ಬಗ್ಗೆ ಬಹು ಗೌರವ ಭಾವನೆ ಹೊಂದಿದ್ದರು.

ಅಂಗದಾಶ್ರಯವ ಕಳೆದು ಲಿಂಗದಾಶ್ರಯವ ಮಾಡಿದ

ಗುರುವೇ ಶರಣು ಶ್ರೀ ಗುರುಲಿಂಗವೆ ಶರಣು

ಪರಮ ಸುಖ ತೋರಿದೆಯಾಗಿ

ಮಹಾಘನ ಸೋಮೇಶ್ವರನ ಸಾಹಿತ್ಯವ ಮಾಡಿ

ನಿಜ ನಿವಾಸದಲ್ಲಿರಿಸಿದೆಯಾಗಿ ಗುರುವೆ ಶರಣು ೪- ಈ ವಚನದಲ್ಲಿ ಅಜಗಣ್ಣರು ಗುರುವಾದಾತನು ವ್ಯಕ್ತಿಯ ಭವವನ್ನು ನಾಶಗೊಳಿಸಿ ಆತನಲ್ಲಿ ಪರವಸ್ತುವಿನ ಬಗ್ಗೆ ಜ್ಞಾನವನ್ನು ಮೂಡಿಸುವ ಶ್ರೇಷ್ಠ ಮಾರ್ಗದರ್ಶಕನಾಗಿದ್ದಾನೆ. ಶಿವತತ್ವವನ್ನೇ ಸಾಹಿತ್ಯದ ಸೂತ್ರವಾಗಿ ಮಾಡಿ ಅದನ್ನೇ ಬದುಕಿನ ಪರಮ ಮೌಲ್ಯದ ಮೆಟ್ಟಿಲಿಗೆ ಶ್ರೇಷ್ಠ ವಾಹಕವೆಂಬುದನ್ನು ತಿಳಿಸಿ ಕೊಡುವಾತ ಗುರುವಾಗಿದ್ದಾನೆ. ಆದುದರಿಂದ ಆತ ವ್ಯಕ್ತಿಯ ಅಂಗದಾಶ್ರಯ ತೊಲಗಿಸಿ ಲಿಂಗದಾಶ್ರಯ ಮಾಡಿಸುತ್ತಾನೆಂಬ ಪ್ರಮುಖ ತತ್ವ ತಿಳಿಸಿ ಕೊಡುತ್ತಾರೆ. ಅಂತೆಯೇ ಅಂತಹ ಗುರುವಿನ ಉಪದೇಶ ಎಂತಹದು ಎಂಬುದಕ್ಕೆ ಹೀಗೆ ಹೇಳುತ್ತಾರೆ:

ಇನನ ಕಂಡ ತಮದಂತಾಯಿತ್ತೆನ್ನ ಗುರುವಿನುಪದೇಶ

ವಾಯುವಿನ ಕೈ ಸೊಡರಿನಂತಾಯಿತ್ತೆನ್ನ ಗುರುವಿನುಪದೇಶ

ಉರಿಯ ಮುಖದೊಳಗಿಪ್ಪ ಕರ್ಪುರದಂತಾಯಿತ್ತೆನ್ನ ಗುರುವಿನುಪದೇಶ

ಮಹಾಘನ ಸೌರಾಷ್ಟ್ರ ಸೋಮೇಶ್ವರನ

ಸದ್ಗುರು ವೆನ್ನ ಕರಸ್ಥಲಕ್ಕೆ ಕೃಪೆ ಮಾಡಿದ ಕಾರಣ

ಸಕಲ ಪ್ರಪಂಚ ಬಿಟ್ಟೋಡಿತ್ತು ೫ - ಇಂತಹ ಗುರುವಿನ ಉಪದೇಶದ ಮಹಿಮೆಯಿಂದ ತಾನು ಶರಣ ಸಂಗಸುಖವನ್ನು ಅನುಭವಿಸಲು ಸಾಧ್ಯವಾಯಿತೆಂಬುದನ್ನು ಅಜಗಣ್ಣ ಹೇಳುತ್ತಾರೆ. ೬

ಹೀಗೆ ಗುರು ಶರಣರ ದೃಷ್ಟಿಯಲ್ಲಿ ವಿಶಾಲ ಮನೋಧರ್ಮವುಳ್ಳವರಾಗಿದ್ದಾರೆ. ಗುರುವಿನ ಸ್ಥಾನ ವಂಶಪರಂಪರೆಯಿಂದ ಬರುವುದಿಲ್ಲ. ಅರ್ಹತೆಯಿಂದ, ಜ್ಞಾನದ ಉನ್ನತೀಕರಣದಿಂದ ಗುರುವಿನ ಸ್ಥಾನ ನಿರ್ಧಾರಿತವಾಗುತ್ತದೆ. ಜ್ಞಾನ ಹೀನ ಗುರುವನ್ನು ಶಿಷ್ಯನು ಒಪ್ಪುವುದಿಲ್ಲ; ಅಂತೆಯೇ ಆಚಾರವಿಲ್ಲದ ಶಿಷ್ಯನನ್ನು ಗುರು ಸ್ವೀಕರಿಸಲಾರನು. ಗುರು -ಶಿಷ್ಯ ರೆಂಬ ಭಿನ್ನತೆ ಶರಣ ಧರ್ಮದಲ್ಲಿಲ್ಲ . ಇಬ್ಬರಿಗೂ ಆಚಾರ -ವಿಚಾರಗಳು ಒಂದೇ ಆಗಿವೆ. ಗುರುವಾದರೂ ಕಾಯಕ ಮಾಡಬೇಕು. ವೈದಿಕ ಶಾಹಿ ಗುರು ಪರಂಪರೆಯಂತೆ ಸೋಮಾರಿಯಾಗಿ ಕುಳಿತು ತಿನ್ನುವ ಅಧಿಕಾರ ಆತನಿಗಿಲ್ಲ ಎಂಬುದನ್ನು ನಾವು ಈ ಪರಿಸರದ ಶರಣರ ತತ್ವ ವಿವೇಚನೆ ಸಂದರ್ಭದಲ್ಲಿ ಗಮನಿಸುತ್ತೇವೆ. ಹಾಗೆಯೇ ಪ್ರತಿಯೊಬ್ಬರು ಅಂತಹ ಗುರುವಿನ ಸ್ಥಾನ ಪಡೆಯಲು ಸಾಧ್ಯವಿದೆವೆಂಬ ವಾಸ್ತವಿಕ ವಿಚಾರವನ್ನು ಮುಕ್ತಾಯಕ್ತ ಹೇಳುತ್ತಾ 'ತನ್ನ ತಾನರಿದವಂಗೆ ಅರಿವೆ ಗುರು' ೭ ಎನ್ನುತ್ತಾರೆ.

೧: ಸಂ: ಡಾ: ವೀರಣ್ಣ ರಾಜೂರು -ಸ.ವ.ಸಂ. -೫ , ವಚನ ೧೦, ಪುಟ ೨೭೩

೨: ಅದೇ: ವಚನ ೧೫, ಪುಟ ೨೭೫

೩: ಅದೇ: ವಚನ ೧೮, ಪುಟ ೨೭೬

೪: ಸಂ: ಡಾ: ಎಂ.ಎಂ. ಕಲಬುರ್ಗಿ -ಸ.ವ.ಸಂ-೬, ವಚನ ೨, ಪುಟ೯೯

೫: ಅದೇ: ವಚನ ೬, ಪುಟ೯೯

೬: ಅದೇ: ವಚನ ೭, ಪುಟ ೧೦೦

೭: ಸಂ: ಡಾ: ವೀರಣ್ಣ ರಾಜೂರು -ಸ.ವ.ಸಂ. -೫ , ವಚನ೯ , ಪುಟ ೨೭೬

೨) ಲಿಂಗ: ಸಾಧಕನು ಅಂತರಾತ್ಮವನ್ನು ಅರಿಯಲು ಸಾಧನೆಯ ಹಂತದಲ್ಲಿ ಬಳಸುವ ಚೈತನ್ಯದ ಕುರುಹು ಲಿಂಗ. ಇದನ್ನೇ ಶರಣರು ಇಷ್ಟಲಿಂಗವೆಂದು ಕರೆದರು. ಶರಣರು ಕೊಟ್ಟ ಮೊದಲ ಪರಿಕಲ್ಪನೆ ಇದಾಗಿದೆ. ಬಸವ ಯುಗದಲ್ಲಿ ಮೂಡಿ ಬಂದ ಈ ಪರಿಕಲ್ಪನೆ ಮುಂದೆ ಬಸವಪೂರ್ವ ಯುಗದ ಶರಣರ ಮನವನ್ನು ಪರಿವರ್ತಿಸಿತು. ಸ್ಥಾವರ ನಿಷ್ಠವಾದ ಶಿವನ ವಿವಿಧ ರೂಪಗಳನ್ನು ಆರಾಧಿಸುತ್ತಿದ್ದ ಶಂಕರ ದಾಸಿಮಯ್ಯ, ಢಕ್ಕೆಯ ಮಾರಯ್ಯರಂತ ಶರಣರು ಮುಂದೆ ಪರಿವರ್ತನೆಗೊಂಡು ಇಷ್ಟಲಿಂಗಧಾರಿಗಳಾದರೆಂಬುದು ನಮಗೆ ಅವರ ವಚನಗಳಿಂದಲೇ ತಿಳಿಯುತ್ತದೆ. ಲಿಂಗದ ಬಗ್ಗೆ ಈ ಯುಗದ ಶರಣರು ಪ್ರಜ್ಞಾಪೂರ್ವಕ ನಿಲುವುಗಳನ್ನು ಅಭಿವ್ಯಕ್ತಿಸಿದ್ದಾರೆ.

ಅನ್ನ-ನಿದ್ರೆ-ರತಿಸುಖದಷ್ಟೇ ಲಿಂಗ ಸುಖ ತೀವ್ರತೆರವಾಗಿದ್ದಾಗ ಮಾತ್ರ ಅಂತಹ ಸಾಧಕ ತನ್ನ ತಾತ್ವಿಕತೆಯ ಗುರಿ ಮುಟ್ಟಲು ಸಾಧ್ಯವೆಂಬ ಅಭಿಪ್ರಾಯ ಸುಂಕದ ಬಂಕಣ್ಣರವರದಾಗಿದೆ. ೧ ಶಂಕರ ದಾಸಿಮಯ್ಯ ಆರಂಭದಲ್ಲಿ ಜಡೆಯಶಂಕರಲಿಂಗ ಭಕ್ತನಾಗಿದ್ದರು. ಮುಂದೆ ಆಸ್ಥಾವರ ಲಿಂಗವನ್ನು ಬಿಟ್ಟು ಕಲ್ಯಾಣ ಶರಣರ ಸಂಪರ್ಕದಿಂದ ಇಷ್ಟಲಿಂಗದ ಮಹತ್ವ ಅರಿತುಕೊಂಡಾಗ ಅವರು ಅಭಿವ್ಯಕ್ತಿಸಿದ್ದು ಹೀಗೆ: 'ಭವನಾಶವಲ್ಲದೆ ಲಿಂಗ ಸಂಬಂಧವಳವಡದು ಲಿಂಗಸಂಬಂಧ ವಳವಟ್ಟಲ್ಲದೆ ಸುಖವು ಸಾಧ್ಯವಾಗದು.' ೨ ಅಂಗಕ್ಕೆ ಲಿಂಗಸಂಬಂಧವಾಗಿ ಅದು ಅರಿವು, ದೃಡತೆ ಪಡೆದು ಕೊಂಡಾಗ ಅಂತಹ ಸಾಧಕನಿಗೆ ತೃಪ್ತಿಯಾಗಿ ತನ್ನ ಅಂತರಾತ್ಮವನ್ನು ಅರಿಯಲು ಸಾಧ್ಯವೆನ್ನುತ್ತಾರೆ ಬಿಬ್ಬಿ ಬಾಚಯ್ಯನವರು ೩ ಕಟ್ಟಿಕೊಂಡ ಇಷ್ಟ ಲಿಂಗದ ಮೂಲಕ ಸಾಧಕ ಭಾವಲಿಂಗ, ಪ್ರಾಣಲಿಂಗ ಕೊನೆಗೆ ಶ್ರೇಷ್ಠವಾದ ಘನಲಿಂಗವನ್ನು ಪಡೆದುಕೊಳ್ಳಬಹುದಾಗಿದೆಂಬುದನ್ನು ಬಿಬ್ಬಿ ಬಾಚಯ್ಯ ಹೇಳುತ್ತಾರೆ. ೪- ಹಾಗೆಯೇ ಈ ಕುರುಹು ಅರಿಯುವ ತನಕ ಮಾತ್ರ ; ಅರಿದ ಬಳಿಕ ಕುರುಹು ಅವಶ್ಯಕವಿಲ್ಲವೆಂಬ ಪರಮಾಂತ್ಯ ಸತ್ಯವನ್ನು ತಿಳಿಸುತ್ತಾರೆ ೫

ಬಸವಪೂರ್ವಯುಗದ ಪುರದ ನಾಗಣ್ಣರು ಶೈವದ ಗುಂಗಿನಲ್ಲಿಯೇ ಇದ್ದವರು. ಮುಂದೆ ಬಸವಯುಗದ ಸಂಪರ್ಕ ಬಂದಾಗ ಅವರಿಗೆ ಇಷ್ಟಲಿಂಗ ಕಲ್ಪನೆ ಬಂದಿತು. ಲಿಂಗ ಭಿನ್ನವಾದರೆ ಜೀವವನ್ನು ತ್ಯಜಿಸುವುದು ಶೈವರ ಸಂಪ್ರದಾಯ. ಇದಕ್ಕಾಗಿ ಪ್ರಾಣ ಕೊಡುವುವರನ್ನು ಶರಣ ಧರ್ಮ ಖಂಡಿಸುತ್ತದೆ. ಇಂತಹ ಸ್ಥಿತಿಯ ಪುರದ ನಾಗಣ್ಣ ಮುಂದೆ ಬಸವ ಯುಗದಲ್ಲಿ ಬದಲಾದಾಗ ಲಿಂಗವನ್ನು ಆತ ಎಷ್ಟು ವಿಶಾಲ ಮನೋಭಾವನೆಯಿಂದ ಕಂಡು ಅದರ ಮಹತ್ವ ಅರಿತಿದ್ದಾನೆಂಬುದಕ್ಕೆ ಆತನು ಲಿಂಗದ ಸ್ವರೂಪದ ವೈವಿಧ್ಯವನ್ನು ಶರಣರಿಗೆ ಅನ್ವಯಿಸಿ ನೋಡಿ ಅದರ ಮಹತ್ವ ಅರಿತು ಹೀಗೆ ಹೇಳುತ್ತಾರೆ :

ಎನ್ನ ಘ್ರಾಣದಲ್ಲಿ ಆಚಾರ ಲಿಂಗವಾಗಿಬಂದು
ಗಂಧ ಪದಾರ್ಥವ ಕೈ ಕೊಂಡನಯ್ಯಾ ಬಸವಣ್ಣ
ಎನ್ನ ಜಿಹ್ವೆಯಲ್ಲಿ ಗುರುಲಿಂಗವಾಗಿಬಂದು
ರುಚಿ ಪದಾರ್ಥವ ಕೈಕೊಂಡನಯ್ಯಾ ಚೆನ್ನ ಬಸವಣ್ಣ
ಎನ್ನ ನೇತ್ರದಲ್ಲಿ ಶಿವ ಲಿಂಗವಾಗಿಬಂದು
ರೂಪ ಪದಾರ್ಥವ ಕೈ ಕೊಂಡನಯ್ಯಾ ಘಟ್ಟಿವಾಳ ಮುದ್ದಯ್ಯ
ಎನ್ನ ತ್ವಕ್ಕಿನಲ್ಲಿ ಜಂಗಮ ಲಿಂಗವಾಗಿಬಂದು
ಸ್ವರುಶನ ಪದಾರ್ಥವ ಕೈ ಕೊಂಡನಯ್ಯಾ ಸಿದ್ಧರಾಮಯ್ಯ
ಎನ್ನ ಶ್ರೋತ್ರದಲ್ಲಿ ಪ್ರಸಾದ ಲಿಂಗವಾಗಿಬಂದು
ಶಬ್ದ ಪದಾರ್ಥವ ಕೈ ಕೊಂಡನಯ್ಯಾ ಮರುಳ ಶಂಕರ ದೇವ
ಎನ್ನ ಹೃದಯದಲ್ಲಿ ಮಹಾ ಲಿಂಗವಾಗಿಬಂದು
ಸಕಲ ಪದಾರ್ಥವ ಕೈ ಕೊಂಡನಯ್ಯಾ ಪ್ರಭುದೇವ ೬

---

೧ : ಸಂ : ಡಾ : ಬಿ.ಆರ್. ಹಿರೇಮಠ-ಸ.ವ.ಸಂ.-೯, ವಚನ೧೦೩, ಪುಟ ೨೩೪

೨ : ಅದೇ : ವಚನ ೩, ಪುಟ ೫೪

೩ : ಸಂ : ಡಾ : ಬಿ.ಆರ್. ಹಿರೇಮಠ-ಸ.ವ.ಸಂ.- ೮ , ವಚನ ೪, ಪುಟ ೧೧೮-೧೧೯

೪ : ಅದೇ : ವಚನ ೭, ಪುಟ ೧೧೯

೫ : ಅದೇ : ವಚನ೯ , ಪುಟ ೧೨೦

೬ : ಅದೇ : ವಚನ ೨, ಪುಟ ೨

'ಐಶ್ವರ್ಯ ಮೂಲ ಲಿಂಗಾರ್ಚನೆಎಂಬೆನು' ೧. ಎಂಬುದು ಮುಕ್ತಾಯಕ್ಕನ ನಿಲುವು, ಆಕೆಯ ದೃಷ್ಟಿಯಲ್ಲಿ 'ಸಾಕಾರವಿಲ್ಲದ ಲಿಂಗವು ವ್ಯಾಕುಲವುಳ್ಳನ್ನಕ್ಕರ ಸಾಧ್ಯವಾಗದು' . ೨. ಎಂಬುದನ್ನು ಗಮನಿಸಿದಾಗ ಮನುಷ್ಯತ್ವದ ಪ್ರೀತಿಯೇ ದೈವತ್ವದ ಪ್ರೀತಿಗೆ ಸೋಪಾನವೆಂಬ ಹೃದಯ ವೈಶಾಲ್ಯದ ಗುಣದ ಮೂಲಕ ತತ್ವ ವಿವೇಚನೆಗೆ ತೊಡಗಿದ್ದು ಆಕೆಯ ವೈಶಿಷ್ಟ್ಯತೆಯಾಗಿದೆ.

ಲಿಂಗ ಸಂಗಿಗಳು ಮಾತ್ರ ಶಿವ ರಹಸ್ಯವನ್ನು ಅರಿಯುವರೇ ಹೊರತು ಅನಂಗ ಸಂಗಿಗಳಲ್ಲವೆಂಬ ವಿಚಾರವನ್ನು ಆಯ್ದಕ್ಕಿ ಮಾರಯ್ಯ ವ್ಯಕ್ತ ಪಡಿಸುತ್ತಾರೆ. ೩. ಢಕ್ಕೆಯ ಮಾರಯ್ಯನವರು ಲಿಂಗವನ್ನು ಕುರಿತು ಹೇಳಿರುವ ಅಭಿಪ್ರಾಯ ನೋಡಿದರೆ ಅವರ ಮುಂಚಿನ ಮನೋಧೋರಣೆ ಎಷ್ಟು ಬೇಗ ಬದಲಾಗಿ ಬಸವ ಯುಗದ ತಾತ್ವಿಕ ಚಿಂತನೆಗೆ ಮತ್ತಷ್ಟು ಪ್ರಖರತೆಯ ಅಭಿಪ್ರಾಯ ಸಮ್ಮಿಳಿತಗೊಳಿಸಿದ್ದನ್ನು ಕಾಣಬಹುದಾಗಿದೆ. 'ಅಂಗವುಂಟಾದಲ್ಲಿ ಲಿಂಗವನರಿಯಬೇಕು, ಲಿಂಗವುಂಟಾದಲ್ಲಿ ಸರ್ವ ಚೇತನ ಭೂತಹಿತವನರಿಯಬೇಕು.'೪. ಎಂದೇಳಿ ಲಿಂಗ ಸ್ಥಲ ಮೂರಾಗಿ ಪ್ರಾಣಲಿಂಗ ಸ್ಥಲ ಎರಡಾಗಿದ್ದರೂ ಕೊನೆಗೆ ಅದು ಒಂದಾಯಿತೆಂಬ ಶೂನ್ಯ ತತ್ವವನ್ನೇ ಅವರು ಸಶಕ್ತವಾಗಿ ಅಭಿವ್ಯಕ್ತಿಸಿದ್ದನ್ನು ನಾವು ಇಲ್ಲಿ ಗಮನಿಸಬಹುದಾಗಿದೆ. ೫. ಆ ಕಾರಣ ಲಿಂಗಕ್ಕೆ ಮನವನ್ನು ಅರ್ಪಿಸಿ ನಿರ್ಮುಕ್ತನಾಗಿರಬೇಕೆಂದು ಹೇಳುತ್ತಾರೆ.೬.

ಹೀಗೆ ಈ ಪರಿಸರದ ಶರಣರು ಪರಮನ ಕುರುಹಾದ ಲಿಂಗವನ್ನು ತಮ್ಮ ದೇ ಆದ ಭಿನ್ನ ಭಿನ್ನ ಆಲೋಚನೆಯ ನೆಲೆಯಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇಷ್ಟಲಿಂಗವನ್ನು ಬಿಟ್ಟು ಸ್ಥಾವರ ಲಿಂಗವನ್ನು ಪೂಜಿಸುವುದು ಶರಣ ಧರ್ಮದ ವಿರೋಧಿಯಾಗುತ್ತದೆ. ಆದರೆ ಈ ಲಿಂಗ ಪರಿಕಲ್ಪನೆ ದಿನಗಳೆದಂತೆ ಬೇರೊಂದು ಸ್ವರೂಪ ಪಡೆಯುತ್ತಿದೆ. ಅಂತಹ ಒಂದು ಅವ್ಯವಸ್ಥಿತ ಚಿತ್ರವನ್ನು ಕುರಿತು ಪ್ರೊ : ಸಿದ್ದಣ್ಣ ಲಂಗೋಟಿ ಹೀಗೆ ಹೇಳುತ್ತಾರೆ. ' ವೈದಿಕ ಧರ್ಮದ ಶೋಷಣಾರೂಪೀ ಗುಡಿ - ಗುಂಡಾರಗಳ ಪೂಜೆ , ಧರ್ಮ ವ್ಯವಸ್ಥೆ ತಪ್ಪಿಸಿದ ಶರಣ ಧರ್ಮದಲ್ಲಿ ಲಿಂಗವಂತ ಧರ್ಮದ ಗುರುಗಳೆಂದು ಕರೆಸಿ ಕೊಳ್ಳುವ , ಜಾತಿಯ ಗುರುತ್ವ ಒಪ್ಪುವ ಗುರುಗಳೆಂಬ ವರ್ಗವು ವೇದ ಮೂರ್ತಿಗಳೆಂದು ಕರೆದು ಕೊಂಡು ಬ್ರಾಹ್ಮಣಿಕೆಯನ್ನು ಮುಂದುವರೆಸಿ ಕೊಂಡು ಬರುವುದಲ್ಲದೇ , ಪಂಚಾಂಗ- ಜ್ಯೋತಿಷ್ಯಾದಿ ಕರ್ಮಠತನವನ್ನು ಬೆಳೆಸಿ ಕೊಂಡು ಮುಗ್ಧ - ಅಜ್ಞ ಲಿಂಗವಂತರ ಶೋಷಣೆ ಮಾಡುತ್ತಿರುವುದು ಸೂರ್ಯ ಪ್ರಕಾಶದಷ್ಟು ನಿಚ್ಚಳವಾಗಿದೆ. ' ಕೆಮ್ಮುವುದು ಕೊಟ್ಟು ಗುದ್ದುವದು ತೆಗೆದು ಕೊಂಡರು. ' ಎಂಬ ಗಾದೆಯಂತೆ ಸ್ಥಾವರ ಲಿಂಗ ಉಪಾಸನೆ ತೊರೆದು ಮಠಗಳಲ್ಲಿಯ ಗದ್ದುಗೆ ಲಿಂಗ, ಆ ಗದ್ದುಗೆಗಳಿಗೆ ಸಹಸ್ರಾರು ರೂಪಾಯಿಗಳನ್ನು ಶೋಷಿಸಿ ಮಾಡಿಸುವ ರುದ್ರಾಭಿಷೇಕಾದಿ ಕ್ರಿಯೆಗಳು , ಪೂಜಾರಿ ಪೌರೋಹಿತ್ಯದ ವಿಕೃತ ವ್ಯವಸ್ಥೆಯಲ್ಲಿ ಜಾರಿಯಲ್ಲಿ ಬಂದಿದೆ.೭ . ಲಂಗೋಟಿಯವರ ಮಾತುಗಳು ಇಂದಿನ ದಿನ ಚಿಂತನಾರ್ಹವಾಗಿವೆ. ಶರಣರಿಗಿಂತ ಅವರ ತತ್ವಗಳಿಗಿಂತ ಇಂದಿನ ಸ್ವಾಮಿಗಳಿಗೆ ತಮ್ಮ ಪೂರ್ವದ ಗುರುಗಳ ಗದ್ದುಗೆಗಳೆ ಬಹು ಮುಖ್ಯವಾಗಿವೆ. ಆ ಮೂಲಕ ಮತ್ತೇ ಸ್ಥಾವರ ಪೂಜೆ ಬೇರೊಂದು ರೀತಿಯಲ್ಲಿ ಆರಂಭವಾಗಿದೆ.

೩) ಜಂಗಮ : ಧರ್ಮ ಪ್ರಚಾರಕ್ಕೆಂದು ಮೀಸಲಾಗಿದ್ದು ಕೊಂಡು ಇಡೀ ಸಮಾಜವನ್ನೆ ಚಲನಶೀಲವೆಂದು ಭಾವಿಸಿ ಅದರ ಸೇವೆ ಮಾಡುವ ಸೇವಕ ವರ್ಗದ ಸದಸ್ಯನೇ ಜಂಗಮನು. ಸರ್ವ ಸಂಗ ಪರಿತ್ಯಾಗಿಯಾದ ಇವನು ಸಮಾಜಕ್ಕೆ ತನ್ನನ್ನು ಅರ್ಪಿಸಿಕೊಂಡಿದ್ದಾನೆ. ಶರಣರ ಪರಿಕಲ್ಪನೆಯ ದೃಷ್ಟಿಯಲ್ಲಿ ಅರಿವು - ಆಚಾರಗಳನ್ನು ಅರ್ಥೈಸಿ ಕೊಂಡು ಸರ್ವರ ಏಳಿಗೆಗೆ ಶ್ರಮಿಸುವ ಸಂಘಟಕ ಸಂಸ್ಥೆಯೇ ಜಂಗಮ ಸಂಸ್ಥೆಯಾಗಿದೆ. ಅಲ್ಲಿಯ ಸೇವಕರೆಲ್ಲರೂ ಜಂಗಮರಾಗಿದ್ದಾರೆ. ಜಂಗಮನ ಸ್ಥಿತಿಯನ್ನು ಕುರಿತು ಡಾ : ಹಿರೇಮಲ್ಲೂರು ಈಶ್ವರನ್ ಹೀಗೆ ಹೇಳುತ್ತಾರೆ : ' ಪ್ರಾಪಂಚಿಕ ಆಸಕ್ತಿಗಳನ್ನು ಕಳೆದೊಗೆದು , ಧರ್ಮ ಪ್ರಸಾರ ಕಾರ್ಯದಲ್ಲಿ ನಿರತನಾಗಿದ್ದ ತಮ್ಮ ಕಾಲದ ನಿಜವಾದ ಸಂಚಾರಿ ಜಂಗಮನ ಗುಣಗಳನ್ನು ಶರಣರು ನಿದಿಷ್ಟವಾಗಿ ಸೂಚಿಸಿದ್ದಾರೆ. ಅವನು ನಿಸ್ಸಂಗಿ , ನಿರಹಂಕಾರಿ ; ದುರ್ವ್ಯಸನ , ದುರ್ಭ್ರಮೆಗಳಿಂದ ದೂರಾದವನು ; ಒಡಲ ಕಳವಲದ ರುಚಿಗೆ ಹಾರೈಸದವನು ; ಅರಿವೆ ಅಂಗವಾಗಿ, ಅಪ್ಪಾಯನವೆ ಭಕ್ತಿಯಾಗಿ ನಿಂತವನು. ಅವನು ತನ್ನ ಪೋಷಣೆಗಾಗಿ ಭಿಕ್ಷೆಯನ್ನು ಬೇಡುವುದಿಲ್ಲ. ಸಮಾಜಕ್ಕೆ ತನ್ನ ಬದುಕನ್ನೇ ಮೀಸಲಾಗಿರಿಸಿದ ಆ ಜಂಗಮನನ್ನು ಪೋಷಿಸುವ ಕರ್ತವ್ಯ ಭಕ್ತರಿಗೆ ಸೇರಿದ್ದು ತಮ್ಮ ದುಡಿಮೆಯ ಫಲವನ್ನು ಜಂಗಮನಿಗಾಗಿ, ಅವನ ಧರ್ಮ ಕಾರ್ಯಕ್ಕಾಗಿ ವಿನಿಯೋಗಿಸುವುದು ಲಿಂಗಾಯತನ ಕರ್ತವ್ಯವೆಂದು ಶರಣರು ಹೇಳಿದ್ದಾರೆ .'೮- ಈ ಅಭಿಪ್ರಾಯ ನೋಡಿದರೆ ಇಂದಿನ ಜಂಗಮ ಸ್ಥಿತಿಯ ಪರಿಕಲ್ಪನೆಯೇ ಬೇರಾಗಿದೆ.

---

೧. ಸಂ: ಡಾ: ವೀರಣ್ಣ ರಾಜೂರು - ಸ.ವ.ಸಂ - ೫. ವಚನ ೧೮ ಪುಟ ೨೭೬

೨. ಅದೇ : ವಚನ ೨೧ ಪುಟ ೨೭೭

೩. ಸಂ : ಡಾ: ಎಂ.ಎಂ.ಕಲಬುರ್ಗಿ - ಸ.ವ.ಸಂ. - ೬. ವಚನ ೨೭ ಪುಟ ೩೮೨

೪. ಸಂ : ಡಾ: ಎಸ್.ವಿದ್ಯಾಶಂಕರ - ಸ.ವ.ಸಂ. - ೭ ವಚನ ೧ ಪುಟ ೨೮೩

೫. ಅದೇ : ವಚನ ೩ ಪುಟ ೨೮೩

೬. ಅದೇ : ವಚನ ೨೨ ಪುಟ ೨೯೦

೭ : ಸಂ : ಶಾಂತರಸ - ಕಾ. ಪ. - ಪುಟ ೫೨೧

೮ : ಡಾ : ಹಿರೇಮಲ್ಲೂರು ಈಶ್ವರನ್ - ಲಿಂ. ಧ. ಅ. - ಪುಟ ೯೫

ಇಂದಿನ ಜಂಗಮ ವ್ಯವಸ್ಥೆ ಶೋಷಣೆಯ ಮೂಲವಾಗಿದ್ದು , ಬೇಡುವ ಹೀನ ಕೆಲಸವನ್ನು ಜಂಗಮರು ಮಾಡುತ್ತಿದ್ದಾರೆ. ಸರಕಾರದ ಲಾಭ ಪಡೆಯಲು ಮೀಸಲಾತಿ ಪಡೆಯ ಬೇಕೆಂಬ ಆಸೆಗೂ ಬಲಿಯಾಗುತ್ತಿದ್ದಾರೆ. ಸಾಧನೆಯಿಂದ ಜಂಗಮತ್ವ ಬರುತ್ತದೆ ಹೊರತು ಜಾತಿಯಿಂದಲ್ಲ ; ಯಾವುದೇ ನಿರ್ದಿಷ್ಟವಾಗಿ ನೀಡುವ ಶಿಕ್ಷಣ ವ್ಯವಸ್ಥೆಯ ಚೌಕಟ್ಟಿನಿಂದಲ್ಲ. ಜಂಗಮ ಅಥವಾ ವಿರಕ್ತರನ್ನು ತಯಾರಿಸುವ ಕೆಲಸವೂ ಶರಣ ಧರ್ಮ ವಿರೋಧಿಯಾಗಿದೆ. ಒತ್ತಾಯ ಪೂರ್ವಕವಾಗಿ ಮುಗ್ಧರನ್ನು ಅದರಲ್ಲೂ ಗಂಡು ಮಕ್ಕಳನ್ನು ಮಾತ್ರ ಬೇಕಾದವರನ್ನು ಆಯ್ಕೆ ಮಾಡಿ 'ಮರಿ' ಯೆಂದು ಮಾಡಿಕೊಂಡು ಕಾವಿ ಧರಿಸಿ ಅವರಿಗೆ ತರಬೇತಿ ನೀಡುವುದು ಮಾನವೀಯ ತತ್ವದ ನೆಲೆಯುಳ್ಳ ಶರಣ ಧರ್ಮಕ್ಕೆ ವಿರೋಧವಾಗಿದೆ. ಇಂತಹ ವ್ಯವಸ್ಥೆಯಿಂದ ಶರಣರ ಪರಿಕಲ್ಪನೆಯ ಜಂಗಮತ್ವ ದೊರಕಲಾರದು. ಇಂತಹ ತಾತ್ವಿಕಚಿಂತನೆಗಳನ್ನೇ ಅರಿತು ಶರಣರು ಜಂಗಮನ ಬಗ್ಗೆ ವಿಶಿಷ್ಟ ಕಲ್ಪನೆ ನೀಡುತ್ತಾರೆ.

ಢಕ್ಕೆಯ ಮಾರಯ್ಯ ಜಂಗಮನ ಪೂಜೆಯನ್ನು ಭಾವ ಶುದ್ಧವಾಗಿ ಮಾಡಬೇಕೆಂದು ಹೇಳಿ೧ ಆ ಸೇವೆಗೆ ಧನ ಅವಶ್ಯಕವೆಂಬ ವಾಸ್ತವಿಕ ವಿಚಾರ ತಿಳಿಸುತ್ತಾರೆ.೨ ಜಂಗಮ - ಭಕ್ತರಿಬ್ಬರೂ ಪೂರಕವಾಗಿದ್ದರೆ ಮಾತ್ರ ಮಾನವೀಯತೆಗೆ ಅರ್ಥ ಬಂದು ಸುವ್ಯವಸ್ಥಿತ ಧಾರ್ಮಿಕ ವ್ಯವಸ್ಥೆ ನೆಲೆಯೂರಲು ಸಾಧ್ಯವೆಂಬ ತಾತ್ವಿಕ ನಿಲುವು ಶರಣರದಾಗಿದೆ. ' ಜಂಗಮಕ್ಕೆಂದಲ್ಲಿ ಇಂದು ನಾಳೆಯೆಂಬ ಸಂದೇಹವ ಹರಿದು ಮಾಡುವನ ಇರವೆ ಷಡುಸ್ಥಲ ಬ್ರಹ್ಮ ಮೂರ್ತಿ' ೩ ಎಂಬುದಾಗಿ ಢಕ್ಕೆಯ ಮಾರಯ್ಯ ಹೇಳುತ್ತಾರೆ.

' ಜ್ಞಾನ ಕ್ರೀಯನೊಳಕೊಂಡು ನಿಂದ ಜಂಗಮವೆ ಅಂಗಪ್ರಾಣವಾದ' ೪ ಎನ್ನುವಲ್ಲಿ ಜಂಗಮನಾದವರು ಜ್ಞಾನದಷ್ಟೇ ಕ್ರಿಯೆಗೆ ಮಹತ್ವ ನೀಡಬೇಕೆಂಬ ಶರಣರ ತತ್ವ ವಿವೇಚನೆಯ ಮೂಲ ಆಶಯವನ್ನು ಮುಕ್ತಾಯಕ್ಕ ಹೇಳುತ್ತಾರೆ. ಅದೇ ರೀತಿ ಅಜಗಣ್ಣ ' ಕ್ರೀಯೇ ಜಂಗಮ ' ೫ ಎಂದು ಹೇಳುತ್ತಾರೆ.

ಹೀಗೆ ಈ ಪರಿಸರದ ಶರಣರು ಜಂಗಮವೆಂದರೆ ಕೇವಲ ಒಬ್ಬ ವ್ಯಕ್ತಿಯ ಸಂಕೇತವಲ್ಲ ; ಅದು ವ್ಯಕ್ತಿತ್ವದ ಸಂಕೇತವಾಗಿದೆ . ಜ್ಞಾನದ ಬಲದಿಂದ ಸಾಧನೆಯ ಮಾಡುವ ಸೇವಾಗುಣ ಹೊಂದಿದ ಸಮಾಜ ಸೇವಕನೆ ಜಂಗಮನೆಂಬ ಅಭಿಪ್ರಾಯ ಈ ಪರಿಸರದ ಶರಣರದಾಗಿದೆ. ನೀತಿ - ಧರ್ಮಗಳ ಬಗ್ಗೆ ತಿಳಿಸುತ್ತಾ ಅವುಗಳನ್ನು ಪ್ರಾಯೋಗಿಕವಾಗಿ ಅಳವಡಿಸುವಲ್ಲಿ ಸಾಧ್ಯವಾಗಬಹುದಾದ ಮಾರ್ಗದರ್ಶಿ ಸೂತ್ರಗಳನ್ನು ನೀಡುವುದು ಜಂಗಮರ ಪ್ರಮುಖ ಕರ್ತವ್ಯವಾಗಿದೆ.

೪) ಪಾದೋದಕ : ಗುರು ಜಂಗಮರ ಪಾದ ತೊಳೆದ ನೀರು ಪಾದೋದಕವೆಂದು ಇದರ ಶಬ್ದಶಃ ಅರ್ಥ. ಜೊತೆಗೆ ಇಂದಿನ ದಿನ ಆಚರಣೆಯಾಗಿ ಉಳಿದದ್ದೂ ಕೂಡ ಇದಾಗಿದೆ. ಇದೊಂದು ಯಾಂತ್ರಿಕ ಕ್ರಿಯೆಯಾಗಿ ಆಚರಣೆಯಾಗುತ್ತಿದೆ. ಆದರೆ ಶರಣರ ದೃಷ್ಟಿಯಲ್ಲಿ ಪಾದೋದಕ ವೆಂದರೆ ಇದಲ್ಲ ; ಸಾಧಕನು ಸಂಸಾರದಲ್ಲಿದ್ದರು ಆ ಸಂಸಾರದ ಕಲ್ಮಶಗಳನ್ನು ಅಂಟಿಸಿ ಕೊಳ್ಳದೇ ಅವನ ಕರ್ಮಮಲಗಳನ್ನು ಹೋಗಲಾಡಿಸಿ ಶುದ್ಧವಾಗಿರಿಸುವುದೇ ಪಾದೋದಕವಾಗಿದೆ.

ಪಾದೋದಕವನ್ನು ಕುರಿತು ಪ್ರೊ : ಸಿದ್ದಣ್ಣ ಲಂಗೋಟಿಯವರು ಹೇಳುವಂತೆ ' ಅಷ್ಟಾವರಣಗಳ ದೃಷ್ಟಿಯಿಂದ , ಪಾದೋದಕವು ಸಾಧಕನ ಅಂತರಂಗದಲ್ಲಿ ಚಿದ್ರಸ ಪ್ರಕಟಗೊಳ್ಳುವಿಕೆಯೇ ಆಗಿದೆ. ಪದ ಮತ್ತು ಉದಕ ಎರಡರ ಸಂಯೋಜನೆಯಿಂದ ಪಾದೋದಕ. ಪರವಸ್ತುವಿನ ಸ್ಥಾನವೇ ಪದವಾದರೆ ಅದರ ಕರುಣೆಯೇ ಉದಕವಾಗಿದೆ. ಸುಜ್ಞಾನ - ಸದಾಚಾರ - ಸದ್ಭಾವಗಳ ಸಂಕೇತವಾಗಿ ಗುರುಪಾದೋದಕ ಲಿಂಗ ಪಾದೋದಕ , ಜಂಗಮ ಪಾದೋದಕವೆಂದು ಹೇಳಲಾಗುತ್ತಿದೆ. ಕರುಣಾ ಜಲ , ವಿನಯ ಜಲ, ಸಮತಾ ಜಲಗಳೇ ಗುರುಲಿಂಗ ಜಂಗಮ ಕರುಣೆಯ ಸಂಕೇತಗಳು . ಪಾದೋದಕದಲ್ಲಿ ಸಹಜಾಚಾರ - ಸಂಬಂಧಾಚಾರಗಳನ್ನು ನಿರೂಪಿಸಲಾಗುತ್ತದೆ. ಯೋಗ್ಯ ಸದ್ಗುರು, ಅರ್ಹ ಅನುಭಾವಿ ಜಂಗಮ ದೊರಕಿದರೆ ಪಾದೋದಕ ಪ್ರಸಾದ ಪಡೆಯುವುದು . ಇಲ್ಲದಿದ್ದರೆ ಇಷ್ಟ ಲಿಂಗದಲ್ಲಿಯೇ ಗುರು ಜಂಗಮರನ್ನು ಕಲ್ಪಿಸಿ ಕೊಂಡು ಲಿಂಗದಲ್ಲಿಯೇ ತ್ರಿವಿಧ ಪಾದೋದಕ ಪಡೆಯುವುದು '.೬ ಗುರು ಪಾದೋದಕದಿಂದಲೇ ಅಂತಿಮ ತತ್ವ ಸುಲಭ ಸಾಧ್ಯವೆಂಬುದನ್ನು ಪುರದ ನಾಗಣ್ಣನವರು ತಮ್ಮ ವಚನದ ಮೂಲಕ ಹೀಗೆ ಹೇಳುತ್ತಾರೆ. ' ಗುರು ಪಾದೋದಕ ಪರಮ ಪಾವನವೆಂದರಿದು ಗುರು ಪಾದೋದಕವನೆ ಧರಿಸುವುದು , ಧರಿಸಿದಾತಂಗೆ ಅಷ್ಟಾಷಷ್ಟ ತೀರ್ಥಂಗಳು ತನ್ನನೊಳಡಗಿಹವಯ್ಯಾ........ ಇದು ಕಾರಣ ಗುರು ಪಾದೋದಕದಿಂದವೆ ಪರಮ ಪದ ವಪ್ಪುದು ಅಮರಗುಂಡದ ಮಲ್ಲಿಕಾರ್ಜುನ' ೭

---

೧ : ಸಂ : ಡಾ : ಎಸ್ . ವಿದ್ಯಾಶಂಕರ - ಸ.ವ.ಸಂ.-೭, ವಚನ ೧೪, ಪುಟ ೨೮೭,

೨ : ಅದೇ : ವಚನ ೨೨, ಪುಟ ೨೯೦

೩ : ಅದೇ : ವಚನ ೩೬ , ಪುಟ ೨೯೪

೪ : ಸಂ : ಡಾ : ವೀರಣ್ಣ ರಾಜೂರು - ಸ.ವ.ಸಂ. -೫, ವಚನ ೩೧, ಪುಟ ೨೮೦

೫ : ಸಂ : ಡಾ : ಎಂ.ಎಂ. ಕಲಬುರ್ಗಿ - ಸ.ವ.ಸಂ -೬ , ವಚನ ೫, ಪುಟ ೧೦೦

೬ : ಸಂ : ಶಾಂತರಸ - ಕಾ.ಪ. ಪುಟ ೫೨೩

೭ : ಸಂ : ಡಾ : ಬಿ.ಆರ್ . ಹಿರೇಮಠ - ಸ.ವ.ಸಂ.-೮, ವಚನ ೫, ಪುಟ ೩-೪

೫) ಪ್ರಸಾದ : ಗುರು-ಲಿಂಗ-ಜಂಗಮಕ್ಕರ್ಪಿಸಿದ ಆಹಾರವೇ ಪ್ರಸಾದವಾಗಿದ್ದು ಇದು ಶಿವನ ಕರಣಾಮೃತವಾಗಿದೆ. ಜೀವ -ದೇವನಾಗುವಲ್ಲಿ ಪ್ರಸಾದ ಅವಶ್ಯಕ. ತನು -ಮನ - ಧನ ಶುದ್ಧವಾಗಿಟ್ಟುಕೊಂಡು ದೇವನ ನೆನೆಸುತ ಸೇವಿಸುವುದೇ ಪ್ರಸಾದವಾಗಿದೆ. ಇದು ಸಮಾನತೆಯ ಸಂಕೇತವಾಗಿದೆ. ಇದರಿಂದ ಸಾಧಕನ ಜೀವ ಉನ್ನತಿಯ ಕಡೆಗೆ ಸಾಗುತ್ತದೆ. ಜ್ಞಾನೇಂದ್ರಿಯ , ಕರ್ಮೇಂದ್ರಿಯ, ಕಾಯಕದಲ್ಲಿರುವ ಆತ್ಮವನ್ನು ದೇವನಿಗರ್ಪಿಸಿಕೊಳ್ಳುವ ಸರ್ವ ಸಮರ್ಪಣಾ ಭಾವವೇ ಪ್ರಸಾದದ ಪರಿಕಲ್ಪನೆಯಲ್ಲಿದೆ.ಕೇವಲ ಆಹಾರ ತಿಂದು , ಪೂಜೆಯ ನೈವೇದ್ಯ ಸೇವಿಸುವುದು ಪ್ರಸಾದವಲ್ಲ. ಜಾತಿ ಭೇದಗಳಿಲ್ಲದೆ ಶುದ್ಧ ಮನಸ್ಸಿನಿಂದ ಸೇವಿಸುವುದೇ ಪ್ರಸಾದವಾಗಿದೆ.

ಕಾಯ , ಜೀವ, ಭಾವ, ತನು, ಮನ , ಪ್ರಾಣ, ಅಂತರಂಗ, ಬಹಿರಂಗ ಒಟ್ಟಿನಲ್ಲಿ ಸರ್ವಾಂಗ ಶುದ್ಧಿಗೆ ಶರಣರ ಪ್ರಸಾದವೇ ಕಾರಣವಾಗಿದ್ದು ಅಂತಹ ಪ್ರಸಾದ ಮಹಿಮೆಯಿಂದಲೇ ನಾನು ಬದುಕಿದ್ದೇನೆ ಎಂಬುದಾಗಿ ಲಕ್ಕಮ್ಮ ಹೇಳುತ್ತಾಳೆ.[೧] ಬಿಬ್ಬ ಬಾಚಯ್ಯ ಸಮತೆ ನಿಂದಲ್ಲಿ ನೈವೇದ್ಯವೆಂದು[೨] ಪ್ರಸಾದ ಪ್ರಸನ್ನದಲ್ಲಿ ಐಕ್ಯವಾಗಿ ಬಿಬ್ಬನ ಮನದಲ್ಲಿ ಒಬ್ಬುಳಿಯಾಯಿತೆನ್ನುತ್ತಾರೆ.[೩]

೬) ವಿಭೂತಿ : ಶರಣ ಧರ್ಮವನ್ನು ಪಾಲಿಸುವ ಸಾಧಕನ ಬಹಿರಂಗದ ಚಿಹ್ನೆಯಾಗಿ ವಿಭೂತಿ ಕಾಣಿಸಿ ಕೊಳ್ಳುತ್ತದೆ. ಸಾಧಕನಾದವನು ಭಕ್ತನಾಗಿ ಭಜಿಸಿ ಜ್ಞಾನವನ್ನು ಪಡೆದು ಅರಿವಿನ ಪರಿಯನ್ನು ತಿಳಿದು ಕೊನೆಗೆ ವೈರಾಗ್ಯ ನಿಲುವನ್ನು ಕಂಡಾಗಲೂ ಅವನಲ್ಲಿ ಅಹಂಕಾರ ಸುಳಿಯದೇ ಸಮಚಿತ್ತದಿಂದ , ಸಮತೆಯಿಂದ ಬಾಳಬೇಕೆಂಬ ಆಧ್ಯಾತ್ಮಿಕ ಸಾಂಕೇತಿಕ ಕುರುಹೇ ವಿಭೂತಿಯಾಗಿದೆ. ವಿಭೂತಿ ಸಾಧಕನ ಪೂರ್ವಾಶ್ರಮವನ್ನು ಕಳೆದು ಅವನಲ್ಲಿ ಲಿಂಗಾನು ಸಂಧಾನಕ್ಕೆ ದಾರಿ ಮಾಡಿ ಕೊಡುತ್ತದೆ.

' ಸತ್ಯವೆಂಬ ತಟ್ಟೆಯಲ್ಲಿ ಚಿತ್ತ ಶುದ್ಧವೆಂಬ ವಿಭೂತಿಯ ಬೈಚಿಟ್ಟು '[೪] ಎಂದು ಆಯ್ದಕ್ಕಿ ಮಾರಯ್ಯ ಹೇಳುವಲ್ಲಿ ಅದರ ನಿಷ್ಟೆ -ಶುದ್ಧತೆಗಳ ತತ್ವ ಅಡಗಿದೆ.

೭) ರುದ್ರಾಕ್ಷಿ : ಶಿವನ ಕಣ್ಣುಗಳನ್ನು ಸಾಂಕೇತಿಕರಿಸಿ ಕೊಂಡ ವಸ್ತುಗಳೇ ರುದ್ರಾಕ್ಷಿಗಳು . ಆಭರಣಗಳ ಬದಲಾಗಿ ರುದ್ರಾಕ್ಷಿ ಧರಿಸುವುದು ಆರೋಗ್ಯ ದೃಷ್ಟಿಯಿಂದಲೂ ಒಳ್ಳೆಯದು.ಸಾಧಕನು ತನ್ನ ಆತ್ಮಿಕ ಸ್ಥಿತಿ ಕಂಡು ಕೊಳ್ಳಲು ಮೋಹವನ್ನು ತೊಲಗಿಸುವಲ್ಲಿ ಪ್ರಮುಖ ಸಾಧನವಾಗುತ್ತವೆ. ಶರಣ ಧರ್ಮದಲ್ಲಿ ಇವುಗಳಲ್ಲಿ ಯಾವುದೇ ಪೌರಾಣಿಕ ಹಿನ್ನೆಲೆಯಿಲ್ಲ. ಸಾಧಕನಲ್ಲಿ ನಿರ್ಮೋಹದ ಸ್ಥಿತಿಯನ್ನು ಕಂಡು ಕೊಳ್ಳಲು ಶರಣರು ಕಂಡು ಕೊಂಡ ಸರಳೋಪಾಯ ಇದಾಗಿದೆನ್ನಬಹುದಾಗಿದೆ. ರುದ್ರಾಕ್ಷಿ ಸದಾ ನಮ್ಮನ್ನು ಎಚ್ಚರಿಸಿ , ನಮ್ಮನ್ನು ಮೋಹಪಾಶಕ್ಕೆ ಒಳಗಾಗದಂತೆ ಎಚ್ಚರಿಸುವ ಗಂಟೆಗಳಾಗಿವೆ.

೮) ಮಂತ್ರ : ಶಿವನ ನೆನಹನ್ನು ಮನದಲ್ಲಿ ಮುದ್ರಿಸಿ ಕೊಳ್ಳಲು ಸಾಧಕರು ಉಚ್ಚರಿಸುವುದೇ ಮಂತ್ರವಾಗಿದೆ. ಶರಣ ಧರ್ಮದಲ್ಲಿ ಸಾಧಕನ ಎಲ್ಲಾ ಧಾರ್ಮಿಕ ಕ್ರಿಯೆಗಳಲ್ಲಿ ಈ ಮಂತ್ರ ಉಪಯೋಗಿಸಲ್ಪಡುತ್ತದೆ.

' ಓಂ ನಮಃಶಿವಾಯ 'ಎಂಬ ಷಡಕ್ಷರ ಮಂತ್ರ ದೇವನ ಮಂತ್ರವಾಗಿಯೂ ' ಓಂ ಶ್ರೀ ಗುರು ಬಸವಲಿಂಗಾಯ ನಮಃ ' ಎಂಬುದು ಧರ್ಮ ಗುರುವಿನ ಮಂತ್ರವಾಗಿಯೂ ಶರಣ ಧರ್ಮದಲ್ಲಿ ಬಳಕೆಯಲ್ಲಿದೆ.ಶರಣ ಧರ್ಮದಲ್ಲಿ ಕಾಣಿಸಿ ಕೊಂಡ ಮಂತ್ರ ಪೌರಾಣಿಕ ಶಿವನನ್ನು ಹೊಗಳುವ ಮಂತ್ರವಲ್ಲ. ಅದು ನಿರಾಕಾರ ಸ್ಥಿತಿಯನ್ನು ಕುರಿತದ್ದು.

ಓಂ ನಮಃ ಶಿವಾಯ ವೆಂಬ ದೇವರ ಮಂತ್ರದಿಂದಲೇ ಲಿಂಗ ದರ್ಶನವಾಯಿತೆಂಬುದಾಗಿ ಉಳಿಮೇಶ್ವರ ಚಿಕ್ಕಯ್ಯ ಹೇಳುತ್ತಾರೆ.[೫]

ಶೈವರ ಶಿವನು ಶರಣ ಧರ್ಮದ ಶಿವನಲ್ಲ. ಶರಣ ಧರ್ಮದಲ್ಲಿ ಅಥವಾ ಲಿಂಗಾಯತದಲ್ಲಿ ಈ ಮಂತ್ರ ಸಮಷ್ಟಿ ಪ್ರಜ್ಞೆಯನ್ನು ಒಳಗೊಂಡಿದೆ. ಇಡೀ ಸಮಾಜವೇ ಶಿವಮಯವಾಗಿ ಕಾಣುವ ತುಡಿತವಿದೆ. ಸಾಧಕನ ಇಹತ್ವವನ್ನು ದಿನಗಳದಂತೆ ಕಳೆಯುತ್ತಾ ಇಹತ್ವದಲ್ಲಿಯೇ ಅವನಿಗೆ ಪರತ್ವದ ಬಗೆಗಿನ ಮಹಾಬೆಳಗಿನ ಅರಿವನ್ನು ಮೂಡಿಸುವಲ್ಲಿ ಪ್ರಬಲ ಮಾಧ್ಯಮವಾಗಿದೆ.

---

೧ : ಸಂ : ಡಾ : ವೀರಣ್ಣ ರಾಜೂರು -ಸ.ವ.ಸಂ.-೫ , ವಚನ ೧೭ , ಪುಟ ೨೦೨

೨ : ಸಂ: ಡಾ : ಬಿ.ಆರ್ .ಹಿರೇಮಠ, ಸ.ವ.ಸಂ-೪, ವಚನ ೮೪, ಪುಟ ೧೩೭

೩ : ಅದೇ :ವಚನ ೯೭, ಪುಟ ೧೪೦

೪ : ಸಂ: ಡಾ : ಎಂ.ಎಂ. ಕಲಬುರ್ಗಿ -ಸ.ವ.ಸಂ.-೬ , ವಚನ ೨೯, ಪುಟ ೩೮೩

೫ : ಅದೇ : ವಚನ ೧೨, ಪುಟ ೬೩೬

೩) ಷಟಸ್ಥಲ

ಶರಣ ಧರ್ಮದಲ್ಲಿ ಷಟಸ್ಥಲಗಳಿಗೆ ವಿಶೇಷ ಮಹತ್ವವಿದೆ. ಜೀವಾತ್ಮ -ಪರಮಾತ್ಮನ ಸ್ಥಿತಿಗೇರಲು ಸಾಧಕನು ಸಾಧಿಸಬೇಕಾದ ಸಾಧನೆಯ ಸೋಪಾನಗಳ ಸ್ವರೂಪವೇ ಪಟಸ್ಥಲವಾಗಿದೆ. ಆತ್ಮ ಪಂಚಭೂತಗಳಿಂದಾದ ಸ್ಥೂಲ ಕಾಯದೊಳಗೆ ಇಷ್ಟಲಿಂಗವನ್ನು ಸೂಕ್ಷ್ಮ ಶರೀರಿಯಾಗಿ ಪ್ರಾಣಲಿಂಗವನ್ನು ತನುವಿನೊಳಗೆ ಭಾವ ಲಿಂಗವನ್ನು ಹೊಂದಿದ ಬಳಿಕ ಲಿಂಗಾಂಗ ಸಾಮರಸ್ಯವಾಗಿ ಜೀವಿ ಪರ ವಸ್ತುವಿಗೊಳಗೆ ಐಕ್ಯವಾಗುವ ಸ್ಥಿತಿಯನ್ನು ಪಟಸ್ಥಲ ತಿಳಿಸುತ್ತದೆ. ಶರಣರು ನಿರೂಪಿಸಿದ ಪಟಸ್ಥಲಗಳೆಂದರೆ:

೧) ಭಕ್ತ ಸ್ಥಲ ೨) ಮಹೇಶಸ್ಥಲ ೩) ಪ್ರಸಾದಿ ಸ್ಥಲ ೪) ಪ್ರಾಣಲಿಂಗಿ ಸ್ಥಲ ೫) ಶರಣರ ಸ್ಥಲ ೬) ಐಕ್ಯ ಸ್ಥಲ

ಈ ಸ್ಥಲಗಳನ್ನು ಕುರಿತು ಡಾ : ಪಿ.ವಿ.ನಾರಾಯಣರವರು ಹೀಗೆ ಹೇಳುತ್ತಾರೆ ' ಮೊದಲೆರಡು ಸ್ಥಲಗಳಲ್ಲಿ ದ್ವೈತಭಾವವು ಮಧ್ಯದ ಎರಡರಲ್ಲಿ ದ್ವೈತಾದ್ವೈತ ಭಾವವೂ, ಕೊನೆಯರೆಡರಲ್ಲಿ ಅದ್ವೈತಭಾವವು ಸಾಧಕನಲ್ಲಿರುತ್ತದೆಂದು ವಿವರಿಸಲಾಗುತ್ತದೆ.'೧ ಹಾಗೆಯೇ ' ಚೆನ್ನ ಬಸವಣ್ಣನು ಆ ಸ್ಥಲಗಳನ್ನು ೩೬ ಉಪಸ್ಥಲಗಳನ್ನಾಗಿ , ೧೫ ನೇ ಶತಮಾನದಲ್ಲಿ ಮಹಾಲಿಂಗ, ಜಕ್ಕಣಾರ್ಯರು ೧೦೧ ಸ್ಥಲಗಳನ್ನಾಗಿ ವಿಂಗಡಿಸಿದ್ದರೂ ಅವೆಲ್ಲವುಗಳಿಗೆ ಆರು ಸ್ಥಲಗಳೇ ಮೂಲಾಧಾರವಾಗಿವೆ. ' ೨ ಎಂಬ ಹಿರೇಮಲ್ಲೂರರ ಅಭಿಪ್ರಾಯ ಸಮರ್ಪಕವಾಗಿದೆ. ಮೊದಲ ಮೂರು ಸ್ಥಲಗಳು ಕ್ರಿಯೆಗೆ ಒತ್ತು ನೀಡಿದರೆ ಆನಂತರದ ಮೂರು ಸ್ಥಲಗಳು ಜ್ಞಾನಕ್ಕೆ ಒತ್ತು ನೀಡುತ್ತವೆ. ಜ್ಞಾನ ಮತ್ತು ಕ್ರಿಯೆಗಳ ಸಮನ್ವಯದಿಂದ ಲಿಂಗಾಂಗ ಸಾಮರಸ್ಯ ಸಾಧಿಸುವುದೇ ಈ ಸ್ಥಲಗಳ ಪ್ರಮುಖ ಧ್ಯೇಯವಾಗಿದೆ. '

೧) ಭಕ್ತ ಸ್ಥಲ : ಶರಣ ಧರ್ಮದನ್ವಯದ ಗುರುವಿನಿಂದ ಇಷ್ಟಲಿಂಗದ ದೀಕ್ಷೆ ಹೊಂದಿದ ವ್ಯಕ್ತಿಯೇ ಭಕ್ತನಾಗುತ್ತಾನೆ. ಭಕ್ತನಾದವನು ಗುರುಲಿಂಗ ಜಂಗಮರಲ್ಲಿ ಏಕೋಭಾವದಿಂದ ನಡೆದು ಕೊಳ್ಳುವ ಸದಾಚಾರವನ್ನು ನಾವಿಲ್ಲಿ ಕಾಣುತ್ತೇವೆ.

ಭಕ್ತನಾದವನು ವಿನಯವಂತನಾಗಿರಬೇಕು. ಅಹಂಕಾರವಿರದೇ ತನ್ನಿಷ್ಟದೈವದಲ್ಲಿ ನಂಬುಗೆ ಇಟ್ಟುಕೊಂಡು ಸೇವಾ ಮನೋಭಾವನೆ ಹೊಂದಿರಬೇಕು ಎಂಬುದಾಗಿ ಆಯ್ದಕ್ಕಿ ಮಾರಯ್ಯ ಹೇಳುತ್ತಾನೆ.೩ ಭಕ್ತಿಯಲ್ಲಿ ನಿರಂಹಕಾರ, ಧೃಡತೆ ಇರಬೇಕೆಂಬುದನ್ನು ಲಕ್ಕಮ್ಮ ಹೇಳುತ್ತಾಳೆ ೪ , ಹಾಗೆಯೇ ಸುಸಂಗದಿಂದ ಮಾಡುವುದೇ ಭಕ್ತಿ ಸ್ಥಲವೆನ್ನುತ್ತಾರೆ ಢಕ್ಕೆಯ ಮಾರಯ್ಯ . ೫

೨) ಮಹೇಶಸ್ಥಲ : ಸದಾಶಯದ ಭಕ್ತಿ ಮತ್ತಷ್ಟು ನಿಷ್ಠಾಪೂರ್ವಕವಾಗಿ ಈ ಸ್ಥಲದಲ್ಲಿ ಪರಿವರ್ತನೆಗೊಳ್ಳುತ್ತದೆ. ಇಲ್ಲಿ ಸಾಧಕ ನಂಬುಗೆಯ ಜೊತೆಗೆ ಕೆಲವು ನಿಯಮುಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತದೆ. ಏಕದೈವದ ಉಗ್ರಾಚರಣೆ ಇಲ್ಲಿದೆ. ಸಂಯಮಶೀಲತೆಯಿಂದ ಕೂಡಿ ಆದಷ್ಟು ಸಂಸಾರ ಬಂಧದಿಂದ ದೂರವಾಗಿರಬೇಕೆಂಬ ಆಶಯ ಇಲ್ಲಿದೆ. ಗುರು ಕೊಟ್ಟ ಇಷ್ಟಲಿಂಗ ಉಪಾಸನೆಯ ಜೊತೆಗೆ ನಿಷ್ಠಾ ಭಕ್ತಿಯ ಉಗ್ರತೆ ಇಲ್ಲಿ ಕಂಡು ಬರುತ್ತದೆ. ಹಾಗಾದಾಗ ಮಾತ್ರ ಅಂತಹವನು 'ಇಹದಲ್ಲಿ ಸುಖಿ ಪರದಲ್ಲಿ ಪರಿಣಾಮಿ'೬ ಎನ್ನುತ್ತಾರೆ ಢಕ್ಕೆಯ ಮಾರಯ್ಯ

೩) ಪ್ರಸಾದಿ ಸ್ಥಲ : ಸರ್ವವೂ ಶಿವಮಯವೆಂಬ ಸರ್ವಾಂಗೀಣ ತ್ಯಾಗದ ವಿಶಿಷ್ಟಗುಣವೇ ಪ್ರಸಾದಿ ಸ್ಥಲವಾಗಿದೆ. ಅಂತಹ ತ್ಯಾಗವೆಲ್ಲ ಶಿವನದೆಂಬ ಭಾವ ಬಿಂಬಿಸುವ ಲಕ್ಕಮ್ಮನ ವಚನ ಹೀಗಿದೆ.

'ಬಾಹಾಗ ಕೊಂಡ ಬಂದ ಪ್ರಾಪ್ತಿಯಲ್ಲದೆ..............ಕೊಟ್ಟಲ್ಲದಿಲ್ಲ '೭

ಪ್ರಸಾದಿ ಸ್ಥಿತಿ ಎಂತಹದು ಎಂಬುದಕ್ಕೆ ಅಜಗಣ್ಣ ಹೇಳಿದ್ದು ಹೀಗೆ:

'ಅಂಗದ ಬೆಂಬಳಿಯುಲು ಭಂಗವೆಂದರಿಯರು

ಲಿಂಗದ ಬೆಂಬಳಿಯಲಾದ ಪ್ರಸಾದಿಯು ಅರ್ಪಿತವನರಿಯ

ಪ್ರಸಾದದಲ್ಲಿ ಪರಿಣಾಮಿಯಾಗಿ

ಮಹಾಘನ ಸೋಮೇಶ್ವರನು ಮುಂತಾಗಿ

ಅರಿವೆ ಅನುಭಾವವಾದ ಪ್ರಸಾದಿ೮ ಈ ಮೇಲಿನ ಮೂರು ಸ್ಥಿತಿಗಳನ್ನು ನಿಷ್ಠೆಯಿಂದ ಸಾಧಕ ಸಾಧಿಸಲು ಈ ಧರ್ಮದಲ್ಲಿ ಯತ್ನಿಸುತ್ತಾನೆ

---

೧ : ಡಾ : ಪಿ.ವಿ.ನಾರಾಯಣ -ವ.ಸಾ.ಪ.-ಪುಟ ೮೮

೨ : ಡಾ : ಹಿರೇಮಲ್ಲೂರು ಈಶ್ವರನ್ -ಲಿಂ.ಧ.ಅ.-ಪುಟ ೧೨೬

೩ : ಸಂ : ಡಾ : ಎಂ.ಎಂ. ಕಲಬುರ್ಗಿ -ಸ.ವ.ಸಂ. -೬, ವಚನ ೧೪, ಪುಟ ೩೮೦

೪ : ಸಂ : ಡಾ : ವೀರಣ್ಣ ರಾಜೂರು -ಸ.ವ.ಸಂ. -೫ , ವಚನ ೧೨, ಪುಟ ೨೦೧

೫ : ಸಂ : ಡಾ : ಎಸ್.ವಿದ್ಯಾಶಂಕರ -ಸ.ವ.ಸಂ. -೭ , ವಚನ ೪೬, ಪುಟ ೨೯೭

೬ : ಅದೇ : ವಚನ ೩೬, ಪುಟ ೨೯೪

೭ : ಸಂ : ಡಾ : ವೀರಣ್ಣ ರಾಜೂರು -ಸ.ವ.ಸಂ. -೫ , ವಚನ ೧೮, ಪುಟ ೨೦೩

೮ : ಸಂ : ಡಾ : ಎಂ.ಎಂ. ಕಲಬುರ್ಗಿ -ಸ.ವ.ಸಂ.-೬, ವಚನ ೧, ಪುಟ ೯

೪) ಪ್ರಾಣಲಿಂಗಿ ಸ್ಥಲ : ಈ ಹಂತದಲ್ಲಿ ಜೀವಿ ಜ್ಞಾನ ಸ್ಥಿತಿಯೊಂದಿಗೆ ತಾನೇ ಶಿವನೆಂಬ ಹಂತಕ್ಕೆ ಬರುತ್ತಾನೆ. ಲಿಂಗಬೇರೆಯಲ್ಲ ತಾನು ಬೇರೆಯಲ್ಲ ಎಂಬ ಏಕತ್ರ ಭಾವನೆ ಕಂಡು ಬರುತ್ತದೆ. ಸಾಧಕ ಕ್ರಮೇಣ ಅಂತರ್ಮುಖಿಯಾಗುತ್ತಾ ಸಾಗುತ್ತಾನೆ. ಇಲ್ಲಿ ಆತ 'ತನುವಿನಲ್ಲಿ ಹಿಡಿದು ಮನದಲ್ಲಿ ಅರಿದು ಜ್ಞಾನದಲ್ಲಿ ಕಂಡು ಮಹಾಪ್ರಕಾಶದಲ್ಲಿ ಕೂಡಿ ಬೇಧ ಭಾವವಿಲ್ಲದೆ ಪ್ರಾಣಲಿಂಗ ಸಂಬಂಧಿಯಾಗುತ್ತಾನೆ'೧ ಎಂಬ ಬಿಬ್ಬಿ ಬಾಚಯ್ಯರು ಹೇಳಿರುವುದು ಅರ್ಥಪೂರ್ಣವಾಗಿದೆ.

೫) ಶರಣ ಸ್ಥಲ : ವೈಯಕ್ತಿಕತೆಯನ್ನು ಕಳೆದುಕೊಂಡು ಸಂಪೂರ್ಣ ಅರಿವಿನ ಸ್ಥಿತಿಯನ್ನು ಹೊಂದಿದ ಜೀವಾತ್ಮನೇ ಶರಣನಾಗಿದ್ದಾನೆ. ದೇಹದ ಮೋಹವನ್ನು ಬಿಟ್ಟು ತಾನೇ ಸತಿಯಾಗಿ ಲಿಂಗವೇ ಪತಿಯಾಗಿರುವ ಸ್ಥಿತಿಯನ್ನು ನಾವಿಲ್ಲಿ ಕಾಣಬಹುದು. ದೇಹದ ಮೇಲಿನ ಅಭಿಮಾನ ನಾಶವಾಗಿ ಶರಣತ್ವ ಮೂಡಿದುದನ್ನು ಕುರಿತು ' ಶರಣ ಸತಿ ಲಿಂಗಪತಿಯಾದಲ್ಲಿಯೇ ಕಾಯಗುಣ ನಿಂದಿತ್ತು ' ೨ ಎಂಬುದಾಗಿ ಢಕ್ಕೆಯ ಮಾರಯ್ಯ ಹೇಳುತ್ತಾರೆ. 'ಅಂತರಂಗದಲ್ಲಿ ಅನುಮಿಷನಾಗಿ ನಿರಂತರ ಲಿಂಗಸುಖಿಯಾದವನೇ ಶರಣ ' ೩ ಎಂಬುದಾಗಿ ಅಜಗಣ್ಣ ಹೇಳುತ್ತಾರೆ.

೬) ಐಕ್ಯ ಸ್ಥಲ : ಸಾಧಕ ಎಲ್ಲವನ್ನು ಸಾಧಿಸಿ ನಿಂತ ಸ್ಥಲವೇ ಐಕ್ಯ ಸ್ಥಲವಾಗಿದೆ. ಇದನ್ನೇ ಶರಣರು ಬಯಲು , ಶೂನ್ಯ , ನಿರ್ವಯಲು ಇತ್ಯಾದಿಯಾಗಿ ಕರೆದಿದ್ದಾರೆ. ಮೂಲದಿಂದ ಮೂಲಕ್ಕೆ ಸೇರುವ ಮಹೋನ್ನತ ಸ್ಥಿತಿಯೇ ಐಕ್ಯ ಸ್ಥಲವಾಗಿದೆ. ಈ ಪರಿಸರದ ಶರಣರ ಸಂದರ್ಭದಲ್ಲಿ ಐಕ್ಯ ಸ್ಥಲಕ್ಕೆ ನಿದರ್ಶನವಾಗಿ ಬದುಕಿದವರು ಅಜಗಣ್ಣ .ಈ ಪರಿಸರದ ಬಹುತೇಕ ಶರಣರು ಐಕ್ಯಸ್ಥಲದ ಬಗ್ಗೆ ಅನೇಕ ಸಂಗತಿಗಳನ್ನು ತಿಳಿಸಿದ್ದಾರೆ. ಇಡೀ ಶರಣ ಪರಿಸರದ ಸಂದರ್ಭದಲ್ಲಿ ಈ ಸ್ಥಲವನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸಿದವರಲ್ಲಿ ಈ ಪರಿಸರದ ಶರಣರದೇ ಸಿಂಹಪಾಲಾಗಿದೆ ಎಂದರೆ ಅತಿಶಯೋಕ್ತಿಯೆನಲ್ಲ. ಈ ಸ್ಥಲದ ಬಗ್ಗೆ ಶರಣರು ಬಹು ಸಮರ್ಪಕವಾಗಿ ಇಲ್ಲಿ ತಿಳಿಸಿದ್ದಾರೆ.ಮುಕ್ತಾಯಕ್ಕನ ವಚನಗಳಂತೂ ಶರಣ ಧರ್ಮದ ಐಕ್ಯ ಸ್ಥಲದ ಸ್ಪಷ್ಟ ಚಿತ್ರಣವನ್ನು ನೀಡುತ್ತವೆ. ಅಂತಹ ವಚನವೊಂದು ಹೀಗಿದೆ :

ನೀರಬೊಂಬೆಗೆ ನಿರಾಳದ ಗೆಜ್ಜೆಯ ಕಟ್ಟಿ
ಬಯಲ ಬೊಂಬೆಯ ಕೈಯಲ್ಲಿ ಕೊಟ್ಟು ಮುದ್ದಾಡಿಸುತ್ತಿರ್ದನಯ್ಯಾ
ಕರ್ಪುರದ ಪುತ್ಥಳಿಗೆ ಅಗ್ನಿಯ ಸಿಂಹಾಸನವನಿಕ್ಕಿ
ಅಗ್ನಿ ಕರಗಿ ಕರ್ಪುರ ಉಳಿದುದಕ್ಕೆ ಬೆರಗಾದೆನಯ್ಯಾ
ಎನ್ನ ಅಜಗಣ್ಣನ ಯೋಗಕ್ಕೆ ೪

ಷಟಸ್ಥಲದ ತತ್ವ ವಿವೇಚನೆಯು ಶರಣರ ಅಲೌಕಿಕ ಸಾಧನೆಯ ಸಿದ್ಧಿಯ ಸಂಕೇತವಾಗಿದೆ. ಈ ಎಲ್ಲಾ ಸ್ಥಲಗಳ ಸಂಗದಿಂದಲೇ ಬ್ರಹ್ಮವಾಯಿತೆಂಬುದಾಗಿ ಢಕ್ಕೆಯ ಮಾರಯ್ಯ ಈ ಕೆಳಗಿನ ವಚನದಲ್ಲಿ ಎಲ್ಲಾ ಸ್ಥಲಗಳ ಅಂತಿಮ ಸ್ಥಿತಿ ತಿಳಿಸುತ್ತಾರೆ :

ಭಕ್ತನ ಭಕ್ತ , ಮಾಹೇಶ್ವರನ ಮಾಹೇಶ್ವರ, ಪ್ರಸಾದಿಯ ಪ್ರಸಾದಿ
ಪ್ರಾಣಲಿಂಗಿಯ ಪ್ರಾಣಲಿಂಗಿ ಶರಣನನ ಶರಣ ಐಕ್ಯನ ಐಕ್ಯ
ಒಳಗಿನ ಸ್ಥಲವ ಹೊರಹೊಮ್ಮುವಾಗ
ಬಿಂಬಕ್ಕೆ ಬಿಂಬದ ಪ್ರತಿಬಿಂಬವ ಕಾಬಂತೆ
ಅದರ ಸಂಗವ ಘಟಿಸಿದಲ್ಲಿ ಷಡುಸ್ಥಲ ಬ್ರಹ್ಮವಾಯಿತ್ತು.
ಕಾಲಾಂತಕ ಭೀಮೇಶ್ವರ ಲಿಂಗವನರಿದಲ್ಲಿ ೫

೪) ಪಂಚಾಚಾರಗಳು

ವಿಚಾರಕ್ಕಿಂತ ಆಚಾರವೇ ಪ್ರಧಾನವಾದಾಗ ಮಾತ್ರ ಧರ್ಮ ಜೀವಂತಿಕೆ ಪಡೆಯಲು ಸಾಧ್ಯ . ಇದನ್ನು ಅರಿತ ಶರಣರು ಧರ್ಮಕ್ಕೆ ಆಚಾರ ಸಂಹಿತೆಯೊಂದನ್ನು ಕಲ್ಪಿಸಿ ಕೊಟ್ಟರು . ಅಂತಹ ಸಂಹಿತೆಯ ಐದು ಅಂಶಗಳೆಂದರೆ : ೧) ಲಿಂಗಾಚಾರ ೨) ಸದಾಚಾರ ೩)ಶಿವಾಚಾರ ೪) ಗಣಾಚಾರ ೫) ಭೃತ್ಯಾಚಾರ

---

೧ : ಸಂ : ಡಾ : ಬಿ.ಆರ್ .ಹಿರೇಮಠ -ಸ.ವ.ಸಂ. -೮, ವಚನ ೫೩, ಪುಟ ೧೨೯

೨ : ಸಂ : ಡಾ : ಎಸ್.ವಿದ್ಯಾಶಂಕರ -ಸ.ವ.ಸಂ. -೭, ವಚನ ೭೯, ಪುಟ ೩೦೭

೩. : ಸಂ : ಡಾ : ಎಂ.ಎಂ. ಕಲಬುರ್ಗಿ -ಸ.ವ.ಸಂ-೬, ವಚನ ೪, ಪುಟ ೧೦೦

೪ : ಸಂ : ಡಾ : ವೀರಣ್ಣ ರಾಜೂರು -ಸ.ವ.ಸಂ. -೫ ,ವಚನ ೨೫, ಪುಟ ೨೭೮

೫ : ಸಂ : ಡಾ : ಎಸ್.ವಿದ್ಯಾಶಂಕರ -ಸ.ವ.ಸಂ. -೭, ವಚನ ೫೯, ಪುಟ ೩೦೧

೧) ಲಿಂಗಾಚಾರ : ದೇವರೊಬ್ಬನೇ ಇದ್ದಾನೆ, ಈ ದೇಹವೆ ದೇವಾಲಯ ಲಿಂಗವನ್ನು ಬಿಟ್ಟು ಅನ್ಯ ದೇವರಿಲ್ಲ, ಲಿಂಗಾಯತನಾದವನು ಅನ್ಯ ದೈವಗಳನ್ನು ಪೂಜಿಸಬಾರದು ಎಂಬ ನಿಯಮವೇ ಲಿಂಗಾಚಾರವಾಗಿದೆ. ಇಷ್ಟಲಿಂಗವೇ ಅವನ ಸರ್ವಸ್ವವಾಗಿರಬೇಕೆಂದು ಶರಣರು ತಿಳಿಸಿದರು. ಇಷ್ಟ ಲಿಂಗ ಬರೀ ಆಕಾರವಲ್ಲ. ಅದು ವಿಶ್ವಾತ್ಮ ರೂಪವಾಗಿದೆ.

೨) ಸದಾಚಾರ : ನಿಸ್ವಾರ್ಥದಿಂದ ಸೇವೆ ಸಲ್ಲಿಸುತ್ತಾ ಆಮೂಲಕವೇ ಇಹ - ಪರಗಳನ್ನು ಸಾಧಿಸಬೇಕೆಂಬ ಸಾತ್ವಿಕ ಗುಣದ ಆಚಾರವೇ ಸದಾಚಾರವಾಗಿದೆ. ಸದ್ಬಳಕೆ, ಅಸಂಗ್ರಹ, ಕಾಯಕ - ದಾಸೋಹ ಇವುಗಳನ್ನು ವ್ಯಕ್ತಿ ಬದುಕಿನಲ್ಲಿ ಅಳವಡಿಸಿಕೊಂಡು ಸಾಗುವುದೇ ಈ ಆಚಾರದ ಪ್ರಮುಖ ಆಶಯವಾಗಿದೆ.

'ನುಡಿಯಲು ಬಾರದು ಕೆಟ್ಟ ನುಡಿಗಳ ನಡೆಯಲು ಬಾರದು ಕೆಟ್ಟನಡೆಗಳ' ೧. ಎನ್ನುವ ಮುಕ್ತಾಯಕ್ಕನ ಮಾತುಗಳು ಸದಾಚಾರದ ಸಂಹಿತೆಗಳಾಗಿವೆ. ಇದೇ ರೀತಿ ಢಕ್ಕೆ ಮಾರಯ್ಯ ಹೇಳುವ 'ಬಂದುದ ನೇತಿಗಳೆಯದೆ ಬಾರದುದದಕ್ಕೆ ದೋಟಿಯನ್ನಿಕ್ಕದೆ ಬಂದುದಕ್ಕೆ ಮನಮುಕ್ತನಾಗಿ ಸಂದುದು' ಎನ್ನುವ ವಿಚಾರಗಳಿಗಿಂತ ಮತ್ತ್ಯಾವ ಸದಾಚಾರವಿದೆ. ೨.

೩) ಶಿವಾಚಾರ : ಶಿವಭಕ್ತರಾದವರೆಲ್ಲ ಒಂದೇ ಎಂದು ತಿಳಿದು ಜಾತಿಭೇದವೆಣಿಸದೆ ಸರ್ವದರಲ್ಲಿಯೂ ಅವರೊಡನೆ ಮಿಳಿತವಾಗುವುದೇ ಶಿವಾಚಾರದ ಲೌಕಿಕ ದೃಷ್ಟಿಯಾದರೆ, ಇನ್ನೊಂದೆಡೆ ಸಂಸಾರದ ಸದಸ್ಯರಷ್ಟೇ ಮೋಹವನ್ನು ಶಿವನ ಮೇಲೆ ಇರಿಸಬೇಕೆಂಬ ಅಲೌಕಿಕ ದೃಷ್ಟಿ ಸಹಿತ ಮುಖ್ಯ. ಇವೆರಡನ್ನು ಸಮನ್ವಯವಾಗಿ ಅರಿತಕೊಂಡು ಸಾಗುವುದೇ ಶಿವಾಚಾರವಾಗಿದೆ.

೪) ಗಣಾಚಾರ : ಶರಣ ಧರ್ಮದ ನಿಷ್ಠೆಯನ್ನು ವ್ಯಕ್ತಪಡಿಸುವ ದಿಟ್ಟವಾದ ಆಚಾರ ಇದಾಗಿದೆ. ಬಂಡಾಯದ ಸಂಘರ್ಷವೇ ಈ ಆಚಾರದ ನಿಲುವಾಗಿದೆ. ಗುರು - ಲಿಂಗ - ಜಂಗಮ ನಿಂದೆಯನ್ನು ಕೇಳಬಾರದು. ದ್ರೋಹಿಗಳನ್ನು ಖಂಡಿಸದೆ ಸುಮ್ಮನಿರಬಾರದು. ಒಟ್ಟಾರೆ ಅನ್ಯಾಯದ ವಿರುದ್ಧ ಪ್ರತಿಭಟಿಸುವುದೇ ಗಣಾಚಾರವಾಗಿದೆ. ಆಪ್ರತಿಭಟನೆಯಲ್ಲಿ ಹಿಂಸೆ - ಅಹಿಂಸೆಯ ಪ್ರಶ್ನೆ ಮುಖ್ಯವಾಗುವುದಿಲ್ಲವಾಗಿದೆ.

೫) ಭೃತ್ಯಾಚಾರ : ಪರಸ್ಪರರು ವಿನಯದಿಂದ ವರ್ತಿಸಿ ಸಹಕಾರ ಬಾಳ್ವೆ ನಡೆಸಬೇಕೆಂಬುದೇ ಭೃತ್ಯಾಚಾರವಾಗಿದೆ. ಹಿರಿಯರಾದರು ತಮಗಿಂತ ಕಿರಿಯ ಶರಣರ ಕರುಣೆಯಿಂದ ನಾನು ಬದುಕಿದೆನು ಎಂದು ಹೇಳುವ ಶಂಕರ ದಾಸಿಮಯ್ಯರ ಈ ಕೆಳಗಿನ ವಚನ ಭೃತ್ಯಾಚಾರಕ್ಕೆ ನಿದರ್ಶವಾಗಿದೆ.

ಎನ್ನ ಕಾಯಕ್ಕೆ ಗುರುವಾದನಯ್ಯಾ ಬಸವಣ್ಣನು

ಎನ್ನ ಜೀವಕ್ಕೆ ಲಿಂಗವಾದನಯ್ಯ ಚೆನ್ನ ಬಸವಣ್ಣನು

ಎನ್ನ ಪ್ರಾಣಕ್ಕೆ ಪ್ರಸಾದವಾದನಯ್ಯಾ ಮರುಳ ಶಂಕರ ದೇವರು

ಎನ್ನ ಜ್ಞಾನಕ್ಕೆ ಜಂಗಮವಾದನಯ್ಯಾ ಪ್ರಭುದೇವರು

ಇಂತಿವರ ಕರುಣದಿಂದ ಲಾನು ಬದುಕಿದೆನಯ್ಯಾ

ನಿಜಗುರು ಶಂಕರದೇವ ೩. ಹೀಗೆ ಈ ಪಂಚಾಚಾರಗಳಲ್ಲದೇ ಸಪ್ತಾಚಾರಗಳು ೪. ಜೊತೆಗೆ ಚೆನ್ನ ಬಸವಣ್ಣ ಐವತ್ತು ಆಚಾರಗಳನ್ನು ೫. ತಿಳಿಸಿದ್ದುದು ಶರಣ ಧರ್ಮದಲ್ಲಿ ಕಂಡು ಬರುತ್ತದೆ.

ಬಸವೋತ್ತರ ಯುಗ

ಈ ಯುಗದ ತತ್ವ ವಿವೇಚನೆ ಹಿಂದಿನ ಶರಣರಿಗಿಂತ ಭಿನ್ನವಾದ ಮಾರ್ಗದಲ್ಲಿ ಸಾಗಿತ್ತು. ಈ ಯುಗದ ಶರಣರು ಬಹುತೇಕ ವಿರಾಗಿಗಳು, ಸಂಸಾರ ಇದ್ದರೂ ನಿರಾಸಕ್ತರು, ಸಹಜವಾಗಿ ಅವರಿಗೆ ಸಂಸಾರದಲ್ಲಿ ವ್ಯಾಮೋಹವಿಲ್ಲ. ಅವರು ಏನೇ ವಿಚಾರಿಸಿದರು ಎಲ್ಲವೂ ಪರಮಾತ್ಮನ ವಿಚಾರವೇ ಹೀಗಾಗಿ ಅವರಿಗೆ ಲೌಕಿಕ ಬದುಕು ಸಂತೆಯ ಬಜಾರಿನಂತೆ ಕಂಡಿತು.

---

೧. ಸಂ: ಡಾ: ವೀರಣ್ಣ ರಾಜೂರು - ಸ.ವ.ಸಂ. -೫. ವಚನ ೨೬ ಪುಟ ೨೭೮

೨. ಸಂ: ಡಾ: ಎಸ್. ವಿದ್ಯಾಶಂಕರ - ಸ.ವ.ಸಂ. - ೭. ವಚನ ೮೮ ಪುಟ ೩೧೦

೩. ಸಂ: ಡಾ: ಬಿ.ಆರ್. ಹಿರೇಮಠ - ಸ.ವ.ಸಂ. - ೯, ವಚನ ೧, ಪುಟ ೫೪

೪. ಡಾ: ಪಿ.ವಿ. ನಾರಾಯಣ - ವ.ಸಾ.ಪ. ಪುಟ - ೯೫ ವಿವರಣೆಗೆ ಗಮನಿಸಿರಿ

೫. ಸಂ: ಶಾಂತರಸ - ಕಾ.ಪ. ಪುಟ - ೫೧೫ - ೫೧೭ ರವರೆಗೆ ವಿವರಣೆಗೆ ಗಮನಿಸಿರಿ.

ಈ ಯುಗದ ಶರಣರ ತತ್ವ ವಿವೇಚನೆಯನ್ನು ಅವರ ಸಾಹಿತ್ಯ ಗಮನಿಸಿದಾಗ ಪ್ರಮುಖವಾಗಿ ಅಲ್ಲಿ ನಾಲ್ಕು ಅಂಶಗಳು ಕಂಡು ಬರುತ್ತವೆ.

೧) ಭಕ್ತಿ ೨)ಜ್ಞಾನ ೩) ಸದಾಚಾರ ೪) ವೈರಾಗ್ಯ - ಇವುಗಳನ್ನು ನಾವು ಈ ಪರಿಸರದ ಈ ಯುಗದ ಶರಣರ ವಚನ, ಸ್ವರ ವಚನ ತತ್ವ ಪದಗಳ ಹಿನ್ನೆಲೆಯಲ್ಲಿ ಗಮನಿಸಬಹುದಾಗಿದೆ.

ಹೇಮಗಲ್ಲ ಹಂಪರ ಕೃತಿಯು ಸಂಪೂರ್ಣವಾಗಿ ಲಭ್ಯವಿಲ್ಲದಿದ್ದರು ಅದರಲ್ಲಿನ ಅನೇಕ ವಿಚಾರಗಳು ತಾತ್ವಿಕತೆಯಿಂದ ಕೂಡಿದೆ ಎಂಬುದು ಸ್ಪಷ್ಟವಾಗುತ್ತದೆ. ಅವರ ಆ ಕೃತಿಯ ಮೂಲಕ ನಾವು ತಾತ್ವಿಕ ವಿವೇಚನೆಯನ್ನು ಗುರುತಿಸಬಹುದಾಗಿದೆ.

೧) ಭಕ್ತಿ : ಸಾಧಕನಿಗೆ ಭಕ್ತಿ ಮುಖ್ಯವೆಂದರಿತ ಹೇಮಗಲ್ಲ ಹಂಪರು ಗುರುವಿನ ಮೂಲಕ ಭಕ್ತಿಯನ್ನು ಕಂಡು ಕೊಳ್ಳಬೇಕೆಂದು ತಿಳಿಸಿದರು. ಹರನಿಗಿಂತ ಅಧಿಕನಾದ ಗುರುವು ಶಿಷ್ಯನನ್ನು ಉದ್ಧರಿಸುವ ಪರಮಾತ್ಮ ಆತನ ಮೂಲಕವೇ ಹರನನ್ನು ಕಾಣಬಹುದು. ಆದ್ದರಿಂದ ಗುರು ಭಕ್ತಿ ಬಹುಮುಖ್ಯ ಹರನ ಮೂಲಕ ಗುರುವನ್ನು ಕಾಣಲು ಸಾಧ್ಯವಿಲ್ಲ. [೧] ಹಾಗೆಯೇ ಆ ಗುರುವಿನಿಂದಲೇ ಇಹ -ಪರ ಸಾರ್ಥಕವೆನ್ನುತ್ತಾರೆ.

ಈ ಯುಗದ ತತ್ವ ಪದಗಳನ್ನು ರಚಿಸಿದ ಶರಣರು ಭಕ್ತಿಗೆ ಪ್ರಾಮುಖ್ಯತೆ ನೀಡಿ ಗುರು ಭಕ್ತಿ - ದೈವ ಭಕ್ತಿಗಳೆರಡನ್ನು ತಮ್ಮದೆಯಾದ ರೀತಿಯಲ್ಲಿ ಅವರು ವಿವೇಚಿಸಿದ್ದಾರೆ.

ಒಂದೆಡೆ ಗಣಪತಿಯನ್ನು ಸ್ಮರಿಸುವ[೨] ಮತ್ತೊಂದೆಡೆ ಇಷ್ಟಲಿಂಗವೇ ಶ್ರೇಷ್ಠವೆಂದು[೩] ಸಾರಿ ಕಲ್ಲಿನ ಸ್ಥಾವರ ಪೂಜೆಯನ್ನು ಖಂಡಿಸುವ [೪] ಕೂಡಲೂರು ಬಸವಲಿಂಗ ಶರಣರ ತಾತ್ವಿಕ ವಿವೇಚನೆಯನ್ನು - ಅವರ ಭಕ್ತಿಯ ನಿಲುವನ್ನು ಅರಿಯುವುದು ಬಹು ಕಷ್ಟ ಸಾಧ್ಯ.

ನೀಲರಕೇರಿ ಬಸವಲಿಂಗ ಶರಣರು ಒಂದೆಡೆ ಬಸವಯುಗದ ಶರಣ ತತ್ವಕ್ಕೆ ಮಾರು ಹೋದವರು, ಮತ್ತೊಂದೆಡೆ ಶಕ್ತಿಯನ್ನು ನಂಬಿದವರು. ಬಸವ ಯುಗದ ಶಕ್ತಿ ವಿಶಿಷ್ಟಾದ್ವೈತವನ್ನು ಸಮನ್ವಯಗೋಳಿಸಿ ಇವರು ತತ್ವ ವಿವೇಚನೆ ಮಾಡಿದ್ದಾರೆ. ಗುರುವಿನ ಮೇಲೆ ಅಪಾರ ಭಕ್ತಿಯಿದೆ. ಗುರು ಕಾರುಣ್ಯವಿದ್ದರೆ ಸಾಕು ಏನೆಲ್ಲವನ್ನು ಸಾಧಿಸಬಹುದು ಎಂದು ಹೇಳುತ್ತಾ ಆ ಗುರುವನ್ನು ದಿನನಿತ್ಯವೂ ಮನದಲ್ಲಿ ನೆನೆದರೆ ಮುಕ್ತಿಯಿದೆ ಎನ್ನುತ್ತಾರೆ. [೬]

ಗಬ್ಬೂರು ಹಂಪಣ್ಣನವರು .ತಮ್ಮ ಗುರುವರನ ಕರುಣದಿ[೭] , ಗುರುವೇ ನಿನಗೆ ಶರುಣು[೮] ಎಂಬ ಹಾಡುಗಳಲ್ಲಿ ಗುರು ಭಕ್ತಿಯ ಮೂಲಕ ತತ್ವ ವಿವೇಚಿಸಿದ್ದಾರೆ. ಘನ ಮಠ ನಾಗಭೂಷಣ ಅತ್ಯಂತ ನಿಷ್ಠುರವಾಗಿ ತತ್ವ ವಿವೇಚನೆ ಮಾಡಿದ್ದಾರೆಂಬುದು ಅವರ ಹಾಡುಗಳಲ್ಲಿ ಕಾಣಬಹುದಾಗಿದೆ.[೯]

೨) ಜ್ಞಾನ : ಸಾಧಕ ಅಂತಿಮ ಹಂತ ಕಾಣಬೇಕಾದರೇ ಜ್ಞಾನ ಪಡೆಯುವುದು ಬಹು ಮುಖ್ಯ. ಅದು ಮುಕ್ತಿಯನ್ನು ಕಂಡು ಕೊಳ್ಳುವ ಸಾಧನವಾಗಿದೆ. ಜ್ಞಾನವೆಂದರೆ ಚೇತನಾ ಸ್ವರೂಪಿ ಎಂಬುದನ್ನು ಹೇಮಗಲ್ಲ ಹಂಪರು ತಮ್ಮ ಪಿಂಡಜ್ಞಾನಸ್ಥಲದ ವಚನಗಳಲ್ಲಿ ತಿಳಿಸಿದ್ದಾರೆ. [೧೦]ಇದೇ ರೀತಿ ಜ್ಞಾನ ಸ್ವರೂಪವನ್ನು ಕುರಿತು ತತ್ವ ಪದಗಳನ್ನು ರಚಿಸಿದ ಶರಣರು ಸಹ ತಿಳಿಸಿದ್ದಾರೆ. ಅವರ ಪ್ರಕಾರ ಜ್ಞಾನ ಮೋಕ್ಷಕ್ಕೆ ಸಾಧನವೆಂಬುದಾಗಿ ತಿಳಿದು ಬರುತ್ತದೆ. ಇದನ್ನು ನಾವು ಗೊಬ್ಬೂರು ಹಂಪಣ್ಣ , ನೀರಲಕೇರಿ ಬಸವಲಿಂಗ ಶರಣ , ಮುಂತಾದವರಲ್ಲಿ ಕಾಣಬಹುದಾಗಿದೆ.

---

೧ : ಸಂ : ಡಾ : ವೀರಣ್ಣ ರಾಜೂರು -ಸ.ವ.ಸಂ. -೧೪, ವಚನ ೨೦೩ ,ಪುಟ ೫೨೭-೫೨೮

೨ : ಆಯ್ಕೆ : ಎಸ್.ಜಿ. ಸ್ವಾಮಿ-ಕೂ.ಬ. ಪದ್ಯ ೧ , ನುಡಿ೧-೩, ಪುಟ೧

೩ : ಅದೇ : ಪದ್ಯ ೩೬, ನುಡಿ೧- ೩,ಪುಟ ೨೯

೪ : ಅದೇ : ಪದ್ಯ ೫೭, ನುಡಿ೧-೧೩, ಪುಟ ೪೭

೫ : ಸಂ : ಡಾ : ಬಸವಲಿಂಗ ಸೊಪ್ಪಿಮಠ -ನೀ.ಬ.ಶಿ.ಸ್ವ. ಪದ್ಯ ೧೬, ನುಡಿ೧-೩, ಪುಟ೯-೧೦

೬ : ಅದೇ : ಪದ್ಯ ೧೭, ನುಡಿ೧-೫, ಪುಟ ೧೦,

೭ : ಆಯ್ಕೆ : ರಾಮಸ್ವಾಮಿ ನುಲಿ -ಗೊ.ಹಂ. -ಪದ್ಯ , ೧೫, ನುಡಿ ೧-೫, ಪುಟ ೧೪-೧೫

೮ : ಅದೇ : ಪದ್ಯ ೧೬, ನುಡಿ ೧-೩, ಪುಟ ೧೫-೧೬

೯ : ಆಯ್ಕೆ : ಚೆನ್ನಬಸಪ್ಪ ಬೆಟ್ಟದೂರು -ಘ.ನಾ.ಶಿ.-ನುಡಿ೧, ಪುಟ ೧೦, ೩೨, ೩೩

೧೦ : ಸಂ : ಡಾ : ವೀರಣ್ಣ ರಾಜೂರು -ಸ.ವ.ಸಂ. -೧೪, ವಚನ ೩೯, ಪುಟ ೪೪೯

೩) ಸದಾಚಾರ : ಇದು ಸಾಧಕನ ಸ್ಥಿತಿ ಹೇಗಿರಬೇಕೆಂಬುದನ್ನು ತಿಳಿಸುತ್ತದೆ. ಸದಾಚಾರದ ಆಚರಣೆಯಿಂದ ಸಾಧಕರ ಸಾಧನೆ ಸಮರ್ಥವಾಗಬಲ್ಲುದಾಗಿದೆ. ನುಡಿದಂತೆ ನಡೆಯುವುದು ಸದಾಚಾರದಲ್ಲಿ ಬಹುಮುಖ್ಯವಾಗಿದೆಂಬ ಅಭಿಪ್ರಾಯ ಹೇಮಗಲ್ಲ ಹಂಪನರದಾಗಿದೆ. ಇವರು ಸದಾಚಾರದ ಅನೇಕ ವಿಷಯಗಳನ್ನು ಬಸವಯುಗದ ಶರಣರ ಆಶಯಗಳನ್ನು ಆಧರಿಸಿ ವ್ಯಕ್ತಪಡಿಸಿದ್ದನ್ನು ಅವರ ಅನೇಕ ವಚನಗಳಲ್ಲಿ ಕಾಣಬಹುದಾಗಿದೆ. ೨

ಕೂಡಲೂರು ಬಸವಲಿಂಗ ಶರಣರು ಸದಾಚಾರವನ್ನು ಮನುಷ್ಯ ಸಂಬಂಧಗಳ ಹಿನ್ನೆಲೆಯಲ್ಲಿ ತಮ್ಮ ' ದಾನ ಧರ್ಮ ಮಾಡಲಿಲ್ಲ ಪಿಸನಾಸಿ ' ೩ ಎಂಬ ಹಾಡಿನಲ್ಲಿ ವ್ಯಕ್ತಪಡಿಸಿದ್ದಾರೆ. ಗೊಬ್ಬೂರು ಹಂಪಣ್ಣನವರ 'ಪಾತಕ ಜನರೊಳು ಯಾತರ ಮಾತೇಳೆ' ೪ ಎಂಬ ಹಾಡಿನಲ್ಲಿ ಸದಾಚಾರದ ಆಶಯಗಳನ್ನು ಗುರುತಿಸಬಹುದು. ಹಾಗೆಯೇ ನೀರಲಕೇರಿ ಬಸವಲಿಂಗ ಶರಣರು ತಮ್ಮ ' ಹೊಯ್ಯಲೋ ಡಂಗುರವು' ೫ ಎಂಬ ಹಾಡಿನಲ್ಲಿ , ಘನ ಮಠ ನಾಗಭೂಷಣ ಶರಣರು ' ಕರ್ಮಂಗಳೊಳು ಬಳಲುವನೆ ಹೆಡ್ಡ ' ೬ ಎಂಬಹಾಡಿನಲ್ಲಿ ಈ ಅಂಶದ ಮೂಲಕ ತತ್ವ ವಿವೇಚನೆ ಮಾಡಿದ್ದಾರೆ.

೪) ವೈರಾಗ್ಯ : ಆಸೆಯಾಮಿಷಗಳಿಂದ ದೂರವಿದ್ದು ನಿರ್ಮೋಹಿತ ಸ್ಥಿತಿಯ ಉತ್ತುಂಗಾವಸ್ಥೆಯನ್ನು ತಲುಪುವುದೆ ವೈರಾಗ್ಯ ಎನಿಸಿಕೊಳ್ಳುತ್ತದೆ. ಈ ಸಂದರ್ಭದಲ್ಲಿ ಈ ಯುಗದ ಶರಣರು ಅನುಸರಿಸಿದ ಮಾರ್ಗ ಕಾಮವಿಮುಖತೆ ; ವೈಯಕ್ತಿಕತೆಯ ನಾಶದ ಧೋರಣೆ ಹೊಂದಿದ್ದರು. ವೈರಾಗ್ಯ ಸಾಧಿಸಲು ಸಂಸಾರ ಅಡ್ಡಿಯೆಂಬುದು ಈ ಯುಗದ ಶರಣರ ಭಾವನೆಯಾಗಿತ್ತು.

ವೈರಾಗ್ಯವನ್ನು ಬಯಸಿದ ವ್ಯಕ್ತಿಗೆ ಈ ಲೋಕ ಎಷ್ಟು ಬಗೆಯಿಂದ ಕಾಡುತ್ತಿದೆ. ಅದನ್ನು ಅದರ ಸುಖವನ್ನು ಕಡೆಗಣಿಸಿ ವೈರಾಗ್ಯ ಸಾಧಿಸಬೇಕೆಂದು ಹೇಮಗಲ್ಲ ಹಂಪರು ಈ ಕೆಳಗಿನ ವಚನದ ಮೂಲಕ ಹೇಳುತ್ತಾರೆ.

'ಅನ್ನ ಉದಕದ ದೆಸೆಯಿಂದ ನಿದ್ರೆ, ನಿದ್ರೆಯಿಂದ ಕಾಮ,

ಕಾಮದಿಂದ ಅಜ್ಞಾನ, ಅಜ್ಞಾನದಿಂದ ಕರ್ಮ' ೭ ಎಂದು ಹೇಳಿ ವೈರಾಗ್ಯ ಸಾಧಿಸಲು ಇವುಗಳ ತ್ಯಾಗ ಆವಶ್ಯಕವೆನ್ನುತ್ತಾರೆ. ಹಾಗೆಯೇ ಅರಿಷಡ್ವರ್ಗಗಳು ಅವನನ್ನು ಕಾಡಿದರೂ ಅವುಗಳನ್ನು ಮೀರಿನಿಂತು ವೈರಾಗ್ಯ ಸಾಧಿಸಬೇಕೆಂದು ಇವರು ಹೇಳುತ್ತಾರೆ. ೮

ಗಬ್ಬೂರು ಹಂಪಣ್ಣನವರು ' ನಂಬ ಬ್ಯಾಡಲೋ ನೀನು ' ೯ ಎಂಬ ಹಾಡಿನಲ್ಲಿ ನೀರಲಕೇರಿ ಬಸವಲಿಂಗ ಶರಣರು. 'ಬ್ರಹ್ಮಾನಂದ ಬ್ರಹ್ಮಾನಂದ' ಎಂಬ ಹಾಡಿನಲ್ಲಿ ೧೦ ವೈರಾಗ್ಯದ ಸ್ಥಿತಿ ತಿಳಿಸುತ್ತಾರೆ.

ಕೂಡಲೂರು ಬಸವಲಿಂಗ ಶರಣರು ತಮ್ಮ ' ಕಾಯ ಎಂಬುದು ತಂಗಿ ಛಾಯದ ಪಟ್ಟಣವು' ೧೧ ಎಂಬ ಹಾಡಿನಲ್ಲಿ ವೈರಾಗ್ಯದ ಸೂಕ್ಷ್ಮ ಸ್ಥಿತಿಗಳನ್ನು ತಿಳಿಸುತ್ತಾರೆ.

ಈ ಯುಗದಲ್ಲಿ ಕಂಡು ಬರುವ ಕೃತಿ ರಚಿಸಿದ ಏಕೈಕ ಶರಣೆಯಾದ ರಾಯಚೂರು ಹನುಮಂತವ್ವ ತನ್ನ ಅನೇಕ ಹಾಡುಗಳಲ್ಲಿ ವೈರಾಗ್ಯವನ್ನು ಚಿತ್ರಿಸಿದ್ದಾಳೆಂಬುದು ತಿಳಿದು ಬರುತ್ತದೆ. ೧೨

---

೧ : ಸಂ : ಡಾ : ವೀರಣ್ಣ ರಾಜೂರು -ಸ.ವ.ಸಂ.೧೪, ವಚನ ೮೪, ಪುಟ ೪೭೨

೨ : ಅದೇ : ವಚನ ೧೧೦, ೨೬೫, ಪುಟ ೪೮೫, ೫೬೧

೩ : ಆಯ್ಕೆ : ಎಸ್.ಜಿ. ಸ್ವಾಮಿ -ಕೂ.ಬ. - ಪದ್ಯ ೬೦, ನುಡಿ ೧-೨ ಪುಟ ೫೦-೫೧

೪ : ಆಯ್ಕೆ : ರಾಮಸ್ವಾಮಿ ನುಲಿ -ಗೊ.ಹಂ. ಪದ್ಯ ೩೩, ನುಡಿ ೧-೩, ಪುಟ ೩೦

೫ : ಸಂ : ಡಾ : ಬಸವಲಿಂಗ ಸೊಪ್ಪಿಮಠ -ನೀ.ಬ.ಶಿ.ಸ್ವ - ಪದ್ಯ ೧೭೭, ನುಡಿ ೧-೨೨, ಪುಟ ೧೦೮-೧೧೦

೬ : ಆಯ್ಕೆ : ಚೆನ್ನ ಬಸಪ್ಪ ಬೆಟ್ಟದೂರು -ಘ.ನಾ.ಶಿ.ನುಡಿ ೧-೨೯, ಪುಟ ೧೦-೧೩

೭ : ಸಂ : ಡಾ : ವೀರಣ್ಣ ರಾಜೂರು - ಸ.ವ.ಸಂ.-೧೪, ವಚನ ೭೩, ಪುಟ ೪೬೪

೮ : ಅದೇ : ವಚನ ೧೦೩, ಪುಟ ೪೮೧,

೯ : ಆಯ್ಕೆ : ರಾಮಸ್ವಾಮಿ ನುಲಿ -ಗೊ.ಹಂ. ಪದ್ಯ ೨೪, ನುಡಿ ೧-೩, ಪುಟ ೨೩

೧೦ : ಸಂ : ಡಾ ; ಬಸವಲಿಂಗ ಸೊಪ್ಪಿಮಠ -ನೀ.ಬ.ಶಿ.ಸ್ವ - ಪದ್ಯ ೪೬, ನುಡಿ ೧-೩, ಪುಟ ೨೬-೨೭

೧೧ : ಆಯ್ಕೆ : ಎಸ್.ಜಿ. ಸ್ವಾಮಿ- ಕೂ.ಬ. ಪದ್ಯ ೪, ನುಡಿ ೨, ಪುಟ ೩

೧೨ : ಸಂ : ಡಾ : ಬಸವಲಿಂಗ ಸೊಪ್ಪಿಮಠ-ಕ.ಪ್ರ.ಪುಟ ೧೨೫

ಬಸವೋತ್ತರ ಯುಗದ ಶರಣರ ತಾತ್ವಿಕ ವಿವೇಚನೆ ಅವಲೋಕಿಸಿದಾಗ ಇವರಿಗೆ ಸಂಸಾರದ ಬಗ್ಗೆ ತಿರಸ್ಕಾರದ ಭಾವನೆ ಕಂಡು ಬರುವುದು ಅವರ ಹಾಡುಗಳಲ್ಲಿ ಸ್ಪಷ್ಟವಾಗುತ್ತದೆ. ಲೈಗಿಕ ಸಂಕೇತಗಳನ್ನು ಬಳಸಿಅವುಗಳನ್ನು ತತ್ವ ವಿವರಣೆಗೆ ಬಳಸಿ ಕೊಳ್ಳುತ್ತಾರೆ. ಕಾಮದ ಬಗ್ಗೆ ಇವರಿಗೆ ಒಲವಿಲ್ಲದಿದ್ದರೂ ಈ ಕಾಮವನ್ನೇ ಬಳಸಿ ತಾತ್ವಿಕದಂತಹ ಕಠಿಣ ವಿಷಯವನ್ನು ಸರಳಗೊಳಿಸಿ ಸರ್ವರಿಗೂ ಅರ್ಥವಾಗುವಂತೆ ಸಾಧ್ಯಮಾಡಿ ತೋರಿಸಿದರು. ಅತಿ ಕಾಮುಕತೆ ಕಡಿವಾಣ ಹಾಕಿ ಪ್ರೀತಿಯ ಕಡೆಗೆ ಮನಸ್ಸನ್ನು ಬೆಳೆಸಿದರು. ಅತಿ ವ್ಯಾಮೋಹ ಸರ್ವನಾಶಕ್ಕೆ ನಾಂದಿ ಎಂಬ ವಾಸ್ತವಿಕ ಸತ್ಯವನ್ನು ತಿಳಿಸಿದರು. ಆ ಕಾರಣದಿಂದಾಗಿಯೇ ಇವರು ತಮ್ಮ ತತ್ವ ವಿವೇಚನೆಗೆ ಭಕ್ತಿ, ಜ್ಞಾನ, ಸದಾಚಾರ, ವೈರಾಗ್ಯಗಳನ್ನು ಬಳಸಿಕೊಂಡರು. ಸಾಧಕ ತತ್ವ ತಿಳಿದು ಮೋಕ್ಷವನ್ನು ಪಡೆಯುವುದೇ ಅವನ ಅಂತಿಮ ಗುರಿ ಎಂಬುದನ್ನು ನಾವು ಅವರ ಈ ನಾಲ್ಕು ಅಂಶಗಳ ಮೂಲಕ ತಿಳಿಯಬಹುದಾಗಿದೆ.

೬ : ೪ ಧಾರ್ಮಿಕ ಸಮನ್ವಯತೆ

ಬಸವ ಪೂರ್ವಯುಗದ ಢಕ್ಕೆಯ ಮಾರಯ್ಯ ಸಮಕಾಲೀನ ಶರಣರು ಕ್ಷುದ್ರದೇವತೆಗಳನ್ನು ನಿರಾಕರಿಸಿದ್ದರೂ ಅವರು ಶರಣರ ತತ್ವಗಳ ಜೊತೆಯಲ್ಲಿಯೇ ಮಾರಿಯನ್ನು ಸಮನ್ವಯಗೊಳಿಸಿ ತಮ್ಮ ವಿಚಾರ ತಿಳಿಸುವ ಮೂಲಕ ಅಂದಿನ ಸಮನ್ವಯತೆಗೆ ಸ್ವಲ್ಪ ಮಟ್ಟಿಗೆ ಕಾರಣರಾದರು.

ಬಸವಪೂರ್ವಯುಗ - ಬಸವಯುಗದ ಶರಣರ ಸಂದರ್ಭದಲ್ಲಿ ಸಮನ್ವಯತೆಗಿಂತ ಸಂಘರ್ಷ ನಡೆದಿತ್ತು. ಒಂದೆಡೆ ಜೈನ ಧರ್ಮದ ಅವಸಾನ - ಮತ್ತೊಂದಡೆ ವೈದಿಕರ ಉತ್ಕರ್ಷಗಳು, ಇನ್ನೊಂದೆಡೆ ಕೆಳಸ್ತರದಲ್ಲಿ ವರ್ಣರಂಜಿತ ಭಯಾನಕ, ಚಿತ್ರ-ವಿಚಿತ್ರಗಳ ದೈವಗಳ ಆಚರಣೆ ಇವುಗಳನ್ನು ಈ ಯುಗದ ಶರಣರು ಖಂಡಿಸಿದಾಗ ಸಹಜವಾಗಿ ಅಲ್ಲಿ ಸಮನ್ವಯತೆಗಿಂತ ಸಂಘರ್ಷವೇ ಅಧಿಕವಾಗಿತ್ತು. ಬಸವ ಯುಗ - ಬಸವ ಪೂರ್ವ ಯುಗದ ಶರಣರಿಗೆ ಸಮನ್ವಯತೆಗಿಂತ ಮಾನವೀಯತೆ ಬಹಳ ಮುಖ್ಯವಾಗಿತ್ತು. ಅದಕ್ಕಾಗಿ ಅವರು ವಾಸ್ತವಿಕ ವಿಚಾರಗಳನ್ನು ಮೊದಲ ಬಾರಿಗೆ ತಿಳಿಸಿ ಕೊಟ್ಟರು.

ಮುಂದೆ ಕಲ್ಯಾಣಕ್ರಾಂತಿ ನಡೆದಾಗ ಶರಣ ಧರ್ಮದ ಸಾಂಘಿಕ ವ್ಯವಸ್ಥೆಗೆ ಬಲವಾದ ಪೆಟ್ಟು ಬಿದ್ದಿತು. ಆಗ ಪುನಃ ಮತ್ತೆ ಶೈವರ ಅನೇಕ ಪಂಥಗಳು ಶರಣ ಧರ್ಮದಲ್ಲಿ ಮೂಗು ತೂರಿಸಿ ಶರಣರ ಆದರ್ಶವನ್ನೇ ಬದಲಾಯಿಸಿದವು. ಆಚಾರ ಧರ್ಮವಾಗಿದ್ದ ಶರಣ ಧರ್ಮ ಪ್ರಚಾರ ಧರ್ಮವಾಗಿ ಮುಂದೆ ಮತೀಯ ಧರ್ಮವಾಗಿ ಬೆಳೆಯ ತೊಡಗಿತು. ಅಂತಹ ಸ್ಥಿತಿಯಿಂದ ಈ ಪರಿಸರವೇನೂ ಹೊರತಾಗಿಲ್ಲ. ಹಾಗಾಗಿ ಅಗ್ಘವಣಿ ಹಂಪಯ್ಯನಂತಹ ಬಸವೋತ್ತರ ಯುಗದ ಶರಣರಲ್ಲಿ ವೈದಿಕರ ಬಾಹ್ಯ ಆಚರಣೆಗಳು ಕಂಡು ಬರಲು ಸಾಧ್ಯವಾಯಿತು. ಮುಂದೆ ನಡೆದ ರಾಜಕೀಯ ಬದಲಾವಣೆಯ ಗಾಳಿ ಈ ಪರಿಸರದಲ್ಲುಂಟಾಗಿ ಹೊಸ ಧರ್ಮವೊಂದರ ಪ್ರವೇಶವಾದಾಗ ಈ ಪರಿಸರದ ಶರಣರು ಆರಂಭದಲ್ಲಿ ಸಂಘರ್ಷಕ್ಕಿಳಿದರೂ ಮುಂದೆ ಸಮನ್ವಯತೆಯ ಕಡೆಗೆ ತಮ್ಮ ಗಮನ ಹರಿಸ ತೊಡಗಿದರು. ಅಂತಹ ಸಂದರ್ಭದಲ್ಲಿ ಈ ಪರಿಸರದಲ್ಲಿ ಜಲದುರ್ಗದ ಶರಣರು ಕಂಡು ಬಂದರು. ನಾಥ - ಸಿದ್ಧ ಸಂಪ್ರದಾಯಗಳನ್ನು ಆಚರಿಸುತ್ತಲೇ ಶರಣರ ತತ್ವ ಚಿಂತನೆಯನ್ನು ಮಾಡಿದರು. ಮತ್ತೊಮ್ಮೆ ಈ ಪರಿಸರದಲ್ಲಿ ಕಲ್ಯಾಣದ ವಾತಾವರಣ ನಿರ್ಮಿಸಲು ಪ್ರಯತ್ನಿಸಿದರು. ಕೊಡೇಕಲ್ ಬಸವಣ್ಣ ಮತ್ತು ಆತನ ಪರಿವಾರದವರೆಲ್ಲ ಜಲದುರ್ಗವನ್ನು ನೆಲೆಯಾಗಿ ಮಾಡಿಕೊಂಡು ಧರ್ಮ ಪ್ರಚಾರ ನಡೆಸಿದರು. ಆಗ ಸಹಜವಾಗಿ ಇಸ್ಲಾಂ ಧರ್ಮ - ಅರಸರನ್ನು ಎದುರಿಸಬೇಕಾಯಿತು. ಇಂತಹ ಸಂದರ್ಭದಲ್ಲಿ ಅವರಿಗೆ ಸಮನ್ವಯತೆ ಅವಶ್ಯಕವಾಯಿತು. ಕಾರಣ ಶರಣರು ಇಷ್ಟಲಿಂಗ ಕಳಚಿ ಮತ್ತೊಂದು ಹೊಸ ಪರಂಪರೆಗೆ ನಾಂದಿ ಹಾಡಲಾಯಿತು. ಸಂಘರ್ಷ-ಸಮನ್ವಯತೆಯ ನಡುವಿನಲ್ಲಿಯೇ ಬದುಕಲು ಯತ್ನಿಸಿದಾಗ ಮತ್ತೊಂದು ಕ್ರಾಂತಿ ನಡೆದೇ ಹೋಯಿತು. ಆಗ ಈ ಪರಿಸರದ ಶರಣರ ಧರ್ಮ ಮತ್ತೆ ತನ್ನ ಅಸ್ತಿತ್ವ ಕಳೆದು ಕೊಂಡಿತು. ಮುಂದೆ ಅದು ಹೇಮಗಲ್ಲ ಹಂಪರಂತವರಲ್ಲಿ ವೈಯಕ್ತಿಕ ಮಟ್ಟದಲ್ಲಿ ನಡೆಯಿತು. ಆನಂತರ ಬಂದ ಶರಣರು ಒಂದೆಡೆ ಇಸ್ಲಾಂ - ಮತ್ತೊಂದೆಡೆ ಕ್ರೈಸ್ತ ಧರ್ಮಗಳ ಪ್ರಭಾವದ ಜೊತೆಯಲ್ಲಿಯೇ ವೈದಿಕ ಶಾಹಿಯ ಶೋಷಣೆಯನ್ನು ಅನುಭವಿಸಬೇಕಾಗಿತ್ತು. ಜನರಿಗೆ ನೆಮ್ಮದಿಯ ಅವಶ್ಯಕತೆ ಇತ್ತು. ಧಾರ್ಮಿಕ ಸಂಘರ್ಷ-ರಾಜಕೀಯ ಸಂಘರ್ಷವಾಗಿ ಪರಿವರ್ತಿತವಾದಾಗಲಂತೂ ಸಾಮಾನ್ಯರ ಸ್ಥಿತಿ ಬಹಳ ಶೋಚನಿಯವಾಗಿತ್ತು.

ಮನುಷ್ಯತ್ವವೇ ಮಾಯವಾಗಿ ಧರ್ಮಾಂಧತೆ ತಲೆದೋರಿದಾಗ ಈ ಪರಿಸರದಲ್ಲಿ ಬಸವೋತ್ತರ ಯುಗದಲ್ಲಿ ತತ್ವಪದಗಳನ್ನು ರಚಿಸಿದ ಶರಣರು ತಮ್ಮ ರಚನೆಗಳ ಮೂಲಕ ಧಾರ್ಮಿಕ ಪಟವನ್ನೇ ಬದಲಾಯಿಸಿದರು. ಜನಗಳ ಮಧ್ಯೆ ಮಧುರ ಭಾವನೆ ಮೂಡಿಸುವುದು ಅವರಿಗೆ ಬಹು ಮುಖ್ಯವಾಗಿತ್ತು. ಹಿತಮಿತವಾಗಿ ಖಂಡಿಸಿ ಜನರನ್ನು ತಿದ್ದುವ ಪ್ರಯತ್ನ ಮಾಡಿದರು. ಅವರಿಗೆ ಸಂಘರ್ಷಕ್ಕಿಂತ ಸಮನ್ವಯತೆ ಬಹು ಮುಖ್ಯವಾಗಿತ್ತು. ಅದಕ್ಕಿಂತಲೂ ಅವರಿಗೆ ಆಧ್ಯಾತ್ಮ ಮುಖ್ಯವಾಗಿತ್ತು. ಹೀಗಾಗಿ ಅವರು ಯಾವುದೇ ದೈವವನ್ನು ಕುರಿತು ಹೇಳಿದರು ಕೊನೆಗೆ ಅದನ್ನು ಅಂತಿಮ ಸ್ಥಿತಿಗೆ ತಂದು ಅದಕ್ಕೆ ನಿರಾಕಾರವನ್ನು ಕಲ್ಪಿಸಿ ಕೊಟ್ಟರು. ಬೇರೆ ಬೇರೆ ಜಾತಿಯಿಂದ ಅವರೆಲ್ಲಾ ಬಂದರೂ ಕೊನೆಗೆ ಜಾತಿಯನ್ನು ಮರೆತು ಅವರು ಜಾತಿಗಿಂತ ತತ್ವಕ್ಕೆ ಪ್ರಾಮುಖ್ಯತೆ ನೀಡಿದರು. ತತ್ವವನ್ನು ಗಳಿಸಲು ಯಾವ ಹಾದಿಯಾದರೂ ಸರಿಯೇ ಎಂದು ಸಾರಿದರು. ಹೀಗಾಗಿ ಇವರಲ್ಲಿ ಅನೇಕ ದ್ವಂದ್ವತೆಗಳು ಕಾಣಿಸಿ ಕೊಂಡವು. ಇಷ್ಟಾದರೂ ಶರಣ ಧರ್ಮ ಪರಿಕಲ್ಪನೆಯ ಅನುಭಾವವನ್ನು ಅವರು ಅಂತಿಮವಾಗಿ ಸಾಧಿಸಿದ್ದರೆಂಬುದು ಗಮನಿಸಬೇಕಾದ ಸಂಗತಿಯಾಗಿದೆ.

ಶರಣರು ವಿಭಿನ್ನ ಮಾರ್ಗಗಳನ್ನು ಹೊಂದಿದ್ದರೂ ಅವೆಲ್ಲವುಗಳನ್ನು ಕೊನೆಗೆ ಅನುಭಾವ ಮಾರ್ಗಕ್ಕೆ ತಿರುಗಿಸಿದರು. ಶರಣ ಧರ್ಮದ ಅಂತಿಮ ತಿರುಳಾದ ಅನುಭಾವನ್ನು ಅನೇಕ ರೀತಿಯಲ್ಲಿ ಬಸವೋತ್ತರ ಯುಗದ ಶರಣರು ಸಾಧಿಸಿದರು. ಒಟ್ಟಾರೆ ಶರಣ ಧರ್ಮ ಮನುಷ್ಯನ ಮಾನವೀಯತೆಗೆ ಬೆಲೆ ಕೊಟ್ಟು ಅವನ ಅಜ್ಞಾನಗಳನ್ನು ಖಂಡಿಸಿ ವೈಚಾರಿಕ ನೆಲೆಯಲ್ಲಿ ಮೂಡಿ ಬಂದಿತು. ಜಾತ್ಯಾತೀತ, ವರ್ಗಾತೀತ ನಿಲುವುಗಳನ್ನು ಖಂಡಿಸಿ ಸರ್ವರೂ ಪ್ರೀತಿಯಿಂದ ಅಪ್ಪಿಕೊಳ್ಳುವ ಸರಳ ಮಾರ್ಗವನ್ನು ಶರಣರ ಧರ್ಮ ಪ್ರಾಯೋಗಿಕವಾಗಿ ತೆರೆದು ತೋರಿಸಿತು.

ಅಧ್ಯಾಯ : ೦೭

ರಾಯಚೂರು ಪರಿಸರದ ಶರಣ ಸಾಹಿತ್ಯದಲ್ಲಿ ನಿರೂಪಿತವಾದ ಪ್ರಕೃತಿ ಮತ್ತು ಸಂಸ್ಕೃತಿ

೭ : ೧ ಪ್ರಕೃತಿ ಮತ್ತು ಸಂಸ್ಕೃತಿ

ಒಂದು ಸ್ಥಿತಿಯ ನೆಲೆಯಲ್ಲಿ ಸ್ಥಿರತೆಯೊಂದಿಗೆ ವಿಶ್ವದ ಚಲನೆಯ ಜೊತೆ ಬದಲಾವಣೆಯಾಗುವ ಪ್ರಕೃತಿ ಮಾನವರ ಅತಿ ಚಲನೆಯಿಂದಾಗಿ ತನ್ನ ಅಂತಿಮಾವಸ್ಥೆ ಕಂಡು ಕೊಳ್ಳುತ್ತದೆ.

ಪ್ರಕೃತಿ ಮತ್ತು ಮನುಷ್ಯರ ಸಂಬಂಧ ಅವಿನಾಭಾವವಾದುದಾಗಿದೆ. ಆದರೆ ದಿನಗಳೆದಂತೆಲ್ಲ ಅವನು ಪ್ರಕೃತಿಯಿಂದ ಬೇರೆಯಾದನು. ಯಾವಾಗ ಪ್ರಕೃತಿಯಿಂದ ಆಚೆ ಬಂದು ನಿಂತನೋ ಆಗ ಪ್ರಕೃತಿ ತನಗಿಂತ ಭಿನ್ನವೆಂದು ಭಾವಿಸತೊಡಗಿದನು. ಆಗ ಪ್ರಕೃತಿ ಇರುವುದು ತನಗಾಗಿ, ತನ್ನ ಉಪಭೋಗಕ್ಕಾಗಿ ಎಂದು ಭಾವಿಸಿ ತನ್ನ ಇರುವಿಕೆಯನ್ನು ಪ್ರಕೃತಿಯಿಂದ ಬೇರ್ಪಡಿಸಿ ಕೊಂಡಾಗ ಅದು ವಿಕೃತಿಯ ದಿಸೆಯನ್ನು ಮುಟ್ಟಲಾರಂಭಿಸಿತು. ಸಂಸ್ಕೃತಿಯ ಜೀವಾಳವಾಗಿದ್ದ ಪ್ರಕೃತಿ ಮನುಷ್ಯರ ಬೌದ್ಧಿಕ ಜಾಗೃತಿಯಿಂದಾಗಿ ವಿಕೃತಾವಸ್ಥೆಗೆ ಬಂದು ಮುಟ್ಟಿತು.

ವಿಕೃತಿ ಗೊಂಡ ಪ್ರಕೃತಿಯನ್ನು ಆಕೃತಿಯನ್ನಾಗಿರಿಸಿ ಅದಕ್ಕೆ ಪೂರ್ವದ ಸ್ಥಿತಿಗೆ ತರಬಲ್ಲ ಶಕ್ತಿ ಸಂಸ್ಕೃತಿಗಿದೆ. ಸಂಸ್ಕೃತಿಯೆಂದರೆ ಒಂದು ರೀತಿಯಲ್ಲಿ ಪ್ರಕೃತಿಯ ಆರಾಧನೆಯಾಗಿದೆ. ಪ್ರಕೃತಿ ಆರಾಧನೆಯು ಹೃದಯದ ಪರಿಪಕ್ವತೆಯಿಂದ ಕೂಡಿರ ಬೇಕು. ಇಂತಹ ಹೃದಯ ಪರಿಪಕ್ವತೆಗೆ ಸಂಸ್ಕೃತಿಯು ಪೂರಕವಾಗಬಲ್ಲುದಾಗಿದೆ. ಅಂತರಾತ್ಮದಲ್ಲಿ ಉಂಟಾಗುವ ಪರಿವರ್ತನೆ ನೈಜ ಸಂಸ್ಕೃತಿಯಾಗಬಲ್ಲುದು. ಇದನ್ನು ಪ್ರಕೃತಿಯ ವಿಶಾಲ ಮನೋಭಾವನೆಯ ಗುಣದಿಂದ ಕಂಡು ಕೊಳ್ಳಬಹುದಾಗಿದೆ. ಇಂತಹ ಪ್ರಕೃತಿ ಮತ್ತು ಸಂಸ್ಕೃತಿಯ ಸ್ವರೂಪ - ಸಂಬಂಧಗಳನ್ನು ಕುರಿತು ನಾವು ಗಮನಿಸುವ ಜೊತೆಗೆ ಶರಣ ಸಾಹಿತ್ಯದ ಸಂದರ್ಭದಲ್ಲಿ ಪ್ರಕೃತಿ ಮತ್ತು ಸಂಸ್ಕೃತಿಯ ಚಿಂತನೆಗಳನ್ನು ಅವಲೋಕಿಸೋಣ.

ಜಗತ್ತಿನ ಎಲ್ಲಾ ಸಂಸ್ಕೃತಿಗಳು ತಮಗೆ ನಿಕಟವಾಗಿರುವ ಪ್ರಕೃತಿಯನ್ನು ಬದುಕಿನ ಒಂದು ಅಂಗವೆಂದೇ ಕಂಡುಕೊಂಡಿವೆ. ಪ್ರಕೃತಿಗೆ ಅದರದೆಯಾದ ಮಿತಿಯಲ್ಲಿ ಮಹತ್ತಿದೆ ಎಂಬುದನ್ನು ಎಲ್ಲ ಸಂಸ್ಕೃತಿಗಳ ಒಮ್ಮತವಾಗಿದೆ.

ಶರಣ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಪ್ರಕೃತಿ ಮತ್ತು ಸಂಸ್ಕೃತಿಗಳನ್ನು ಗಮನಿಸಿದಾಗ ಪ್ರಕೃತಿ ಪ್ರತಿಯೊಂದು ಸೌಂದರ್ಯ ದೈವದ ಆರಾಧನೆಗೆ ಎಂಬುದು ಕಂಡರೂ ಅದರ ಹಿಂದೆ ವೈಶಾಲ್ಯತೆಯಿದೆ . ಸಂಸ್ಕೃತಿ ಪದದ ಬಳಕೆ ಕೇವಲ ಲೌಕಿಕ ತಾರ್ಕಿಕತೆಗಳನ್ನು ಬಿಂಬಿಸುವುದಿಲ್ಲ. ಅದು ಪಾರಲೌಕಿಕ ವಿಚಾರದಲ್ಲಿ ಧಾರ್ಮಿಕ ಹಾಗೂ ಪಾರಮಾರ್ಥಿಕ ತತ್ವಗಳನ್ನು ಒಳಗೊಂಡಿದೆ. ಈ ಹಿನ್ನೆಲೆಯಲ್ಲಿ ಸಂಸ್ಕೃತಿ ಶರಣರ ಸಾಹಿತ್ಯದ ಸಂದರ್ಭದಲ್ಲಿ ಶಿವ ಸಂಸ್ಕೃತಿಯಾಗಿದ್ದು ಸಹಜವಾಗಿದೆ. ಶರಣ ಶಿವ ಸಂಸ್ಕೃತಿ-ಪ್ರಕೃತಿಯಷ್ಟೇ ವಿಶಾಲವಾದುದ್ದಾಗಿದೆ. ಸ್ಥಾವರ ಸಂಸ್ಕೃತಿಗಿಂತ ಭಿನ್ನವಾದ ಜಂಗಮ ಸಂಸ್ಕೃತಿಯಾಗಿದೆ. ದೇವಾಲಯ ಸಂಸ್ಕೃತಿಗೆ ವಿರೋಧಿಯಾದ ಚಲನಶೀಲ ಸಂಸ್ಕೃತಿಯನ್ನು ಪ್ರಕೃತಿಯ ಮೂಲ ಗುಣದಿಂದಲೇ ಕಂಡು ಕೊಳ್ಳಲಾಯಿತು. ಕೇಂದ್ರಿಕರಣವಾಗಿದ್ದ ದೈವ ಭಕ್ತಿ -ವೈಯಕ್ತಿಕರಣವಾಗುವಂತೆ ಶರಣರು ಮಾಡುವ ಮೂಲಕ ಪ್ರಕೃತಿದತ್ತ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಸರ್ವರಿಗೂ ಮನವರಿಕೆ ಮಾಡಿಕೊಟ್ಟರು.

ಶರಣರ ಸಾಹಿತ್ಯ ಮತ್ತು ಆ ಚಳುವಳಿ ಕೇಂದ್ರೀಕರಿಸಿಕೊಂಡದ್ದು ಏಕನಿಷ್ಠಾ ಭಕ್ತಿಯೆಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಶರಣರು ಕಂಡುಕೊಂಡ ಶಿವಭಕ್ತಿ , ಪುರಾಣ ಪ್ರೇರಿತ ಶಿವ ಭಕ್ತಿಯಲ್ಲ ; ತತ್ವಾದಾರಿತ ಆಚಾರ ಪ್ರೇರಿತವಾದ ಭಕ್ತಿ . ಆತಂಹ ಶಿವ ಭಕ್ತಿಯ ವ್ಯಕ್ತಿತ್ವವುಳ್ಳ ಮನಸ್ಸುಳ್ಳವರನ್ನು ಶರಣ ಸಂಸ್ಕೃತಿ ಅಪ್ಪಿಕೊಂಡಿತು. ಎಂದಿಗೂ ಶರಣ ಸಂಸ್ಕೃತಿ ಭಕ್ತಿಯನ್ನು ಕೇಂದ್ರೀಕರಣಗೊಳಿಸದೇ ಪ್ರಕೃತಿಯ ಮೂಲಗುಣವಾದ ಸ್ವಾತಂತ್ರ್ಯವನ್ನೇ ಜನರಿಗೆ ಒದಗಿಸಿತು. ಹಾಗಾಗಿ ಅಲ್ಲಿ ಅನಾಚಾರಿಗಳಿಗೆ ಅವಕಾಶವಿಲ್ಲದೇ ಆಚಾರಿಗಳಿಗೆ ಅವಕಾಶವಾಯಿತು. ಇಂತಹ ಪ್ರಕೃತಿ ಸ್ಥಿತಿಯನ್ನು ಮಾನವೀಯ ಸಂಬಂಧಗಳೊಂದಿಗೆ ಅರ್ಥೈಸಿದ ಶರಣರು ಪ್ರಕೃತಿ ವಿಮುಖ ದೃಷ್ಟಿಯ ಧೋರಣೆ ತಾಳಿದ್ದು ಸಹಜವಾಗಿದೆ. ಪ್ರಕೃತಿ ಮುಖಿಯಾದ ದೃಷ್ಟಿ ಪ್ರಾಕೃತಿಕ ಗ್ರಹಿಕೆಯಲ್ಲಿಯೇ ಸ್ಥಿರವಾಗಿ ಓಲಾಡುತ್ತದೆ. ಆದರೆ ಪ್ರಕೃತಿ ವಿಮುಖದೃಷ್ಟಿ ಸಂಸ್ಕೃತಿ ಜನ್ಯ ಕೊಡುಗೆಯಾಗಿ ಅದರಾಚೆಯ ಅಂತಿಮ ಅರಿವನ್ನು ಮೂಡಿಸುತ್ತದೆ.

ಧರ್ಮಗಳ ಕೇಂದ್ರಿಕರಣ - ಖಾಸಗೀಕರಣ ಸಂಸ್ಕೃತಿಯ ಪಟ್ಟಭದ್ರ ಹಿತಾಸಕ್ತಿಗಳ ಹಿಡಿತವನ್ನು ತಿರಸ್ಕರಿಸಿದ ಶರಣರ ಪಾಲಿಗೆ ಪ್ರಕೃತಿಯೇ ಅವರ ಸಂಸ್ಕೃತಿಯ ಆ ಮೂಲಕ ತಾತ್ವಿಕ ಚಿಂತನೆಯ ಶೋಧನೆಗೊಂದು ಸೂಕ್ತ ವೇದಿಕೆಯಾಯಿತು. ಉಳ್ಳವರು ಶಿವಾಲಯವ ಮಾಡುವರು ಎಂಬ ಶರಣರ ನುಡಿ ಕೇಂದ್ರೀಕರಣ ವ್ಯವಸ್ಥೆಯನ್ನು ಕಿತ್ತೂಗೆದು ಪ್ರಕೃತಿಯ ಮೂಲ ಧರ್ಮಕ್ಕೆ ವಾಪಸ್ಸಾಗುವ ವೈಶಾಲ್ಯ ಸಂಸ್ಕೃತಿಯ ಗುಣವನ್ನು ಕಾಣಬಹುದಾಗಿದೆ. ಶರಣರ ವಚನಗಳಲ್ಲಿ ಬಳಕೆಗೊಂಡ ಪ್ರಾಣಿ ,ಪಕ್ಷಿ , ಸಸ್ಯ ಮೊದಲಾದ ಪ್ರಕೃತಿಯ ರೂಪಕಗಳು ಬರಿ ಪ್ರಕೃತಿಯ ವರ್ಣನೆಗಳಾಗಿ ಉಳಿಯದೇ ಮಾನವನ ಅಂತರಂಗದ ಸಂಸ್ಕೃತಿಯ ಬೇರುಗಳನ್ನೇ ಅಲ್ಲಾಡಿಸುತ್ತವೆ. ಪ್ರಕೃತಿ ಪ್ರೇರಿತ ಸಂಸ್ಕೃತಿಯನ್ನು ಶರಣರು ತಮ್ಮ ಸಾಹಿತ್ಯದ ಸಂದರ್ಭದಲ್ಲಿ ಬಳಸಿ ಕೊಂಡರು. ಹಾಗಾಗಿ ಅವರ ಅಂಕಿತಗಳ ಅಂತರಂಗದಲ್ಲಿ ಅಡಗಿದ್ದು ಪ್ರಕೃತಿ ಪ್ರೇರಿತವಾದ ಶಿವಚೇತನವೇ ಹೊರತು ಪುರಾಣಾದಾರಿತ ಶಿವ ಚೇತನವಲ್ಲ . ಶರಣ ಸಂಸ್ಕೃತಿ ಪ್ರಕೃತಿಯ ವಿಶಾಲ ಮನೋಭಾವನೆಯ ಪ್ರಾತಿನಿಧಿಕ ಸ್ವರೂಪವಾಗಿದೆ. ಶರಣರ ಅಂಕಿತಗಳಲ್ಲಿ ಪ್ರಕೃತಿಯ ಒಳ ತುಡಿತ - ಮಿಡಿತಗಳಿವೆಂಬುದನ್ನು ನಾವು ಲಕ್ಷದಲ್ಲಿಟ್ಟುಕೊಳ್ಳಬೇಕು.

ಪ್ರಕೃತಿಯನ್ನು ತತ್ವ ಪ್ರತಿಪಾದನೆಗಾಗಿ ಪೂರಕ ಅಂಶವನ್ನಾಗಿ ನಿರ್ಮಿಸಿ ಕೊಂಡು ಹೊಸ ಸಂಸ್ಕೃತಿಯ ಪರಿಸರವನ್ನೇ ಹುಟ್ಟು ಹಾಕಿದರು. ಪ್ರಕೃತಿಯನ್ನು ತಾತ್ವಿಕ ಹಿನ್ನೆಲೆಯಲ್ಲಿ ಪ್ರತಿ ಪಾದಿಸಿದರು. ಅದರೊಳಗಿನ ಸಾಂಸ್ಕೃತಿಕ ಚೈತನ್ಯವನ್ನು ಸಾರಿ ಹೇಳಿದರು. ಪ್ರಕೃತಿಯನ್ನು ವಿಕೃತಿ ಗೊಳಿಸದೇ ಅದನ್ನು ಸಂಸ್ಕೃತಿಯ ಸಂಬಂಧವಾಗಿ ಕಂಡು ವಿಶಿಷ್ಟವಾದ ಸಂಬಂಧಗಳನ್ನು ಪ್ರಕೃತಿ ಮತ್ತು ಸಂಸ್ಕೃತಿಯ ನಡುವೆ ಶರಣರು ಬೆಳೆಸಿದರೆಂಬುದು ಗಮನಿಸಬೇಕಾಗಿದೆ.

೭ : ೨ ಶರಣರು ಪ್ರಕೃತಿ ಮೂಲಕ ಕಂಡ ಸಂಸ್ಕೃತಿ

ಪ್ರಕೃತಿಯು ಕೇವಲ ಮನುಷ್ಯ ಉಪಭೋಗದ ಸರಕಲ್ಲ . ಅದರಾಚೆಗೆ ಒಂದು ತತ್ವವಿದೆ. ಸಂಸ್ಕೃತಿ ಇದೆ. ಎಂಬುದನ್ನು ಈ ಪರಿಸರದ ಶರಣರು ಪ್ರಕೃತಿಯಲ್ಲಿ ಕಂಡು ಬರುವ ಗಿಡ-ಮರ-ಬಳ್ಳಿ-ಪ್ರಾಣಿ-ಪಕ್ಷಿ-ಸಸ್ಯ-ನೆಲ-ಜಲ ಇತ್ಯಾದಿ ಅಂಶಗಳ ಮೂಲಕ ತೋರಿಸಿಕೊಟ್ಟದ್ದನ್ನು ಗಮನಿಸಬಹುದಾಗಿದೆ.

ಶರಣರ ಸಾಹಿತ್ಯದ ಹಿನ್ನೆಲೆಯಲ್ಲಿ ಗಮನಿಸಿದರೆ ಶರಣರು ಪ್ರಕೃತಿಯ ಮೂಲಕ ಕಂಡಂತಹ ಸಂಸ್ಕೃತಿ ಯಾವುದೇ ವ್ಯಕ್ತಿ ನಿಷ್ಠ-ಪ್ರಭುತ್ವ ನಿಷ್ಠ ಸಂಸ್ಕೃತಿಯಲ್ಲ ಪ್ರತಿಯೋರ್ವರು ತಮ್ಮಲ್ಲಿನ ಅಹಮ್ಮಿಕೆಯ ಕಾಳಿಕೆಯನ್ನು ಕರಗಿಸಿ ಕೊಂಡು ಆಚರಣೆಗಳನ್ನು ವಿಚಾರಕ್ಕಿಳಿಸಿದ ಸಂಸ್ಕೃತಿಯಾಗಿದೆ. ಮುಕ್ತಾಯಕ್ಕನ 'ಅಲರೊಳಡಗಿದ ಪರಿಮಳದಂತೆ, ಪತಂಗದೊಳಡಗಿದ ಅನಲನಂತೆ' ೧ ಎಂಬ ವಚನದಲ್ಲಿ ಆಕೆ ಪ್ರಕೃತಿಯ ಅಂಶಗಳಾದ ಹೂವು, ಪರಿಮಳ, ಮಿಂಚುಹುಳು-ಬೆಂಕಿ, ಚಂದ್ರ-ಕಾಂತಿ, ಧ್ವನಿ-ಗಾಳಿ, ಸಿಡಿಲು-ಪ್ರಕಾಶ ಇವುಗಳ ಮೂಲಕ ಯೋಗಸ್ಥಿತಿಯನ್ನು ತಿಳಿಸುತ್ತಾ ಯೋಗವೆಂಬುದು ದೇಹ ದಂಡನೆಯ ಸಾಧನವಾಗಬಾರದು. ಯೋಗದ ಹೆಸರಿನಲ್ಲಿ ನಡೆಯುವ ಅನೇಕ ವಾಮಾಚಾರಗಳನ್ನು ಸೂಚ್ಯವಾಗಿ ಖಂಡಿಸುತ್ತಾ ಯೋಗದ ಸ್ಥಿತಿ ಹೇಗಿರಬೇಕೆಂಬುದರ ಬಗ್ಗೆ ಆಕೆ ಹೇಳಿದ್ದು ಸಂಸ್ಕೃತಿಯ ಪ್ರತೀಕವಾಗಿದೆ.

ಆಯ್ದಕ್ಕಿ ಮಾರಯ್ಯ ತನ್ನ ವಚನದಲ್ಲಿ ೨ ಗೆದ್ದಲು-ಹಾವುಗಳನ್ನು ಬಳಸಿಕೊಂಡು ಶ್ರಮಿಕ ಸಂಸ್ಕೃತಿಯ ಚಿತ್ರವನ್ನೇ ನಮ್ಮ ಕಣ್ಮುಂದೆ ಕಟ್ಟಿ ಕೊಡುತ್ತಾರೆ. ಶ್ರಮಿಕ ವರ್ಗದ ಸಂಕೇತವಾದ ಗೆದ್ದಲು ತನ್ನ ಪರಿಶ್ರಮದಿಂದ ಕಟ್ಟಿದ ಮನೆಯಲ್ಲಿ ಶ್ರಮ ವಹಿಸದೇ ಬಂದು ಸೇರುವ ಹಾವು ಮಾಲೀಕ ವರ್ಗದ ಪ್ರತಿನಿಧಿಯಾಗಿದೆ. ಇಂತಹ ಹೀನ ರೀತಿಯಲ್ಲಿ ನಾನು ಗಳಿಸಿದರೆ, ಅದನ್ನು ದಾಸೋಹಕ್ಕೆ ಬಳಸಿದರೆ ಅಂತಹ ದಾನದಿಂದ ನಿಜವಾದ ಮುಕ್ತಿ ದೊರೆಯಲು ಸಾಧ್ಯವಿಲ್ಲ. ಶ್ರಮವಹಿಸಿ ದುಡಿದು ಬಂದುದರಲ್ಲಿ ತ್ಯಾಗ ಮಾಡಬೇಕೆ ಹೊರತು, ಇನ್ನೊಬ್ಬರು ದುಡಿದುದನ್ನು ತನ್ನ ಹೆಸರಿನಲ್ಲಿ ತ್ಯಾಗ ಮಾಡುವ ನೀಚತನವನ್ನು ಇವರು ಖಂಡಿಸಿದ್ದನ್ನು ನಾವಿಲ್ಲಿ ಕಾಣಬಹುದಾಗಿದೆ. ಇವರು ಮತ್ತೊಂದೆಡೆ ಚಂದ್ರಕಾಂತ ಶಿಲೆ-ಗೋವು-ಶಿಲೆ-ಬೆಂಕಿಗಳನ್ನು ಆಧರಿಸಿ ದೇವರ ಸ್ವರೂಪದ ಜಂಗಮ ಸಂಸ್ಕೃತಿಯನ್ನು ತಿಳಿಸುತ್ತಾ ಸ್ಥಾವರ ಸಂಸ್ಕತಿಯನ್ನು ಪ್ರಕೃತಿಯ ಮೂಲಕವೇ ಅಲ್ಲಗಳೆದಿದ್ದನ್ನು ಕಾಣಬಹುದಾಗಿದೆ. ೩

ಪ್ರಕೃತಿಯನ್ನೇ ಬಳಸಿಕೊಂಡು ಪ್ರಕೃತಿಯಲ್ಲಿ ಅಸಹಜವಾದ ಗುಣಗಳನ್ನು ಸೃಷ್ಟಿಸಿ ಬದುಕಿನ ಆತ್ಯಂತಿಕ ಪರಮ ಸುಖದ ಬದುಕನ್ನು ಬದುಕಲಿಕ್ಕೆ ಹೊಂದಿರಬೇಕಾದ ಗುಣ ಲಕ್ಷಣಗಳೇನು ಎಂಬುದನ್ನು ನಾವು ಸುಂಕದ ಬಂಕಣ್ಣನವರ 'ಹಾವ ಕೊಂದು ತಿಂದ ಹದ್ದ , ತಾ ತಿಂದಡೆ ಸ್ವಾನು ಭಾವ ಜ್ಞಾನಿ ' ೪ ಎಂಬ ವಚನದಲ್ಲಿ ಕಾಣಬಹುದಾಗಿದೆ. ಅವರು ಮಾನವರು ತಮ್ಮ ಕೋಪ-ಕ್ರೂರತನ-ನೀಚತನಗಳನ್ನು-ಮೋಸತನಗಳನ್ನು ಬಿಟ್ಟಾಗ ಆತ ಒಳ್ಳೆಯ ಸುಸಂಸ್ಕೃತನಾಗಿ ಬದುಕಲು ಸಾಧ್ಯವಿದೆ. ಅಂತಹ ಬದುಕಿಗೆ ಬೆಲೆಯಿದೆ. ಭವಿಷ್ಯದಲ್ಲಿ ನೆಲೆಯಿದೆ ಎಂಬುದನ್ನು ಅವರು ಮಾರ್ಮಿಕವಾಗಿ ಹೇಳಿದ್ದಾರೆ. ಇವರು ಮತ್ತೊಂದು ವಚನದಲ್ಲಿ ೫ ಹೊಲ-ಹುಲ್ಲೆ-ಹುಲಿಗಳನ್ನು ಬಳಸಿಕೊಳ್ಳುವ ಮೂಲಕ ಸಂಸಾರವನ್ನು ಮೆಚ್ಚಿ ಸ್ವಾರ್ಥಗಳಲ್ಲಿಯೇ ವ್ಯಕ್ತಿಯೊಬ್ಬ ಮುಳುಗಿ ಮತ್ತೊಬ್ಬರನ್ನು ಮಾನವೀಯ ದೃಷ್ಟಿಯಿಂದ ಕಾಣದೇ ಕ್ರೂರಿಯಾಗಿ ವರ್ತಿಸುವ ನೀಚತನದ ವಿಕೃತಿಯ ವ್ಯಕ್ತಿಗಳು ಹೇಗೆ ಪ್ರಕೃತಿ ವಿರೋಧಿಗಳಾಗುತ್ತಾರೆಂಬುದನ್ನು ತಿಳಿಸುತ್ತಾ ನಿಸ್ವಾರ್ಥಗುಣ ಸಂಸ್ಕೃತವಂತನ ಲಕ್ಷಣವೆಂದಿದ್ದಾರೆ.

ಢಕ್ಕೆಯ ಮಾರಯ್ಯರು 'ಆತ್ಮನಂಗ ಪೃಥ್ವಿಯಂತಿರ್ಪುದೊ ?, ಆತ್ಮನಂಗ ಅಪ್ಪುವಿನಂತಿರ್ಪುದೊ ?' ೬ ಎಂಬ ವಚನದಲ್ಲಿ ಪ್ರಕೃತಿಯಲ್ಲಿರುವ ಪಂಚಭೂತಗಳ ಹಿನ್ನೆಲೆಯಲ್ಲಿ ಪರವಸ್ತುವಿನ ಶೂನ್ಯ ಸ್ವರೂಪದ ವಾಸ್ತವಿಕತೆಯನ್ನು ತಿಳಿಸಿ ಕೊಡುವ ಮೂಲಕ ಪರವಸ್ತು ಸಿದ್ಧವಸ್ತುವೆಂಬ ವೈದಿಕ ಸಂಸ್ಕೃತಿಯ ಕಲ್ಪನೆಯ ಪೊಳ್ಳುತನಗಳನ್ನು ಬಯಲಿಗೆ ಎಳೆದದನ್ನು ಈ ವಚನದಲ್ಲಿ ನಾವು ಗಮನಿಸಬಹುದಾಗಿದೆ. ಅವರು ಮೂಲ ವಸ್ತುಗಳ ಪರಿಕಲ್ಪನೆ ನೀಡಿ ಆ ಮೂಲ ವಸ್ತುವಿಗೆ ಬೇಕಾದ ಶಕ್ತಿ ಎಲ್ಲಿಂದ ಬರುತ್ತದೆ ಎಂಬುದನ್ನು ಪ್ರಶ್ನಿಸುತ್ತಲೇ ಆ ಶಕ್ತಿ ನಿನ್ನಲ್ಲಿಯೇ ಇದೆಯೆಂಬ ಸತ್ಯವನ್ನು ತಿಳಿಸಿಕೊಡುತ್ತಾರೆ. ಹೀಗೆ ಇಲ್ಲಿ ಪ್ರಕೃತಿಯ ಅಂಶಗಳನ್ನೇ ಆಧರಿಸಿ ಪರವಸ್ತುವಿನ ಬಗ್ಗೆ ತಿಳಿಸುವ ಮೂಲಕ ವೈಜ್ಞಾನಿಕ ಸತ್ಯದ ಭೌತಿಕ ಸಂಸ್ಕೃತಿಯನ್ನು ಪರಿಚಯಿಸುವುದನ್ನು ಕಾಣುತ್ತೇವೆ.

ಅಜಗಣ್ಣನವರು ತಮ್ಮ ವಚನ 'ಅಷ್ಟತನು ಮೂರ್ತಿ ಶಿವನೆಂಬ' ೭ ಎಂಬ ವಚನದಲ್ಲಿ ಪ್ರಕೃತಿಯ ರಚನೆಯ ಜೊತೆಯಲ್ಲಿಯೇ ಪ್ರಕೃತಿ ನಾಶದ ಸೂಚನೆಯನ್ನು ತಿಳಿಸುತ್ತಾ ಪ್ರಕೃತಿಯ ರಚನೆಯ ಆಚೆಗೆ ಇರುವ ಶೂನ್ಯ ಸಂಸ್ಕೃತಿಯ ವಿಕಾಸದ ಕ್ರಮವನ್ನು ಇವರು ಬಹು ಮಾರ್ಮಿಕವಾಗಿ ಅಭಿವ್ಯಕ್ತಿಸಿದ್ದಾರೆ.

---

೧ : ಸಂ: ಡಾ: ವೀರಣ್ಣ ರಾಜೂರು -ಸ.ವ.ಸಂ. -೫ ,ವಚನ ೪, ಪುಟ ೨೭೨

೨ : ಸಂ: ಡಾ: ಎಂ.ಎಂ. ಕಲಬುರ್ಗಿ-ಸ.ವ.ಸಂ. -೬, ವಚನ ೧೨, ಪುಟ ೩೭೯

೩ : ಅದೇ: ವಚನ ೧೩ , ಪುಟ ೩೭೯

೪ : ಸಂ: ಡಾ: ಬಿ.ಆರ್ .ಹಿರೇಮಠ -ಸ.ವ.ಸಂ.-೯, ವಚನ ೪೩, ಪುಟ ೨೧೯

೫ : ಅದೇ: ವಚನ ೪೫, ಪುಟ ೨೧೯

೬ : ಸಂ:ಡಾ : ಎಸ್.ವಿದ್ಯಾಶಂಕರ -ಸ.ವ.ಸಂ. -೭, ವಚನ ೧೧, ಪುಟ ೨೮೬

೭ : ಸಂ: ಡಾ: ಎಂ.ಎಂ. ಕಲಬುರ್ಗಿ - ಸ.ವ.ಸಂ. -೬ , ವಚನ ೩ ಪುಟ ೪೯

ಹಾಗೆಯೇ ದೇಹವನ್ನೇ ಆಧರಿಸಿ ನಾವು ತಾತ್ವಿಕ ಚಿಂತನೆಯನ್ನು ದೇಶಿಯ ಸಂಸ್ಕೃತಿಯ ಚಿಂತನೆಯಲ್ಲಿ ಅಭಿವ್ಯಕ್ತಿಸಿದ್ದನ್ನು ಬಿಬ್ಬಿ ಬಾಚಯ್ಯನವರ 'ಎಲೆಯಿಲ್ಲದ ವೃಕ್ಷದಲ್ಲಿ ಹೂವಿಲ್ಲದ ಕಾಯಾಗಿತ್ತು' ೧ ಎಂಬ ವಚನದಲ್ಲಿ ಕಾಣಬಹುದಾಗಿದೆ.

ಆಸೆ ಮನುಷ್ಯನ ನಾಶಕ್ಕೆ ಕಾರಣ ಅದು ಒಳ್ಳೆಯ ಸಂಸ್ಕೃತಿಯ ಲಕ್ಷಣವಲ್ಲ. ಆಸೆ ಇರಬೇಕು ಆದರೆ ಅತಿಯಾಗಿರದೆ ಮಿತಿಯಾಗಿರಬೇಕೆಂದು ತಿಳಿಸುತ್ತಾ ಆಸೆಯನ್ನು ಮಾಡುವ ಪರಿ ಹೇಗಿರಬೇಕೆಂಬುದನ್ನು ಹೇಳಿ ಹೊಸ ಪರಿಕಲ್ಪನೆಯನ್ನು ಪ್ರಕೃತಿಯ ಮೂಲಕವೇ ತಿಳಿಸುವುದನ್ನು ನಾವು ಹೇಮಗಲ್ಲ ಹಂಪರ 'ವಾರಿಯಿಲ್ಲದ ಕೆರೆಗೆ ಹಾರೈಸಿ ಬಂದ ತುರದಂತೆ' ೨ ಎಂಬ ವಚನದಲ್ಲಿ ಕಾಣಬಹುದಾಗಿದೆ.

ಈ ಪರಿಸರದ ಶರಣರು ಆತ್ಮ ವಿಮರ್ಶೆಯನ್ನು ಸಹ ಪ್ರಕೃತಿಯ ಮೂಲಕವೇ ಗುರುತಿಸಿ ಅದನ್ನು ಹೇಗೆ ಸಂಸ್ಕೃತೀಕರಣ ಗೊಳಿಸಬೇಕೆಂಬುದನ್ನು ತಿಳಿಸಿದ್ದಾರೆ.

ಬಸವ ಪೂರ್ವಯುಗ - ಬಸವಯುಗದ ಶರಣರು ಒಟ್ಟಾರೆ ಪ್ರಕೃತಿಯನ್ನು ವಾಸ್ತವಿಕ ನೆಲೆಯಲ್ಲಿ ಚರ್ಚಿಸಿ ಅದರ ಮೂಲಕವೇ ಸಂಸ್ಕೃತಿಯನ್ನು ಚಿತ್ರಿಸಿದ್ದಾರೆ. ಪ್ರಕೃತಿಯ ಮೂಲಕ ಮಾನವೀಯ ಮೌಲ್ಯಗಳಾದ; ಸಂಸ್ಕೃತಿಯ ಕುರುಹುಗಳಾದ ತ್ಯಾಗ, ನಿಸ್ವಾರ್ಥ, ದಯೆ ಇವುಗಳನ್ನು ಅರ್ಥಪೂರ್ಣವಾಗಿ ಅಭಿವ್ಯಕ್ತಿಸಿದ್ದನ್ನು ಕಾಣಬಹುದಾಗಿದೆ.

ತತ್ವ ಪದಗಳನ್ನು ರಚಿಸಿದ ಶರಣರು ಪ್ರಕೃತಿಯ ಮೂಲಕ ಅನೇಕ ಸಂಸ್ಕೃತಿಯ ಅಂಶಗಳನ್ನು ಚಿತ್ರಿಸಿದ್ದನ್ನು ಅವರ ಹಾಡುಗಳಲ್ಲಿ ಗುರುತಿಸಬಹುದಾಗಿದೆ. ಪ್ರಕೃತಿಯ ಮಡಿಲಲ್ಲಿಯೇ ಬಾಳಿ ಬದುಕಿದ ಇವರಿಗೆ ದಿನನಿತ್ಯ ನಡೆಯುವ ಘಟನೆಗಳನ್ನೇ ಆಧರಿಸಿ ತಮ್ಮ ಹಾಡುಗಳನ್ನು ಹಾಡಿದರು. ತಮ್ಮ ಸಾಹಿತ್ಯದ ಮೂಲಕ - ಶಕ್ತಿಗಳ ಮೂಲಕ ಜನರಲ್ಲಿ ಹೊಸ ವಾತಾವರಣವನ್ನು ಮೂಡಿಸಿದರು.

ಕೂಡಲೂರು ಬಸವಲಿಂಗ ಶರಣರು ಇಡೀ ದೇಹದ ಸ್ಥಿತಿಯ ಹಿನ್ನೆಲೆಯಲ್ಲಿ ನಮ್ಮ ಬದುಕಿಗೆ ಸಂಬಂಧಿಸಿದ ಅನೇಕ ನೀತಿಯುಕ್ತ ಮಾತುಗಳನ್ನು ಗಿಡದ ಮೂಲಕ ತಿಳಿಸುತ್ತಾ ಮನುಷ್ಯ ಸಂಸ್ಕೃತಿಯ ಮೂಲ ತುಡಿತವನ್ನು ಎಚ್ಚರಿಸುತ್ತಾರೆ.೩

ಮಂಗವೆಂದರೆ ಮನಸ್ಸಿನ ಪ್ರತೀಕವಾಗಿದೆ. ಆ ಮನಸ್ಸು ಚಂಚಲವಾಗಿರುತ್ತದೆ. ಆ ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡು ಮನಷ್ಯ ತಾಳ್ಮೆ ಹೊಂದಿದ ಸುಸಂಸ್ಕೃತನಾಗಿರಬೇಕೆಂಬುದನ್ನು ಗೊಬ್ಬೂರು ಹಂಪಣ್ಣನವರು ತಿಳಿಸುತ್ತಾರೆ೪.

ಒಟ್ಟಾರೆ ಈ ಪರಿಸರದ ಶರಣರು ಸಂಸ್ಕೃತಿಯ ಅತ್ಯಮೂಲ್ಯ ಮೌಲ್ಯಗಳಾದ ಅಹಿಂಸೆ, ದಾಸೋಹ, ಜಾತ್ಯಾತೀತ ನಿಲುವು, ಸರಳತೆ, ಸತ್ಯ, ಆತ್ಮ ವಿಮರ್ಶೆ ಎಲ್ಲಕ್ಕಿಂತ ಮುಖ್ಯವಾಗಿ ಮಾನವೀಯತೆಗೆ ಮಹತ್ವ ನೀಡ ಶರಣರು ಅದನ್ನು ಪ್ರಕೃತಿಯ ಮೂಲಕವೇ ಕಂಡುಕೊಂಡು ವಿಶಿಷ್ಟ ಸಂಸ್ಕೃತಿಯನ್ನು ತಮ್ಮ ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿದರು.

---

೧ : ಸಂ : ಡಾ : ಬಿ.ಆರ್.ಹಿರೇಮಠ- ಸ.ವ.ಸಂ -೯, ವಚನ ೩೫, ಪುಟ ೧೨೫

೨ : ಸಂ : ಡಾ : ವೀರಣ್ಣ ರಾಜೂರು -ಸ.ವ.ಸಂ. -೧೪, ವಚನ ೧೫೯, ಪುಟ ೫೧೯

೩ : ಆಯ್ಕೆ : ಎಸ್.ಜಿ.ಸ್ವಾಮಿ- ಕೂ.ಬ. ಪದ್ಯ ೩೪, ನುಡಿ ೧-೩, ಪುಟ ೨೮

೪ : ಆಯ್ಕೆ : ರಾಮಸ್ವಾಮಿ ನುಲಿ -ಗೊ.ಹಂ. ಪದ್ಯ ೬, ನುಡಿ ೧-೩, ಪುಟ ೫-೬

ಅಧ್ಯಾಯ : ೦೮

ರಾಯಚೂರು ಪರಿಸರದ ಶರಣರು ಪರಂಪರೆ : ಪ್ರಭಾವ

೮ : ೧ ಕಲ್ಯಾಣ ಶರಣರ ಪರಂಪರೆ : ಪ್ರಭಾವ

ಕಲ್ಯಾಣ ಶರಣರ ಪರಂಪರೆ ಬಸವಯುಗದಿಂದಲೇ ಅಧಿಕೃತವಾಗಿ ಆರಂಭವಾಗುವುದನ್ನು ನಾವು ಗಮನಿಸುತ್ತೇವೆ . ಭಕ್ತಿ -ಜ್ಞಾನ -ವೈರಾಗ್ಯಗಳ ಮೂಲಕ ಈ ಪರಂಪರೆ ಬಸವ - ಚೆನ್ನ ಬಸವ -ಅಲ್ಲಮರನ್ನು ಕೇಂದ್ರಿಕರಿಸಿ ಕೊಂಡು ಈ ಪರಂಪರೆ ಬೆಳೆದರು ಮುಂದೆ ಸಾಮೂಹಿಕವಾಗಿ ಆಂದೋಲನಕ್ಕೆ ಹಾದಿ ಮಾಡಿ ಕೊಟ್ಟಿತು. ತನಗಿಂತ ಹಿಂದಿನ ಮಾರ್ಗ ಪರಂಪರೆಯನ್ನು ಹತ್ತಿಕ್ಕಿ ದೇಶಿ ಪರಂಪರೆಯನ್ನು ಬೆಳಸಿದ್ದು ಗಮನಾರ್ಹವಾಗಿದೆ. ವೈದಿಕ ಶಾಹಿಯ ಮಾರ್ಗ ಪರಂಪರೆಯನ್ನು , ಅವರ ಸಾಹಿತ್ಯಿಕ ವಾತಾವರಣವನ್ನೆಲ್ಲ ವಾಸ್ತವ ನೆಲೆಯಲ್ಲಿ ಪರೀಕ್ಷಿಸಿ ಅದರ ಕ್ರೂರತೆಯನ್ನು ಸರ್ವರಿಗೂ ತಿಳಿಸಿ ತಮ್ಮದೇ ಯಾದ ಹೊಸ ಆಲೋಚನೆಗಳ ಮೂಲಕ ಸೃಷ್ಟಿಶೀಲ ಮನುಸ್ಸುಗಳನ್ನು ಕೇಂದ್ರಿಕರಿಸಿ ಕೊಂಡು ಸೃಜನ ಶೀಲತೆಯನ್ನು ಸರ್ವಾಂಗೀಣ ಕ್ಷೇತ್ರಗಳಲ್ಲಿ ಮೂಡುವ ಹೊಸ ಪರಂಪರೆಗೆ ಅಸ್ತಿವಾರವನ್ನು ಹಾಕಿತು.

ಭಾರತೀಯ ಭಕ್ತಿ ಪರಂಪರೆಯ ಆಂದೋಲನಗಳ ಮಾದರಿಯಲ್ಲಿಯೇ ಕಲ್ಯಾಣ ಶರಣರ ಚಳುವಳಿ ಪರಂಪರೆಯು ಸಹಿತ ಸ್ಥಗಿತಗೊಂಡ ಧಾರ್ಮಿಕ ಮೌಲ್ಯ - ಸಾಮಾಜಿಕ ಜಾಡ್ಯಗಳ ವಿರುದ್ಧ ಬಂಡೆದ್ದ ನಾಡಿನ ಮೊದಲ ಆಂದೋಲನವಾಗಿದೆ. ಜನಪದರ ಬದುಕನ್ನು ಅರ್ಥೈಸಿಕೊಂಡು ಅವರ ಸಂಸ್ಕೃತಿಗಳಿಗೆ ಮನ್ನಣೆ ನೀಡಿ ಅದನ್ನು ವಿಶಿಷ್ಟ ಪರಂಪರೆಯಾಗಿ ನಿರ್ಮಿಸಿದ ಕೀರ್ತಿ ಶರಣರಿಗೆ ಸಲ್ಲುತ್ತದೆ . ಆ ಕಾರಣದಿಂದಾಗಿ ಕಲ್ಯಾಣ ಶರಣರ ಸಾಹಿತ್ಯ ಸೃಷ್ಟಿ ಜನಪದ ಬದುಕಿನ ಸಂಸ್ಕೃತಿಯ ಅಭಿವ್ಯಕ್ತಿಯಾಗಿದ್ದು ಸಹಜವಾಗಿದೆ.

ದೇಶಿಯ ಪರಂಪರೆಯ ಸೊಗಡಿನಿಂದಾಗಿ ಶರಣರು ತಾವು ಬರೆದ ಸಾಹಿತ್ಯ ಪ್ರಕಾರಕ್ಕೆ 'ವಚನ' ವೆಂದು ಕರೆದರು. ಈ ಪದ ಜನಪದ ಮೂಲವಾಗಿದೆ. ಕೊಟ್ಟಮಾತು -ಆಣೆ ಎಂದು ಅರ್ಥೈಸಲ್ಪಡುವ ವಚನ ದೇಶಿಯ ಸಂಸ್ಕೃತಿಯ ಶ್ರೇಷ್ಠತೆಯ ಸಂಕೇತವಾಗಿದೆ. ಆ ಕಾರಣದಿಂದಾಗಿ ವಚನ ಕೇವಲ ಸಾಹಿತ್ಯಿಕ ಮಟ್ಟದಲ್ಲಿ ನಿಲ್ಲದೇ ಇಡೀ ಬದುಕನ್ನೇ ವ್ಯಾಪಿಸಿದೆ. ಸಾಂಸ್ಕೃತಿಕ ಆಶಯಯುಳ್ಳ ದೇಶಿಯತೆಯನ್ನು ಶರಣರು ಎಲ್ಲಾ ಸ್ತರಗಳಲ್ಲಿ ಬಳಸಿದ್ದರಿಂದಲೇ ಒಂದು ವಿಶಿಷ್ಟವಾದ ಪರಂಪರೆಯನ್ನು ಅವರು ಕಟ್ಟಿ ಕೊಡಲು ಸಾಧ್ಯವಾಯಿತು. ಅದು ಮುಂದೆ ಬೇರೊಂದು ಸ್ವರೂಪದಲ್ಲಿ ಬೆಳೆದರು ಅದುವರೆಗಿನ ಮಾರ್ಗವನ್ನು ಮಲಗಿಸಿ ಕನ್ನಡ ಕಾವ್ಯ ಪರಂಪರೆಯಲ್ಲಿ ಹೊಸ ಕಸುವನ್ನು ನಿರ್ಮಿಸಿ ಕೊಟ್ಟ ಹಿರಿಮೆ ಕಲ್ಯಾಣ ಶರಣರ ಪರಂಪರೆಯ ದೇಶಿಯ ಸಾಹಿತ್ಯಕ್ಕೆ ಸಲ್ಲುತ್ತದೆ.

ಇಂತಹ ಪರಂಪರೆ ಸಹಜವಾಗಿ ಸಮಕಾಲೀನ ಭಿನ್ನ ಭಿನ್ನ ಪರಿಸರದಲ್ಲಿರುವ , ಇವರ ಆಶಯವುಳ್ಳ ಜೀವಿಗಳಿ ಸ್ಪಂದಿಸುದ್ದು ಸಹಜವಾಗಿದೆ .ಹಾಗಾಗಿ ಇವರ ಪ್ರಭಾವ ಸಮಕಾಲೀನ ಸಂದರ್ಭದಲ್ಲಿದ್ದ ಈ ಪರಿಸರದ ಶರಣರ ಮೇಲೆ ಅರ್ಥ ಪೂರ್ಣವಾಗಿ -ಸೃಜನಾತ್ಮಕವಾಗಿ ಆಯಿತೆಂಬುದನ್ನು ನಾವು ಅಲಕ್ಷಿಸುವಂತಿಲ್ಲ.

ಈ ಪರಿಸರದ ಶರಣ ಸಾಹಿತ್ಯದ ಮೇಲೆ ಕಲ್ಯಾಣ ಶರಣರ ಪ್ರಭಾವ ಎಷ್ಟರ ಮಟ್ಟಿಗೆ ಆಗಿದೆಯೆಂಬುದನ್ನು ನಾವು ಅವರ ಸಾಹಿತ್ಯದ ಮೂಲಕವೇ ಕಂಡು ಕೊಳ್ಳಬಹುದಾಗಿದೆ.

ಢಕ್ಕೆಯ ಮಾರಯ್ಯ -ಶಂಕರ ದಾಸಿಮಯ್ಯ ಕಲ್ಯಾಣ ಶರಣರಿಗಿಂತ ಪೂರ್ವದವರಾಗಿದ್ದರೂ ತಮ್ಮ ಚಿಂತನೆಗೆ ಅವರು ಸತ್ವವನ್ನು ಕಂಡು ಕೊಂಡದ್ದು ಕಲ್ಯಾಣ ಶರಣರ ಸಂಪರ್ಕಕ್ಕೆ ಬಂದಮೇಲೆ ಎಂಬುದು ತಿಳಿದು ಬರುತ್ತದೆ. ಹಾಗಾಗಿ ಇವರು ಸಾಹಿತ್ಯದಲ್ಲಿ ಹೊಸ ಆಯಾಮಗಳನ್ನು ಕಂಡು ಕೊಂಡರು. ತಮ್ಮ ವಚನಗಳಲ್ಲಿ ಕಲ್ಯಾಣ ಶರಣರನ್ನು ಸ್ಮರಿಸಿದರು.

ಶಂಕರ ದಾಸಿಮಯ್ಯ ಆರಂಭದಲ್ಲಿ ಜಡೆಯ ಶಂಕರ ಲಿಂಗದ ಸ್ಥಾವನಿಷ್ಟ ಭಕ್ತನಾಗಿದ್ದು ಕೊಂಡು ಶಿವ ಧರ್ಮ ಪ್ರಚಾರ ಮಾಡುತ್ತಾ ಅನೇಕ ಧರ್ಮದವರೊಡನೆ ಸಂಘರ್ಷ ನಡೆಸುತ್ತಾ ಅನೇಕ ಊರುಗಳನ್ನು ಸಂಚರಿಸಿದ್ದನ್ನು ಕಾಣುತ್ತೇವೆ. ಅದೇ ರೀತಿ ಢಕ್ಕೆಯ ಮಾರಯ್ಯ ಮಾರಿಯನ್ನೇ ತನ್ನ ತತ್ವಕ್ಕೆ ಮೊದಲಿಗೆ ಸಂಕೇತ ಮಾಡಿಕೊಂಡಿದ್ದನ್ನು ಗಮನಿಸುತ್ತೇವೆ. ಪುರದ ನಾಗಣ್ಣ - ಉಳಿಮೇಶ್ವರ ಚಿಕ್ಕಯ್ಯರವರು ಶೈವ ಸಂಸ್ಕೃತಿಯನ್ನು ಆರಂಭದಲ್ಲಿ ನಂಬಿದ್ದನ್ನು ಕಾಣಬಹುದಾಗಿದೆ. ಇವರು ಮುಂದೆ ಕಲ್ಯಾಣ ಶರಣರ ಪ್ರಭಾವದಿಂದಾಗಿ ತಮ್ಮ ಜೀವನದಲ್ಲಿ ಬದಲಾವಣೆ ಗಳನ್ನು ಕಂಡು ಕೊಂಡರು ಎಂಬುದನ್ನು ಅವರ ವಚನಗಳಿಂದ ತಿಳಿಯಬಹುದು.

ಕಾಯ , ಜೀವ, ಪ್ರಾಣ, ಜ್ಞಾನಕ್ಕೆ ಗುರು, ಲಿಂಗ , ಪ್ರಸಾದ , ಜಂಗಮವಾದವರು ಕಲ್ಯಾಣ ಶರಣರು ಎಂಬುದನ್ನು ಶಂಕರ ದಾಸಿಮಯ್ಯ ತಮ್ಮ ವಚನದಲ್ಲಿ ೧ ತಿಳಿಸುತ್ತಾ ಅವರ ಕರುಣೆಯೇ ತನ್ನ ಬದುಕಿಗೆ ಸಾಧ್ಯವಾಯಿತೆಂದು ಹೇಳಿರುವಲ್ಲಿ ನಾವು ಕಲ್ಯಾಣ ಶರಣರ ಪ್ರಭಾವವಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಮತ್ತೊಂದೆಡೆ ' ಸಂಗನ ಬಸವಣ್ಣನ ಕೃಪೆಯಿಂದಲೆನಗೆ ನಿಜವು ಕಾಣಬಂದಿತ್ತು ' ೨ ಎನ್ನುತ್ತಾರೆ. ತಮ್ಮ ಅಹಂಕಾರ ನಾಶವಾಗಿ ಬಸವಣ್ಣನವರ ಕರುಣೆಯಿಂದ ಪ್ರಭುದೇವರ ನಿರಾಳ ಸ್ಥಿತಿಯನ್ನು ಕಂಡು ಬದುಕಿದೆನು ೩ ಎಂದು ಹೇಳುವಲ್ಲಿ ಕಲ್ಯಾಣ ಶರಣರ ಪ್ರಭಾವದ ಅಂಶಗಳನ್ನು ಗುರುತಿಸಬಹುದಾಗಿದೆ .

---

೧ : ಸಂ : ಡಾ : ಬಿ.ಆರ್. ಹಿರೇಮಠ- ಸ.ವ.ಸಂ.-೯, ವಚನ ೧, ಪುಟ ೫೪

೨ : ಅದೇ : ವಚನ ೩, ಪುಟ ೫೪

೩ : ಅದೇ :ವಚನ ೫ , ಪುಟ ೫೫

ಢಕ್ಕೆಯ ಮಾರಯ್ಯ ಕಲ್ಯಾಣ ಶರಣರ ಪ್ರಭಾವಕ್ಕೆ ಬಂದಾಗ ತನ್ನ ಮಾರಿಗೆ ಮತ್ತಷ್ಟು ವಿಶಿಷ್ಟ ಅರ್ಥವನ್ನು ಕಲ್ಪಿಸಿದನು. ಅಲ್ಲದೆ ತಮ್ಮೊಳಗಿನ ವಿವಿಧ ಗುಣಗಳ ಅಳವಡಿಕೆಗೆ ಕಲ್ಯಾಣ ಶರಣರೇ ಕಾರಣವೆಂಬುದನ್ನು ಅವರು ಈ ಕೆಳಗಿನ ವಚನದ ಮೂಲಕ ತಿಳಿಸುತ್ತಾರೆ:

ಎನ್ನ ಮನವೆ ಬಸವಣ್ಣನು

ಎನ್ನ ಬುದ್ಧಿಯೇ ಚೆನ್ನ ಬಸವಣ್ಣನು

ಎನ್ನ ಚಿತ್ತವೆ ಸಿದ್ಧರಾಮಯ್ಯನು

ಎನ್ನ ಅಹಂಕಾರವೆ ಮಡಿವಾಳಯ್ಯನು

ಎನ್ನ ಕ್ಷಮೆಯೆ ನಿಜಗುಣ ದೇವರು

ಎನ್ನ ದಯೆಯೆ ಘಟ್ಟಿವಾಳಯ್ಯನು

ಎನ್ನ ಶಾಂತಿಯೆ ಅಜಗಣ್ಣನು

ಎನ್ನ ಸೈರಣೆಯೆ ಪ್ರಭುದೇವರು

ಎನ್ನ ಹರುಷವೆ ಏಳೂನೂರೆಪ್ಪತ್ತು ಅಮರಗಣಂಗಳು

ಇಂತಿ ವರ ಕರಣುದಿಂದಲಾನು ಬದುಕಿದೆನಯ್ಯಾ

ಕಾಲಾಂತಕ ಭೀಮೇಶ್ವರ ಲಿಂಗವೇ೧ ಷಟಸ್ಥಲಗಳ ಹಿನ್ನೆಲೆಯಲ್ಲಿ ಕಲ್ಯಾಣ ಶರಣರನ್ನು ಒಂದೊಂದು ಸ್ಥಲಕ್ಕೆ ಹೆಸರಿಸಿದ್ದನ್ನು ಗಮನಿಸಿದರೆ ಅವರನ್ನು ಎಷ್ಟು ಹತ್ತಿರದಿಂದ ನೋಡಿದ್ದರೆಂಬುದು ಹಾಗು ಅವರ ಪ್ರಭಾವ ಎಷ್ಟರ ಮಟ್ಟಿಗೆ ಆಗಿತ್ತೆಂಬುದು ಇವರ ವಚನಗಳಲ್ಲಿ ಕಾಣುತ್ತೇವೆ. ೨ ಲಿಂಗದ ವಿವಿಧಸ್ವರೂಪಗಳ ಬಗ್ಗೆ ತಿಳಿಸುತ್ತ ಅಂತಹ ಲಿಂಗದ ಸ್ವರೂಪಕ್ಕೆ ಕಲ್ಯಾಣ ಶರಣರ ಒಬ್ಬೊಬ್ಬರನ್ನು ಹೆಸರಿಸಿ ಅವರ ಪಾದವನ್ನು ಅರ್ಚಿಸುವ ಮೂಲಕ ತಾನು ಸುಖಿಯಾಗಿ ಬಾಳಿದ್ದನ್ನು ಪುರದ ನಾಗಣ್ಣ ತನ್ನ ವಚನದ ಮೂಲಕ ೩ ಹೇಳಿ ಅವರ ಪ್ರಭಾವ ಎಷ್ಟರ ಮಟ್ಟಿಗೆ ಆಗಿತ್ತೆಂಬುದನ್ನು ತಿಳಿಸಿದ್ದಾರೆ. ಭಕ್ತಿ-ಜ್ಞಾನ-ವೈರಾಗ್ಯಗಳು ತನಗೆ ಸಾಧ್ಯವಾಗಿದ್ದು ಕಲ್ಯಾಣ ಶರಣರ ಸಂಪರ್ಕದಿಂದಲೇ ಎಂಬುದಾಗಿ ಬಿಬ್ಬಿ ಬಾಚಯ್ಯ ಹೇಳುತ್ತಾರೆ. ೪ ಅಲ್ಲಮ ಪ್ರಭುಗಳ ಸಂಪರ್ಕಕ್ಕೆ ಬಂದ ಮುಕ್ತಾಯಕ್ಕರ ಮೇಲೆ ಕಲ್ಯಾಣ ಶರಣರ ಪ್ರಭಾವ ಗಾಢವಾಗಿತ್ತೆಂಬುದನ್ನು ಅವರ ವಚನಗಳ ಮೂಲಕ ತಿಳಿಯಬಹುದಾಗಿದೆ. ತನ್ನ ಭಾವ, ನೋಟ, ಜ್ಞಾನ, ಪರಿಣಾಮ, ಹೃದಯಗಳಿಗೆ ಗುರು, ಲಿಂಗ, ಜಂಗಮ, ಪ್ರಸಾದ, ಮಂತ್ರವಾದವರು ಕಲ್ಯಾಣ ಶರಣರು ಅಂತಹವರ ಪ್ರಭಾವಲಯದಿಂದ ತಾನು ಬದುಕಿದೆನು ಎಂಬುದಾಗಿ ಮುಕ್ತಾಯಕ್ಕ ಹೇಳುತ್ತಾಳೆ. ೫ ಸತ್ಯಕ್ಕ-ಪ್ರಭುವಿನೊಡನೆ ಆಕೆಯ ಸಂವಾದ ಈ ಪರಿಸರದ ಶರಣರ ಮೇಲೆ ಕಲ್ಯಾಣ ಶರಣರ ಪ್ರಭಾವ ಹೇಗಿತ್ತೆಂಬುದು ತಿಳಿದುಬರುತ್ತದೆ. ಜ್ಞಾನವನ್ನು ಪ್ರಸಾದದ ಹಿನ್ನೆಲೆಯಲ್ಲಿ ಕಂಡುಕೊಂಡ ಲಕ್ಕಮ್ಮ ಆ ಪ್ರಸಾದ ಗುಣದ ಮೇಲೆ ಕಲ್ಯಾಣ ಶರಣರ ಪ್ರಭಾವಾಗಿದ್ದನ್ನು ತನ್ನ ವಚನದಲ್ಲಿ ೬ ಅತ್ಯಂತ ಭಾವ ಪೂರ್ವಕವಾಗಿ ಹೇಳಿದ್ದಾಳೆ. ಬಸವಣ್ಣನವರ ವ್ಯಕ್ತಿತ್ತವನ್ನು ಕಂಡುಕೊಂಡ ಆಯ್ದಕ್ಕಿ ಮಾರಯ್ಯ ಅವರ ಗುಣಗಳಿಗೆ ಮಾರು ಹೋಗಿದ್ದನ್ನು ಅವರ ವಚನಗಳಲ್ಲಿ ಕಾಣುತ್ತೆವೆ.೭

ಕಲ್ಯಾಣ ಶರಣರ ವಿವಿಧ ಭಾವ ರೂಪಗಳನ್ನು ತಮ್ಮ ಲಿಂಗ ಮುಖದಿಂದಲೇ ಕಂಡುಕೊಂಡದ್ದನ್ನು ಸುಂಕದ ಬಂಕಣ್ಣನವರ ವಚನದ ಮೂಲಕ ತಿಳಿಯಬಹುದಾಗಿದೆ.೮ ಕಲ್ಯಾಣ ಶರಣರ ಸಂಗದಿಂದ ತಮ್ಮ ಬದುಕು ಜ್ಯೋತಿ ಸ್ವರೂಪವಾಗಿ೯, ಅದು ಗುರು-ಲಿಂಗ-ಜಂಗಮ-ಜ್ಞಾನಸ್ವರೂಪವಾಗಿ ಪ್ರಭಾವಿತವಾಗಿದ್ದನ್ನು ಉಳಿಮೇಶ್ವರ ಚಿಕ್ಕಯ್ಯ ಹೇಳುತ್ತಾರೆ.೧೦

೧: ಸಂ: ಡಾ: ಎಸ್. ವಿದ್ಯಾಶಂಕರ-ಸ.ವ.ಸಂ.-೭, ವಚನ ೨೩, ಪುಟ ೨೯೦

೨: ಅದೇ: ವಚನ ೬೧, ಪುಟ ೩೦೧-೩೦೨

೩: ಸಂ: ಡಾ: ಬಿ.ಆರ್. ಹಿರೇಮಠ-ಸ.ವ.ಸಂ-೮, ವಚನ ೨, ಪುಟ ೨

೪: ಅದೇ: ವಚನ ೧೦೨, ಪುಟ ೧೪೧-೧೪೨

೫: ಸಂ: ಡಾ: ವೀರಣ್ಣ ರಾಜೂರು-ಸ.ವ.ಸಂ.-೫, ವಚನ ೧೦, ಪುಟ ೨೭೩

೬: ಅದೇ: ವಚನ ೧೭, ಪುಟ ೨೦೨

೭: ಸಂ: ಡಾ: ಎಂ.ಎಂ. ಕಲಬುರ್ಗಿ-ಸ.ವ.ಸಂ.-೬, ವಚನ ೨ ಮತ್ತು ೪, ಪುಟ ೩೭೭-೩೭೮

೮: ಸಂ: ಡಾ: ಬಿ.ಆರ್. ಹಿರೇಮಠ-ಸ.ವ.ಸಂ-೯, ವಚನ ೧೦೭, ಪುಟ ೨೩೫-೨೩೬

೯: ಸಂ: ಡಾ: ಎಂ.ಎಂ. ಕಲಬುರ್ಗಿ-ಸ.ವ.ಸಂ.-೬, ವಚನ ೩, ಪುಟ ೬೩೩

೧೦: ಅದೇ: ವಚನ ೧೦, ಪುಟ ೬೩೫

ಬಸವೋತ್ತರ ಯುಗದ ಶರಣರ ಮೇಲೆ ಕಲ್ಯಾಣ ಶರಣರ ಪ್ರಭಾವವಾಗಿದ್ದನ್ನು ನಾವು ಹೇಮಗಲ್ಲ ಹಂಪರ ವಚನಗಳ ಆಶಯ -ಧೋರಣೆಗಳ ಮೂಲಕ ಗುರುತಿಸಬಹುದಾಗಿದೆ. ಆ ಕಾರಣದಿಂದಾಗಿ ಇವರು ತಮ್ಮ ವಚನಗಳ ತುಂಬೆಲ್ಲ ಕಲ್ಯಾಣ ಶರಣರನ್ನು ಸ್ಮರಿಸುತ್ತಾರೆ. ಜ್ಞಾನಕ್ಕೆ ಸಂಕೇತವಾಗಿ ನಿಂತುಕೊಂಡು ಸಾಕ್ಷಾತ್ಕರಿಸಿ ಕೊಂಡವರೆಂದು ಹೇಳುತ್ತಾ ಪ್ರಭು , ಚೆನ್ನಬಸವ, ಮೋಳಿಗೆಯ್ಯ , ಸಂಗನ ಬಸವ , ನೀಲಾಂಬಿಕೆ , ಅಕ್ಕನಾಗಮ್ಮ, ಮಹಾದೇವಿಯಕ್ಕ ಮೊದಲಾದವರ ಹೆಸರನ್ನು ವಚನಗಳಲ್ಲಿ ಉಲ್ಲೇಖಿಸುತ್ತಾರೆ .೧ ಅವರ ಶಿಲೆಯೊಳಗಣ ಪಾವಕದಂತೆ ತಿಲದೊಳಗಣ ತೈಲದಂತೆ ಎಂಬ ವಚನವನ್ನು ೨ ನೋಡಿದಾಗ ನೇರವಾಗಿ ಇವು ಅಲ್ಲಮನ ವಚನದ ಸಾಲನ್ನು ನೆನಪಿಗೆ ತರುತ್ತದೆ. ಅಕ್ಕಮಹಾದೇವಿಯ ತೆರಣಿಯ ಹುಳುವಿನ ಕಲ್ಪನೆಯನ್ನೇ ಬಳಸಿ ಅದೇ ದಾಟಿಯಲ್ಲಿ ಇವರು ವಚನರಚಿಸಿದ್ದಾರೆ. ೩ ಅಂಗದ ಮೇಲೆ ಲಿಂಗವಿದ್ದವರನ್ನು ಸಂಗಮನಾಥನೆಂಬೆ ಎಂಬ ಬಸವಣ್ಣನ ಭಾವನೆಯನ್ನು ಬಿಂಬಿಸುವಂತಹ ವಚನವನ್ನು ಅವರ ವಚನವೊಂದರಲ್ಲಿ ಕಾಣಬಹುದಾಗಿದೆ. ೪

ತತ್ವ ಪದಗಳನ್ನು ರಚಿಸಿದ ಶರಣರ ಮೇಲು ಕಲ್ಯಾಣ ಶರಣರ ಪ್ರಭಾವವಾಗಿರುವುದನ್ನು ಗುರುತಿಸಬಹುದಾಗಿದೆ. ಘನ ಮಠನಾಗಭೂಷಣ ಶರಣರಂತು ಕಲ್ಯಾಣ ಶರಣರ ಆಶಯಗಳನ್ನೇ ಅಳವಡಿಸಿಕೊಂಡು ತಮ್ಮ ಬದುಕನ್ನು ಸಾಗಿಸಿದವರು. ಅಂತೆಯೇ ಅವರು ' ಈ ಸೊಳೆಮಕ್ಕಳಿಗೆಲ್ಲಿ ಭಕ್ತಿಯದೆಲ್ಲಿಯದೋ' ೫ ' ಶರಣ ಸತಿಯರ ನುತಿಮಿಗಿಲು '೬ ' ಪ್ರಳದೂರ ಅಲ್ಲಮ ಪ್ರಭು ' ೭ ' ಜಗದುದ್ಧಾರ ಸಿದ್ಧರಾಮ ' ೮ ಎಂಬ ಹಾಡುಗಳಲ್ಲಿ ಸ್ಪಷ್ಟವಾಗಿ ನಾವುಕಲ್ಯಾಣ ಶರಣರ ಪ್ರಭಾವವಾಗಿದ್ದನ್ನು ಗುರುತಿಸಬಹುದಾಗಿದೆ.

ನೀರಲಕೇರಿ ಬಸವಲಿಂಗ ಶರಣರು ತಮ್ಮ ಹಾಡುಗಳಲ್ಲಿ ಕಲ್ಯಾಣ ಶರಣರಾದ ಮೋಳಿಗಿ ಮಾರಯ್ಯ , ಬ್ರಹ್ಮಯ್ಯ , ಕುಡುಗೋಲು ಶಾಂತಯ್ಯ, , ಒಡೆಯ ಬಂಕಣ್ಣರನ್ನು ಸ್ಮರಿಸಿದ್ದನ್ನು ಕಾಣಬಹುದಾಗಿದೆ. ೯ ಹೀಗೆ ಈ ಪರಿಸರದ ಶರಣರ ಮೇಲೆ ಕಲ್ಯಾಣ ಶರಣರ ಪ್ರಭಾವವಾಗಿದ್ದನ್ನು ಸ್ಥೂಲವಾಗಿ ಗುರುತಿಸಬಹುದಾಗಿದೆ.

೮ : ೨ ರಾಯಚೂರು ಪರಿಸರದ ಶರಣರ ಪರಂಪರೆ : ಪ್ರಭಾವ

ಕಲ್ಯಾಣ ಶರಣರ ಪ್ರಭಾವ ವಾದರೂ ಈ ಪರಿಸರದ ಶರಣರು ತಮ್ಮ ದೆಯಾದ ಸ್ವತಂತ್ರ ಅಸ್ತಿತ್ವ ಹೊಂದಿದ್ದಾರೆ. ಕಲ್ಯಾಣ ಶರಣರ ಪರಂಪರೆ ಆರಂಭವಾಗುವುದಕ್ಕಿಂತ ಮುಂಚೆಯೇ ಈ ಪರಿಸರದಲ್ಲಿ ಶರಣ ಪರಂಪರೆ ಆರಂಭವಾಯಿತು. ಈ ಪರಿಸರದ ಆದ್ಯವಚನಕಾರರಾದ ಶಂಕರ ದಾಸಿಮಯ್ಯ ಕಲ್ಯಾಣ ಪರಿಸರದ ಅಲ್ಲಮ ಪ್ರಭುಗಳಂತೆ ಅನೇಕ ಊರುಗಳನ್ನು ಸಂಚರಿಸಿ ಧಾರ್ಮಿಕ ಸಂಘರ್ಷ ನಡೆಸಿ ಮೊದಲಬಾರಿಗೆ ಶರಣ ಧರ್ಮವನ್ನು ಸ್ಥಾಪಿಸಲು ಬಯಸಿದರು. ಹಾಗೆಯೇ ಏಕದೇವತಾ ನಿಷ್ಠೆಯನ್ನು ಮೊದಲಬಾರಿಗೆ ತಿಳಿಸಿಕೊಟ್ಟು ಹೊಸ ಪರಂಪರೆಗೆ ನಾಂದಿ ಹಾಡಿದರು. ಢಕ್ಕೆಯ ಮಾರಯ್ಯರಂತೂ ಜನಪದರ ಮಾರಿಯನ್ನೇ ತನ್ನ ಪ್ರಚಾರ ಮಾಧ್ಯಮವಾಗಿ ಬಳಸಿಕೊಂಡು ಆ ಮೂಲಕ ಜನರಿದ್ದಲ್ಲಿಗೆ ಹೋಗಿ ತತ್ವವನ್ನು ಪ್ರಚಾರ ನಡೆಸಿದರು. ಶಕ್ತಿ ಮತ್ತು ಶಿವಗಳ ಹೊಸ ಪರಿಕಲ್ಪನೆಯನ್ನು ಮೊದಲ ಬಾರಿಗೆ ತೋರಿಸಿ ಕೊಟ್ಟರು. ಜನಪದ ಕಲೆಯನ್ನು ಕಾಯಕವನ್ನಾಗಿ ಮಾಡಿ ಆ ಕಾಯಕವನ್ನೇ ಆಧ್ಯಾತ್ಮದ ಹಾದಿಯನ್ನು ಕಂಡು ಕೊಳ್ಳುವಲ್ಲಿ ಸರಳ ತತ್ವವೆಂಬುದನ್ನು ನಿರೂಪಿಸಿದರು. ಈ ಪರಿಸರದ ಶರಣ ಪ್ರಭಾವ ಕಲ್ಯಾಣ ಶರಣರ ಮೇಲಾಗಿರುವುದನ್ನು ವಚನಗಳಿಂದಲೇ ನಾವು ಸ್ಪಷ್ಟವಾಗಿ ಕಂಡುಕೊಳ್ಳಬಹುದಾಗಿದೆ.

ಕಾಯಕ ಸಿದ್ಧಾಂತ , ಶಕ್ತಿ ವಿಶಿಷ್ಟಾದ್ವೈತ , ಪ್ರಸಾದ ಪರಿಕಲ್ಪನೆಯ ಅಂಶಗಳು ಕಲ್ಯಾಣ ಶರಣರಿಗೆ ಸ್ಪಷ್ಟವಾಗಿ ಪ್ರಾಯೋಗಿಕವಾಗಿ ಅರ್ಥವಾಗಿದ್ದು ಈ ಪರಿಸರದ ಶರಣರಿಂದಲೇ ಎಂಬುದನ್ನು ಗಮನಿಸಲಾಗಿದೆ. ಇವರ ತತ್ವಗಳನ್ನು ಮತ್ತು ವ್ಯಕ್ತಿತ್ವವನ್ನು ಕುರಿತು ಕಲ್ಯಾಣ ಪರಿಸರದ ಅನೇಕ ಶರಣರು ಈ ಪರಿಸರದ ಶರಣರನ್ನು ಕುರಿತು ತಮ್ಮ ವಚನಗಳಲ್ಲಿ ಉಲ್ಲೇಖಿಸಿದ್ದಾರೆ. ತನ ಮನು ಶುದ್ಧವಾಗಿದ್ದವರಲ್ಲಿ ಹಣದ ಚಿಂತೆಯೇ ಬರದು ಎಂಬುದನ್ನು ಸೂಕ್ಷ್ಮವಾಗಿ ತಿಳಿಸುತ್ತಾ ಅನೇಕ ಶರಣರ ಜೊತೆಯಲ್ಲಿ ಆಯ್ದಕ್ಕಿ ಮಾರಯ್ಯರನ್ನು ಉರಿಲಿಂಗ ಪೆದ್ದಿಗಳು ಉಲ್ಲೇಖಿಸುತ್ತಾರೆ . ೧೦

---

೧ : ಸಂ : ಡಾ : ವೀರಣ್ಣ ರಾಜೂರು -ಸ.ವ.ಸಂ.-೧೪, ವಚನ ೪೪, ಪುಟ ೪೫೨

೨ : ಅದೇ : ವಚನ ೭೭, ಪುಟ ೪೬೬-೪೬೭

೩ : ಅದೇ : ವಚನ ೧೮೨, ಪುಟ ೫೧೯

೪ : ಅದೇ : ವಚನ ೨೩೩, ಪುಟ ೫೪೩

೫ : ಆಯ್ಕೆ : ಚೆನ್ನಬಸಪ್ಪ ಬೆಟ್ಟದೂರು -ಘ.ನಾ.ಶಿ . ನುಡಿ೧-೫, ಪುಟ ೧-೩

೬ : ಅದೇ : ನುಡಿ೧-೧೩, ಪುಟ ೧೬-೨೦

೭ : ಅದೇ : ನುಡಿ , ಪುಟ ೨೦

೮ : ಅದೇ : ನುಡಿ೧-೩ , ಪುಟ ೨೦-೨೧

೯ : ಸಂ : ಡಾ : ಬಸವಲಿಂಗ ಸೊಪ್ಪಿಮಠ-ನೀ.ಬ.ಶಿ.ಸ್ವ-ಪದ್ಯ ೧೫೬, ನುಡಿ೧-೫, ಪುಟ ೮೫-೮೬

೮ : ೨ ರಾಯಚೂರು ಪರಿಸರದ ಶರಣರ ಪರಂಪರೆ : ಪ್ರಭಾವ

೧೦ : ಸಂ : ಡಾ : ಎಂ.ಎಂ. ಕಲಬುರ್ಗಿ -ಸ.ವ.ಸಂ.-೬, ವಚನ ೧೩೭, ಪುಟ ೪೮೯

ಬಸವಣ್ಣ ಈ ಪರಿಸರದ ಶರಣರಿಂದ ಎಷ್ಟರ ಮಟ್ಟಿಗೆ ಪ್ರಭಾವಿತನಾಗಿದ್ದರೆಂಬುದಕ್ಕೆ ಅವರು ವ್ಯಕ್ತಪಡಿಸಿದ ಈ ಕೆಳಗಿನ ವಚನವೇ ನಿದರ್ಶನವಾಗಿದೆ.

ನಾನಡೆವುದೆಲ್ಲಾ ಅನಾಚಾರ ನಾ ನುಡಿವುದೆಲ್ಲಾ ಅವಿಚಾರ

ನಡೆ ನುಡಿ ಶುದ್ಧವಿಲ್ಲದ ಅಪವಿತ್ರನ ತಂದು

ನಿಮ್ಮೊಕ್ಕುದ ನಿಕಿ ಸಲುಹಿದದಾಗಿ ಎನ ಗಿನ್ನಾವ ಭಯವೂಇಲ್ಲ

ಕೂಡಲ ಸಂಗಮದೇವರು ಸಾಕ್ಷಿಯಾಗಿ ಆಯ್ದಕ್ಕಿ ಮಾರಯ್ಯನ ಮನೆಯ ಮಗನಾನು. ೧ ಹಾಗೇಯೆ ಅಲ್ಲಮ ಪ್ರಭುಗಳು ಮಾರಯ್ಯನ ಮಾತುಗಳಿಗೆ ಮನಸೋತು ‘ ಹಾಂಗಲ್ಲದೆ ಗುಹೇಶ್ವರ ಲಿಂಗವ ಕಾಣಬಾರದು ಆಯ್ದಕ್ಕಿ ಮಾರಯ್ಯ ’ ಎಂದು ಎಚ್ಚರಿಸಿದ್ದಾರೆ. ೨ ಕಲ್ಯಾಣ ಶರಣರ ಮೇಲೆ ಪ್ರಭಲವಾಗಿ ಪ್ರಭಾವ ಬೀರಿದವರು ಅಜಗಣ್ಣನವರು ಮತ್ತು ಅವರ ಐಕ್ಯಸ್ಥಿತಿಯೆಂಬುದನ್ನು ನಾವು ಅನೇಕ ಶರಣರ ವಚನಗಳಲ್ಲಿ ಕಾಣಬಹುದು. ಆದಯ್ಯರು ತಮ್ಮ ವಚನದಲ್ಲಿ ಅಜಗಣ್ಣನ ಆರೂಢ ಸ್ಥಿತಿ ೩ ವರ್ಣಿಸಿದರೆ , ಏಲೇಶ್ವರರು ಅಜಗಣ್ಣಂಗೆ ಐಕ್ಯಶೀಲ ೪ ವೆಂದೇಳಿದ್ದಾರೆ. ಇದೇ ರೀತಿ ಹಾವಿನಾಳ ಕಲ್ಲಯ್ಯ ೫ ಅಲ್ಲಮ ಪ್ರಭುಗಳು ೬ ಹಾಗೂ ಅಕ್ಕಮಹಾದೇವಿ ೭ ದುಗ್ಗಳೆ ೮ ಇವರು ಇವರ ಐಕ್ಯ ಸ್ಥಿತಿ ಕುರಿತು ಹೇಳಿದ್ದಾರೆ. ಇದಲ್ಲದೇ ಈ ಪರಿಸರದ ಢಕ್ಕೆಯ ಮಾರಯ್ಯ , ಸುಂಕದ ಬಂಕಣ್ಣ , ಹೇಮಗಲ್ಲ ಹಂಪ ಮೊದಲಾದವರು ಅಜಗಣ್ಣರನ್ನು ಸ್ಮರಿಸುವ ಮೂಲಕ ಅವರ ಪ್ರಭಾವ ಹಾಗೂ ಐಕ್ಯ ಸ್ಥಿತಿಯನ್ನು ತಿಳಿಸಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಚೆನ್ನಬಸವಣ್ಣನವರು ಹೇಳುವ ‘ ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಅಯ್ದು ವಚನ ’ ೯ ಎಂಬುದು ಗಮನಾರ್ಹವಾಗಿದೆ. ಈ ಮೂಲಕ ಇವರ ವ್ಯಕ್ತಿತ್ವ ಕಲ್ಯಾಣ ಶರಣರ ಮೇಲೆ ಎಷ್ಟು ಪ್ರಭಾವ ಬೀರಿತೆಂಬುದು ಗಮನಿಸಬಹುದಾಗಿದೆ.

ಶಂಕರ ದಾಸಿಮಯ್ಯರ ಪ್ರಭಾವ ಈ ಪರಿಸರದ ಶರಣರಾದ ಢಕ್ಕೆಯ ಮಾರಯ್ಯ , ಆಯ್ದಕ್ಕಿ ಲಕ್ಕಮರಲ್ಲಿ ಮಾತ್ರವಲ್ಲದೇ ಕಲ್ಯಾಣ ಶರಣರಾದ ಸೊಡ್ಡಳ ಬಾಚರಸ , ಮಡಿವಾಳ ಮಾಚಿದೇವ , ಉರಿಲಿಂಗ ಪೆದ್ದಿ , ಬಸವಣ್ಣ, ಚೆನ್ನ ಬಸವಣ್ಣ ಮೊದಲಾದವರ ಮೇಲಾಗಿದೆಂಬುದನ್ನು ನಾವು ಅವರ ವಚನಗಳ ಮೂಲಕ ತಿಳಿಯಬಹುದಾಗಿದೆ. ಸೊಡ್ಡಳ ಬಾಚರಸರ ಇವರ ವ್ಯಕ್ತಿತ್ವದ ಬಗ್ಗೆ೧೦ ಮಡಿವಾಳ ಮಾಚಿದೇವ ಐಕ್ಯ ಸ್ಥಿತಿಬಗ್ಗೆ೧೧, ಆಯ್ದಕ್ಕಿ ಲಕ್ಕಮ್ಮ ಪ್ರಸಾದ ಸ್ಥಲದ ಬಗ್ಗೆ ೧೨, ಉರಿಲಿಂಗ ಪೆದ್ದಿಗಳು ಆಚಾರ ಮಹತ್ವದ ಬಗ್ಗೆ ೧೩, ತಿಳಿಸಿದ್ದನ್ನು ಕಾಣಬಹುದಾಗಿದೆ.ಸುಂಕದ ಬಂಕಣ್ಣನವರನ್ನು ಬಸವಣ್ಣ ತಮ್ಮ ಕಾಲಜ್ಞಾನದ ವಚನದಲ್ಲಿ ಸ್ಮರಿಸುತ್ತಾರೆ. ೧೪ ಬಿಬ್ಬಿಬಾಚಯರ್ಯರನ್ನು ಸಿದ್ಧರಾಮ ೧೫ : ಸತ್ಯಕ್ಕ ೧೬, ಕಿನ್ನರಿ ಬ್ರಹ್ಮಯ್ಯ ೧೭ ಇವರು ಇವರ ಪ್ರಸಾದ ಸ್ಥಲ ಹಾಗೂ ಅದರ ಮಹತ್ವ ಕುರಿತು ಅಭಿವ್ಯಕ್ತಿಸುತ್ತಾರೆ.

---

೧ : ಸಂ: ಡಾ:ಎಂ.ಎಂ.ಕಲಬುರ್ಗಿ -ಸ.ವ.ಸಂ-೧, ವಚನ ೨೮೪, ಪುಟ ೩೪೫

೨ : ಸಂ: ಡಾ: ಬಿ.ವಿ. ಮಲ್ಲಾಪುರ -ಸ.ವ.ಸಂ.-೨, ವಚನ ೩೪೧, ಪುಟ ೩೧೦

೩ : ಸಂ: ಡಾ:ಎಂ.ಎಂ.ಕಲಬುರ್ಗಿ -ಸ.ವ.ಸಂ-೬ , ಪುಟ ೩೨೭

೪ : ಅದೇ:ವಚನ ೪೩, ಪುಟ ೬೫೯

೫ : ಸಂ: ಡಾ: ಬಿ.ಆರ್. ಹಿರೇಮಠ-ಸ.ವ.ಸಂ.-೯, ವಚನ ೨೯, ಪುಟ ೩೭೫

೬ : ಸಂ: ಡಾ: ಬಿ.ವ್ಹಿ. ಮಲ್ಲಾಪುರ -ಸ.ವ.ಸಂ.-೨, ವಚನ ೧೬೩, ಪುಟ ೨೫೨

೭ : ಸಂ: ಡಾ: ವೀರಣ್ಣ ರಾಜೂರು - ಸ.ವ.ಸಂ. -೫, ವಚನ ೨೪೩, ೨೬೫, ಪುಟ ೭೫, ೮೩

೮ : ಅದೇ:ವಚನ ೨೭೬, ಪುಟ ೮೬

೯ : ಸಂ: ಡಾ: ಬಿ.ವ್ಹಿ. ಮಲ್ಲಾಪುರ -ಸ.ವ.ಸಂ.-೩ ,ವಚನ ೧೮೨, ಪುಟ ೬೮

೧೦ : ಸಂ: ಡಾ: ಬಿ.ಆರ್ .ಹಿರೇಮಠ-ಸ.ವ.ಸಂ.-೯,,ವಚನ ೭೬೩, ಪುಟ ೨೫೧

೧೧ : ಸಂ: ಡಾ: ಬಿ.ಆರ್ ಹಿರೇಮಠ -ಸ.ವ.ಸಂ.-೮, ವಚನ ೬೫೬, ಪುಟ ೨೫೦

೧೨ : ಸಂ: ಡಾ: ವೀರಣ್ಣ ರಾಜೂರು -ಸ.ವ.ಸಂ -೫ , ವಚನ ೧೭, ಪುಟ ೨೦೨

೧೩ : ಸಂ: ಡಾ: ಎಂ.ಎಂ. ಕಲಬುರ್ಗಿ -ಸ.ವ.ಸಂ. -೬, ವಚನ ೪೦, ಪುಟ ೪೨೯

೧೪ : ಡಾ: ಕೆ.ರವೀಂದ್ರನಾಥ್ -ಬ.ವ.ಸಾ.ಪುಟ ೪೭

೧೫ : ಸಂ: ಡಾ: ಎಸ್.ವಿದ್ಯಾಶಂಕರ -ಸ.ವ.ಸಂ-೪, ವಚನ ೭೮೬, ಪುಟ ೪೪೯

೧೬ : ಸಂ: ಡಾ: ವೀರಣ್ಣ ರಾಜೂರು -ಸ.ವ.ಸಂ.-೫, ವಚನ ೨೭,

೧೭ : ಸಂ: ಡಾ: ಎಸ್.ವಿದ್ಯಾಶಂಕರ -ಸ.ವ.ಸಂ-೭, ಪುಟ ೨೭

ಹೀಗೆ ಈ ಪರಿಸರದ ಶರಣರ ವ್ಯಕ್ತಿತ್ವವನ್ನು ಕುರಿತು ಹಾಗೂ ತಮ್ಮ ಮೇಲೆ ಅವರ ಪ್ರಭಾವವನ್ನು ಕುರಿತು ಅನೇಕ ರೀತಿಯಾಗಿ ಕಲ್ಯಾಣ ಶರಣರು ಅಭಿವ್ಯಕ್ತಿಸಿದ್ದಾರೆ.

ಇಡೀ ಕಲ್ಯಾಣ ಶರಣರ ಸಿದ್ಧಾಂತಗಳನ್ನು ರೂಪಿಸಿದ ಅನೇಕ ಶರಣರು ಈ ಪರಿಸರದವರಾಗಿದ್ದಾರೆಂಬುದು ಗಮನಾರ್ಹ ಸಂಗತಿಯಾಗಿದೆ. ಕಾಯಕ ಸಿದ್ಧಾಂತಕ್ಕೆ ನಿದರ್ಶನವಾದ ಆಯ್ದಕ್ಕಿ ದಂಪತಿಗಳು, ಅರಿವೇ ಗುರು - ಐಕ್ಯ ಸ್ಥಿತಿಗೆ ಅರ್ಥ ಕಲ್ಪಿಸಿಕೊಟ್ಟ ಮುಕ್ತಾಯಕ್ಕ - ಅಜಗಣ್ಣರು, ಪ್ರಸಾದಕ್ಕೆ ಪ್ರತೀಕವಾದ ಭಿಲ್ಲಮರಾಯ - ಶಿವಜಾತ ಒಡೆಯರು - ಬಿಬ್ಬಿ ಬಾಚಯ್ಯ, ಕಾಯಕವನ್ನೇ ಕಲೆಯಾಗಿರಿಸಿ ಅದನ್ನು ಶ್ರೇಷ್ಠಗೊಳಿಸಿದ ಢಕ್ಕೆಯ ಮಾರಯ್ಯ, ಕಾಯಕದ ಮೂಲಕವೇ ತಾತ್ವಿಕ ನಿಲುವುಗಳನ್ನು ಅಭಿವ್ಯಕ್ತಿಸಿದ ಸುಂಕದ ಬಂಕಣ್ಣ - ಹೀಗೆ ಮೊದಲಾದವರ ಪ್ರಭಾವ ಇಡೀ ಶರಣರ ಸಂದರ್ಭದಲ್ಲಾಗಿದೆ. ಈ ಪರಿಸರದ ಶರಣರು ಸ್ವತಂತ್ರ ಧೀರರು. ಹಾಗಾಗಿ ಪ್ರಭಾವವೇ ಈ ಪರಿಸರದ ಶರಣರಾಗಿದ್ದಾರೆಂಬುದು ನಾವು ಲಕ್ಷ್ಯದಲ್ಲಿಟ್ಟುಕೊಳ್ಳಬೇಕಾದುದು ಅವಶ್ಯಕವೇನಿಸುತ್ತದೆ.

೮ : ೩ ರಾಯಚೂರು ಪರಿಸರದ ಶರಣರ ಪ್ರಭಾವ ಕನ್ನಡ ಸಾಹಿತ್ಯದಲ್ಲಿ

ಈ ಪರಿಸರದ ಶರಣರ ಪ್ರಭಾವ ಇಡೀ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಆಗಿರುವುದನ್ನು ನಾವು ಗುರುತಿಸಬಹುದಾಗಿದೆ. ಶರಣ ಸಾಹಿತ್ಯದ ತರುವಾಯ ಬಂದ ಹರಿಹರಾದಿ ಕವಿಗಳ ಮೇಲೆ ಈ ಪರಿಸರದ ಶರಣರು ಪ್ರಭಾವ ಬೀರಿದ ಕಾರಣದಿಂದಲೇ ಅವರು ಅನೇಕ ಕೃತಿಗಳನ್ನು ರಚಿಸಿದರು. ಶಂಕರ ದಾಸಿಮಯ್ಯನನ್ನೇ ಕುರಿತು ಹರಿಹರ ರಗಳೆಯನ್ನು ಬರೆದು ಮೊದಲಬಾರಿಗೆ ಅವರ ಸಮಗ್ರ ಚಿತ್ರವನ್ನು ಕಲ್ಪಿಸಿಕೊಟ್ಟರು. ಈ ರಗಳೆ ಶಂಕರ ದಾಸಿಮಯ್ಯರ ಜೀವನ ಹಾಗೂ ಅವರ ಸಂಚಾರಿ ಜಂಗಮ ಸ್ಥಿತಿಯನ್ನು ನಮಗೆ ಪರಿಚಯಿಸಿ ಕೊಡುತ್ತದೆ. ೧ ಅನಂತರದ ಕುಮಾರ ಪದ್ಮರಸ, ಭೀಮಕವಿ, ಲಕ್ಕಣ್ಣ ದಂಡೇಶ, ಗುಬ್ಬಿ ಮಲ್ಲಣ್ಣಾರ್ಯ, ಕಿಕ್ಕೇರಿ ನಂಜುಂಡಾರಾಧ್ಯ, ವಿರಕ್ತ ತೋಂಟದಾರ್ಯ, ಅದೃಶ್ಯ ಕವಿ, ವಿರೂಪಾಕ್ಷ ಪಂಡಿತ, ಉತ್ತರ ದೇಶದ ಬಸವಲಿಂಗ, ಸಿದ್ಧನಂಜೇಶ, ಷಡಕ್ಷರದೇವ, ಚೆನ್ನಪ್ಪ ಕವಿ, ಶಾನುಭೋಗ ಲಿಂಗಪ್ಪ ಮೊದಲಾದವರು ಇವರನ್ನು ಕುರಿತು ತಮ್ಮ ಕಾವ್ಯಕೃತಿಗಳಲ್ಲಿ ಚಿತ್ರಿಸಿದ್ದನ್ನು ಗಮನಿಸಿದರೆ ಇವರ ಪ್ರಭಾವ ಕನ್ನಡ ಸಾಹಿತ್ಯದ ಮೇಲೆ ಎಷ್ಟರ ಮಟ್ಟಿಗೆ ಆಗಿತ್ತೆಂಬುದು ತಿಳಿದು ಬರುತ್ತದೆ.

ಢಕ್ಕೆಯ ಮಾರಯ್ಯರ ಪ್ರಭಾವ ಕನ್ನಡ ಸಾಹಿತ್ಯದಲ್ಲಿ ಸಮರ್ಥವಾಗಿ ಹಿಡಿದಿಡುವ ಯಾವುದೇ ಪ್ರಯತ್ನಗಳಾಗದಿದ್ದರೂ ಆಂಶಿಕವಾಗಿ ಇವರ ಚಿತ್ರಣ ಶಂಕರ ದಾಸಿಮಯ್ಯರ ಅಹಂಕಾರ ನಿರಸನ ಗೊಳಿಸಿದ ಸಂದರ್ಭದಲ್ಲಿ ಕಂಡು ಬರುತ್ತದೆ. ಹರಿಹರನ ನಂತರದ ಕವಿಗಳ ಮೇಲೆ ಢಕ್ಕೆಯ ಮಾರಯ್ಯ ಪ್ರಭಾವ ಬೀರಿದ್ದನ್ನು ಕಾಣಬಹುದು. ಇವರನ್ನು ಕುರಿತು ವೀರಶೈವಾಮೃತ ಪುರಾಣ೨, ಅದೃಶ್ಯ ಕವಿಯ ಕಾವ್ಯ೩, ಭೈರವೇಶ್ವರ ಕಾವ್ಯ೪, ಶಾಂತಲಿಂಗ ದೇಶಿಕರ ಕಾವ್ಯ೫, ಗುರುರಾಜ ಚಾರಿತ್ರ್ಯ೬, ಚೆನ್ನ ಬಸವ ಪುರಾಣ೭, ಪ್ರಭುದೇವರ ಪುರಾಣ೮- ಮೊದಲಾದ ಕೃತಿಗಳಲ್ಲಿ ಭಾಗಶಃ ಕಾಣಬಹುದು.

ಇದಲ್ಲದೇ ಈ ಪರಿಸರದ ಸುಂಕದ ಬಂಕಣ್ಣ, ಬಿಬ್ಬಿ ಬಾಚಯ್ಯ ಇವರನ್ನು ಕುರಿತು ಕೆಲವು ಪುರಾಣ ಕಾವ್ಯಗಳು ಕತೆಗಳನ್ನು ಕಟ್ಟಿ ಕೊಡುತ್ತವೆ. ಈ ಪರಿಸರದ ಶರಣರ ಪ್ರಭಾವ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಆಂಶಿಕವಾಗಿ ಕಂಡು ಬರುತ್ತದೆ. ಸಮಗ್ರವಾಗಿ ಈ ಪರಿಸರದ ಶರಣರನ್ನು ಚಿಂತನೆಗೊಳಪಡಿಸುವ ಯಾವುದೇ ಪ್ರಕಾರಗಳು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಮೂಡಿಬಂದಿಲ್ಲವೆನ್ನಬಹುದು. ಕೇವಲ ಲೇಖನ ಮತ್ತು ಕೆಲವೊಂದು ಸಂಶೋಧನೆಯ ಬರಹಗಳ ಮೇಲೆ ಇವರ ಪ್ರಭಾವವಾಗಿದ್ದನ್ನು ಗುರುತಿಸಬಹುದಾಗಿದೆ. ಇಷ್ಟಾದರೂ ಈ ಪರಿಸರದ ಶರಣರ ಅನುಭಾವ ಮಾತ್ರ ಬಸವೋತ್ತರ ಯುಗದ ಶರಣರ ಮೇಲೆ ಅನಂತರ ಆಧುನಿಕ ಸಾಹಿತ್ಯ ಪ್ರಕಾರಗಳ ಮೇಲೆ ಪ್ರಭಾವ ಬೀರಿದ್ದನ್ನು ಗಮನಿಸಬೇಕಾಗದ ಅಂಶವಾಗಿದೆ. ಈ ಪರಿಸರದ ಶರಣರ ವಿಚಾರಗಳು ವಿಮರ್ಶೆಯ ಗಮನ ಸೆಳೆಯದಿದ್ದರೂ ಸಂಶೋಧನೆಯ ಗಮನ ಸೆಳೆದಿವೆ.ಈ ದಿಸೆಯಲ್ಲಿ ಸೂಪ್ಪಿಮಠ, ಕಲಬುರ್ಗಿ, ಶಾಂತರಸರ ಕೃತಿಗಳನ್ನು ಕಾಣಬಹುದಾಗಿದೆ . ಪುರಾಣ ಕಾವ್ಯಗಳ ಮೇಲೆ ಬಸವೋತ್ತರ ಯುಗದ ಶರಣರು ಪ್ರಭಾವ ಬೀರಿದ್ದಾರೆಂಬುದನ್ನು ಹೇಳಬಹುದಾಗಿದೆ. ಇಷ್ಟನ್ನು ಹೊರತು ಪಡಿಸಿ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಇವರ ಪ್ರಭಾವ ಎಷ್ಟಾಗಿತ್ತೆಂಬುದನ್ನು ಗುರುತಿಸಲು ಸದ್ಯದ ಮಟ್ಟಿಗೆ ಏನನ್ನು ಹೇಳಲಾಗದು.

---

೧ : ಸಂ : ಡಾ : ಎಂ.ಎಂ. ಕಲಬುರ್ಗಿ -ಹ.ರ. ಕಾಂಡ ೨, ಪುಟ ೨೭೭-೨೮೮, ವಿವರಗಳಿಗೆ ಗಮನಿಸಿ

೨ : ಸಂ :ಡಾ :ಆರ್.ಸಿ. ಹಿರೇಮಠ-ಗು.ವೀ.ಮ.-ಕಾಂಡ ೮, ಸಂಧಿ ೨, ಪದ್ಯ ೩೨

೩ : ಸಂ : ಎಸ್.ಎಸ್. ಭೂಸನೂರ ಮಠ-ಅ.ಪ್ರೌ.ಕಾ.-ಸಂಧಿ ೬, ಪದ್ಯ ೪೦

೪ : ಸಂ: ಬಸವ ಸ್ವಾಮಿಗಳು -ಕಿಂ.ನಂ.ಭೈ.ಕಾ.-ಸಂಧಿ ೧, ಪದ್ಯ ೩೮೧

೫ : ಸಂ : ಡಾ : ಆರ್.ಸಿ. ಹಿರೇಮಠ ಮತ್ತು ಡಾ : ಎಂ.ಎಸ್. ಸುಂಕಾಪುರ -ಶಾ.ಭೈ.ಕಾ.ಕ.ಸೂ.ಪುಟ ೨೪೪

೬ : ಸಂ : ಸಂ.ಶಿ. ಭೂಸನೂರ ಮಠ-ಸಿ.ಗು.ಚಾ. -ಸಂಧಿ ೮, ಪುಟ ೧೫೫-೧೫೬

೭ : ಸಂ : ಶಿ.ಶಿ. ಬಸವನಾಳ -ವಿ.ಪಂ.ಚೆ.ಪು. -ಸಂಧಿ ೪, ಕಾಂಡ ೫,ಪದ್ಯ ೨೫

೮ : ಸಂ : ಬುದ್ದಯ್ಯ ಸ್ವಾಮಿ ಪುರಾಣಿಕ -ಎ.ಹ.ಪ್ರ.ಪು. -ಪದ್ಯ ೨೦೧, ೨೦೫,೨೦೮

ಅಧ್ಯಾಯ : ೧೯ ಸಮಾರೋಪ

೯ : ೧ ಅಧ್ಯಯನ ಪ್ರಮುಖ ಅಂಶಗಳು

೯ : ೨ ಹೊಸತನದ ಪಟ್ಟೀಕರಣ

೯ : ೩ ಎದುರಾಗಿರುವ ಸವಾಲುಗಳು

೯ : ೪ ಅಧ್ಯಯನದ ಫಲಶೃತಿ

೬ : ೧ ಅಧ್ಯಯನ ಪ್ರಮುಖ ಅಂಶಗಳು

ಕಲ್ಯಾಣ ಕೇಂದ್ರಿಕೃತವಾಗಿ ಶರಣರ ಪರಂಪರೆಯ ಆಲೋಚನೆ - ಚಿಂತನೆಗಳನ್ನು ಕಟ್ಟಿ ಕೊಡುವ ನಮ್ಮ ಸಾಹಿತ್ಯ ಪರಂಪರೆಯಲ್ಲಿ ಪ್ರಾದೇಶಿಕವಾಗಿ ಆಯಾ ಪರಿಸರದ ವೈಶಿಷ್ಟಗಳು - ತನ್ನ ತನಗಳು ಲೀನವಾಗಿ ಹೋಗುವ ಸಂದರ್ಭಗಳೇ ಅಧಿಕವಾಗಿರುತ್ತವೆ. ಹಾಗಾಗಬಾರದು ಎಂಬುದನ್ನು ಕಂಡು ಕೊಂಡು ಈ ಪರಿಸರ ಕಲ್ಯಾಣ ಪರಿಸರಕ್ಕಿಂತ ಹೇಗೆ ಭಿನ್ನವಾಗಿತ್ತು, ಇಲ್ಲಿಯ ಶರಣರು ಅವರಿಗಿಂತ ಹೇಗೆ ಭಿನ್ನ ಮತ್ತು ಹೇಗೆ ಅವರಂತೆ ಇವರು ಹೇಗೆ ಎಂಬುದನ್ನು ಆಲೋಚಿಸುತ್ತಾ ಇಲ್ಲಿನ ಪರಿಸರದ ಶರಣರ ಬದುಕು - ಸಾಹಿತ್ಯ - ಸಮಕಾಲೀನ ಅವರ ಪರಿಸರದ ಸ್ಥಿತಿಗತಿಗಳನ್ನು ಚಾರಿತ್ರಿಕವಾಗಿ - ಸಾಹಿತ್ಯಿಕವಾಗಿ - ಸಾಂಸ್ಕೃತಿಕವಾಗಿ ಗುರುತಿಸುವ ಪ್ರಯತ್ನವನ್ನು ಪ್ರಸ್ತುತ ಮಹಾ ಪ್ರಬಂಧದಲ್ಲಿ ಮಾಡಲಾಗಿದೆ. ಇದು ಈ ಪರಿಸರದ ಶರಣರ ಬದುಕು ಮತ್ತು ಬರಹವನ್ನು ಕುರಿತು ಬಂದ ಮೊದಲ ಸಮಗ್ರ ಅಧ್ಯಯನವಾಗಿದೆ.

ಬಸವಯುಗಕ್ಕೆ ಪೂರ್ವದಲ್ಲಿ ಒಂದು ಸ್ಥಿರತೆಯನ್ನು ವೈಯಕ್ತಿಕವಾಗಿ ಬಸವಪೂರ್ವಯುಗದಲ್ಲಿ ತುಂಬಿ ಕೊಡುವ ಮೂಲಕ ಇದುವರೆಗಿನ ಚಾರಿತ್ರಿಕ ಕೊರತೆಯಾಂಶಗಳಿಗೆ ಹೊಸ ಪರಿಕಲ್ಪನೆಗಳನ್ನು ತುಂಬುವ ಮಹತ್ವಾಕಾಂಕೆಯೊಂದಿಗೆ ಪ್ರಸ್ತುತ ಅಧ್ಯಯನ ಹಲವು ಮುಖಿಯಾಗಿ ಮುನ್ನಡೆಯುತ್ತಿದೆ. ಮೊದಲ ಅಧ್ಯಾಯದಲ್ಲಿ ಅಧ್ಯಾಯದ ಉದ್ದೇಶ -ವ್ಯಾಪ್ತಿಗಳ ಬಗ್ಗೆ ಹೊಸ ಆಲೋಚನೆಗಳನ್ನು ಮುಂಡಿಸುತ್ತ ಪ್ರಬಂಧದ ಬರಹ ಆರಂಭವಾಗುತ್ತದೆ .ಹಾಗೆಯೇ ಅಧ್ಯಯನದ ವಿಧಾನಕ್ಕೆ ಬಳಸಿಕೊಂಡ ಎಲ್ಲಾ ಸ್ವರೂಪದ ಆಕರತೆಯ ಬಗ್ಗೆ, ಸ್ವರೂಪದ ಬಗ್ಗೆ ವಿವರಿಸಲಾಗಿದೆ.

ಎರಡನೆಯ ಅಧ್ಯಾಯ ಶರಣರ ಪರಂಪರೆ ಕನ್ನಡನಾಡಿನಲ್ಲಿ ಸಾಗಿ ಬಂದ ರೀತಿಗಳನ್ನು ವಿವರಿಸುತ್ತಾ ಇದುವರೆಗಿನ ಕೆಲವು ಪಾರಿಭಾಷಿಕ ಪದಗಳಲ್ಲಿನ ಕೆಲವು ಗೊಂದಲಮಯ ವಿಚಾರಗಳಿಗೆ ಹೊಸ ಆಲೋಚನೆಯನ್ನು ಮೂಡಿಸುತ್ತಾ ಅತ್ಯಂತ ಗಂಭೀರತೆಯಿಂದ ಶರಣರ ಬದುಕು-ಸಾಹಿತ್ಯವನ್ನು ಅವಲೋಕಿಸುವ ಕಡೆಗೆ ಆಸಕ್ತರ ಗಮನವನ್ನು ಸೆಳೆಯಲಾಗಿದೆ.

ಮೂರನೆಯ ಅಧ್ಯಾಯ ನೇರವಾಗಿ ಈ ಪರಿಸರದ ಜನರ ಬದುಕಿನ ಹಿನ್ನೆಲೆಯನ್ನು ಭಿತ್ತಿಯಾಗಿಟ್ಟುಕೊಂಡು ಹಲವು ವೈಶಿಷ್ಟ್ಯತೆಗಳ ಬಗ್ಗೆ ಗಮನ ಸೆಳೆಯಲಾಗಿದೆ. ಹಾಗೆಯೇ ಇದುವರೆಗೂ ಈ ಪರಿಸರದ ಶರಣರ ಬಗ್ಗ - ಅವರ ಜೀವನ ವಿವರಗಳ ಬಗ್ಗೆ ಇದುವರೆಗೂ ಗುರುತಿಸಲಾಗದ ಹೊಸ ಅಂಶಗಳನ್ನು ಗುರುತಿಸುವ ಪ್ರಯತ್ನ ಮಾಡಿ ಅವುಗಳ ಬಗ್ಗ ಆಸಕ್ತರ ಗಮನ ಸೆಳೆದು ಅವರ ಅಧ್ಯಯನಕ್ಕೆ ಪೂರಕವಾಗಬಲ್ಲ ಮಾಹಿತಿಯನ್ನು ನೀಡುವ ದಿಸೆಯಲ್ಲಿ ಇಲ್ಲಿ ವಿವೇಚಿಸಿ ವಿವರಗಳನ್ನು ಕಟ್ಟಿ ಕೊಡಲಾಗಿದೆ.

ನಾಲ್ಕನೇಯ ಅಧ್ಯಾಯದಲ್ಲಿ ಇದುವರೆಗೂ ಈ ಪರಿಸರದ ಶರಣರನ್ನು ಕುರಿತು - ಅವರ ಸಾಹಿತ್ಯವನ್ನು ಕುರಿತು ಇಲ್ಲಿ ಮೊದಲಬಾರಿಗೆ ಸುಧೀರ್ಘವಾಗಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ಬಹುಶಃ ಈ ಪ್ರಯತ್ನ ಮೊದಲನೆಯದು ಎನ್ನ ಬಹುದಾಗಿದೆ. ಈ ಪರಿಸರದ ಶರಣರ ವಚನ - ವಚನೇತರ ಪ್ರಕಾರಗಳ ಒಟ್ಟಾರೆ ಸ್ವರೂಪವನ್ನು ಗಮನಿಸಿ ಸಾಹಿತ್ಯಿಕ ಅಂತಿಕವಾಗಿ ಭಾಷಿಕ ಅಧ್ಯಯನ ಕೈಗೊಂಡು ಆನಿಟ್ಟಿನಲ್ಲಿ ಆಸಕ್ತರು ಹೆಚ್ಚಿನ ಅಧ್ಯಯನ ಕೈಗೊಳ್ಳ ಬಹುದಾದ ಸಾಧ್ಯತೆಗಳನ್ನು ಕಂಡು ಕೊಳ್ಳುವುದಕ್ಕೆ ಇದು ಪ್ರೇರಕವಾಗಬಲ್ಲುದೆಂಬ ಧಾಟಿಯಲ್ಲಿ ಇಲ್ಲಿ ಅಧ್ಯಯನ ಮಾಡಲಾಗಿದೆ.

ಈ ಪರಿಸರದ ಶರಣರು ತಮ್ಮ ಸಾಹಿತ್ಯದಲ್ಲಿ ತನ್ನ ತನವನ್ನು ಉಳಿಸಿಕೊಂಡಂತೆ ಬದುಕಿನಲ್ಲಿ ಉಳಿಸಿಕೊಂಡು ಕಾಯಕಕ್ಕೆ ಹೊಸದಾದ ಪರಿಕಲ್ಪನೆ ನೀಡಿ ಅವರು ಕಟ್ಟ ಬಯಸಿದ ಸಮಾಜ ಕಲ್ಯಾಣ ಶರಣರಿಗಿಂತಲೂ ಹೇಗೆ ಪ್ರಗತಿಪರ ವಾಗಿತ್ತು ಎಂಬುದನ್ನು ಸಮಕಾಲೀನ ಸಾಮಾಜಿಕ ಸ್ಥಿತಿಗತಿಗಳ ಹಿನ್ನೆಲೆಯಲ್ಲಿ ಚರ್ಚಿಸಿ ಆ ಮೂಲಕ ಅವರ ಸಾಹಿತ್ಯದಲ್ಲಿ ನಿರೂಪಿತವಾದ ಅಂಶಗಳ ಮೂಲಕ ವಿವರಗಳನ್ನು ಐದನೆಯ ಅಧ್ಯಾಯದಲ್ಲಿ ಕಂಡು ಕೊಳ್ಳ ಬಹುದಾಗಿದೆ.

ಆರನೆಯ ಅಧ್ಯಾಯದಲ್ಲಿ ಶರಣರು ತಮ್ಮ ಸಮಕಾಲೀನ ಧಾರ್ಮಿಕ ಸ್ಥಿತಿಗತಿಗಳನ್ನು ಹೇಗ ಗಮನಿಸಿದರು , ಧಾರ್ಮಿಕ ಸಂಘರ್ಷಗಳನ್ನು ಹೇಗೆ ಎದುರಿಸಿದರು , ಕಲ್ಯಾಣ ಶರಣರಿಗಿಂತ ಧಾರ್ಮಿಕವಾಗಿ ಯಾವ ರೀತಿ ಭಿನ್ನ ಆಲೋಚನೆಗಳನ್ನು ಹೊಂದಿದ್ದರು ಎಂಬುದನ್ನು ನಾವಿಲ್ಲಿ ಗುರುತಿಸಬಹುದು. ಕ್ಷುದ್ರ ದೈವಗಳನ್ನೇ ಮೇಲ್ಮಟ್ಟಕ್ಕೇರಿಸಿ, ಅವುಗಳ ಸಾಂಸ್ಕೃತಿಕ ಮಹತಿ - ಉಪಸಂಸ್ಕೃತಿಯ ಚಿಂತನೆಗಳನ್ನು ಮೊದಲ ಬಾರಿಗೆ ಸಾಹಿತ್ಯ ಲೋಕಕ್ಕೆ ಮೂಡಿಸಿ ಕೊಟ್ಟ ಅಂಶಗಳ ಬಗ್ಗೆ ಇಲ್ಲಿ ವಿವೇಚಿಸಲಾಗಿದೆ. ಅವರ ಧಾರ್ಮಿಕ ಅಂಶಗಳನ್ನು ಅವರ ಸಾಹಿತ್ಯದ ಹಿನ್ನೆಲೆಯಲ್ಲಿಯೇ ವಿವರವಾಗಿ ಕಟ್ಟಿ ಕೊಡಲಾಗಿದೆ.

ಏಳನೆಯ ಅಧ್ಯಾಯ ಶರಣರ ಸಾಹಿತ್ಯ ಸಂದರ್ಭದಲ್ಲಿಯೇ ಬಹುಶಃ ಹೊಸದೆನ್ನ ಬಹುದಾಗಿದೆ. ಪ್ರಕೃತಿಯನ್ನು ಈ ಪರಿಸರದ ಶರಣರು ಕೇವಲ ತತ್ವ ಪ್ರತಿಪಾದನೆಗೆ ಮಾತ್ರವಾಗಿ ಬಳಸದೇ ಅವರು ಅದನ್ನು ಸಾಂಸ್ಕೃತಿಕ ಪರಿಸರಕ್ಕೆ ಹೇಗೆ ಭಿತ್ತಿಯನ್ನಾಗಿ ಕಂಡು ಕೊಂಡರೆಂಬುದನ್ನು ಇಲ್ಲಿ ಮೊದಲ ಬಾರಿಗೆ ವಿವರಿಸಲಾಗಿದೆ. ಅಲ್ಲದೇ ಅಂಕಿತಗಳ ಅಂತರಂಗದಲ್ಲಿ ಅಡಗಿದ್ದೇನೆಂಬುದನ್ನು ಇಲ್ಲಿ ಪ್ರಕೃತಿ - ಸಂಸ್ಕೃತಿಗಳ ಮೂಲಕ ಕಂಡು ಕೊಂಡು ; ಶರಣರ ಅಂಕಿತಗಳಿಗ ಪ್ರಕೃತಿಯೇ ಮೂಲಭೂತವಾಗಿ ಪ್ರೇರಣೆಯೆಂಬ ಹೊಸ ವಿಚಾರಗಳ ಕಡೆಗೆ ಗಮನ ಸೆಳೆಯುವ ಪ್ರಯತ್ನ ಮಾಡಲಾಗಿದೆ.

ಎಂಟನೆಯ ಅಧ್ಯಾಯವು ಈ ಪರಿಸರದ ಶರಣರ ಪ್ರಭಾವ - ಪ್ರೇರಣೆಗಳನ್ನು ಕಲ್ಯಾಣ ಶರಣರ ಮೇಲೆ , ಕನ್ನಡ ಸಾಹಿತ್ಯದ ಮೇಲೆ ಭಾಗಶಃ ಹೇಗಾಗಿದೆಂಬುದನ್ನು ಸ್ಥೂಲವಾಗಿ ವಿವರಿಸಲಾಗಿದೆ.

ಕೊನೆಯ ಅಧ್ಯಾಯವು ಸಮಾರೋಪ ಭಾಗವನ್ನು ಒಳಗೊಂಡಿದೆ. ಸಮಾರೋಪವನ್ನು ಅಧ್ಯಯನದ ಪ್ರಮುಖ ಅಂಶಗಳನ್ನು ನೋಡುವ ಜೊತೆಗೆ, ಇನ್ನೂ ಕೆಲವು ವಿಷಯಗಳನ್ನು ಗಮನಿಸುವುದಾದರೆ ಇಲ್ಲಿ ಅನುಬಂಧದಲ್ಲಿ ಈ ಪರಿಸರದ ಪುರಾಣಗಳ ಬಗ್ಗೆ ಮೊದಲಬಾರಿಗೆ ಹೊಸ ವಿಚಾರಗಳನ್ನು ತಿಳಿಸುವ ಪ್ರಯತ್ನ ಮಾಡಲಾಗಿದ್ದು ಅದು ಮುಂದೆ ಅಧ್ಯಯನಾಸಕ್ತರಿಗೆ ಪ್ರೇರೆಪಣೆ ನೀಡುವಂತೆ ಮಾಹಿತಿ ನೀಡಲಾಗಿದೆ. ಸಾಧ್ಯವಾದಷ್ಟು ಈ ಪರಿಸರದ ಶರಣರ ಜೀವನಕ್ಕೆ ಸಂಬಂಧಿಸಿದ ಪುರಾಣಗಳ ಮಾಹಿತಿಯ ಪಟ್ಟಿಯನ್ನು ಕೊಡಲಾಗಿದೆ.

ಹಾಗೆಯೇ ಆಧುನಿಕ ಸಾಹಿತ್ಯ ಪರಂಪರೆಯ ಮೇಲೆ ಈ ಪರಿಸರದ ಶರಣರು ಬೀರಿದ ಪ್ರಭಾವವನ್ನು ಈ ಅಧ್ಯಯನಕ್ಕೆ ಪೂರಕವಾಗಬಹುದೆನ್ನುವ ದೃಷ್ಟಿಯಿಂದ ಅನುಬಂಧದಲ್ಲಿ ವಿವರಿಸಿಲಾಗಿದ್ದು ಇದುವರೆಗೆ ಈ ಪರಿಸರದಲ್ಲಿ ಈ ಪರಿಸರದ ಶರಣರನ್ನು ಕುರಿತು ಮೊದಲ ಬಾರಿಗೆ ಸೃಜನ ಸಾಹಿತ್ಯ ಪರಂಪರೆಯ ನೋಟದ ಜೊತೆಗೆ ಪ್ರಮುಖ ಸೃಜನಶಿಲ ಸಾಹಿತ್ಯ- ಸಾಹಿತಿಗಳು ಹಾಗೂ ಅವರ ಕೃತಿಗಳ ಬಗ್ಗೆ ಕಿರು ಮಾಹಿತಿಯನ್ನು ನೀಡಲಾಗಿದೆ.

ಜೊತೆಗೆ ಇಲ್ಲಿಯ ವಿಮರ್ಶೆ, ಸಂಶೋಧನೆ, ಜಾನಪದ ಅಂಶಗಳ ಬಗ್ಗೆ ಸಹ ಮೊದಲ ಬಾರಿಗೆ ಶರಣರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಗಮನ ಸೆಳೆಯಲಾಗಿದ್ದು ಇದೊಂದು ಪ್ರತ್ಯೇಕ ಅಧ್ಯಯನವೊಂದಕ್ಕೆ ಪ್ರೇರಕವಾಗಬಲ್ಲುದೆಂಬ ಅಂಶವನ್ನು ಗುರುತಿಸಲಾಗಿದೆ. ಇಷ್ಟಲ್ಲದೇ ಈ ಪರಿಸರದ ಶರಣರ ಜೀವನ ಸಂದೇಶಗಳ ಕುರಿತಂತೆ ನಾಡಿನ ಇತರ ಪರಿಸರದ ಬರಹಗಾರರು ಕೈಗೊಂಡ ಅಧ್ಯಯನಗಳ ಬಗ್ಗೆ ಮಾಹಿತಿಯನ್ನು ಸಹ ನೀಡಲಾಗಿದ್ದು ಕೊನೆಯದಾಗಿ ಆದಷ್ಟು ಈ ಪರಿಸರದ ಶರಣರನ್ನು ಕುರಿತು ಇದುವರೆಗಿನ ಸೃಜನ -ವಿಮರ್ಶೆ - ಸಂಶೋಧನೆಗಳ ಕೃತಿ ಸೂಚಿಯೊಂದರ ಪಟ್ಟಿಯನ್ನು ನೀಡಲಾಗಿದೆ. ಅನುಬಂಧ ಪ್ರಸ್ತುತ ಮಹಾ ಪ್ರಬಂಧದಲ್ಲಿ ಗಮನಿಸಬೇಕಾದ ಅಂಶವೆನ್ನುವಷ್ಟರ ಮಟ್ಟಿಗೆ ರೂಪಿಸಲಾಗಿದೆ.

ಹಾಗೆಯೇ ಪರಿಶಿಷ್ಟವನ್ನು ಸಹಿತ ಆದಷ್ಟು ಶಾಸ್ತ್ರೀಯವಾಗಿ ಕಟ್ಟಿ ಕೊಡುವ ಪ್ರಯತ್ನವನ್ನು ಇದುವರೆಗಿನ ಸಾಂಪ್ರದಾಯಿಕ ಹಿನ್ನೆಲೆಯಲ್ಲಿ ಮಾಡಲಾಗಿದೆ.

ಅಧ್ಯಯನಕ್ಕೆ ಸಂಬಂಧಿಸಿದಂತೆ ಹಲವಾರು ಛಾಯಾಚಿತ್ರಗಳನ್ನು -ನೆರಳಚ್ಚು ಪ್ರತಿಗಳನ್ನು (ಝೆರಾಕ್ಸ್) ಸಂಗ್ರಹಿಸಿ ಕೊಡಲಾಗಿದೆ. ನಕಾಶೆಯ ಮೂಲಕ ಶರಣರ ಸ್ಥಳಗಳ ಬಗ್ಗೆ ನಿರ್ದೇಶನ ಮಾಡಿ ಮುಂದಿನ ಆಸಕ್ತರಿಗೆ ಅನುಕೂಲ ಮಾಡಿ ಕೊಡಲಾಗಿದೆ. ಹಾಗೆಯೇ ಅಕಾರಾದಿ, ಗ್ರಂಥ ಸೂಚಿಗಳನ್ನು ನೀಡಲಾಗಿದೆ.

ಕ್ಷೇತ್ರ ಕಾರ್ಯಕ್ಕೆ ಸಂಬಂಧಿಸಿದಂತೆ ವಿಶೇಷವಾದ ಮಾಹಿತಿಯನ್ನು ನೀಡುವ ಮೂಲಕ ಈ ಪರಿಸರದ ಶರಣರ ಬಗ್ಗೆ ಇನ್ನೂ ಆಯಾ ಶರಣರ ಹಿನ್ನೆಲೆಯಲ್ಲಿ ಹೆಚ್ಚಿನ ಅಧ್ಯಯನ ಕೈಗೊಳ್ಳುವವರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಕ್ಷೇತ್ರ ಕಾರ್ಯದಲ್ಲಿ ಸಹಕರಿಸಬಲ್ಲ ವ್ಯಕ್ತಿಗಳ ಬಗ್ಗೆ ಮತ್ತು ಸ್ಥಳಗಳ ಬಗ್ಗೆ ಮಾಹಿತಿ ಒದಗಿಸಲಾಗಿದೆ.

೯ : ೨ ಹೊಸತನದ ಪಟ್ಟೀಕರಣ

ಪ್ರಸ್ತುತ ಮಹಾ ಪ್ರಬಂಧದಲ್ಲಿ ಗುರುತಿಸಿದ ಹೊಸ ಅಂಶಗಳೆಂದರೆ:

೧) ಶರಣ -ತತ್ವ ಪದ -ಸ್ವರ ವಚನ ಇವುಗಳ ಬಗ್ಗೆ ವಿಸ್ತೃತ ಪರಿಕಲ್ಪನೆ - ವಿಶ್ಲೇಷಣೆ ಮಾಡಲಾಗಿದೆ.

೨) ವಚನ ಪ್ರಕಾರ ಆರಂಭದ ಬಗ್ಗೆ ಹೊಸ ಮಾಹಿತಿಗಳು

೩) ಶಂಕರ ದಾಸಿಮಯ್ಯನ ರಗಳೆಯಲ್ಲಿ ಅಂತರ್ಗತವಾಗಿರುವ ಸ್ತೋತ್ರ ರೂಪದ ಗೀತೆ - ವಚನಗಳ ಮಾದರಿ ಗುರುತಿಸಲಾಗಿದೆ.

೪) ಶರಣರ ಕುರಿತ ಇದುವರೆಗಿನ ಕೆಲವು ತಪ್ಪು ಗ್ರಹಿಕೆಗಳನ್ನು ತಳ್ಳಿ ಹಾಕಿ ಲಭ್ಯವಿರು ಮಾಹಿತಿಗಳನ್ನು ಎಚ್ಚರದಿಂದ ಗಮನಿಸಿ ಸಂಭವನೀಯವಾದ ವಿವರಣೆಯನ್ನು ಆದಷ್ಟು ಸಮರ್ಥವಾಗಿ ಕಟ್ಟಿ ಕೊಡಲಾಗಿದೆ. ಉದಾ: ಢಕ್ಕೆಯ ಮಾರಯ್ಯ, ಉಳಿಮೇಶ್ವರ ಚಿಕ್ಕಯ್ಯ, ಮುಕ್ತಾಯಕ್ಕ - ಅಜಗಣ್ಣ, ಪುರದ ನಾಗಣ್ಣ ಇತ್ಯಾದಿ.

೫) ಸಾಹಿತ್ಯಿಕ ಸಂವಾದದಂತೆ ಕಂಡು ಬರುವ ಕೆಲವು ಮುಖಾ- ಮುಖಿ ಪ್ರಸಂಗಳನ್ನು ಕಟ್ಟಿ ಕೊಡಲಾಗಿದೆ.

೬) ಅಂಕಿತಗಳ ಬಗ್ಗೆ ಹೊಸದಾದ ಪರಿಕಲ್ಪನೆ ತಿಳಿಸಲಾಗಿದೆ.

೭) ಈ ಪರಿಸರದ ಶರಣರು ಅಭಿವ್ಯಕ್ತಿಸಿದ ಹೊಸ ಹೊಸ ಪ್ರಕಾರಗಳ ಬಗ್ಗೆ ಗುರುತಿಸಲಾಗಿದೆ.

ಇದಲ್ಲದೆ ಇಲ್ಲಿ ಮೊದಲ ಬಾರಿಗೆ ಅನೇಕ ಹೊಸ ಅಂಶಗಳನ್ನು ಗುರುತಿಸುವ ಪ್ರಯತ್ನ ಮಾಡಿದೆ. ಆಯ್ದಕ್ಕಿ ದಂಪತಿಗಳ ಅಂಕಿತ ಸಮಗ್ರ ವಚನ ಸಂಪುಟಗಳಲ್ಲಿ ಅಮಲೇಶ್ವರ ಎಂದಿದ್ದರೂ ಅದನ್ನು ಕೈ ಬಿಟ್ಟು ಸರಿಯಾದರೂಪ ಅಮರೇಶ್ವರ ವೆಂದು ಸ್ವೀಕರಿಸಲಾಗಿದೆ. ಅಂತೆಯೇ ಢಕ್ಕೆಯ ಬೊಮ್ಮಣ್ಣ ಮತ್ತು ಮಾರಯ್ಯ ಅಭಿನ್ನರೆಂದು ಕಂಡು ಕೊಂಡು ಸಮಗ್ರ ವಚನ ಸಂಪುಟದ ಢಕ್ಕೆಯ ಬೊಮ್ಮಣ್ಣನ ವಚನಗಳನ್ನು ಇಲ್ಲಿ ಮಾರಯ್ಯನ ವಚನಗಳೆಂದು ಗುರುತಿಸಲಾಗಿದೆ.- ಹೀಗೆ ಈ ಮಹಾ ಪ್ರಬಂಧದಲ್ಲಿ ಹಲವಾರು ಹೊಸ ಅಂಶಗಳ ಬಗ್ಗೆ ಗಮನ ಹರಿಸಲಾಗಿದೆ.

೯ : ೩ ಎದುರಾಗಿರುವ ಸವಾಲುಗಳು

ಪ್ರಸ್ತುತ ಈ ಪರಿಸರದ ಶರಣರನ್ನು ಕುರಿತು ಮೊದಲ ಬಾರಿಗೆ ಸುಧೀರ್ಘವಾಗಿ ಸಮಗ್ರ ಅಧ್ಯಯನ ಕೈಗೊಂಡರೂ ಅನೇಕ ಸವಾಲು ನಮಗೆ ಇಲ್ಲಿ ಬಗೆಹರಿಯದ ಸವಾಲುಗಳಾಗಿಯೇ ಕಂಡು ಬರುತ್ತವೆ.

ಕಲ್ಯಾಣ ಕ್ರಾಂತಿಯ ನಂತರ ಈ ಪರಿಸರದ ಶರಣ ಸಾಹಿತ್ಯ -ಶರಣರ ಬಗ್ಗೆ , ಶರಣರ ಸ್ಥಿತಿ ಗತಿಗಳ ಬಗ್ಗೆ ಏನು ತಿಳಿಯದಂತಾಗಿದೆ. ಈ ಪರಿಸರದ ಶರಣರ ವಚನಗಳ ಮಾಹಿತಿ ಇನ್ನೂ ಅಪೂರ್ಣವಾಗಿರುವುದು ಸವಾಲಾಗಿದೆ. ಮೌಖಿಕ ಪರಂಪರೆಯಲ್ಲಿ ಈ ಪರಿಸರದ ಶರಣರ ಮಾಹಿತಿಯ ಬಗ್ಗೆ ಸಬಲವಾದ ಆಧಾರಗಳು ಲಭ್ಯವಾಗದೆ ಇರುವುದು .ಈ ಪರಿಸರದ ಶರಣರ ಕುರಿತಂತೆ ಹೇರಳವಾದ ಜಾನಪದ ಸಾಹಿತ್ಯ ಲಭ್ಯವಾಗುವ ಸಾಧ್ಯತೆ ಇದ್ದರೂ ಅವುಗಳ ಬಗ್ಗೆ ಸರಿಯಾದ ಮಾಹಿತಿಗಳ ಕೊರತೆ ಕಂಡು ಬರುತ್ತದೆ. ಅನೇಕ ಅಪ್ರಕಟಿತ ಹಸ್ತ ಪ್ರತಿಗಳು ಈ ಪರಿಸರದಲ್ಲಿದ್ದು ಅವುಗಳಲ್ಲಿ ಹೊಸ ಹೊಸ ರಚನೆಗಳು ಇರುವ ಸಾಧ್ಯತೆಯನ್ನು ಇಲ್ಲಿನವರು ಬಳಸುವ ಹಾಡುಗಳ ಹಿನ್ನೆಲೆಯಲ್ಲಿ ಕಂಡು ಕೊಳ್ಳಬಹುದಾಗಿದೆ. ಆದರೆ ಹಸ್ತ ಪ್ರತಿಗಳನ್ನು ಕೆಲವರು ಪ್ರವಿತ್ರವೆಂದು ಭಾವಿಸಿ ಗಂಟು ಕಟ್ಟಿ ಯಾರು ಕಾಣದಂತೆ ಮೂಲೆಯಲ್ಲಿ ಕಟ್ಟಿ , ಯಾರನ್ನು ಮುಟ್ಟಿಸದಂತೆ ಮಾಡಿರುವುದು ಒಂದು ಕಡೆಯಾದರೆ, ಇನ್ನೊಂದೆಡೆ ಅದರಲ್ಲಿ ಅನೇಕ ಸಂಪತ್ತಿನ ಮಾಹಿತಿ ಇದೆ ಎಂಬ ಭ್ರಮೆಯಿಂದ ಅವುಗಳನ್ನು ಯಾರಿಗೂ ತಲುಪದಂತೆ ಸಂರಕ್ಷಿಸಿಕೊಂಡದ್ದು ಕಂಡು ಬರುತ್ತದೆ. ಹಲವಾರು ಹಸ್ತ ಪ್ರತಿಗಳಿದ್ದರು ಸದ್ಯಕ್ಕೆ ಅವು ಅಧ್ಯಯನಕ್ಕೆ ಸಿಗದಂತಾಗಿದ್ದು ಅವುಗಳ ಮಾಹಿತಿ ನಮಗೆ ಇನ್ನೂ ನಿಗೂಢವಾಗಿಯೇ ಇದೆ.

ಈ ಪರಿಸರಕ್ಕೆ ಸಂಬಂಧಿಸಿದಂತೆ ಕೆಲವು ಶಾಸನ ಮಾಹಿತಿಗಳು ಅಪ್ರಕಟವಾಗಿವೆ. ಕೆಲವು ಶಾಸನಗಳನ್ನು ಜನರು ಅವುಗಳ ಮಹತ್ವ ಅರಿಯದೇ ಅವುಗಳನ್ನು ತಮ್ಮ ಮನೆ-ಊರಿನ ದೇವಾಲಯಗಳ ಕಟ್ಟಡಗಳಲ್ಲಿ ಅಂತರ್ಗತಗೊಳಿಸಿ ಕಟ್ಟಿರುವುದು ಒಂದು ಕಡೆಯಾದರೇ ಮತ್ತೊಂದೆಡೆ ಅವುಗಳನ್ನು ಒಡೆದು ಮನೆಯ ಬಳಕೆಗೆ ಉಪಯೋಗಿಸುವ ಬಂಡೆಗಳನ್ನಾಗಿ ಕೆಲವರು ನಿರ್ಮಿಸಿಕೊಂಡದ್ದು ನನಗೆ ಕ್ಷೇತ್ರ ಮಾಹಿತಿಗೆ ಹೋದಾಗ ಕಂಡು ಬಂದಿತು. ಸುಂಕದ ಬಂಕಣ್ಣನವರ ಬಗ್ಗೆ ಮಾಹಿತಿ ನೀಡುವ ಒಂದು ಶಾಸನ ಪ್ರಸ್ತುತ ಮಲ್ಲಟ ಗ್ರಾಮದಲ್ಲಿ ಬಟ್ಟೆ ತೊಳೆಯುವ ಬಂಡೆಯಾಗಿ ಹೋಗಿ ಅಪೂರ್ಣವಾಗಿ ಬಿಟ್ಟಿದೆ. ಅದರಲ್ಲಿ ' ಸುಂಕದ ಬಂಕಣ್ಣನೆಂಬ' ಎಂಬ ಮಧ್ಯದ ಸಾಲುಗಳ ಅಸ್ಪಷ್ಟ ಅಕ್ಷರಗಳನ್ನು ಹೊರತು ಪಡಿಸಿದರೆ ಮತ್ತೇನು ಕಂಡು ಬರದು .ಆ ಶಾಸನದ ವಸ್ತು ನಮಗೆ ಇನ್ನೂ ಸವಾಲಾಗಿಯೇ ಉಳಿದಿದೆ. ಹೀಗೆ ಈ ಪರಿಸರದ ಶರಣರ ಸಾಹಿತ್ಯವನ್ನು ಅಧ್ಯಯನ ಮಾಡಲು ಹೊರಟಾಗ ಉಪಲಬ್ಧವಿದ್ದ ಆಕರಗಳಿಗಿಂತ ಅನುಪಲಬ್ಧವಾದ ಅನೇಕ ಮಾಹಿತಿಗಳು ನಮಗೆ ದೊರೆಯದೇ ಹೋಗಿ ಅಧ್ಯಯವನ್ನು ಇನ್ನಷ್ಟು ಬಲ ಪಡಿಸುವಲ್ಲಿ ತೊಂದರೆಯಾಗಿ- ಸವಾಲುಗಳಾಗಿ ಸದಾ ಅಧ್ಯಯನಕ್ಕೆ ನಿರಂತರ ತೊಡಗಿರುವಂತೆ ಮಾಡಿವೆ. ಹತ್ತು ಮಹಾ ಪ್ರಬಂಧಗಳನ್ನು ಬರೆಯುವಷ್ಟು ಮಾಹಿತಿ ಈ ಪರಿಸರದ ಶರಣ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಇಲ್ಲಿ ಕಂಡು ಬರುತ್ತದೆ. ಇಷ್ಟೆಲ್ಲಾ ಇದ್ದರೂ ಎಲ್ಲಾ ಸವಾಲುಗಳನ್ನು ಗುರುತಿಸಿಯೇ ಅಧ್ಯಯನ ಕೈಗೊಂಡು ಅನೇಕ ಸವಾಲುಗಳ ಸಮಸ್ಯೆಗೆ ತಕ್ಕ ಉತ್ತರವನ್ನು ಕಂಡು ಕೊಳ್ಳಲಾಗಿದೆ. ಮುಂದಿನ ಸವಾಲುಗಳನ್ನು ಎದುರಿಸಬೇಕಾದ ಜವಾಬ್ದಾರಿ ನನ್ನ ಮೇಲೆ ಹಾಗೂ ಅಧ್ಯಯನ ಆಸಕ್ತರ ಮೇಲಿದೆ ಎಂಬುದನ್ನು ವಿನಯ ಪೂರ್ವಕವಾಗಿ ಹೇಳಬಯಸುತ್ತೇನೆ.

೯ : ೪ ಅಧ್ಯಯನದ ಫಲಶೃತಿ

ಅಲಕ್ಷಿತಗೊಂಡಿದ್ದ ಈ ಪರಿಸರದ ಶರಣರ ಸಾಹಿತ್ಯವನ್ನು ಮೊದಲಬಾರಿಗೆ ಬೆಳಕಿಗೆ ತರುವ ಪ್ರಯತ್ನವನ್ನು ನಿರ್ಧರಿಸಿ ಕೈಗೊಂಡಾಗ ಅನೇಕ ವಿದ್ವಾಂಸರ ದೃಷ್ಟಿಯಲ್ಲಿ ಇಂತಹ ಅಧ್ಯಯನದಿಂದ ಏನು ಪ್ರಯೋಜನವಿದೆ? ಶರಣರನ್ನು ಪ್ರತ್ಯೇಕಿಸಿ ನೋಡುವುದು ಎಷ್ಟರ ಮಟ್ಟಿಗೆ ಸರಿ ? ಅವರಲ್ಲಿ ಭಿನ್ನತೆಗಳಿರಲು ಸಾಧ್ಯವೇ ? ಎಂಬ ಮಾತುಗಳೇ ಹೆಚ್ಚಾಗಿ ಕೇಳಿಬಂದವು. ಆದರೂ ಒಳಗಿನ ತುಡಿತ ಪ್ರತ್ಯೇಕ ಅಧ್ಯಯನಕ್ಕೆ ಪ್ರೇರೆಪಿಸುತಿತ್ತು. ಆ ದಿಸೆಯಲ್ಲಿ ನಾನು ಅಧ್ಯಯನಕ್ಕೆ ತೊಡಗಿ ಮಾಹಿತಿ ಸಂಗ್ರಹಿಸಿದಾಗ, ಕ್ಷೇತ್ರ ಕಾರ್ಯಕ್ಕೆ ತೊಡಗಿದಾಗಲಂತೂ ಅನೇಕ ಮಹತ್ವ ಪೂರ್ಣ ಸಂಗತಿಗಳು ಕಂಡು ಬಂದು ಅಧ್ಯಯನ ಕೈಗೊಂಡಿದ್ದಕ್ಕೆ ಸಾರ್ಥಕವೆನಿಸಿತು. ಅನೇಕ ಬೆಟ್ಟಗುಡ್ಡಗಳನ್ನು ಏರಿ ಶರಣರ ವಾಸಸ್ಥಳ, ಧ್ಯಾನ ಸ್ಥಳಗಳನ್ನು , ಸಮಾಧಿಯ ಕುರುಹುಗಳನ್ನು ಗಮನಿಸಿದಾಗ ಅನೇಕ ಮಾಹಿತಿಗಳು ಕಂಡು ಬಂದವು. ಆಶ್ಚರ್ಯವೆಂದರೆ ಆಯಾ ಊರಿನ ಜನರನ್ನು ಅದರಲ್ಲೂ ವಯೋವೃದ್ಧರ ಮಾತುಗಳನ್ನು ಕೇಳಿದಾಗ ಅನೇಕ ಮಾಹಿತಿಗಳು ಕಂಡು ಬಂದವು. ಅವುಗಳನ್ನು ವಚನಗಳೊಡನೆ ತೌಲನಿಕವಾಗಿ ನೋಡಿದಾಗ ಅನೇಕ ಹೋಲಿಕೆಗಳು ಕಂಡು ಬಂದು ಆಶ್ಚರ್ಯವಾಯಿತು. ಪ್ರಸ್ತುತ ಹೇಮನೂರು ಹೇಮಗಲ್ಲುವೆಂಬುದು ನನಗೆ ತಿಳಿದು ಬಂದಿತು. ಹೇಮಗಲ್ಲ ಹಂಪರ ವಚನದ ಮಾಹಿತಿ ಆಧರಿಸಿ ಕ್ಷೇತ್ರ ಕಾರ್ಯಕೈಗೊಂಡಾಗ ಅದು ವಾಸ್ತವವಾಗಿ ಕಂಡು ಬಂದಿತು. ಇಂತಹ ಹಲವು ಸಂದರ್ಭಗಳು ಅಧ್ಯಯನದಲಿ ಕಂಡು ಬಂದಿವೆ. ಪ್ರತ್ಯೇಕ ಅಧ್ಯಯನಕ್ಕೆ ತೊಡಗಿದ ಶ್ರಮ ಸಾರ್ಥಕವೆನಿಸಿತು. ಅದರ ಫಲವಾಗಿಯೇ ನಾನು ಈ ಪರಿಸರದ ಶರಣರನ್ನು ಕುರಿತು ಸಮಗ್ರವಾಗಿ ಅಧ್ಯಯನ ಕೈ ಗೊಳ್ಳಲು ಸಾಧ್ಯವಾಯಿತು. ಪ್ರತ್ಯೇಕ ಅಧ್ಯಯನ ಮಾಡದಿದ್ದರೆ ಈ ನಾಡಿನ ಅದರಲ್ಲೂ ಈ ಪರಿಸರದ ಸಾಂಸ್ಕೃತಿಕ ಮೇಲಾಗಿ ಸಾಹಿತ್ಯಿಕ ನಷ್ಟವಾಗುತ್ತಿತ್ತೇನೋ ಅಂತೂ ಈ ಪ್ರತ್ಯೇಕ ಅಧ್ಯಯನ ಈ ಪರಿಸರದ ಶರಣರ ಚಾರಿತ್ರಿಕ , ಸಾಂಸ್ಕೃತಿಕ , ಸಾಹಿತ್ಯಿಕತೆ ತನ್ನ ತನಗಳನ್ನು ಗುರುತಿಸುವಂತಿದ್ದು ಮುಂದೆ ಕೈಗೊಳ್ಳಬಹುದಾದ ಈ ರೀತಿಯ ಅಧ್ಯಯನಗಳಿಗೆ ಸಹಕಾರಿಯಾಗಬಲ್ಲುದೆಂಬು ಸಮಾಧಾನದ ನಮ್ರತೆಯನ್ನು ಸೂಚಿಸುತ್ತಾ ಈ ಮಹಾ ಪ್ರಬಂಧವನ್ನು ಸಮಾರೋಪ ಮಾಡಬಹುದಾಗಿದೆ.

ಅನುಬಂಧಗಳು

೧ : ರಾಯಚೂರು ಪರಿಸರದ ಶರಣರು : ಪುರಾಣ ಸಾಹಿತ್ಯ

೨ : ರಾಯಚೂರು ಪರಿಸರದ ಶರಣರು : ಸೃಜನ ಸಾಹಿತ್ಯ

೩ : ರಾಯಚೂರು ಪರಿಸರದ ಶರಣರು : ವಿಮರ್ಶೆ

೪ : ರಾಯಚೂರು ಪರಿಸರದ ಶರಣರು : ಸಂಶೋಧನೆ

೫ : ರಾಯಚೂರು ಪರಿಸರದ ಶರಣರು : ಜನಪದ ಸಾಹಿತ್ಯ

೧ : ರಾಯಚೂರು ಪರಿಸರದ ಶರಣರು : ಪುರಾಣ ಸಾಹಿತ್ಯ

೧ : ೧ ಪುರಾಣ ಸಾಹಿತ್ಯದ ಸಂಕ್ಷಿಪ್ತ ಬೆಳವಣಿಗೆ

'ಪುರಾಣ' ಎಂಬ ಪದವನ್ನು ಹಳೆಯ - ಪ್ರಾಚೀನ ಎಂದು ಅರ್ಥೈಸಲಾಗುತ್ತದೆ. ಧರ್ಮವನ್ನು ಕುರಿತು ನಾಟಕೀಯವಾಗಿ ಅಭಿವ್ಯಕ್ತಪಡಿಸುವ ಸಾಂಕೇತಿಕ ನಿರೂಪಣೆಗಳೇ ಪುರಾಣಗಳಾಗುತ್ತವೆ. ಇದು ಅಷ್ಟೇನು ಪರಿಚಿತವಲ್ಲದ ವಿಷಯಗಳ ಸುತ್ತ ವೇಕ್ರಮವನ್ನು ನಿರ್ಮಿಸಿಕೊಂಡಿರುತ್ತವೆ. ಪ್ರಾಚೀನ ಸಂದರ್ಭದ ಚರಿತ್ರೆಯ ಕಾರ್ಯವನ್ನು ಪುರಾಣ ಮಾಡುತ್ತದೆ. ಮನುಷ್ಯರ ಸಮಕಾಲೀನ ಸಂಸ್ಕೃತಿಯನ್ನು ಧಾರ್ಮಿಕ ಚೌಕಟ್ಟಿನೊಳಗೆ ವ್ಯವಸ್ಥಿತವಾಗಿ ಸಿದ್ಧ ಮೌಲ್ಯಗಳ ಅಡಿಯಲ್ಲಿಯೇ ನಡೆಯುವಂತೆ ಮಾಡುವ ಕಾರ್ಯವನ್ನು ಪುರಾಣಗಳು ಮಾಡಿದವು ಎನ್ನಬಹುದಾಗಿದೆ. ' ಪುರಾಣ ಸಂಸ್ಕೃತಿಯ ಭಾಗವಾಗಿ ತನ್ನೊಡಲೊಳಗೆ ಚರಿತ್ರೆಯನ್ನು ರೂಪಿಸಿರುತ್ತದೆ. ' ೧ ಎನ್ನುವ ಮಲ್ಲೇಪುರ ಜಿ. ವೆಂಕಟೇಶರ ಮಾತುಗಳು ಬಹು ಮುಖ್ಯವಾಗಿವೆ. ಕನ್ನಡದಲ್ಲಿ ಪುರಾಣ - ಚರಿತ್ರೆಗಳು ಒಂದಕ್ಕೊಂದು ಅಂತರ್ಗತವಾಗಿ ನಿರೂಪಿತವಾಗಿರುವುದನ್ನು ನಾವು ಗಮನಿಸುತ್ತೇವೆ.

' ಈ ಪುರಾಣಗಳನ್ನು ಸೃಷ್ಟಿಸಿದ್ದು ವೇದಗಳಲ್ಲಿನ ತತ್ವಗಳ ಸರಳೀಕರಣಕ್ಕಾಗಿ ಎಂಬ ಅಭಿಪ್ರಾಯ ಪಿ. ಎಸ್. ಹಿರೇಮಠರದ್ದು ೨. ಕನ್ನಡ ಸಂದರ್ಭದಲ್ಲಿ ಪುರಾಣಗಳ ಬೆಳವಣಿಗೆಯಾದದ್ದು ಜೈನರಿಂದಲೇ ಎಂಬುದನ್ನು ಗಮನಿಸಬೇಕು. ಧರ್ಮ ಪ್ರಚಾರದ ಉದ್ದೇಶಕ್ಕಾಗಿ ತೀರ್ಥಂಕರರ ಚರಿತ್ರೆಯನ್ನು ಪುರಾಣವಾಗಿರಿಸಿದರು. ಎಲ್ಲಾ ಧರ್ಮಗಳು ಹಾಗೆಯೇ ತನ್ನ ಬಗ್ಗೆ ತಾನು ಇಟ್ಟುಕೊಂಡಿರುವ ಕೆಲವು ಕಲ್ಪನೆಗಳನ್ನು ತಿಳಿಸಿ ಆ ಹಿನ್ನಲೆಯಲ್ಲಿ ಜನಾಂಗವನ್ನು ; ಒಂದು ಸಂಸ್ಕೃತಿಯನ್ನು ರೂಪಿಸುವದು ಆಗಿರುತ್ತದೆ. ಇದೇ ಹಿನ್ನೆಲೆ ಇಟ್ಟು ಕೊಂಡು ಜೈನರಲ್ಲಿ ತತ್ವಗಳ ಪ್ರತಿಪಾದನೆಗಾಗಿ ಪಂಪ ಆದಿಪುರಾಣ, ಪೊನ್ನ ಶಾಂತಿ ಪುರಾಣ, ರನ್ನ ಅಜೀತತೀರ್ಥಂಕರ ಪುರಾಣ ಇತ್ಯಾದಿಗಳು ಮೂಡಿ ಬಂದವು. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಪುರಾಣ ಪರಂಪರೆ ಜೈನರಿಂದ ಬೆಳೆಯಿತೆಂಬುದು ಸ್ಪಷ್ಟವಾಗಿದೆ.

ಪುರಾಣವನ್ನು ಶರಣರು ತಿರಸ್ಕರಿಸಿದ ಕಾರಣದಿಂದಲೋ ಅಥವಾ ಪುರಾಣವೆಂದರೆ ತತ್ಕಾಲೀನ ನಿರ್ಲಕ್ಷವೋ ಏನೋ ಹರಿಹರ ಮೊದಲಾದವರು ತಮ್ಮ ಕೃತಿಗಳನ್ನು ಪುರಾಣವೆನ್ನದೆ ಚರಿತ್ರೆ , ಲೀಲೆ ಎಂದು ಕರೆದರು. ಇಲ್ಲಿಂದಲೇ ಪುರಾಣ ಕಲ್ಪನೆ ಬೇರೆ ರೀತಿಯನ್ನು ಪಡೆಯಿತು.

ಸಮಾಜವನ್ನು - ಆ ಸಮಾಜ ವಿವಿಧ ಆಯಾಮಗಳನ್ನು ಅರ್ಥೈಸಲು ಇವು ಸಹಕಾರಿಯಾಗಿವೆ. ಸಾಂಸ್ಕೃತಿಕವಾಗಿ ಪುರಾಣಗಳು ಅನೇಕ ಸಂಕೀರ್ಣತೆಗಳನ್ನು ತನ್ನೊಡಲಾಳದಲ್ಲಿಟ್ಟುಕೊಂಡೆ ಬೆಳೆಯುವುದನ್ನು ಗಮನಿಸುತ್ತೇವೆ. ಪ್ರಭುತ್ವ ಶಾಹಿ ತನ್ನ ಯೋಗಕ್ಷೇಮಕ್ಕಾಗಿ ಸೃಷ್ಟಿಸಿಕೊಂಡ ಹಲವು ತಂತ್ರಗಳಲ್ಲಿ ಪುರಾಣಗಳು ಸಹ ಒಂದಾಗಿರುವ ಅಪಾಯವಿದೆ. ಧಾರ್ಮಿಕ ತತ್ವಗಳನ್ನು ನಿರೂಪಿಸುವ ಕೆಲಸ ಪುರಾಣಗಳಿಗಿದ್ದರೂ ಅವು ಕೆಲವೊಮ್ಮೆ ಸಾಂಸ್ಕೃತಿಕ ಮುಖಗಳನ್ನು ಪಡೆಯುವುದನ್ನು ಅಲ್ಲಗಳೆಯಲಾಗದು. ಇವು ಸಮಾಜವೊಂದರ ಹುಟ್ಟು - ಆಚರಣೆಗಳ ಬಗ್ಗೆ ಅದರದೇಯಾದ ಕಲ್ಪನೆಯಲ್ಲಿ ಸೃಷ್ಟಿಸುವ ಒಂದು ಆಕಾರವನ್ನು ನಿರ್ಮಿಸುತ್ತವೆ. ಕಥೆಗಳ ಮೂಲಕವೇ ಪುರಾಣ ತನ್ನ ಆಶಯಗಳನ್ನು ರೂಪಿಸುತ್ತಾ ಹೋಗುತ್ತದೆ. ಪ್ರತಿಯೊಂದು ಸಮಾಜ - ಜನಾಂಗ ಆದಷ್ಟು ತಮ್ಮನ್ನು ಪ್ರಾಚೀನವೆಂದು ಕರೆದು ಕೊಳ್ಳಲು ಇಷ್ಟಪಡುವ ಕಾರಣ ಅವುಗಳು ತಮ್ಮದೇ ಆದ ಪುರಾಣಗಳನ್ನು ಸೃಷ್ಟಿಸುತ್ತವೆ. ಪುರಾಣ ಮನುಷ್ಯರ ಮನಸ್ಸನ್ನು ಅರಿತು ಹೇಳುತ್ತವೆ ಎಂಬುದಾಗಿ ಸಿಗ್ಮಂಡ್ ಫ್ರಾಯ್ಡ್ ಮೊದಲಿಗೆ ತೋರಿಸಿ ಕೊಡುತ್ತಾರೆ. ' ಎಲ್ಲಾ ಪುರಾಣಗಳನ್ನು ಒಂದು ಆಶಯದ ಮಟ್ಟಕ್ಕೆ ಇಳಿಸುವುದು ತಪ್ಪು ಪುರಾಣಗಳನ್ನು ಪ್ರಜ್ಞೆಯು ಅದುಮಿಟ್ಟ ಆಸೆಗಳ ವ್ಯಕ್ತಿರೂಪವೆಂದಷ್ಟೇ ನೋಡುವುದು ಸರಿಯಲ್ಲ. ಹೀಗೆ ಅನೇಕ ಚಿಂತಕರು ವಿರೋಧಿಸಿದರೂ ಪುರಾಣಗಳನ್ನು ವ್ಯಾಖ್ಯಾನಿಸುವ ಒಂದು ಸಾಧ್ಯತೆಯನ್ನು ಫ್ರಾಯ್ಡ್ ತೋರಿಸಿಕೊಟ್ಟ ಎನ್ನಬಹುದು ' ೩ ಎಂಬುದಾಗಿ ನಾಗಭೂಷಣರು ಹೇಳುತ್ತಾರೆ.

ಪುರಾಣಗಳ ಉದ್ದೇಶ ಧರ್ಮವೊಂದರ ತಾತ್ವಿಕ ವಿವರಣೆಗಳನ್ನು ಅತ್ಯಂತ ಗಾಢವಾಗಿ ಜನ ಸಮುದಾಯದ ಮೇಲೆ ಮೂಡಿಸುವುದಾಗಿದೆ. ಇಂತಹ ಸಂದರ್ಭದಲ್ಲಿ ಚರಿತ್ರ - ಸಂಸ್ಕೃತಿಯನ್ನು ಅದು ಪೂರಕವಾಗಿ ಚಿತ್ರಿಸುತ್ತವೆ. ಪುರಾಣದ ಬಗೆಗಿನ ಪರಿಕಲ್ಪನೆಯನ್ನು ಅದು ಸಾಹಿತ್ಯದೊಂದಿಗಿನ ಸಂಬಂಧ ಚರ್ಚೆಯನ್ನು ಕುರಿತು 'ಪುರಾಣವೊಂದು ಮುಕ್ತಾಯದ ಪ್ರಕ್ರಿಯೆ ಆದರೆ ಸಾಹಿತ್ಯ ಕೃತಿಯೊಂದು ಮುಗಿದ ಉತ್ಪನ್ನ ಎಂಬುದಾಗಿ ಕೆ.ಕೆ. ರೊತ್ವೆನ್ ಹೇಳಿಕೆಯನ್ನು ಶಿವರಾಮಯ್ಯ ಉಲ್ಲೇಖಿಸುತ್ತಾರೆ. ಅಲ್ಲದೇ ಪುರಾಣದ ಪಾಚಿ ಕೊಳಕು ನಾಲಿಗೆ ಚಾಚಿ ಸಮಾಜಕ್ಕೆ ಕಂಟಕವಾಗದಂತೆ ಎಚ್ಚರ ವಹಿಸಬೇಕು. ಮತ್ತು ಅದರ ನೆಲೆ ಬೆಲೆಗಳನ್ನು ಶೋಧಿಸಿ ಪುನರ್‌ಮೌಲ್ಯೀಕರಣಗೊಳಿಸಬೇಕು. ' ಎಂಬ ಶಿವರುದ್ರಪ್ಪನವರ ಮಾತುಗಳನ್ನು ಸಹ ಉಲ್ಲೇಖಿಸುತ್ತಾರೆ೪. ಹೀಗೆ ಪುರಾಣ ಅನೇಕ ಸಂಕೀರ್ಣವಾದ ಸಾಂಸ್ಕೃತಿಕವಾದ ಆಯಾಮಗಳನ್ನು ಹೊಂದುತ್ತಲೇ ಬೆಳೆಯುವ ವಿಶಿಷ್ಟ ಸಾಹಿತ್ಯವಾಗಿದೆ.

---

೧ : ವಿವಿಧ ಲೇಖಕರು - ಕ.ಸಾ.ಚ.ಪು. ಪುಟ೬೯

೨ : ಸ್ವಾಗತ ಸಮಿತಿ-ಸುವರ್ಣ ಸಿರಿ, ಪುಟ ೪೪ (ಜಿಲ್ಲಾ ಸಾಹಿತ್ಯ ಸಮ್ಮೇಳನ ಸಂಚಿಕೆ)

೩ : ಓ.ಎಲ್ .ನಾಗಭೂಷಣ - ಪುರಾಣ , ಪುಟ ೧೬

೪ : ವಿವಿಧ ಲೇಖಕರು - ಕ.ಸಾ.ಚ.ಪು. ಪುಟ ೧೧೯

೧ :೨ ಶರಣ ಸಂಬಂಧದ ಪುರಾಣಗಳ ಬಗ್ಗೆ ಒಂದು ನೋಟ

ಪುರಾಣಗಳನ್ನು ತಿರಸ್ಕರಿಸಿದ ಶರಣರು ಮತ್ತೇ ಅದೇ ಪುರಾಣದ ಅಂಶಗಳನ್ನೇ ಎತ್ತಿಕೊಂಡು ಹೊಸರೀತಿಯ ವ್ಯಾಖ್ಯಾನಗಳಿಗೆ ತೊಡಗುವುದು ನಮಗೆ ಕೂತೂಹಲಕರ ಹಾಗೂ ವಿರೋಧಾಭಾಸವು ಕಾಣಿಸುತ್ತವೆ. ಶರಣರ ಆಶಯಗಳನ್ನೇ ಪ್ರಮುಖವಾಗಿರಿಸಿಕೊಂಡಿದ್ದ ಹರಿಹರನಿಗೆ ಸಮಕಾಲೀನ ಪುರಾಣವನ್ನು ಪೂರ್ತಿ ಬಿಡಲಾಗಲಿಲ್ಲ. ಆ ಕಾರಣದಿಂದ ಸಮಕಾಲೀನರಲ್ಲಿ ಪ್ರಚಲಿತದಲ್ಲಿರುವ ಪುರಾಣ ಮಾಧ್ಯಮದಿಂದ ಹೊಸದಾದ ನೆಲೆಗಳನ್ನು ಕಂಡು ಕೊಳ್ಳಲು ಪ್ರಯತ್ನಿಸಿದನು. ಮೊದಲಿಗೆ ಹರಿಹರ ಶರಣರನ್ನು ಸಾಮಾನ್ಯರಾಗಿ ಕಂಡು ಕೊಂಡು ನಂತರ ಅನೇಕ ಕತೆಗಳನ್ನು ತಳಕುಹಾಕಿ ಅವರನ್ನು ಅಸಾಮಾನ್ಯ ಹಂತಕ್ಕೆರಿಸಿದನು. ಆಗ ಹರಿಹರನ ಸಾಮಾನ್ಯ ಕತೆಗಳು ಪುರಾಣದ ಆವರಣವನ್ನು ಪಡೆದುಕೊಂಡವು. ಅಲ್ಲಿ ಚರಿತ್ರೆ-ಪುರಾಣ ಪರಸ್ಪರ ಪೂರಕವಾಗಿ ಅಭಿವ್ಯಕ್ತಗೊಳ್ಳುತ್ತವೆ. ಇಂತಹ ಕಥನ ತಂತ್ರದಿಂದಾಗಿ ಹರಿಹರನ ಕೃತಿಯಲ್ಲಿ ಪೌರಾಣಿಕ ಅಂಶಗಳಿದ್ದರೂ ಅದು ಪುರಾಣವಾಗದೇ ಕಾವ್ಯವಾಗಿ ನಿಲ್ಲುತ್ತದೆ. ಹರಿಹರ ತಾನು ಚಿತ್ರಿಸುವ ಕತೆಗಳ ಪವಾಡಕ್ಕೆ ವಾಸ್ತವಿಕ ನೆಲೆಯ ಆಯಾಮ ಕಲ್ಪಿಸಿಕೊಡುತ್ತಾನೆ. ಶರಣರ ಆಶಯಗಳಿಗೆ ಪೂರಕವಾಗಿ ಆ ಕತೆಗಳನ್ನು ಹೆಣೆಯುತ್ತಾನೆ. ಶರಣರ ಸಾಂಸ್ಕೃತಿಕ ಎಚ್ಚರಗಳನ್ನು ತನ್ನ ವಸ್ತುವಿನ ಕಲ್ಪನೆಗೆ ಮೂಲವಾಗಿರಿಸುತ್ತಾನೆ. ಹರಿಹರ ಚಿತ್ರಿಸಿದ ಶರಣರ ವ್ಯಕ್ತಿತ್ವಗಳು ಮುಂದೆ ಶರಣರ ಪರಂಪರೆಯ ಪುರಾಣಗಳ ಸೃಷ್ಟಿಗೆ ಕಾರಣವಾದವೆನ್ನ ಬಹುದಾಗಿದೆ.

ರಾಘವಾಂಕನು ಹರಿಹರನ ಹಾದಿಯನ್ನು ತುಳಿಯಲು ಯತ್ನಿಸಿದರು ಹರಿಹರನ ತಂತ್ರವನ್ನು ಸಮರ್ಥವಾಗಿ ಬಳಸಿಕೊಳ್ಳಲಾಗಲಿಲ್ಲ. ಹಾಗಾಗಿ ರಾಘವಾಂಕನ ಕೃತಿಗಳು ಚರಿತ್ರೆ ಎಂದರೂ ಅವು ಪುರಾಣಗಳಿಗೆ ಬಹು ಹತ್ತಿರವಾಗುತ್ತವೆ. ಪುರಾಣವೇ ಚರಿತ್ರೆಯೆಂದು ಕರೆಯುವ ಹಾಗೇ ಅಲ್ಲಿ ವಸ್ತು ನಿರೂಪಿತವಾಗಿದೆ. ಶರಣರ ಸಂಬಂಧಗಳ ಪುರಾಣ ಪರಂಪರೆ ಬೆಳೆದು ಬಂದ ಹಾದಿಯನ್ನು ಡಾ: ಬಸವರಾಜ ಕಲ್ಗುಡಿಯವರು ಗುರುತಿಸಿದ್ದು ಹೀಗೆ ' ರಾಘವಾಂಕನ ನಂತರ -ಕಾವ್ಯದ ಚೌಕಟ್ಟಿಗೆ ಪ್ರಾಶಸ್ತ್ಯವಿರದ, ಲೀಲೆ, ಪವಾಡ, ಆಚರಣೆ, ವೀರಶೈವ ತತ್ವ ಸಂಪ್ರದಾಯ ಎಲ್ಲವನ್ನು ಒಳಗೊಳ್ಳುವ ಪುರಾಣ ರಚನೆಯ ಪರಂಪರೆಯು ಆರಂಭವಾಯಿತೆನ್ನಬೇಕು. ಭೀಮ ಕವಿಯ ಬಸವ ಪುರಾಣ, ವಿರೂಪಾಕ್ಷನ ಚೆನ್ನ ಬಸವ ಪುರಾಣ, ವೀರಶೈವಾಮೃತ ಪುರಾಣ - ಇವುಗಳೆಲ್ಲವು ಮೇಲೆ ವಿವರಿಸಿದ ಶರಣರ ಲೀಲೆಗಳ ಸಂಗ್ರಹ ಮತ್ತು ತತ್ವ ಆಚರಣೆಗಳ ಸಮ್ಮಿಶ್ರ ಸ್ವರೂಪವನ್ನು ಹೊಂದಿದವು. ಲಕ್ಕಣ್ಣ ದಂಡೇಶ ಮತ್ತು ಗುಬ್ಬಿಯ ಮಲ್ಲಣಾರ್ಯ ಹದಿನೆಂಟು ಲಕ್ಷಣಗಳಲಿಂದ ಪುರಾಣಗಳ ಸ್ವರೂಪವನ್ನು ನಿರ್ದೇಶಿಸುವ ಪ್ರಯತ್ನ ಮಾಡಿದರು .ಕ್ರಮೇಣ ವೀರಶೈವ ಕವಿಗಳ ಈ ಪುರಾಣಗಳು -ವೈದಿಕ ಪುರಾಣಗಳು ಸಮ್ಮಿಶ್ರಗೊಂಡ ಅಲೌಕಿಕ ವಾತಾವರಣದ ಸ್ವರೂಪಕ್ಕೆ ಸಮೀಪ ಬಂದು ನಿಲ್ಲುತ್ತವೆ' ೧ ಈ ಅಭಿಪ್ರಾಯಗಳನ್ನು ಗಮನಿಸಿದರೆ ಹರಿಹರನ ಮಾರ್ಗವನ್ನು ನಂತರದವರು ಒಪ್ಪಿಕೊಳ್ಳದೇ ಶರಣರನ್ನು ಅಸಾಮಾನ್ಯರೆಂದು ಭಾವಿಸಿ ಅವರನ್ನು ಅಯೋನಿಜರು, ಲೌಕಿಕದಲ್ಲಿ ನಿರಾಸಕ್ತರು, ವೈರಾಗಿಗಳೆಂದು ಚಿತ್ರಿಸಿದರು. ವೈದಿಕರನ್ನು ವಿರೋಧಿಸದೇ ಅವರಂತೆಯೇ ತಾವು ತಾವಾಗಲು ಬಯಸಿ ಸಾಂಪ್ರದಾಯಿಕ ಪುರಾಣಗಳ ಸೃಷ್ಟಿಗೆ ಕಾರಣರಾದರು. ಆಗ ಶರಣರ ವಾಸ್ತವಿಕ ಚರಿತ್ರೆಗ ತಕ್ಕನೆಲ ಸಿಗದೇ ಹೋಯಿತು. ಹೀಗಾಗಿ ಸಾಮಾನ್ಯರಾಗಿ ಹುಟ್ಟದ ಶರಣರು ಅಸಾಮಾನ್ಯರಾಗಿ ಜನಸಮುದಾಯದಿಂದ ಬೇರೆಯಾಗುವ ವಾತಾವರಣ ಸೃಷ್ಟಿಯಾಗಿತು. ಆಗ ಭೀಮಕವಿಗಿಂತ ಮುಂಚೆ ಚಾಮರಸ, ಷಡಕ್ಷರ ದೇವರು ಇದೇ ಮಾದರಿಯಲ್ಲಿ ಕೃತಿ ರಚಿಸಿದ್ದರೂ ಅವುಗಳನ್ನು ಪುರಾಣವೆಂದು ಕರೆಯಲಿಲ್ಲ ಅಷ್ಟೇ ಹೊರತು ಅವು ಪುರಾಣ ಅಂಶಗಳಿಗಿಂತ ಏನೂ ಭಿನ್ನವಾಗಿರಲಿಲ್ಲ. ಅನಂತರ ಭೀಮ ಕವಿಯ ತರುವಾಯ ಪುರಾಣವೆಂಬ ಹೆಸರಿನಿಂದಲೇ ಹೊಸ ಪರಂಪರೆ ಶರಣರ ಸಾಹಿತ್ಯ ಸಂದರ್ಭದಲ್ಲಿ ಬೆಳೆಯಿತು. ಆದರೂ ವೈದಿಕರಿಗಿಂತ ಸ್ವಲ್ಪ ಪ್ರಗತಿಗಾಮಿ ವಾತಾವರಣವನ್ನು ಶರಣರ ಪುರಾಣಗಳು ಹೊಂದಿರುವ ಕಾರಣ ಅವು ಸಾಹಿತ್ಯಸಂದರ್ಭದಲ್ಲಿ ಪುರಾಣ ಕಾವ್ಯಗಳಾದವು ಎಂಬುದನ್ನು ಗಮನಿಸಬೇಕಾದ ಸಂಗತಿಯಾಗಿದೆ.

೧ : ೩ ರಾಯಚೂರು ಪರಿಸರದ ಪ್ರಮುಖ ಪುರಾಣಕಾರರು ಮತ್ತು ಪುರಾಣಗಳು

ಆಧುನಿಕ ಸಾಹಿತ್ಯದ ಆರಂಭದಲ್ಲಿ ನವೋದಯ ಪೂರ್ವ ಕಾಲದಲ್ಲಿಯೇ ಈ ಪರಿಸರದಲ್ಲಿ ಪುರಾಣ ಸಾಹಿತ್ಯವೆಂಬ ಪ್ರಕಾರ ಹುಟ್ಟಿಕೊಂಡರೂ ಅದು ನಾಡಿನ ಗಮನ ಸೆಳೆಯಲಿಲ್ಲ. ಹಳಗನ್ನಡದ ಚಂಪೂ, ಕಂದ, ನಡುಗನ್ನಡ ರಗಳೆ, ಷಟ್ಪದಿಗಳಿಗೆ ಅತ್ಯಂತ ಸಮರ್ಥವಾಗಿ ಪುರಾಣಗಳ ಮೂಲಕ ಜೀವಂತಿಕೆ ನೀಡಿದ್ದು ಈ ಪರಿಸರದ ಪುರಾಣಕಾರರು. ಅದೇಕೋ ನಮ್ಮ ವಿದ್ವಾಂಸವಲಯಕ್ಕೆ ಪುರಾಣ ಕಾರರ ನೆನಪು ಬರಲಿಲ್ಲ. ಈಪರಿಸರದಲ್ಲಿ ಪುರಾಣಗಳ ಭಂಡಾರವೇ ಇದೆ. ಅವೆಲ್ಲವುಗಳನ್ನು ಪರಿಶೀಲನೆಗೆ ಒಳಪಡಿಸುವುದು ಇಲ್ಲಿ ಸಾಧ್ಯವಲ್ಲದಿದ್ದರೂ ಶರಣರ ಜೀವನ -ಸಂದೇಶಗಳಿಗೆ ಅನ್ವಯಿಸಿ ರಚಿತವಾದ ಉಪಲಬ್ಧವಾದ ಕೆಲವು ಪುರಾಣಗಳನ್ನು ಮಾತ್ರ ಸೂಚಿಸಲಾಗಿದೆ. ಬಸವಪೂರ್ವ -ಬಸವಯುಗ -ಬಸವೋತ್ತರ ಯುಗದ ಶರಣರನ್ನು ಕುರಿತು ಹಲವಾರು ಪುರಾಣಗಳು ಇಲ್ಲಿ ರಚನೆಯಾಗಿದೆ. ಈ ಪರಿಸರದ ಪ್ರಮುಖ ಪುರಾಣಕಾರರ ಮೂಲಕ ಅವರ ಪುರಾಣಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಕಂಡು ಕೊಳ್ಳಬಹುದು.

ಜಾಲಹಳ್ಳಿ ವೀರಭದ್ರ ಕವಿ: ಜಾಲಹಳ್ಳಿಯ ಈ ಕವಿ ಘನಮಠ ನಾಗಭೂಷಣ ಶರಣರ ಅಪ್ಪಣೆಯ ಮೇರೆಗೆ ಆರವತ್ತು ಮೂರು ಪುರಾತನರ ಪುರಾಣವನ್ನು ರಚಿಸಿದ್ದಾನೆ. ಇದು ೧೯೭೭ರಲ್ಲಿ ಪ್ರಕಟವಾಗಿದ್ದು ವಾರ್ಧಕ ಷಟ್ಪದಿಯಲ್ಲಿದೆ. ಈ ಪುರಾಣದಲ್ಲಿ ೨೧ ಸಂಧಿಗಳಿದ್ದು ಒಟ್ಟೂ ೧೧೪೯ ಪದ್ಯಗಳಿವೆ. ಪೆರಿಯ ಪುರಾಣದ ಹೆಸರುಗಳನ್ನೇ ಬಳಸಿಕೊಂಡಿದ್ದಾನೆ. ಅಮರನಾಥ ಶಾಸ್ತ್ರಿ : ಸಂತೆಕೆಲ್ಲೂರಿನ ಇವರು ಅನೇಕ ಸೃಜನಶೀಲ ಕೃತಿಗಳ ಜೊತೆಗೆ ಭಾಮಿನಿ ಮತ್ತು ವಾರ್ಧಕ ಷಟ್ಪದಿಗಳಲ್ಲಿ ಹತ್ತಕ್ಕಿಂತ ಹೆಚ್ಚು ಪುರಾಣಗಳನ್ನು ರಚಿಸಿದ್ದಾರೆಂದು ತಿಳಿದು ಬರುತ್ತದೆ. ಇವರು ರಚಿಸಿದ ಪ್ರಮುಖ ಪುರಾಣಗಳೆಂದರೆ: ಬಸವಲಿಂಗ ಶಿವಯೋಗಿಗಳ ಪುರಾಣ, ಜಡೆಸಿದ್ಧ ಶಿವಯೋಗಿಗಳ ಪುರಾಣ , ಶಿವ ಶರಣೆ ರುದ್ರಮ್ಮನವರ ಪುರಾಣ, ಗುರುಸಿದ್ಧ ಶಿವಯೋಗಿ ಪುರಾಣ, ಶಿವಶರಣ ಬಸವಲಿಂಗಪ್ಪನವರ ಪುರಾಣ, ಅಮಾತ್ಯ ಶರಣರ ಪುರಾಣ, ಶ್ರೀ ಘನಮಠ ಶಿವಯೋಗಿಗಳ ಮಹಾಪುರಾಣ, ಬ್ರಹ್ಮಗುಂಡಾರ್ಯರ ಸಂಯುಕ್ತ ಪುರಾಣ ಮುಖ್ಯವಾಗಿದೆ.

ಇವರ ಎಲ್ಲಾ ಪುರಾಣಗಳು ಸದ್ಯ ಉಪಲಬ್ಧವಿಲ್ಲದಿದ್ದರೂ ಘನಮಠ ನಾಗಭೂಷಣ ಶರಣರ ಬಗ್ಗೆ ಇರುವ ಪುರಾಣವು ೧೬ ಸಂಧಿ, ೧೧೨೨ ಪದ್ಯಗಳನ್ನೊಂದಿ ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿದೆ. ಇವರ ಇನ್ನೊಂದು ಪುರಾಣ ನೀರಲಕೇರಿಯ ಬಸವಲಿಂಗ ಶರಣರನ್ನು **ಕುರಿತು** ೧೫ ಸಂಧಿ ೧೦೨೨ ಪದ್ಯಗಳಲ್ಲಿ ರಚಿತವಾಗಿದ್ದು ೧೯೬೮ರಲ್ಲಿ ಪ್ರಕಟವಾಗಿದೆ.

ಮುಸ್ಕಿ ಬಸವಪ್ಪ ಶಾಸ್ತ್ರಿಗಳು : ವಾರ್ಧಕ ಷಟ್ಪದಿಯಲ್ಲಿ ೧೯೬೯ರಲ್ಲಿ ಇವರು ನಾಗಭೂಷಣ ಶರಣರ ಪುರಾಣವನ್ನು ೧೫ ಸಂಧಿ, ೯೦೨ ಪದ್ಯಗಳ ಮೂಲಕ ರಚಿಸಿದರು. ಗೋರ್ಕಲ್ ಕರಿಬಸವ ಶಾಸ್ತ್ರಿ : ಇವರು ೧೯೬೫ ರಲ್ಲಿ ಪ್ರಕಟವಾದ ಅಮರೇಶ್ವರ ಪುರಾಣವನ್ನು ೯ ಸಂಧಿ, ೬೧೫ ಪದ್ಯಗಳ ಮೂಲಕ ರಚಿಸಿದ್ದಾರೆ. ೧೯೭೭ರಲ್ಲಿ ವಾರ್ಧಕ ಷಟ್ಪದಿಯಲ್ಲಿ ೯ ಸಂಧಿ, ೫೧೪ ಪದ್ಯಗಳನ್ನೊಳಗೊಂಡ ಶ್ರೀ ಮಹಾಂತೇಶ್ವರ ಪುರಾಣ ರಚಿಸಿದ್ದಾರೆ.

ಗುಂಜಳ್ಳಿ ಷಡಕ್ಷರಿ : ಅಭಿನವ ಕಾಳಿದಾಸನೆಂದು ಬಿರುದು ಪಡೆದಿದ್ದ ಇವರು ಭಾಮಿನಿ ಷಟ್ಪದಿಯಲ್ಲಿ ಷಣ್ಮುಖ ಸ್ವಾಮಿಗಳನ್ನು , ಸಂಸ್ಕೃತದಲ್ಲಿ ಸೊಲ್ಲಾಪುರ ಸಿದ್ಧರಾಮೇಶ್ವರ ಪುರಾಣವನ್ನು ರಚಿಸಿದ್ದಾರೆ.

ಚಾಗಿ ಚೆನ್ನಬಸವ ಶಾಸ್ತ್ರಿ : ಇವರು ೧೯೬೩ ರಲ್ಲಿ ಪ್ರಕಟವಾದ ಶ್ರೀ ವೀರಭದ್ರೇಶ್ವರ ಪುರಾಣವನ್ನು ೫ ಸಂಧಿ, ೪೧೨ ಪದ್ಯಗಳನ್ನೊಳಗೊಂಡು ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾರೆ.

ಸಿದ್ಧರಾಮ ಶಾಸ್ತ್ರಿ : ೧೯೬೩ರಲ್ಲಿ ಶ್ರೀ ನಾಳಗೊಂಡೇಶ್ವರ ಪುರಾಣವನ್ನು ೨೧ ಸಂಧಿ, ೬೭೮ ಪದ್ಯಗಳನ್ನೊಳಗೊಂಡ ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾರೆ. ಸ್ಕಂದ ಪುರಾಣದಲ್ಲಿನ ಶ್ರೀ ನಾಳಗೊಂಡೇಶ್ವರ ಚರಿತ್ರೆಯೇ ಇದರ ವಸ್ತುವಾಗಿದೆ. ಶರಣರ ತತ್ವಗಳ ವಿವೇಚನೆಇದೆ

ಎಂ.ಚಂದ್ರಶೇಖರ ಶಾಸ್ತ್ರಿ : ೧೯೫೯ ರಲ್ಲಿ ೧೬ ಸಂಧಿ, ೧೦೧೪ ಪದ್ಯಗಳನ್ನೊಳಗೊಂಡ ಕರಡಿಕಲ್ಲು ಭಿಲ್ಲಮರಾಜ ಪುರಾಣವನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾರೆ. ಇವರ ಇನ್ನೊಂದು ಪುರಾಣ ಶ್ರೀ ಸೂಗೂರೇಶ್ವರ ಪುರಾಣವು ೧೯೯೨ ರಲ್ಲಿ ಪ್ರಕಟವಾಗಿದ್ದು ಅದು ೨೫ ಸಂಧಿ,೧೬೦೨ ಪದ್ಯಗಳನ್ನೊಳಗೊಂಡಿದೆ. ಚೆನ್ನವೀರಶರಣರ ಬಗ್ಗೆ ಮಾಹಿತಿ ನೀಡುತ್ತದೆ. ಇದಲ್ಲದೇ ಇವರು ಅಮರೇಶ್ವರ ಪುರಾಣ, ದೇವರ ದಾಸಿಮಾರ್ಯರ ಪುರಾಣ , ಶಿವಸರ್ವೋತ್ತಮ ಪುರಾಣ , ಶಹಾಪುರದ ಚರಬಸವೇಶ್ವರ ಪುರಾಣ ಮೊದಲಾದ ಹತ್ತು ಪುರಾಣಗಳನ್ನು ರಚಿಸಿದ್ದಾರೆ.

ಶಿವಾಚಾರ್ಯ ಸ್ವಾಮಿ : ಇವರು ಜಗದ್ಗುರು ಶಿವಯೋಗಿಂದ್ರರ ಪುರಾಣ, ರುದ್ರಮುನಿ ಮಹಾಚಾರ್ಯರ ಪುರಾಣ ರಚಿಸಿದ್ದಾರೆ. ಇದಲ್ಲದೇ ವಟಗಲ್ಲಿನ ತೋಟಯ್ಯ ಶಾಸ್ತ್ರಿಗಳು ಹೇಮರೆಡ್ಡಿ ಮಲ್ಲಮನ ಪುರಾಣವನ್ನು ೧೮ ಸಂಧಿ , ೬೧೨ ಪದ್ಯಗಳ ಮೂಲಕ ರಚಿಸಿದ್ದು ಅದು ಅಪ್ರಕಟಿತವಾಗಿದೆ.

೧: ೪ ರಾಯಚೂರು ಪರಿಸರದ ಶರಣರಿಗೆ ಸಂಬಂಧಿಸಿದ ಪುರಾಣಗಳ ಬಗ್ಗೆ ವಿವೇಚನೆ

ಬಸವಪೂರ್ವ ಯುಗದ ಶರಣರಾದ ಭಿಲ್ಲಮರಾಯ - ಶಿವಜಾತ ಒಡೆಯಬಗ್ಗೆ ಒಂದು ಪುರಾಣ, ನವಿಲೆಯ ಶಂಕರ ದಾಸಿಮಯ್ಯರ ಬಗ್ಗೆ ಒಂದು ಪುರಾಣಗಳು ರಚನೆಯಾಗಿವೆ. ಬಸವಯುಗದ ಶರಣರಾದ ಚೆನ್ನವೀರ ಶರಣರನ್ನು ಕುರಿತು ಒಂದು ಪುರಾಣ, ಹಾಗೂ ಬಿಬ್ಬಿ ಬಾಚಯ್ಯ ಆಯ್ದಕ್ಕಿ ದಂಪತಿಗಳು ಇವರನ್ನು ಉಲ್ಲೇಖಿಸಿದ ಕೆಲವು ಪುರಾಣಗಳು ರಚನೆಯಾಗಿವೆ. ಆದರೆ ಬಸವೋತ್ತರ ಯುಗದ ಶ್ರೀ ಘನ ಮಠ ನಾಗಭೂಷಣ ಶರಣರು , ನೀರಲಕೇರಿ ಬಸವಲಿಂಗ ಶರಣರು, ಬಲ್ಲಟಗಿ ಶರಣರು ಮೊದಲಾದವರ ಬಗ್ಗೆ ಹಲವು ಪುರಾಣಗಳು ರಚನೆಯಾಗಿವೆ.

ಶಂಕರ ದಾಸಿಮಯ್ಯನನ್ನು ಕುರಿತು ಪಂಡಿತ ಮಲ್ಲಿಕಾರ್ಜುನ ಕವಿ ಬರೆದ ಪುರಾಣ ಬಹು ಮುಖ್ಯವಾಗಿದೆ. ಹರಿಹರನ ರಗಳೆಯಿಂದ ಪ್ರಭಾವಿತವಾಗಿರುವುದನ್ನು ಕಾಣಬಹುದು. ಕ್ರಿ.ಶ. ೧೬೮೬ -೮೭ ರ ಅವಧಿಯಲ್ಲಿ ಈ ಪುರಾಣ ರಚಿಸಿದ್ದು ೧೬ ಸಂಧಿಗಳನ್ನು ಒಳಗೊಂಡಿದೆ. ಭಾಮಿನಿ ಷಟ್ಪದಿಯಲ್ಲಿ ಈ ಪುರಾಣ ರಚಿತವಾಗಿದೆ. ಈ ಪುರಾಣವನ್ನು ಮೊದಲಿಗೆ ಶ್ರೀ ಪ್ಹ.ಬಿ. ಹಾಲಬಾವಿಯವರು ಸಂಗ್ರಹಿಸಿದ್ದಾರೆ. ಈ ಪುರಾಣ ಕೃತಿಯನ್ನು ಆಧರಿಸಿ ಅನ್ನ ಪೂರ್ಣರವರು ಸಂಶೋಧನೆ ನಡೆಸಿ ಶಂಕರ ದಾಸಿಮಯ್ಯ ಪುರಾಣದ ಸಾಂಸ್ಕೃತಿಕ ಮಹತ್ವವನ್ನು ಎತ್ತಿ ತೋರಿಸುತ್ತಾ ಒಂದು ಪುರಾಣ ಕೃತಿ ಯಾವ ರೀತಿ ಸಾಂಸ್ಕೃತಿಕ ಲೋಕವನ್ನು ಕಣ್ಣಿಗ ಕಟ್ಟಿಕೊಡುತ್ತದೆಂಬುದನ್ನು ಚಿತ್ರಿಸಿದ್ದಾರೆ.

ಕರಡಿಕಲ್ಲು ಭಿಲ್ಲಮರಾಜನ ಪುರಾಣವು ಶಿವಜಾತ ಒಡೆಯರು ಹಾಗೂ ಭಿಲ್ಲಮರಾಯನ ಸಂಬಂಧವನ್ನು ತಿಳಿಸುತ್ತಾ ಬಸವಪೂರ್ವಯುಗದ ಶರಣರ ಮಾಹಿತಿಯನ್ನು ತಿಳಿಸುತ್ತದೆ. ವ್ಯಕ್ತಿಯ ಚರಿತ್ರೆಗಿಂತ ಚಾರಿತ್ರ್ಯ ಮುಖ್ಯವೆಂದು ಪುರಾಣವು ತಿಳಿಸುತ್ತಾ ಪ್ರಸಾದ ಮಹತ್ವವನ್ನು ಎತ್ತಿ ತೋರಿಸುತ್ತದೆ. ಹಲವು ಐತಿಹಾಸಿಕ ಚಿತ್ರವನ್ನು ಕಟ್ಟಿ ಕೊಡುತ್ತದೆ. ಶ್ರೀ ಸೂಗೂರೇಶ್ವರ ಪುರಾಣವು ಬಸವಯುಗದ ಶರಣರಾದ ಶ್ರೀ ಚೆನ್ನವೀರ ಶರಣರ ಹಾಗೂ ಬಿಬ್ಬಿ ಬಾಚಯ್ಯನವರ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಕೆಲವು ಚಾರಿತ್ರಿಕ ಸಂಗತಿಗಳನ್ನು ನೀಡುವ ಮೂಲಕ ಈ ಪುರಾಣ ಕಾವ್ಯ ಶರಣ ಚರಿತ್ರೆ ಕಟ್ಟಿ ಕೊಡುವಲ್ಲಿ ಬಹು ಮುಖ್ಯವಾಗುತ್ತದೆ. ಶರಣರ ತತ್ವಗಳ ಬಗ್ಗೆ ಸ್ಥೂಲವಾಗಿ ಈ ಪುರಾಣ ತಿಳಿಸುತ್ತದೆ.

ಇದಲ್ಲದೇ ಬಸವೋತ್ತರ ಯುಗದ ಶರಣರ ಬಗ್ಗೆ ಬಂದ ಹಲವು ಪುರಾಣಗಳು ನಮಗೆ ಅವರ ಅನೇಕ ಮಾಹಿತಿಯನ್ನು ಒದಗಿಸಿ ಕೊಡುತ್ತವೆ. ಬಸವೋತ್ತರ ಯುಗದ ಶರಣರಾದ ನೀರಲಕೇರಿ ಬಸವಲಿಂಗ ಶರಣರು , ಘನಮಠ ನಾಗಭೂಷಣ ಶರಣರು ಇವರ ಬಗ್ಗೆ ಪುರಾಣಗಳು ಮಾಹಿತಿ ನೀಡಿ ಅವರ ಚಾರಿತ್ರಿಕ ಸಂಗತಿಯ ಬಗ್ಗೆ ನಮ್ಮ ಗಮನ ಸೆಳೆಯುತ್ತದೆ.

೧ : ೫ ಈ ಪರಿಸರದಲ್ಲಿ ಕಂಡು ಬರುವ ಪ್ರಮುಖ ಪುರಾಣಗಳು

ಕ್ರಮ ಸಂಖ್ಯೆ	ಪುರಾಣ ಕಾವ್ಯಗಳ ಹೆಸರು	ಲೇಖಕ	ಕಾಲ	ರೂಪ	ಪ್ರಧಾನ ವಿಷಯ	ಇತರ ಮಾಹಿತಿ
೧	ಆರವತ್ತು ಮೂರು ಪುರಾತನರ ಪುರಾಣ	ವೀರಭದ್ರ ಕವಿ	೧೯೭೭	ವಾರ್ಧಕ	ಪುರಾತನರ ಚರಿತ್ರ ಪ್ರೇರಣೆ	ಪೆರಿಯ ಪುರಾಣರದ
೨	ನೀರಲಕೇರಿ ಬಸವಲಿಂಗ ಶಿವಯೋಗಿಗಳ ಪುರಾಣ	ಅಮರನಾಥ ಶಾಸ್ತ್ರಿ ಸಂತೆಕೆಲ್ಲೂರು	೧೯೬೮	ಭಾಮಿನಿ	ನೀರಲಕೇರಿ ಬಸವಲಿಂಗ ಶರಣರ ಜೀವನ - ಸಂದೇಶ	
೩	★ ಜಡೆಸಿದ್ಧ ಶಿವಯೋಗಿಗಳ ಪುರಾಣ	,,				ಉಪಲಬ್ದವಿಲ್ಲ
೪	★ ಶಿವಶರಣೆ ರುದ್ರಮ್ಮನವರ ಪುರಾಣ	,,				,,
೫	★ ಗುರುಸಿದ್ಧ ಶಿವಯೋಗಿ ಪುರಾಣ	,,				,,
೬	★ ಶಿವಶರಣ ಬಸವಲಿಂಗಪ್ಪ ಪುರಾಣ	,,				,,
೭	★ ಅಮಾತ್ಯ ಶರಣರ ಪುರಾಣ	,,				,,
೮	★ ಮರಿಸ್ವಾಮಿಗಳ ಪುರಾಣ	,,				,,
೯	★ ಬ್ರಹ್ಮಗುಂಡಾರ್ಯರ ಸಂಯುಕ್ತ ಪುರಾಣ	,,				,,
೧೦	ಶ್ರೀ ಘನಮಠ ಶಿವಯೋಗಿಗಳ ಪುರಾಣ	,,	೧೯೮೭	ಭಾಮಿನಿ	ನಾಗಭೂಷಣ ಶರಣರ ಜೀವನ-ಸಂದೇಶ	ಪ್ರಕಾಶಕರು: ಸಿದ್ದಲಿಂಗ ಮಹಾಸ್ವಾಮಿಗಳು
೧೧	ನಾಗಭೂಷಣ ಶಿವಯೋಗಿಗಳ ಪುರಾಣ	ಮಸ್ಕಿ ಬಸವಪ್ಪ ಶಾಸ್ತ್ರಿ	೧೯೬೯	ವಾರ್ಧಕ	,,	
೧೨	ಶ್ರೀ ಅಮರೇಶ್ವರ ಪುರಾಣ	ಕರಿಬಸವ ಶಾಸ್ತ್ರಿ	೧೯೬೫	ಭಾಮಿನಿ	ಅಮರೇಶ್ವರ ಕ್ಷೇತ್ರ ಮಹಿಮೆ-ಆಯ್ದಕಿ ದಂಪತಿಗಳ ವಿಚಾರ	
೧೩	ಶ್ರೀ ಮಹಾಂತೇಶ್ವರ ಪುರಾಣ	,,	೧೯೭೨	ವಾರ್ಧಕ	ಬಿಚ್ಚಾಲಿ ಮಹಾಂತೇಶ್ವರ ಸ್ವಾಮಿಗಳ ಜೀವನ - ಸಂದೇಶ	ಶರಣ ಧರ್ಮದ ವಿಚಾರ
೧೪	★ ಷಣ್ಮುಖ ಸ್ವಾಮಿ ಪುರಾಣ	ಷಡಕ್ಷರಿ		ಭಾಮಿನಿ		

ಕ್ರಮ ಸಂಖ್ಯೆ	ಪುರಾಣ ಕಾವ್ಯಗಳ ಹೆಸರು	ಲೇಖಕ	ಕಾಲ	ರೂಪ	ಪ್ರಧಾನ ವಿಷಯ	ಇತರೆ ಮಾಹಿತಿ
೧೫	★ ಸೊಲ್ಲಾಪುರ ಸಿದ್ಧರಾಮೇಶ್ವರ ಪುರಾಣ	ಷಡಕ್ಷರಿ		ಸಂಸ್ಕೃತ		
೧೬	ವೀರಭದ್ರೇಶ್ವರ ಪುರಾಣ	ಚೆನ್ನಬಸವ ಶಾಸ್ತ್ರಿ	೧೯೬೩			ಶರಣ ಧರ್ಮವಿಚಾರ
೧೭	ಶ್ರೀ ನಾಳಗೂಂಡೇಶ್ವರ ಪುರಾಣ	ಸಿದ್ದರಾಮಶಾಸ್ತ್ರಿಗಳು	೧೯೬೩	ಭಾಮಿನಿ	ಸ್ಕಂದ ಪುರಾಣದ ವಸ್ತು	
೧೮	ಶಂಕರ ದಾಸಿಮಯ್ಯ ಪುರಾಣ	ಪಂಡಿತ ಮಲ್ಲಿಕಾರ್ಜುನ	೧೯೪೧	ಭಾಮಿನಿ	ಶಂಕರ ದಾಸಿಮಯ್ಯರ ಬಗ್ಗೆ	ಸಂ:ವ್ಹಿ.ಬಿ.ಹಾಲಬಾವಿ
೧೯	ಹೇಮರೆಡ್ಡಿ ಮಲ್ಲಮ್ಮ ಪುರಾಣ	ತೋಟಯ್ಯ ಶಾಸ್ತ್ರಿ	ಅಪ್ರಕಟಿತ	ಭಾಮಿನಿ		
೨೦	★ ಬಸವ ಪುರಾಣ	ಚೆನ್ನಬಸವಸ್ವಾಮಿಗಳು				
೨೧	★ ಉಜ್ಜಯನಿ ಜಗದ್ಗುರು ಶಿವಯೋಗಿಂದ್ರ ಪುರಾಣ	ಷಡಕ್ಷಾರಾನಂದ ಶಿವಾಚಾರ್ಯಸ್ವಾಮಿಗಳು				
೨೨	★ ರುದ್ರಮುನಿ ಮಹಾಚಾರ್ಯ ಪುರಾಣ	,,				
೨೩	★ ಅಂದೋಲದ ಕರುಣೇಶ್ವರ ಪುರಾಣ	ಚೆನ್ನಮಲ್ಲಕವಿ				
೨೪	★ ಬಿಕ್ಷಾವರ್ತಿ ಶಿವಯೋಗಿಗಳ ಪುರಾಣ	,,				
೨೫	ದೇವಿ ಮಹಾತ್ಮೆ ಪುರಾಣ	ಚಿದಾನಂದಾವಧೂತರು	ಭಾಮಿನಿ	ಶಕ್ತಿಯ ಪರಿಚಯ		ಸಂಸ್ಕೃತದ ಸಪ್ತಶತಿ ಭಾಷಾಂತರ ಊಹೆ
೨೬	ಗುಡುಗುಂಟಿ ಅಮರೇಶ್ವರ ಪುರಾಣ	ದಿನ್ನಿವೆಂಕಯ್ಯ	೧೯೫೦	ಭಾಮಿನಿ	ಅಮರೇಶ್ವರ ಕ್ಷೇತ್ರ ಮಹಿಮೆ	
೨೭	ಕರಡಿಕಲ್ಲು ಬಿಲ್ಲಮರಾಜ ಪುರಾಣ	ಚಂದ್ರಶೇಖರ ಶಾಸ್ತ್ರಿ	೧೯೫೯	ಭಾಮಿನಿ	ಬಿಲ್ಲಮರಾಯ ಶಿವಜಾತ ಒಡೆಯರ ಬಗ್ಗೆ	
೨೮	ಶ್ರೀ ಸೂಗೂರೇಶ್ವರ ಪುರಾಣ	,,	೧೯೭೨	ಭಾಮಿನಿ	ಚೆನ್ನವೀರ ಶರಣರು - ಬಿಬ್ಬಿ ಬಾಚಯ್ಯರ ಬಗ್ಗೆ	

★ ಉಪಲಬ್ದವಿಲ್ಲವಾಗಿವೆ

೨)ರಾಯಚೂರು ಪರಿಸರದ ಶರಣರು : ಸೃಜನ ಸಾಹಿತ್ಯ

೨ : ೧ ಸಾಹಿತ್ಯ ಪರಂಪರೆಯ ಒಂದುನೋಟ

ಈ ಪರಿಸರದ ಶರಣರು ತಮ್ಮ ವಿಚಾರಗಳಿಂದ ಅನೇಕ ಜನರ ಮನಸ್ಸನ್ನು ನಿರಂತರ ಪ್ರಭಾವಿಸುತ್ತ ಲೇ ಹೋಗಿದ್ದಾರೆ. ಈ ಪರಿಸರದ ಶರಣರದ ಜೀವನ ವಿಚಾರಗಳಿಂದ ಪ್ರಭಾವಿತಗೊಂಡು ಈ ಪರಿಸರದ ಹಾಗೂ ಈ ಪರಿಸರಕ್ಕ ಹೊರತು ಪಡಿಸಿದ ಅನೇಕರು ಸಾಹಿತ್ಯ ರಚಿಸಿದ್ದಾರೆ.

ಕಾವ್ಯ : ಈ ಪರಿಸರದ ಶರಣ ಜೀವನ ಸಾಹಿತ್ಯ ಕುರಿತಂತೆ ಯಾವುದೇ ಸ್ವತಂತ್ರವಾಗಿ ಕಾವ್ಯ - ಕವನಸಂಕಲನಗಳು ಮೂಡಿ ಬರದಿದ್ದರೂ ಅಂಶಿಕವಾಗಿ ಅವರ ತತ್ವಗಳನ್ನು ನಾಡ ಪದ್ಯಗಳ ಹಿನ್ನೆಲೆಯಲ್ಲಿ ಅನೇಕ ಕವಿಗಳು ಅಭಿವ್ಯಕ್ತಿಸಿದ್ದಾರೆ. ಆದರೂ ಸಹಿತ ಈ ಪರಿಸರದ ಶರಣರ ಸಂದೇಶವನ್ನು ಕುರಿತು ನಾರದ ಗಡ್ಡೆಯ ಚೆನ್ನ ಬಸವ ಸ್ವಾಮಿಗಳು ತಮ್ಮ ಕವನ ಸಂಕಲನಗಳಲ್ಲಿ ವಿಚಾರಗಳನ್ನು ಅಭಿವ್ಯಕ್ತಿಸಿದ್ದಾರೆ. ಶ್ರೀ ಅಮರೇಶ್ವರ ಕ್ಷೇತ್ರ ಮಹಿಮೆಯನ್ನು ಕುರಿತು ಕಾವ್ಯರೂಪದ ಸ್ತೋತ್ರ ಸುಪ್ರಭಾತಗಳನ್ನು ಪರ್ವತಯ್ಯ ರಚಿಸಿದ್ದಾರೆ . ಅಲ್ಲದೇ ಘನಮಠ ನಾಗಭೂಷಣ ಶರಣರನ್ನು ಕುರಿತು ಸುಪ್ರಭಾತ ರಚಿಸಿದ್ದಾರೆ. ಶಂಕರಯ್ಯ ಸ್ವಾಮಿ ಗುರುವಿನ ಮಠರು ಶರಣರನ್ನು ಕುರಿತು ಭಕ್ತಿ ಗೀತೆಗಳನ್ನು ಘನಮಠರನ್ನು ಕುರಿತು ಕೆಲವು ಕವನಗಳನ್ನು , ನೂರೆಂಟು ನಾಮಾವಳಿಗಳನ್ನು ರಚಿಸಿದ್ದಾರೆ. ಪುರಾಣ ಕಾವ್ಯಗಳನ್ನು ಹೊರತು ಪಡಿಸಿದರೆ ನಮಗೆ ಕಾವ್ಯ ಪ್ರಕಾರದಲ್ಲಿ ಇಷ್ಟು ಅಂಶಗಳ ಹೊರತಾಗಿ ಏನು ತಿಳಿದು ಬರುವುದಿಲ್ಲ. ಕಥಾ ಸಾಹಿತ್ಯದಲ್ಲಿ ಈ ಪರಿಸರದಲ್ಲಿ ಯಾವ ಕತೆಗಾರನ್ನು ಶರಣರ ವಿಚಾರಧಾರೆಯನ್ನು ಅಳವಡಿಸಿಕೊಂಡು ಕತೆ ಬರೆಯಲಿಲ್ಲ. ಆದರೆ ನಾಡಿನ ಸಂದರ್ಭದಲ್ಲಿ ತಿಪ್ಪೇರುದ್ರ ಸ್ವಾಮಿ, ಹನ್ನೆರಡು ಮಠರಂತೆ ಯಾರು ಈಪರಿಸರದ ಶರಣರನ್ನು ಕುರತು ಬರೆಯಲಿಲ್ಲ .ಇದೆ ಮಾತು ಗದ್ಯ ಸಾಹಿತ್ಯ ಪ್ರಕಾರಗಳಾದ ವಿಮರ್ಶೆ , ಪರಿಚಯ ಪುಸ್ತಕಗಳಿಗೆ ಹೋಲಿಸಲಾಗದು.

ಈ ಪರಿಸರದ ಶರಣರನ್ನು ಕುರಿತು ಡಾ : ಬಸವಲಿಂಗ ಸೊಪ್ಪಿಮಠ, ಡಾ : ಬಸವರಾಜ ಸಬರದ, ಶಾಂತರಸರ ಕೃತಿಗಳು ಗಮರ್ನಾಹವಾಗಿದೆ. ಹಾಗೆಯೇ ನಾಗಭೂಷಣ ಶರಣರನ್ನು ಕುರಿತು ಪರ್ವತಯ್ಯ ಶಿವಪುರ , ಸಜ್ಜಲಗುಡ್ಡ ಶರಣಮ್ಮ ರನ್ನು ಕುರಿತು ಗಿರಿರಾಜ ಹೊಸಮನಿ, ಹೇಮಗಲ್ಲ ಹಂಪರನ್ನು ಕುರಿತು ನಾಹೀರಾ ಮೊದಲಾದವರನ್ನು ಇಲ್ಲಿ ಹಸರಿಸಬಹುದಾಗಿದೆ .ಅಯ್ಯಪ್ಪಯ್ಯ ಹುಡಾ ಸೂಗೂರೇಶ್ವರ ಕುರಿತು , ಶಾಂತರಸ ಶಿವಶರಣರ ಕಲೆಗಳನ್ನು ಕುರಿತು ತಮ್ಮ ಕೃತಿ ರಚಿಸಿದ್ದಾರೆ. ಶರಣರ ವಚನ ಪ್ರಕಾರದ ಪರಂಪರೆ ಈ ಪರಿಸರದಲ್ಲಿ ಮುಂದುವರೆದಿದೆ. ನಾ.ಚೆ., ಬಿ.ಶೇಖರಪ್ಪ , ಪಿ.ಎಸ್ .ಹಿರೇಮಠ , ಆದಯ್ಯ ಸ್ವಾಮಿ ಹಿರೇಮಠ, ತಿಪ್ಪಣ್ಣ ಹೂಗಾರ , ಶರಣಪ್ಪ ಗುಡದಿನ್ನಿ , ನಾಹೀರಾ ಮೊದಲಾದ ವರು ಆಧುನಿಕ ಸಂದರ್ಭದಲ್ಲಿ ತಮ್ಮ ದೇಯಾದ ಅಂಕಿತಗಳನ್ನಿಟ್ಟು ಕೊಂಡು ವಚನಗಳನ್ನು ಬರೆದಿದ್ದಾರೆ.

ಆಗಾಗ ನಡೆಯುವ ಸಮ್ಮೇಳನಗಳಲ್ಲಿ ಸ್ಮರಣ ಸಂಚಿಕೆಗಳಿಗ ಈ ಪರಿಸರದ ಶರಣರನ್ನು ಕುರಿತು ಪರಿಚಯತ್ಮಾಕ ಲೇಖನಗಳನ್ನು ಡಾ : ಬಸವಲಿಂಗ ಸೊಪ್ಪಿಮಠ, ˉ : ಶಾಶ್ವತ ಸ್ವಾಮಿ ಮುಕ್ಕುಂದಿ ಮಠ,ಪಿ.ಎಸ್.ಪೈಲ, ಸಿ.ಶರಣಪ್ಪ , ಜಿ.ವ್ಹಿ .ಕೆಂಚನಗುಡ್ಡ , ಸರ್ವಮಂಗಳ ಸಕ್ರಿ, ಎಚ್.ಎನ್ . ಚಿತ್ರಗಾರ , ಅಯ್ಯಪ್ಪಯ್ಯ ಹುಡಾ, ಬಿ.ಜಿ. ಹುಲಿ ,ನಾಹೀರಾ, ಶಶಿಕಾಂತ ಮೊದಲಾದವರನ್ನು ಹೆಸರಿಸಬಹುದಾಗಿದೆ. ಇಲ್ಲದೇ ಈ ನಾಡಿನ ವಿದ್ವಾಂಸರಾದ ಡಾ : ಚಿದಾನಂದ ಮೂರ್ತಿ , ಡಾ : ಎಂ.ಎಂ. ಕಲಬುರ್ಗಿ,ಡಾ : ಎಸ್.ವಿದ್ಯಾಶಂಕರ , ಡಾ : ಬಿ.ಆರ್.ಹಿರೇಮಠ, ಡಾ :ವೀರಣ್ಣ ರಾಜೂರು , ಡಾ : ಸಂಗಮೇಶ ಸವದತ್ತಿ ಮಠ, ಡಾ : ಎಂ.ಎಸ್.ಲಠ್ಠೆ, ಡಾ : ಮ.ಗು. ಬಿರಾದಾರ, ಡಾ : ವ್ಹಿ.ಜಿ.ಪುಜಾರ , ಡಾ : ಬಸವರಾಜ ಸಬರದ, ಇನ್ನು ಮೊದಲಾದವರು ಈ ಪರಿಸರದ ಶರಣರನ್ನು ಕುರಿತು ಅನೇಕ ಲೇಖನಗಳನ್ನು ಬರೆದಿದ್ದಾರೆ.

೨ : ೨ ಪ್ರಮುಖ ಸೃಜನ ಸಾಹಿತಿಗಳು : ಅವರ ಸಾಹಿತ್ಯ

ಶಾಂತರಸ : ಇವರು ಶರಣ ಸಾಹಿತ್ಯಕ್ಕೆ ಸಂಬಂಧಿಸಿದಂತೆ 'ಬಹುರೂಪ' ಎಂಬ ಪ್ರಬಂಧ ಸಂಕಲವನ್ನು ವಿಶೇಷ ರೀತಿಯಲ್ಲಿ ರಚಿಸಿದ್ದಾರೆ. ಭಾಲ್ಕಿಯ ಲಿಂಗೈಕ್ಯ ಪಟ್ಟದ ದೇವರಾದ ಪೂಜ್ಯ ಶ್ರೀ ಮ.ಘ.ಚ. ಚೆನ್ನ ಬಸವ ಪಟ್ಟದ್ದೇವರ ಗೌರವ ಗ್ರಂಥ 'ಕಾಯಕ ಪರಿಣಾಮಿ ' ಯ ಸಂಪಾದಕರಾಗಿ ಅನೇಕ ಲೇಖನಗಳನ್ನು ಸಂಗ್ರಹಿಸಿ ವಿಶೇಷ ಮಾಹಿತಿ ನೀಡಿದ್ದಾರೆ. ಇದಲ್ಲದೆ ಈ ಪರಿಸರದ ಶರಣರನ್ನು ಕುರಿತು ಅನೇಕ ಲೇಖನಗಳನ್ನು ಬರೆದಿದ್ದಾರೆ.

ಚೆನ್ನ ಬಸಪ್ಪ ಬೆಟ್ಟದೂರು : ಇವರು ಅಮರಾನಂದ , ಬಾರುಕೋಲು ಕಾವ್ಯನಾಮದಿಂದ ಈ ಪರಿಸರದ ಶರಣರನ್ನು ಕುರಿತು ಕೆಲವು ಪರಿಚಯ ಲೇಖನ ಬರೆದಿದ್ದಾರೆ. 'ಸಕಲ ಜೀವ ಪ್ರೇಮಿ' ಎಂಬುದು ಇವರ ಪ್ರಮುಖ ಗ್ರಂಥವಾಗಿದೆ. ನಾರದಗಡ್ಡೆ ಚೆನ್ನ ಬಸವ ಸ್ವಾಮಿಗಳು : ನಾ.ಚೆ . ಕಾವ್ಯನಾಮದಿಂದಇವರು ವಚನಗಳನ್ನು ಅಲ್ಲದೇ ಇತರ ಕೃತಿಗಳನ್ನು ರಚಿಸಿದ್ದಾರೆ. ಇವರ ಪ್ರಮುಖ ಕೃತಿಗಳೆಂದರೆ : ಶ್ರೀ ಗುರು ಸನ್ನಿಧಿ, ಅಂತರಂಗ , ಸವಿಜೇನು , ಸಂಜೀವನಿ, ಚಿತ್ಕಲಾ, ಪ್ರಣವನಾದ , ಬಸವಜ್ಯೋತಿ , ಅಮೃತ ಬಿಂದು , ಪೂರ್ಣ ಪ್ರಜ್ಞೆ ಇತ್ಯಾದಿಗಳು

ಡಾ : ಬಸಲಿಂಗ ಸೊಪ್ಪಿ ಮಠ : ಇವರು ಮೂಲತಃ ಸಂಶೋಧಕರಾಗಿದ್ದರೂ ಈ ಪರಿಸರದ ಶರಣರನ್ನು ಕುರಿತು ಅನೇಕ ಲೇಖನಗಳನ್ನು ವಿವಿಧ ಸ್ಮರಣ ಸಂಚಿಕೆಗಳಲ್ಲಿ ಬರೆದಿದ್ದಾರೆ. ಅಲ್ಲದೇ 'ಕಲ್ಯಾಣ ಪ್ರಣತೆ ' ದೇವನಾಂಪ್ರಿಯ ' ಸಂಚಿಕೆಗಳನ್ನು ಉತ್ತಮವಾಗಿ ಸಂಪಾದಿಸಿದ್ದಾರೆ .ಇವರಲ್ಲದೇ ಈ ಪರಿಸರದ ಶರಣರನ್ನು ಕುರಿತು ಸಿದ್ಧಯ್ಯ ಪುರಾಣಿಕ, ತಿಪ್ಪೇರುದ್ರ ಸ್ವಾಮಿ, ಹಳಕಟ್ಟಿ ಅನೇಕ ಲೇಖನಗಳನ್ನು ಬರೆದಿದ್ದಾರೆ.

೨ : ೩ ಪ್ರಮುಖ ಸೃಜನಾತ್ಮಕ ಕೃತಿಗಳು (ಪರಿಸರದ ಶರಣರಿಗೆ ಸಂಬಂಧಿಸಿ)

ಕ್ರಮ ಸಂಖ್ಯೆ	ಕೃತಿಗಳ ಹೆಸರು	ಲೇಖಕರ ಹೆಸರು	ಸಂಪಾದಕ	ಪ್ರಕಟಿತ ಕಾಲ	ಕೃತಿಗಳ ವಸ್ತು	ಇತರ
೧	ಬಹುರೂಪ	ಶಾಂತರಸ			ಶರಣರ ಕಲೆಗಳ ಮಾಹಿತಿ	ಪ್ರಬಂಧ ಸಂಕಲನ
೨	ಕಾಯಕ ಪರಿಣಾಮಿ	ವಿವಿಧ ಲೇಖಕರು	ಶಾಂತರಸ	೧೯೯೧	ಶರಣರ ಬಗ್ಗೆ ಚರಿತ್ರೆ-ವಿಮರ್ಶೆ	ಪೂಜ್ಯ ಭಾಲ್ಕಿ ಶ್ರೀಗಳ ಗೌರವ ಗ್ರಂಥ (ಶತಮಾನೋತ್ಸವ ಸಮಿತಿ ಭಾಲ್ಕಿ)
೩	ಬಸವ ಶತಕ	ಸಂಗವಿಭು	ಶಾಂತರಸ	೧೯೭೪	ಬಸವಣ್ಣನ ಜೀವನ	ಸಂಪಾದನೆ (ಸತ್ಯಸ್ನೇಹಿ ಪ್ರಕಾಶನ ರಾಯಚೂರು)
೪	ತಿರುಳ್ಗನ್ನಡ (ಸವಿಸಂಚಿಕೆ)	ವಿವಿಧ ಲೇಖಕರು	ಅಲ್ಲಮ ಪ್ರಭು ಬೆಟ್ಟದೂರು	೧೯೯೩	ಈ ಪರಿಸರದ ಸಾಂಸ್ಕೃತಿಕ ನೋಟ	ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಸಂಚಿಕೆ (ಪರಿಸರದ ಶರಣರ ಮಾಹಿತಿ)
೫	ದೇವನಾಂಪ್ರಿಯ	ವಿವಿಧ ಲೇಖಕರು	ಡಾ: ಬಸವಲಿಂಗ ಸೊಪ್ಪಿಮಠ	೧೯೯೫	ಲಿಂಗಸೂಗೂರು ತಾಲೂಕಿನ ಬಗ್ಗೆ ಸಾಂಸ್ಕೃತಿಕ ನೋಟ	ತಾಲೂಕ ಸಾಹಿತ್ಯ ಸಮ್ಮೇಳನ ಸಂಚಿಕೆ (ಪರಿಸರದ ಶರಣರ ಮಾಹಿತಿ)
೬	ಸುವರ್ಣ ಸಿರಿ	ವಿವಿಧ ಲೇಖಕರು	ಸ್ವಾಗತ ಸಮಿತಿ	೧೯೯೯	ಜಿಲ್ಲೆಯ ಸಾಂಸ್ಕೃತಿಕ ನೋಟ	ಜಿಲ್ಲಾ ಸಾಹಿತ್ಯ ಸಮ್ಮೇಳನ (ಪುರಾಣ ಸಾಹಿತ್ಯದ ಬಗ್ಗೆ ಮಾಹಿತಿ)
೭	ನವರಂಗ	ವಿವಿಧ ಲೇಖಕರು	ಜಂಬಣ್ಣ ಅಮರಚಿಂತ	೧೯೯೭	ಜಿಲ್ಲೆಯ ಸಾಂಸ್ಕೃತಿಕ ನೋಟ	ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ (ಆಧುನಿಕ ವಚನಕಾರರ ಮಾಹಿತಿ)
೮	ಶಿವಶರಣೆಯರ ಸಂದೇಶ	ಡಾ:ಶಶಿಕಲಾ ಮರಿಬಾ ಶೆಟ್ಟಿ	ನಿರ್ದೇಶಕರು ಪ್ರಸಾರಾಂಗ ಕವಿವಿ	೧೯೯೨	ಶರಣರ ಧಾರ್ಮಿಕ ಸಾಮಾಜಿಕ ಸಾಹಿತ್ಯ ಚಿಂತನೆ	ಉಪನ್ಯಾಸ ಮಾಲೆ ಗ್ರಂಥ (ಆಯ್ದಕ್ಕಿ ದಂಪತಿಗಳ ಮಾಹಿತಿ)
೯	ಕೃಷಿ ಋಷಿ ಘನಮಠ ಶಿವಯೋಗಿ	ಸಿ.ಶರಣಪ್ಪ	ಪ್ರಸಾರಾಂಗ ಗು.ವಿ.ಗು.	೧೯೯೧	ನಾಗಭೂಷಣ ಶರಣರ ಬಗ್ಗೆ	ಉಪನ್ಯಾಸ ಮಾಲೆ ಗ್ರಂಥ
೧೦	ಶರಣ ತತ್ವ ಚಿಂತನ	ವಿವಿಧ ಲೇಖಕರು	ಅ.ಭಾ.ಶ.ಸಾ.ಪ.	೧೯೯೮	ಶರಣ ಚಿಂತನೆ	ಅಖಿಲ ಭಾರತ ಶರಣರ ಸಾಹಿತ್ಯ ಸಮ್ಮೇಳನ ಸಂಚಿಕೆ (ಪರಿಸರದ ಶರಣ ಮಾಹಿತಿ)
೧೧	ಆಯ್ದಕ್ಕಿ ಮಾರಯ್ಯ-ಲಕ್ಕಮ್ಮ	ಡಾ: ಎಸ್.ಶಿವರಾಜಪ್ಪ		೨೦೦೦	ಜೀವನ-ವಿಚಾರ	ವಚನಗಳ ಇಂಗ್ಲೀಷ ಅನುವಾದ ವಿದೆ.(ನಾಗಮಲೆ ಜ್ಯೋತಿ ಪ್ರಕಾಶನ ಮೈಸೂರ)
೧೨	ಅಂತರಂಗ	ಶ್ರೀ ನಾ.ಚೆ.		೧೯೬೮	ವಚನ ಸಂಕಲನ	ಆಧುನಿಕ ವಚನಗಳು (ಸ್ವಯಂ ಪ್ರಭಾ ಗ್ರಂಥ ಮಾಲಾ ನಾರದ ಗಡ್ಡೆ)

ಕ್ರಮ ಸಂಖ್ಯೆ	ಕೃತಿಗಳ ಹೆಸರು	ಲೇಖಕರ ಹೆಸರು	ಸಂಪಾದಕ	ಪ್ರಕಟಿತ ಕಾಲ	ಕೃತಿಗಳ ವಸ್ತು	ಇತರೆ
೧೩	ಸೂಗೂರ ಸಂಪದ	ವಿವಿಧ ಲೇಖಕರು	ಡಾ: ಬಸವಲಿಂಗ ಸೊಪ್ಪಿಮಠ	೧೯೯೨	ಶರಣರ ಜೀವನ ಸಂದೇಶ	ಸೂಗೂರೇಶ್ವರ ಸೇವಾ ಸಮಿತಿ ದೇವಸೂಗೂರು (ಶರಣರ ಮಾಹಿತಿ)
೧೪	ಕೈವಲ್ಯ ನವನೀತ	ಆದಿ ಆಮಾತೆಪ್ಪ			ಆಧುನಿಕ ಶರಣರ ತತ್ವ ಬೋಧೆ	ತಾತ್ವಿಕ ವಿಚಾರ ಚರ್ಚೆ (ಅರಳಿ ಪ್ರಕಾಶನ ಗದಗ)
೧೫	ಜಾಲಹಳ್ಳಿ ಶ್ರೀ ಜಯ ಶಾಂತ ವಿಜಯ	ಬಿ.ಶಿವಶಂಕರ		೧೯೯೮	ಜಯಶಾಂತ ಲಿಂಗರ ಜೀವನ ವಿಚಾರ	ಬಸವಪೂರ್ವ ಯುಗದ ಶರಣ ಮಾಹಿತಿ (ಜಾಲಹಳ್ಳಿ ಮಠದ ಪ್ರಕಾಶನ)
೧೬	ಆಧ್ಯಾತ್ಮ ಸಿರಿ	ವಿವಿದ ಲೇಖಕರು	ಡಾ: ಅಭಿನವ ಕುಮಾರ ಸ್ವಾಮಿ	೧೯೯೬	ಒಳಬಳ್ಳಾರಿ ಶ್ರೀಗಳ ಜೀವನ	ಒಳಬಳ್ಳಾರಿ ಹಾಗೂ ಇತರ ಮಠಗಳ ಮಾಹಿತಿ
೧೭	ನವೀನ ನವರತ್ನ ಮಾಲೆ	ಚೆನ್ನ ಬಸವೇಶ್ವರ ಮಹಾಸ್ವಾಮಿಗಳು	ಅಮರಪ್ಪ ಅಂಗಡಿ ಗುಂಟಿ ಸರ್ಜಾಪುರ	೧೯೮೧	ತಾತ್ವಿಕ ವಿಚಾರ	ಅದ್ವೈತ ಸಿದ್ಧಾಂತದ ಬಗ್ಗೆ ಮಾಹಿತಿಗಳು
೧೮	ಸುಪ್ರಭಾತ ಹಾಡುಗಳು	ಡಾ: ಶರಬಯ್ಯ ಸ್ವಾಮಿ		೧೯೯೬	ಮರಿಸ್ವಾಮಿಗಳ ಬಗ್ಗೆ	ಭಕ್ತಿಪೂರಿತ ಹಾಡುಗಳು (ರಂಗನಾಥ ಪ್ರಕಾಶನ ಮಾನವಿ)
೧೯	ಶ್ರೀ ಜಡೆಯ್ಯ ತಾತ ಶ್ರೀ ಗುರುಬಸವಯ್ಯ ತಾತ ಚರಿತಾಮೃತ	ಎನ್. ಚೋಳ ಶರಣ ಗೋರ್ಕಲ್ಲು	ಚೋಳ ಶರಣ ಪ್ರಕಾಶನ ಗೋರ್ಕಲ್ಲ	೧೯೯೯	ಶರಣರ ಜೀವನ	ಬಸವೋತ್ತರ ಶರಣರ ಬಗ್ಗೆ ಮಾಹಿತಿ
೨೦	ಘನ ಮಹಿಮ ಘನಮಠದಪ್ಪ	ಬಿ.ಎಂ. ಹಿರೇಮಠ ಜಿ.ಎಸ್. ಮಾಮನಿ	ಘನಮಠೇಶ್ವರ ಆಶ್ರಮ	೧೯೯೬	ನಾಗಭೂಷಣ ಶರಣರ ಬಗ್ಗೆ	ಘನಮಠೇಶ್ವರ ಪುರಾಣದ ಗದ್ಯಾನುವಾದ (ಮಠದ ಪ್ರಕಟಣೆ ಸಂತೆಕಲ್ಲೂರು)
೨೧	ನೀರಲಕೇರಿ ಬಸವಲಿಂಗ		ಗುರುಬಸವಯ್ಯ ಅಮ್ಮಾಪುರ	೧೯೯೭	ತತ್ವಪದಗಳ ಸಂಗ್ರಹ ಆಯ್ಕೆ	ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಣೆ
೨೨	ಕಲ್ಯಾಣ ಪ್ರಣತೆ	ವಿವಿಧ ಲೇಖಕರು	ಡಾ: ಬಸಲಿಂಗ ಸೊಪ್ಪಿಮಠ	೨೦೦೦	ಶರಣರ ಜೀವನ ವಿಚಾರ	ಶರಣ ಸಾಹಿತ್ಯ ಸಮ್ಮೇಳನ ಸಂಚಿಕೆ (ಪರಿಸರದ ಶರಣರ ಮಾಹಿತಿ)
೨೩	ಹರಿಹರನ ರಗಳೆಗಳು		ಡಾ: ಕಲಬುರ್ಗಿ	೧೯೯೯	ಶರಣರ ಕಥಾವಸ್ತು	ಪರಿಸರದ ಶಂಕರ ದಾಸಿಮಯ್ಯರ ರಗಳೆ ಇದೆ.

ಕ್ರಮ ಸಂಖ್ಯೆ	ಕೃತಿಗಳ ಹೆಸರು	ಲೇಖಕರ ಹೆಸರು	ಸಂಪಾದಕ	ಪ್ರಕಟಿತ ಕಾಲ	ಕೃತಿಗಳ ವಸ್ತು	ಇತರೆ
೨೪	ಗೊಬ್ಬೂರು ಹಂಪಣ್ಣ		ರಾಮಸ್ವಾಮಿ ನುಲಿ	೧೯೯೮	ತತ್ವ ಪದ ಸಂಗ್ರಹಆಯ್ಕೆ	ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಣೆ
೨೫	ಶೂನ್ಯ ಸಂಪಾದನೆಯಲ್ಲಿ ಸ್ತ್ರೀಪಾತ್ರಗಳು	ಜಯ ರಾಜಶೇಖರ	ಬಸವಸಮಿತಿ ಬೆಂಗಳೂರು.	೧೯೯೨	ಶರಣೆಯರ ವಿವೇಚನೆ	ಪರಿಸರದ ಮುಕ್ತಾಯಕ್ಕ - ಲಕ್ಕಮ್ಮರ ವಿಚಾರಗಳು
೨೬	ಪ್ರಭುದೇವರ ಶೂನ್ಯ ಸಂಪಾದನೆ	ಗೂಳೂರು ಸಿದ್ದ ವೀರಣ್ಣೊಡೆಯ	ಸಂ.ಶಿ. ಭೂಸನೂರಮಠ	೧೯೯೯	ವಚನಗಳ ಸಂಗ್ರಹ ಚರ್ಚೆ	ಪರಿಸರದ ಮುಕ್ತಾಯಕ್ಕ ಆಯ್ದಕ್ಕಿ ದಂಪತಿಗಳ ವಿಚಾರಗಳು
೨೭	ನೀರಲಕೇರಿ ಬಸವಲಿಂಗ ಶಿವಯೋಗಿಗಳ ಸ್ವರ ವಚನಗಳು		ಡಾ: ಬಸವಲಿಂಗ ಸೊಪ್ಪಿಮಠ	೧೯೯೯	ತತ್ವ ಪದಗಳ ಸಂಗ್ರಹ	ಶರಣರ ಮಾಹಿತಿ (ತೋಂಟದಾರ್ಯ ಮಠದ ಪ್ರಕಟಣೆ ಗದಗ)
೨೮	ಘನಮಠ ನಾಗಭೂಷಣ ಶಿವಯೋಗಿ		ಚೆನ್ನ ಬಸಪ್ಪ ಬೆಟ್ಟದೂರು	೧೯೯೮	ತತ್ವ ಪದಗಳ ಸಂಗ್ರಹ ಆಯ್ಕೆ	ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಣೆ
೨೯	ಕೂಡಲೂರು ಬಸಲಿಂಗಪ್ಪ		ಎಸ್. ಜಿ. ಸ್ವಾಮಿ	೧೯೯೮	ತತ್ವ ಪದಗಳ ಸಂಗ್ರಹ ಆಯ್ಕೆ	ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಣೆ
೩೦	ಶೂನ್ಯ ಸಂಪಾದನೆ ವಿವರಣಾತ್ಮಕ ಪರಿಚಯ	ಡಾ: ಎಚ್. ತಿಪ್ಪೇರುದ್ರ ಸ್ವಾಮಿ		೧೯೮೮	ಶರಣರ ಸಂದೇಶ	ಪರಿಸರದ ಶರಣರ ತಾತ್ವಿಕ ಚಿಂತನೆ
೩೧	ಕೃಷಿಜ್ಞಾನ ಪ್ರದೀಪಿಕೆ	ಫ. ನಾಗಭೂಷಣ ಶರಣರು	ಫ. ಗು. ಹಳಕಟ್ಟಿ	೧೯೯೮	ಕೃಷಿಯ ಬಗ್ಗೆ ಆಧ್ಯಾತ್ಮ ತೌಲನಿಕ ವಿಚಾರ	ಪ್ರಸಾರಾಂಗ ಹಂಪಿ. ಕನ್ನಡ ವಿಶ್ವ ವಿದ್ಯಾಲಯ ಪ್ರಕಟಣೆ
೩೨	ರಾಯಚೂರು ಜಿಲ್ಲೆ ಶರಣರು	ವಿವಿಧ ಲೇಖಕರು	ಸಿದ್ಧ ರಾಮಯ್ಯ ಹಿರೇಮಠ	೨೦೦೦	ಶರಣ ಜೀವನ ವಿಚಾರ	ಶರಣರ ಬಗ್ಗೆ ಕೆಲವು ಮಾಹಿತಿಗಳು (ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಪ್ರಕಟಣೆ)
೩೩	ರಾಯಚೂರು ಜಿಲ್ಲೆ ಅನುಭಾವಿ ಕವಿಗಳು	ಡಾ: ಬಸವರಾಜ ಸಬರದ	ಜಿ. ಕ. ಸಾ. ಪ	೧೯೯೬	ಜೀವನ ವಿಚಾರ	ಬಸವೋತ್ತರ ಯುಗದ ಕೆಲವು ಮಾಹಿತಿಗಳು

ಕ್ರಮ ಸಂಖ್ಯೆ	ಕೃತಿಗಳ ಹೆಸರು	ಲೇಖಕರ ಹೆಸರು	ಸಂಪಾದಕ	ಪ್ರಕಟಿತ ಕಾಲ	ಕೃತಿಗಳ ವಸ್ತು	ಇತರ
೩೪	ವಚನ ಅಧ್ಯಯನ	ಡಾ: ವೀರಣ್ಣ ರಾಜೂರು		೧೯೯೪	ಶರಣ ಸಾಹಿತ್ಯ ವಿಚಾರ	ಬಸವಪೂರ್ವ ಯುಗದ ಶರಣರ ಮಾಹಿತಿ (ಮುಂಡರಗಿ ಮಠದ ಪ್ರಕಟಣೆ)
೩೫	ಅನುಗ್ರಹ,	ಬಿ. ಶೆಖರಪ್ಪ ಹುಲಿಗಿರಿ		೧೯೭೮	ಆಧುನಿಕ ವಚನಗಳ ಸಂಕಲನ	
೩೬	ಮಹಾಂತ ಜೋಳಿಗೆ	,,		೧೯೮೧	,,	
೩೭	ಮಹಾಂತ ಚಿಂತನ	,,		೧೯೮೩	,,	
೩೮	ಶಾಂತಲಿಂಗಾಂಕಿತ ವಚನ	ಪಿ. ಎಸ್. ಹಿರೇಮಠ		೧೯೮೧	,,	
೩೯	ಗವಿಯ ಹೊಂಬಳೆಕು	ಆದಯ್ಯ ಸ್ವಾಮಿ		೧೯೮೨	,,	
೪೦	ನಿವೇದನೆ	ಶರಣಪ್ಪ ಗುಡದಿನ್ನಿ			,,	
೪೧	ವಚನ ಲಹರಿ	ತಿಪ್ಪಣ್ಣ ಹೂಗಾರ			,,	
೪೨	ಹೊನ್ನ ಸಿರಿ	ವಿವಿಧ ಲೇಖಕರು	ಡಾ: ಶಾಶ್ವತ ಸ್ವಾಮಿ		ಜಿಲ್ಲೆಯ ಸಾಂಸ್ಕೃತಿಕ ಮಾಹಿತಿ	ಶರಣರ ಕೆಲವು ಮಾಹಿತಿಗಳು (ಜಿಲ್ಲಾ ಕ. ಸಾ. ಪ. ರಾಯಚೂರು)
೪೩	ಮಾತುಂಡಮೌನ	ಗಿರಿರಾಜ ಹೊಸಮನಿ			ಶರಣಮ್ಮನವರ ಬಗ್ಗೆ ಮಾಹಿತಿ	ಬಸವೋತ್ತರ ಯುಗದ ಶರಣೆಯ ಜೀವನ ಪರಿಚಯ
೪೪	ನೀರಲಕೇರಿ ಬಸವಲಿಂಗ ಶರಣರು	ಗಿರಿರಾಜ ಹೊಸಮನಿ			ಶರಣರ ಜೀವನ ವಿಚಾರ	
೪೫	ಸಂತೆಕೆಲ್ಲೂರು ಸಂತ	ಪರ್ವತಯ್ಯ ಶಿವಪುರ			ಘನ ಮಠರ ಬಗ್ಗೆ ಮಾಹಿತಿ	
೪೬	ಶಿವಶರಣ ಕಥಾ ರತ್ನ ಕೋಶ	ತ. ಸು. ಶಾಮರಾಯ			ಶರಣರ ಜೀವನ ವಿಚಾರ	ಪರಿಸರದ ಶರಣರ ಬಗ್ಗೆ ಕೆಲವು ಮಾಹಿತಿಗಳು
೪೭	ಶ್ರೀ ಸೂಗೂರೇಶ್ವರ ದರ್ಶನ	ಅಯ್ಯಪ್ಪಯ್ಯ ಹುಡಾ		೧೯೮೨	ಚೆನ್ನವೀರ ಶರಣರ ಬಗ್ಗೆ	
೪೮	ಸೂಗೂರೇಶ್ವರ ಪದ್ಯ ಮಾಲೆ	ವಿವಿಧ ಕವಿಗಳು		೧೯೯೦	ಆಶು ಕವನಗಳ ಸಂಗ್ರಹ	ಶ್ರೀ ಸೂಗೂರೇಶ್ವರ ಕ್ಷೇತ್ರದ ಪ್ರಕಟಣೆ

ಕ್ರಮ ಸಂಖ್ಯೆ	ಕೃತಿಗಳ ಹೆಸರು	ಲೇಖಕರ ಹೆಸರು	ಸಂಪಾದಕ	ಪ್ರಕಟಿತ ಕಾಲ	ಕೃತಿಗಳ ವಸ್ತು	ಇತರೆ
೪೯	ಜ್ಞಾನ ಗೀತ		ಕೆಂಬಾವಿ ಗುರುಲಿಂಗಾರ್ಯ	೧೯೫೪	ತತ್ವ ಪದಗಳ ಸಂಗ್ರಹ	ಕೂಡಲೂರು ಬಸವಲಿಂಗ ಶರಣರ ತತ್ವಪದಗಳ ಮೊದಲ ಸಂಗ್ರಹ
೫೦	ಪರಪ್ಪಯ್ಯನವರ ಮಹಾತ್ಮೆ	ಸಿದ್ಧಲಿಂಗಪ್ಪ ಬೆಂಡೆಗಂಬಳಿ			ಜೀವನ ಚರಿತ್ರೆ	
೫೧	ಚೆನ್ನ ಬಸವ ಶಿವಯೋಗಿಗಳ ಜೀವನ ಚರಿತ್ರೆ	ರಾಜಯೋಗಿ ಹಂಪನ ಗೌಡ್ರು			ಜೀವನ ಮಾಹಿತಿ	
೫೨	ಚೆನ್ನ ಬಸವ ತಾತ	ಅಯ್ಯಪ್ಪಯ್ಯ ಹುಡಾ			ಜೀವನ ಚರಿತ್ರೆ	
೫೩	ಶರಣಚರಿತಾಮೃತ	ಡಾ: ಸಿದ್ಧಯ ಪುರಾಣಿಕ			ಶರಣರ ಜೀವನ ಮಾಹಿತಿ	ಪರಿಸರದ ಶರಣರ ಬಗೆಗೆ ಕೆಲವು ಮಾಹಿತಿಗಳು
೫೪	ಶರಣಅಜಗಣ್ಣ	ಎಂ.ಎನ್.ವಾಲಿ		೧೯೮೪		ಮೂರುಸಾವಿರ ಮಠ ಹುಬ್ಬಳ್ಳಿ ಪ್ರಕಟಣೆ

ಇವುಗಳಲ್ಲದೇ ಇನ್ನೂ ಅನೇಕ ಸೃಜನಾತ್ಮಕ ಕೃತಿಗಳು ಈ ಪರಿಸರದ ಶರಣರಿಗೆ ಸಂಬಂಧಿಸಿದಂತೆ ತಿಳಿದು ಬರುತ್ತವೆ. ಅನೇಕ ಅಪ್ರಕಟಿತ ಕೃತಿಗಳು ವಟಗಲ್, ಗಲಗ, ಕವಿತಾಳ, ಹೀರಾ, ಹೇಮನೂರು ಮುಂತಾದ ಊರುಗಳಲ್ಲಿ ಕಂಡು ಬರುತ್ತವೆ. ಅವುಗಳನ್ನು ಸಂರಕ್ಷಿಸಿದವರು ಇತರಿಗೆ ತೋರಿಸದ ಕಾರಣ ಅವುಗಳ ಮಾಹಿತಿ ಅಧ್ಯಯನಕ್ಕೆ ಕೊರತೆಯಾಗಿದೆ.

೩) ರಾಯಚೂರು ಪರಿಸರದ ಶರಣರು : ವಿಮರ್ಶೆ

೩ :೧ ವಿಮರ್ಶೆ ಪರಂಪರೆಯ ಒಂದು ನೋಟ

ಈ ಪರಿಸರದ ಶರಣರ ವಚನ, ಸ್ವರ ವಚನ, ತತ್ವ ಪದಗಳ ಬಗ್ಗೆ ಚರ್ಚೆಯ ವ್ಯಾಪಕತೆ ಬಹು ಕಡಿಮೆ ಎನ್ನಬಹುದು. ಕನ್ನಡ ಸಾಹಿತ್ಯ ದೃಷ್ಟಿಯಿಂದ ವಿಮರ್ಶೆಯ ಪರಂಪರೆಯೇ ಈಪರಿಸರದಲ್ಲಿ ಬಹು ಕಡಿಮೆ ಅಂದ ಬಳಿಕ ಶರಣ ಸಾಹಿತ್ಯ ಸಂದರ್ಭದಲ್ಲಿ ಅದು ಕೇವಲ ಬೆರಳಣಿಕೆಯಷ್ಟು ಲೇಖನಗಳ ಪರಂಪರೆಯನ್ನು ಹೊಂದಿದೆ. ಡಾ : ಬಸವಲಿಂಗ ಸೊಪ್ಪಿಮಠರ ಬಿಬ್ಬಿ ಬಾಚಯ್ಯರ ವಚನಗಳನ್ನು ಕುರಿತು ಬಂದ ಒಂದು ಕೃತಿಯನ್ನು ಹೊರತು ಪಡಿಸಿದರೆ ಮತ್ಯಾವ ವಿಮರ್ಶೆ ಕೃತಿಗಳು ಬಂದಿಲ್ಲ. ಕಲ್ಯಾಣ ಶರಣರ ಕುರಿತಂತೆ ಈ ಪರಿಸರದ ಕೆಲವು ವಿಮರ್ಶಕರು ಕೃತಿ ರಚಿಸಿದ್ದರೂ ಈ ಪರಿಸರದ ಶರಣರನ್ನು ಕುರಿತು ಯಾವ ಕೃತಿಗಳನ್ನು ರಚಿಸಿಲ್ಲ. ಆದರೆ ಪತ್ರಿಕೆಗಳಲ್ಲಿ ಆಗಾಗ ಕೆಲವು ಲೇಖನಗಳನ್ನು ಬರೆಯುತ್ತಿರುವ ಶಾಶ್ವತ ಸ್ವಾಮಿ ಮುಕ್ಕುಂದಿಮಠ, ನಾಹೀರಾ, ಚಿತ್ರಗಾರ ಇಂತಹ ಕೆಲವು ಹೆಸರಗಳನ್ನು ಹೊರತು ಪಡಿಸಿದರೆ ಈ ಪರಿಸರದ ಶರಣರ ಸಾಹಿತ್ಯದ ವಿಮರ್ಶೆಯನ್ನು ಕುರಿತು ಹೆಚ್ಚಿನಾಂಶಗಳನ್ನು ಹೇಳಲಾಗುವುದಿಲ್ಲ. ಆದರೆ ಈ ಪರಿಸರದ ಶರಣ ಸಾಹಿತ್ಯ ವಿಮರ್ಶೆಗೊಳಪಡಿಸುವ ಜವಬ್ದಾರಿ ಈ ಪರಿಸರದ ವಿಮರ್ಶಕರ ಮೇಲಿದೆ ಎಂಬುದನ್ನು ವಿನಯ ಪೂರ್ವಕವಾಗಿ ಸೂಚಿಸುತ್ತೇನೆ.

೩:೨ ಪ್ರಮುಖ ವಿಮರ್ಶಕರು ಹಾಗೂ ಅವರ ಕೃತಿಗಳು

ಶಾಂತರಸ: ಬಸವಣ್ಣನವರ ವಚನಗಳಲ್ಲಿ ಬಾಳೆ, ನೀಲಲೋಚನೆಯ ವಚನಗಳು, ಮಹಾದೇವಿಯಕ್ಕನವರ ವಚನಗಳಲ್ಲಿ ಕಾವ್ಯಸತ್ವ -ಸೌಂದರ್ಯ ಇಂತಹ ಮೂರು ಲೇಖನಗಳು ನಮಗೆ ಶರಣ ಸಾಹಿತ್ಯದ ವಿಮರ್ಶೆಯ ಪರಿಚಯ ಮಾಡಿ ಕೊಡುತ್ತವೆ. ಆಳವಾದ ಚಿಂತನೆ ಇವರ ಲೇಖನಗಳಲ್ಲಿದೆ. ಆದರೆ ಈ ಪರಿಸರದ ಶರಣರನ್ನು ಕುರಿತ ಚಿಂತನೆಗಳ ವಿವರಣೆ ಸಾಕಷ್ಟಿಲ್ಲವೆನ್ನಬಹುದಾಗಿದೆ.

ಅಮರಾನಂದ ಬೆಟ್ಟದೂರು (ಚೆನ್ನ ಬಸಪ್ಪ) : ಇವರು 'ಬಸವ ಗೀತೆ - ಭಗವದ್ಗೀತೆ' (ಬರೆದಿದ್ದಾರೆ) ಇವರು ಇಲ್ಲಿ ತೌಲನಿಕ ವಿಚಾರಗಳನ್ನು ತಿಳಿಸುತ್ತಾ ಅವುಗಳ ನಡುವಿನ ಭಿನ್ನತೆ ಜೊತೆಗೆ ವಾಸ್ತವಿಕ ಸಂಗತಿ ತಿಳಿಸಿದ್ದಾರೆ. ಡಾ : ಬಸವಲಿಂಗ ಸೊಪ್ಪಿಮಠ : ಈ ಪರಿಸರದ ಶರಣರನ್ನು ಕುರಿತು ವಿಮರ್ಶೆ ಬಹು ಕಡಿಮೆ ಎಂದಾಗ ಸ್ವಲ್ಪ ನೆಮ್ಮದಿ ಪಟ್ಟು ಕೊಳ್ಳಬಹುದಾದ ಹೆಸರು ಇದಾಗಿದೆ. ಇವರು ಈ ಪರಿಸರದ ಶರಣರನ್ನು ಕುರಿತು ತಮ್ಮ ಲೇಖನಗಳಲ್ಲಿ ತಲಸ್ಪರ್ಶಿಯಾದ ಚಿಂತನೆಗಳನ್ನು ಮಾಡಿದ್ದಾರೆ. 'ಒಡಲೊಳಗಣ ಕಿಚ್ಚು' ಎಂಬ ವಿಮರ್ಶೆ ಕೃತಿಯ ಮೂಲಕ ಜೇಡರ ದಾಸಿಮಯ್ಯನ ವಚನಗಳನ್ನು ಕುರಿತು ವಿಮರ್ಶಿಸಿದ್ದಾರೆ.

ಇಷ್ಟೇಲ್ಲಾ ಆದರೂ ಈ ಪರಿಸರದ ಶರಣರನ್ನು ಕುರಿತು ಸ್ವತಂತ್ರವಾದ ಯಾವುದೇ ವಿಮರ್ಶಾಕೃತಿಗಳು ಇದುವರೆಗೂ ಬಂದಿಲ್ಲ.

೪ : ರಾಯಚೂರು ಪರಿಸರದ ಶರಣರು : ಸಂಶೋಧನೆ

೪ :೧ ಸಂಶೋಧನೆಯ ಪರಂಪರೆಯ ಒಂದು ನೋಟ

ವಿಮರ್ಶೆಗೆ ಹೋಲಿಸಿದಲ್ಲಿ ಸ್ವಲ್ಪ ನೆಮ್ಮದಿ ಉಸಿರು ಬಿಡುವಷ್ಟು ಕೆಲಸ ಈ ಪರಿಸರದ ಶರಣರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ನಡೆದಿದೆ. ಈ ಪರಿಸರದ ಶರಣರನ್ನು ಕುರಿತು ನಾಡಿನ ಬೇರೆ ಪರಿಸರದಲ್ಲಿ ಕೂಡ ಸಂಶೋಧನೆ ನಡೆದಿದೆ. ಈ ಪರಿಸರದಲ್ಲಿ ಶರಣ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಶಾಂತರಸರು ಮೊದಲಸಂಶೋಧನೆ ನಡೆಸಿದ್ದಾರೆ. ಅವರು ಬಸವ ಪೂರ್ವಯುಗದಅನೇಕ ಶರಣರ ಬಗ್ಗ ಮಾಹಿತಿ ನೀಡಿದ್ದಾರೆ. ಅಲ್ಲದೇ ಎಡೆದೊರೆ ನಾಡಿನ ಅನುಭಾವಿಕವಿಗಳ ಬಗ್ಗ ಪರಿಚಯ ಮಾಡಿಕೊಟ್ಟದ್ದಾರೆ. ಇದೇ ಕೃತಿಯನ್ನು ಆಧರಿಸಿ ಡಾ : ಬಸವರಾಜ ಸಬರದ ಕೆಲವು ಹೊಸ ಹೆಸರುಗಳನ್ನು ಈ ಪಟ್ಟಿಗೆ ಸೇರಿಸಿ ಪರಿಚಯಿಸಿದ್ದಾರೆ.

ಸಂಶೋಧನೆಯಲ್ಲಿ ಈ ಪರಿಸರದಲ್ಲಿ ಕಂಡು ಬರುವ ಬಹು ಮುಖ್ಯವಾದ ಹೆಸರೆಂದರೆ ಡಾ: ಬಸವಲಿಂಗ ಸೊಪ್ಪಿಮಠರದಾಗಿದೆ. ಇವರು 'ಕೊಡೇಕಲ್ ಬಸವಣ್ಣ ಅಧ್ಯಯನ ' ಎಂಬ ಸಂಶೋಧನೆಯ ಕೃತಿ ಮೂಲಕ ಈ ಪರಿಸರದ ಜಲದುರ್ಗ ಶರಣರ ಬಗ್ಗ ವಿವರವಾದ ಹೊಸ ಮಾಹಿತಿಗಳನ್ನು ಮೊದಲ ಬಾರಿಗೆ ನೀಡಿದ್ದಾರೆ. ಅಲ್ಲದೇ ಅಲ್ಲಿಯ 'ಮೋಡಿ' ಲಿಪಿಯನ್ನು ಮೊದಲ ಬಾರಿಗೆ ಅರ್ಥೈಸಿ ವಿವೇಚಿಸಿದ್ದಾರೆ. ಇದಲ್ಲದೇ 'ಆಕರ ' ಕೃತಿಯ ಮೂಲಕ ಈ ಪರಿಸರದ ಬಿಬ್ಬಿ ಬಾಚಯ್ಯ , ಮುಕ್ತಾಯಕ್ಕ,ಆಮಲಿಂಗಯ್ಯ ಅನಿಮೀಷ ದೀಕ್ಷಾನಲೆ, ಮಾರಯ್ಯನ ಆಯ್ದಕ್ಕಿ , ಕರಡಿಕಲ್ಲು ಶರಣರ ಬಗ್ಗ , ಸೂಗೂರೇಶ್ವರ ಪರಿಸರದ ಶರಣರ ಬಗ್ಗ ಅನೇಕ ಹೊಸ ಮಾಹಿತಿಗಳನ್ನು ಮೊದಲಬಾರಿಗೆ ಪರಿಚಯಿಸಿಕೊಟ್ಟಿದ್ದಾರೆ. ಅಲ್ಲದೇ ಶರಣ ಪರಂಪರೆಯ ಹೊಸ ಹೊಸ ಸಂಶೋಧನೆಯ ಪರಿಕಲ್ಪನೆಗಳನ್ನು ಹೊಂದಿ ಹಲವಾರು ಲೇಖನಗಳನ್ನು ಬರೆದಿದ್ದಾರೆ.

ಈ ಪರಿಸರದ ಬಸವೋತ್ತರ ಯುಗದ ಶರಣರಾದ ಕೂಡಲೂರು ಬಸವಲಿಂಗ ಶರಣಬಗ್ಗೆ ಡಾ: ಎಂ.ಜಿ. ಶಾಸ್ತ್ರಿ ಮಠರ ಪಿಎಚ್.ಡಿ ಮಹಾ ಪ್ರಬಂಧ ಪ್ರಕಟವಾಗಿದೆ. ಅಂತೆಯೇ ಘನಮಠ ಶರಣರ ಬಗ್ಗ ಕೆ.ಶಶಿಕಾಂತರವರ ' ಘನಮಠದಾರ್ಯರ ತತ್ವ ವಿಚಾರಗಳು 'ಎಂಬ ಎಂ.ಫಿಲ್ ಪ್ರಬಂಧ ರಾಜಶ್ರೀ ಇಲ್ಲೂರವರ ' ಸೂಗೂರೇಶ್ವರ ಸಾಂಸ್ಕೃತಿಕ ಅಧ್ಯಯನ ' ಎಂಬ ಎಂ.ಫಿಲ್ .ಪ್ರಂಬಧ, ನೀರಲಕೇರಿ ಬಸವ ಲಿಂಗ ಶರಣ ಕುರಿತ ಸಿದ್ಧರಾಮಯ್ಯರ ಎಂ.ಫಿಲ್ ಪ್ರಬಂಧಗಳು ಬಂದಿವೆ.

ಈ ಪರಿಸರದ ಶರಣರಾದ ಶಂಕರ ದಾಸಿಮಯ್ಯನ ಕುರಿತಾದ ಪುರಾಣದ ಬಗ್ಗೆ ಅನ್ನಪೂರ್ಣ ಜಾಲವಾದಿ ಸಂಶೋಧನೆ ನಡಿಸಿ 'ಶಂಕರ ದಾಸಿಮಯ್ಯ ಪುರಾಣ ಒಂದು ಅಧ್ಯಯನ' ಕೃತಿ ಪ್ರಕಟಿಸಿದ್ದಾರೆ. ಸೀತಾರಾಮ ಜಾಗೀರ್‌ದಾರ್ ಕರಡಕಲ್ ಶರಣರ ಬಗ್ಗೆ ಕೆಲವು ಮಾಹಿತಿ ಲೇಖನಗಳನ್ನು ಬರೆದಿದ್ದಾರೆ. ನಾಡಿನ ಖ್ಯಾತ ಸಂಶೋಧಕರಾದ ಎಂ.ಎಂ. ಕಲಬುರ್ಗಿಯವರು ಉಳಿಮೇಶ್ವರ ಚಿಕ್ಕಯ್ಯ ಕುರಿತ ಕೆಲವು ಮಾಹಿತಿಗಳನ್ನು ನೀಡಿದ್ದಾರೆ. ಆದರೆ ಸಮಗ್ರವಾಗಿ ಈ ಪರಿಸರದ ಶರಣರನ್ನು ಕುರಿತು ಯಾವುದೇ ಸಂಶೋಧನೆಯ ಕೃತಿಗಳು ಬಂದಿಲ್ಲ ಆ ದಿಸೆಯಲ್ಲಿ ಈ ಮಹಾ ಪ್ರಬಂಧದ ಮೂಲಕ ಕಿರು ಪ್ರಯತ್ನ ಮಾಡಲಾಗಿದೆ.

೪ :೨ ಪ್ರಮುಖ ಸಂಶೋಧಕರು ಹಾಗೂ ಅವರ ಕೃತಿಗಳು

ಶಾಂತರಸ :ಈ ಪರಿಸರದ ಪ್ರಮುಖ ಶರಣ ಸಂಶೋಧಕರು. ಇವರು ಬಸವಪೂರ್ವಯುಗದ ಶರಣರು , ಮೊದಲ ವಚನಕಾರ ಮಾದಾರ ಚೆನ್ನಯ್ಯ , ಬಳ್ಳಾರಿ ಜಿಲ್ಲೆಯ ಶರಣರು ಇವರ ಪ್ರಮುಖ ಕೃತಿಗಳಾಗಿವೆ.

ಡಾ : ಬಸವಲಿಂಗ ಸೊಪ್ಪಿಮಠ : ಈ ಪರಿಸರದ ಪ್ರಮುಖ ಸಂಶೋಧಕರಾಗಿದ್ದು 'ಆಕರ 'ಕೃತಿಯ ಮೂಲಕ ಅನೇಕ ಮಾಹಿತಿ ನೀಡಿದ್ದಾರೆ. ಅಲ್ಲದೇ 'ಕೊಡೇಕಲ್ ಬಸವಣ್ಣ ಅಧ್ಯಯನ'ಇವರ ಪ್ರಮುಖ ಸಂಶೋಧನ ಕೃತಿಯಾಗಿದ್ದು ಅದು ಶತಕದ ಶ್ರೇಷ್ಠ ಸಂಶೋಧನೆ ಕೃತಿಯೆಂದು ವಿದ್ವಾಂಸರಾದ ಡಾ: ಸಂಗಮೇಶ ಸವದತ್ತಿ ಮಠ ಪ್ರಶಂಸಿಸಿದ್ದಾರೆ.

ಡಾ : ಎಂ.ಎಂ.ಕಲಬುರ್ಗಿ :ನಾಡಿನ ಶ್ರೇಷ್ಠ ಸಂಶೋಧಕರಾದ ಇವರು ತಮ್ಮ 'ಮಾರ್ಗ' ಮತ್ತು 'ಶಾಸನಗಳಲ್ಲಿ ಶಿವಶರಣರು'ಕೃತಿಯ ಮೂಲಕ ಶರಣರ ಬಗ್ಗೆ ಅಪೂರ್ವ ಮಾಹಿತಿ ನೀಡಿದ್ದಾರೆ. ಅಲ್ಲದೇ ಈ ಪರಿಸರದ ಶರಣರ ಬಗ್ಗೆ ಅನೇಕ ಅಂಶಗಳನ್ನು ತಮ್ಮ ಕೃತಿಗಳನಲ್ಲಿ ಚರ್ಚಿಸಿದ್ದಾರೆ. (ಸಂಶೋಧನೆ ಪ್ರತಿಗಳ ಪಟ್ಟಿ ಪುಟ ೨೧೭ರಲ್ಲಿದೆ.)

೫ : ರಾಯಚೂರು ಪರಿಸರದ ಶರಣರು : ಜನಪದ ಸಾಹಿತ್ಯ

ಈ ಪರಿಸರದ ಶರಣರ ಪ್ರಭಾವ ಜನಪದದ ಮೇಲಾಗಿದೆ. ಇಲ್ಲಿಯ ಕೆಲವು ಬೀಸುವ ಪದ , ಹಂತಿ ಪದ , ಡೊಳ್ಳಿನ ಪದಗಳ ಸಂದರ್ಭದಲ್ಲಿ ಈ ಪರಿಸರದ ಶರಣರನ್ನು ಉಲ್ಲೇಖಿಸಿ ಹಾಡುವ ಅನೇಕ ಹಾಡುಗಳಿವೆ. ಸೂಗೂರೇಶ್ವರ ಹಾಗೂ ಪರಿಸರದ ಶರಣರನ್ನು ಕುರಿತು 'ಸೂಗೂರ ರಂಗೋಲಿ'ಎಂಬ ನೂರೊಂದು ಜಾನಪದ ತ್ರಿಪದಿಗಳನ್ನು ಸಿದ್ದರಾಮಪ್ಪ ಮಾಲಿಪಾಟೀಲ್ ಸಂಪಾದಿಸದ್ದಾರೆ. ಬಹುಶಃ ಈ ಪರಿಸರದ ಶರಣರನ್ನು ಕುರಿತು ಪ್ರಕಟವಾದ ಮೊದಲ ಜನಪದ ಕೃತಿಯೆನ್ನ ಬಹುದಾಗಿದೆ.ಇದ್ದಲ್ಲದೇ ಆಯ್ದಕ್ಕಿ ದಂಪತಿಗಳ ಕುರಿತಾಗಿ ಲಾವಣಿಯೊಂದನ್ನು ಹಾಡುವವರು ಅಮರೇಶ್ವರ ಕ್ಷೇತ್ರದಲ್ಲಿ ಕಂಡುಬರುತ್ತಾರೆ . ಈ ಪರಿಸರದಲ್ಲಿ ಶರಣ ಕುರಿತಾದ ಜನಪದ ಸಾಹಿತ್ಯ ಎಲೆಯ ಮರೆಯ ಕಾಯಿಯಂತೆ ಅಲ್ಲಲ್ಲಿ ಕಂಡು ಬರುತ್ತದೆ. ವ್ಯವಸ್ಥಿತವಾದ ಸಂಗ್ರಹ ಕಾರ್ಯ ಆಗಬೇಕಾಗಿದೆ. ಇದಲ್ಲದೇ ಈ ಪರಿಸರದ ಶರಣರ ಬಗ್ಗೆ ಕತೆ ಹೇಳುವ ಸಂಪ್ರದಾಯ , ವೇಷಗಾರರು ಹಾಕುವ ವೇಷ ಸಂಪ್ರದಾಯಗಳನ್ನು ಈ ಪರಿಸರದಲ್ಲಿ ಕಾಣಬಹುದಾಗಿದೆ. ಈ ಪರಿಸರದ ಶರಣರನ್ನು ಕುರಿತು ಬಂದ ಜನಪದ ಸಾಹಿತ್ಯದ ಬಗ್ಗೆ ಇಷ್ಟನ್ನು ಬಿಟ್ಟು ಸದ್ಯಕ್ಕೆ ಯಾವ ಮಾಹಿತಿಗಳು ಕಂಡು ಬರುವುದಿಲ್ಲ. ಆದರೆ ಈ ದಿಸೆಯಲ್ಲಿ ಪ್ರಯತ್ನ ಪಟ್ಟರೇ ಅನೇಕ ಹೊಸ ಅಂಶಗಳು ಕಂಡುಬರುವ ಸಾಧ್ಯತೆಗಳಿವೆ.

ಒಟ್ಟಾರೆ ಆಧುನಿಕ ಪರಂಪರೆಯ ಸಾಹಿತ್ಯ ಮತ್ತು ಜನಪದ ಸಾಹಿತ್ಯವನ್ನು ಕುರಿತು ಸಮಗ್ರವಾದ ಅಧ್ಯಯನ ಈಪರಿಸದ ಶರಣರಿಗೆ ಸಂಬಂಧಿದಂತೆ ನಡೆಯುವುದು ಅವಶ್ಯಕವಾಗಿದೆ. ಆ ದಿಸೆಯಲ್ಲಿ ಅಧ್ಯಯನವಾದರೆ ತೌಲನಿಕವಾಗಿ , ಸಾಂಸ್ಕೃತಿಕವಾಗಿ ಅನೇಕ ಅಂಶಗಳು ಕಂಡುಬರು ಸಾಧ್ಯತೆಗಳಿವೆ.

೪ :೩ ಈ ಪರಿಸರದ ಶರಣರಿಗೆ ಸಂಬಂಧಿಸಿದ ಸಂಶೋಧನೆ ಕೃತಿಗಳು

ಕ್ರಮ ಸಂಖ್ಯೆ	ಕೃತಿಗಳ ಹೆಸರು	ಸಂಶೋಧಕರು	ಪ್ರಕಟಣಾ ವರ್ಷ/ ಸಂಶೋಧಿಸಿದ ವರ್ಷ	ವಸ್ತು	ಇತರ
೧	ಬಸವಪೂರ್ವ ಯುಗದ ಶರಣರು	ಶಾಂತರಸ	೧೯೭೨	ಶರಣರ ಜೀವನ ವಿಚಾರ	ಶಂಕರ ದಾಸಿಮಯ್ಯ- ಢಕ್ಕೆಯ ಮಾರಯ್ಯ ರ ಮಾಹಿತಿ
೨	ಎಡೆದೊರೆ ನಾಡಿನ ಅನುಭಾವಿ ಕವಿಗಳು	ಶಾಂತರಸ	೧೯೭೩	ಜೀವನ - ವಿಚಾರ	ಬಸವೋತ್ತರ ಯುಗದ ಶರಣ ಬಗ್ಗೆ ಮಾಹಿತಿ
೩	ಕೂಡಲೂರು ಬಸವಲಿಂಗ ಶರಣರು	ಡಾ:ಎಂ.ಜಿ.ಶಾಸ್ತ್ರಿಮಠ	೧೯೯೭	ಜೀವನ - ವಿಚಾರ	ಬಸವೋತ್ತರ ಯುಗದ ಶರಣರ ಸಂಶೋಧನೆ
೪	ಕೊಡೇಕಲ್ ಬಸವಣ್ಣ ಒಂದು ಅಧ್ಯಯನ	ಡಾ : ಬಸವಲಿಂಗ ಸೊಪ್ಪಿಮಠ	೧೯೮೮	ಜೀವನ - ಸಾಹಿತ್ಯ ವಿವೇಚನೆ	ಜಲದುರ್ಗ ಶರಣರ ಮಾಹಿತಿ
೫	ದಲಿತವರ್ಗದ ಶರಣರು-ಶರಣೆಯರು ಒಂದು ಅಧ್ಯಯನ	ಡಾ : ಮ.ನ.ಜವರಯ್ಯ	೧೯೯೭	ಜೀವನ-ತತ್ವ ವಿಚಾರ	ಆಯ್ದಕ್ಕಿ ದಂಪತಿಗಳ - ಢಕ್ಕೆಯ ಮಾರಯ್ಯರ ವಿಚಾರ
೬	ಶಂಕರ ದಾಸಿಮಯ್ಯ ಪುರಾಣ ಒಂದು ಅಧ್ಯಯನ	ಡಾ : ಅನ್ನಪೂರ್ಣ ಜಾಲವಾದಿ	೧೯೯೯	ಜೀವನ - ಪುರಾಣ ಕೃತಿ ವಿವೇಚನೆ	ಶಂಕರ ದಾಸಿಮಯ್ಯರ ಬಗ್ಗೆ ಮೊದಲ ವಿವರವಾದ ಮಾಹಿತಿಗಳು
೭	ಘನಮಠದಾರ್ಯರ ತತ್ವಪದಗಳು	ಕೆ.ಶಶಿಕಾಂತ	೧೯೯೬	ತತ್ವ ಪದಗಳ ವಿವೇಚನೆ	ಎಂ. ಫಿಲ್ ಪ್ರಬಂಧ
೮	ನೀರಲಕೇರಿ ಬಸವಲಿಂಗ ಶರಣ	ಸಿದ್ಧರಾಮಯ್ಯ	ಅಪ್ರಕಟಿತ		ಎಂ. ಫಿಲ್ ಪ್ರಬಂಧ
೯	ದಿನ್ನಿವೆಂಕಯ್ಯ ಕವಿ	ದಸ್ತಗಿರಿ ಸಾಬ್ ದಿನ್ನಿ	ಅಪ್ರಕಟಿತ		ಎಂ. ಫಿಲ್ ಪ್ರಬಂಧ
೧೦	ಶ್ರೀ ಸೂಗೂರೇಶ್ವರ ಸಾಂಸ್ಕೃತಿಕ ಒಂದು ಅಧ್ಯಯನ	ರಾಜಶ್ರೀ ಇಲ್ಲೂರು	ಅಪ್ರಕಟಿತ		
೧೧	ಆಕರ	ಡಾ :ಬಸವಲಿಂಗ ಸೊಪ್ಪಿಮಠ	೧೯೯೯	ಪರಿಸರದ ಶರಣರ ಭಾಗಶಃ ಮಾಹಿತಿಗಳು	ವೀರಶೈವ ಸಂಪುಟ೧

ಪರಿಶಿಷ್ಟಗಳು

೧) ಶರಣರ ಕುರಿತ ಛಾಯಾಚಿತ್ರಗಳು ಹಾಗೂ ನೆರಳಚ್ಚು ಪ್ರತಿಗಳು

೨) ನಕಾಶೆಯೊಂದಿಗೆ ಶರಣರ ಸ್ಥಳಗಳ ಗುರುತು ಮಾಡುವಿಕೆ ಮತ್ತು ಕಿರು ಮಾಹಿತಿ

೩) ಅಧ್ಯಯನಕ್ಕೆ ಬಳಸಿ ಕೊಂಡ ಆಕರ ಗ್ರಂಥ ಸೂಚಿ

೪) ಕ್ಷೇತ್ರಕಾರ್ಯದಲ್ಲಿ ಮಾಹಿತಿ ನೀಡಿದವರ ಸೂಚಿ

೫) ಅಧ್ಯಯನದಲ್ಲಿ ಬಳಸಿ ಕೊಂಡ ವಚನ , ಸ್ವರ ವಚನ , ತತ್ವ ಪದಗಳ ಅಕಾರಾದಿ

೬) ವಿಶಿಷ್ಟ ಪದ ಸೂಚಿ

೭) ಸ್ಥಳ ಸೂಚಿ

೮) ಕೃತಿ ಸೂಚಿ

೯) ವ್ಯಕ್ತಿ ಸೂಚಿ

೧೦) ಪರಿಸರದ ಶರಣರ ಅಂಕಿತನಾಮ ಸೂಚಿ

೧) ಶರಣರ ಕುರಿತ ಛಾಯಾಚಿತ್ರಗಳು ಹಾಗೂ ನೆರಳಚ್ಚು ಪ್ರತಿಗಳು

ಕ್ರಮಸಂಖ್ಯೆ	ವಿವರ	ಸ್ಥಳ
೧	ಶರಣ ಆದಯ್ಯರ ಸಮಾಧಿ ಸ್ಥಳ	ಅಮರೇಶ್ವರ
೨	ಶರಣೆ ಮಾಳಗುಂಡಮ್ಮರ ಸಮಾಧಿ ಸ್ಥಳ	ಅಮರೇಶ್ವರ
೩	ಮಳೇಸ್ವಾಮಿಗಳ ಸಮಾಧಿ ಸ್ಥಳ	ಅಮರೇಶ್ವರ
೪	ಅಮರೇಶ್ವರ ಲಿಂಗ	ಅಮರೇಶ್ವರ
೫	ಶರಣ ಗೊಬ್ಬೂರು ಬಿಬ್ಬಿ ಬಾಚಯ್ಯರ ಅರ್ಪಣ ಕಟ್ಟೆ-ಸಮಾಧಿ	ಗೊಬ್ಬೂರು
೬	ಶರಣೆ ಮುಕ್ತಾಯಕ್ಕರ ಸಮಾಧಿ ಸ್ಥಳ	ಮಸರಕಲ್
೭	ಶರಣ ಅಜಗಣ್ಣರ ಸಮಾಧಿ ಸ್ಥಳ	ಮಸರ ಕಲ್
೮	ಶರಣ ಅಜಗಣ್ಣರ ಸಮಾಧಿ ಬೆಟ್ಟ (ಊಹೆ)	ಮಸರ ಕಲ್
೯	ಶರಣೆ ಮುಕ್ತಾಯಕ್ಕರ ಬೆಟ್ಟ	ಮಸರಕಲ್
೧೦	ಶರಣ ಸುಂಕದ ಬಂಕಣ್ಣರ ಸಮಾಧಿ ಸ್ಥಳ	ಮಲ್ಲಟ
೧೧	ಉಳಿಮೇಶ್ವರ ಲಿಂಗವಿದ್ದ ಸ್ಥಳ (ಗುಡಿಕಣ)	ಉಳಿಮೇಶ್ವರ
೧೨	ಶರಣ ಉಳಿಮೇಶ್ವರ ಚಿಕ್ಕಯ್ಯರ ಸಮಾಧಿ ಸ್ಥಳ	ಉಳಿಮೇಶ್ವರ
೧೩	ಶರಣ ಅಗ್ಘವಣಿ ಹಂಪಯ್ಯರ ಸಮಾಧಿ ಸ್ಥಳ	ಮುಕ್ಕುಂದಿ
೧೪	'ಹೇಮಗಲ್ಲ' ಎಂಬ ಹೆಸರಿರುವ ಗುಂಡುಕಲ್ಲು ಶಾಸನ	ಹೇಮನೂರು
೧೫	ಶರಣ ಹೇಮಗಲ್ಲ ಹಂಪರ ಸಮಾಧಿ ಸ್ಥಳ	ಹೇಮನೂರು
೧೬	ಶರಣ ಚಿದಾನಂದಾವಧೂತರು ಪ್ರವಚನ ಮಾಡುತ್ತಿದ್ದ ಸ್ಥಳ	ಅಂಭಾಮಠ
೧೭	ಶರಣ ಚಿದಾನಂದಾವಧೂತರ ಸಮಾಧಿ ಸ್ಥಳ	ಅಂಭಾಮಠ
೧೮	ಶರಣ ಗೊಬ್ಬೂರು ಹಂಪಣ್ಣರ ಸಮಾಧಿ ಸ್ಥಳ	ಗೊಬ್ಬೂರು
೧೯	ಶರಣ ನೀರಲಕೇರಿ ಬಸವಲಿಂಗ ಶರಣ ಸಮಾಧಿ ಸ್ಥಳ	ಐದನಾಳ
೨೦	ಶರಣ ಘನಮಠ ನಾಗಭೂಷಣರ ಸಮಾಧಿ ಸ್ಥಳ	ಸಂತೆಕೆಲ್ಲೂರು
೨೧	ಶರಣ ಬೂದಿ ಬಸವೇಶ್ವರ ಸ್ವಾಮಿಗಳ ಸಮಾಧಿ ಸ್ಥಳ	ಗೊಬ್ಬೂರು
೨೨	ಶರಣ ಶಾಂತಮೂರ್ತಿ ಸ್ವಾಮಿಗಳ ಸಮಾಧಿ ಸ್ಥಳ	ಗೊಬ್ಬೂರು
೨೩	ಬಲ್ಲಟಗಿ ಶರಣ ಸಮಾಧಿ ಸ್ಥಳಗಳು	ಬಲ್ಲಟಗಿ
೨೪	ಶರಣ ಹಟ್ಟಿ ಲಿಂಗಾವಧೂತರ ಸಮಾಧಿ ಸ್ಥಳ ಹಾಗೂ ಕಲ್ಪಿತ ವರ್ಣಚಿತ್ರ	ಹಟ್ಟಿ ಚಿನ್ನದ ಗಣಿ
೨೫	ದೇವಭೂಪುರ ಶರಣ ಸಮಾಧಿ	ಅಮರೇಶ್ವರ
೨೬	ಶರಣೆ ಸಜ್ಜಲಗುಡ್ಡ ಶರಣಮ್ಮನವರ ಸಮಾಧಿ ಸ್ಥಳ ಹಾಗೂ ವರ್ಣ ಚಿತ್ರ	ಸಜ್ಜಲಗುಡ್ಡ











௬



௭



௮









௫௧



௫௨



௫௪



௫௩



୮୧



୮୨



୮୩



୮୪



—୨୦



—୨୧



—୨୨



—୨୩







ನೆರಳಚ್ಚು ಪ್ರತಿಗಳು



ಲಿಂಗೈಕ್ಯ ಪರಮ ತಪಸ್ವಿ
ಒಳ ಬಳ್ಳಾರಿ ತಾತನವರು



ಆದಿ ಅಮಾತೆಪ್ಪ
ಶರಣರು

ಕೃಪೆ: ಸ್ಮರಣಸಂಚಿಕೆಗಳು.


ನೆರಳಚ್ಚು ಪ್ರತಿಗಳು



ಶ್ರೀ ಜಡೆಯಶಂಕರ ದೇವಾಲಯ, ನವಿಲೆ. ತಾ. ಲಿಂಗಸಗೂರ, ಜಿ. ರಾಯಚೂರ



ನವಿಲೆಯ ಶ್ರೀ ಜಡೆಯಶಂಕರಲಿಂಗದ ಹಿಂಭಾಗ
(ಲಿಂಗದ ನೆತ್ತಿಯಿಂದ ಬಿಡಿಸಲಾಗದ ಜಡೆಗಳು ಗಮನಾರ್ಹ)



ಕೂಡಲೂರು (ತಾ॥ ಯಾದಗಿರಿ) ಗ್ರಾಮದ ತಿಪ್ಪಣಪ್ಪ ಅವರ ಮನೆಯಲ್ಲಿರುವ ಬಸವಲಿಂಗಪ್ಪನವರ ಗದ್ದುಗೆ



ಖಾನಾಪುರ (ತಾ॥ ದೇವದುರ್ಗ) ಗ್ರಾಮದ ಕೆರೆಯ ದಂಡೆಯ ಬಳಿ ಇರುವ ಕೂಡಲೂರು ಬಸವಲಿಂಗಪ್ಪನವರ ಸಮಾಧಿ.

೨) ನಕಾಶೆಯೊಂದಿಗೆ ಶರಣರ ಸ್ಥಳಗಳ ಗುರುತು ಮಾಡುವಿಕೆ ಮತ್ತು ಕಿರು ಮಾಹಿತಿ (ಶರಣರಿಗೆ ಅನ್ವಯಿಸಿ)

ಕ್ರಮ ಸಂಖ್ಯೆ	ಸ್ಥಳ	ತಾಲೂಕು	ಸ್ಥಳದ ಬಗ್ಗೆ ಕಿರು ಮಾಹಿತಿ
೧	ಗಬ್ಬೂರು (ಗೊಬ್ಬೂರು)	ದೇವದುರ್ಗ	ಬಿಬ್ಬಿ ಬಾಚರಯ್ಯರ ಸಮಾಧಿ- ಅರ್ಪಣಕಟ್ಟೆ, ಹಂಪಣ್ಣ, ಬೂದಿ ಬಸವ, ಶಾಂತಮೂರ್ತಿ, ಮಠ, ಮಾರ್ತಂಡಪ್ಪರ ನೆಲೆ, ಶ್ರೀಚೆನ್ನವೀರ ಶರಣರ ನೆಲೆ.
೨	ಮಸರಕಲ್ (ಮೊಸಳಿಕಲ್)	"	ಅಜಗಣ್ಣ -ಮುಕ್ತಾಯಕ್ಕ ಸಮಾಧಿ ಸ್ಥಳ, ಸಂಬಂಧಿಕರ ಮನೆ ಇದೆ. ಬೆಟ್ಟದಮೇಲೆ ಶರಣರಿಗೆ ಸಂಬಂಧಿಸಿ ಹಲವು ಮಾಹಿತಿಗಳಿವೆ.
೩	ಹೇಮನೂರು (ಹೇಮಗಲ್ಲು)	"	ಹೇಮಗಲ್ಲಿನ ಹೆಸರನ್ನು ಸೂಚಿಸುವ ಶಾಸನ, ಶರಣರ ಹಂಪರ ಬಗ್ಗೆ ಮಾಹಿತಿ ಸಮಾಧಿ, ಮಠದ ಅವಶೇಷಗಳಿವೆ.
೪	ಜಾಲಹಳ್ಳಿ (ಚಪ್ಪಳಕ್ಕಿ	"	ಜಯಶಾಂತ ಲಿಂಗ ಶರಣರ ಸಮಾಧಿ, ಮಠವಿದೆ.
೫	ಗಲಗ	"	ಜಲದುರ್ಗ, ಗಲಗ ಶರಣ ಪರಂಪರೆಯ ಸಮಾಧಿಗಳಿವೆ. ವಚನಗಳನ್ನು ವಾಚಿಸುವವಿಶಿಷ್ಟ ಸಂಪ್ರದಾಯ ಇಲ್ಲಿ ನಡೆಯುತ್ತದೆ.
೬	ದೇವದುರ್ಗ	"	ಆದಿ ಅಮಾತೆಪ್ಪ ಶರಣರ ಮನೆ ಇದೆ. ವಂಶಜರಿದ್ದಾರೆ. ಸಮಾಧಿಯಿದೆ.
೭	ನಾಗೋಲಿ	"	ಹನುಮಯ್ಯ, ಮಠದಪ್ಪಯ್ಯ ಶರಣ ಮಾಹಿತಿ, ಸಮಾಧಿಗಳಿವೆ.
೮	ಖಾನಾಪುರ	"	ಕೂಡಲೂರು ಬಸವಲಿಂಗ ಶರಣರ ಸಮಾಧಿಇದೆ. ಮಾಹಿತಿ ದೊರಕುತ್ತವೆ.
೮	ಜಾಗಟಗಲ್	"	ವಿರೂಪಾಕ್ಷಯ್ಯ ಸ್ವಾಮಿಗಳ ನೆಲೆ
೯	ಗೂಗಲ್ಲ	"	ಅಲ್ಲಮ ಪ್ರಭುಗಳ ನೆಲೆ, ಪರಪ್ಪಯ್ಯರ ಬಗ್ಗೆ ಮಾಹಿತಿಗಳಿವೆ.

ಮೇಲಿನ ಎಲ್ಲಾ ಸ್ಥಳಗಳು ತಾಲೂಕ ಕೇಂದ್ರದಿಂದ ೩೦ ಕಿ.ಮೀ. ಅಂತರದಲ್ಲಿದ್ದು ಸಾರಿಗೆ ವ್ಯವಸ್ಥೆಯಿದೆ.

೧೦	ನಾರದಗಡ್ಡೆ	ರಾಯಚೂರು	ಚೆನ್ನ ಬಸವ ಸ್ವಾಮಿಗಳ ನೆಲೆ - ಮಠವಿದೆ.
೧೧	ಬಿಚ್ಚಾಲಿ	"	ಶ್ರೀ ಮಹಾಂತೇಶ್ವರರ ಸಮಾಧಿ- ಮಠವಿದ
೧೨	ವೆಂಕಟಾಪುರ	"	ಖೇಮಣ್ಣ ಶರಣರ ಸಮಾಧಿ ಇದೆ. ಮಾಹಿತಿಗಳಿವೆ
೧೩	ಹೊಸಪೇಟೆ	"	ಅಯ್ಯಪ್ಪ ಪಂಥೋಜಿ ಸಮಾಧಿ ಇದೆ. ಮಾಹಿತಿಗಳಿವೆ
೧೪	ದಿನ್ನಿ	"	ತಾಳಪ್ಪಲ್ಲಿ ವೆಂಕಯ್ಯರ ಮಾಹಿತಿಗಳಿವೆ. ವಂಶಜರ ಮನೆಗಳಿವೆ. ಸಮಾಧಿ ಇದೆ.
೧೫	ಕೊರ್ವಿಹಾಳ	"	ಮಾರ್ತಂಡಪ್ಪನ ಸಮಾಧಿ ಇದೆ.
೧೬	ರಾಯಚೂರುಮ	"	ಹನುಮಂತವ್ವ, ಯರಮಾರೆಪ್ಪ, ಹೊಸೂರು ತಿಪ್ಪಣ್ಣ, ಹನುಮಂತ ರಾವ್ ಇವರ ಬಗ್ಗೆ ಮಾಹಿತಿಗಳು ಇವೆ.
೧೭	ಕಲಮಾಲಾ (ಕಲ್ಮಲಾ)	"	ಕರಿಯಪ್ಪ ತಾತನ ಬಗ್ಗೆ ಮಾಹಿತಿ, ಸಮಾಧಿ ಇದೆ
೧೮	ದೇವಸೂಗೂರು	"	ಶ್ರೀ ಚೆನ್ನ ವೀರ ಶರಣರ ನೆಲೆ, ಮಂದಿರ ವಿದೆ. ಮಾಹಿತಿಗಳು ಇವೆ.

ಮೇಲಿನ ಎಲ್ಲಾ ಸ್ಥಳಗಳು ಜಿಲ್ಲಾ ಕೇಂದ್ರ ರಾಯಚೂರಿನಿಂದ ಸುಮಾರು ೨೦ ಕಿ.ಮೀ. ಅಂತರದಲ್ಲಿದ್ದು ಉತ್ತಮ ಸಾರಿಗೆ ವ್ಯವಸ್ಥೆ ಹೊಂದಿವೆ.

ಕ್ರಮ ಸಂಖ್ಯೆ	ಸ್ಥಳ	ತಾಲೂಕು	ಸ್ಥಳದ ಬಗ್ಗೆ ಕಿರು ಮಾಹಿತಿ
೧೯	ಹೀರಾ	ಮಾನವಿ	ಶರಣರಾದ ರಾಮಚಂದ್ರಪ್ಪ - ರಂಗಮ್ಮ ದಂಪತಿಗಳ, ಚೆನ್ನಪ್ಪ, ವೀರನಗೌಡ ಮುಂತಾದ ಶರಣರ ಸಮಾಧಿಗಳಿವೆ. ಸಿದ್ಧರಾಮೇಶ್ವರ ಹೆಸರಿನ ಮಠವಿದೆ.
೨೦	ಮಲ್ಲಟ	,,	ಸುಂಕದ ಬಂಕಣ್ಣನ ಸಮಾಧಿ, ಅಲ್ಲಮ ಪ್ರಭುವಿನ ನೆಲೆ, ಶಾಸನಗಳಿವೆ. ಮಾಹಿತಿಗಳಿವೆ.
೨೧	ಪಾಮನ ಕಲ್ಲೂರು	,,	ಒಳಬಳ್ಳಾರಿ ಚೆನ್ನ ಬಸವ ಶರಣರ ಜನ್ಮ ಸ್ಥಳ - ಮಾಹಿತಿಗಳಿವೆ.
೨೨	ಕವಿತಾಳ	,,	ಶರಣರ ಸಮಾಧಿಗಳಿವೆ. ಮಠವಿದೆ.
೨೩	ಬಲ್ಲಟಗಿ	,,	ಶರಣರ ಸಮಾಧಿಗಳಿವೆ. ಮಠವಿದೆ.
೨೪	ನವಲಕಲ್	,,	ಶರಣರ ಸಮಾಧಿಗಳಿವೆ. ಮಠವಿದೆ
೨೫	ಸಿರವಾರ	,,	ಜಲದುರ್ಗ ಶರಣರ ಪರಿಸರದ ಪರಮಾನಂದ ಪ್ರಭುಗಳ ನೆಲೆಯಿದೆ.
೨೬	ಕಲ್ಲೂರು	,,	ಅಡವೀಶ ಶರಣರ ಬಗ್ಗೆ ಮಾಹಿತಿಗಳಿವೆ.
ಮೇಲಿನ ಎಲ್ಲಾ ಸ್ಥಳಗಳು ತಾಲೂಕ ಕೇಂದ್ರದಿಂದ ಸುಮಾರು ೪೦ ಕಿ.ಮೀ. ಅಂತರದಲ್ಲಿದ್ದು ಸಾರಿಗೆ ವ್ಯವಸ್ಥೆ ಇದೆ.			
೨೮	ಅಂಬಾಮಠ	ಸಿಂಧನೂರು	ಚಿದಾನಂದಾವಧೂತರ ನೆಲೆ, ಪ್ರವಚನ ಸ್ಥಳದ ಕುರುಹುಗಳಿವೆ.
೨೯	ಹುಡಾ	,,	ಭೈರವೇಶ್ವರನ ಗುಡ್ಡ - ಗುಡಿ ಇದೆ.
೩೦	ದೇವರ ಗುಡಿ- ಮಲ್ಲಾಪುರ	,,	ಶಾಸನಗಳಿವೆ. ಮಲ್ಲಿಕಾರ್ಜುನ ದೇವಾಲಯವಿದೆ. ಚಿಕ್ಕಯ್ಯ ಪಂಡಿತನ ಮಾಹಿತಿಗಳಿವೆ.
೩೧	ಉಟಕನೂರು	,,	ಬಸವಲಿಂಗ ಶರಣರ ಮಾಹಿತಿಗಳಿವೆ.
೩೨	ಬಳಗಾನೂರು	,,	ಮರಿಬಸವ ಸ್ವಾಮಿಗಳ ಮಾಹಿತಿಗಳಿವೆ. ಮಠವಿದೆ.
೩೩	ಸಿದ್ದರಾಮಪುರ	,,	ವಿರೂಪಯ್ಯ ಶರಣರ ಮಾಹಿತಿಗಳಿವೆ.
೩೪	ಮುಕ್ಕುಂದಿ	,,	ಅಗ್ಘವಣಿ ಹಂಪಯ್ಯರ ಸಮಾಧಿ. ಶಾಸನ, ಅನೇಕ ಮಾಹಿತಿಗಳಿವೆ.
೩೫	ಒಳಬಳ್ಳಾರಿ	,,	ಚೆನ್ನ ಬಸವ ಶರಣರ ಸಮಾಧಿ ಇದೆ. ಮಠವಿದೆ. ಮಾಹಿತಿಗಳಿವೆ.
ಮೇಲಿನ ಎಲ್ಲಾ ಸ್ಥಳಗಳು ತಾಲೂಕ ಕೇಂದ್ರದಿಂದ ೪೦ ಕಿ.ಮೀ. ಅತಂರದಲ್ಲಿದ್ದು ಸಾರಿಗೆ ವ್ಯವಸ್ಥೆ ಇದೆ.			
೩೬	ಹಟ್ಟಿ(ಚಿನ್ನದಗಣಿ)	ಲಿಂಗಸೂಗೂರು	ಲಿಂಗಾವಧೂತರ ಸಮಾಧಿ. ಮಂದಿರ - ಮಾಹಿತಗಳಿವೆ.
೩೭	ಲಿಂಗಸೂಗೂರು	,,	ಶಾಂತಾಶ್ರಮ. ಸರ್ಜಾಪುರ, ನೀರಲಕೇರಿ, ಸಜ್ಜಲಗುಡ್ಡ ಶರಣರ ಬಗ್ಗೆ ಮಾಹಿತಿಗಳಿವೆ.
೩೮	ಅಮರೇಶ್ವರ	,,	ಆಯ್ದಕ್ಕಿ ದಂಪತಿಗಳ ನೆಲೆ, ಆದಯ್ಯ - ಮಾಳಗುಂಡಮ್ಮರ ಸಮಾಧಿ, ಕಾರಣಿಕ ಬಾಲಕ ಅಮರೇಶ್ವರನ ಕ್ಷೇತ್ರವಾಗಿದೆ. ಭೂಪುರ ಶರಣರ ಸಮಾಧಿಗಳಿವೆ. ಪುರದ ನಾಗಣ್ಣನ ಬಗ್ಗೆ ಮಾಹಿತಿ. ಐತಿಹಾಸಿಕ ಸ್ಮಾರಕ - ಅವಶೇಷಗಳಿವೆ.
೩೯	ಜಲದುರ್ಗ	,,	ಕೊಡೇಲ್ ಬಸವಣ್ಣ ಹಾಗೂ ಅವರ ಪರಿವಾರದ ನೆಲೆ, ಐತಿಹಾಸಿಕ ಮಾಹಿತಿಗಳಿವೆ.
೪೦	ಕರಡಕಲ್(ಕರಡಿಕಲ್)	,,	ಬಿಲ್ಲಮ ರಾಯ - ಶಿವಜಾತ ಒಡೆಯರ ನೆಲೆಯಾಗಿದೆ. ಸ್ಮಾರಕ ಅವಶೇಷಗಳಿವೆ.

ಕ್ರಮ ಸಂಖ್ಯೆ	ಸ್ಥಳ	ತಾಲೂಕು	ಸ್ಥಳದ ಬಗ್ಗೆ ಕಿರು ಮಾಹಿತಿ
೪೧	ನವಲಿ(ನವಿಲೆ)	ಲಿಂಗಸೂಗೂರು	ಶಂಕರ ದಾಸಿಮಯ್ಯರ ನೆಲೆ, ಜಡೆಯ ಶಂಕರನ ದೇವಸ್ಥಾನವಿತ್ತು. ಪ್ರಸ್ತುತ ಈ ಐತಿಹಾಸಿಕ ಪ್ರದೇಶಗಳು ಕೃಷ್ಣಾನದಿಯಿಂದ ಜಲಾವೃತವಾಗಿವೆ.
೪೨	ಚಿತ್ತಾಪುರ	''	ಢಕ್ಕೆಯ ಮಾರಯ್ಯನ ಸ್ಥಳವಾಗಿದೆ. ಪ್ರಸ್ತುತ ಜಲಾವೃತವಾಗಿದೆ.
೪೩	ಗೌಡೂರು	''	ಢಕ್ಕೆಯ ಮಾರಯ್ಯರ ಆರಾಧ್ಯದೈವದ ಸ್ಥಳವೆಂದು ಗುರುತಿಸಲಾಗಿದೆ.
೪೪	ಯರಡೋಣಾ(ಎರಡೋಣಿ)	''	ಆದಯ್ಯ -ಮಾಳಗುಂಡಮ್ಮರ ಹಳೆಯ ಮನೆಯ ಪರಿವರ್ತನೆಯಾದ ಸ್ಥಳ.
೪೫	ಸಜ್ಜಲಗುಡ್ಡ	''	ಶರಣಮ್ಮನವರ ಸಮಾಧಿ ಸ್ಥಳ
೪೬	ಅಂಕಲಿಮಠ	''	ನಿರೂಪಾದಿ ಶರಣರಹಾಗೂ ಆತನ ಪರಿವಾರದ ಶರಣರ ನೆಲೆಯಾಗಿದೆ.
೪೭	ದೇವರಭೂಪುರ	''	ಶರಣರ ನೆಲೆ, ಮಠವಿದೆ.
೪೮	ಮೇಧಾವಿ ರಾಯನಕೋಠಾ	''	ಅಡವೀಶಾರಾಧ್ಯರ ನೆಲೆಯಾಗಿದೆ. ಹನುಮಂತರಾವ್‌ರ ದೀಕ್ಷಾ ಸ್ಥಳವಾಗಿದೆ.
೪೯	ಮುದಗಲ್ಲು	''	ಗ್ಯಾನಪ್ಪಯ್ಯರ ಸಮಾಧಿ ಸ್ಥಳವಾಗಿದೆ.
೫೦	ಸಂತೆಕೆಲ್ಲೂರು	''	ಘನಮಠ ನಾಗಭೂಷಣ ಶರಣರ ಸಮಾಧಿ ಇದೆ. ಮಠವಿದೆ.
೫೧	ಐದನಾಳ	''	ನೀರಲಕೇರಿ ಬಸವಲಿಂಗ ಶರಣರ ಸಮಾಧಿ, ಮಠವಿದೆ.
೫೨	ಯಲಗಟ್ಟಾ	''	ಆಯ್ದಕ್ಕಿ ದಂಪತಿಗಳ ಮೂಲ ಸ್ಥಳ, ವಡಕಿತಾತಪ್ಪಯ್ಯರ ಸಮಾಧಿ ಇದೆ.
೫೩	ಉಳಿಮೇಶ್ವರ	''	ಚಿಕ್ಕಯ್ಯರ (ಚಿಕ್ಕಣ್ಣ) ಸಮಾಧಿ ಸ್ಥಳ, ಶಾಸನ, ಉಳಿಮೇಶ್ವರ ಲಿಂಗದ ಅವಶೇಷ
೫೪	ಸರ್ಜಾಪುರ	''	ಚೆನ್ನ ಬಸವ ಶರಣರ ಸಮಾಧಿ ಸ್ಥಳವಾಗಿದೆ.
೫೫.	ಕಳ್ಳಿ ಲಿಂಗಸೂಗೂರು	''	ನಾಗಪ್ಪ ಶರಣರ ಮಾಹಿತಿಗಳಿವೆ.
ಮೇಲಿನ ಎಲ್ಲಾ ಸ್ಥಳಗಳು ತಾಲೂಕ ಕೇಂದ್ರದಿಂದ ೨೫ ಕಿ.ಮೀ. ಅಂತರದಲ್ಲಿದ್ದು ಸಾರಿಗೆ ವ್ಯವಸ್ಥೆ ಇದೆ.			

ಈ ಮೇಲೆ ಸೂಚಿಸಿದ ಸ್ಥಳಗಳಲ್ಲದೇ ಈ ಪರಿಸರವನ್ನು ಹೊರತು ಪಡಿಸಿ ಕೊಪ್ಪಳ ಜಿಲ್ಲೆಯ ಕನಕಗಿರಿಯಲ್ಲಿ ಚಿದಾನಂದಾವ ಧೂತರ ಜೀವಂತ ಸಮಾಧಿ ಇದೆ . ಕಲಬುರ್ಗಿ ಜಿಲ್ಲೆ ಯಾದಗಿರಿ ತಾಲೂಕಿನ ಬಳಿಚಕ್ರ ಕೂಡಲೂರು ಬಸವಲಿಂಗ ಶರಣರ ಜನ್ಮ ಸ್ಥಳವಾಗಿದೆ. ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಗೂಡೂರು ನೀರಲಕೇರಿ ಬಸವಲಿಂಗ ಶರಣರ ಜನ್ಮಸ್ಥಳವಾಗಿದೆ. ಆಂಧ್ರ ಪ್ರದೇಶದ ದೂರವಾಡ ಘನಮಠ ಶರಣರ ಜನ್ಮ ಸ್ಥಳವಾಗಿದೆ. ಇದಲ್ಲದೇ ಈ ಪರಿಸರದ ಶರಣರಿಗೆ ಸಂಬಂಧಿಸಿ ಬೆಳಗಾವಿ, ಕಲಬುರ್ಗಿ, ಬೀದರ, ಬಳ್ಳಾರಿ, ಗೋವಾ, ವಿಜಾಪುರ ಮುಂತಾದ ಜಿಲ್ಲೆಯ ಕೆಲವು ಸ್ಥಳಗಳಲ್ಲಿ ಮಾಹಿತಿಗಳು ಕಂಡು ಬರುತ್ತವೆ.

೩) ಅಧ್ಯಯನಕ್ಕೆ ಬಳಸಿ ಕೊಂಡ ಆಕರ ಗ್ರಂಥ ಸೂಚಿ (ಕನ್ನಡ ಗ್ರಂಥಗಳು)

ಕ್ರಮ ಸಂಖ್ಯೆ	ಗ್ರಂಥಗಳಹೆಸರು	ಲೇಖಕ / ಸಂಪಾದಕ(ಸಂ)	ಪ್ರಕಟಿತ ವರ್ಷ	ಪ್ರಕಾಶಕರು	ಗ್ರಂಥದ ಸಂಕ್ಷೇಪ ಸೂಚಿ
೧	ಅದೃಶ್ಯ ಕವಿಯ ಪ್ರೌಢದೇವರಾಯನ ಕಾವ್ಯ	ಸಂ: ಎಸ್. ಎಸ್. ಭೂಸನೂರು ಮಠ	೧೯೫೭	ಮುರುಘಾ ಮಠ ಧಾರವಾಡ	ಅ.ಪ್ರೌ.ಕಾ.
೨	ಅಂಬಿಗರ ಚೌಡಯ್ಯನ ವಚನಗಳು	ಸಂ: ಡಾ: ಎಸ್. ವಿದ್ಯಾಶಂಕರ			ಅಂ.ಚೌ.ವ.
೩	ಅಲ್ಲಮನ ವಚನ ಚಂದ್ರಿಕೆ	ಸಂ: ಡಾ: ಎಲ್. ಬಸವರಾಜ	೧೯೬೦	ಗೀತಾ ಬುಕ್ ಹೌಸ್ ಮೈಸೂರು	ಅ.ವ.ಚಂ.
೪	ಆಕರ	ಡಾ : ಬಸವಲಿಂಗ ಸೊಪ್ಪಿಮಠ	೧೯೯೫ ಜುಲೈ	ಕರ್ನಾಟಕ ಇತಿಹಾಸ ಅಕಾಡೆಮಿ ರಾಯಚೂರು	ಆ.
೫	ಆಧುನಿಕ ಭಾರತ ಇತಿಹಾಸ	ಡಿ. ಟಿ. ಜ್ಯೋಷಿ	೧೯೮೯	ವಿದ್ಯಾನಿಧಿ ಪ್ರಕಾಶನ ಗದಗ	ಆ.ಭಾ.ಇ.
೬	ಆಯ್ದಕ್ಕಿ ಮಾರಯ್ಯ ದಂಪತಿಗಳು	ಶಾಂತರಸ	೧೯೭೬	ಐ. ಬಿ. ಹೆಚ್. ಪ್ರಕಾಶನ ಬೆಂಗಳೂರು.	ಆ.ಮಾ.ದಂ.
೭	ಆರನೇ ವಿಕ್ರಮಾದಿತ್ಯನ ಶಾಸನಗಳು	ಡಾ : ಜಿ. ನಾಗಯ್ಯ		ವೀರಶೈವ ಅಧ್ಯಯನ ಅಕಾಡೆಮಿ ಬೆಳಗಾವಿ	ಆ.ವಿ.ಶಾ.
೮	ಉತ್ತರ ದೇಶದ ಬಸವಲಿಂಗ ವಿರಚಿತ ಭೈರವೇಶ್ವರ ಕಾವ್ಯದ ಕಥಾಸಾಗರ ಮತ್ತು ಉಚಿತ ಕಥೆಗಳು	ಸಂ: ಎಸ್. ಉಮಾಪತಿ	೨೦೦೦ ಏಪ್ರೀಲ್	ವೀರಶೈವ ಅಧ್ಯಯನ ಸಂಸ್ಥೆ ಗದಗ	ಉ.ಬ.ಭೈ.ಉ.
೯	ಉರಿಬರಲಿ ಸಿರಿ ಬರಲಿ	ಡಾ : ಆರ್. ಸಿ. ಹಿರೇಮಠ		ವೀರಶೈವ ಅಧ್ಯಯನ ಅಕಾಡೆಮಿ ಬೆಳಗಾವಿ	ಉ.ಸಿ.
೧೦	ಋಗ್ವೇದ ಸಂಹಿತಾ ಭಾಗ-೨೯	ಸಂ : ಎಚ್. ಪಿ. ವೆಂಕಟರಾವ್		ಶ್ರೀ ಜಯಚಾಮರಾಜೇಂದ್ರ ವೇದರತ್ನ ಮಾಲಾ	ಋ.ಸಂ.
೧೧	ಎಡೆದೊರೆ ನಾಡಿನ ಅನುಭಾವಿ ಕವಿಗಳು	ಶಾಂತರಸ	೧೯೭೩ ಜೂನ್	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ	ಎ.ಅ.ಕ.
೧೨	ಎಳಂದೂರು ಹರೀಶ್ವರನ ಪ್ರಭುದೇವರ ಪುರಾಣ	ಸಂ : ಬುದ್ದಯ್ಯ ಸ್ವಾಮಿ ಪುರಾಣಿಕ	೧೯೪೦	ಧಾರವಾಡ	ಎ.ಹ.ಪ್ರ.ಪು.
೧೩	ಕನ್ನಡ ತತ್ವಪದಕಾರರು	ವಿವಿಧ ಲೇಖಕರು	೧೯೯೩	ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು	ಕ.ತ.
೧೪	ಕನ್ನಡ ರತ್ನ ಕೋಶ		೧೯೯೪	ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು	ಕ.ರ.ಕೋ.

ಸಂಖ್ಯೆ			ವರ್ಷ		
೧೫	ಕನ್ನಡ ಸಾಹಿತ್ಯ ಮತ್ತು ಸಂಘರ್ಷ	ನಾಹೀರಾ	ಅಪ್ರಕಟಿತ		ಕ.ಸಾ.ಸಂ.
೧೬	ಕನ್ನಡ ಸಾಹಿತ್ಯದಲ್ಲಿ ಚರಿತ್ರೆ ಮತ್ತು ಪುರಾಣ	ವಿವಿಧ ಲೇಖಕರು	೧೯೯೩	ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು	ಕ.ಸಾ.ಚ.ಪು.
೧೭	ಕರ್ನಾಟಕ ಇತಿಹಾಸ ಪರಿಚಯ	ಪಾಲಾಕ್ಷ	೧೯೯೮		ಕ.ಇ.ಪ.
೧೮	ಕವಿ ಚರಿತೆ ಸಂಪುಟ೧-೨-೩	ಆರ್.ನರಸಿಂಹಾಚಾರ್	೧೯೬೧		ಕ.ಚ.ಸಂ.
೧೯	ಕಿಕ್ಕೇರಿ ಯಾರಾಧ್ಯ ನಂಜುಂಡ ಕವಿಯ ಭೈರವೇಶ್ವರ ಕಾವ್ಯ	ಸಂ: ಶ್ರೀ ಶಿವ ಬಸವ ಸ್ವಾಮಿಗಳು	೧೯೫೪	ಶಿವ ಶರಣ ವಾಙ್ಮಯ ಪ್ರಕಾಶನ ಕಾರ್ಯಾಲಯ ಮೈಸೂರು	ಕಿ.ನಂ.ಭೈ.ಕಾ.
೨೦	ಕೂಡಲೂರು ಬಸವಲಿಂಗಪ್ಪ	ಆಯ್ಕೆ: ಎಸ್.ಜಿ.ಸ್ವಾಮಿ	೧೯೯೬	ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು	ಕೂ.ಬ.
೨೧	ಕೂಡಲೂರು ಬಸವಲಿಂಗ ಶರಣರ ಸ್ವರ ವಚನಗಳು	ಸಂ: ಶಾಂತರಸ	೧೯೮೩	ವೀರಶೈವ ಅಧ್ಯಯನ ಸಂಸ್ಥೆ ಗದಗ	ಕೂ.ಬ.ಶ.ಸ್ವ.
೨೨	ಕೂಡಲೂರು ಬಸವಲಿಂಗ ಶರಣರು ಒಂದು ಅಧ್ಯಯನ	ಡಾ: ಎಂ.ಜಿ.ಶಾಸ್ತ್ರಿಮಠ	೧೯೮೭	ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡ	ಕೂ.ಬ.ಶ.ಅ.
೨೩	ಕೃಷಿ ಜ್ಞಾನ ಪ್ರದೀಪಿಕೆ	ಘನಮಠ ಶಿವಯೋಗಿಗಳು	೧೯೯೮	ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ	ಕೃ.ಜ್ಞಾ.ಪ್ರ.
೨೪	ಕೃಷಿ ಋಷಿ ಘನಮಠ ಶಿವಯೋಗಿಗಳು	ಸಿ.ಶರಣಪ್ಪ	೧೯೯೧	ಪ್ರಸಾರಾಂಗ ಗುಲಬರ್ಗಾ ವಿಶ್ವ ವಿದ್ಯಾಲಯ ಗುಲಬರ್ಗಾ	ಕೃ.ಘ.ಶಿ.
೨೫	ಕೇಶಿರಾಜನ ಶಬ್ದಮಣಿ ದರ್ಪಣ ಸಂಗ್ರಹ	ಸಂ: ಬಿ.ಟಿ.ಸಾಸನೂರು ಎಂ.ಎಂ. ಕಲಬುರ್ಗಿ	೧೯೮೮ ಜೂನ್	ಸಮಾಜ ಪುಸ್ತಕಾಲಯ ಧಾರವಾಡ	ಕೇ.ಶ.ಸಂ.
೨೬	ಕೈವಲ್ಯ ನವನೀತ	ಆದಿ ಅಮಾತೆಪ್ಪ		ಮಲ್ಲಪ್ಪ ವಿರೂಪಾಕ್ಷಪ್ಪ ಅರಳಿ ಗದಗ	ಕೈ.ನ.
೨೭	ಕೊಡೇಕಲ್ ಬಸವಣ್ಣ ಒಂದು ಅಧ್ಯಯನ	ಡಾ: ಬಸವಲಿಂಗ ಸೊಪ್ಪಿಮಠ	೧೯೯೫	ಕೊಡೇಕಲ್ ಮಠದ ಪ್ರಕಟಣೆ	ಕೊ.ಬ.ಅ.

ಕ್ರಮ ಸಂಖ್ಯೆ	ಗ್ರಂಥಗಳ ಹೆಸರು	ಲೇಖಕ / ಸಂಪಾದಕ(ಸಂ)	ಪ್ರಕಟಿತ ವರ್ಷ	ಪ್ರಕಾಶಕರು	ಗ್ರಂಥದ ಸಂಕ್ಷಿಪ್ತ ಸೂಚಿ
೨೮	ಗುಬ್ಬಿ ಮಲ್ಲಣಾರ್ಯನ ವೀರಶೈವಾಮೃತ ಮಹಾ ಪುರಾಣ ಭಾಗ೧-೨	ಸಂ: ಡಾ: ಆರ್.ಸಿ. ಹಿರೇಮಠ		ಎನ್.ಎಸ್.ಎಸ್.ಕಲ್ಯಾಣ ಕೇಂದ್ರ ಬೆಂಗಳೂರು	ಗು.ವೀ.ಮ.
೨೯	ಗೊಬ್ಬೂರು ಹಂಪಣ್ಣ	ಆಯ್ಕೆ : ರಾಮಸ್ವಾಮಿ ನುಲಿ	೧೯೯೮	ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು	ಗೊ.ಹಂ.
೩೦	ಗೂಳೂರು ಸಿದ್ಧ ವೀರಣ್ಣೊಡೆಯರು ಸಂಗ್ರಹಿದ ಪ್ರಭುದೇವರ ಶೂನ್ಯ ಸಂಪಾದನೆ	ಸಂ : ಸಂ.ಶಿ. ಭೂಸನೂರ ಮಠ	೧೯೯೯	ರಾವೂರ ಸಿದ್ಧಲಿಂಗೇಶ್ವರ ಮಠ ಆದವಾನಿ ಕಲ್ಲು ಮಠ	ಗೂ.ಸಿ.ಪ್ರ.ಶೂ
೩೧	ಘನಮಠನಾಗಭೂಷಣ ಶಿವಯೋಗಿ	ಆಯ್ಕೆ : ಚೆನ್ನ ಬಸಪ್ಪ ಬೆಟ್ಟದೂರು	೧೯೯೮	ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು	ಘ.ನಾ.ಶಿ.
೩೨	ಘನಮಠದಾರ್ಯರ ತತ್ವ ಪದಗಳು ಒಂದು ಅಧ್ಯಯನ	ಕೆ.ಶಶಿಕಾಂತ	೨೦೦೦	ಲಿಂಗಾಯತ ಅಧ್ಯಯನ ಸಂಸ್ಥೆ ವಿರಕ್ತ ಮಠ ದೇಶನೂರು	ಘ.ತ.ಅ.
೩೩	ಘನಮಹಿಮ ಘನಮಠದಪ್ಪ	ಬಿ.ಎಂ. ಹಿರೇಮಠ			
		ಜಿ.ಎಸ್.ಮಾಮನಿ	೧೯೮೬	ಶ್ರೀ ಘನಮಠೇಶ್ವರ ಮಠ ಸಂತೆಕೆಲ್ಲೂರು	ಘ.ಮ.ಘ.
೩೪	ಚಾಮರಸನ ಪ್ರಭುಲಿಂಗಲೀಲೆ	ಪ್ರೊ: ಶಿ.ಶಿ. ಬಸವನಾಳ	೧೯೭೧	ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಧಾರವಾಡ	ಚಾ.ಪ್ರ.
೩೫	ಚಿದಾನಂದವ ಧೂತ	ಆಯ್ಕೆ : ಕೂಡಲಿ ಜಗನ್ನಾಥ ಶಾಸ್ತ್ರಿ	೧೯೯೮	ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು	ಚಿ.ಧೂ.
೩೬	ಚಿದಾವನಂದಧೂತರ ಆಧ್ಯಾತ್ಮ ಜೀವನ	ಎನ್.ಜಿ.ಜಾಡಗೌಡರ್			ಚಿ.ಆ.ಜೀ.
೩೭	ಚೆನ್ನಪ್ಪ ಕವಿಯ ಶರಣಲೀಲಾಮೃತ	ಸಂ: ಶಿವಬಸವ ಸ್ವಾಮಿಗಳು			ಚೆ.ಶ.ಲೀ.

ಸಂಖ್ಯೆ			ವರ್ಷ		
೩೮	ಛಾಂದೋಗ್ಯೋಪ ನಿಷತ್	ಸ್ವಾಮಿ ಆದಿದೇವಾನಂದ	೧೯೮೦	ಶ್ರೀ ರಾಮಕೃಷ್ಣಾಶ್ರಮ ಮೈಸೂರು	ಛಾ. ಉ.
೩೯	ಜಾಲಹಳ್ಳಿ ಶ್ರೀ ಜಯಶಾಂತ ವಿಜಯ	ಬಿ. ಶಿವಶಂಕರ	೧೯೯೮	ಶ್ರೀ ಜಗದಾರಾಧ್ಯ ಜಯಶಾಂತ ಲಿಂಗೇಶ್ವರ ಪ್ರಕಾಶನ ಜಾಲಹಳ್ಳಿ	ಜಾ. ಜ. ಶಾಂ. ವಿ.
೪೦	ಢಕ್ಕೆಯ ಬೊಮ್ಮಣ್ಣ	ಹೆಚ್. ಎಸ್. ಮುಕ್ತಾಯಕ್ಕ	೧೯೮೨	ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡ	ಢ. ಬೊ.
೪೧	ತತ್ವ ಪದ ಕಾರರು (ಪ್ರಾತಿನಿಧಿಕ ಸಂಕಲನ)	ಶಾಂತರಸ	೨೦೦೦	ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು	ತ. ಪ್ರಾ. ಸಂ.
೪೨	ತೋಂಟದ ಸಿದ್ದೇಶ್ವರ ಪುರಾಣ	ಸಂ : ಸಂ. ಶಿ. ಭೂಸನೂರ ಮಠ			ತೋಂ. ಸಿ. ಪು.
೪೩	ದಲಿತವರ್ಗದ ಶರಣರು ಮತ್ತು ಶರಣೆಯರು ಒಂದು ಅಧ್ಯಯನ	ಡಾ : ಮ. ನ. ಜವರಯ್ಯ	೧೯೯೭	ಸಿದ್ಧಾರ್ಥ ಗ್ರಂಥ ಮಾಲೆ ಮೈಸೂರು	ದ. ಶ. ಶ. ಅ.
೪೪	ನೀರಲಕೇರಿ ಬಸವಲಿಂಗ	ಆಯ್ಕೆ : ಗುರುಬಸಯ್ಯ ಅಮ್ಮಾಪುರ	೧೯೯೭	ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು	ನೀ. ಬ
೪೫	ನೀರಲಕೇರಿ ಬಸವಲಿಂಗ ಶಿವಯೋಗಿಗಳ ಸ್ವರವಚನಗಳು	ಸಂ: ಡಾ : ಬಸವಲಿಂಗ ಸೊಪ್ಪಿಮಠ	೧೯೯೯	ವೀರಶೈವ ಅಧ್ಯಯನ ಸಂಸ್ಥೆ ಗದಗ	ನೀ. ಬ. ಶಿ. ಸ್ವ.
೪೬	ಪುರಾಣ	ಓ. ಎಲ್. ನಾಗಭೂಷಣ ಸ್ವಾಮಿ	೧೯೯೩	ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ	ಪುರಾಣ
೪೭	ಪ್ರಾಚೀನಭಾರತದ ಇತಿಹಾಸ	ಡಿ. ಟಿ. ಜೋಷಿ	೧೯೯೦	ವಿದ್ಯಾನಿಧಿ ಪ್ರಕಾಶನ ಗದಗ	ಪ್ರಾ. ಭಾ. ಇ.
೪೮	ಬಸವಪೂರ್ವಯಗದ ಶರಣರು	ಶಾಂತರಸ	೧೯೭೨ ಮಾರ್ಚ	ಸತ್ಯ ಸ್ನೇಹಿ ಪ್ರಕಾಶನ ರಾಯಚೂರು	ಬ. ಪೂ. ಶ.
೪೯	ಬಸವಯುಗದ ವಚನೇತರ ಸಾಹಿತ್ಯ	ಡಾ : ಕೆ. ರವೀಂದ್ರನಾಥ	೧೯೯೯	ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ	ಬ. ವ. ಸಾ.
೫೦	ಬಸವ ಪುರಾಣ	ಸಂ : ಡಾ : ಆರ್. ಸಿ. ಹಿರೇಮಠ	೧೯೭೧	ಶ್ರೀ ಮುರಾಘಾಮಠ ಧಾರವಾಡ	ಬ. ಪು.
೫೧	ಬಸವ ಪುರಾಣ ಕಥಾಸಾಗರ	ಸಂ : ಎಸ್. ಉಮಾಪತಿ	೧೯೭೬	ಕನ್ನಡ ಅಧ್ಯಯನ ಸಂಸ್ಥೆ ಮೈಸೂರುವಿಶ್ವ ವಿದ್ಯಾಲಯ ಮೈಸೂರು	ಬ. ಕ. ಸಾ.
೫೨	ಬಸವಣ್ಣನವರ ವಚನಗಳು	ಸಂ : ಡಾ: ಎಲ್. ಬಸವರಾಜ	೧೯೯೬	ಗೀತಾ ಬುಕ್ ಹೌಸ್ ಮೈಸೂರು	ಬ. ವ.
೫೩	ಬಸವ ರಾಜ ವಿಜಯಂ	ಸಂ : ಡಾ : ಆರ್. ಸಿ. ಹಿರೇಮಠ	೧೯೮೭	ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು	ಬ. ವಿ.

ಸಂಖ್ಯೆ			ವರ್ಷ		
೩೮	ಛಾಂದೋಗ್ಯೋಪನಿಷತ್	ಸ್ವಾಮಿ ಆದಿದೇವಾನಂದ	೧೯೮೦	ಶ್ರೀ ರಾಮಕೃಷ್ಣಾಶ್ರಮ ಮೈಸೂರು	ಛಾ. ಉ.
೩೯	ಜಾಲಹಳ್ಳಿ ಶ್ರೀ ಜಯಶಾಂತ ವಿಜಯ	ಬಿ. ಶಿವಶಂಕರ	೧೯೯೮	ಶ್ರೀ ಜಗದಾರಾಧ್ಯ ಜಯಶಾಂತ ಲಿಂಗೇಶ್ವರ ಪ್ರಕಾಶನ ಜಾಲಹಳ್ಳಿ	ಜಾ. ಜ. ಶಾಂ. ವಿ.
೪೦	ಢಕ್ಕೆಯ ಬೊಮ್ಮಣ್ಣ	ಹೆಚ್. ಎಸ್. ಮುಕ್ತಾಯಕ್ಕ	೧೯೮೨	ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡ	ಢ. ಬೊ.
೪೧	ತತ್ವ ಪದ ಕಾರರು (ಪ್ರಾತಿನಿಧಿಕ ಸಂಕಲನ)	ಶಾಂತರಸ	೨೦೦೦	ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು	ತ. ಪ್ರಾ. ಸಂ.
೪೨	ತೋಂಟದ ಸಿದ್ದೇಶ್ವರ ಪುರಾಣ	ಸಂ: ಸಂ. ಶಿ. ಭೂಸನೂರ ಮಠ			ತೋಂ. ಸಿ. ಪು.
೪೩	ದಲಿತವರ್ಗದ ಶರಣರು ಮತ್ತು ಶರಣೆಯರು ಒಂದು ಅಧ್ಯಯನ	ಡಾ: ಮ. ನ. ಜವರಯ್ಯ	೧೯೯೭	ಸಿದ್ಧಾರ್ಥ ಗ್ರಂಥ ಮಾಲೆ ಮೈಸೂರು	ದ. ಶ. ಶ. ಅ.
೪೪	ನೀರಲಕೇರಿ ಬಸವಲಿಂಗ	ಆಯ್ಕೆ: ಗುರುಬಸಯ್ಯ ಅಮ್ಮಾಪುರ	೧೯೯೭	ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು	ನೀ. ಬ
೪೫	ನೀರಲಕೇರಿ ಬಸವಲಿಂಗ ಶಿವಯೋಗಿಗಳ ಸ್ವರವಚನಗಳು	ಸಂ: ಡಾ: ಬಸವಲಿಂಗ ಸೊಪ್ಪಿಮಠ	೧೯೯೯	ವೀರಶೈವ ಅಧ್ಯಯನ ಸಂಸ್ಥೆ ಗದಗ	ನೀ. ಬ. ಶಿ. ಸ್ವ.
೪೬	ಪುರಾಣ	ಓ. ಎಲ್. ನಾಗಭೂಷಣ ಸ್ವಾಮಿ	೧೯೯೩	ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ	ಪುರಾಣ
೪೭	ಪ್ರಾಚೀನಭಾರತದ ಇತಿಹಾಸ	ಡಿ. ಟಿ. ಜೋಷಿ	೧೯೯೦	ವಿದ್ಯಾನಿಧಿ ಪ್ರಕಾಶನ ಗದಗ	ಪ್ರಾ. ಭಾ. ಇ.
೪೮	ಬಸವಪೂರ್ವಯಗದ ಶರಣರು	ಶಾಂತರಸ	೧೯೭೨ಮಾರ್ಚ	ಸತ್ಯ ಸ್ನೇಹಿ ಪ್ರಕಾಶನ ರಾಯಚೂರು	ಬ. ಪೂ. ಶ.
೪೯	ಬಸವಯುಗದ ವಚನೇತರ ಸಾಹಿತ್ಯ	ಡಾ: ಕೆ. ರವೀಂದ್ರನಾಥ	೧೯೯೯	ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ	ಬ. ವ. ಸಾ.
೫೦	ಬಸವ ಪುರಾಣ	ಸಂ: ಡಾ: ಆರ್. ಸಿ. ಹಿರೇಮಠ	೧೯೭೧	ಶ್ರೀ ಮುರಾಘಾಮಠ ಧಾರವಾಡ	ಬ. ಪು.
೫೧	ಬಸವ ಪುರಾಣ ಕಥಾಸಾಗರ	ಸಂ: ಎಸ್. ಉಮಾಪತಿ	೧೯೭೬	ಕನ್ನಡ ಅಧ್ಯಯನ ಸಂಸ್ಥೆ ಮೈಸೂರುವಿಶ್ವ ವಿದ್ಯಾಲಯ ಮೈಸೂರು	ಬ. ಕ. ಸಾ.
೫೨	ಬಸವಣ್ಣನವರ ವಚನಗಳು	ಸಂ: ಡಾ: ಎಲ್. ಬಸವರಾಜ	೧೯೯೬	ಗೀತಾ ಬುಕ್ ಹೌಸ್ ಮೈಸೂರು	ಬ. ವ.
೫೩	ಬಸವ ರಾಜ ವಿಜಯಂ	ಸಂ: ಡಾ: ಆರ್. ಸಿ. ಹಿರೇಮಠ	೧೯೮೭	ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು	ಬ. ವಿ.

ಸಂಖ್ಯೆ					
೫೪	ಬ್ರಹ್ಮತತ್ವ ರತ್ನಾಕರ	ಸಂ:ಗದ್ವಾಲ ಶಂಕರಪ್ಪ	೧೯೬೩		ಬ್ರ.ರ
೫೫	ಮನುಸ್ಮೃತಿ	ಸಂ: ಈಶ್ವರ ಶಾಸ್ತ್ರಿ		ಸಮಾಜ ಪುಸ್ತಕಾಲ ಧಾರವಾಡ	ಮ.ಸ್ಮೃ.
೫೬	ಮಾರ್ಗ-೧	ಡಾ:ಎಂ.ಎಂ. ಕಲಬುರ್ಗಿ.	೧೯೯೫	ಕರ್ನಾಟಕ ಬುಕ್ ಏಜೆನ್ಸಿ ಬೆಂಗಳೂರು	ಮಾರ್ಗ
೫೭	ರಾಯಚೂರು ಜಿಲ್ಲೆ ಅನುಭಾವಿ ಕವಿಗಳು	ಡಾ: ಬಸವರಾಜ ಸಬರದ	೧೯೯೬	ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ರಾಯಚೂರು	ರಾ.ಜಿ.ಅ.ಕ
೫೮	ಲಿಂಗಾಯತ ಧರ್ಮ ಒಂದು ಅಧ್ಯಯನ-೧	ಡಾ: ಹಿರೇಮಲ್ಲೂರು ಈಶ್ವರನ್	೧೯೯೭	ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು	ಲಿಂ.ಧ.ಅ.
೫೯	ವಚನ ಅಧ್ಯಯನ	ಡಾ: ವೀರಣ್ಣ ರಾಜೂರು	೧೯೯೪	ಜಗದ್ಗುರು ಅನ್ನದಾನೇಶ್ವರ ಸ್ವಾಮಿಗಳು ಮುಂಡರಗಿ	ವ.ಅ.
೬೦	ವಚನಾನುಭವ	ಆರ್.ರಾಚಪ್ಪ	೧೯೯೫	ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು	ವ.
೬೧	ವಚನಕಾರರು ವ್ಯಕ್ತಿ ಅಭಿವ್ಯಕ್ತಿ	ಸಂ: ಮಂಜುನಾಥ-ವೀರಪ್ಪ	೧೯೯೩	ಸರ್ಪಭೂಷಣ ಶಿವಯೋಗಿ ಮಠಬೆಂಗಳೂರು	ವ.ವ್ಯ.ಅ.
೬೨	ವಚನ ಸಾಹಿತ್ಯ	ಡಾ: ಎಂ.ಚಿದಾನಂದ ಮೂರ್ತಿ			ವ.ಸಾ.
೬೩	ವಚನ ಸಾಹಿತ್ಯ ಒಂದು ಪರಿಚಯ	ಡಾ: ಪಿ.ವಿ.ನಾರಾಯಣ	೧೯೯೭	ಅಖಿಲಭಾರತ ಶರಣ ಸಾಹಿತ್ಯ ಪರಿಷತ್ ಮೈಸೂರು	ವ.ಸಾ.ಪ.
೬೪	ವಚನಧರ್ಮ ಸಾರ	ಎಂ.ಆರ್.ಶ್ರೀನಿವಾಸ ಮೂರ್ತಿ			ವ.ಧ.ಸಾ
೬೫	ವಚನವಾಙ್ಮಯ ಮತ್ತು ಭಾಷೆ	ಡಾ: ಜಿ.ಎಸ್. ಸಿದ್ಧಲಿಂಗಯ್ಯ	೧೯೯೭	ಅಖಿಲಭಾರತ ಶರಣ ಸಾಹಿತ್ಯ ಪರಿಷತ್ ಮೈಸೂರು	ವ.ವಾ.ಭಾ.
೬೬	ವಚನ ಸಾಹಿತ್ಯ ಮಹಿಳೆ	ಡಾ: ಶೈಲಜಾ ಉಡಚಣ	೧೯೯೭	ಅಖಿಲಭಾರತ ಶರಣ ಸಾಹಿತ್ಯ ಪರಿಷತ್ ಮೈಸೂರು	ವ.ಸಾ.ಮ.
೬೭	ವೀರಶೈವ ಸಾಹಿತ್ಯದಲ್ಲಿ ಪವಾಡ ಕತೆಗಳು	ಡಾ:ವ್ಹಿ.ಜಿ. ಪೂಜಾರ	೧೯೯೧	ಪುಸ್ತಕ ಅಕಾಡೆಮಿ ಗುಲಬರ್ಗಾ	ವೀ.ಸಾ.ಪ.ಕ.
೬೮	ವೀರಶೈವ ಸಾಹಿತ್ಯ	ಡಾ: ಎಂ.ಜಿ.ಬಿರಾದಾರ			ವೀ.ಸಾ.
೬೯	ವೀರ ಶೈವ ಧರ್ಮ ಭಾರತೀಯ ಸಂಸ್ಕೃತಿ	ಡಾ:ಎಂ.ಚಿದಾನಂದ ಮೂರ್ತಿ	೨೦೦೦	ಮಿಂಚುಪ್ರಕಾಶನ ಬೆಂಗಳೂರು	ವೀ.ಭಾ.ಸಂ.
೭೦	ವೀರಶೈವ ವಿನ್ಯಾಸ	ಡಾ:ಸಂಗಮೇಶ ಸವದತ್ತಿ ಮಠ.	೨೦೦೦	ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು	ವೀ.ವಿ.

ಕ್ರಮ ಸಂಖ್ಯೆ	ಗ್ರಂಥಗಳಹೆಸರು	ಲೇಖಕ / ಸಂಪಾದಕ(ಸಂ)	ಪ್ರಕಟಿತ	ಪ್ರಕಾಶಕರು	ಗ್ರಂಥ ಸಂಕೇತ
೭೧	ವೀರಶೈವ ಸಾಹಿತ್ಯ ಸಮೀಕ್ಷೆ	ಸಂ: ಸದಾನಂದ ಕನವಳ್ಳಿ	೧೯೭೬	ಮಹಾಕವಿ ಪಂಪ ಪ್ರಕಾಶನ ಲಕ್ಷ್ಮೇಶ್ವರ	ವೀ.ಸಾ.ಸ.
೭೨	ವಿರೂಪಾಕ್ಷ ಪಂಡಿತನ ಚೆನ್ನ ಬಸವ ಪುರಾಣ	ಸಂ: ಶಿ.ಶಿ.ಬಸವನಾಳ	೧೯೬೪	ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಧಾರವಾಡ	ವಿ.ಪಂ. ಚೆ.ಪು.
೭೩	ವ್ಯವಹಾರ ಗಣಿತಂ	ಸಂ: ಎಂ.ಮರಿಯಪ್ಪಭಟ್ಟ	೧೯೫೫		ವ್ಯ.ಗ.
೭೪	ಶರಣರ ಆಂದೋಲನ ಹಾಗೂ ಹೊಸ ಸಮಾಜದ ಪರಿಕಲ್ಪನೆ	ಎಂ.ಬಿ.ಹೂಗಾರ	೧೯೯೫	ವಿಮೋಚನಾ ಪ್ರಕಾಶನ ಅಥಣಿ	ಶ.ಆ.ಹೊ.ಪ.
೭೫	ಶರಣರು-ಸಂತರು	ಡಾ:ತಿಪ್ಪೇಸ್ವಾಮಿ	೧೯೯೮	ಅಖಿಲ ಭಾರತ ಶರಣರ ಸಾಹಿತ್ಯ ಪರಿಷತ್ ಮೈಸೂರ	ಶ.ಸಂ.
೭೬	ಶರಣ ತತ್ವ ಚಿಂತನ	ಸಂ:ಟಿ.ಆರ್.ಮಹಾದೇವಯ್ಯ	೧೯೯೮	ಅಖಿಲ ಭಾರತ ಶರಣರ ಸಾಹಿತ್ಯ ಪರಿಷತ್ ಮೈಸೂರ	ಶ.ತ.ಚಿಂ.
೭೭	ಶರಣರ ವಚನಾಮೃತ -೨		೧೯೮೪	ಬಸವ ಸಮಿತಿ ಬೆಂಗಳೂರು	ಶ.ವ.
೭೮	ಶಂಕರ ಲಿಂಗ ಪುರಾಣ	ನರಸಿಂಹ ಗುಪ್ತ			ನ.ಶಂ.ಪು.
೭೯	ಶಂಕರ ದಾಸಿಮಯ್ಯ ಪುರಾಣ ಒಂದು ಅಧ್ಯಯನ	ಡಾ:ಅನ್ನಪೂರ್ಣ ಜಾಲವಾದಿ	೧೯೯೯	ವೀರಶೈವ ಅಧ್ಯಯನ ಸಂಸ್ಥೆ ಗದಗ	ಶಂ.ದಾ.ಪು.ಅ.
೮೦	ಶಂಕರ ದಾಸಿಮಯ್ಯ ಪುರಾಣ	ಸಂ: ವ್ಹಿ.ಬಿ.ಹಾಲಬಾವಿ	೧೯೪೧	ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಧಾರವಾಡ	ಹಾ.ಸಂ.ಶಂ.ಪು.
೮೧	ಶಾಸನಗಳಲ್ಲಿ ಶಿವಶರಣರು	ಡಾ:ಎಂ.ಎಂ. ಕಲಬುರ್ಗಿ	೧೯೭೮	ವೀರಶೈವ ಅಧ್ಯಯನ ಸಂಸ್ಥೆ ಗದಗ	ಶಾ.ಶಿ.
೮೨	ಶಾಂತಲಿಂಗ ದೇಶಿಕರ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ ಭಾಗ೧-೨	ಸಂ:ಡಾ:ಆರ್‌ಸಿ.ಹಿರೇಮಠ ಡಾ:ಎಂ.ಎಸ್.ಸುಂಕಾಪುರ	೧೯೬೪(೧) ೧೯೬೮(೨)	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ	ಶಾ.ಭೈ.ಕಾ.ಕ.ಸೂ.
೮೩	ಶಿವತತ್ವ ಚಿಂತಾಮಣಿ	ಸಂ:ಡಾ:ಎಚ್.ದೇವಿರಪ್ಪ ಡಾ:ಆರ್ ರಾಚಪ್ಪ	೧೯೬೮	ಪ್ರಾಚ್ಯವಿದ್ಯಾ ಸಂಶೋಧನಾಲಯ ಮೈಸೂರು	ಶಿ.ತ.ಚಿಂ.
೮೪	ಶಿವಶರಣರ ಚರಿತ್ರೆಗಳು -೩	ಡಾ: ಫ.ಗು.ಹಳಕಟ್ಟಿ	೧೯೫೧		ಶಿ.ಚ.

೮೫	ಶಿವಶರಣರ ಕಥಾರತ್ನ ಕೋಶ	ತ.ಸು.ಶಾಮರಾಯ		ತ.ವೆಂ.ಸ್ಮಾರಕ ಗ್ರಂಥಮಾಲೆ ಮೈಸೂರು	ಶಿ.ಕ.ಕೋ.
೮೬	ಶಿವಶರಣೆಯರ ವಚನಗಳು	ಸಂ:ಡಾ:ಆರ್.ಸಿ. ಹಿರೇಮಠ.			ಶಿ.ವ.
೮೭	ಶ್ರೀ ಅಮರೇಶ್ವರ ಕ್ಷೇತ್ರ ಮಹಾತ್ಮೆ	ಶಿವಬಸವ ಶಾಸ್ತ್ರಿ		ಶಿವಬಸವ ಶಾಸ್ತ್ರಿಗಳು ಹಿರೇನಗನೂರು	ಶ್ರೀ.ಅ.ಕ್ಷೇ.ಮ.
೮೮	ಶ್ರೀ ಮದ್ವೈರಾಗ್ಯ ಚಕ್ರವರ್ತಿ ಶ್ರೀ ಘನಮಠ ಶಿವಯೋಗಿಗಳ ಮಹಾಪುರಾಣ	ಶಿವಕವಿ ಅಮರನಾಥ ಶಾಸ್ತ್ರಿ	೧೯೮೭	ಶ್ರೀ.ಘನಮಠೇಶ್ವರ ಆಶ್ರಮ ಸಂತೆಕೆಲ್ಲೂರು.	ಶ್ರೀ.ಘ.ಶಿ.ಪು.
೮೯	ಶ್ರೀ ಚಿದಾನಂದಾವಧೂತರು ಅವರ ಕೃತಿಗಳು	ಐ.ಐ.ಕಳಕಣ್ಣವರ		ಕರ್ನಾಟಕ ವಿಶ್ವ ವಿದ್ಯಾಲಯ ಧಾರವಾಡ	ಚಿ.ಕೃ.
೯೦	ಶ್ರೀ ಸೂಗೂರೇಶ್ವರ ಪುರಾಣ	ಎಂ.ಚಂದ್ರಶೇಖರ ಶಾಸ್ತ್ರಿ	೧೯೯೨	ಶ್ರೀ ಸೂಗೂರೇಶ್ವರ ಸೇವಾ ಸಮಿತಿ ದೇವಸೂಗೂರು	ಸೂ.ಪು.
೯೧	ಸಮಗ್ರಕನ್ನಡ ಸಾಹಿತ್ಯ ಚರಿತ್ರೆ ಸಂಪುಟ೨,೩,೫			ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು	ಸ.ಕ.ಸಾ.ಚ.
೯೨	ಸಮಗ್ರ ವಚನ ಸಂಪುಟ-೧	ಸಂ:ಡಾ: ಎಂ.ಎಂ.ಕಲಬುರ್ಗಿ	೧೯೯೩	ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು	ಸ.ವ.ಸಂ.-೧
೯೩	ಸಮಗ್ರ ವಚನ ಸಂಪುಟ-೨	ಸಂ: ಡಾ: ಬಿ.ವ್ಹಿ.ಮಲ್ಲಾಪುರ	೧೯೯೩	ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು	ಸ.ವ.ಸಂ.-೨
೯೪	ಸಮಗ್ರ ವಚನ ಸಂಪುಟ-೩	ಸಂ: ಡಾ: ಬಿ.ವ್ಹಿ.ಮಲ್ಲಾಪುರ	೧೯೯೩	ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು	ಸ.ವ.ಸಂ.-೩
೯೫	ಸಮಗ್ರ ವಚನ ಸಂಪುಟ-೪	ಸಂ:ಡಾ:ಎಸ್.ವಿದ್ಯಾಶಂಕರ	೧೯೯೩	ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು	ಸ.ವ.ಸಂ.-೪
೯೬	ಸಮಗ್ರ ವಚನ ಸಂಪುಟ-೫	ಸಂ:ಡಾ:ವೀರಣ್ಣ ರಾಜೂರು	೧೯೯೩	ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು	ಸ.ವ.ಸಂ.-೫
೯೭	ಸಮಗ್ರ ವಚನ ಸಂಪುಟ-೬	ಸಂ:ಡಾ:ಎಂ.ಎಂ.ಕಲಬುರ್ಗಿ	೧೯೯೩	ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು	ಸ.ವ.ಸಂ.-೬
೯೮	ಸಮಗ್ರ ವಚನ ಸಂಪುಟ-೭	ಸಂ:ಡಾ:ಎಸ್.ವಿದ್ಯಾಶಂಕರ	೧೯೯೩	ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು	ಸ.ವ.ಸಂ.-೭
೯೯	ಸಮಗ್ರ ವಚನ ಸಂಪುಟ-೮	ಸಂ:ಡಾ: ಬಿ.ಆರ್.ಹಿರೇಮಠ	೧೯೯೩	ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು	ಸ.ವ.ಸಂ.-೮
೧೦೦	ಸಮಗ್ರ ವಚನ ಸಂಪುಟ-೯	ಸಂ:ಡಾ: ಬಿ.ಆರ್.ಹಿರೇಮಠ	೧೯೯೩	ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು	ಸ.ವ.ಸಂ.-೯

೧೦೧	ಸಮಗ್ರ ವಚನ ಸಂಪುಟ-೧೦	ಸಂ:ಡಾ:ವೀರಣ್ಣ ರಾಜೂರು	೧೯೯೩	ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು	ಸ.ವ.ಸಂ.-೧೦
೧೦೨	ಸಮಗ್ರ ವಚನ ಸಂಪುಟ-೧೧	ಸಂ:ಎಸ್.ಶಿವಣ್ಣ	೧೯೯೩	ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು	ಸ.ವ.ಸಂ.-೧೧
೧೦೩	ಸಮಗ್ರ ವಚನ ಸಂಪುಟ-೧೨	ಸಂ:ಡಾ:ವೀರಣ್ಣ ರಾಜೂರು	೧೯೯೩	ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು	ಸ.ವ.ಸಂ.-೧೨
೧೦೪	ಸಮಗ್ರ ವಚನ ಸಂಪುಟ-೧೩	ಸಂ:ಡಾ:ವೀರಣ್ಣ ರಾಜೂರು	೧೯೯೩	ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು	ಸ.ವ.ಸಂ.-೧೩
೧೦೫	ಸಮಗ್ರ ವಚನ ಸಂಪುಟ-೧೪	ಸಂ:ಡಾ:ವೀರಣ್ಣ ರಾಜೂರು	೧೯೯೩	ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು	ಸ.ವ.ಸಂ.-೧೪
೧೦೬	ಸರ್ವಜ್ಞನ ವಚನಗಳು	ಸಂ: ಡಾ:ಎಲ್.ಬಸವರಾಜ	೧೯೯೮	ಗೀತಾ ಬುಕ್ ಹೌಸ್ ಮೈಸೂರು	ಸ.ವ.
೧೦೭	ಸಾನಂದ ಚರಿತ್ರೆ	ಸಂ:ಎಸ್.ಬಸಪ್ಪ		ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವ ವಿದ್ಯಾಲಯ ಮೈಸೂರು	ಸಾ.ಚ.
೧೦೮	ಸಿದ್ದನಂಜೇಶ ವಿರಚಿತ ಗುರುರಾಜ ಚಾರಿತ್ರ್ಯ	ಸಂ:ಡಾ:ಸಂ.ಶಿ.ಭೂಸನೂರ ಮಠ	೧೯೫೦	ಶ್ರೀ ಮುರುಘಾ ಮಠ ಧಾರವಾಡ	ಸಿ.ಗು.ಚಾ.
೧೦೯	ಸೊಡ್ಡಳ ಬಾಚರಸರ ವಚನಗಳು	ಸಂ: ಡಾ:ಎಸ್.ಎಸ್.ಭೂಸರೆಡ್ಡಿ			ಸೊ.ಬಾ.ವ.
೧೧೦	ಹರಿಹರನ ರಗಳೆಗಳು	ಸಂ: ಡಾ:ಎಂ.ಎಂ. ಕಲಬುರ್ಗಿ	೧೯೯೯	ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ ಹಂಪಿ	ಹ.ರ.
೧೧೧	೨೦ನೇ ಶತಮಾನದ ವಚನ ಸಾಹಿತ್ಯ	ಡಾ:ಪ್ರೀತಿ ಶ್ರೀಮಂಧರ ಕುಮಾರ	೧೯೯೮	ಮೈಸೂರು ವಿಶ್ವ ವಿದ್ಯಾಲಯ ಮೈಸೂರು	೨೦.ಶ.ವ.

ಆಂಗ್ಲ ಗ್ರಂಥಗಳು :

1	Bhagavadgita As it is	Edt.bySwamypabhupada	1971	The macmillan company Newyork	B.A
2	History of Indian Philosophy Vol.II	S.N.Das Gupta	1927	Cambridge Press	H.I.P
3	History of Karnataka	P.B.Desai	1981	Karnatak University Dhawad	H.K.
4	Mysticism in Maharastra	R.D. Ranade			M.M.
5	Mysticism in Religion's	W.R. Inge			M.R.
6	Selection from Gandhiji	Edt.Nirmal Kumar Bose	1948		S.F.G
7	Speaking of Shiva	A.K.Ramanujan	1979	Penguin Books	S.S.
8	The Chalukyas of Kalayana and the Kalachuris	B.R.Gopal		K.U.Dharwad	
9	The Mind of Mahatma Gandhi	Edt.R.K.Prabhu&U.R.Rao	1967		T.M.M.G

ಸ್ಮರಣ ಸಂಚಿಕೆ - ಗೌರವ ಗ್ರಂಥಗಳು

ಕ್ರಮ ಸಂಖ್ಯೆ	ಗ್ರಂಥಗಳಹೆಸರು	ಲೇಖಕ / ಸಂಪಾದಕ(ಸಂ)	ಪ್ರಕಟಿತ	ಪ್ರಕಾಶಕರು	ಗ್ರಂಥದ ಸಂಕ್ಷೇಪ ಸೂಚಿ
೧	ಶರಣ ಜಗತ್ತು	ಸಂ:ಬಿ.ಶಿವಕುಮಾರ ಸ್ವಾಮಿ	೧೯೯೮	ಸಿದ್ಧಗಂಗಾಶ್ರೀಗಳ ಅಭಿನಂದನ ಗ್ರಂಥ ಸಮಿತಿ ತುಮಕೂರು	ಶ.ಜ.
೨	ಶಿವ ದೀಪ್ತಿ	ಸಂ: ಡಾ:ಆರ್.ಸಿ.ಹಿರೇಮಠ	೧೯೯೦	ಶಿವಬಸವ ಸ್ವಾಮಿಗಳ ಶತಮಾನೋತ್ಸವ ಸಮಿತಿ ಬೆಳಗಾವಿ	ಶಿ.ದೀ.
೩	ಕಾಯಕ ಪರಿಣಾಮಿ	ಸಂ: ಶಾಂತರಸ-ಚೆನ್ನ ಬಸಪ್ಪ ಬೆಟ್ಟದೂರು	೧೯೯೧	ಪೂಜ್ಯ ಮ.ಘ.ಚ.ಚೆನ್ನ ಬಸವ ಪಟ್ಟದ್ದೇವರ ಶತಮಾನೋತ್ಸವ ಸಮಿತಿ ಭಾಲ್ಕಿ ಜಿಲ್ಲಾ : ಬೀದರ್	ಕಾ.ಪ
೪	ಭೂಷಣ	ಸಂ: ಡಾ:ಎಂ. ಚಿದಾನಂದಮೂರ್ತಿ ಡಾ:ಸಿ.ಯು. ಮಂಜುನಾಥ	೧೯೯೦	ಸರ್ಪಭೂಷಣ ಶಿವಯೋಗಿಗಳ ದ್ವಿಶತಮಾನೋತ್ಸವ ಸಮಿತಿ ಬೆಂಗಳೂರು	ಭೂಷಣ
೫	ತಿರುಳ್ಗನ್ನಡ	ಸಂ:ಎಚ್.ಎಸ್.ಪಾಟೀಲ್ ಅಲ್ಲಮ ಪ್ರಭು ಬೆಟ್ಟದೂರು	೧೯೯೩	ಅಖಿಲ ಭಾರತ ೬೨ನೇ ಕನ್ನಡ ಸಾಹಿತ್ಯ ಸಮ್ಮೇಳನ ಕೊಪ್ಪಳ	ತಿರುಳ್ಗನ್ನಡ
೬	ನವರಂಗ	ಸಂ:ಜಂಬಣ್ಣ ಅಮರ ಚಿಂತ	೧೯೯೭	ಜಿಲ್ಲಾ ಕನ್ನಡ ಸಾಹಿತಯ ಪರಿಷತ್ ರಾಯಚೂರು	ನವರಂಗ
೭	ದೇವನಾಂಪ್ರಿಯ	ಸಂ: ಡಾ : ಬಸವಲಿಂಗ ಸೊಪ್ಪಿಮಠ	೧೯೯೯	ಸ್ವಾಗತ ಸಮಿತಿ ಲಿಂಗಸೂಗೂರು ತಾಲೂಕ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಲಿಂಗಸೂಗೂರು	ದೇವನಾಂಪ್ರಿಯ
೮	ಸುವರ್ಣ ಸಿರಿ	ಸ್ವಾಗತ ಸಮಿತಿ .	೧೯೯೯	ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಲಿಂಗಸೂಗೂರು	ಸುವರ್ಣಸಿರಿ
೯	ಕಲ್ಯಾಣ ಪ್ರಣತೆ	ಸಂ: ಡಾ : ಬಸವಲಿಂಗ ಸೊಪ್ಪಿಮಠ	೨೦೦೦	ಸ್ವಾಗತ ಸಮಿತಿ ಅಖಿಲ ಭಾರತ ಶರಣಸಾಹಿತ್ಯ ಸಮ್ಮೇಳನ ರಾಯಚೂರು	ಕ.ಪ್ರ.

ಶಾಸನ ಸಂಪುಟಗಳು

1 Annual Report of Indian Epigrahy - A.R.I.E

2 Epigraphia Cornatica -E.C

ನಿಯತ ಕಾಲಿಕೆಗಳು

೧ : ಬಸವ ಪಥ ಬೆಂಗಳೂರು - ಬ.ಪ.(ಮಾಸಿಕ)

೨ : ಶಿವಾನುಭವ ವಿಜಾಪುರ - ಶಿ.(ಮಾಸಿಕ)

೩ : ಶಾಂತಿ ಕಿರಣ ಭಾಲ್ಕಿ (ದ್ವೈಮಾಸಿಕ)

೪ : ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಬೆಂಗಳೂರು - ಕ.ಸಾ.ಪ.

೫ :ಸತ್ಯ ಶುದ್ಧ ಕಾಯಕ ಚಿತ್ರ ದುರ್ಗ (ತ್ರೈಮಾಸಿಕ)

೪) ಕ್ಷೇತ್ರಕಾರ್ಯದಲ್ಲಿ ಮಾಹಿತಿ ನೀಡಿದವರ ಸೂಚಿ

ಕ್ರಮ ಸಂಖ್ಯೆ	ಕ್ಷೇತ್ರ ಕಾರ್ಯಸ್ಥಳ	ತಾಲೂಕು	ಮಾಹಿತಿನೀಡಿದ ವ್ಯಕ್ತಿಗಳು - ವಯಸ್ಸು	ಮಾಹಿತಿ ವಿವರ
೧	ನಾಗೋಲಿ	ದೇವದುರ್ಗ	ಭೀಮರಾಯ ಈಳಿಗೇರ್(೪೮)	ನಾಗೋಲಿ ಶರಣರ ಬಗ್ಗೆ
೨	ಹೇಮನೂರು	''	ಸೂಗೂರೆಡ್ಡಪ್ಪ ಪೋಲೀಸ್ ಪಾಟೀಲ(೫೦)	
			ಬಸಣ್ಣ ಸಾಹುಕಾರ (೭೦)	ಹೇಮಗಲ್ಲ ಹಂಪರ ಬಗ್ಗೆ
			ಪ್ರಭಯ್ಯ ಸ್ವಾಮಿ (೬೦)	
೩	ದೇವದುರ್ಗ	''	ದಂಡಪ್ಪ ಶಿಕ್ಷಕರು (೫೫)	
			ರಾಜಶೇಖರ ವಕೀಲ(೬೫)	ಆದಿ ಅಮಾತೆಪ್ಪ ಶರಣರ ಬಗ್ಗೆ
೪	ಮಸರಕಲ್	''	ರಾಜಶೇಖರ ಬಳಿ(೪)	
			ಸುನಾಂದಾ ಬಳಿ (೩೮)	
			ಮಲ್ಲಪ್ಪ (೩೦)	ಅಜಗಣ್ಣ - ಮುಕ್ತಾಯಕ್ಕರ ಬಗ್ಗೆ
೫	ಗಬ್ಬೂರು	''	ಬೂದಿ ಬಸವ ಸ್ವಾಮಿಗಳು (೨೮)	
			ವರದ ರಾಜ (೨೫) ಮಹೇಶ (೨೬)	ಬಿಬ್ಬಿ ಬಾಚಯ್ಯ ಮತ್ತು
			ಪ್ರಭು (೨೮) ಪುರುಷೋತ್ತಮ (೩೦)	ಗಬ್ಬೂರು ಶರಣರ ಬಗ್ಗೆ
೬	ಜಾಲಹಳ್ಳಿ	''	ಜಯಶಾಂತೇಶ್ವರ ಶಿವಾಚಾರ್ಯ ಸ್ವಾಮಿ (೬೦)	ಜಯ ಶಾಂತಲಿಂಗೇಶ್ವರ ಬಗ್ಗೆ
೭	ರಾಯಚೂರು	ರಾಯಚೂರು	ಡಾ: ಬಸವಲಿಂಗ ಸೊಪ್ಪಿಮಠ(೪೫)	
			ಶಕುಂತಲಾ ಶೆಟ್ಟಿ (೪೦)	ಬಸವೋತ್ತರ ಯುಗದ ಶರಣರ ಬಗ್ಗೆ
			ಸರ್ವಮಂಗಳ ಸಕ್ರಿ(೩೩)	
೮	ಮಲ್ಲಟ	ಮಾನವಿ	ಅರುಣ ಕುಮಾರ ಪಾಟೀಲ್(೪೦)	
			ರಸೂಲ ಸಾಬ್(೫೫)	ಸುಂಕದ ಬಂಕಣ್ಣನವರ ಬಗ್ಗೆ
೯	ಕವಿತಾಳ	''	ಬಸವಲಿಂಗ ಸ್ವಾಮಿ (೩೪)	ಕವಿತಾಳ ಶರಣರ ಬಗ್ಗೆ
೧೦	ನವಲಕಲ್	''	ಶ್ರೀಗಂಗಾಧರ ಸ್ವಾಮಿಗಳು (೪೦)	ನವಲಕಲ್ ಶರಣರ ಬಗ್ಗೆ
೧೧	ಬಲ್ಲಟಗಿ	''	ಗುರುಬಸವಯ್ಯ ತಾತ (೫೦)	ಬಲ್ಲಟಗಿ ಶರಣರ ಬಗ್ಗೆ
೧೨	ಸಿಂಧನೂರು	ಸಿಂಧನೂರು	ಡಾ: ಶಾಶ್ವತ ಸ್ವಾಮಿ ಮುಕ್ಕುಂದಿಮಠ(೬೦)	ಅಗ್ಘವಣಿ ಹಂಪಯ್ಯ, ಶರಣರ ಬಗ್ಗೆ
೧೩	ಒಳಬಳ್ಳಾರಿ	''	ಶ್ರೀ ಸಿದ್ಧಲಿಂಗಸ್ವಾಮಿಗಳು (೬೫)	ಒಳಬಳ್ಳಾರಿ ಚೆನ್ನ ಬಸವ ಶರಣರ ಬಗ್ಗೆ
೧೪	ಮುಕ್ಕುಂದ	''	ಮನ್ಮಥರೆಡ್ಡಿ(೮೦), ಜಾಗೇಶ(೧೯).	ಅಗ್ಘವಣಿ ಹಂಪಯ್ಯರ ಬಗ್ಗೆ
			ಸಿದ್ಧರಾಮೇಶ(೩೦), ಚೆನ್ನಮಲ್ಲಯ್ಯ(೨೫)	
೧೫	ನೀರಲಕೇರಿ	ಲಿಂಗಸೂಗೂರು	ಗ್ರಾಮಸ್ಥರು	ನೀರಲಕೇರಿ ಬಸವಲಿಂಗ ಶರಣರ ಬಗ್ಗೆ
೧೬	ಸಂತೆಕೆಲ್ಲೂರು	''	ಸೇವಕರು	ಘನಮಠಶರಣರ ಬಗ್ಗೆ
೧೭	ದೇವರ ಭೂಪುರ	''	ಮಠಾಧಿಪತಿಗಳು	ದೇವರ ಭೂಪುರ ಶರಣರ ಬಗ್ಗೆ
೧೮	ಲಿಂಗಸೂಗೂರು	''	ಶ್ರೀ ನಿಜಾನಂದ ಸ್ವಾಮಿಗಳು (೪೫)	ಸರ್ಜಾಪುರ ಹಾಗೂ ಹಟ್ಟಿಯ ಶರಣರ ಬಗ್ಗೆ

ಕ್ರಮ ಸಂಖ್ಯೆ	ಕ್ಷೇತ್ರ ಕಾರ್ಯಸ್ಥಳ	ತಾಲೂಕು	ಮಾಹಿತಿನೀಡಿದ ವ್ಯಕ್ತಿಗಳು - ವಯಸ್ಸು	ಮಾಹಿತಿ ವಿವರ
೧೯	ಅಮರೇಶ್ವರ	ಲಿಂಗಸೂಗೂರು	ಮಲ್ಲಪ್ಪ ಕರೇಕುರಿ(೫೦)	ಅಮರೇಶ್ವರ ಕ್ಷೇತ್ರ ಮಹಿಮೆ ಬಗ್ಗೆ
೨೦	ಉಳಿಮೇಶ್ವರ	''	ಶ್ಯಾಮಪ್ಪ ಬನ್ನಿಗೋಳ (೪೦)	ಉಳಿಮೇಶ್ವರ ಚಿಕ್ಕಣ್ಣರ ಬಗ್ಗೆ
೨೧	ಹಟ್ಟಿ (ಚಿನ್ನದಗಣಿ)	''	ದೇವೇಂದ್ರಪ್ಪ ಸರ್ಜಾಪುರ (೬೦)	ಸರ್ಜಾಪುರ, ಹಟ್ಟಿ ಶರಣ ಬಗ್ಗೆ
೨೨	ಸಜ್ಜಲಗುಡ್ಡ	''	ಆಶ್ರಮದ ಸೇವಕರು	ಶರಣಮ್ಮ ನವರ ಬಗ್ಗೆ

ಮೇಲೆ ಸೂಚಿಸಿದ ವ್ಯಕ್ತಿಗಳಲ್ಲದೇ ಬೆಳಗಾವಿಯ ನಾಗನೂರು ರುದ್ರಾಕ್ಷಿಮಠದ ಶ್ರೀ ಸಿದ್ಧರಾಮಸ್ವಾಮಿಗಳು, ಭಾಲ್ಕಿಯ ಹಿರೇಮಠದ ಶ್ರೀ ಬಸವಲಿಂಗ ಪಟ್ಟದ್ದೇವರು, ಲಿಂಗಾಯತ ಸಂಶೋಧನೆ ಕೇಂದ್ರ ಗ್ರಂಥಾಲಯದ ನಿರ್ದೇಶಕರಾದ ಡಾ : ಎಸ್. ಆರ್. ಗುಂಜಾಳ, ಉತ್ತರ ಕನ್ನಡ ಜಿಲ್ಲೆ ಬನವಾಸಿಯ ಪ್ರವಾಸೋದ್ಯಮ ಇಲಾಖೆ ಸಿಬ್ಬಂದಿ, ದೆಹಲಿಯ ಸಿ.ಸಿ. ಆರ್. ಟಿ. ಸಿಬ್ಬಂದಿ, ಕಾಶ್ಮೀರದ ಪ್ರವಾಸೋದ್ಯಮ ಇಲಾಖೆ, ಆಂಧ್ರದ ವಿದ್ವಾಂಸ ವರ್ಗ, ಸರಕಾರಿ ಪದವಿ ಪೂರ್ವ ಕಾಲೇಜ ಹಟ್ಟಿ ಚಿನ್ನದ ಗಣಿಯ ಪ್ರಾಚಾರ್ಯರಾದ ಶ್ರೀ ಎಸ್. ಬಿ. ರಾಜೂರು, ಆತ್ಮೀಯ ಸ್ನೇಹಿತ ಆಂಗ್ಲ ಉಪನ್ಯಾಸಕ ಶಿವರಾಜ ಪೋದ್ದಾರ್, ಒಳಬಳ್ಳಾರಿ ಚೆನ್ನಬಸವೇಶ್ವರ ಮಹಾವಿದ್ಯಾಲಯದ ಅಧ್ಯಾಪಕ ವರ್ಗ, ಪತ್ನಿ ರೇಣುಕಾ ಹೀರಾ, ಅನೇಕ ಮಠಾಧೀಶರು, ಶಾಲಾ ಶಿಕ್ಷಕರು, ಬಸ್ ಕಂಡಕ್ಟರ್, ಡ್ರೈವರ್‌ಗಳು, ಆಟೋ-ಸೈಕಲ್ - ಮೋಟಾರ್ ಸವಾರರು, ಪ್ರಯಾಣಿಕರು ಮುಂತಾದವರು ನಾನು ಕೇಳಿದಾಗ ಪ್ರೀತಿಯಿಂದ ಮಾಹಿತಿಗಳನ್ನು ನೀಡಿದ್ದಾರೆ.

೫) ಅಧ್ಯಯನದಲ್ಲಿ ಬಳಸಿ ಕೊಂಡ ವಚನಗಳ ಅಕಾರಾದಿ

ವಚನಗಳ ಸಾಲು	ಪುಟ
ಕೂಟಕ್ಕೆ ಸತಿ ಪತಿವೆಂಬ	೧೪,೧೪೮
ಕೋಟಿಗೊಬ್ಬ ಶರಣ	೭
ಗಡಿತಡಿಗೆ ಉಕ್ಕಡದ	೧೭೦
ಗಡಿವಾಡದ ಸುಂಕವ	೧೫೯
ಗುರುಲಿಂಗ ಕೃಪೆ	೬೫
ಗೆಜ್ಜಲು ಮನೆಯ ಮಾಡಿ	೧೬೦
ಗೌಡ ಗೋಮ ಗುಸುಕ	೮೪,೧೧೭
ಘುಡುಘುಡಿಸಿ	೪೬,೧೪೫
ಚಕಮಕಿ ದೂದಿ	೮೪
ಚಂದ್ರ ಕಾಂತ ಶಿಲೆಯಲ್ಲಿ	೧೭೦
ಜಂಗಮಕ್ಕೆಂದಲ್ಲಿ	೧೮೧
ಜಲಹರಿವೆಡೆಯಲ್ಲಿ	೧೫೧
ಜ್ಞಾನ ಕ್ರಿಯನೊಳಕೊಂಡು	೧೮೧
ಢಕ್ಕೆಯ ಉಲುಹಡಗು	೩೮
ಢಕ್ಕೆಯ ದನಿಉಳ್ಳ	೩೮
ಢಕ್ಕೆಯ ಬೊಮ್ಮ	೩೭
ತನ್ನ ತಾನರಿದಡೆ	೧೫೬
ತನ್ನ ತಾನರಿದವಂಗೆ	೧೭೮
ತನ್ನಾಶ್ರಯದ ರತಿ ಸುಖ	೧೫
ತನು ಕಾಯಕ ಮನಲಿಂಗ	೧೬೩
ತನು ಮನು ಧನ	೬೮
ತನುವಿನಲ್ಲಿ ಹಿಡಿದು	೧೮೪
ತರುಗಿಡು	೧೧೭
ತಸ್ಕರರ ಹಾವಳಿ	೧೧೮
ತಳವಾರ	೭೦
ತಾಮಸ ಬುದ್ಧಿ ದಳವಾಯಿ	೮೪
ದಶೇಂದ್ರಿಯ	೧೧೬

ವಚನಗಳ ಸಾಲು	ಪುಟ

೫) ಅಧ್ಯಯನದಲ್ಲಿ ಬಳಸಿ ಕೊಂಡ , ಸ್ವರ ವಚನ , ತತ್ವ ಪದಗಳ ಅಕಾರಾದಿ

೬) ವಿಶಿಷ್ಟ ಪದ ಸೂಚಿ

೭) ಸ್ಥಳ ಸೂಚಿ

೮)ಕೃತಿ ಸೂಚಿ

೯) ವ್ಯಕ್ತಿ ಸೂಚಿ

೧೦)ಈ ಪರಿಸರದ ಶರಣರ ಅಂಕಿತನಾಮ ಸೂಚಿ

ಶರಣರ ಹೆಸರು	ಅಂಕಿತನಾಮ
ಢಕ್ಕೆಯ ಮಾರಯ್ಯ	ಕಾಲಾಂತಕ ಭೀಮೇಶ್ವರ ಲಿಂಗ
ಶಂಕರ ದಾಸಿಮಯ್ಯ	ನಿಜಗುರು ಶಂಕರ ದೇವ
ಪುರದ ನಾಗಣ್ಣ	ಅಮರಗುಂಡದ ಮಲ್ಲಿಕಾರ್ಜುನ
ಅಜಗಣ್ಣ	ಮಹಾಘನ ಸೋಮೇಶ್ವರ
ಮುಕ್ತಾಯಕ್ಕ	ಅಜಗಣ್ಣ
ಗೊಬ್ಬೂರು ಬಿಬ್ಬಿ ಬಾಚಯ್ಯ	ಏಣಾಂಕಧರ ಸೋಮೇಶ್ವರ ಲಿಂಗ
ಆಯ್ದಕ್ಕಿ ಮಾರಯ್ಯ	ಅಮರೇಶ್ವರ ಲಿಂಗ
ಆಯ್ದಕ್ಕಿ ಲಕ್ಕಮ್ಮ	ಮಾರಯ್ಯ ಪ್ರಿಯ ಅಮರೇಶ್ವರ ಲಿಂಗ
ಸುಂಕದ ಬಂಕಣ್ಣ	ಚೆನ್ನ ಬಂಕೇಶ್ವರ ಲಿಂಗ
ಉಳಿಮೇಶ್ವರ ಚಿಕ್ಕಣ್ಣ	ಉಳಿಮೇಶ್ವರ ಲಿಂಗ
ಅಗ್ಘವಣಿ ಹಂಪಯ್ಯ	ಹಂಪೆಯ ವಿರೂಪ
ಹೇಮಗಲ್ಲ ಹಂಪ	ಪಡುವಿಡಿ ಸಿದ್ಧ ಮಲ್ಲಿನಾಥ ಪ್ರಭುವೆ
ಚಿದಾನಂದಾವ ಧೂತರು	ಚಿದಾನಂದ, ಚಿದಾನಂದ ಸದ್ಗುರು ಪ್ರಭುವೆ
ಕೂಡಲೂರು ಬಸವಲಿಂಗ ಶರಣ	ಕೂಡಲೂರೇಶ
ಗೂಗಲ್ಲು ಪರಪ್ಪಯ್ಯ	ಪರ್ವ, ನಗರ ಪರ್ವ, ಆನೆಗೊಂದಿ ವೀರಭದ್ರ
ಗೊಬ್ಬೂರು ಹಂಪಣ್ಣ	ಮಣಿಪುರದೊಡೆಯ ಘನವೃಷಭ
ನೀರಲಕೇರಿ ಬಸವಲಿಂಗ ಶರಣರು	ಗಡಿಯ ನೀರಲಕೇರಿ ಒಡೆಯ ಪಂಚಾಕ್ಷರ
ಘನಮಠ ನಾಗಭೂಷಣ ಶರಣರು	ಘನಮಠವಾಸ
ವೆಂಕಟಾಪುರ ಖೇಮಣ್ಣ	ಬಂಡೇಶ, ಬಂಡೇಗುರು
ದೇವದುರ್ಗ ಚೆನಮಲ್ಲ	ಸುರದುರ್ಗನಾಥ
ಹೊಸಪೇಟೆ ಅಯ್ಯಪ್ಪ ಪಂಥೋಜಿ	ಪಂಪಾಪತಿ
ತಾಳಪಲ್ಲಿ ದಿನ್ನಿ ವೆಂಕಯ್ಯ	ನಗರೇಶ, ಬೋಳ ಬಸವೇಶ, ವೆಂಕಟಮಣ
ಬಳಗಾನೂರು ಮರಿಸ್ವಾಮಿ	ಉರಗಾದ್ರಿ, ನಗನಾಗ, ಉರಗಾದ್ರಿ ಗವಿಮಠ
ಆದಿ ಅಮಾತೆಪ್ಪ	ಸದಾನಂದ, ದೇಹ ದುರ್ಗಾಧೀಶ
ರಾಯಚೂರು ಹನುಮಂತಪ್ಪ	ಗುರುವೆಂಕಟೇಶ